ಗ್ರಾಮ ಸಂಸ್ಕೃತಿ ಮಾಲೆ - ೧

ಗ್ರಾಮೀಣ ವೃತ್ತಿಗಳು



ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಗ್ರಾಮೀಣ ವೃತ್ತಿಗಳು

ಸಂಪಾದಕರು

ಡಾ. ದೇವೇಂದ್ರಕುಮಾರ ಹಕಾರಿ

ಡಾ. ಕೆ.ಆರ್. ಸಂಧ್ಯಾರೆಡ್ಡಿ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೫೬೦ ೦೧೮

GRAMEENA VRUTHIGALU : (Village Professions) Edited by Dr. Devendra Kumar Hakari and Dr. K.R. Sandhya Reddy. Published by Administrative Officer, Kannada Pustaka Pradhikara (Kannada Book Authority), Pampa Mahakavi Road, Chamarajpet, Bangalore - 560 018; Year 2000

Pages : xvi + 321

ಪ್ರಥಮ ಮುದ್ರಣ : ೨೦೦೦

ಪ್ರತಿಗಳು : ೧೦೦೦

ಬೆಲೆ : ರೂ. ೬೦

ISBN : 81-7713-052-8

ಮುದ್ರಣ :
ಸತ್ಯಶ್ರೀ ಪ್ರಿಂಟರ್ಸ್ ಪ್ರೈ. ಲಿ.
೧೬೪, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಸಂಪಾದಕರ ಮಾತು

ಜಾನಪದ ಕಣ್ಮರೆಯಾಗುತ್ತಿದೆ ಎಂಬ ಅಪಾಯದ ಅರಿವಿನಿಂದ ಜಾನಪದದತ್ತ ಆಸಕ್ತಿ ತೋರಲು ಆರಂಭಿಸಿದಾಗ ಜಾನಪದದ ಮೌಖಿಕ ರೂಪಗಳಿಗೆ ಹೆಚ್ಚಿನ ಪ್ರಾಮುಖ್ಯತೆ ನೀಡಲಾಯಿತು. ಆದರೆ ಮೌಖಿಕ ಸಾಹಿತ್ಯ ರೂಪಗಳಂತೆಯೇ ಜಾನಪದದ ವಸ್ತು ಸಂಸ್ಕೃತಿ ಕೂಡ ಕಣ್ಮರೆಯಾಗುತ್ತಿದೆ. ಅದರತ್ತ ಕೊಡಬೇಕಾದ ಗಮನವನ್ನು ನಾವು ಕೊಟ್ಟಿಲ್ಲ. ವಸ್ತು ಸಂಸ್ಕೃತಿಯು ಕಣ್ಣಿಗೆ ಕಾಣುವಂತಹ ಪ್ರಕಾರಗಳ ಬಗ್ಗೆ ಗಮನ ಕೇಂದ್ರೀಕರಿಸುತ್ತದೆ. ಇದರಲ್ಲಿ ತಲೆಮಾರಿನಿಂದ ತಲೆ ಮಾರಿಗೆ ಸಾಗಿಬರುವ ಹಾಗೂ ಮೌಖಿಕ ಜಾನಪದ ದಂತೆಯೇ ಪರಂಪರೆಯ ಪ್ರಭಾವ ಹಾಗೂ ವೈಯಕ್ತಿಕ ಬದಲಾವಣೆ ಗಳಿಗೆ ಈಡಾಗುವ ತಂತ್ರ, ಕುಶಲತೆ ವಿಧಾನ, ಸೂತ್ರಗಳು ಸೇರುತ್ತವೆ. ವಸತಿ, ಉಡುಗೆ ತೊಡುಗೆ, ಅಹಾರ ತಯಾರಿಕೆ, ಕೃಷಿ ಕೆಲಸ, ಪಶುಸಾಕಣೆ, ಅಹಾರ ಸಂಸ್ಕರಣೆ, ಉಪಕರಣ ತಯಾರಿಕೆ, ಪೀಠೋಪಕರಣ ವಿನ್ಯಾಸ, ಪಾತ್ರೆ ಪಡಗ ಇತ್ಯಾದಿಗಳ ಬಗ್ಗೆ ವಸ್ತುಸಂಸ್ಕೃತಿಯ ಅಭ್ಯಾಸಿಗಳು ಗಮನ ಹರಿಸ ಬೇಕಾಗುತ್ತದೆ. ಗ್ರಾಮೀಣ ವೃತ್ತಿಗಳ ಅಧ್ಯಯನವು ಈ ಗುಂಪಿಗೇ ಸೇರುತ್ತದೆ.

ಗ್ರಾಮೀಣ ಬದುಕಿನಲ್ಲಿ ಪರಂಪರಾಗತವಾಗಿ ಮುಂದುವರೆದು ಕೊಂಡು ಬರುವಂಥ ವೃತ್ತಿಗಳನ್ನು ಗ್ರಾಮೀಣ ವೃತ್ತಿಗಳು, ಜಾನಪದ ಕಸುಬುಗಳು ಎನ್ನಬಹುದು. ಈ ವೃತ್ತಿಗಳಲ್ಲಿ ಮಾನವ ಶ್ರಮವೇ ಮುಖ್ಯವಾಗಿದ್ದು ಕೆಲಸಕ್ಕೆ ಅನಿವಾರ್ಯವಾದಂಥ ಒಂದೆರಡು ಸರಳಯಂತ್ರಗಳನ್ನು (ಅವೂ ಸಹ ಮಾನವರಿಂದಲೇ ಚಾಲಿತವಾಗುವಂಥವು) ರೂಪಿಸಿಕೊಂಡಿರುವುದರಿಂದ ಇವುಗಳನ್ನು ಕೈಕಸುಬುಗಳು ಎಂತಲೂ ಕರೆಯುತ್ತಾರೆ.

ಕೃಷಿಯ ಪರಿಕಲ್ಪನೆಯೊಂದಿಗೆ ಗ್ರಾಮೀಣವೃತ್ತಿಗಳು ಹುಟ್ಟಿ

ಬೆಳೆದುಕೊಂಡು ಬಂದವು. ಸ್ಥಿರವಸತಿ ಆರಂಭಗೊಂಡು ಜೀವನೋಪಾಯಕ್ಕಾಗಿ ಆಯ್ದುಕೊಂಡ ವೃತ್ತಿಗಳು ಮುಂದೆ ಕುಲಕಸುಬುಗಳಾದವು. ಕೈಗಾರಿಕಾ ಕ್ರಾಂತಿಗೆ ಮೊದಲು ಸಂಪ್ರದಾಯಬದ್ಧ ಸಮಾಜದಲ್ಲಿ ಗ್ರಾಮೀಣ ಕಸುಬುಗಳು ಬಹಳ ಪ್ರಮುಖ ಪಾತ್ರ ವಹಿಸುತ್ತಿದ್ದವು. ವ್ಯಕ್ತಿ ತನಗೆ ಬೇಕಾದ ಆದರೆ ಸ್ವತಃ ತಾನೇ ತಯಾರಿಸಲಾಗದ ಪರಿಕರಗಳನ್ನು ಕಸುಬುದಾರನಿಂದ ಪಡೆದುಕೊಳ್ಳುತ್ತಿದ್ದ. ಆತನೊಂದಿಗೆ ಜನರಿಗೆ ನೇರ ಸಂಪರ್ಕವಿರುತ್ತಿತ್ತು. ಕೈಗಾರಿಕಾ ಕ್ರಾಂತಿಯ ನಂತರ ಅನೇಕ ಸಾಂಸ್ಕೃತಿಕ, ಸಾಮಾಜಿಕ ಬದಲಾವಣೆಗಳಾದವು, ಕಾರ್ಖಾನೆಯಿಂದ ಸಿದ್ಧವಸ್ತುಗಳು ಕಡಿಮೆಬೆಲೆಗೆ ಧಾರಾಳವಾಗಿ ಸರಬರಾಜಾಗತೊಡಗಿದಂತೆ ಸಮಾಜದ ಕೈಕಸುಬುಗಳಲ್ಲಿ ಪ್ರಾಧಾನ್ಯತೆ ಕಡಿಮೆಯಾಯಿತು. ವೃತ್ತಿಜೀವನದ ಸ್ವರೂಪ ಸಂಪೂರ್ಣ ಬದಲಾಯಿಸಿತು. ಈಗ ಒಂದೆರಡು ವೃತ್ತಿಗಳನ್ನು ಬಿಟ್ಟರೆ ಉಳಿದುವೆಲ್ಲ ಅವಸಾನದ ಹಾದಿಯಲ್ಲಿವೆ. ಇವುಗಳ ಕಾರ್ಯಸೂತ್ರಗಳು, ತಂತ್ರಗಳು, ವಿನ್ಯಾಸಗಳು, ಬಳಕೆಯ ವಸ್ತುಗಳು, ವಿಶಿಷ್ಟ ಪರಿಭಾಷೆ ಎಲ್ಲವೂ ಅಳಿದು ಹೋಗುತ್ತಿವೆ. ನಮ್ಮ ಜನರು ತಲೆತಲೆಮಾರುಗಳಿಂದ, ಅನುಭವದಿಂದ ರೂಢಿಸಿಕೊಂಡ ಈ ಜ್ಞಾನಭಂಡಾರವನ್ನು ಗ್ರಾಮೋದ್ಯೋಗ, ಪರಿಸರ ರಕ್ಷಣೆ ಮುಂತಾದ ದೃಷ್ಟಿಯಿಂದಲೂ ಕಾಪಾಡಿಕೊಳ್ಳುವುದು ಅತ್ಯಗತ್ಯ.

ಗ್ರಾಮೀಣ ವೃತ್ತಿಗಳಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವೆಂದರೆ ಅವುಗಳ ಪಾರಂಪರಿಕ ಅಂಶ. ಪ್ರತಿಯೊಂದು ವೃತ್ತಿಗೂ ಅದಕ್ಕೇ ವಿಶಿಷ್ಟವಾದ ಕಚ್ಚಾಸಾಮಗ್ರಿಗಳು, ಸಂಸ್ಕರಣ ವಿಧಾನಗಳು, ತಯಾರಿಕಾ ಸೂತ್ರಗಳು, ವಿನ್ಯಾಸಗಳು, ಪರಿಷ್ಕರಣ ವಿಧಾನಗಳು ಹಾಗೂ ಕೆಲಸದ ಗುಮಮಟ್ಟವನ್ನು ನಿಷ್ಕರ್ಷಿಸುವ ಮಾನದಂಡಗಳೂ ಇರುತ್ತವೆ. ಕೆಲಸದ ತರಬೇತಿ ವಿಧಾನವೂ ಆಯಾ ವೃತ್ತಿಗೇ ವಿಶಿಷ್ಟವಾಗಿರುತ್ತದೆ. ಈ ವೃತ್ತಿಗಳಲ್ಲಿ ಕುಟುಂಬದ ಗಂಡಸರು, ಹೆಂಗಸರು, ಬೇರೆ ಬೇರೆ ವಯೋಮಾನದವರು ನಿಗದಿತ ರೀತಿಯಲ್ಲಿ ಭಾಗಿಯಾಗುತ್ತಾರೆ. ವೃತ್ತಿಗೆ ಎದುರಾಗುವ ತೊಡಕು ತೊಂದರೆಗಳೂ ಆಯಾ ವೃತ್ತಿಗೇ ವಿಶಿಷ್ಟ.

ಜೀವನಾವಶ್ಯಕ ಉಪಕರಣಗಳನ್ನು ತಯಾರಿಸುವ ಕಸುಬುಗಳನ್ನು ಸಾಮಾನ್ಯವಾಗಿ ಎಲ್ಲ ಪ್ರದೇಶಗಳಲ್ಲೂ ಸಮಾನವಾಗಿ ಕಾಣಬಹುದು.

ಕುಂಭಕಾರಿಕೆ, ಬಡಿಗತನ, ಕಮ್ಮಾರಿಕೆ ಇಂಥವು. ಇವು ಪ್ರತಿಯೊಂದು ಗ್ರಾಮದಲ್ಲೂ ಇದ್ದು ಸ್ಥಳೀಯರ ಅಗತ್ಯತೆಗಳನ್ನು ಪೂರೈಸುತ್ತಿರುತ್ತವೆ. ಆದರೆ ಕೆಲವೊಂದು ವೃತ್ತಿಗಳು ಆಯಾ ಪ್ರದೇಶದಲ್ಲಿ ಲಭ್ಯವಿರುವ ಕಚ್ಚಾಸಾಮಗ್ರಿಯ ಆಧಿಕ್ಯವನ್ನವಲಂಬಿಸಿ ವಿಶೇಷವಾಗಿ ಬೆಳೆದಿರುತ್ತವೆ. ಉದಾಹರಣೆಗೆ ನೇಕಾರಿಕೆ, ಮೇದಾರಿಕೆ ಇಂಥವು. ಸಾಮಾಜಿಕ ಜೀವನದಲ್ಲಿ ಇಂಥ ವೃತ್ತಿಗಳ ಪಾತ್ರ ಹಾಗೂ ವಹಿವಾಟು ಇತರ ಜೀವನಾವಶ್ಯಕ ವೃತ್ತಿಗಳಿಗಿಂತ ಭಿನ್ನವಾಗಿರಲು ಸಾಧ್ಯ. ಎಲ್ಲ ವೃತ್ತಿಗಳೂ ಕಾಲದ ದೃಷ್ಟಿಯಿಂದ ಒಂದೇ ಆಗಿಲ್ಲ. ಕೆಲವು ಪುರಾತನ, ಕೆಲವು ಮಧ್ಯಕಾಲೀನ, ಕೆಲವು ಆಧುನಿಕ ಪ್ರತಿಯೊಂದು ವೃತ್ತಿಯ ಉಗಮ ಹಾಗೂ ಕಾಲಾನುಕ್ರಮದಲ್ಲಿ ಅವು ಬೆಳೆದು ಬಂದ ಬಗೆ, ಬದಲಾವಣೆಗಳನ್ನೂ ಸಹ ವೃತ್ತಿ ಜಾನಪದ ಸಂದರ್ಭದಲ್ಲಿ ಅಭ್ಯಾಸಮಾಡಬೇಕು.

ಕುಂಭಕಾರಿಕೆಯನ್ನು ಬಹುಪ್ರಾಚೀನ ವೃತ್ತಿ ಎಂದು ವಿದ್ವಾಂಸರು ಪರಿಗಣಿಸುತ್ತಾರೆ. ಇದು ಸಾರ್ವತ್ರಿಕವಾಗಿ ಕಂಡುಬರುವಂಥ ವೃತ್ತಿಯೂ ಹೌದು. ಶತಶತಮಾನಗಳಿಂದಲೂ ಇದರಲ್ಲಿ ಹೆಚ್ಚಿನ ಬದಲಾವಣೆಗಳು ಕಂಡು ಬಂದಿಲ್ಲ. ಎಲೆಲ್ಲಿ ಸೂಕ್ತಮಣ್ಣು ಸಿಗುವುದೋ ಅಲ್ಲಲ್ಲಿನ ಮಣ್ಣು ಬಳಸಿ ಕುಂಭಕಾರಿಕೆ ನಡೆಯಿತು. ಕುಂಭಾರಿಕೆಯನ್ನು ಕುರಿತ ಜನಪದ ಸಾಹಿತ್ಯವೂ ಸಾಕಷ್ಟಿದೆ ಅಲ್ಲಿ ಇದನ್ನು ನೇರವಾಗಿಯೂ, ಸಾಂಕೇತಿಕವಾಗಿಯೂ ಉಲ್ಲೆಖಿಸಲಾಗಿದೆ. ಇಟ್ಟಿಗೆ ಮತ್ತು ಹಂಚು ತಯಾರಿಕೆಗಳನ್ನು ಸಹ ಕುಂಭಕಾರಿಕೆಯ ಸಂದರ್ಭದಲ್ಲಿ ಪರಿಶೀಲಿಸಬಹುದು.

ಮರವನ್ನು ಕಚ್ಚಾಸಾಮಗ್ರಿಯಾಗಿಟ್ಟುಕೊಂಡು ಮಾಡುವ ವೃತ್ತಿ ಬಡಿಗತನ. ಕಟ್ಟಿಗೆಯ ಉಪಯೋಗವನ್ನು ತಿಳಿದ ಮಾನವ ವ್ಯಾಪಕವಾಗಿ ಅದರ ಪ್ರಯೋಜನ ಪಡೆದಿದ್ದಾನೆ. ಕೃಷಿ ಸಲಕರಣೆಗಳು, ಗೃಹೋಪಕರಣಗಳು, ವಸತಿ ನಿರ್ಮಾಣಗಳು, ಮನೋರಂಜನಾ ಸಾಧನಗಳು- ಹೀಗೆ ಕಟ್ಟಿಗೆಯ ಬಳಕೆ ಸರ್ವತೋಮುಖವಾಗಿದೆ. ಕಟ್ಟಿಗೆಯ ಬಳಕೆ ಎಷ್ಟು ಸರ್ವತೋಮುಖ ವಾಗಿದೆಯೆಂದರೆ ಶಿಲಾಯುಗ, ಲೋಹಯುಗಗಳಂತೆ ಕಾಷ್ಟಯುಗ ಎಂಬ ಒಂದು ಅಧ್ಯಯನವೂ ನಡೆಯಬಹುದಾಗಿದೆ. ಬಡಿಗತನ ಕಾಷ್ಟ ಜಾನಪದದ ಒಂದು ಅಂಗ ಮಾತ್ರ.

ಕಲ್ಲುಕೆಲಸವನ್ನು ಒಂದು ವೃತ್ತಿಯಾಗಿ ಪರಿಗಣಿಸಿದಂತೆ ಕಾಣುವುದಿಲ್ಲ. ಬೇರೆಲ್ಲ ಲೋಹ, ಕಾಷ್ಠ ಇತ್ಯಾದಿ ಅನ್ವೇಷಣೆಗಳಿಗೆ ಮೊದಲು ಮಾನವ ಕಲ್ಲನ್ನೇ ವಿವಿಧೋಪಯೋಗಿಯಾಗಿ ಬಳಸಿದ್ದರೂ ಅನಂತರ ಇದರ ಬಳಕೆಯನ್ನು ಸಂಪೂರ್ಣ ಮರೆಸಿಬಿಡುವಷ್ಟು ಬೇರೆ ಬೇರೆ ಸಾಮಗ್ರಿಗಳು ಅದರ ಸ್ಥಾನ ಆಕ್ರಮಿಸಿವೆ. ಇಷ್ಟಾಗಿಯೂ ವಸತಿ ನಿರ್ಮಾಣದಂತಹ ಕ್ಷೇತ್ರಗಳಲ್ಲಿ ಕಲ್ಲಿನ ಬಳಕೆ ಅನಿವಾರ್ಯವಾಗಿದೆ. ಭೌಗೋಳಿಕವಾಗಿ ಕಲ್ಲುಗಳ ರಚನೆ, ರೂಪ, ಬಣ್ಣ, ಲಕ್ಷಣಗಳಲ್ಲಿ ಬೆಣಚುಕಲ್ಲು, ಕಗ್ಗಲ್ಲು, ಹಿಟ್ಟುಕಲ್ಲು, ಬಳಪದ ಕಲ್ಲು, ನೊರಜುಕಲ್ಲು, ಉಂಡೆಕಲ್ಲು ಇತ್ಯಾದಿ ವಿಧಗಳನ್ನು ಕಾಣಬಹುದು. ಬಳಕೆಯ ದೃಷ್ಟಿಯಿಂದ ಪಾಯದ ಕಲ್ಲು ಚಪ್ಪಡಿಕಲ್ಲು ಗುಂಡುಕಲ್ಲು ರುಬ್ಬುಕಲ್ಲು, ಒರಳುಕಲ್ಲು, ಸಾಣೆಕಲ್ಲು, ಕವಣೆಕಲ್ಲು ಇತ್ಯಾದಿ ವ್ಯತ್ಯಾಸಗಳನ್ನು ಗುರುತಿಸುತ್ತೇವೆ. ಕೆಲವು ಕಲ್ಲುಗಳು ಸಹಜ ರೂಪದಲ್ಲಿ ಬಳಕೆಯಾಗುತ್ತವೆ. ಇನ್ನು ಕೆಲವಕ್ಕೆ ಕೆತ್ತಿ ಅಕಾರಕೊಟ್ಟು ಬಳಸಬೇಕಾಗುತ್ತದೆ. ಬೇರೆ ಬೇರೆ ಕಲ್ಲುಗಳ ಸ್ಥಳೀಯ ಹೆಸರುಗಳು, ಅವುಗಳ ಅಕಾರ, ಗುಣ ರೂಪ ಕುರಿತಂತೆ ಜಾನಪದರಲ್ಲಿರುವ ಮಾಹಿತಿಯನ್ನು ಸಂಗ್ರಹಿಸಿದರೆ ಭೂಗರ್ಭ ವಿಜ್ಞಾನಗಳವರಿಗೆ ಸಾಕಷ್ಟು ಪೂರಕ ವಿಷಯ ಸಿಗುತ್ತದೆ.

ಚಮ್ಮಾರಿಕೆ ಕೂಡ ಪ್ರಾಚೀನ ವೃತ್ತಿ. ಜನಪದ ಸಾಹಿತ್ಯದಲ್ಲಿ ಚಮ್ಮಾರರು ಹಾಗೂ ಚಮ್ಮಾರಿಕೆಯ ಬಗ್ಗೆ ಅನೇಕ ಉಲ್ಲೇಖಗಳು ಸಿಗುತ್ತವೆ. ಅದಕ್ಕೆ ವೃತ್ತಿವಿವರಗಳ ದೃಷ್ಟಿಯಿಂದ ಹೊಸದಾಗಿಯೇ ಸಂಗ್ರಹ, ಅಧ್ಯಯನ ನಡೆಯಬೇಕಾಗಿದೆ. ವಿವಿಧ ರೀತಿಯ ಚರ್ಮಗಳು, ಅವುಗಳನ್ನು ಹದಗೊಳಿಸುವ, ಸಂಸ್ಕರಿಸುವ ವಿಧಾನಗಳು, ಪಾರಿಭಾಷಿಕ ಪದಕೋಶಗಳು ಇತ್ಯಾದಿಗಳನ್ನು ವಿವರವಾಗಿ ಸಂಗ್ರಹಿಸಬೇಕಾಗಿದೆ.

ಕಬ್ಬಿಣವು ಹೊಸದಾಗಿ ಕಂಡು ಹಿಡಿಯಲ್ಪಟ್ಟ ಲೋಹವಾದರೂ ಜನಪದರ ಬದುಕಿನಲ್ಲಿ ವ್ಯಾಪಕ ಪಾತ್ರವಹಿಸಿರುವಂಥ ಲೋಹ. ಕಬ್ಬಿಣದ ಶೋಧವಾಗುವವರೆಗೆ ಕಲ್ಲು ಮಣ್ಣಿನ ಪರಿಕರಗಳ ಬಳಕೆಯಲ್ಲಿ ಹೆಚ್ಚಿನ ಬದಲಾವಣೆಯಾಗಿರಲಿಲ್ಲ. ಆದರೆ ಅನಂತರ ಕೃಷಿ, ಗೃಹಬಳಕೆ, ವಸತಿ, ಎಲ್ಲ ಕ್ಷೇತ್ರಗಳನ್ನೂ ಕಬ್ಬಿಣ ಆಕ್ರಮಿಸಿತು. ಬೇರೆ ವೃತ್ತಿಗಳವರೂ ಸಹ ಕಬ್ಬಿಣದ

ವಸ್ತುಗಳನ್ನು ಆಶ್ರಯಿಸಬೇಕಾದ್ದರಿಂದ ಕಮ್ಮಾರಸಾಲೆ ಗ್ರಾಮಜೀವನದ ಅವಿಭಾಜ್ಯ ಭಾಗವಾಯಿತು.

ಚಿನಿವಾರಿಕೆಯ ಆಧಾರವಾಗಿರುವ ಚಿನ್ನ ಜನಸಾಮಾನ್ಯರ ದಿನಬಳಕೆಯ ಲೋಹವಲ್ಲ. ಚಿನಿವಾರಿಕೆಯಲ್ಲಿ ಬಲವಾದ ಸಾಂಪ್ರದಾಯಿಕ ಅಂಶಗಳಿವೆಯಾದರೂ ಅದು ಶ್ರೀಮಂತರಿಗೆ ಬೇಕಾದ ಆಭರಣಗಳ ತಯಾರಿಕೆಗೆ ಸೀಮಿತ ಮತ್ತು ಚಿನಿವಾರರು ವಿನ್ಯಾಸಗಳಿಗಾಗಿ ಮುದ್ರಿತ ಮೂಲಗಳನ್ನೇ ಹೆಚ್ಚು ಆಶ್ರಯಿಸುತ್ತಾರೆ. ಅದ್ದರಿಂದ ಇದು ಜಾನಪದದ ವ್ಯಾಪ್ತಿಯಿಂದ ಹೊರಗೇ ನಿಲ್ಲಬೇಕು ಎಂಬ ಅಭಿಪ್ರಾಯ ಪಾಶ್ಚಾತ್ಯ ವಿದ್ವಾಂಸರದು. ಅದರೆ ಭಾರತೀಯ ಸಂದರ್ಭದಲ್ಲಿ ಈ ಮಾತು ಅನ್ವಯಿಸವುದಿಲ್ಲ ಚಿನಿವಾರಿಕೆಯು ಕಲೆಗೆ ಹತ್ತಿರ ಎಂಬಷ್ಟು ಪರಿಷ್ಕೃತ ರೂಪದ ವೃತ್ತಿಯಾದರೂ ಜನಪದರ ಬದುಕಿನಲ್ಲಿ ಅದು ಬಹುಮಹತ್ವದ ಸ್ಥಾನ ಪಡೆದಿದೆ. ನಮ್ಮ ಜನಪದ ಸಾಹಿತ್ಯದಲ್ಲಿ ಬಹುಶಃ ಬೇರೆಲ್ಲ ವೃತ್ತಿಗಳಿಗಿಂತ ಚಿನಿವಾರಿಕೆಯ ಉಲ್ಲೇಖಗಳು ಹೆಚ್ಚು ಪ್ರಮಾಣದಲ್ಲಿ ಸಿಗುತ್ತಿರುವುದೇ ಅದು ಜನಸಾಮಾನ್ಯರ ಬದುಕಿನಲ್ಲಿ ಪಡೆದುಕೊಂಡಿರುವ ಸ್ಥಾನವನ್ನು ಸೂಚಿಸುತ್ತದೆ.

ಮೇದಾರಿಕೆ ವೃತ್ತಿ ಎಂಬ ಶೀರ್ಷಿಕೆಯಲ್ಲಿ, ವಿವಿಧ ರೀತಿಯ ಸಸ್ಯನಾರು ಪದಾರ್ಥಗಳನ್ನು ಬಳಸುವ ಕಸುಬುಗಳನ್ನು ಪರಿಗಣಿಸಬಹುದು. ಯಾವುದೇ ಯಂತ್ರ ಸಾಧನದ ಬಳಕೆಯಿಲ್ಲದೆ ಸಂಪೂರ್ಣವಾಗಿ ಕೈಯಿಂದಲೇ ಮಾಡುವ ಕಸುಬುಗಾರಿಕೆ ಇದು. ಮಾನವ ಬಳಕೆಯ ವಸ್ತುಗಳಲ್ಲಿ ಏನೆಲ್ಲ ಬದಲಾದರೂ ಜನನ ಮರಣ ಸಂದರ್ಭಗಳಲ್ಲಿ ಬಿದಿರಿನ ಪರಿಕರಗಳು ಅನಿವಾರ್ಯವಾದ್ದರಿಂದ ಈ ವೃತ್ತಿಗೆ ಮನ್ನಣೆ ಇದೇ ಇದೆ.

ಪ್ರಸ್ತುತ ಸಂಕಲನ ವಿವಿಧ ಗ್ರಾಮೀಣ ವೃತ್ತಿಗಳನ್ನು ಪರಿಚಯಿಸುತ್ತದೆ. ಯಾವುದೇ ವೃತ್ತಿ ಅನೇಕ ಪ್ರಾದೇಶಿಕ ವೈಶಿಷ್ಟ್ಯಗಳನ್ನು ಹೊಂದಿರುತ್ತದೆ. ಈ ದೃಷ್ಟಿಯಿಂದ ಪ್ರತಿಯೊಂದು ವೃತ್ತಿಯನ್ನು ಎಲ್ಲ ಪ್ರಾದೇಶಿಕ ಭಾಗಗಳಿಂದ ಸಂಗ್ರಹಿಸಿ, ಇಲ್ಲಿನ ಕಾರ್ಯತಂತ್ರ, ವಿನ್ಯಾಸ, ಸಂಸ್ಕರಣ ವಿಧಾನಗಳು, ಪರಿಭಾಷೆ ಇತ್ಯಾದಿಗಳಲ್ಲಿರುವ ಪರಸ್ಪರ ಹೋಲಿಕೆ. ಭಿನ್ನತೆಗಳನ್ನು ಹೋಲಿಸಿ ತಿಳಿಯಬಹುದಾಗಿದೆ. ಯಂತ್ರಗಳು ಹಾಗೂ ರಾಸಾಯನಿಕ ಸಾಮಗ್ರಿಗಳು ನಮ್ಮ

ಬದುಕಿನ ಸರ್ವಕ್ಷೇತ್ರಗಳನ್ನು ವ್ಯಾಪಿಸಿ ಪ್ರಾಕೃತಿಕ, ಜೈವಿಕ ಸಂಪತ್ತನ್ನು ಕಲುಷಿತಗೊಳಿಸಿ ಭೂಮಿಯ ವಿಶಿಷ್ಟ ಪರಿಸರನ್ನು ವಿನಾಶದ ಅಂಚಿಗೆ ತಂದಿರುವ ಈ ಸಂದರ್ಭದಲ್ಲಿ ಪರಿಸರ ಸ್ನೇಹಿಯಾದ, ಜೈವಿಕವಾಗಿ ವಿಘಟತವಾಗ ಬಹುದಾದ, ಮಣ್ಣಿನಲ್ಲಿ ವಿಲೀನಗೊಳ್ಳುವ ವಸ್ತುಗಳನ್ನು ಕುರಿತಂತೆ ವಿಜ್ಞಾನಿಗಳು ಇಲ್ಲಿಂದ ಹೊಸ ಮಾಹಿತಿಯನ್ನು ಪಡೆದುಕೊಳ್ಳಬಹುದು. ಇಲ್ಲಿರುವ ಜ್ಞಾನಭಂಡಾರವನ್ನು ಸಮಾಜಕ್ಕೆ ತುಲುಪಿಸುವ ಹೊಣೆಗಾರಿಕೆ ಜಾನಪದತಜ್ಞರ ಮೇಲಿದೆ ಎಂದರೆ ತಪ್ಪಲ್ಲ.

ವಿವಿಧ ವೃತ್ತಿಗಳನ್ನು ಕುರಿತಂತೆ ವಿಶೇಷ ಶ್ರಮವಹಿಸಿ ಮಾಹಿತಿ ಸಂಗ್ರಹಿಸಿಕೊಟ್ಟಿರುವ ಇಲ್ಲಿನ ಎಲ್ಲ ಲೇಖಕರಿಗೂ ನಮ್ಮ ಕೃತಜ್ಞತೆಗಳು. ಕೆಲವು ಲೇಖನಗಳಲ್ಲಿ ಮಾಹಿತಿಸಂಗ್ರಹ ನಿರೀಕ್ಷಿತ ಮಟ್ಟದಲ್ಲಿಲ್ಲ ಎಂಬ ಅರಿವು ನಮಗಿದೆ. ಇಷ್ಟಾದರೂ ಈ ಸಂಕಲನ ಮುಂದಿನ ಸಂಗ್ರಹಗಳಿಗೆ ಪ್ರೇರಕವಾಗಲಿ ಎಂದು ಹಾರೈಸುತ್ತ ಈ ಸಂಪಾದಕತ್ವದ ಹೊಣೆ ಒಪ್ಪಿಸಿದ ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷ ಶ್ರೀ ಎಚ್.ಜೆ. ಲಕ್ಕಪ್ಪ ಗೌಡ ಅವರಿಗೂ, ಸಹಕರಿಸಿದ ಅವರ ಸಿಬ್ಬಂದಿವರ್ಗಕ್ಕೂ ನಮ್ಮ ನಮನಗಳನ್ನು ಅರ್ಪಿಸುತ್ತೇವೆ.

ಬೆಂಗಳೂರು
೩೦.೧೦.೨೦೦೦

ಡಾ. ದೇವೇಂದ್ರ ಕುಮಾರ ಹಕಾರಿ
ಡಾ. ಕೆ.ಆರ್. ಸಂಧ್ಯಾರೆಡ್ಡಿ

ಮುನ್ನುಡಿ

ಭಾರತ ದೇಶ ಬಹು ಅರ್ಥಗಳಲ್ಲಿ ಗ್ರಾಮೀಣ ಭಾರತ ಎಂಬ ಹೆಸರಿಗೆ ಅನ್ವರ್ಥವಾಗಿದೆ. ಭಾರತದ ಪ್ರಗತಿ ಮತ್ತು ಅಭಿವೃದ್ಧಿಗಳು ಮುಖ್ಯವಾಗಿ ಇಲ್ಲಿಯ ಹಳ್ಳಿಗಳ ಪ್ರಗತಿ ಮತ್ತು ಅಭಿವೃದ್ಧಿಯನ್ನೇ ಅವಲಂಬಿಸಿವೆ. ಶೇಕಡ ೭೦ಕ್ಕಿಂತ ಹೆಚ್ಚು ಜನ ಗ್ರಾಮಾಂತರ ಪ್ರದೇಶಗಳಲ್ಲಿ ಜೀವಿಸುತ್ತಿದ್ದಾರೆ. ಶೇಕಡ ೫೦ಕ್ಕಿಂತ ಹೆಚ್ಚು ಅನಕ್ಷರಸ್ಥರು ತುಂಬಿರುವ ಈ ನಾಡಿನ ಗ್ರಾಮಜೀವನದಲ್ಲಿ ಪರಂಪರಾಗತವಾದ ಮೌಢ್ಯ, ಅಂಧಸಂಪ್ರದಾಯ, ಅಜ್ಞಾನ ಮತ್ತು ಅವ್ಯೆಚಾರಿಕತೆಗಳು ಮನೆಮಾಡಿಕೊಂಡಿವೆ. ಈ ಗ್ರಾಮಗಳ ಬೇಸಾಯ ಪದ್ಧತಿ, ಜೀವನ ಕ್ರಮ, ಆಲೋಚನೆಯ ರೀತಿ ಎಲ್ಲವೂ ಪ್ರಾಚೀನ ನಂಬಿಕೆ ಮತ್ತು ಪದ್ಧತಿಗಳ ಶಿಥಿಲ ಸರಪಣಿಯನ್ನೇ ಆಧಾರವಾಗಿ ಹಿಡಿದುಕೊಂಡಿವೆ. ಆದರೆ ಆದಿಮ ಕಾಲದ ಗ್ರಾಮೀಣ ಜೀವನ ಪರಿಸ್ಥಿತಿಯನ್ನು ಇತಿಹಾಸದ ದಾರಿಯಲ್ಲಿ ಹಿನ್ನಡೆದು ಅವಲೋಕಿಸಿದಾಗ ಈ ಜೀವನ ಸಂಪೂರ್ಣವಾಗಿ ಸ್ವತಂತ್ರವೂ, ಸ್ವಾವಲಂಬನಾ ಶೀಲವೂ, ನಿಸರ್ಗಾಧಾರಿತವೂ, ಆಗಿತ್ತೆಂಬುದು ಮನವರಿಕೆ ಯಾಗುತ್ತದೆ.

ಈ ಹಿನ್ನೆಲೆಯಲ್ಲಿ ಬಹುಮಟ್ಟಿಗೆ ಸ್ವತಂತ್ರ ಘಟಕಗಳೇ ಆಗಿದ್ದ ಗ್ರಾಮಗಳು ತಮಗೆ ಅಗತ್ಯವಾದ ಆಹಾರ ಬೆಳೆಯಲು ಭೂಮಿಯನ್ನು, ನೀರು ದೊರೆಯುವ ನೆಲೆಯನ್ನು, ಸಹಜವಾಗಿ ವಾಸಿಸಲು ಅನುಕೂಲಕರವಾದ ಪರಿಸರವನ್ನು ಹುಡುಕಿಕೊಂಡು ಅಲೆದಾಡುತ್ತ ಕೊನೆಗೊಮ್ಮೆ ಸ್ಥಾಯಿಯಾಗಿ ನೆಲೆ ನಿಂತವು. ಅಲ್ಲಿಯ ಭೂಮಿ, ನೀರು, ಗಾಳಿಗಳಿಗೆ ಅನುಸಾರವಾಗಿ ಆಹಾರವನ್ನು ಬೆಳೆಯುತ್ತಾ, ತಮಗೆ ವಾಸಿಸಲು ಅಗತ್ಯವಾದ ವಸತಿಗಳನ್ನು ನಿರ್ಮಿಸಿಕೊಳ್ಳುತ್ತಾ ತಮ್ಮ ದೈನಂದಿನ ಆಗು-ಹೋಗುಗಳಿಗೆ ಅನಿವಾರ್ಯವಾದ

ಕೌಟುಂಬಿಕ ಸಂಬಂಧಗಳನ್ನು ಕಲ್ಪಿಸಿಕೊಳ್ಳುತ್ತಾ, ತಮಗೆ ಆಧಾರವಾಗುವ ನಿಸರ್ಗವನ್ನು ಅದರ ಬಹುಮುಖತೆಗಳಲ್ಲಿ ಅನ್ವೇಷಿಸುತ್ತಾ ಬದುಕನ್ನು ರೂಪಿಸುವ ನಿಸರ್ಗಶಕ್ತಿಗಳನ್ನು ದೈವಗಳೆಂದು ಆರಾಧಿಸುತ್ತಾ ಪ್ರತೀಕಗಳನ್ನು ಕಲ್ಪಿಸಿಕೊಂಡರು. ಅವುಗಳನ್ನು ಪೂಜಿಸುವ ವಿಧಿ-ವಿಧಾನಗಳನ್ನು ಅನುಭವದ ಆಧಾರದ ಮೇಲೆ ಸೃಷ್ಟಿಸಿಕೊಂಡರು. ಕೃಷಿಗೆ ಮತ್ತು ಆಹಾರಕ್ಕೆ ಅಗತ್ಯವಾದ ಸಾಧನಗಳನ್ನು ಹಂತ-ಹಂತವಾಗಿ ನಿರ್ಮಿಸಿಕೊಂಡರು. ಮುಖ್ಯವಾಗಿ ಮಾಂಸವೇ ಆಹಾರದ ಪ್ರಮುಖ ಭಾಗವಾಗಿದ್ದ ಕಾಲದಲ್ಲಿ ಪ್ರಾಣಿಗಳ ಬೇಟೆಗೆ ಅಗತ್ಯವಾದ ಉಪಕರಣಗಳನ್ನು ಪ್ರಾಯೋಗಿಕ ಆಧಾರದಲ್ಲಿ ರೂಢಿಸಿಕೊಂಡರು. ಒಂದೆಡೆ ನೆಲೆಸಿದ ಹೆಣ್ಣು-ಗಂಡುಗಳ ಕಾರಣದಿಂದ ಅಂತಃಕಲಹ ಆರಂಭವಾಗದಂತೆ ತಮ್ಮ ತಮ್ಮಲ್ಲೇ ಕೆಲವು ಒಡಂಬಡಿಕೆಗಳನ್ನು ಮಾಡಿಕೊಂಡರು. ಮಳೆ, ಗಾಳಿ, ಬಿಸಿಲು ಮುಂತಾದ ಪ್ರಕೃತಿ ವಿಕೋಪಗಳಿಂದ ರಕ್ಷಿಸಿಕೊಳ್ಳಲು ವಾತಾವರಣಕ್ಕನುಗುಣವಾದ ವಸತಿಗಳ ನಿರ್ಮಾಣ ಆರಂಭವಾಗಿ ಕಾಲಕ್ರಮೇಣ ಅವುಗಳಲ್ಲಿ ಸೌಂದರ್ಯದೃಷ್ಟಿಯೂ ನೆಲೆಗೊಂಡಿತು. ಸಮಾನ ವೃತ್ತಿ, ಸಮಾನ ವಯಸ್ಸು, ಸಮಾನ ಅಭಿರುಚಿಗಳಿಂದ ಕೂಡಿದ ಜನ ಪ್ರತ್ಯೇಕ-ಪ್ರತ್ಯೇಕ ಗುಂಪುಗಳಾದರು.

ಆ ಗುಂಪುಗಳಿಗೆ ಸಮಾನವಾದ ನಂಬಿಕೆಗಳೂ, ಆಚರಣೆಗಳೂ ಚಾಲ್ತಿಗೆ ಬಂದವು. ಹೀಗೆಯೇ ಜೀವನದ ಸಂಕಷ್ಟಗಳನ್ನು ಮರೆಯಲು, ಮನಸ್ಸಿಗೆ ಮತ್ತು ಅನುಭವಕ್ಕೆ ಸಹಜವಾದ ಹಾಡು, ಕಥೆ, ಚಿತ್ರ, ಅಲಂಕಾರ ಮುಂತಾದವು ರೂಪುಗೊಂಡವು. ಹೀಗೆ ಜಾತ್ರೆಗಳು, ಸಂತೆಗಳು, ಹಬ್ಬಹರಿದಿನಗಳು ಸಾಮಾಜಿಕ ಚಿಂತನೆ ಮತ್ತು ಕ್ರಿಯೆಗಳ ಫಲವಾಗಿ ಮೂಡಿಬಂದವು. ಮಣ್ಣು, ನೀರು, ಆಕಾಶಗಳನ್ನು ಆಧರಿಸಿದ ನಂಬಿಕೆಗಳು ಸುದೀರ್ಘ ಜೀವನದ ಫಲವಾಗಿ ರೂಢ ಮೂಲವಾದವು. ಮೊದ-ಮೊದಲು ಕೇವಲ ಹೊಟ್ಟೆಯ ಬವಣೆಯನ್ನು ನೀಗಲು ಆರಂಭವಾದ ಈ ಪ್ರಯತ್ನ ಮತ್ತು ಪ್ರಯೋಗಗಳು ಬರಬರುತ್ತಾ ಸುಖ ಜೀವನ ಮತ್ತು ಸಂತೋಷದ ಹಾದಿಯನ್ನು ಸ್ವಾಭಾವಿಕವಾಗಿಯೇ ನಿರ್ಮಿಸತೊಡಗಿದವು. ಆದಿಮ ತಲೆಮಾರಿನ ಈ ಜೀವನ ಪದ್ಧತಿಯ ಬಹುಮುಖ್ಯ ಲಕ್ಷಣಗಳನ್ನೆಲ್ಲ ಅನಂತರದ ತಲೆಮಾರುಗಳು ಅನುಸರಿಸುತ್ತಾ ಮತ್ತು ಅಭಿವೃದ್ಧಿಪಡಿಸುತ್ತಾ

ಬಂದವು. ವಾಸ್ತವ ಪ್ರಜ್ಞೆಯ ಜೊತೆಗೆ ಸೌಂದರ್ಯ ಪ್ರಜ್ಞೆಗಳು ಬೆಳೆದುಕೊಂಡು ಬಗೆಬಗೆಯ ಕಲೆಗಳ ಆವಿಷ್ಕಾರವೂ ಆಯಿತು. ಹೀಗಾಗಿ ಜೀವನದಿಂದ ಹುಟ್ಟಿದ ಮತ್ತು ಜೀವನಕ್ಕೆ ಪೋಷಕವಾದ ಈ ಎಲ್ಲಾ ಪದ್ಧತಿಗಳು ದೀರ್ಘಕಾಲದ ಆಚರಣೆಯ ಫಲವಾಗಿ ಸಂಸ್ಕೃತಿ ಎನಿಸಿಕೊಂಡವು. ಈ ಎಲ್ಲಾ ಸಂಸ್ಕೃತಿಯ ಮೂಲಪ್ರಜ್ಞೆ, ಮೂಲಸಾಮಗ್ರಿ ಮತ್ತು ಮೂಲಚಿಂತನೆ ಆ ಪರಿಸರದಿಂದ ಜನ್ಯವಾದವುಗಳಾದದ್ದು ದೇಶೀಯ ಸಂಸ್ಕೃತಿ ಎನಿಸಿಕೊಂಡವು. ಈ ಬಹುಮುಖ ಸಂಸ್ಕೃತಿಗಳು ಕೆಲವೊಮ್ಮೆ ಪ್ರತ್ಯೇಕವಾಗಿ ಮತ್ತೆ ಕೆಲವೊಮ್ಮೆ ಸಂಯುಕ್ತವಾಗಿ, ಅಖಂಡವಾಗಿ ಅನುಷ್ಠಾನದಲ್ಲಿ ಕಾಣಿಸಿಕೊಂಡವು. ಆದ್ದರಿಂದ ಈ ಸಂಸ್ಕೃತಿಗಳ ವ್ಯಾಪ್ತಿಗೆ ಅನುಸಾರವಾಗಿ ವ್ಯಾಪಕ ಸಂಸ್ಕೃತಿ ಮತ್ತು ಅವ್ಯಾಪಕ ಸಂಸ್ಕೃತಿಗಳು ಎಂಬ ಚೌಕಟ್ಟಿನಲ್ಲಿ ಬೆಳೆಯ ತೊಡಗಿದವು. ಈ ಎಲ್ಲಾ ಸಂಸ್ಕೃತಿಗಳ ಮುಖ್ಯ ಉದ್ದೇಶ ಜೀವನ ಸಂತೃಪ್ತಿ, ಜೀವನದ ಸಮೃದ್ಧಿ ಮತ್ತು ಜೀವನ ಶಾಂತಿಗಳೇ ಆಗಿದ್ದವು.

ಆದರೆ ಆರ್ಯರ ಆಗಮನವಾದ ನಂತರ ಈ ಮೂಲಸಂಸ್ಕೃತಿಗಳ ಮೇಲೆ ಆರ್ಯಸಂಸ್ಕೃತಿಗಳ ಆಕ್ರಮಣ ಮತ್ತು ಸಂಕ್ರಮಣಗಳಾದವು. ಈ ದೇಶಕ್ಕೆ ತಂಡೋಪತಂಡವಾಗಿ ಬಂದ ಇತರ ಸಂಸ್ಕೃತಿಗಳ ಪ್ರಭಾವವೂ ಈ ಗ್ರಾಮೀಣ ಸಂಸ್ಕೃತಿಯ ಮೇಲೆ ದಟ್ಟವಾಗಿ ಆಗತೊಡಗಿತು. ಅಕ್ಷರ ಶಿಕ್ಷಣ, ನಾಗರಿಕತೆ ಮತ್ತು ವಿಜ್ಞಾನದ ಪ್ರಗತಿ ಈ ಮೂಲ ಜನಾಂಗಗಳಲ್ಲಿ ಮತ್ತು ಸಂಸ್ಕೃತಿಗಳಲ್ಲಿ ಹಲವು ಪಲ್ಲಟಗಳನ್ನು ಮತ್ತು ಪರಿವರ್ತನೆಗಳನ್ನು ತಂದವು. ಈ ಕಾರಣದಿಂದಾಗಿ ಗ್ರಾಮೀಣವಾದ ಮೂಲ ಸಂಸ್ಕೃತಿಯೆಲ್ಲಾ ಅಜ್ಞಾನಜನ್ಯವಾದುದು ಮತ್ತು ಪ್ರಗತಿ ವಿರೋಧಿಯಾದುದು ಎಂಬ ಭಾವನೆ ಬಲಿಯಿತು; ಅವುಗಳನ್ನು ಬಿಟ್ಟುಕೊಡುವುದೇ, ದಾಟುವುದೇ ನಿಜವಾದ ನಾಗರಿಕತೆ ಎಂಬ ಭ್ರಮೆ ಆವರಿಸಿತು. ಈ ಸ್ಥಿತಿಯಲ್ಲಿ ಗ್ರಾಮಗಳಲ್ಲಿ ಜನ್ಮ ತಳೆದು ಗ್ರಾಮಜೀವನಕ್ಕೆ ಸಂತೋಷ ಸಮಾಧಾನಗಳನ್ನು ಸ್ವತಂತ್ರ ಶೀಲತೆ ಮತ್ತು ಸ್ವಾಭಿಮಾನವನ್ನು ತುಂಬುತ್ತಿದ್ದ ಸಂಸ್ಕೃತಿಗಳು ಮರೆಯಾಗಿ ತಮ್ಮ ಜೀವನದ ಎಲ್ಲಾ ಅಗತ್ಯಗಳಿಗೂ ಪಶ್ಚಿಮದ ಕಡೆ ನೋಡುವ ತಮ್ಮ ಬೇರುಗಳನ್ನು ಕತ್ತರಿಸಿಕೊಳ್ಳುವ ಪರಾವಲಂಬನಾ ಪ್ರವೃತ್ತಿ ನಮ್ಮಲ್ಲಿ ದಟ್ಟವಾಗಿ

ಬೆಳೆಯುತ್ತಾ, ನಮ್ಮತನವನ್ನೇ ತಿಂದುಹಾಕುತ್ತಿದೆ. ಮಹಾತ್ಮ ಗಾಂಧೀಜಿ ಯವರು ಗ್ರಾಮೀಣಬದುಕಿನಲ್ಲಿ ಹಿಂದೆ ಶಕ್ತಿಶಾಲಿಯಾಗಿದ್ದ ಈ ಸ್ವಾವಲಂಬನಾಶೀಲ ಬದುಕನ್ನು ಪುನರ್ ಸ್ಥಾಪಿಸಲು ಮತ್ತು ಈ ಪ್ರಾಚೀನ ಗ್ರಾಮಸಂಸ್ಕೃತಿಯನ್ನು ಪರಿಷ್ಕರಿಸಿ ಕಾಲಕ್ಕೆ ತಕ್ಕಂತೆ ಬಳಸಿಕೊಳ್ಳುವುದು ನಮ್ಮ ಆಧುನಿಕವಾದ ಬಹುಪಾಲು ಸಮಸ್ಯೆಗಳಿಗೆ ಮದ್ದು ಎಂದು ಪ್ರತಿಪಾದಿಸಿದರು. ಯಂತ್ರ ಮೂಲವಾದ ಬದುಕು ಮನುಷ್ಯನ ಅಂತಃಸತ್ವವನ್ನು ತಿಂದುಹಾಕುತ್ತಿರುವುದು ಮತ್ತು ಆಗಾಧ ಪ್ರಮಾಣದಲ್ಲಿ ಜನಸಂಖ್ಯೆ ಬೆಳೆಯುತ್ತಿರುವುದು, ಈ ಸಂದರ್ಭದಲ್ಲಿ ನಶಿಸಿ ಹೋಗುತ್ತಿರುವ ಗ್ರಾಮ ಸಂಸ್ಕೃತಿಗಳ ಕಡೆಗೆ ಮತ್ತು ಅವುಗಳ ಅಂತರಾಳದ ಅವಿನಾಶೀ ಮೌಲ್ಯದ ಕಡೆಗೆ ಯುವಪೀಳಿಗೆಯ ಮನಸ್ಸನ್ನು, ಶ್ರದ್ಧೆಯನ್ನು ತಿರುಗಿಸುವುದು ಇಂದಿನ ಅವಶ್ಯಕತೆಗಳಲ್ಲಿ ಒಂದಾಗಿದೆ.

ಈ ದೃಷ್ಟಿಯಿಂದ ಕನ್ನಡ ಪುಸ್ತಕ ಪ್ರಾಧಿಕಾರವು ಶೀಘ್ರಗತಿಯಲ್ಲಿ ಕ್ಷೀಣಸುತ್ತಿರುವ ಗ್ರಾಮೀಣ ಸಂಸ್ಕೃತಿಯ ವಿವಿಧ ಮಗ್ಗುಲುಗಳನ್ನು ಕ್ಷೇತ್ರಾಧಾರಿತವಾದ ಅಧ್ಯಯನ ಮತ್ತು ಸಂಶೋಧನೆಗಳ ಮೂಲಕ ಮತ್ತೊಮ್ಮೆ ಯುವ ಜನಾಂಗದ ಮುಂದಿಡಲು ''ಗ್ರಾಮ ಸಂಸ್ಕೃತಿಮಾಲೆ'ಯನ್ನು ಆರಂಭಿಸಿದೆ. ಈ ಮಾಲೆಯಲ್ಲಿ ಪ್ರಕಟವಾಗುವ ಪುಸ್ತಕಗಳು ಜನ ಸಾಮಾನ್ಯರಿಗೆ, ನಾಗರಿಕತೆಯ ಅಕ್ಟೋಪಸ್ ಹಿಡಿತದಲ್ಲಿ ಜೀವನಶಾಂತಿಯನ್ನು ಕಳೆದುಕೊಳ್ಳುತ್ತಿರುವ ನಾಗರಿಕರಿಗೆ, ತಮ್ಮ ಇತಿಹಾಸವನ್ನು ಮರೆತು ಮರಳಿನ ಮೇಲೆ ಮನೆ ಕಟ್ಟಲು ಹವಣಿಸುತ್ತಿರುವ ಯುವಜನಾಂಗಕ್ಕೆ ದೇಸೀಯವಾದ ಹೊಸ ತಿಳುವಳಿಕೆಗಳ ವಿಶಿಷ್ಟ ಲೋಕವನ್ನು ಪರಿಚಯಿಸಿಕೊಡಬಲ್ಲವು ಎಂಬ ನಂಬಿಕೆ ನಮಗಿದೆ.

ಈ ಗ್ರಾಮ ಸಂಸ್ಕೃತಿಯಲ್ಲಿ ಪರಂಪರಾಗತವಾಗಿ ಬಂದು ಕ್ರಮೇಣ ಕ್ಷೀಣಿಸುತ್ತಿರುವ ಹಲವು ವೃತ್ತಿಗಳನ್ನು ಕುರಿತ ಕ್ಷೇತ್ರಧಾರಿತ ಅಧ್ಯಯನದ ಫಲ ಈ 'ಗ್ರಾಮೀಣ ವೃತ್ತಿಗಳು' ಎಂಬ ಪುಸ್ತಕದಲ್ಲಿ ದೊರೆಯುತ್ತದೆ. ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಹೆಸರಾದ ಹಲವಾರು ತಜ್ಞರು ಬಹು ಪರಿಶ್ರಮಪೂರ್ವಕವಾಗಿ ನಮ್ಮ ಗ್ರಾಮೀಣ ವೃತ್ತಿಗಳ ಬಗೆಗಿನ ಮಾಹಿತಿಯನ್ನು ಇಲ್ಲಿ ಕಲೆಹಾಕಿ ವಿಶ್ಲೇಷಿಸಿರುವುದು ನಮ್ಮ ಸಮಗ್ರ ಜಾನಪದ ಕ್ಷೇತ್ರದ ಮತ್ತು

ಸಂಸ್ಕೃತಿಯ ಅಧ್ಯಯನಕ್ಕೆ ಫಲವತ್ತಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಕುಂಬಾರಿಕೆ ಕುಸುಬಿನ ವಿವಿಧ ಮಗ್ಗಲುಗಳನ್ನು ಮೂಲಸ್ವರೂಪ ಮತ್ತು ವ್ಯಾಪ್ತಿಗಳನ್ನು ಆ ಜನಾಂಗದ ಒಳಗ ಪಂಗಡಗಳ-ಸಂಪ್ರದಾಯಗಳು ಹಾಗೂ ಈ ವೃತ್ತಿಗಾಗಿ ಮಣ್ಣನ್ನು ಆಯ್ಕೆ ಮಾಡಿಕೊಳ್ಳುವ ವಿಧಾನದಿಂದ ಹಿಡಿದ ಈ ವಸ್ತುಗಳು ತಯಾರಾಗುವ ಅಂತಿಮ ಅಂತದವರೆಗೆ ನಡೆಯುವ ಪ್ರಕ್ರಿಯೆಗಳನ್ನು ಮತ್ತು ಬಳಸಲಾಗುವ ಉಪಕರಣಗಳನ್ನು ಅವುಗಳಿಂದ ತಯಾರಾಗುವ ವಸ್ತುಗಳ ಕಲಾಕೌಶಲ್ಯಗಳನ್ನು ಹಾಗೂ ಈ ಜನ ತಮ್ಮ ವೃತ್ತಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ತುಂಬಾ ಸೂಕ್ಷ್ಮವಾಗಿ ವಿವರಿಸಲಾಗಿದೆ. ಹೀಗೆಯೇ ಕಂಮಾರಿಕೆ, ಚಿನಿವಾರಿಕೆ, ಬಡಗಿತನ, ನೇಕಾರಿಕೆ, ಚಂಮಾರಿಕೆ - ಈ ವೃತ್ತಿಗಳನ್ನು ಕುರಿತಾದ ಮೂಲ ಮತ್ತು ಸೂಕ್ಷ್ಮ ಮಾಹಿತಿಗಳನ್ನು ಹಾಗೂ ವಿಶ್ಲೇಷಣೆಯನ್ನು ಇಲ್ಲಿ ಲೇಖನಗಳು ಒದಗಿಸುತ್ತವೆ. ಇಲ್ಲಿನ ಲೇಖಕರು ಅಪಾರ ಪರಿಶ್ರಮ, ತಾಳ್ಮೆ, ಸಂಶೋಧನಾ ಪ್ರವೃತ್ತಿ ಹಾಗೂ ಸಂಸ್ಕೃತಿ ಪ್ರೇಮಗಳಿಂದ ಅತ್ಯಂತ ಕುತೂಹಲಕಾರಿಯಾದ ಅಂಶಗಳನ್ನು ಇಲ್ಲಿ ಪ್ರಥಮ ಬಾರಿಗೆ ಕಲೆ ಹಾಕಿದ್ದಾರೆ. ಈ ವೃತ್ತಿಗಳಲ್ಲಿ ತೊಡಗಿಕೊಂಡಿರುವ ಜನಾಂಗದ ಬಗ್ಗೆ ಕೂಡ ಸಮಾಜ ಶಾಸ್ತ್ರಜ್ಞರಿಗೆ ಅಪರೂಪದ ಮಾಹಿತಿಗಳು ಇಲ್ಲಿ ದೊರಕುತ್ತವೆ. ಇಲ್ಲಿನ ಎಲ್ಲಾ ಲೇಖನಗಳು ತುಂಬಾ ಮೇಲ್ಮಟ್ಟದಲ್ಲಿವೆ ಎಂದು ಹೇಳಲಾಗದಿದ್ದರೂ ಇವರು ನೀಡಿರುವ ಪ್ರಾರಂಭದ ಮಾಹಿತಿಗಳು ಈ ಜನಾಂಗದ ಬಗ್ಗೆ ಮತ್ತು ಸಂಸ್ಕೃತಿಯ ಬಗ್ಗೆ ಹೆಚ್ಚಿನ ಸಂಶೋಧನೆ ಮಾಡುವವರಿಗೆ ಪ್ರೇರಕವಾಗಿವೆ ಎಂಬುದರಲ್ಲಿ ಸಂಶಯವಿಲ್ಲ.

ಇಂಥದೊಂದು ವಿಷಯದ ಮೇಲೆ ಕೇವಲ ಸಂಸ್ಕೃತಿ ಪ್ರೇಮದಿಂದ ಪ್ರೇರಿತರಾಗಿ ಲೇಖನಗಳನ್ನು ಬರೆದು ಕೊಟ್ಟ ಇಲ್ಲಿನ ಎಲ್ಲಾ ವಿದ್ವಾಂಸರಿಗೆ ಹಾಗೂ ಇವುಗಳ ಓರೆ-ಕೋರೆಗಳನ್ನು ತಿದ್ದಿ ತೀಡಿ ತುಂಬಾ ಆಸ್ಥೆಯಿಂದ ಶ್ರಮವಹಿಸಿ ಸಂಪಾದಿಸಿಕೊಟ್ಟ ನಮ್ಮ ಕನ್ನಡ ಜಾನಪದ ಕ್ಷೇತ್ರದ ಸತ್ವಶೀಲ ವಿದ್ವಾಂಸರಾದ ಡಾ॥ ಕೆ.ಆರ್. ಸಂಧ್ಯಾರೆಡ್ಡಿ ಅವರಿಗೆ ಮತ್ತು ಡಾ॥ ದೇವೇಂದ್ರ ಕುಮಾರ ಹಕಾರಿ ಅವರಿಗೆ ಪ್ರಾಧಿಕಾರದ ಪರವಾಗಿ ಕೃತಜ್ಞತೆಗಳು.

ಈ ಕೃತಿಯನ್ನು ಅಚ್ಚುಕಟ್ಟಾಗಿ ಮುದ್ರಿಸಿ ಕೊಟ್ಟ ಶ್ರೀ ಸತ್ಯಶ್ರೀ ಪ್ರಿಂಟರ್ಸ್‌ನ ಮಾಲೀಕರು ಮತ್ತು ಸಿಬ್ಬಂದಿ ವರ್ಗಕ್ಕೆ ಹಾಗೂ ಈ ಮಾಲೆಯ ಪುಸ್ತಕಗಳನ್ನು ಪ್ರಕಟಿಸಲು ಸಮ್ಮತಿಸಿದ ಪ್ರಾಧಿಕಾರದ ಸದಸ್ಯ ಮಿತ್ರರಿಗೆ ಹೃತ್ಪೂರ್ವಕ ವಂದನೆಗಳು.

ದಿನಾಂಕ : ೩೧.೧೦.೨೦೦೦
ಸ್ಥಳ : ಬೆಂಗಳೂರು

ಡಾ.ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಪರಿವಿಡಿ

ದಕ್ಷಿಣ ಕರ್ನಾಟಕದಲ್ಲಿ ಕುಂಬಾರಿಕೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಜನಾಂಗದ ಸಂಕ್ಷಿಪ್ತ ಪರಿಚಯ

ಕುಂಬಾರ - ಇದು ಮೊದಲಿಗೆ ಮಣ್ಣಿಂದ ಉಪಯುಕ್ತವಾದ ವಸ್ತುಗಳನ್ನು ತಯಾರು ಮಾಡುತ್ತಿದ್ದ ವೃತ್ತಿಯವರನ್ನು ಸೂಚಿಸುತ್ತಿದ್ದು, ನಂತರದಲ್ಲಿ ಜನಾಂಗ ಸೂಚಕವಾಗಿರಬೇಕು. ಇವರು ಶೂದ್ರ ವರ್ಗಕ್ಕೆ ಸೇರಿದವರಾಗಿದ್ದರೂ ಕೆಲವು ಆಚರಣೆ ಸಂಪ್ರದಾಯಗಳಲ್ಲಿ ಬ್ರಾಹ್ಮಣರನ್ನು ಅನುಸರಿಸುತ್ತಾರೆ.

ಇವರನ್ನು ಭಾಷೆಯ ದೃಷ್ಟಿಯಿಂದ ತಮಿಳು ಕುಂಬಾರರು, ತೆಲುಗು ಕುಂಬಾರರು, ಕನ್ನಡ ಕುಂಬಾರರು ಎಂದು ವಿಭಾಗಿಸುತ್ತಾರೆ.

ದೈವಗಳ ಆರಾಧನೆಯಿಂದಲೂ ಭಿನ್ನವಾದ ಗುಂಪುಗಳು ಕಂಡು ಬರುತ್ತವೆ. ಕೆಲವರು ವಿಷ್ಣುವಿನ ಆರಾಧಕರಾದರೆ ಮತ್ತೆ ಕೆಲವರು ಶಿವಭಕ್ತರು.

ಇವರೆಲ್ಲರೂ 'ಕುಂಬಾರರು ಒಂದು ಅಶುದ್ಧ ಬ್ರಾಹ್ಮಣ ವಂಶಕ್ಕೆ ಸೇರಿದವರು' ಎಂಬುದನ್ನು ಒಪ್ಪಿಕೊಳ್ಳುತ್ತಾರಲ್ಲದೆ ಅದಕ್ಕೆ ಪೂರಕವಾಗಿ ಒಂದು ಕಥೆಯನ್ನೂ ಹೇಳುತ್ತಾರೆ.

ಬ್ರಾಹ್ಮಣ ವಿದ್ವಾಂಸನೊಬ್ಬ ಆಳವಾದ ಅಧ್ಯಯನ ನಡೆಸಿದ ನಂತರ, ತಾನು ನಿರ್ದಿಷ್ಟವಾದ ದಿನದಂದು ಗೊತ್ತಾದ ಗಳಿಗೆಯಲ್ಲಿ ಹೆಣ್ಣನ್ನು ಕೂಡಿದರೆ ಅತ್ಯಂತ ಮೇಧಾವಿ ಮತ್ತು ಶಕ್ತಿಶಾಲಿಯಾದ ಮಗುವನ್ನು ಪಡೆಯಬಹುದೆಂಬುದನ್ನು ಕಂಡುಕೊಂಡನು. ಆ ಮಹಾಸುದಿನಕ್ಕಾಗಿ ಬಹಳ ದಿನಗಳನ್ನು ಕಾದ ಬ್ರಾಹ್ಮಣನು ತನ್ನ ಹೆಂಡತಿಯ ಮನೆಗೆ ಹೊರಟನು. ಎಡಬಿಡದೆ ಮಳೆ ಸುರಿಯತೊಡಗಿತು. ನದಿಯ ಪ್ರವಾಹದಿಂದಾಗಿ ಅವನು ತನ್ನ ಮನೆಯನ್ನು ತಲುಪಲಾಗದೆ ಅಂದು ರಾತ್ರಿ ಮಡಕೆ ಮಾಡುವವನೊಬ್ಬನ ಮನೆಯಲ್ಲಿ ತಂಗುವುದು ಅನಿವಾರ್ಯವಾಯಿತು. ತನ್ನ ಶೋಧನೆ ನಿಷ್ಫಲವಾಗಬಾರದೆಂದು ಭಾವಿಸಿದ ಬ್ರಾಹ್ಮಣನು ತಾನು ತಂಗಿದ್ದ ಮನೆಯವನ ಮಗಳೊಡನೆ ಕೂಡಿ

ಇವೆಲ್ಲವನ್ನು ಗಮನಿಸಿದರೆ ಈ ಜಾತಿಯ ಮೂಲಪುರುಷನ ಬಗ್ಗೆ ಸಾಕಷ್ಟು ಭಿನ್ನಾಭಿಪ್ರಾಯವಿರುವಂತೆ ಕಂಡು ಬರುತ್ತದೆ. ಬಹುಶಃ 'ವರ್ಣಸಂಕರ' ದಿಂದ ಈ ವಂಶದ ಮೂಲಪುರುಷ ಜನಿಸಿದಂತೆ ತಿಳಿದು ಬರುತ್ತದೆ.

ಒಳಪಂಗಡಗಳು

ಮಧುಗಿರಿಯ ಸುತ್ತಮುತ್ತಲ ಕುಂಬಾರರಲ್ಲಿ ಸಜ್ಜನ ಕುಂಬಾರರು, ಶೆಟ್ಟಗಾರರು, ಲಿಂಗ ಕುಂಬಾರರು, ಗೌಡ ಕುಂಬಾರರು ಎಂದು ಮುಂತಾಗಿ ಒಳಪಂಗಡಗಳಿರುವುದು ಕಂಡು ಬರುತ್ತದೆ.

ಬಹಳ ಹಿಂದೆ ಶೆಟ್ಟಗಾರ ಕುಂಬಾರರಲ್ಲಿ ಬಾಲ್ಯವಿವಾಹ ಇದ್ದಂತೆ ಕಂಡು ಬರುತ್ತದೆ. ನೂರಾರು ವರ್ಷಗಳ ಹಿಂದೆ ಶೆಟ್ಟಗಾರ ಹೆಣ್ಣುಮಗಳಿಗೆ ಮದುವೆಯಾದ ಕೆಲವೇ ದಿನಗಳಲ್ಲಿ ಆಕೆಯ ಗಂಡ ತೀರಿ ಹೋದನು. ಆಗ ಆ ಹೆಣ್ಣು ಮಗಳಿಗೆ ಒಂದು ಎಕರೆ ಜಮೀನು ಕೊಟ್ಟು, ಅದಕ್ಕೆ ಸಜ್ಜೆ ಹಾಕಿಸಿದರು. ಅದರಿಂದ ಅವಳ ಹೊಟ್ಟೆಪಾಡು ಹೇಗೋ ನಡೆಯುತ್ತಿತ್ತು. ಆದರೆ ಕೆಲವು ದಿನಗಳ ನಂತರ ಆ ಹೆಣ್ಣುಮಗಳು ಲಿಂಗಾಯತ ಪುರುಷನ ಸಂಪರ್ಕ ಪಡೆದು ಮಗುವಿಗೆ ಜನ್ಮನೀಡಿದಳು. ಅವರು ಸಜ್ಜನ ಕುಂಬಾರರಾದರು. [ಬಹುಶಃ ಸಜ್ಜೆ ಹೊಲದ ಆಧಾರದಿಂದ ಜೀವನ ನಡೆಸುತ್ತಿದ್ದುದರಿಂದ ಸಜ್ಜನರಾಗಿರಬಹುದೆಂದು ವಕ್ತೃ ಮೆಳವಾಯಿ ಮಲ್ಲೇಶಪ್ಪ ಹೇಳಿದರು] ಈಗ ಕೆಲವು ಒಳಪಂಗಡದವರು ಸಜ್ಜನ ಕುಂಬಾರರೊಂದಿಗೆ ವಿವಾಹ ಸಂಬಂಧವನ್ನು ಬೆಳೆಸುವುದಿಲ್ಲ.

ಉಪಕರಣ ಪೂಜೆ

ಪ್ರತಿಯೊಂದು ವೃತ್ತಿಯವರೂ ತಾವು ಬಳಸುವ ಉಪಕರಣಗಳ ಬಗ್ಗೆ ಪೂಜ್ಯ ಹಾಗೂ ಗೌರವ ಭಾವನೆಯನ್ನು ಹೊಂದಿರುತ್ತಾರೆ. ಅವರ ಮಾತಿನಲ್ಲೇ ಹೇಳುವುದಾದರೆ 'ಅವು ಅನ್ನ ಕೊಡೊ ದೇವರುಗಳು' ಹೀಗಾಗಿ ಕುಂಬಾರರು ಕೂಡ ತಿಗರಿ, ತಿಗುರಿ ತಿರುಗಿಸುವ ಕೋಲು, ಮಣ್ಣಿನ ಪಾತ್ರೆಗಳಿಗೆ ರೂಪ ಕೊಡುವಾಗ ಬಳಸುವ ಗುಂಡಪ್ಪನನ್ನು (ಆಕಾರದಲ್ಲಿ ಸ್ವಲ್ಪ ಮಟ್ಟಿಗೆ ಲಿಂಗವನ್ನು ಹೋಲುವುದರಿಂದ ಇದನ್ನು 'ಲಿಂಗದ ಕಲ್ಲು' ಎಂದು ಕೂಡ ಕರೆಯುತ್ತಾರೆ.) ಪೂಜಿಸುತ್ತಾರೆ. ಹಾಗೆಯೇ ತಾವು ಕೆಲಸವನ್ನು ಪ್ರಾರಂಭಿಸುವ ಮೊದಲು

ಮಣ್ಣಿನ ಗುಡಿಯನ್ನು ಎರಡೂ ಕೈಗಳಿಂದ ಮುಟ್ಟಿ ಎದೆಭಾಗಕ್ಕೂ, ಹಣೆ ಭಾಗಕ್ಕೂ ಮುಟ್ಟಿಸಿ ನಮಸ್ಕರಿಸುತ್ತಾರೆ. ಬಹುಶಃ ತಾವು ಮಾಡುವ ಕಸುಬಿನಲ್ಲಿ ಯಾವುದೇ ವಿಘ್ನಗಳು ಬಾರದಿರಲೆಂಬುದು ಅವರ ಆಶಯವಾಗಿರಬೇಕು ಅಥವಾ ಅವುಗಳ ಬಗ್ಗೆ ಕೃತಜ್ಞತಾಭಾವವಿರಬೇಕು.

ಜನನ ಸಂಪ್ರದಾಯಗಳು

ಕುಂಬಾರರ ಹೆಂಗಸರ ಚೊಚ್ಚಲ ಹೆರಿಗೆ ತವರಿನಲ್ಲೇ ನಡೆಯುತ್ತದೆ. ಬಸುರಿಗೆ ಐದು ತಿಂಗಳು ತುಂಬಿದಾಗ ಮಾಡಿಕ್ಕುವುದು (ಬಸುರೂಟ, ಮಡಿಲು ತುಂಬುವುದು) ಅಂದರೆ ವಿಶೇಷವಾದ ಅಡುಗೆಯನ್ನು ತವರವರು ಗಂಡನ ಮನೆಯವರು ಮತ್ತು ಬಂಧುಗಳೊಂದಿಗೆ ಸಿಹಿಯೂಟವನ್ನು ಹಂಚಿಕೊಳ್ಳುವರು. ಮನೆಯ ಹಿರಿಯರ, ಗಂಡನ ಅನುಮತಿ ಪಡೆದು ತವರಿಗೆ ಬಸುರಿಯನ್ನು ಕರೆದುಕೊಂಡು ಬರುವರು.

ಮನೆಗೆ ಕರೆದು ತಂದ ಗರ್ಭಿಣಿಯಾದ ಮಗಳಿಗೆ 'ಬಸುರು-ಬಯಕೆ' ಗಳೇನಾದರೂ ಇದ್ದರೆ ಕೇಳಿ ಅದನ್ನು ಪೂರೈಸುತ್ತಾರೆ. ಹುಳಿ ಮಾವಿನ ಕಾಯಿ ತಿನ್ನುವುದು, ಕೆಮ್ಮಣ್ಣು ತಿನ್ನುವುದು, ಒಡವೆ ವಸ್ತ್ರಗಳನ್ನು ಇಡಬೇಕು ತೊಡಬೇಕೆಂಬ ಬಯಕೆ ಸಾಮಾನ್ಯವಾಗಿ ಕಂಡು ಬರುತ್ತದೆ. ಬಯಕೆಗಳು ತೀರದಿದ್ದರೆ ಸಕಾಲದಲ್ಲಿ ಹೆರಿಗೆಯಾಗುವುದಿಲ್ಲ, ಕೆಲವೊಮ್ಮೆ ಎದೆ ಹಾಲು ಬೀಳುವುದಿಲ್ಲ ಎಂಬ ನಂಬಿಕೆಗಳಿವೆ.

ಗ್ರಹಣದ ಕಿರಣಗಳು ಗರ್ಭಿಣಿಯ ಮೈಮೇಲೆ ಬಿದ್ದರೆ ಹುಟ್ಟುವ ಮಗು ಅಂಗವಿಕಲವಾಗುತ್ತದೆಂದು ನಂಬಿರುವ ಅವರು ಗರ್ಭಿಣಿಯರನ್ನು ಗ್ರಹಣದ ದಿನ ಹೊರಗೆ ಕಳುಹಿಸದಂತೆ ಎಚ್ಚರವಹಿಸುತ್ತಾರೆ.

ಹೆರಿಗೆ ದಿನಗಳು ಹತ್ತಿರವಾದಂತೆ ತಂದೆ ತಾಯಿಗಳಿಂದ ಆ ದೇವರಿಗೆ ಈ ದೇವರಿಗೆ ಹರಕೆ ಕಟ್ಟುವುದು ಪ್ರಾರಂಭವಾಗುತ್ತದೆ. ಸುಸೂತ್ರವಾಗಿ ಯಾವುದೇ ಆತಂಕ ಹಾನಿಗಳಿಲ್ಲದೆ ಹೆರಿಗೆಯಾಗಲೆಂಬುದೆ ಅವರೆಲ್ಲರ ಆಶಯವಾಗಿರುತ್ತದೆ.

ಹೆರಿಗೆಯ ಸೂತಕ ತವರಿನವರಿಗೂ, ಗಂಡನ ಮನೆಯವರಿಗೂ ಅನ್ವಯವಾಗುತ್ತದೆ. ಆ ದಿನಗಳಲ್ಲಿ ದೇವರ ಪೂಜೆ ಮೊದಲಾದ ಮಂಗಳ

ಹೆಣ್ಣು ನಮ್ಮ ಮನೆಯಲ್ಲಿದೆ' ಎಂದು ಮುಖ್ಯವಾಗಿ ಸಾಂಪ್ರದಾಯಿಕ ಚೌಕಟ್ಟಿನಲ್ಲಿ ಪ್ರಚಾರಗೊಳಿಸುವುದು ಅದರ ಉದ್ದೇಶವೂ ಆಗಿರುತ್ತದೆ.

ಹೆಣ್ಣು ಋತುಮತಿಯಾದ ದಿನದಿಂದ ಒಂಭತ್ತು ದಿನಗಳ ಕಾಲ ಮನೆಯಿಂದ ಹೊರಗಿರಿಸಲಾಗುತ್ತದೆ. ಆ ಅವಧಿಯಲ್ಲಿ ಅವಳು ಅಶುದ್ಧ, ಅಪವಿತ್ರವೆಂದು ಭಾವಿಸಲಾಗುತ್ತದೆ. ಆಕೆ ತನ್ನ ಸೋದರಮಾವಂದಿರು ಅಂಕಾಲೆ, ಹೊಂಗೆ, ಬೇವಿನ ಹಸುರೆಲೆಗಳಿಂದ ಶಾಸ್ತ್ರಕ್ಕಾಗಿ ಕಟ್ಟಿರುವ 'ಗುಡ್ಲಿ'ನಲ್ಲಿರುತ್ತಾಳೆ. ಇದನ್ನು 'ಗುಡ್ಲು ಹಾಕುವ ಶಾಸ್ತ್ರ' ಎನ್ನುತ್ತಾರೆ. ಹೀಗೆ ಮೂರು ದಿನಗಳು ಇರಬೇಕು. ೩ನೇ ದಿನ ರಾತ್ರಿ ಗುಡ್ಲಿಗೆ ಬಳಸಿರುವ ಎಲ್ಲ ವಸ್ತುಗಳನ್ನು ಸೋದರಮಾವ ಸುಟ್ಟು ಹಾಕುತ್ತಾನೆ.

೯ನೇ ದಿನ ಒಸಗೆ ಹಾಕಿ ಒಳಗೆ ಕರೆದು ತರುತ್ತಾರೆ.

ಸಾಮಾನ್ಯವಾಗಿ ಒಂದು ತಿಂಗಳವರೆಗೆ ಸಂಬಂಧಿಕರು ಒಸಗೆ ಹಾಕುತ್ತಾರೆ. ಇದು ವಿವಾಹ ಪೂರ್ವದಲ್ಲಿ ಋತುಮತಿಯಾದ ಹೆಣ್ಣುಗಳಿಗೆ ಮಾಡುವ ಉಪಚಾರ.

ವಿವಾಹವಾದ ನಂತರ ಹೆಣ್ಣು ಋತುಮತಿಯಾದರೆ ಸಾಂಪ್ರದಾಯಿಕ ಆಚರಣೆಗಾಗುವ ಖರ್ಚು, ವೆಚ್ಚವನ್ನೆಲ್ಲ ಗಂಡನ ಮನೆಯವರೆ ವಹಿಸುತ್ತಾರೆ.

ಋತುಮತಿಯಾದ ಹೆಣ್ಣು ಮಗಳು ಅನಂತರದಲ್ಲಿ ತಿಂಗಳಿಗೊಮ್ಮೆ ಮುಟ್ಟಾದಾಗ ೩ ಅಥವಾ ೪ ದಿನಗಳ ಕಾಲ ಪ್ರತ್ಯೇಕವಾಗಿ ಮನೆಯ ಹೊರಭಾಗದ ಕೊಠಡಿ ಅಥವಾ ಅದಕ್ಕೆಂದೆ ನಿಗದಿಗೊಳಿಸಿರುವ ಜಾಗದಲ್ಲಿ ಮಲಗುತ್ತಾಳೆ.

ವಿವಾಹ

ಕುಂಬಾರರಲ್ಲಿ ಹಳೆಯ ಸಂಬಂಧದಲ್ಲಿ ಹೆಣ್ಣನ್ನು ತರುವುದು ರೂಢಿಯಲ್ಲಿತ್ತು. ಕಾಲ ಧರ್ಮ ಬದಲಾದಂತೆ ಹೆಣ್ಣನ್ನು ತರಲು ಪರ ಊರುಗಳಿಗೆ ಹೋಗುವುದು ಅನಿವಾರ್ಯವಾಯಿತು. ಹೊಸ ಸಂಬಂಧಗಳ ಹೆಣ್ಣನ್ನು ನೋಡಲು ನೇರವಾಗಿ ಹೋಗುತ್ತಿರಲಿಲ್ಲ. ಹೆಣ್ಣಿನ ಬಣ್ಣ, ಎತ್ತರ, ದಪ್ಪ ಮೊದಲಾದುವುಗಳನ್ನು ತಿಳಿದುಕೊಂಡು ಗಂಡು-ಹೆಣ್ಣಿನ ಈಡು-ಜೋಡನ್ನು ನಿರ್ಧರಿಸಿ, ಹೆಣ್ಣಿನ ಗುಣ

ಸ್ವಭಾವಗಳನ್ನು ಅವರಿವರಿಂದ ತಿಳಿದುಕೊಂಡು ನಂತರ ಮಧ್ಯವರ್ತಿಯ ನೆರವಿನೊಂದಿಗೆ ಹೆಣ್ಣು ನೋಡಲು ಬರುವ ವಿಷಯವನ್ನು ತಿಳಿಸುತ್ತಾರೆ.

ಒಂದು ಶುಭದಿನದಲ್ಲಿ ಹೆಣ್ಣನ್ನು ನೋಡಲು ಕುಟುಂಬದ ಹಿರಿಯರು ಹೆಣ್ಣಿನ ಮನೆಗೆ ಹೊರಡುತ್ತಾರೆ. ದಾರಿಯಲ್ಲಿ ಶಕುನಗಳನ್ನು ಕೂಡ ಗಮನಿಸುತ್ತಾರೆ. 'ದಾರಿಬಟ್ಟೆ' (ಶಕುನಗಳು) ಸರಿಬಂದರೆ ಪ್ರಯಾಣ ಮಾಡಿ ಹೆಣ್ಣಿನವರ ಸತ್ಕಾರ ಪಡೆಯುತ್ತಾರೆ. ಸತ್ಕಾರ ಮಾಡುವ ನೆಪದಲ್ಲಿ, ಸಿಂಗಾರ ಮಾಡಿಕೊಂಡಿರುವ ಹೆಣ್ಣು ಗಂಡಿನವರ ಮುಂದೆ ಆಗಾಗ ಬಂದು ಹೋಗುತ್ತಾಳೆ. ಆ ಸಂದರ್ಭದಲ್ಲಿ ಹೆಣ್ಣಿನ ಬಣ್ಣ, ಕೈ ಕಾಲು, ಕಣ್ಣು, ರೂಪ ಮೈಕಟ್ಟು ಮೊದಲಾದುವನ್ನು ಗಂಡಿನವರು ಗಮನಿಸುತ್ತಾರೆ. ಹಾಗೆಯೆ ಹೆಸರು, ವಯಸ್ಸು ಕುಲದ ಒಳ ಪಂಗಡಗಳನ್ನು ತಿಳಿದುಕೊಳ್ಳುತ್ತಾರೆ. ನಂತರ ಯಾವುದಕ್ಕೂ ಊರಿಗೆ ಹೋದ ನಂತರ ಹೇಳಿಕಳಿಸುವುದಾಗಿ ತಿಳಿಸುತ್ತಾರೆ.

'ಸಾಲಾವಳಿ' 'ಹೆಸರುಬಲ' ಕೂಡಿ ಬಂದರೆ ಕುಲದ ಕುಟುಂಬದ ಮುಖಂಡರ ಮನೆಗೆ ಅಂದರೆ 'ಕಟ್ಟೇ ಮನೆ'ಗೇ ಹೋಗಿ ಲಗ್ನ ಕಟ್ಟಿಸಿಕೊಂಡು ಬರುತ್ತಾರೆ. ಈಗ ಹೆಣ್ಣಿನ ಮನೆಯಲ್ಲೇ ಲಗ್ನ ಕಟ್ಟಿಸುತ್ತಿದ್ದಾರೆ.

'ತೆರ' ಪದ್ಧತಿ ಕುಂಬಾರರಲ್ಲಿದೆ. ವೀಳೆ ಶಾಸ್ತ್ರದಲ್ಲಿ ಕುಲಸ್ವಾಮಿಗಳು ಹೆಣ್ಣಿನವರನ್ನು 'ನಿಮ್ಮ ತೆರ ಬಂದೈತೊ' ಎನ್ನುತ್ತಾರೆ. ಆಗ ಬಂದಿದ್ದರೆ 'ಹೂಂ', ಇಲ್ಲವಾದರೆ 'ಇಲ್ಲ' ಎನ್ನುತ್ತಾರೆ. ತೆರ ಕೊಟ್ಟಿಲ್ಲದಿದ್ದರೆ ೧೮ ವರಹ ತೆರ ಕೊಡಲೇಬೇಕು. ಈಗಲೂ ಅದು ರೂಢಿಯಲ್ಲಿದೆ.

ಅರಿಷಿಣ ಕುಟ್ಟುವ ಶಾಸ್ತ್ರ, ಭತ್ತ ಮಾಡುವ ಶಾಸ್ತ್ರ, ಅಕ್ಕಿ ಮಾಡುವ ಶಾಸ್ತ್ರಗಳು ವಿವಾಹಕ್ಕೆ ಪೂರ್ವಭಾವಿಯಾಗಿ ನಡೆಯುತ್ತವೆ.

ವಿವಾಹಕ್ಕೆ ಸಂಬಂಧಿಸಿದ ಶಾಸ್ತ್ರದಲ್ಲಿ ಹೊಸ ನೆಂಟಸ್ತಿಕೆಯನ್ನು ಮಾಡಿದಾಗ ಕುಲದ ಮುಖಂಡರ ಒಪ್ಪಿಗೆ ಪಡೆಯಲೇ ಬೇಕು "ನೀವು (ಕುಲದ ಹಿರಿಯರು) ಒಪ್ಪಿಗೆ ಕೊಟ್ಟರೆ ನೀವು ಕೇಳುವಷ್ಟು ವರಹ ಕೊಟ್ಟು ನಿಮ್ಮೊಂದಿಗೆ ಸೇರಿ ಕೊಳ್ಳುತ್ತೇವೆಂದು ತಿಳಿಸುತ್ತಾರೆ. ಹೆಣ್ಣಿನ ಕಡೆಯವರು ಕುಲದ ಯಜಮಾನರಿಗೆ, ಕಟ್ಟೆ ಮನೆಯವರಿಗೆ ಸ್ವಲ್ಪ ಹಣ ಶಾಸ್ತ್ರೋಕವಾಗಿ ನೀಡುತ್ತಾರೆ. ಅದನ್ನು ಅವರು ಹಂಚಿಕೊಳ್ಳುತ್ತಾರೆ.

ಗವಾಕ್ಷಿ

ದೀಪ (ಹಣತೆ)

ಗೊಲಕ

ಬಪ್ಪಿ (ಮಣ್ಣಿನ ಬಟ್ಟಲು)

ಕರಾಮಗಿ

ಮಣ್ಣು ತರುವ ವಿಧಾನ

ಕುಂಬಾರಿಕೆಗೆ ಮುಖ್ಯವಾಗಿ ಬೇಕಾದುದು ಜೇಡಿಮಣ್ಣು ಅದನ್ನು ತರುವ ಸಲುವಾಗಿ ಕುಂಬಾರರು ಕೆರೆಗೆ ಹೋಗುತ್ತಾರೆ. ಅಲ್ಲಿ ಅವರು ತಮ್ಮ ಅನುಭವದಿಂದ ಸರಿಯಾದ ಸ್ಥಳವನ್ನು ಹುಡುಕಿ ಸೋಸುತ್ತಾರೆ. **[ಕೆರೆಗೆ ಹೊಸದಾಗಿ ನೀರು ಹರಿದು ಬರುವಾಗಲೆಲ್ಲ ಅದರೊಂದಿಗೆ ಕೂಡಿ ಬರುವ ಹೊಸ ಮಣ್ಣಿನೊಂದಿಗೆ ಕಸ, ಕಡ್ಡಿ, ಕಲ್ಲು ಚೂರುಗಳು ಬೆರೆತಿರುತ್ತವೆ. ಹೊಸದಾಗಿ ಬರುವ ಕಲುಷಿತವಾದ ಮಣ್ಣಿನ ಪದರಗಳು ಒಂದರ ಮೇಲೊಂದು ಸೇರುತ್ತ ಬೆಳೆಯುತ್ತಾ ಹೋಗುತ್ತವೆ. ಹೀಗೆ ಹಲವಾರು ಪದರಗಳು ಹಾಗೂ ಮೇಲುಭಾಗದ ಮಣ್ಣಿನಲ್ಲಿ ಹುಲ್ಲಿನ ಬೀಜ, ಗರಿಕೆ ಬೇರು, ಕುರಿ ಪಿಚ್ಚಗೆ (ಹಿಕ್ಕೆ), ದನಕರುಗಳ ಸಗಣಿ, ಇತರೆ ಪ್ರಾಣಿಗಳ ಮಲಮೂತ್ರ, ದಪ್ಪ ಮರಳಿನ ಕಣಗಳು, ಪಕ್ಷಿಗಳ ಹಿಕ್ಕೆ, ರಾಗಿಕಾಳು, ಭತ್ತ ಅಲ್ಲದೆ ಕಪ್ಪೆ, ಏಡಿ, ಮೀನು ಮೊದಲಾದ ಜಲಚರಗಳ ಅಸ್ತಿಪಂಜರಗಳಿರುವುದರಿಂದ, ಸುಮಾರು ೨ ಅಥವಾ ೩ ಅಡಿ ಆಳದವರೆಗಿನ ಮಣ್ಣಿನ ಪದರಗಳನ್ನು ತೆಗೆದು ಹಾಕಿದ ನಂತರ ಕುಂಬಾರಿಕೆಯ ಉಪಯೋಗಕ್ಕೆ ಬರುವ ಜೇಡಿ ಮಣ್ಣು ದೊರೆಯುತ್ತದೆ. ಈ ವಿಧಾನವನ್ನು ಕುಂಬಾರರು ಸೋಸೋದು ಎನ್ನುತ್ತಾರೆ.]** ಹೀಗೆ ಒಂದೆರಡು ಜಾಗದಲ್ಲಿ ಸೋಸುವುದರಿಂದ ಕೆಂಪು ಗೋಡಾಗಲಿ, ನುಣ್ಣೆ ಮಣ್ಣು (ನುಣುಪಾದ ಮಣ್ಣು) ಇಲ್ಲರೇ ಕರೇಗೋಡು (ಕಪ್ಪು ಮಣ್ಣು) ದೊರಕುತ್ತದೆ. ಅವರು ಅದನ್ನು ಅಗೆದು ಕುಂಬಾರ ಸಾಲೆಗೆ (ಮಡಕೆ ಮಾಡುವ ಜಾಗ) ಅಥವಾ ಮನೆಗೆ ಸಾಗಿಸುತ್ತಾರೆ.

ಮಣ್ಣು ಹದಗೊಳಿಸುವುದು

ಕೆರೆಯಿಂದ ತಂದ 'ಕನ್ನೆಗಡ್ಡೆ'ಯನ್ನು [**ಕೆರೆಯಲ್ಲಿ ಅಲೆಬೀಸಿದಾಗಲೆಲ್ಲ ಒಳ ಸೇರುವ ಮಣ್ಣನ್ನು ನೀರು ಜಾಲಿಸುತ್ತದೆ. ಅಂಥ ಮಣ್ಣು ಮೂರ್‍ನಾಲ್ಕು ಅಡಿ ಆಳಕ್ಕೆ ಸೇರಿರುತ್ತದೆ. ಅದೇ ಕುಡಿಕೆ ಮಡಿಕೆ ತಯಾರಿಕೆಗೆ ಬರುವಂಥದ್ದು. ಅದನ್ನು "ಕನ್ನೆಗಡ್ಡೆ" ಎನ್ನುತ್ತಾರೆ.**] ಮನೆಯ ಮುಂಭಾಗದಲ್ಲಾಗಲಿ ಅಥವಾ ಕುಂಬಾರ ಸಾಲೆಯಲ್ಲಾಗಲಿ ಒಟ್ಟಬೇಕು. ಆ ಮಣ್ಣು ಹಲವಾರು ದಿನ ಆಳದಲ್ಲಿದ್ದುದರಿಂದ, ಗಾಳಿಯ ಸಂಪರ್ಕವಿರುವುದಿಲ್ಲ. ತಳ ಪದರದಿಂದ ಹೊರ ತಂದ ಮಣ್ಣನ್ನು ಒಂದೆರಡು ದಿನ ಗಾಳಿಯ ಸಂಪರ್ಕದಲ್ಲಿರಿಸಿದರೆ ಬನಿ, ಬಿಗಿ ಬರುತ್ತದೆ. ತರುವಾಯ ಆ ಮಣ್ಣನ್ನು ಉಂಡುಂಡೆಯಾಗಿ ಕುಟ್ಟಿ ಒಂದೆಡೆ ಹಾಕಬೇಕು. ಹಾಗೆ ಹಾಕುವ ಮಣ್ಣಿಗೆ ಹಿಂಬದಿಯಲ್ಲಿ ಬಂಡೆ, ಗೋಡೆಯ ಆಶ್ರಯವಿರಬೇಕು, ಇಲ್ಲದಿದ್ದಲ್ಲಿ ಮಣ್ಣು ಹರಡಿ ಕೊಳ್ಳುತ್ತದೆ. ಅಂಥ ಆಶ್ರಯದ ಸೌಲಭ್ಯವಿಲ್ಲದಿದ್ದಾಗ ಚಿಕ್ಕ ಹೊಂಡ ತೆಗೆದು ಅದರಲ್ಲಿ ಆ ಮಣ್ಣನ್ನೆಲ್ಲ ಸುರಿದು, ಹದಕ್ಕೆ ಬೇಕಾಗುವಷ್ಟು ನೀರನ್ನು ಬೆರೆಸಬೇಕು. ಮಣ್ಣು ಒಂದು ರಾತ್ರಿ ಚೆನ್ನಾಗಿ ನೆನೆದ ನಂತರ ಬೆಳಗ್ಗೆ ಅದನ್ನು ಕೈಯಿಂದ ಮಿದ್ದು ಮಿದ್ದು ಉಂಡುಂಡೆ ಮಾಡಿಕೊಳ್ಳಬೇಕು. ಅತಿ ಸಣ್ಣ ಮರಳನ್ನು ಜರಡಿ ಹಿಡಿದು, ಮಣ್ಣಿನ ಉಂಡೆಗಳೊಂದಿಗೆ ಮಿಶ್ರಣ ಮಾಡಿ ಚೆನ್ನಾಗಿ ಹದಪಾಕ ಬರುವಂತೆ ತುಳಿಯಬೇಕು.

ಮಳೆಗಾಲದಲ್ಲಿ ಮಣ್ಣಿಗೆ ಸೆಕೆ ಇರುತ್ತದೆ. (ತೇವಾಂಶ ಹೆಚ್ಚಿರುತ್ತದೆ). ಆದ್ದರಿಂದ ಜರಡಿ ಹಿಡಿದ ಶುದ್ಧವಾದ ಬೂದಿಯನ್ನು ಬೆರೆಸಿ ಮಿದ್ದು ಕೆಲಸಕ್ಕೆ ಅಣಿ ಮಾಡಿಕೊಳ್ಳುತ್ತಾರೆ. ಅದು ನೀರಿನ ಅಂಶವನ್ನು ಹೀರುತ್ತದೆಂದು ಕುಂಬಾರರು ಹೇಳುತ್ತಾರೆ.

ತಯಾರಿಕಾ ಉಪಕರಣಗಳ ಸಿದ್ಧತೆ

ಗುಬ್ಬಗಲ್ಲನ್ನು (ಗುಂಡು ಕಲ್ಲು ಗಾತ್ರದ ಕಲ್ಲಿಗೆ ಮಧ್ಯ ಭಾಗದಲ್ಲಿ ¼ ಅಥವಾ ½ ಇಂಚು ಗುಳಿ ಮಾಡಿರುತ್ತಾರೆ) ತಿಗರಿಯ ತಿರುಗಣೆ ಕೀಲನ್ನು ಅದರಲ್ಲಿರಿಸಿದಾಗ ಸರಾಗವಾಗಿ ತಿರುಗುವಂತೆ ಆ ಗುಳಿಗೆ ಹರಳೆಣ್ಣೆ ಅಥವಾ ಹೊಂಗೆ ಎಣ್ಣೆಯನ್ನು ಬಳಸುತ್ತಾರೆ (ಗುಬ್ಬಕಲ್ಲು ಚಿಕ್ಕದಾಗಿರುವುದರಿಂದ, ಜೇಡಿಮಣ್ಣಿಗೆ ತೆಂಗಿನ ನಾರು ಅಥವಾ ಕತ್ತೆ ಲದ್ದಿಯನ್ನು ಬೆರೆಸಿ ಚೆನ್ನಾಗಿ ಗಟ್ಟಿಗೊಳಿಸಿ

ತಿಗರಿ ಸುತ್ತುತ್ತಲೇ ಇರುವಂತೆ ತಿಗರಿಗೋಲಿನಿಂದ ಆಗಾಗ ಚಕ್ರವನ್ನು ತಿರುಗಿಸುತ್ತಿರಬೇಕು.

ಮಳೆ, ಗಾಳಿಯ ಕಾಲದಲ್ಲಿ ಮೂರು ಗಂಟೆಗಳ ಕಾಲ, ಬಿಸಿಲು (ಬೇಸುಗೆ) ಕಾಲದಲ್ಲಿ ಒಂದು ಗಂಟೆಕಾಲ ಅವನ್ನು ಒಣಗಿಸಬೇಕು.

ಗಟ್ಟಣೆಯ (ತಟ್ಟುವಾಗಿನ) ಕ್ರಮ

ಬಹಳ ಹಿಂದೆ ಜಿಂಕೆ ಚರ್ಮ ಹಾಸಿಕೊಂಡು, ಅದರ ಮೇಲೆ ಕುಳಿತುಕೊಂಡು ಮುಂದೆ ತಲೆದಿಂಬಿರಿಸಿಕೊಂಡು ಮಡಕೆಗಳನ್ನು ತಟ್ಟುತ್ತಿದ್ದರು. ಕಾಲಧರ್ಮಕ್ಕೆ ತಕ್ಕಂತೆ ಈಗ ಕೆಳಕ್ಕೆ ಗೋಣಿ ಚೀಲ ಹಾಸಿಕೊಂಡು, ಗೋಣಿ ಚೀಲದಿಂದ ಮಾಡಿದ ತಲೆದಿಂಬಿಟ್ಟುಕೊಂಡು, ಬಲಗಾಲಿನ ಪಾದವನ್ನು ಮುಂದಿಟ್ಟುಕೊಂಡು, ಎಡಗಾಲಿನ ಪಾದವನ್ನು ಹಿಂದಿರಿಸಿಕೊಂಡು, ಎಡಗಾಲಿನ ಮೊಣಕಾಲಿನ ಮೇಲೆ ಮಡಕೆ ಕಂಠವನ್ನು ತಿರುಗಿಸಿಕೊಂಡು ಮಡಕೆಯ ತಳಭಾಗವನ್ನು ಮೇಲು ಮುಖ ಅಂದರೆ ಅರ್ಧ ಭಾಗಕ್ಕೆ ಓರೆ ಮಾಡಿಕೊಂಡು ತಳವನ್ನು ಎಡಗೈಯಿಂದ 'ಗುಂಡಪ್ಪ' (ಲಿಂಗದಾಕಾರದ ಕಲ್ಲು) ನನ್ನು ಒಳಗಿರಿಸಿಕೊಂಡು ಅದೇ ಜಾಗದಲ್ಲಿ ಹೊರಭಾಗದಲ್ಲಿ 'ಸೊಳ' [ಜಾಲಿ ಅಥವಾ ತುಗ್ಗಲಿ ಮರದಿಂದ ಮಾಡಿದ ಬಡಿಗೆ. ಹಿಂದೆ ಇದನ್ನು ಗಂಧದ ಕಡ್ಡಿಯಿಂದ ಮಾಡುತ್ತಿದ್ದರಂತೆ] ಯಿಂದ ಗಟ್ಟಿಸಬೇಕು. ಮಡಕೆಯುನ್ನು ತಟ್ಟುವಾಗ 'ಮುಚ್ಚುಪರೆ'ಯಾದರೆ (ಮಣ್ಣಿನೊಳಗೆ ಗಾಳಿ ಸೇರಿದ್ದರೆ) ಸುಡುವಾಗ ಆ ಭಾಗದಲ್ಲೆ ಸಿಡಿಯುತ್ತದೆ. ಆದ್ದರಿಂದ ಒಳಗೆ ಸೇರಿರುವ ಆ ಗಾಳಿಯನ್ನು ತಟ್ಟುವಾಗಲೇ ಹೊರ ಹೊರಡಿಸಬೇಕು.

ಗಟ್ಟಿಸುತ್ತಿರುವಾಗ ಸೊಳವನ್ನು ಆಗಾಗ ತೇವವಿರುವ ಬಟ್ಟೆಯ ಮೇಲೆ ಒತ್ತುತ್ತಿರಬೇಕು. ಹೀಗೆ ಮಾಡುವುದರಿಂದ ಮಡಕೆ ಬೀಲು (ಬಿರುಕು) ಬರುವುದಿಲ್ಲ. ತಳ ಭಾಗವನ್ನು ಮುಚ್ಚಿದ ನಂತರ ಯಾವ ಮಡಕೆಗೆ ಯಾವು ಆಕೃತಿಯೆಂಬುದನ್ನು ನಿರ್ಣಯಿಸಿ ಒಂದು ವರಸೆ ಗಟ್ಟಿಸಿದ ನಂತರ ಎರಡನೇ ಸಲ ತಟ್ಟುವಾಗ ನಯಸ್ಸಾದ ಸೊಳದಿಂದ ತಟ್ಟುತ್ತಾ ಅದಕ್ಕೆ ನುಣುಪು ನಯಗಾರಿಕೆ ತರಬೇಕು. ಹರವಿಯಾದರೆ ಒಂದು ಕಡಿಯನ್ನು ಇಟ್ಟುಕೊಂಡು. **(ಹಳೆಯ ಮಡಕೆಯ ಅರ್ಧಭಾಗ, ಅಂದರೆ ಕಂಠದ ಭಾಗ)** ಕಂಠದ ಭಾಗವನ್ನು

ತಲೆ ಕೆಳಗಾಗಿರಿಸಿಕೊಂಡು ಅದರಲ್ಲಿಡುತ್ತಾರೆ. ಹರವಿಯು ೨೦ ನಿಮಿಷಗಳ ಕಾಲ ಆರಿದ ನಂತರ ಅಲ್ಲಿಂದ ತೆಗೆದು ನೆಲದ ಮೇಲೆ ಬಾರಲು ಹಾಕಿಡುತ್ತಾರೆ. ಮೇಲು ಭಾಗದ ಕಂಠದ ಬಾಯಿಯನ್ನು ಕೆಳ ಮುಖವಾಗಿಸಿ ಇಡುತ್ತಾರೆ. ಸ್ವಲ್ಪ ಆರಿದ ಹರವಿ, ಮಡಕೆಯ ಒಳಭಾಗಕ್ಕೆ ನುಣುಪಾದ ಬೂದಿಯನ್ನು ಹಾಕಿ ಒಂದು ಅಥವಾ ಎರಡು ಸುತ್ತು ನಿಧಾನವಾಗಿ ತಿರುಗಿಸಿ ಅದನ್ನು ಕಾಲಮೇಲಿಟ್ಟುಕೊಂಡು ಎಡಗೈನಿಂದ ಗುಂಡಪ್ಪ, ಬಲಗೈನಿಂದ ಸೊಳ ಹಿಡಿದುಕೊಂಡು ಮತ್ತೆ ತಟ್ಟಿ ನಯಸ್ಸು ಮಾಡುತ್ತಾರೆ. ಅದನ್ನು ಹೊಳಪಿಕ್ಕುವುದು ಎನ್ನುತ್ತಾರೆ.

ಹಿಂದೆ ಬೂರಗದ ಕಾಯಿಯಿಂದ ಉಜ್ಜಿ ನಯಸ್ಸು, ಹೊಳಪು ಮಾಡುತ್ತಿದ್ದರಂತೆ, ಪ್ಲಾಸ್ಟಿಕ್ ಬಂದ ನಂತರ ಅದರಿಂದ ಉಜ್ಜಿ, ನಯಸ್ಸು, ಹೊಳಪು ತರುತ್ತಿದ್ದಾರೆ.

ಕುಸುರಿ ಕೆಲಸ (ಚಿತ್ತಾರ ಬಿಡಿಸುವುದು)

ಮಡಕೆಯನ್ನು ಗಟ್ಟಣೆ ಮಾಡುವ ಸಂದರ್ಭದಲ್ಲಿಯೆ ಸಿಡಿದಬ್ಬಿನಿಂದ ಚಿತ್ತಾರ ಬಿಡಿಸುತ್ತಾರೆ. **[ಕಬ್ಬಿಣದ ರೇಕಿನ (ತೆಳುವಾದ ಹಾಳೆ) ಮೇಲೆ ಒಂದು - ಎರಡು - ಮೂರು ರಂಧ್ರ ಮಾಡಿಕೊಂಡು ತಗಡಿನಿಂದ ನಿಧಾನವಾಗಿ ಬಡಿಯುತ್ತಾ ಕೈ ಚಳಕದಿಂದ ಬಗೆ ಬಗೆಯ ಚಿತ್ತಾರ ಮೂಡಿಸುತ್ತಾರೆ.]**

ಕೆಲವರು ಸಿಡಿದಬ್ಬೆಯನ್ನು ಎತ್ತಿನ ಕೊಂಬಿನಲ್ಲೂ ಮಾಡಿಸುತ್ತಾರೆ. ಅಂದರೆ ಎತ್ತಿನ ಕೊಂಬಿನ ಮೇಲೆ ಬೇರೆಯವರಿಂದ ಕೊರೆಸಿ ಭೆಂಡೆಕಾಯಿ ಅಚ್ಚು, ಕುಂಬಳಕಾಯಿ ಅಚ್ಚು, ಕಳಾವರದ ಅಚ್ಚು ಮೊದಲಾದುವನ್ನು ಸಿದ್ಧಪಡಿಸಿ ಕೊಂಡಿರುತ್ತಾರೆ. ಇದರಿಂದಲೂ ಹಸಿ ಮಡಿಕೆಯ ಮೇಲೆ ನಿಧಾನವಾಗಿ ಒತ್ತಿ ಇಲ್ಲವೇ ಬಡಿದು ಚಿತ್ತಾರ ಬಿಡಿಸಬಹುದು.

ಗಟ್ಟಣೆ ಮಾಡುವ ಸೊಳದ ಒಂದು ತುದಿ ಭಾಗದಿಂದಲೂ ಗಟ್ಟಿಸುತ್ತಾ ಚಮತ್ಕಾರದಿಂದ ಚಿತ್ತಾರ ಮೂಡಿಸಬಹುದು. ಇದು ಕುಂಬಾರರ ಅನುಭವ ಮತ್ತು ಕಲಾಕುಶಲತೆಯನ್ನವಲಂಬಿಸಿರುತ್ತದೆ.

ಹೀಗೆ ತಯಾರು ಮಾಡಿದ ಮಣ್ಣಿನ ವಸ್ತುಗಳನ್ನು ಒಂದೆರಡು ದಿನ ಒಣಗಿಸಿದ ನಂತರ ಆವಿಗೆಯಲ್ಲಿ ಜೋಡಿಸಬೇಕು.

ಆವಿಗೆ

"..... ಕುಂಬಾರ ಆವಿಗೆಯ ರಚನೆ ಬಹಳ ಪೇಚಿನದೆಂದು ಕುಂಬಾರರ ಹೇಳಿಕೆ. ತಿಗರಿಯಿಂದ ಸಿದ್ಧವಾದ ಪಾತ್ರೆಗಳನ್ನು ಬೂದಿಯ ಹಾಸಿಗೆ ಮೇಲಿಟ್ಟು ಬಿಸಿಲಲ್ಲಿ ಅದರ ಮೇಲ್ಮೈ ತೇವ ಆರುವಷ್ಟು ಮಟ್ಟಿಗೆ ಒಣಗಿಸಿ ಆ ಬಳಿಕ ಆವಿಗೆಯ ಒಳಬದಿ ಅಲ್ಲಲ್ಲಿ ಒಣಗಿದ ಹುಲ್ಲು ಸೀಳಿದ ಚೆಕ್ಕೆಗಳನ್ನು ಪಾತ್ರೆಗೆ ತಾಕದಂತೆ ಪಾತ್ರೆಗಳ ಗೂಡುಗಳನ್ನು ಸಾಲು ಸಾಲಾಗಿ ಜೋಡಿಸಲಾಗುತ್ತದೆ. ಹೀಗೆ ಜೋಡಿಸುವಾಗ ತಳದಿಂದ ಮೇಲ್ಭಾಗವರೆಗೂ ಕಂಡಿ ಬಿಟ್ಟಿರಲಾಗುತ್ತದೆ. ತಳಭಾಗದಲ್ಲಿ ಉರಿ ಮಾಡಿದಾಗ ಪಾತ್ರೆಗಳಿಗೆ ವ್ಯಾಪಕ ಮತ್ತು ಸಮಾನ ಮಂದೋಷ್ಣ ಪೂರೈಕೆಯಾಗಿ ಪಾತ್ರೆಗಳಲ್ಲಿರುವ ತೇವಾಂಶ ನಿವಾರಣೆಗೊಂಡು ಸುಟ್ಟ ಮಡಕೆ ಗಡಸು, ನಿಶ್ಚಿತ ಗಾತ್ರ, ಗಟ್ಟಿ ಆಕಾರಗಳನ್ನು ಹೊಂದಿ ಸಿದ್ಧವಾಗುತ್ತದೆ." [ಡಾ॥ ದೇವೇಂದ್ರ ಕುಮಾರ ಎಸ್. ಹಕಾರಿ - ಜನಪದ ಸಾಹಿತ್ಯದರ್ಶನ - ಏಳನೇ ಸಂಪುಟ ಪುಟ - ೨೦೬]

ವೃತ್ತಿಯಲ್ಲಿ ವಹಿಸಬೇಕಾದ ಎಚ್ಚರಿಕೆ

ಜೇಡಿಮಣ್ಣನ್ನು ಹದಮಾಡುವಾಗ ಸಗಣಿ ಕುರಿ ಪಿಚ್ಚಗೆ (ಹಿಕ್ಕೆ), ಹುಲ್ಲಿನ ಕಾಳು, ಗರಿಕೆ ಬೇರು, ರಾಗಿ ಕಾಳು, ಭತ್ತದ ಕಾಳು, ದಪ್ಪ ಮರಳಿನ ಕಣ ಇದ್ದಲ್ಲಿ ತೆಗೆದು ಹಾಕಬೇಕು. ಆ ಹಂತದಲ್ಲಿ ಎಚ್ಚರ ವಹಿಸದಿದ್ದರೆ, ಸುಡುವಾಗ ರಾಗಿ ಕಾಳು, ಭತ್ತದ ಕಾಳು, ದಪ್ಪ ಮರಳಿನ ಕಣಗಳು ಸಿಡಿದು ಮಡಕೆಗೆ ಹಾನಿಯುಂಟು ಮಾಡುತ್ತದೆ. ಅಲ್ಲದೆ ಸಗಣಿ, ಕುರಿ ಹಿಕ್ಕೆಯ ಜಾಗದಲ್ಲಿ ಬೆಂದು ಬೂದಿಯಾಗಿ ಮಡಕೆ ತೂತು ಬೀಳುತ್ತದೆ.

ಎದುರಾಗುವ ಅಡ್ಡಿ ಆತಂಕಗಳು

ಪ್ರಕೃತಿಯಲ್ಲುಂಟಾಗುವ ಏರಿಳಿತಗಳು ಕುಂಬಾರಿಕೆಯ ಸಂದರ್ಭದಲ್ಲಿ ಅಡ್ಡಿ ಆತಂಕವನ್ನುಂಟು ಮಾಡುತ್ತವೆ. ಅವು ಹೀಗಿವೆ:

ಮಳೆಗಾಲದಲ್ಲಿ ಮಣ್ಣು ತರುವುದು, ಮಡಕೆಯನ್ನು ಒಣಗಿಸುವುದು ಎಲ್ಲಕ್ಕಿಂತ ಹೆಚ್ಚಾಗಿ ಆವಿಗೆಯನ್ನಿಡುವುದು ತುಂಬಾ ಕಷ್ಟವಾಗುತ್ತದೆ.

ಸರಿಯಾದ ಬಿಸಿಲು ಇಲ್ಲದಿದ್ದಲ್ಲಿ ಮಡಕೆಯು ಸರಿಯಾಗಿ ಒಣಗದ ಕಾರಣ ಸ್ವಲ್ಪ ಮಟ್ಟಿಗೆ ಹಾನಿಗೊಳಗಾಗುತ್ತದೆ.

ಗಾಳಿ ಹೆಚ್ಚಾಗಿ ಬೀಸುವುದರಿಂದ ಆವಿಗೆಯಲ್ಲಿನ ಶಾಖ ಸಮವಾಗಿ ತಟ್ಟದೆ 'ಅರೆಬೆಂದ' ಪಾಕವಾದರೆ ನಷ್ಟವಾಗುತ್ತದೆ. ಹೆಚ್ಚಾಗಿ ಅತ್ತಿತ್ತ ಗಾಳಿ ಬೀಸುವುದರಿಂದ ಸರಿಯಾದ ಶಾಖ ಉಂಟು ಮಾಡಲು ಹೆಚ್ಚಿನ ಪ್ರಮಾಣದ ಸೌದೆ, ಹುಲ್ಲು, ಗರಿ, ಪುಳ್ಳೆ ಬಳಸಬೇಕಾಗುತ್ತದೆ. ಇದರಿಂದ ಆರ್ಥಿಕ ಹೊರೆಯಾಗುತ್ತದೆ.

ಆವಿಗೆಯ ಮುಂಭಾಗ, ಉರಿ ಹಾಕಿದ ಭಾಗದಿಂದ ಗಾಳಿ ಬೀಸಿದರೆ ಸುಡಲು ಅನುಕೂಲವಾಗುತ್ತದೆ. ಆದರೆ ಆವಿಗೆಯ ಹಿಂಭಾಗದಿಂದ ಗಾಳಿ ಬೀಸಿದರೆ ಉರಿ ಸಮರ್ಪಕವಾಗಿ ಉರಿಯದೆ ಸುಡುವ ಕೆಲಸ ತಡವಾಗುತ್ತದೆ. ಕೆಲವೊಮ್ಮೆ ಇದರಿಂದ ಮಡಕೆ ಮೊದಲಾದವುಗಳಿಗೆ ಹಾನಿಯಾಗುವುದುಂಟು.

ಯಾರು ಯಾವ ಕೆಲಸ

ಮಣ್ಣನ್ನು ನೆನೆಸುವುದು, ಮಾಡಿದ ಪಾತ್ರೆಗಳನ್ನು ಒಣಗಿಡಲು ನೆರವಾಗುವುದು, ಮುಚ್ಚಳ, ದೀವಿಗೆ, ಹಣದ ಹುಂಡಿಗಳನ್ನು ಮಾಡುವುದು, ಅಂಚಿ ಕಡ್ಡಿ ಅಥವಾ ಉದ್ದವಾದ ಬೆಂಕಿ ಕಡ್ಡಿಯನ್ನು ಬಳಸಿ ಹಸಿ ಪಾತ್ರೆಗಳ ಮೇಲೆ ಚಿತ್ತಾರ ಬಿಡಿಸುವುದು ಮೊದಲಾದ ಕಾರ್ಯಗಳಲ್ಲಿ ಹೆಂಗಸರು ನೆರವಾಗುತ್ತಾರೆ.

ಮೈಯಿ, ಕೈಯಿ ಬಲಿಯದ ಮಕ್ಕಳಿಂದ ಈ ಕಸುಬನ್ನು ನಿರ್ವಹಿಸುವುದು ಕಷ್ಟವಾಗುತ್ತದೆ. ತಿಗರಿ ಗೋಲನ್ನು ಹಿಡಿದು ತಿಗರಿಯನ್ನು ತಿರುಗಿಸಿ ಸಮತೋಲನವಾಗಿ (ಬ್ಯಾಲೆನ್ಸ್ ಮಾಡಿಕೊಂಡು) ಮಣ್ಣನ್ನು ಆಕಾರಕ್ಕೆ ತರುವುದು ಸುಲಭ ಸಾಧ್ಯವಲ್ಲ, ಅನುಭವವಿರಬೇಕು. ಇಲ್ಲವಾದಲ್ಲಿ ಚಕ್ರ ತಿರುಗುವಾಗ ಕಾಲು ತಾಗಿ ಗಾಯ ಮೊದಲಾದವು ಉಂಟಾಗಬಹುದು. ಆದ್ದರಿಂದ ಮಕ್ಕಳನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬಿಡುವುದಿಲ್ಲ.

ಗಂಡು ಮಕ್ಕಳು ದಷ್ಟಪುಷ್ಟವಾಗಿ ಬೆಳೆದು ನಂತರ ಮಣ್ಣು ತರುವುದು, ಹದ ಮಾಡುವುದು, ಮಿಶ್ರಣ ಮಾಡುವುದು ಮೊದಲಾದ ಕಾರ್ಯಗಳಲ್ಲಿ ನೆರವು ಪಡೆಯುತ್ತ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವುದರೊಂದಿಗೆ ಹಂತ ಹಂತವಾಗಿ ತಿಗರಿಯನ್ನು ತಿರುಗಿಸುವ ವಿಧಾನವನ್ನು ಕೈ ಹಿಡಿದುಕೊಂಡು

ತೋರಿಸುತ್ತ, ಆಗಾಗ ಸ್ವತಂತ್ರವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಿ ಕೊಡುತ್ತ, ಪಾತ್ರೆಗೆ ಆಕಾರ ಕೊಡುವಾಗ ಕೈಗಳನ್ನು ಹೇಗೆ ಬಳಸಿಕೊಳ್ಳಬೇಕೆಂದು ತೋರಿಸುತ್ತ ಹಾಗೆ ಮಾಡಲು ಅವರನ್ನು ತೊಡಗಿಸುತ್ತಾರೆ. ತಳ ತಟ್ಟುವ (ತಳ ಮುಚ್ಚುವ) ಕಾರ್ಯ, ಹೊಳಪಿಡುವ ಮುಂತಾದ ಕೆಲಸಗಳಲ್ಲಿ ತೊಡಗಿಸಿ ಬಲಿತ ಮಕ್ಕಳಿಗೆ ತರಬೇತು ಗೊಳಿಸಲಾಗುತ್ತದೆ. ಹೀಗೆ ಅಭ್ಯಾಸ ಮಾಡುತ್ತ ಮಾಡುತ್ತ ಅವರು ಸ್ವತಂತ್ರವಾಗಿ ಕಾರ್ಯ ನಿರ್ವಹಿಸುವಷ್ಟು ಪರಿಣತಿಯನ್ನು ಪಡೆದುಕೊಳ್ಳುತ್ತಾರೆ.

ಹವಾಮಾನ ಜ್ಞಾನ

ಪ್ರಾಕೃತಿಕ ಶಕ್ತಿಗಳಾದ ಸೂರ್ಯ ಚಂದ್ರರಲ್ಲದೆ, ಪ್ರಕೃತಿ ವ್ಯಾಪಾರಗಳಾದ ಬೇರೆ ಬೇರೆ ಗಾಳಿ, ಮಳೆಗಳು ಸಹಜವಾಗಿಯೆ ಕುಂಬಾರರ ಮೇಲೆ ಪ್ರಭಾವ ಬೀರಿವೆ.

"ಮಾನವ ಜೀವನದ ಮೇಲೆ ಅದ್ಭುತ ಪ್ರಭಾವ ಬೀರುವ ಪ್ರಾಕೃತಿಕ ಶಕ್ತಿಗಳ ಪೈಕಿ ಮಳೆಯ ಸ್ಥಾನ ಬಹು ಮುಖ್ಯವಾದುದು. ಸಕಲ ಜೀವಿಗಳಿಗೂ ಜೀವನಾಧಾರವಾದ ಹಾಗೂ ಜೀವಪೋಷಕವಾದ ಮಳೆಯನ್ನು ಜಗತ್ತಿನ ಎಲ್ಲೆಡೆಯೂ ವರದಾಯಕ ಎಂದು ಭಾವಿಸಲಾಗಿದೆ. ಅದಕ್ಕೆ ದೈವತ್ವವನ್ನು ಆರೋಪಿಸಿ ಪೂಜಿಸಲಾಗುತ್ತದೆ" (ಡಾ. ಕೆ.ಆರ್. ಸಂಧ್ಯಾರೆಡ್ಡಿ - ಜನಪದ ಸಾಹಿತ್ಯ ದರ್ಶನ (ಸಂಪುಟ - ೧೨) "ಮೋಡ-ಮಳೆ" ಪುಟ - ೮೭)

ಬೇಸುಗೆಯ ಧಗೆಯಿಂದ ಬಸವಳಿದ ಭೂಮಿಗೆ ತಂಪೆರೆವ ಮೊದಲ ಮಳೆಯೆ 'ಅಶ್ವಿನಿ'. ಬಿದ್ದ ನೀರನ್ನೆಲ್ಲ ನೆಲ ಹೀರಿ ಬಿಡುತ್ತದೆ. ಇದರಿಂದ ಕೆರೆಯ ಅಂಗಳದಲ್ಲಿ ಬಿರುಕಾಗಿದ್ದ ಭೂಭಾಗ ಹದಗೊಂಡು ಕಸುಬಿಗೆ ಮಣ್ಣು ಸೋಸಿ ತರಲು ಅನುಕೂಲವಾಗುತ್ತದೆ.

ಇಂದಿಗೂ ಗ್ರಾಮಾಂತರ ಪ್ರದೇಶಗಳಲ್ಲಿ ಆಯಗಾರರಾಗಿ ಇಲ್ಲವೆ ಸ್ವಲ್ಪಮಟ್ಟಿಗೆ ವ್ಯವಸಾಯದ ಕಸುಬನ್ನೂ ಮಾಡುತ್ತಿರುವ ಕುಂಬಾರರು ಅಶ್ವಿನಿ ಮಳೆಯ ಬಗ್ಗೆ ಮಾಡುವ ಆಕ್ಷೇಪಣೆಯೆಂದರೆ, ಈ ಮಳೆಯಿಂದ ಮಣ್ಣಿನ ಮೇಲು ಪದರವು ಕೊಚ್ಚಿ ಹೋಗುವುದರಿಂದ, ಭೂಮಿಯ ಫಲವತ್ತತೆ ಕಡಿಮೆಯಾಗುತ್ತದೆ. ವ್ಯವಸಾಯದ ದೃಷ್ಟಿಯಿಂದ ಅನಾನುಕೂಲವೂ ಆಗುತ್ತದೆ.

ಭರಣಿ ಮಳೆಯಿಂದ ಸಮೃದ್ಧವಾದ ಬೆಳೆಯಾಗುತ್ತದೆ. 'ಭರಣಿ ಬಂದರೆ ಧರಣಿ'ಯೆಲ್ಲ ಬೆಳೆ.

ಆಶ್ಲೇಷ ಮಳೆಯಿಂದ ಮುಂದಕ್ಕೆ ಮಳೆಯ ಪ್ರಮಾಣ ಕಡಿಮೆಯಾಗುತ್ತಾ ಬರುತ್ತದೆ. ಈ ದೃಷ್ಟಿಯಿಂದ ಕುಂಬಾರಿಕೆಗೆ ಸ್ವಲ್ಪ ಮಟ್ಟಿಗೆ ಅನುಕೂಲವೇ ಆಗುತ್ತದೆ.

ಆದರೆ ಮಳೆ ಬರುತ್ತದೋ ಇಲ್ಲವೊ ಎಂಬುದನ್ನು ಪೂರ್ವಭಾವಿಯಾಗಿ ತಿಳಿದುಕೊಳ್ಳಲು ಸೂರ್ಯ, ಚಂದ್ರರ ಸುತ್ತ ಹತ್ತಿರ ಅಥವಾ ದೂರ ಗೂಡು ಕಟ್ಟುವುದನ್ನು ಗಮನಿಸುತ್ತಾರೆ. ನಡುಹಗಲು ಹೊತ್ತಿನಲ್ಲಿ ಸೂರ್ಯನ ಸುತ್ತ ರಾತ್ರಿಯಲ್ಲಿ ಚಂದ್ರನ ಸುತ್ತ ಗೂಡು ಗಟ್ಟಿದರೆ ಮಳೆ ಬರುತ್ತದೆ. ಚಂದ್ರನ ಹತ್ತಿರ ಗೂಡು ಗಟ್ಟಿದರೆ ಒಂದು ವಾರದೊಳಗೆ, ದೂರದಲ್ಲಿ ಗೂಡು ಗಟ್ಟಿದರೆ ಮೂರು ದಿವಸದೊಳಗೆ ಮಳೆ ಬರುತ್ತದೆ.

ಆಕಾಶದಲ್ಲಿ ಕೆಮ್ಮುಗಿಲು (ಕೆಂಪು ಮೋಡ) ಹರಡಿದ್ದರೆ ಮಳೆ ಬರುತ್ತದೆ. ಕುಂಬಾರ ಮೂಲೆಯಲ್ಲಿ (ನೈಋತ್ಯ) ಮಿಂಚಿದರೆ ಮಳೆ ಬರುತ್ತದೆ. ಪಶ್ಚಿಮದಲ್ಲಿ ಕಾಮನಬಿಲ್ಲು ಮೂಡಿದರೆ ಮಳೆ ಬರುತ್ತದೆ. ದೇವಮೂಲೆಯಲ್ಲಿ (ಈಶಾನ್ಯ) ಮಿಂಚಿದರೆ ಮಳೆ ಬರುತ್ತದೆನ್ನುತ್ತಾರೆ.

ಮೊಟ್ಟೆ ಇರುವೆ ಹೆಚ್ಚಾದರೆ, ಈಚಲ ಹುಳ ಭೂಮಿಯಿಂದೆದ್ದು ಆಗಲೆ ನೆಲಕಚ್ಚಿದರೆ, ಕಪ್ಪೆ ಎಡಬಿಡದೆ ವಟಗುಟ್ಟಿದರೆ ತಪ್ಪದೆ ಮಳೆ ಬರುತ್ತದೆ.

ಗಾಳಿಯಿಲ್ಲದೆ ಕ್ಷಣಕಾಲವೂ ಜೀವಿಗಳು ಉಳಿಯಲಾರವು. ಆದ್ದರಿಂದಲೇ 'ಗಾಳಿ' ಯನ್ನು ವಾಯುದೇವನೆಂದು ಕರೆಯುತ್ತಾರೆ.

ಆಷಾಢ ಗಾಳಿಯಲ್ಲಿ ಚಳಿ ಜಾಸ್ತಿಯಿರುತ್ತದೆ. ಅಲ್ಲದೆ ಈ ದಿನಗಳಲ್ಲಿ ಯಾವುದೇ ಮಂಗಳ ಕಾರ್ಯಗಳು ನಡೆಯುವುದಿಲ್ಲವಾದರಿಂದ; ಹಾಗೂ ಕೆಲವರು ಹೊಸ ಮಡಕೆ ಕುಡಿಕೆಗಳನ್ನು ಮನೆಗೆ ಕೊಂಡೊಯ್ಯುವುದಿಲ್ಲವಾದ್ದರಿಂದ, ಆಷಾಡ ಮಾಸದಲ್ಲಿ ಕುಂಬಾರಿಕೆಯನ್ನು ಅಷ್ಟಾಗಿ ಮಾಡುವುದಿಲ್ಲ.

"ಕುಂಬಾರ ಗಾಳಿ" ದಕ್ಷಿಣದಿಂದ ಉತ್ತರಕ್ಕೆ ಬೀಸುತ್ತದೆ. ಕುಂಬಾರನ ಆವಿಗೆ ಹೆಚ್ಚಾಗಿ ದಕ್ಷಿಣಾಭಿಮುಖವಾಗಿರುತ್ತದೆ. ಆದುದರಿಂದ ದಕ್ಷಿಣದ ಗಾಳಿ ಬೀಸಿದರೆ ಮಾತ್ರ ಆತನ ಒಲೆ ಉರಿಯಲು ಅನುಕೂಲವಾಗುತ್ತದೆ. ಕುಂಬಾರನಿಗೆ

ಹೆಚ್ಚು ಉಪಯುಕ್ತವಾದ ಈ ಗಾಳಿಯನ್ನು 'ಕುಂಬಾರ ಗಾಳಿ' ಎಂದು ಕರೆವ ವಾಡಿಕೆ. ಗಾಳಿಯಿಲ್ಲದೆ ಬೆಂಕಿ ಪುಟಗೊಳ್ಳಲಾರದೆಂಬುದು ಸಾಮಾನ್ಯ ನಂಬಿಕೆ. ಒಂದು ಸಲ ಕುಂಬಾರನ ಒಲೆ ಗಾಳಿ ಬೀಸದಿರುವುದರಿಂದ, ಹೊತ್ತಿ ಉರಿಯಲಿಲ್ಲವಂತೆ. ಉರಿಯಿಲ್ಲದೆ ಗಡಿಗೆ - ಮಡಿಕೆಗಳು ಸುಡುವುಧೆಂತು? ಆಗ ಕುಂಬಾರ ತನ್ನ ಒಲೆ ಉರಿಯಲು ದಕ್ಷಿಣ ದಿಕ್ಕಿನ ಗಾಳಿಯನ್ನು ಪ್ರಾರ್ಥಿಸಿದನಂತೆ. ಅವನ ಪ್ರಾರ್ಥನೆಗೆ ಗಾಳಿದೇವ ದಕ್ಷಿಣದಿಂದ ಬೀಸಿದನಂತೆ. ಹೀಗೆ ಕುಂಬಾರನಿಂದ, ಕುಂಬಾರನಿಗಾಗಿ ಹುಟ್ಟಿಕೊಂಡ ಗಾಳಿಯನ್ನು 'ಕುಂಬಾರ ಗಾಳಿ' ಯೆಂದು ಸಾಮಾನ್ಯವಾಗಿ ಕರೆಯುವ ರೂಢಿ. ಇನ್ನೊಂದು ನಂಬಿಕೆ ಹೀಗಿದೆ; ಕುಂಬಾರ ತನ್ನ ಗಡಿಗೆಗಳನ್ನು ಅರ್ಧಮರ್ಧ ಸುಟ್ಟಿದ್ದನಂತೆ. ಅಷ್ಟರಲ್ಲಿಯೇ ಗಾಳಿ ನಿಂತು ಒಲೆ ಉರಿಯಲಿಲ್ಲವಂತೆ. ಆಗ ಕುಂಬಾರ ದಕ್ಷಿಣಕ್ಕೆ ಮುಖ ಮಾಡಿ, ತನ್ನ ಮುಚ್ಚಳದಿಂದ ಗಾಳಿ ಬೀಸಿದನಂತೆ, ಒಲೆ ಉರಿದು ಗಡಿಗೆಗಳು ಪೂರ್ತಿ ಸುಟ್ಟುವಂತೆ. ಹೀಗೆ ಕುಂಬಾರ ತನಗೋಸ್ಕರ ತಾನೇ ತರಿಸಿದ ಅಥವಾ ಬರಿಸಿದ 'ಗಾಳಿ'ಯನ್ನು 'ಕುಂಬಾರ ಗಾಳಿ' ಎಂದು ಅನೇಕ ಕಡೆ ಕರೆಯುವ ವಾಡಿಕೆ. (ಡಾ।। ಸಿ.ಕೆ. ನಾವಲಗಿ - ಜಾನಪದ ಗಂಗೋತ್ರಿ - ಸಂಪುಟ - ೯, ಸಂಚಿಕೆ-೨ (ಜೂನ್ ೧೯೯೭) ಪುಟ - ೨೩ (ಗಾಳಿ ಒಂದು ಜಾನಪದೀಯ ಅಧ್ಯಯನ)

ದಕ್ಷಿಣದಿಂದ ಉತ್ತರಕ್ಕೆ ಬೀಸುವ 'ಹನುಮನ ಗಾಳಿ'ಯೂ ಕುಂಬಾರ ಗಾಳಿಯ ಗುಣಧರ್ಮಗಳನ್ನು ಹೊಂದಿದೆ.

ಗಾಳಿಯಲ್ಲಿ ತೇವಾಂಶ ಹೆಚ್ಚಾಗಿರುವ ದಿನಗಳಲ್ಲಿ ಕುಂಬಾರಿಕೆಗೆ ತುಸು ಕಷ್ಟವಾಗುತ್ತದೆ. ತಯಾರಿಸಿದ ಮಡಿಕೆ, ಕುಡಿಕೆಗಳು ಬೇಗನೆ ಆರುವುದಿಲ್ಲ, ನಿಧಾನವಾಗಿ ತೇವಾಂಶ ಕಡಿಮೆಯಾಗುವುದಕ್ಕೆ ಹೆಚ್ಚು ಕಾಲ ಬೇಕಾಗುತ್ತದೆ. ಹಾಗೆಯೇ ಸುಂಟರಗಾಳಿಯಲ್ಲಿ ಎದ್ದ ಕಸ, ಧೂಳಿನ ಕಣಗಳು ಕೂಡ ಹೊಸದಾಗಿ ಮಾಡಿಟ್ಟ ಪಸಿ ಮಡಕೆ, ಕುಡಿಕೆಗಳ ಮೇಲೆ ಸುಲಭವಾಗಿ ಬಂದು ಮೆತ್ತಿಕೊಳ್ಳುವ ಸಾಧ್ಯತೆಗಳಿವೆ.

ಅವೆಲ್ಲ ಏನಿದ್ದರೂ ಪ್ರಾಕೃತಿಕ ಶಕ್ತಿಗಳಾದ್ದರಿಂದ, ಅವುಗಳ ಬಗ್ಗೆ ಕುಂಬಾರರು ವೃತ್ತಿಯ ಸಲುವಾಗಿ ಎಚ್ಚರವಹಿಸಬೇಕಾಗುತ್ತದೆ.

○

ದಕ್ಷಿಣ ಕರ್ನಾಟಕದಲ್ಲಿ ಕುಂಬಾರಿಕೆ



ಮಣ್ಣು ಕಲೆಸುತ್ತಿರುವುದು



ತಿಗರಿ (ಚಕ್ರ) ಕೆಳಭಾಗದಲ್ಲಿರುವುದು ಗುಬ್ಬಗಲ್ಲು




ತಿಗರಿಯನ್ನು ತಿರುಗಿಸುತ್ತಿರುವುದು



ತಿಗರಿಯಿಂದ ಮಡಕೆಯನ್ನು ಕೊಯ್ದು ತೆಗೆಯುತ್ತಿರುವುದು



ಮಡಕೆ ತಟ್ಟುತ್ತಿರುವುದು



ಮಡಕೆ ತಟ್ಟುವ ಬಡಿಗೆ (ಸೊಳ) ತಟ್ಟುವಾಗ ಮಡಕೆ
ಕೆಳಭಾಗದಲ್ಲಿರಿಸಿಕೊಳ್ಳುವುದು (ಗುಂಡಪ್ಪ ಲಿಂಗದಾಕಾರದ ಕಲ್ಲು)



ಹಸಿರುಡಕೆಗಳನ್ನು ಆವಿಗೆಯಲ್ಲಿ ಜೋಡಿಸುತ್ತಿರುವುದು



ಆವಿಗೆಯ ಮುಂಭಾಗ



ಆವಿಗೆಯ ಹಿಂಭಾಗ



ಹರವಿ



ಹಿಂದಿನ ಸಾಲಿನಲ್ಲಿ : ಗಡಿಗೆ ಅದರ ಮೇಲೆ ಕರೆಯುವ ಮಣಿ (ಕರಾಮಣಿ), ಕುಂಬಾರ ಒಲೆ, ಸ್ವಾರೆ
ಮುಂಭಾಗ : ಹಣ ಹಾಕುವ ಹುಂಡಿ ಮುಚ್ಚಳ (ಗೋಲಕ) ಹೂಜಿ, ಕುಡಿಕೆ, ಧೂಪ ಹಾಕುವ ಕುಡಿಕೆ, ದೇವರ ದೀಪ, ಚಿಕ್ಕ ಹಣತೆ



ಗುಡಾಣ




ಜೋಡಿಸಿದ (ವಾಡೆ) ಓಡೆ




ಓ(ವಾ)ಡೆಗಳ ಅರ್ಧಭಾಗಗಳು (ಹೋಳುಗಳು)



ಮುಸುರೆ ಬಾನಿ



ನಾಡ ಹೆಂಚು



ಶವಸಂಸ್ಕಾರಕ್ಕೆ ವಿಶೇಷವಾಗಿ ಬಳಸುವ ಕೂಳು ಹಾಕುವ ಮಡಕೆಗಳು, ಮುಚ್ಚಗಳು



ಕಾಂಪೌಂಡ್ ಗೋಡೆ - ನೆಲದಲ್ಲಿರಿಸುವ ಹೂವಿನ ಕುಂಡಗಳು



ತೂಗು ಹಾಕುವ ಹೂವಿನ ಕುಂಡಗಳು

ಕುಂಬಾರಿಕೆ - ದಕ್ಷಿಣ ಕನ್ನಡದ ವ್ಯಾಪ್ತಿಯಲ್ಲಿ

ದುಗ್ಗಪ್ಪ ಕಜೆಕಾರ್

ಬೆಂಕಿ, ಚಕ್ರದ ಆವಿಷ್ಕಾರದ ನಂತರ ಬೇಸಾಯವನ್ನು ಕಂಡುಕೊಂಡ ಪ್ರಾಚೀನ ಮಾನವ ಒಂದೆಡೆ ನೆಲಸಲಾರಂಭಿಸಿದ. ಕ್ರಮೇಣ ಬೇಯಿಸಿದ ಆಹಾರವನ್ನು ತಿನ್ನುವುದಕ್ಕೂ ಕಲಿತ ಮಾನವನಿಗೆ ಆಹಾರವನ್ನು ಬೇಯಿಸಲು ಮಡಕೆಗಳ ಅವಶ್ಯಕತೆ ತಲೆದೋರಿತು. ಮೊದ ಮೊದಲು ಸುಡದೆ ಇರುವ ಮಡಕೆಗಳನ್ನು ತನ್ನ ನಿತ್ಯ ಬಳಕೆಯ ಹಣ್ಣು ಹಂಪಲುಗಳನ್ನು ಗೆಡ್ಡೆ, ಗೆಣಸುಗಳನ್ನು ಸಂಗ್ರಹಿಸಿಡಲು ಬಳಸುತ್ತಿದ್ದ. ಆಹಾರವನ್ನು ಬೇಯಿಸುವ ಕಲೆಯನ್ನು ತಿಳಿದುಕೊಂಡ ಮೇಲೆ ಸುಟ್ಟ ಮಡಕೆಗಳ ಬಳಕೆ ಆರಂಭವಾಯಿತು. ಇದು ವಿಶ್ವದ ಇಂತಹುದೇ ಪ್ರದೇಶದಲ್ಲಿ ಬೆಳೆದು ಬಂತೆಂದು ಬೊಟ್ಟು ಮಾಡಿ ಹೇಳುವುದು ಸಾಧ್ಯವಿಲ್ಲ.

ಮಾನವ ನಾಗರಿಕತೆ ಕೆಲವೊಂದು ಪ್ರದೇಶಗಳಲ್ಲಿ ಉಜ್ವಲವಾಗಿ ಬೆಳೆದು ಬಂದಿತೆಂದು ಮಾತ್ರ ಹೇಳಬಹುದು. ಹರಪ್ಪಾ ಮಹೆಂಜೋದಾರೋ, ಈಜಿಪ್ಟ್, ಬೆಬಿಲೋನಿಯಾ, ಮೆಕ್ಸಿಕೋ ಮೊದಲಾದ ಪ್ರದೇಶಗಳ ಪ್ರಾಚೀನ ನಾಗರಿಕತೆಯಲ್ಲಿ 'ಕುಂಭ ಕಲೆ' ಬಹಳ ಉನ್ನತ ಸ್ಥಿತಿಯಲ್ಲಿದ್ದುದು ಕಂಡು ಬರುತ್ತಿದೆ. ಪಿಂಗಾಣಿ ಪಾತ್ರೆಯ ಕಲೆಯಲ್ಲಿ ಚೀನಾ ಜಗತ್ಪಸಿದ್ಧವಾಗಿರುವುದು ತಿಳಿಯದವರಿಲ್ಲ.

ನಮ್ಮ ದೇಶದಲ್ಲೂ ಕಸುಬು ಕುಲಕ್ಕಂಟಿಕೊಂಡಿರುವುದು ಹೊಸದೇನಲ್ಲ. ಮಣ್ಣಿನ ಮೇಲೆ ಕೈಯಾಡಿಸಿ ಅದಕ್ಕೆ ಉಪಯೋಗದ ಕಳೆ ಕೊಡುವ ವೃತ್ತಿಗಂಟಿದ ಸಮುದಾಯ ಕುಂಬಾರ ಜನಾಂಗವಾಗಿ ಮೂಡಿ ಬಂತು. ಗಾವಿಲನಿಂದ ವಿದ್ವಾಂಸನವರೆಗೂ ಕುಂಬಾರ ಚಿರಪರಿಚಿತ. ಅವನು ನಿರ್ಮಿಸಿದ ಮಡಕೆ, ಹರವಿ, ಎಲ್ಲವೂ ಜನೋಪಯುಕ್ತವಾಗಿದ್ದು ಅದರಲ್ಲೂ ಬಡವರಿಗೆ ಆಧಾರವಾದವು.

'ಕುಂಬಾರ' ಎನ್ನುವುದು 'ಕುಂಭಕಾರ' ಎಂಬ ಶಬ್ದದ ತದ್ಭವ ರೂಪ. ಕುಂಬಾರನನ್ನು ತಮಿಳುನಾಡಿನಲ್ಲಿ 'ಕುಸವನ್' ಎಂದು ಕರೆದರೆ, ಉತ್ತರ ಭಾರತದಲ್ಲಿ 'ಪ್ರಜಾಪತಿ' ಎನ್ನುತ್ತಾರೆ. ಕರ್ನಾಟಕದ ಉತ್ತರ ಭಾಗದಲ್ಲಿ ಲಿಂಗಾಯಿತ

ಕುಂಬಾರ, ಕುಮಾರ ಪ್ರಜಾಪತಿ, ಕುಂಬಾರಶೆಟ್ಟಿ ಎಂಬ ಹೆಸರುಗಳು ರೂಢಿಯಲ್ಲಿವೆ. ಮೈಸೂರಿನ ಕುಂಬಾರರಲ್ಲಿ ಕನ್ನಡ ಕುಂಬಾರರು ಮತ್ತು 'ಲಿಂಗಾಯಿತ ಕುಂಬಾರರು' ಎನ್ನುವ ಎರಡು ಪಂಗಡಗಳಿವೆ. ದಕ್ಷಿಣ ಕನ್ನಡದಲ್ಲಿ 'ಮೂಲ್ಯ' ಅಥವಾ 'ಕುಲಾಲ' ಎನ್ನುವುದು ವಾಡಿಕೆಯಾದರೆ ಉತ್ತರ ಕನ್ನಡದಲ್ಲಿ 'ಗುಣಗರು' ಮತ್ತು 'ಹಾಂಡ' ಎಂಬ ನಾಮದಿಂದ ಕರೆಯಿಸಿಕೊಳ್ಳುತ್ತಾರೆ. ಧಾರವಾಡ ಜಿಲ್ಲೆಯ ಕೆಲವೆಡೆ 'ಚಕ್ರಸಾಲಿ'ಗಳೆನ್ನುತ್ತಾರೆ. ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಂಬಾರನನ್ನು 'ಗುನಗ ಎಂದು ಕರೆಯುತ್ತಾರೆ. ಇವರು ಗ್ರಾಮದೇವತೆಯ ಅರ್ಚಕರು. ಇವರು ದೇವತೆಗಳ ಗುಣಗಾನ ಮಾಡುತ್ತಿದ್ದುದರಿಂದ 'ಗುನಗ' ಎನ್ನುವ ಹೆಸರು ಬಂದಿದೆ ಎಂದು ಹೇಳುತ್ತಾರೆ. ಇವರು ಶುದ್ಧ ಕನ್ನಡ ಮಾತನಾಡುತ್ತಾರೆ.

ಧಾರ್ಮಿಕ ನಂಬಿಕೆಗಳು ಮತ್ತು ಸಾಮಾಜಿಕ ಆಚರಣೆಗಳು

ದಕ್ಷಿಣ ಕನ್ನಡದ ಕುಂಬಾರರ ಮಾತೃಭಾಷೆ ತುಳು. ತುಳು ಭಾಷೆಯನ್ನಾಡುವ ಕುಂಬಾರರಲ್ಲಿ 'ಅಳಿಯಕಟ್ಟು' ಇದೆ. ಅಳಿಯಕಟ್ಟು ಎಂದರೆ ತಂದೆಯಿಂದ ಆಸ್ತಿಹಕ್ಕು ಮಕ್ಕಳಿಗೆ ಹೋಗದೆ ತಂದೆಯ ತಂಗಿಯ ಮಕ್ಕಳಿಗೆ ಹೋಗುವುದಾಗಿದೆ. ಇದನ್ನು ಭೂತಾಳಪಾಂಡ್ಯನ ಕಟ್ಟು ಎಂಬುದಾಗಿಯೂ ಕರೆಯುತ್ತಾರೆ. ಇವರು ಕರಾವಳಿ ಪ್ರದೇಶದಲ್ಲಿ ಹೆಚ್ಚಾಗಿ ವಾಸಿಸುತ್ತಾರೆ. ಸಹ್ಯಾದ್ರಿಯ ತಪ್ಪಲಲ್ಲಿ ಕನ್ನಡ ಕುಂಬಾರರು ಕಾಣ ಸಿಗುತ್ತಾರೆ. ಇವರಲ್ಲಿ 'ಮಕ್ಕಳಕಟ್ಟು' ಆಚರಣೆಯಲ್ಲಿದೆ. ಮಕ್ಕಳಕಟ್ಟು ಎಂದರೆ ತಂದೆಯಿಂದ ಆಸ್ತಿ ನೇರವಾಗಿ ಮಕ್ಕಳಿಗೆ ಹೋಗುವುದೇ ಆಗಿದೆ. ಎರಡು ಗುಂಪುಗಳ ಮಧ್ಯೆ ಸಾಮಾನ್ಯವಾಗಿ ಮದುವೆ ಸಂಬಂಧವೇರ್ಪಡುವುದಿಲ್ಲ. ತುಳುನಾಡಿನ ಕುಂಬಾರರು ಸಾಮಾನ್ಯವಾಗಿ ಭಕ್ತರು. ಭೂತ ಕೋಲದಲ್ಲಿ ಇವರ ನಂಬಿಕೆ ಹೆಚ್ಚು. ಇವರಲ್ಲಿ ಸೂತಕದ ಆಚರಣೆ ಇದೆ. ಮದುವೆ ಮುಂತಾದವುಗಳಲ್ಲಿ ಗೋತ್ರ ಮತ್ತು ಬಳಿ (ಬರಿ) ನೋಡುವ ಪದ್ಧತಿ ಇತ್ತು. ಎಲ್ಲಾ ಶುಭಕಾರ್ಯಗಳಿಗೂ ತಾರಾಬಲ ನೋಡುವ ಕ್ರಮವಿದೆ. ಪುನರ್ವಿವಾಹ ಅಳಿಯಕಟ್ಟಿನವರಿಗೆ ಮೊದಲಿನಿಂದಲೂ ರೂಢಿಯಲ್ಲಿದೆ. ಮದುವೆಯಲ್ಲಿ ವರದಕ್ಷಿಣೆಯ ಕ್ರಮ ಅಳಿಯಸಂತಾನ ಕಟ್ಟಿನ ತುಳುವರಲ್ಲಿ ಪ್ರಶಸ್ತವಲ್ಲವಾದರೂ ಈಗೀಗ ಎಲ್ಲಾ ಪಂಗಡಗಳಲ್ಲಿಯೂ ಅದರ ಪಿಡುಗು ಇದ್ದೇ ಇದೆ. ಕುಲಾಲರದ್ದೇ ಆದ ಯಾವುದೇ ಧಾರ್ಮಿಕ ಕೇಂದ್ರಗಳಿಲ್ಲ. ಇತ್ತೀಚೆಗೆ ಶೃಂಗೇರಿ ಮಠಕ್ಕೆ ನಡಾವಳಿ ಕಂಡು ಬಂದರೂ ಅದಕ್ಕೇನು ಪರಂಪರೆ ಇಲ್ಲ.

ಇವರಲ್ಲಿ ಹೆಣವನ್ನು ಸಾಮಾನ್ಯವಾಗಿ ಸುಡುತ್ತಾರೆ. ಹೂಳುವುದು ಕಡಿಮೆ. ಸತ್ತ ನಂತರದ ಹದಿಮೂರನೆ ದಿನದಲ್ಲಿ ಉತ್ತರ ಕ್ರಿಯೆಯ ಕ್ರಮವಿದೆ. ಇದಕ್ಕೆ 'ಬೊಜ್ಜ' ಎನ್ನುತ್ತಾರೆ.

ಸಿದ್ಧಪಡಿಸುವ ವಸ್ತುಗಳು

ಪ್ರಾರಂಭಿಕ ಹಂತವಾದ ಆಹಾರ ಸಂಗ್ರಹಣೆಯ ಹಂತದಲ್ಲಿ ಎಲ್ಲರೂ ಸಂಗ್ರಹಣೆಯಲ್ಲಿ ತೊಡಗಿದ್ದರೆ ವ್ಯವಸಾಯ ಕ್ರಾಂತಿಯ ನಂತರ ಅನೇಕ ವೃತ್ತಿಗಳು ಹುಟ್ಟಿಕೊಂಡು ವೈವಿಧ್ಯಮಯವಾದ ಸಾಮಾಜಿಕ ಜೀವನ ಆರಂಭವಾಯಿತು. ವೃತ್ತಿಗಂಟಿಕೊಂಡಿರುವ ಸಮುದಾಯಗಳು ಕುಲಕಸುಬು ಹಿಂದೂ ಧರ್ಮದಿಂದ ನಿರ್ಧರಿತವಾದದ್ದು ಮತ್ತು ಅದನ್ನು ಯಾವ ಕಾರಣಕ್ಕೂ ಬದಲಾಯಿಸಲು ಸಾಧ್ಯವಿಲ್ಲವೆಂದು ತೀರ್ಮಾನಿಸಿದ್ದವು. ಪುರಾತನ ಕಾಲದಿಂದಲೂ ಮಣ್ಣಿನ ಪಾತ್ರೆಗಳು ಉಪಯೋಗದಲ್ಲಿದ್ದು 'ಕುಂಬಾರ' ಜಾತಿಯೂ ಸಹ ಪುರಾತನ ಕಾಲದ್ದು. ಕುಂಭಕಲೆ ಆರಂಭವಾದಂದಿನಿಂದಲೂ ಕುಂಬಾರ ಹತ್ತಾರು ದಿನಬಳಕೆಯ ಮತ್ತು ಜನೋಪಯೋಗಿ ವಸ್ತುಗಳನ್ನು ವಿವಿಧ ವಿನ್ಯಾಸಗಳಲ್ಲಿ ತಯಾರಿಸುತ್ತಿದ್ದ.

1. **ಮಂಡೆ (ಗುರ್ಕೆ)** : ಇದೊಂದು ನೀರು ತುಂಬಿಸಿಡಲು ಮತ್ತು ಸ್ನಾನ ಗೃಹದಲ್ಲಿ ನೀರು ಬಿಸಿ ಮಾಡಲು ಉಪಯೋಗಿಸುವ ಗುಡಾಣ. ಕೃಷಿಕರು ಹಣ್ಣಡಿಕೆಯನ್ನು ನೀರಲ್ಲಿ ಹಾಕಿಡಲು ಬಳಸುತ್ತಾರೆ. ಇದು ದುಂಡಾಗಾಗಿದ್ದು ೨ ರಿಂದ ೩ ಅಡಿ ಎತ್ತರವಿದ್ದು ವೃತ್ತಾಕಾರದ ಬಾಯಿಯುಳ್ಳ ದೊಡ್ಡ ಗಾತ್ರದ ಪಾತ್ರೆ.

2. **ಕಪ್ಪರ್ (ಕಪ್ಪಲ್)** : ಭತ್ತದಿಂದ ಅಕ್ಕಿ ತೆಗೆಯುವ ಪ್ರಕ್ರಿಯೆಯ ಮೊದಲ ಹಂತದಲ್ಲಿ ಭತ್ತವನ್ನು ನೆನೆಹಾಕಲು ಉಪಯೋಗಿಸುವ ದೊಡ್ಡ ಪಾತ್ರೆ. ಪ್ರಾಚೀನ ಕಾಲದಿಂದಲೂ ಶೇಂದಿಯನ್ನು ಶೇಖರಿಸಿಡಲು ಶೇಂದಿ ಅಂಗಡಿಗಳಲ್ಲಿ ಪ್ರಧಾನವಾಗಿ ಇದನ್ನು ಉಪಯೋಗಿಸುತ್ತಾರೆ. ಇದರ ತಳಭಾಗ ಸಮತಲವಾಗಿದ್ದು ಅಗಲವಾದ ಬಾಯಿಯನ್ನು ಹೊಂದಿರುತ್ತದೆ. ದನಕರುಗಳಿಗೆ ಬೇಕಾಗುವ ಅಕ್ಕಚ್ಚು ತುಂಬಿಡಲು ಸಾಮಾನ್ಯವಾಗಿ ಹಟ್ಟಿಯ ಪಕ್ಕದಲ್ಲಿಯೇ ಪಾತ್ರೆಗೆ ಪೆಟ್ಟಾಗದಂತೆ ಮತ್ತು ಹೆಚ್ಚು ಬಾಳ್ವಿಕೆ ಬರುವಂತೆ ಮಣ್ಣಿಗೆ ಅರ್ಧ ಹೂತಿಡುತ್ತಾರೆ.

3. **ತಂದೂರ್ ರೊಟ್ಟಿ ಗೂಡು** : ತಂದೂರಿ ರೊಟ್ಟಿ ತಯಾರಿಸುವುದಕ್ಕಾಗಿಯೇ ಇರುವ ಮಣ್ಣಿನ ಪಾತ್ರೆ. ಇದರ ಅಡಿಭಾಗದಲ್ಲಿ ಕೆಂಡವನ್ನು ಹಾಕುವುದಕ್ಕಾಗಿ ಒಂದು ವಿಶೇಷವಾದ ಅಂತಸ್ತಿರುತ್ತದೆ. ಮತ್ತು ಅಡಿಭಾಗವು ತೆರೆದಿದ್ದು ಉಳಿದ ಪಾತ್ರೆಗಳಿಂದ ಭಿನ್ನವಾಗಿರುತ್ತದೆ. ಮಿಕ್ಕುಳಿದ ಪಾತ್ರೆಗಳಿಂದ ದಪ್ಪನಾಗಿದ್ದು, ಇದನ್ನು ತಯಾರಿಸುವಾಗ ಕುಪ್ಪಿಚೂರು ಮತ್ತು ಹೊಯ್ಗೆಯನ್ನು ಬಳಸುತ್ತಾರೆ. ದೊಡ್ಡ ದೊಡ್ಡ ಹೋಟೆಲುಗಳಲ್ಲಿ ಇಂದಿಗೂ ಇದೇ ತಂದೂರಿ ರೊಟ್ಟಿ ಗೂಡನ್ನು ಬಳಸುತ್ತಾರೆ.

4. **ಅಗೋಳಿ** : ಇದು ಹಿಂದಿನ ಕಾಲದಲ್ಲಿ ಅನ್ನ ಬೇಯಿಸಲು ಉಪಯೋಗಿಸುತ್ತಿದ್ದ ದೊಡ್ಡ ಪಾತ್ರೆ. ಇದು ವರ್ತುಲಾಕಾರದ ಬಾಯಿಯನ್ನು ಹೊಂದಿದ್ದು ದುಂಡಾಗಿರುವ ಪಾತ್ರೆ. ಇದರಲ್ಲಿ ದೊಡ್ಡ ಮತ್ತು ಸಣ್ಣ ಗಾತ್ರದ ಪಾತ್ರೆಗಳಿರುತ್ತವೆ. ಹಿಂದಿನ ಅವಿಭಕ್ತ ಕುಟುಂಬಗಳಲ್ಲಿ ಈ ಪ್ರಕಾರದ ಪಾತ್ರೆಗಳನ್ನು ಬಳಸುತ್ತಿದ್ದರು.

5. **ಕರ** : ಅನ್ನ ಬೇಯಿಸುವ ಪಾತ್ರೆ. ಇದು ಅಗೋಳಿಗಿಂತ ಸಣ್ಣ ಗಾತ್ರದಾಗಿದ್ದು ಸಣ್ಣ ಮತ್ತು ಅತಿಸಣ್ಣ ಕುಟುಂಬಗಳಲ್ಲಿ ಇದನ್ನೇ ಸಾರ್ವತ್ರಿಕವಾಗಿ ಬಳಸುತ್ತಿದ್ದರು. ಗ್ರಾಮೀಣ ಪ್ರದೇಶದಲ್ಲಿ ಇಂದಿಗೂ ಇದರ ಬಳಕೆಯಿದೆ. ಈ ಪಾತ್ರೆಯಲ್ಲಿ ಬೇಯಿಸಿದ ಅನ್ನ ರುಚಿಕರ ಮಾತ್ರವಲ್ಲ ಇದೊಂದು ಶ್ರೀಮಂತ ಸಂಸ್ಕೃತಿಯೂ ಕೂಡ ಎಂದು ಗ್ರಾಮೀಣ ಜನರು ತಿಳಿದುಕೊಂಡಿದ್ದಾರೆ. ನಿತ್ಯಬಳಕೆಗೆ ಅಲ್ಯುಮಿನಿಯಂ ಯಾ ಸ್ಟೈನ್‌ಲೆಸ್ ಸ್ಟೀಲ್ ಪಾತ್ರೆಗಳನ್ನು ಬಳಸಿದರೂ ಪ್ರತಿವರ್ಷವೂ ಹೊಸ ಅಕ್ಕಿ ಊಟ ಮಾಡುವ ದಿನ ಮಣ್ಣಿನ ಪಾತ್ರೆಯಲ್ಲೇ ಹೊಸ ಅಕ್ಕಿಯನ್ನು ಬೇಯಿಸುವುದು ವಾಡಿಕೆ.

6. **ನೀರಡ್ಯರ** : ಕುಡಿಯುವ ನೀರನ್ನು ಶೇಖರಿಸಿಡಲು ಉಪಯೋಗಿಸುವ ಪಾತ್ರೆ. ನೆಲದಲ್ಲಿ ಚೆನ್ನಾಗಿ ಕುಳಿತುಕೊಳ್ಳುವಂತೆ ಇದರ ತಳಭಾಗದಲ್ಲಿ ದಪ್ಪನಾದ ಮಣ್ಣಿನ ಪಟ್ಟಿಯಿರುತ್ತದೆ. ಇದು ಹೆಚ್ಚಾಗಿ ದೊಡ್ಡ ಗಾತ್ರದ್ದೇ ಇರುತ್ತದೆ.

7. **ಅಡ್ಯರ** : ಗಂಜಿಯಿಂದ ಗಂಜಿ ನೀರನ್ನು (ತಿಳಿ) ಬೇರ್ಪಡಿಸಿ ಅನ್ನ

ಮಾಡಲು ಉಪಯೋಗಿಸುವ ಪಾತ್ರೆ. ಸಾಧಾರಣ ಈ ಮೇಲೆ ಹೇಳಿರುವ ಪ್ರಕಾರದ್ದೇ ಆಗಿದ್ದು ಗಾತ್ರದಲ್ಲಿ ಸಣ್ಣದಾಗಿರುತ್ತದೆ.

8. **ಕೋರಯಿ** : ಇದು ಅಗಲವಾದ ಮತ್ತು ಕಡಿಮೆ ಆಳದ ಪಾತ್ರೆಯಾಗಿದ್ದು ಅಕ್ಕಿಯನ್ನು ತೊಳೆಯಲು ಮತ್ತು ಅಕ್ಕಿಯಲ್ಲಿ ಬೆರೆತಿರುವ ಕಲ್ಲು, ಹೊಯ್ಗೆಯನ್ನು ಬೇರ್ಪಡಿಸಲು ಉಪಯೋಗಿಸುವ ಪಾತ್ರೆ.

9. **ತಟ್ಟಿ ಬಿಸಲೆ** : ಇದು ಗಾತ್ರದಲ್ಲಿ ಸಣ್ಣದಾಗಿದ್ದು ಅಗಲವಾದ ಬಾಯಿಯನ್ನು ಹೊಂದಿರುತ್ತದೆ. ಇದು ಪಲ್ಯ, ಸಾಂಬಾರು ಅದರಲ್ಲೂ ಮೀನು, ಮಾಂಸದ ಸಾರು ತಯಾರಿಸಲು ವಿಶೇಷವಾಗಿ ಉಪಯೋಗಿಸುವ ಪಾತ್ರೆ.

10. **ಗುಂಡಿ ಬಿಸಲೆ** : ಸಾರು, ತೋವೆ ಮತ್ತು ತರಕಾರಿ ಪಲ್ಯ ತಯಾರಿಸಲು ಉಪಯೋಗಿಸುವ ಪಾತ್ರೆ. ಇದು ಮೇಲಿನ ಪ್ರಕಾರದ್ದೇ ಆಗಿದ್ದು ಅದಕ್ಕಿಂತ ಆಳವಾಗಿರುತ್ತದೆ.

11. **ಕಿನ್ನಿ ಬಿಸಲೆ** : ತಿಂಡಿ ತಿನಿಸುಗಳಿಗೆ ಒಗ್ಗರಣೆ ಇಡಲು ಯಾ ಅಲ್ಪ ಸ್ವಲ್ಪ ತರಕಾರಿ ಪಲ್ಯ ತಯಾರಿಸಲು ಬಳಸುತ್ತಿದ್ದ ಸಣ್ಣ ಪಾತ್ರೆ.

12. **ಕಡ್ಯ ಅಥವಾ ಕಂದೆಲ್ (ಕೊಡಪಾನ)** : ತೆಂಗಿನ ಗಿಡಕ್ಕೆ ನೀರೆರೆಯಲು ಮುಖ್ಯವಾಗಿ ಉಪಯೋಗವಾಗುತ್ತಿದ್ದ ದುಂಡಗಾಗಿರುವ ಮತ್ತು ವತ್ತಾಕಾರದ ಸಣ್ಣ ಬಾಯಿಯುಳ್ಳ ಪಾತ್ರೆ. ಕೆಲವು ವರ್ಷಗಳ ಹಿಂದೆ ಹಳ್ಳಿಗಳಲ್ಲಿ ಕಳ್ಳಭಟ್ಟಿ ಸಾರಾಯಿ ತಯಾರಿಕೆಯ ಮೊದಲ ಹಂತಕ್ಕೂ ಇದು ಉಪಯೋಗವಾಗುತ್ತಿತ್ತು ಎನ್ನಲಾಗಿದೆ.

13. **ಕಾರ್‌ದ ಕಡ್ಯ** : ಇದು ಸಾಮಾನ್ಯವಾಗಿ ಕೊಡಪಾನದಂತೆಯೇ ಇದ್ದು ಅಡಿಭಾಗದಲ್ಲಿ ಮಣ್ಣಿನ ಪಟ್ಟಿ ಇರುತ್ತದೆ. ಇದನ್ನು ಮನೆಯಲ್ಲಿ ನೀರು ತುಂಬಿಡಲು ಬಳಸುತ್ತಾರೆ. ಇದರಲ್ಲಿ ಹಾಕಿಟ್ಟ ನೀರು ತಣ್ಣಗಿರುವುದರಿಂದ ಸೆಕೆಗಾಲದಲ್ಲಿ ಇದರ ಬಳಕೆ ಅಧಿಕ.

14. **ಕುಜೆಲ್** : ಇದು ವಿಶೇಷವಾಗಿ ತಾಳೆಯ ಮರದಿಂದ ಕಳ್ಳು ತೆಗೆಯಲು ಉಪಯೋಗಿಸುವ ಪಾತ್ರೆ. ಈ ಕ್ಷೇತ್ರದಲ್ಲಿ ಇಂದಿಗೂ ಇದಕ್ಕೆ

ಪರ್ಯಾಯವಾಗಿ ಯಾವುದೇ ಪಾತ್ರೆ ಬಂದಿಲ್ಲ. ಇದು ದುಂಡಗಾಗಿದ್ದು ಒಯ್ಯಲು ಅನುಕೂಲವಾಗುವ ಗಾತ್ರದಲ್ಲಿರುತ್ತದೆ.

15. **ಮಡಕೆ** : ತೆಂಗಿನ ಮರದ ಕಳ್ಳು ತೆಗೆಯಲು ಉಪಯೋಗಿಸುವ ಪಾತ್ರೆ. ಇದನ್ನು ಗ್ರಾಮೀಣ ಭಾಷೆಯಲ್ಲಿಯೂ 'ಮಡಕೆ' ಎಂದೇ ಕರೆಯುವರು. ಇದು ರಚನೆಯಲ್ಲಿ ವೃತ್ತಾಕಾರದ ಬಾಯಿಯನ್ನು ಹೊಂದಿದ್ದು ಸಮತಲವಾದ ತಳಭಾಗವಿರುತ್ತದೆ. ಉಳಿದ ಪಾತ್ರೆಗಳಿಗಿಂತ ಬೇರೆಯಾದ ವಿನ್ಯಾಸವನ್ನು ಹೊಂದಿದೆ.

16. **ಮುಟ್ಟಿ (ಮುಗಯಿ)** : ಇದು ಸಾಧಾರಣ ಒಂದು ಲೀಟರಿನಷ್ಟು ನೀರನ್ನು ತುಂಬಬಲ್ಲ ಹಗುರವಾಗಿರುವ ಸಣ್ಣ ಕುಡಿಕೆ. ಹೆಚ್ಚಾಗಿ ಶೇಂದಿ ಅಂಗಡಿಗಳಲ್ಲಿ ಗಿರಾಕಿಗಳಿಗೆ ಶೇಂದಿ ವಿತರಿಸಲು ಈ ಪಾತ್ರೆಯನ್ನು ಬಳಸುತ್ತಾರೆ.

17. **ತೂರಿ** : ಇದು ದೇವಸ್ಥಾನಗಳಲ್ಲಿ ಪೂಜಾ ವಿಧಿಗಳಿಗೆ ಬಳಸುವ ಕಲಶ. ಶವ ಸಂಸ್ಕಾರದ ಸಮಯದಲ್ಲಿ ಎಷ್ಟೇ ಶ್ರೀಮಂತರಲ್ಲಿಯೂ ಇಂದಿಗೂ ಉಪಯೋಗಕ್ಕೆ ಬರುವ ಮಣ್ಣಿನ ಮಡಕೆಯೆಂದರೆ "ತೂರಿ". ಇದನ್ನು'ಮುಗಯಿ' ಎಂದು ಕರೆಯುವುದುಂಟು.

18. **ಚಟ್ಟಿ** : ಮನೆಯ ಹಾಗೂ ಕಟ್ಟಡಗಳ ಹೊರ ಅಲಂಕಾರಕ್ಕಾಗಿ ಹೂಗಿಡಗಳನ್ನು ನೆಡುವ ಪಾತ್ರೆ. ಇವು ಮಿಕ್ಕುಳಿದ ಪಾತ್ರೆಗಳಿಂದ ಹೆಚ್ಚು ದಪ್ಪನಾಗಿದ್ದು ಅಳತೆಯಲ್ಲಿ ಒಂದು - ಒಂದೂವರೆ ಅಡಿ ಆಳವಿರುವ ಭಾರವಾದ ಪಾತ್ರೆ. ಇದರೊಳಗೆ ಮಣ್ಣು ತುಂಬಿ ಗಿಡ ನೆಟ್ಟರೆ ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು ಅನುಕೂಲವಾಗುತ್ತದೆ. ಹೀಗೆ ನೆಟ್ಟ ಗಿಡಗಳಿಗೆ ನಿತ್ಯವೂ ನೀರು ಹಾಕಬೇಕಾಗಿರುವುದರಿಂದ ಚಟ್ಟಿಯಲ್ಲಿ ಹೆಚ್ಚಾದ ನೀರು ಇಳಿದು ಹೋಗುವಂತೆ ಪಾತ್ರೆಯ ಕೆಳ ಮಗ್ಗುಲಲ್ಲಿ ಒಂದು ಸಣ್ಣ ರಂಧ್ರವಿರುತ್ತದೆ. ಇತ್ತೀಚೆಗೆ ಈ ಪಾತ್ರೆಗಳಿಗೆ ಹೆಚ್ಚು ಬೇಡಿಕೆಯಿರುವುದರಿಂದ ಹೊಸ ಮಾದರಿಯ ಸಣ್ಣ ಗಾತ್ರದ ಮನೆಯ ಒಳಗಡೆ ಟೇಬಲಿನ ಮೇಲಿಡುವ ಪಾತ್ರೆಗಳೂ ಮಾರುಕಟ್ಟೆಗೆ ಬಂದಿವೆ. ರಚನೆಯಲ್ಲಿ ಇದು ನೀರು ತುಂಬಿಡಲು ಉಪಯೋಗಿಸುವ ಮರಿಗೆಯಂತೆ ಕಾಣುತ್ತದೆ.

19. **ಕುದುಪೆ** : ಹಾಲು ಬಿಸಿ ಮಾಡಲು ಬಳಸುತ್ತಿದ್ದ ಸಣ್ಣ ಗಾತ್ರದ ಮಣ್ಣಿನ ಪಾತ್ರೆ. ಮೊಸರಿನಿಂದ ಬೆಣ್ಣೆ ತೆಗೆಯಲೂ ಇದೇ ಪಾತ್ರೆಯನ್ನು ಬಳಸುತ್ತಿದ್ದು, ಹಾಲು, ಮೊಸರು, ಮಜ್ಜಿಗೆ ಹಾಕಿಡಲೂ ಉಪಯೋಗಿಸುತ್ತಾರೆ. ಇದರಲ್ಲಿ ಹಾಕಿಟ್ಟರೆ ರುಚಿಕರವಾಗಿಯೂ ಮತ್ತು ಉತ್ತಮವಾಗಿಯೂ ಇರುವ ಮೊಸರು ಸಿಗುತ್ತದೆ. ಇದನ್ನು ಕಡೆದರೆ ಒಳ್ಳೆಯ ಮಜ್ಜಿಗೆ ಮತ್ತು ಬೆಣ್ಣೆ ಸಿಗುವುದು.

20. **ಬಾವಡೆ (ಮುಚ್ಚಳ)** : ಪಾತ್ರೆಯ ಮುಖಭಾಗಕ್ಕೆ ಸರಿಹೊಂದುವ ಮುಚ್ಚಳವನ್ನು 'ಬಾವಡೆ' ಎನ್ನುತ್ತಾರೆ. ಇವು ವಿವಿಧ ಗಾತ್ರದ ಪಾತ್ರೆಗಳಿಗೆ ಮುಚ್ಚಲು ಅನುಕೂಲವಾಗುವಂತೆ ಬೇರೆ ಬೇರೆಯಾಗಿ ತಯಾರಿಸುತ್ತಾರೆ. ಇತ್ತೀಚೆಗೆ ಇವು ಸಂಪೂರ್ಣವಾಗಿ ಮಾಯವಾಗುವ ಸ್ಥಿತಿಯಲ್ಲಿವೆ. ಏಕೆಂದರೆ ಮಣ್ಣಿನ ಪಾತ್ರೆಗಳನ್ನು ಜನರು ಅಲ್ಲಲ್ಲಿ ಉಪಯೋಗಿಸಿದರೂ ಅವುಗಳಿಗೆ ಅಲ್ಯುಮಿನಿಯಂ ಅಥವಾ ಇತರೇ ಲೋಹಗಳ ಮುಚ್ಚಳವನ್ನು ಬಳಸುತ್ತಾರೆ. ಹೀಗಾಗಿ ಬಾವಡೆಯ ತಯಾರಿಯನ್ನೆ ನಿಲ್ಲಿಸಿದ್ದಾರೆ.

21. **ರೊಟ್ಟಿದ ಓಡು** : (ರೊಟ್ಟಿ ತಯಾರಿಸುವ ಹಂಚು) ಇದು ವಿಶೇಷವಾಗಿ ರೊಟ್ಟಿ ಮಾಡಲು ಹಳ್ಳಿಗಳಲ್ಲಿ ಉಪಯೋಗಿಸುವ ಕಾವಲಿ. ಹಿಂದಿನ ಕಾಲದಲ್ಲಿ ಮುಸ್ಲಿಮರು ಹೆಚ್ಚಾಗಿ ಈ ಪ್ರಕಾರದ ಕಾವಲಿಯನ್ನು ಬಳಸುತ್ತಿದ್ದರು.

22. **ಪಲ್ಲಯಿ/ಗದ್ದವು** : ಇದು ಪ್ರಾಚೀನ ಕಾಲದ ಊಟದ ಬಟ್ಟಲು. ಈಗಲೂ ಗ್ರಾಮೀಣ ಪ್ರದೇಶದಲ್ಲಿ ಬಾಣಂತಿಯರು ಊಟ ಮಾಡಲು ಮಣ್ಣಿನ ಬಟ್ಟಲನ್ನೇ ಉಪಯೋಗಿಸುತ್ತಾರೆ. ಇದರಲ್ಲಿ ದೊಡ್ಡ ಗಾತ್ರ ಎಂದರೆ ಸಾಮಾನ್ಯವಾಗಿ ಊಟಕ್ಕೆ ಉಪಯೋಗಿಸುವ ಬಟ್ಟಲನ್ನು 'ಪಲ್ಲಯಿ' ಎಂದರೆ ಸಣ್ಣ ಮಕ್ಕಳು ಉಪಯೋಗಿಸುವ ಸಣ್ಣ ಗಾತ್ರದ ಬಟ್ಟಲನ್ನು 'ಗದ್ದವು' ಎನ್ನುವುದು ವಾಡಿಕೆ. ಇವುಗಳಲ್ಲಿ ಎರಡನೆಯದನ್ನು ಹಿರಿಯರು ಊಟದ ಸಮಯದಲ್ಲಿ ಪಲ್ಯ, ಸಾರು ಇತ್ಯಾದಿಗಳನ್ನು ಹಾಕಲು ಉಪಯೋಗಿಸಿದರೆ ಕಿರಿಯರಿಗೆ ಗಿಡಮೂಲಿಕೆಯ ಮದ್ದನ್ನು ಹಾಕಿ ಅರೆದು ಕುಡಿಸಲು ಉಪಯೋಗಿಸುತ್ತಿದ್ದರು.

23. **ತಿಬಿಲೆ** : (ಹಣತೆ) ಇದು ದೀಪ ಹಚ್ಚಲು ಉಪಯೋಗಿಸುವ ಮಣ್ಣಿನ ಪಾತ್ರೆ. ವಿಶೇಷವಾಗಿ ದೀಪಾವಳಿಯ ಸಮಯದಲ್ಲಿ ಇದರಲ್ಲಿ ದೀಪ ಹಚ್ಚಿಡುತ್ತಾರೆ. ಗೃಹ ಬಳಕೆಯ ವಸ್ತುಗಳಲ್ಲಿ ತೀರಾ ಸಣ್ಣ ಗಾತ್ರದ್ದಾಗಿದ್ದು ದೀಪಾಲಂಕಾರಕ್ಕೆ ಯೋಗ್ಯ ರೀತಿಯಲ್ಲಿ ಬಳಸಬಹುದಾದಂತಹ ಪಾತ್ರೆ. ಇವುಗಳನ್ನು ಕುಂಬಾರರು ಬಿಡಿಬಿಡಿಯಾಗಿ ಮಾರಾಟ ಮಾಡುವ ಬದಲು ೧೦-೧೨ ಅಥವಾ ೧೫೦ ಸೆಟ್ ಮಾಡಿ ಬೆಲೆ ಹೇಳುತ್ತಾರೆ.

24. **ನಡಾರೆ** : ಇದೊಂದು ಮಣ್ಣಿನ ಒಲೆ. ಹಿಂಬದಿಯಿಂದ ಮುಚ್ಚಿದ್ದು ಎದುರುಗಡೆ ಉರುವಲು ಇಡಲು ಅನುಕೂಲವಾಗುವಂತೆ ತೆರೆದಿರುತ್ತದೆ. ಕೆಲವು ವರ್ಷಗಳ ಹಿಂದೆ ೨-೪ ಜನರಿರುವ ಸಣ್ಣ ಕುಟುಂಬಗಳಲ್ಲಿ ಇಂತಹ ಒಲೆಯನ್ನು ಬಳಸುತ್ತಿದ್ದರು. ಒಲೆಯ ಹಿಂದಿನಿಂದ ಮುಚ್ಚಿದ್ದರೂ ಬೆಂಕಿಯ ಅನುಕೂಲಕ್ಕೆ ಗಾಳಿ ಸಿಗುವಂತೆ ಮೂರು ಕಡೆ ಸಣ್ಣ ಗಾತ್ರದ ರಂಧ್ರಗಳಿರುತ್ತದೆ.

ಕುಂಬಾರಿಕೆಗೆ ಬಳಸುವ ಕಚ್ಚಾ ಸಾಮಗ್ರಿಗಳು :

1. **ಆವೆ ಮಣ್ಣು** : ಕುಂಬಾರಿಕೆಗೆ ಮೊದಲನೆಯ ಮತ್ತು ಅತಿ ಮುಖ್ಯವಾದ ಮೂಲವಸ್ತುವೆಂದರೆ ಮಣ್ಣು. ಈ ಮಣ್ಣು ವಿಶೇಷ ಗುಣಲಕ್ಷಣವಿರುವ ಒಳ್ಳೆಯ ಅಂಟಾಗಿರುವ ಇಧನ್ನು 'ಆವೆ ಮಣ್ಣು' ಎಂದು ಕರೆಯುತ್ತಾರೆ. ಇದು ಸಾಧಾರಣ ಭೂಮಿಯ ಮೇಲ್ಪದರದಿಂದ 4 - 5 ಅಡಿ ಆಳದಲ್ಲಿ ದೊರೆಯುತ್ತದೆ. ಎಲ್ಲಾ ಕಡೆಗಳಲ್ಲಿಯೂ ಈ ಮಣ್ಣು ದೊರೆಯುವುದಿಲ್ಲ. ಹೊಳೆಯ ದಡದಲ್ಲಿ ಮತ್ತು ಬಂಜರು ಬಿಟ್ಟ ಗದ್ದೆಗಳಲ್ಲಿ ಮೇಲ್ಪದರದಲ್ಲೇ ಸಿಗುತ್ತದೆ. ಕೆಲವೆಡೆ ಈ ರೀತಿಯ ಮಣ್ಣು ಸಿಗುತ್ತದೆಯಾದರೂ ಒಳ್ಳೆಯ ಗುಣಮಟ್ಟದ ಮಣ್ಣಿನ ಅಭಾವವಿರುತ್ತದೆ. ಅದೇ ರೀತಿ ಕುಂಬಾರಿಕೆಗೆ ಕಲ್ಲಿರದ ಕಪ್ಪು ನಮೂನೆಯ ಉತ್ತಮವಾದ ಮಣ್ಣು ಬೇಕಾಗುವುದು. ಮಣ್ಣು ಸಾಗಿಸಲು ಅನುಕೂಲವಾಗುವ ಮಾರ್ಗದ ವ್ಯವಸ್ಥೆ ಬೇಕಾಗುವುದು. ಅಲ್ಲದೆ ಮಣ್ಣು ಸಿಗುವ ಜಾಗದ ಮಾಲೀಕನ ಒಪ್ಪಿಗೆಯನ್ನು ಪಡೆದು ಮಣ್ಣನ್ನು ಅಗೆದು ಸಾಗಿಸಬೇಕು.

2. **ಉರುವಲು** : ಎರಡನೆ ಮುಖ್ಯವಾದ ಕುಂಬಾರಿಕೆಯ ಕಚ್ಚಾ ಸಾಮಗ್ರಿ

ಕಟ್ಟಿಗೆ, ಕುಡಿಕೆಗಳನ್ನು ಸರಿಯಾದ ವಿನ್ಯಾಸಕ್ಕೆ ತಂದ ಮೇಲೆ ಬೇಯಿಸುವುದು ಕುಂಬಾರಿಕೆಯ ಎರಡನೆಯ ಹಂತ. ಇದಕ್ಕೆ ಕಟ್ಟಿಗೆ ಅಗತ್ಯ. ಸಾಮಾನ್ಯವಾಗಿ ಮಣ್ಣಿನ ಪಾತ್ರೆಗಳು ಬೇಯಲು ೧೦ ರಿಂದ ೧೨ ಗಂಟೆಗಳ ಸಮಯ ತಗಲುರುದರಿಂದ ಹೆಚ್ಚಾಗಿ ದೊಡ್ಡ ಮರದ ದಿಮ್ಮಿಗಳ ಅಗತ್ಯವಿರುತ್ತದೆ. ಮಳೆಗಾಲಕ್ಕೆ ಬೇಕಾದ ಉರುವಲನ್ನು ಬೇಸಿಗೆಯಲ್ಲಿಯೇ ತಯಾರಿಸಿಡುವುದು ದಕ್ಷಿಣ ಕನ್ನಡದಲ್ಲಿ ವಾಡಿಕೆಯಾಗಿದೆ. ಕುಂಬಾರಿಕೆಯಲ್ಲಿ ತೊಡಗಿರುವ ಕುಟುಂಬಗಳಿಗೆ ತಮ್ಮದೇ ಆದ ಮರಗಳಿಲ್ಲದಿದ್ದರೆ ಕಟ್ಟಿಗೆಗೆ ದುಬಾರಿ ಬೆಲೆ ತೆತ್ತು ಸಾಗಿಸುವ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಮಳೆಗಾಲಕ್ಕೆ ಕಟ್ಟಿಗೆಯನ್ನು ಕೂಡಿಸಿಡಲು ಬೇಕಾದ ಕೊಟ್ಟಿಗೆಯೂ ಅಗತ್ಯ. ಹೊಗೆ ಕಾರುವ ತೀರಾ ಕೆಳಮಟ್ಟದ ಮರಗಳು ಕುಂಬಾರಿಕೆಯಲ್ಲಿ ಉಪಯೋಗವಾಗುವುದಿಲ್ಲ.

3. **ಬೈಹುಲ್ಲು** : ಕುಂಬಾರ ವೃತ್ತಿಗೆ ಕಟ್ಟಿಗೆಯಷ್ಟೇ ಪ್ರಾಮುಖ್ಯ ಬೈಹುಲ್ಲು. ಮಣ್ಣಿನ ಪಾತ್ರೆಗಳನ್ನು ಸುಡಬೇಕಾದರೆ ಅವುಗಳನ್ನು ಬಿಸಿಲಿಗೆ ಒಣಗಿಸಿ, ನಂತರ ವ್ಯವಸ್ಥಿತವಾಗಿ ಜೋಡಿಸುತ್ತಾರೆ. ಸುಡಲು ಪಾತ್ರೆಗಳನ್ನು ಜೋಡಿಸುವಾಗ ಪಾತ್ರೆಗಳು ಒಂದಕ್ಕೊಂದು ತಾಗಿ ಒಡೆದು ಹೋಗದಂತೆ ಎಡೆಗೆ ಬೈಹುಲ್ಲನ್ನು ಜೋಡಿಸುತ್ತಾರೆ. ಮಂಗಳೂರಿನ ಮಳಲಿ, ತೋಕೂರು ಮತ್ತು ಬಂಟ್ವಾಳದ ಮಾಣಿ ಮುಂತಾದೆಡೆಗಳಲ್ಲಿ ಕುಂಬಾರರಿಗೆ ಬೈಹುಲ್ಲಿನ ಸಮಸ್ಯೆ ಅಷ್ಟಾಗಿ ಕಂಡುಬರುವುದಿಲ್ಲ. ಬೆಳ್ತಂಗಡಿಯ ಉಜಿರೆ, ಉಪ್ಪಿನಂಗಡಿ, ಮಂಗಳೂರಿನ ಕುಳಾಯಿ, ಸುರತ್ಕಲ್ ಮುಂತಾದ ಸ್ಥಳಗಳಿಗೆ ಬೈಹುಲ್ಲು ದೂರದಿಂದಲೇ ತರಬೇಕು.

4. **ಹೊಯ್ಗೆ ಮತ್ತು ಸೇಡಿ ಮಣ್ಣು** : ಪಾತ್ರೆಗಳು ನಯವಾಗಿರಲು ಮತ್ತು ಬಿರುಕು ಬಿಡದಿರಲು ಮಣ್ಣಿನ ಜೊತೆಗೆ ಹೊಯ್ಗೆ ಅಥವಾ ಸೇಡಿಮಣ್ಣನ್ನು ಬೆರಸುತ್ತಾರೆ. ಹ್ಯೊಯ್ಗೆ ತುಂಬಾ ನಯವಾಗಿರುವ ಸಣ್ಣ ದೂಳಿನಾಕಾರದಲ್ಲಿರುತ್ತದೆ. ಮಾಣಿ, ಉಪ್ಪಿನಂಗಡಿ, ಉಜಿರೆ ಮುಂತಾದ ಕಡೆಯವರು ಹ್ಯೊಯ್ಗೆಯನ್ನು ಬಳಸಿದರೆ, ಮಳಲಿ, ಸುರತ್ಕಲ್, ಬಾಳ, ತೋಕೂರು, ಕುಳಾಯಿ ಮುಂತಾದೆಡೆ ಹೊಳೆಯಬದಿಯಲ್ಲಿ ಅಥವಾ ಗದ್ದೆಗಳಲ್ಲಿ ಸಿಗುವ ಬಿಳಿ ಮಣ್ಣು (ತುಳುವಿನ 'ಸೇಡಿಮಣ್ಣ'ನ್ನು) ಮಿಶ್ರ ಮಾಡುತ್ತಾರೆ.

5. **ಗಾಜಿನ ಪುಡಿ** : ಎಲ್ಲಾ ಪಾತ್ರೆಗಳ ರಚನೆಯಲ್ಲಿಯೂ ಅಗತ್ಯವಿಲ್ಲ. ಕೆಲವು ದೊಡ್ಡಗಾತ್ರದ ಅದರಲ್ಲೂ ತುಂಬಾ ದಪ್ಪನಾಗಿ ರಚಿಸಬೇಕಾದ ಸಂದರ್ಭದಲ್ಲಿ ಇದರ ಅವಶ್ಯಕತೆಯಿದೆ. ಉದಾಹರಣೆಗೆ ದಕ್ಷಿಣ ಕನ್ನಡದಲ್ಲಿ 'ತಂದೂರಿ ರೊಟ್ಟಿ ಗೂಡು' ತಯಾರಿಸಬೇಕಾದರೆ ಕುಪ್ಪಿಚೂರನ್ನು ಬಳಸುತ್ತಾರೆ.

ಕುಂಬಾರಿಕೆ ಪ್ರಕ್ರಿಯೆಯಲ್ಲಿ ಬಳಸುವ ಸಾಧನಗಳು :

1. **ತಗೋರಿ (ತಿಗರು)** : ದೇಶದ ಎಲ್ಲಾ ಕಡೆಗಳಲ್ಲಿಯೂ ಕುಂಬಾರಿಕೆಯಲ್ಲಿ ಬಳಕೆಯಾಗುವ ಏಕೈಕ ಸಾಧನ ತಿಗರಿ. ಮಣ್ಣನ್ನು ಹದ ಮಾಡಿ ಸರಿಯಾಗಿ ಅಂಟಾದ ನಂತರ ಒಂದೊಂದು ಪಾತ್ರೆಗೆ ಬೇಕಾಗುವಷ್ಟು ಮಣ್ಣನ್ನು ತೆಗೆದು ಗುಂಡುಗಳಾಗಿ ಮಾಡಿ ಒಂದೆಡೆ ಇಟ್ಟಿರುತ್ತಾರೆ. ಅನಂತರ ಒಂದೊಂದು ಉಂಡೆಗೂ ಪಾತ್ರೆಯ ವಿನ್ಯಾಸವನ್ನು ಈ ಚಕ್ರದ ಸಹಾಯದಿಂದ ಕೊಡುತ್ತಾರೆ. ಪ್ರಾಚೀನ ಕಾಲದಿಂದಲೂ ಈ ಚಕ್ರವನ್ನು ಕುಂಬಾರಿಕೆಯಲ್ಲಿ ಬಳಸುತ್ತಿದ್ದುದರಿಂದ ಕುಂಬಾರರಿಗೆ 'ಚಕ್ರಸಾಲಿ'ಗಳು ಎನ್ನುವ ಹೆಸರೂ ಇದೆ. ಸರಳ ರೀತಿಯ ಕುಂಬಾರಿಕೆಯಲ್ಲಿ ಮರದ ಚಕ್ರಗಳನ್ನು ಬಳಸುತ್ತಾರೆ. ಇದನ್ನು ತಮ್ಮ ಕೊಟ್ಟಿಗೆಯಲ್ಲಿ ಕುಂಬಾರರು ಒಂದು ಕಡೆ ಸ್ಥಿರವಾಗಿ ನಲೆಗೊಳಿಸಿರುವುದನ್ನು ಕಾಣಬಹುದು. ಹಿಂದಿನ ಕಾಲದಲ್ಲಿ ಮರದ ಮತ್ತು ಮಣ್ಣಿನ ಚಕ್ರಗಳನ್ನು ಬಳಸುತ್ತಿದ್ದರು. ದಕ್ಷಿಣ ಕನ್ನಡದಲ್ಲಿ ಸಾಮಾನ್ಯವಾಗಿ ಈಗಲೂ ಮರದ ತಿಗರಿಯನ್ನು ಉಪಯೋಗಿಸುತ್ತಾರೆ. ಆಧುನಿಕತೆಯ ಪರಿಣಾಮವಾಗಿ ಮರದ ಚಕ್ರದ ಬದಲು ವಿದ್ಯುತ್ ಚಾಲಿತ ಕಬ್ಬಿಣದ ಚಕ್ರಗಳು ಕಂಡು ಬರುತ್ತವೆ. ಆದರೆ ದಕ್ಷಿಣ ಕನ್ನಡದಲ್ಲಿ ಇದರ ಬಳಕೆ ವಿರಳ. ಈ ಅಧ್ಯಯನದ ಪ್ರಕಾರ ಈ ಜಿಲ್ಲೆಯ ಕುಳಾಯಿಯಲ್ಲಿ ಒಂದು ಕುಟುಂಬದವರು ವಿದ್ಯುತ್ ಚಾಲಿತ ತಿಗರಿಯನ್ನು ಉಪಯೋಗಿಸುತ್ತಿದ್ದಾರೆ.

2. **ಈಸುಕೋಲು** : ಮಣ್ಣನ್ನು ಹದಮಾಡುವ ಹಂತದಲ್ಲಿ ಮಣ್ಣಿನಿಂದ ಕಸಕಡ್ಡಿಗಳನ್ನು ಬೇರ್ಪಡಿಸಲು ಉಪಯೋಗಿಸುವ ಸಪೂರದ ತಂತಿ. ಒಂದೂವರೆ ಎರಡು ಅಡಿಯಷ್ಟು ಉದ್ದವಿದ್ದು ಇದನ್ನು ಅರ್ಧ ಚಂದ್ರಾಕೃತಿಗೆ

ಬಾಗಿಸಿ ರಾಶಿ ಹಾಕಿದ ಮಣ್ಣಿನಿಂದ ಕಸಕಡ್ಡಿಗಳನ್ನು ತೆಗೆಯಲು ಉಪಯೋಗಿಸುತ್ತಾರೆ. ಗ್ರಾಮೀಣ ಪ್ರದೇಶದಲ್ಲಿ ಹಾಳಾದ ಛತ್ರಿಯ ಕಡ್ಡಿಗಳನ್ನು ಬಸುತ್ತಾರೆ.

3. **"ಪೊಲಿ ಮತ್ತು ಕಲ್ಲ್"** : 'ಪೊಲಿ' ಎಂದರೆ ತಿಗರಿಯಲ್ಲಿ ತಿರುಗಿಸಿದ್ದ ಕರಡು ಮಡಕೆಗಳನ್ನು ಹೊಡೆದು ವಿನ್ಯಾಸಕ್ಕೆ ತರಲು ಉಪಯೋಗಿಸುವ ಮರದ ತುಂಡು. ಸಾಮಾನ್ಯವಾಗಿ ಒಂದು ಒರಟಾದ ಇನ್ನೊಂದು ನಯವಾದ ಹೀಗೆ ಎರಡು 'ಪೊಲಿ' (ಮರದ ತುಂಡು)ಗಳಿರುತ್ತವೆ. ಅವುಗಳಲ್ಲಿ ಎರಡನೆಯದನ್ನು ಉತ್ತಮ ಗುಣಮಟ್ಟದ ಮರದಿಂದ ತಯಾರಿಸಿರುತ್ತಾರೆ.

   "ಕಲ್ಲ್" ಎಂದರೆ "ಪೊಲಿ"ಯಿಂದ ಪಾತ್ರೆಯನ್ನು ಹೊಡೆಯುವಾಗ ಪಾತ್ರೆಯ ಒಳಭಾಗದಲ್ಲಿ ಹಿಡಿದುಕೊಳ್ಳುವ ದುಂಡಗಾಗಿ ನಯವಾಗಿರುವ ಕಲ್ಲು. ಇದು ಸಾಮಾನ್ಯವಾಗಿ ೫೦೦ ಗ್ರಾನಷ್ಟು ಭಾರವಿರುತ್ತದೆ. ಇದನ್ನು ಹೆಚ್ಚಾಗಿ ಕಲ್ಲಿನ ಕೆತ್ತನೆಯ ಕೆಲಸಗಾರರಲ್ಲಿ ಹೇಳಿ ಮಾಡಿಸುತ್ತಾರೆ.

4. **ತಿಪ್ಪಿ (ಗೆರಟೆ)** : ಅರೆ ಒಣಗಿದ ಮಡಕೆಗಳನ್ನು ಬೇಕಾದ ಆಕಾರಕ್ಕೆ ತರಲು ಒಳಗಡೆಯಿಂದ ಉಜ್ಜಬೇಕಾಗಿರುತ್ತದೆ. ಈ ತರಹ ಉಜ್ಜಲು ನಾಜೂಕುಗೊಳಿಸಿದ ಗೆರಟೆಯನ್ನು ಉಪಯೋಗಿಸುತ್ತಾರೆ. ಹೆಚ್ಚಾಗಿ ಇದು ಒಳ್ಳೆಯ ಆಕಾರದ ತೆಂಗಿನ ಗೆರಟೆಯೇ ಆಗಿರುತ್ತದೆ. ಈ ಪ್ರಕ್ರಿಯೆಗೆ ತುಳುವಿನಲ್ಲಿ 'ಕಜಕ್ ಪಾಡುನಿ' ಎನ್ನುತ್ತಾರೆ. ಕಜಕ್ ಪಾಡುನಿ ಅಂದರೆ ಗೆರಟೆಯನ್ನು ಮಡಿಕೆ ನಾಜೂಕುಗೊಳಿಸಲು ಉಪಯೋಗಿಸುವುದು ಎಂದು ಅರ್ಥ. ಅರೆ ಒಣಗಿದ ಪಾತ್ರೆಗಳ ಮೇಲಿನಿಂದಲೂ ಗೆರಟೆ ಹಿಡಿದು ಉಜ್ಜುವುದುಂಟು.

ಈ ಮೇಲೆ ಹೇಳಿರುವ ಮುಖ್ಯ ಸಾಧನಗಳೊಂದಿಗೆ 'ಆವೆ ಮಣ್ಣು' ಭೂಮಿಯ ಒಂದೆರಡು ಅಡಿ ಆಳದಲ್ಲಿರುವುದರಿಂದ, ತೆಗೆಯಲು ಹಾರೆ, ಪಿಕ್ಕಾಸುಗಳೂ ಕೂಡಾ ಅಗತ್ಯ, ಸಾಮಾನ್ಯವಾಗಿ ಕೃಷಿಕೆಲಸದಲ್ಲಿ ಉಪಯೋಗವಾಗುವ ಹಾರೆ, ಪಿಕ್ಕಾಸುಗಳನ್ನೇ ಬಳಸುತ್ತಾರೆ. ಮಾತ್ರವಲ್ಲದೆ ಹೀಗೆ ತೆಗೆದ ಮಣ್ಣನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ಸಾಗಿಸಲು

"ಎತ್ತಿನ ಗಾಡಿ"ಯನ್ನು ಬಳಸುತ್ತಿದ್ದರು. ಈಗೀಗ ಲಾರಿ ಮುಂತಾದ ಘನ ವಾಹನಗಳನ್ನು ಉಪಯೋಗಿಸುತ್ತಾರೆ. ಪೂರ್ಣಗೊಂಡ ಪಾತ್ರೆಗಳನ್ನು ಮಾರುಕಟ್ಟೆಗೆ ಹೊರಲು ಅಥವಾ ಮನೆ ಮನೆಗೆ ಹೊತ್ತುಕೊಂಡು ಹೋಗಲು ಎರಡು ರೀತಿಯ ಸಾಧನಗಳನ್ನು ಬಳಸುತ್ತಾರೆ. ೧. "ದಂಡ್" ಮತ್ತು ೨. "ಪುಡಯಿ" 'ದಂಡ್' ಎನ್ನುವುದು ೫ ರಿಂದ ೬ ಅಡಿ ಉದ್ದದ ಬಿದಿರು. ಈ ಬಿದಿರಿನ ಒಂದೊಂದು ಬದಿಗೂ ೮ ರಿಂದ ೧೦ ಮಡಿಕೆಗಳನ್ನು ಸಮತೂಕವಾಗುವಂತೆ ಕಟ್ಟಿ ಬಿದಿರಿನ ಮಧ್ಯಭಾಗಕ್ಕೆ ತಲೆಕೊಟ್ಟು ಹೊರುತ್ತಾರೆ. 'ಪುಡಯಿ' ಎಂದರೆ ಬಳ್ಳಿಯಿಂದ ಮಾಡಿದ ದೊಡ್ಡ ಬುಟ್ಟಿ. ಇದು ಹೆಚ್ಚಾಗಿ ಸಣ್ಣ ಗಾತ್ರದ ಪಾತ್ರೆಗಳನ್ನು ಹೊರಲು ಉಪಯುಕ್ತ. ಇವುಗಳಲ್ಲಿ ದಂಡು (ಬಿದಿರು) ಪುರುಷರು ಉಪಯೋಗಿಸಿದರೆ, ಎರಡನೆಯನ್ನು (ಪುಡಯಿ) ಮಹಿಳೆಯರು ಪಾತ್ರೆ ಹೊರಲು ಬಳಸುತ್ತಾರೆ.

ತಯಾರಿಕೆಯ ವಿವಿಧ ಹಂತಗಳು (ಪ್ರಕ್ರಿಯೆ) :

ನಾಗರಿಕತೆಯ ಆದಿಯಿಂದಲೇ ಕುಂಭಕಲೆ ರೂಢಿಯಲ್ಲಿತ್ತು ಎನ್ನುವುದಕ್ಕೆ ಹಲವಾರು ನಿದರ್ಶನಗಳಿವೆ. ಮೊದಮೊದಲು ಸುಡದೆ ಇರುವ ಮಡಿಕೆಗಳನ್ನು ಬೇರೆ ಬೇರೆ ತಮ್ಮ ನಿತ್ಯ ಬಳಕೆಗೆ ಬೇಕಾದ ಗೆಡ್ಡೆ ಗೆಣಸುಗಳನ್ನು, ಹಣ್ಣು ಹಂಪಲುಗಳನ್ನು ಸಂಗ್ರಹಿಸಿಡಲು ಬಳಸುತ್ತಿದ್ದರು. ಆಹಾರವನ್ನು ಬೇಯಿಸುವ ಕಲೆಯನ್ನು ತಿಳಿದುಕೊಂಡ ಮೇಲೆ ಸುಟ್ಟ ಮಡಿಕೆಗಳ ಬಳಕೆ ಆರಂಭವಾಯಿತು. ಇದು ವಿಶ್ವದ ಇಂತಹುದೆ ಪ್ರದೇಶದಲ್ಲಿ ಬೆಳೆದು ಬಂತೆಂದು ಹೇಳುವುದು ಕಷ್ಟ. ಮಾನವ ಎಲ್ಲೆಲ್ಲಿ ನೆಲೆಸಿದನೋ ಅಲ್ಲಲ್ಲಿ ನಡೆದು ಬಂದ ಪ್ರಕ್ರಿಯೆ ಇದಾಗಿರಬಹುದು. ಭಾರತದ ಕುಂಭಕಲೆಯಲ್ಲಿ ಹೆಚ್ಚಿನ ಯಾವುದೇ ಬೆಳವಣಿಗೆ ಕಂಡು ಬರುತ್ತಿಲ್ಲ. ಇಂದು ಬಳಕೆಯಲ್ಲಿರುವ ಕುಂಭ ಜಾತಿಯ ವಸ್ತುಗಳ ರೂಪರೇಖೆಗಳು ಸಾವಿರಾರು ವರ್ಷಗಳ ಹಿಂದೆ ಮೂಡಿ ಬಂದು ಪರಿಷ್ಕರಿಸಲ್ಪಟ್ಟಂತಹವು. ದಕ್ಷಿಣ ಕನ್ನಡದಲ್ಲಿರುವ ಕುಂಬಾರಿಕೆಯು ಈ ರೀತಿ ನಡೆಯುತ್ತದೆ. ಮೊದಲು ಆವೆ ಮಣ್ಣನ್ನು ತಂದು ತಮ್ಮ ಮನೆಯ ಮುಂದಿರುವ ಒಂದು ಕೃತಕವಾದ ಹಳ್ಳಕ್ಕೆ ಹಾಕುತ್ತಾರೆ. ನಂತರ ಅದಕ್ಕೆ ನೀರು ಹಾಕಿ ನೆನೆಯಲು ಬಿಡುತ್ತಾರೆ. ಮರುದಿನ ಮಣ್ಣನ್ನು ತೆಗೆದು ಒಂದು ಸ್ವಚ್ಛವಾದ ಜಾಗದಲ್ಲಿ ರಾಶಿ ಹಾಕುತ್ತಾರೆ. ನಂತರ ಅದನ್ನು ಸರಿಯಾಗಿ

ಅಂಟಾಗಿಸಿ ಅದರಲ್ಲಿರುವ ಕಸಕಡ್ಡಿಗಳನ್ನು ಈಸುಕೋಲಿನಿಂದ ತೆಗೆಯುತ್ತಾರೆ. ರಾಶಿ ಇರುವ ಮಣ್ಣನ್ನು ಈಸುಕೋಲಿನಿಂದ ಸ್ವಲ್ಪ ಸ್ವಲ್ಪವೇ ಎಳೆದು ಹಾಕುತ್ತಾರೆ. ಈ ಪ್ರಕ್ರಿಯೆ ಪೂರ್ತಿಯಾದ ನಂತರ ಮಣ್ಣನ್ನು ಹದಮಾಡಿ ತಟ್ಟಿ ಒಂದೊಂದು ಪಾತ್ರೆಗೆ ಬೇಕಾದಷ್ಟು ಮಣ್ಣನ್ನು ಗುಂಡಾಗಿ ಮಾಡಿ ಕೈ ಮತ್ತು ಕಣ್ಣಿನ ಅಂದಾಜಿನಲ್ಲಿ ಚಕ್ರದ ಮೇಲಿಟ್ಟು ತಿರುಗಿಸಿ ಮಡಕೆಗಳ ಆಕಾರವನ್ನು ಕೊಡುತ್ತಾರೆ. ಈ ಪ್ರಕ್ರಿಯೆಗೆ ಸಾಮಾನ್ಯವಾಗಿ ಎರಡು ಜನ ಬೇಕಾಗುತ್ತದೆ. ಹೆಚ್ಚಾಗಿ ಮಹಿಳೆಯರು ತಿಗರಿಯನ್ನು ತಿರುಗಿಸಿದರೆ ಪುರುಷರು ಚಕ್ರದ ಮಧ್ಯೆ ಮಣ್ಣಿಟ್ಟು ಅದಕ್ಕೆ ಆಕಾರ ಕೊಡುತ್ತಾರೆ. ಹೀಗೆ ಒಣಗಿದ ಪಾತ್ರೆಗಳನ್ನು 'ಬಳೆತುನ' ಎನ್ನುವರು. ಹೀಗೆ ರಚಿಸಲ್ಪಟ್ಟ ಪಾತ್ರೆಗಳನ್ನು ಬಿಸಿಲಿನಲ್ಲಿಟ್ಟು ನಿರ್ದಿಷ್ಟ ಸಮಯದವರೆಗೆ ಒಣಗಲು ಬಿಡುತ್ತಾರೆ. ಹೀಗೆ ಒಣಗಿದ ಪಾತ್ರೆಗಳನ್ನು 'ಕಲ್ಲು' ಮತ್ತು 'ಪೊಲಿ'ಯ ಸಹಾಯದಿಂದ ತಟ್ಟಿ ಸರಿಯಾದ ಆಕೃತಿ ಕೊಡುತ್ತಾರೆ. ಮಡಿಕೆಗಳು ಆಕರ್ಷಕವಾಗಿರಲು ಅವುಗಳ ಮೇಲೆ ಸಣ್ಣ ಕಲ್ಲಿನಿಂದ ಯಾ ಸಣ್ಣ ಕಡ್ಡಿಯಿಂದ ಬಳ್ಳಿಯ ಅಥವಾ ಹೂವಿನ ಚಿತ್ರಗಳನ್ನು ಬರೆಯುತ್ತಾರೆ. ಕುಂಬಾರನ ಕೈಚಳಕ ಮತ್ತು ನಿಪುಣತೆಯನ್ನು ಅವಲಂಬಿಸಿಕೊಂಡು ಈ ಚಿತ್ರಗಳು ಮಡಿಕೆಯಿಂದ ಮಡಿಕೆಗೆ ವೈವಿಧ್ಯವಾಗಿರುತ್ತವೆ.

ಮೇಲಿನ ಪ್ರಕ್ರಿಯೆ ಕೊನೆಗೊಳ್ಳುತ್ತಲೇ ಒಂದು ಪಾತ್ರೆಯಲ್ಲಿ ಆವೆ ಮಣ್ಣಿನ (ನಯವಾದ) ಕೆಸರನ್ನು ತಯಾರಿಸಿಟ್ಟುಕೊಂಡಿರುತ್ತಾರೆ. ಪಾತ್ರೆಯ ಮೇಲೆ ಉಳಿದಿರುವ ಸಣ್ಣ ಪುಟ್ಟ ಗುಳ್ಳೆ ಅನಗತ್ಯವಾರುವ ಗೆರೆ ತೂತುಗಳು ಮಾಸುವುದಕ್ಕಾಗಿ ಪಾತ್ರೆಗಳ ಮೇಲೆ ನಯವಾಗಿ ಸವರಿ ಮತ್ತೆ ಒಣಗಲು ಬಿಸಿಲಿಗಿಡುತ್ತಾರೆ. ಕುಂಬಾರಿಕೆಯಲ್ಲಿ ಕೊನೆಯ ಮತ್ತು ಪ್ರಾಮುಖ್ಯವಾದ ಹಂತ ಪಾತ್ರೆಗಳನ್ನು ಸುಡುವುದು. ಕುಂಬಾರ ಕೊಟ್ಟಿಗೆಯಲ್ಲಿ ೧೦ ರಿಂದ ೧೫ ಅಡಿ ವ್ಯಾಸವುಳ್ಳ ಒಂದೂವರೆ ಅಡಿ ಆಳದ ಒಂದು ಕೃತಕ ಗುಳಿಯಿರುತ್ತದೆ. ಇದನ್ನು ತುಳುವಿನಲ್ಲಿ 'ಆವೆ' ಎನ್ನುವರು. ಈ ಆವೆಯಲ್ಲಿ ಎರಡು ವಿಧ.

1. ಓಳಿಯ ಆವೆ
2. ಸಾಮಾನ್ಯ ಆವೆ

"ಒಳಿಯ ಆವೆ" ಯು 15 ರಿಂದ 20 ಅಡಿ ಉದ್ದ ಮತ್ತು 6 ರಿಂದ 8 ಅಡಿ ಅಗಲವಿರುವ ಆಯತಾಕಾರದ ಆವೆ. "ಸಾಮಾನ್ಯ ಆವೆ" ವೃತ್ತಾಕಾರದ್ದಾಗಿದ್ದು ಅಗಲ 10 ರಿಂದ 15 ಅಡಿ ಇರುತ್ತದೆ. ದಕ್ಷಿಣ ಕನ್ನಡದಲ್ಲಿ ಹೆಚ್ಚಾಗಿ ಸಾಮಾನ್ಯ ಆವೆಯನ್ನು ಬಳಸಿಕೊಳ್ಳುತ್ತಾರೆ. ಮೊದಲು ಈ ರಚನೆಯ ಒಳಗಡೆ ಕಟ್ಟಿಗೆಯನ್ನು ಉರಿಯಲು ಅನುಕೂಲವಾಗುವಂತೆ ಜೋಡಿಸುತ್ತಾರೆ. ಅದರ ಮೇಲೆ ಕಟ್ಟಿಗೆಯ ಹುಡಿಯನ್ನು ಚೆನ್ನಾಗಿ ಪಸರಿಸಿ ಮೊದಲು ದೊಡ್ಡ ಮಡಿಕೆಗಳನ್ನು ಅನಂತರ ಸಣ್ಣದನ್ನು ಒಂದೊಂದನ್ನೇ ವ್ಯವಸ್ಥಿತವಾಗಿ ಕಟ್ಟಿಗೆಯ ಮೇಲೆ ಜೋಡಿಸುತ್ತಾರೆ. ಪಾತ್ರೆಗಳು ಒಂದಕ್ಕೊಂದು ತಾಗಿ ಬಿರುಕು ಬಿಡದಂತೆ ಪಾತ್ರೆಗಳ ಮಧ್ಯೆ ಬೈ ಹುಲ್ಲಿನ ಬಂಡೆಗಳನ್ನು ಉಪಯೋಗಿಸುತ್ತಾರೆ. ಮೇಲಕ್ಕೆ ಬಂದಂತೆ ಸಣ್ಣ ಹಣತೆ, ಹರವಿ, ಇತ್ಯಾದಿಗಳನ್ನು ಕೂರಿಸಿ ಅದರ ಮೇಲೆ ದಪ್ಪನೆ ಬೈ ಹುಲ್ಲನ್ನು ಹಾಸುತ್ತಾರೆ. ಬೆಂಕಿಯ ಜ್ವಾಲೆ ಪಾತ್ರೆಗಳ ಎಡೆಯಿಂದ ಹೊರಕ್ಕೆ ತೂರಿಕೊಳ್ಳದಂತೆ ಬೈಹುಲ್ಲಿನ ಮೇಲೆ ಕೆಸರು ಮಣ್ಣನ್ನು ದಪ್ಪಗೆ ಸವರುತ್ತಾರೆ. ಪಾತ್ರೆ ಸುಡುವ ಗುಂಡಿಯ (ಆವೆಯ) ಸುತ್ತಲೂ ಸಾಮಾನ್ಯವಾಗಿ ಮಣ್ಣಿನ ಗೋಡೆಯಿರುತ್ತದೆ. ಗೋಡೆಯಿಲ್ಲದ ಆವೆಯಾದಲ್ಲಿ ಪಾತ್ರೆಗಳನ್ನು ಜೋಡಿಸಿದ ನಂತರ ಸುತ್ತಲೂ ಬೈಹುಲ್ಲು ಮತ್ತು ಕೆಸರು ಮಣ್ಣಿನ ಹೊದಿಕೆಯನ್ನು ಹಾಕುತ್ತಾರೆ. ಪಾತ್ರೆಗಳನ್ನು ಜೋಡಿಸುವಾಗಲೇ ಎದುರುಗಡೆ ಬೆಂಕಿ ಹಾಕಲು ಅನುಕೂಲವಾಗುವಂತೆ ಆವೆಯ ಕೆಳಭಾಗದಲ್ಲಿ ಖಾಲಿ ಬಿಟ್ಟಿರುತ್ತಾರೆ. ಈಗ ಮೆಲ್ಲನೆ ಆ ಜಾಗದಲ್ಲಿ ಬೆಂಕಿ ಹಚ್ಚುತ್ತಾರೆ. ಬೆಂಕಿ ಹಚ್ಚಿ ಸಾಧಾರಣ 6 ಗಂಟೆಗಳ ನಂತರ ಅಲ್ಲಲ್ಲಿ ತೊಳುವೆಗಳನ್ನು ಒಂದೊಂದಾಗಿ ತೆರೆಯುತ್ತಾರೆ. ಎಲ್ಲಾ ರಂಧ್ರಗಳನ್ನು ತೆರೆದು ಬಿಟ್ಟು ಬೆಂಕಿ ಎಲ್ಲಾ ಪಾತ್ರೆಗಳಿಗೂ ಹರಿಯಲು ಬಿಡುತ್ತಾರೆ. ಮಡಿಕೆಗಳನ್ನು ಸುಡಲು 10 ರಿಂದ 12 ಗಂಟೆ ತಗಲಿದರೆ ಒಟ್ಟು ಈ ಆವೆಯ ಪ್ರಕ್ರಿಯೆಗೆ 24 ತಾಸು ತಗಲುತ್ತದೆ. ಕುಂಬಾರರು ಈ ದಿನಗಳಲ್ಲಿ ನಿದ್ದೆ ಊಟ ಬಿಟ್ಟು ದುಡಿಯುತ್ತಿರುತ್ತಾರೆ. ಬೆಂಕಿ ಪೂರ್ತಿಯಾಗಿ ನಂದಿ ಹೋದ ನಂತರ ಪಾತ್ರೆಗಳನ್ನು ಹೊರ ತೆಗೆಯುತ್ತಾರೆ.

ಮಣ್ಣನ್ನು ತಂದು ಅಂಟು ಮಾಡುವಲ್ಲಿಂದ ಪಾತ್ರೆಗಳನ್ನು ಸುಟ್ಟು ಹೊರತೆಗೆಯಬೇಕಾದರೆ ಒಂದು ತಿಂಗಳ ಶ್ರಮ ಬೇಕಾಗಿದ್ದು, ಕುಂಬಾರನ

ಶ್ರಮದ ಪ್ರತಿಫಲ ಪೂರ್ತಿಯಾಗಿ ಪಾತ್ರೆಗಳನ್ನು ಹೊರತೆಗೆದ ನಂತರವೇ ತಿಳಿಯಬೇಕಷ್ಟೆ. ಏಕೆಂದರೆ ಪಾತ್ರೆಗಳನ್ನು ಬೇಯಿಸುವ ಅಥವಾ ಒಣಗಿಸುವ ಪ್ರಕ್ರಿಯೆ ಹೆಚ್ಚು ಕಡಿಮೆಯಾದಲ್ಲಿ ರಾಶಿಯಲ್ಲಿದ್ದ ಅಷ್ಟೂ ಪಾತ್ರೆಗಳು ಒಡೆದು ಹೋಗುವುದುಂಟು. ಒಟ್ಟಿನಲ್ಲಿ ಅನುಭವೀ ಕುಂಬಾರರ ಪ್ರಕಾರ ಕುಂಬಾರಿಕೆ ಓರ್ವನ ಅದೃಷ್ಟವನ್ನು ಅವಲಂಬಿಸಿದೆ.

ಕೆಲಸಕ್ಕೆ ಎದುರಾಗುವ ಅಡ್ಡಿ ಆತಂಕಗಳು

ಕುಂಭಕಲೆ ಮೂಲತಃ ಲಾಭದಾಯಕವಲ್ಲ. ಎಲ್ಲಾ ದಿನ ಬಳಕೆಯ ವಸ್ತುಗಳ ಬೆಲೆಯೂ ದಿನೇ ದಿನೇ ಹೆಚ್ಚುತ್ತಿದ್ದರೆ ಕುಂಬಾರನ ಗಡಿಗೆ ಮಡಿಕೆಗಳ ಬೆಲೆ ಇಳಿಯುತ್ತಿದೆ. ರಾಜ್ಯದ ಎಲ್ಲಾ ಕಡೆಯು ಕುಂಬಾರರ ಸಹಕಾರಿ ಸಂಘಗಳಿದ್ದರೂ ಸರಿಯಾದ ಅನುಕೂಲತೆಗಳಿಲ್ಲದ ಕಾರಣ ತಯಾರಿಸಿದ ವಸ್ತುಗಳಿಗೆ ಸೂಕ್ತ ಬೆಲೆ ಪಡೆಯುವುದು ಕಷ್ಟವಾಗಿದೆ. ದಕ್ಷಿಣ ಕನ್ನಡದ ಕುಂಬಾರರು ಕೆಲವು ತಾಂತ್ರಿಕ ಮತ್ತು ಮೂಲ ಸಮಸ್ಯೆಗಳನ್ನು ಎದುರಿಸುತ್ತಿರುವುದನ್ನು ಕಾಣಬಹುದು.

1. **ಉತ್ತಮ ಗುಣಮಟ್ಟದ ಮಣ್ಣಿನ ಕೊರತೆ** : ದಕ್ಷಿಣ ಕನ್ನಡದಲ್ಲಿ ಕುಂಬಾರಿಕೆಗೆ ಬೇಕಾಗಿರುವ ಮಣ್ಣಿನ ಅಭಾವವೂ ಕಂಡು ಬರುತ್ತದೆ. ಎಲ್ಲಾ ಕಡೆಯ ಮಣ್ಣಿನಿಂದ ಮಡಕೆಗಳನ್ನು ತಯಾರಿಸಲು ಸಾಧ್ಯವಿಲ್ಲ. ಕೆಳಮಟ್ಟದ ಮಣ್ಣಿನಿಂದ ತಯಾರಿಸಿದ ಪಾತ್ರೆಗಳು ಹೆಚ್ಚು ಬಾಳ್ವಿಕೆ ಬರುವುದಿಲ್ಲ. ಒಂದು ವೇಳೆ ಮಣ್ಣು ದೊರೆತರೂ ಬೇಕಾದಷ್ಟು ಸಿಗದೇ ಹೋದರೆ ಮಡಿಕೆಗಳನ್ನು ತಯಾರಿಸುವುದು ಸಾಧ್ಯವಿಲ್ಲ. ಕುಂಬಾರಿಕೆಗೆ ಕಲ್ಲಿರದ ಕಪ್ಪು ನಮೂನೆಯ ಉತ್ತಮವಾದ ಮಣ್ಣು ಬೇಕಾಗುವುದು.

   ಇಂತಹ ಮಣ್ಣು ಎಲ್ಲಾ ಕಡೆಯಲ್ಲಿ ದೊರಕುವುದಿಲ್ಲ. ಒಂದು ವೇಳೆ ಮಣ್ಣು ದೊರೆತರೂ ಅಂತಹ ಸ್ಥಳಗಳಲ್ಲಿ ಮಣ್ಣು ತರಲು ಅಡ್ಡಿ ಮಾಡುವ ಜನರಿಗೇನೂ ಕೊರತೆಯಿಲ್ಲ. ಒಂದು ಕಡೆಯಿಂದ ಸ್ವಲ್ಪ ಮಣ್ಣು ಒಟ್ಟು ಮಾಡಿ ಇನ್ನೊಂದು ಕಡೆಯಿಂದ ಇದಕ್ಕೆ ಸೇರಿಸಿಕೊಂಡು ಬರಬೇಕಾದ ಸಂದರ್ಭಗಳೂ ಇರುತ್ತವೆ. ಇದಲ್ಲದೆ ಮಣ್ಣನ್ನು ಒಂದು ಕಡೆಯಿಂದ ಕುಂಬಾರನ ಮನೆಗೆ ಸಾಗಿಸುವುದು ಇನ್ನೊಂದು ಸಮಸ್ಯೆ. ಎತ್ತಿನ ಗಾಡಿಗಳು ಮಾಯವಾಗುತ್ತಿರುವುದರಿಂದ ಘನ ವಾಹನಗಳಿಗೆ

ದುಬಾರಿ ಬಾಡಿಗೆ ತೆತ್ತು ಸಾಗಿಸಬೇಕಾಗುತ್ತದೆ.

2. **ಆಕಾಲಿಕ ಮಳೆ ಮತ್ತು ಅತಿವೃಷ್ಟಿ** : ಕುಂಭಕಲೆಗೆ ಯೋಗ್ಯವಾದುದು ಬೇಸಿಗೆಕಾಲ. ಇದಕ್ಕೆ ಬಿಸಿಲು ತುಂಬಾ ಅಗತ್ಯ. ಮೋಡ ಕವಿದ ವಾತಾವರಣವಿದ್ದರೆ ಯೋಜಿತ ಸಮಯಕ್ಕೆ ಪಾತ್ರೆಗಳು ಒಣಗುವುದಿಲ್ಲ. ಸಮಯಕ್ಕೆ ಸರಿಯಾಗಿ ಪಾತ್ರೆಗಳು ಒಣಗದಿದ್ದರೆ ಪಾತ್ರೆಗಳನ್ನು ಸುಡುವುದೂ ಕಷ್ಟವಾಗುತ್ತದೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಇಂದಿಗೂ ಬಂದಿಲ್ಲ. ಆಕಾಲದಲ್ಲಿ ಮಳೆಯಾದರೆ ಕುಂಬಾರನ ಗೋಳು ಹೇಳತೀರದು. ಬೇಸಿಗೆಯಲ್ಲಿಯೇ ೩೫ ರಿಂದ ೪೦ ದಿನಗಳು ಬೇಕಾಗುವುದರಿಂದಾಗಿ ಮಳೆಯಾದರೆ ಕುಂಬಾರಿಕೆಗೆ ಕೊಡಲಿಯೇಟೇ ಸರಿ.

೩. **ಕಟ್ಟಿಗೆಯ ಸಮಸ್ಯೆ** : ಕುಂಬಾರರಿಗೆ ತಮ್ಮ ಭೂಮಿಯ ವ್ಯಾಪ್ತಿಯಲ್ಲಿಯೇ ಸಾಕಷ್ಟು ಮರಗಿಡಗಳಿದ್ದರೆ ತುಂಬಾ ಅನುಕೂಲ. ಕುಂಬಾರಿಕೆಯಲ್ಲಿರುವ ಹೆಚ್ಚಿನ ಕುಟುಂಬಗಳು ಭೂರಹಿತ ಕುಟುಂಬಗಳೇ ಆದುದರಿಂದ ಉರುವಲು ಎಷ್ಟೇ ದುಬಾರಿಯಾದರೂ ಹಣ ಕೊಟ್ಟು ಪಡೆಯಬೇಕಾಗಿದೆ. ಮಾತ್ರವಲ್ಲದೆ ಮಳೆಗಾಲಕ್ಕೆ ಬೇಕಾದ ಕಟ್ಟಿಗೆಯನ್ನು ಬೇಸಿಗೆಯಲ್ಲಿಯೇ ಶೇಖರಿಸಬೇಕಾಗುತ್ತದೆ. ಕೆಲವು ಮನೆಗಳಲ್ಲಿ ಕಟ್ಟಿಗೆ ರಾಶಿ ಹಾಕಲು ಕೊಟ್ಟಿಗೆಯ ವ್ಯವಸ್ಥೆ ಇರುವುದಿಲ್ಲ. ಆದೆಷ್ಟೋ ಕುಟುಂಬಗಳು ಈ ಸಮಸ್ಯೆಗಳನ್ನು ಎದುರಿಸುವ ಶಕ್ತಿ ಇಲ್ಲದೆ ಮಳೆಗಾಲದಲ್ಲಿ ಕೂಲಿ ಕೆಲಸವನ್ನು ಅವಲಂಬಿಸಿರುವುದು ಕಂಡು ಬರುತ್ತದೆ.

4. **ದುಬಾರಿ ಬೈಹುಲ್ಲು** : ದನಕರುಗಳು ಮೇವಿಗೆ ಪರದಾಡಬೇಕಾದ ಈ ಕಾಲದಲ್ಲಿ ಕುಂಬಾರಿಕೆಗೆ ಬೈಹುಲ್ಲನ್ನು ಉಪಯೋಗಿಸುವುದೊಂದು ಸಾಧನೆಯೇ ಸರಿ. ಆದರೆ ದಿನಕಳೆದಂತೆಲ್ಲಾ ಬೈಹುಲ್ಲಿನ ಬೆಲೆ ಆಕಾಶಕ್ಕೇರುತ್ತಿದೆ. ಕುಂಬಾರಿಕೆಯಿಂದ ಜನ ದೂರವಾಗುತ್ತಿರುವುದಕ್ಕೆ ಇದೂ ಒಂದು ಕಾರಣ. ಬೈಹುಲ್ಲನ್ನು ಸಾಗಿಸುವುದೂ ಇದಕ್ಕೆ ಸಂಬಂಧಿಸಿದ ಮತ್ತೊಂದು ಸಮಸ್ಯೆ.

5. **ಆವೆ ಮತ್ತು ಆಳು** : ಕುಂಬಾರಿಕೆಗೆ ಮನೆಯವರೇ ಅಲ್ಲದೆ ಹೆಚ್ಚುವರಿ ಆಳಿನ ಅವಶ್ಯಕತೆ ಇರುತ್ತದೆ. ನಗರಗಳೊಂದಿಗೆ ಹಳ್ಳಿಗಳಲ್ಲಿಯೂ

ದಿನಕೂಲಿ ಇದ್ದಕ್ಕಿದ್ದಂತೆಯೇ ಹೆಚ್ಚುತ್ತಿರುವುದು ಕುಂಬಾರನ ದುರಂತವೇ ಸರಿ. ದೊಡ್ಡ ಗಾತ್ರದ ಪಾತ್ರೆಗಳನ್ನು (ಗುಡಾಣ ಅಥವಾ ಕಪ್ಪಲ್ ಇತ್ಯಾದಿ) ತಯಾರಿಸುವ ದಿನಗಳಲ್ಲಿ ಮಾತ್ರವಲ್ಲದೆ ಕಟ್ಟಿಗೆಗೆ ಬೇಕಾದ ಮರಗಳನ್ನು ಸಾಗಿಸುವ ಮತ್ತು ಆವೆ ಹಾಕುವ ದಿನಗಳಲ್ಲಿ ಆಳಿನ ಅಗತ್ಯ ಹೆಚ್ಚಿರುತ್ತದೆ. ಆವೆ ಹಾಕುವ ದಿನಗಳಲ್ಲಿ ಎಷ್ಟು ಅಗತ್ಯವಿರುತ್ತದೆಯೆಂದರೆ ಈ ದಿನಗಳಲ್ಲಿ ಮನೆಗೆ ಅತಿಥಿಗಳಿದ್ದರೆ ಅವರೂ ಕೈ ಜೋಡಿಸಬೇಕಾಗುತ್ತದೆ. ಹೆಚ್ಚಿನ ಸಮಯದಲ್ಲಿ ಶಾಲೆ ಹೋಗುತ್ತಿರುವ ಮಕ್ಕಳನ್ನೂ ದುಡಿಸುವುದುಂಟು. ಇದರಿಂದಾಗಿ ಶಿಕ್ಷಣ ವಂಚಿತರಾದವರೂ ಇದ್ದಾರೆ.

6. **ಹ್ಯೊಯ್ಗೆಯ ಸಾಗಾಟ** : ತೆಳ್ಳಗಿನ ನಯವಾದ ಹ್ಯೊಯ್ಗೆ ಕುಂಬಾರಿಕೆಗೆ ಅಗತ್ಯ. ಇದು ಎಲ್ಲಾ ಕಡೆಗಳಲ್ಲಿಯೂ ಸಿಗುವುದಿಲ್ಲ. ಇದನ್ನು ಒಟ್ಟು ಮಾಡುವುದು ಮತ್ತು ಸಾಗಿಸುವುದು ಕಷ್ಟದ ಕೆಲಸ. ಹ್ಯೊಯ್ಗೆಯನ್ನು ಹೊತ್ತು ತರುವುದೇ ಹೆಚ್ಚು ಪ್ರಯಾಸದ ಕೆಲಸ. ಲವಣಾಂಶವಿರುವ ಹ್ಯೊಯ್ಗೆಯನ್ನು ಹುಡುಕಿ ತರಬೇಕಾಗುತ್ತದೆ.

7. **ಕುಗ್ಗುತ್ತಿರುವ ಬೇಡಿಕೆ** : ಕಷ್ಟಪಟ್ಟು ತಯಾರಿಸಿದ ಮಡಿಕೆಗಳಿಗೆ ಒಂದೇ ರೀತಿಯ ಬೇಡಿಕೆ ಇರುವುದಿಲ್ಲ. ಇವುಗಳಿಗೆ ಬೆಲೆ ನಿಗದಿ ಪಡಿಸುವುದು ಇನ್ನೊಂದು ಸಮಸ್ಯೆ. ಹಿಂದಿನ ಕಾಲದಲ್ಲಿ ಪಾತ್ರೆಗಳನ್ನು ಮನೆಮನೆಗೆ ಹೊತ್ತು ತಿರುಗುತ್ತಿದ್ದರು. ಹೀಗೆ ದಿನವಿಡೀ ತಿರುಗಾಡಿದರೂ ಕೆಲವೇ ಪಾತ್ರೆಗಳು ಮಾರಾಟವಾಗುತ್ತಿದ್ದು ಅವರ ಶ್ರಮಕ್ಕೆ ತಕ್ಕ ಪ್ರತಿಫಲ ಸಿಗುತ್ತಿರಲಿಲ್ಲ. ಈ ರೀತಿ ಹೊತ್ತುಕೊಂಡು ದೂರದ ಊರಿಗೆ ಹೋಗಬೇಕಾದುದರಿಂದ ಕತ್ತಲಾದಾಗ ಅಪರಿಚಿತರ ಮನೆಯಲ್ಲಿಯೇ ಉಳಿದುಕೊಳ್ಳಬೇಕಾದ ಸಂದರ್ಭಗಳೂ ಬರುತ್ತವೆ. ಇತ್ತೀಚಿನ ದಿನಗಳಲ್ಲಿ ಕೆಲವೇ ಮಡಿಕೆಗಳಿಗೆ ಬೇಡಿಕೆಯಿರುವುದರಿಂದ, ಕುಂಬಾರಿಕೆಯಂತಹ ಗ್ರಾಮೀಣ ಸಮಾಜದ ಶ್ರೀಮಂತ ಸಂಸ್ಕೃತಿ ಅಪಾಯದ ಅಂಚಿನಲ್ಲಿದೆ.

ಮಹಿಳೆಯರ ಪಾತ್ರ

ಕುಂಬಾರಿಕೆಯಲ್ಲಿ ಮಹಿಳೆಯರ ಪಾತ್ರವೂ ಪುರುಷರಷ್ಟೇ ಪ್ರಾಮುಖ್ಯ.

ಹಿಂದಿನ ಕಾಲದಿಂದಲೂ ಗುಡಿಕೈಗಾರಿಕೆಗಳಲ್ಲಿ ಮಹಿಳೆಯರು ಶ್ರಮಿಸಿದ್ದು ಮತ್ತು ಗಳಿಸಿರುವುದನ್ನು ಕಾಣಬಹುದು. ಕುಂಬಾರಿಕೆಯಲ್ಲಿಯೂ ಮಣ್ಣು ಕೂಡುವಲ್ಲಿಂದ ಹಿಡಿದು ಮಡಿಕೆಗಳ ಮಾರಾಟದವರೆಗೆ ಎಲ್ಲಾ ಕೆಲಸಗಳಲ್ಲಿಯೂ ಪಾಲ್ಗೊಳ್ಳುತ್ತಾರೆ. ಮುಖ್ಯವಾಗಿ ಮಡಿಕೆಗಳಿಗೆ ರೂಪು ಕೊಡುವಾಗ ತಿಗರಿಯನ್ನು ಮಹಿಳೆಯರೇ ತಿರುಗಿಸುತ್ತಾರೆ. ಇದು ಕುಂಬಾರಿಕೆಯಲ್ಲಿ ಅತ್ಯಂತ ಸುಲಭದ ಮತ್ತು ಪ್ರಾಮುಖ್ಯತೆಯ ಚಟುವಟಿಕೆ. ಕುಂಬಾರಿಕೆಯಲ್ಲಿ ನುರಿತ ಮಹಿಳೆಯರಾದರೆ ಪಾತ್ರೆಗಳಿಗೆ ರೂಪು ಕೊಡುವ ಕೆಲಸವನ್ನು ಮಾಡುತ್ತಾರೆ. ಇದರೊಂದಿಗೆ ಮಣ್ಣು ಹೊರುವುದು, ಕಟ್ಟಿಗೆ ಹೊರುವುದು, ಪಾತ್ರೆಗಳು ಬಿಸಿಲಿನಿಂದ ತೆರೆದ ನಂತರ ತಟ್ಟುವುದು ಮುಂತಾದ ಕೆಲಸಗಳಲ್ಲಿ ತೊಡಗಿರುತ್ತಾರೆ. ವಿಶೇಷವಾಗಿ ಮಹಿಳೆಯರಿಂದಲೇ ಆಗುವ ಕೆಲಸವೆಂದರೆ ಮಣ್ಣಿನ ಕಸಕಡ್ಡಿಗಳನ್ನು ಬೇರ್ಪಡಿಸುವುದು. ಇದು ತುಂಬಾ ಸೂಕ್ಷ್ಮವಾದ ಮತ್ತು ತಾಳ್ಮೆಯ ಕೆಲಸವಾದ್ದರಿಂದ ಮಹಿಳೆಯರಿಗೇ ಸೀಮಿತವಾದ ಕೆಲಸವಾಗಿದೆ.

ಪಾತ್ರೆಗಳ ಮೇಲೆ ಹೂವು, ಬಳ್ಳಿ ಮುಂತಾದ ಚಿತ್ರಗಳನ್ನು ಬರೆಯುವುದರೊಂದಿಗೆ ಮಹಿಳೆಯರು ಪಾತ್ರೆಗಳಿಗೆ ಅಂತಿಮ ಕಳೆಯನ್ನು ಕೊಡುತ್ತಾರೆ. ಮಹಿಳೆಯರು ಸಾಧಾರಣ 8-10 ವರ್ಷಗಳ ಮೊದಲು ಪಾತ್ರೆಗಳನ್ನು ಹೊತ್ತು ಮಾರಾಟಕ್ಕಾಗಿ ಮನೆಮನೆಗೆ ತಿರುಗಾಡುತ್ತಿದ್ದರು. ಮುಕ್ತ ಮಾರುಕಟ್ಟೆಗಳಲ್ಲಿಯೂ ಮಹಿಳೆಯರು ಪಾತ್ರೆಗಳನ್ನು ಮಾರಾಟ ಮಾಡುತ್ತಾರೆ.

ಮಕ್ಕಳ ಪಾತ್ರ

ಕುಂಬಾರಿಕೆ ಪ್ರಕ್ರಿಯೆಯ ಪ್ರತಿಯೊಂದು ಹಂತವೂ ಸಮಯಕ್ಕೆ ಸರಿಯಾಗಿ ಮುಗಿಯಬೇಕಾಗಿರುವುದರಿಂದ ಕೆಲಸಕ್ಕೆ ಆಳುಗಳಿದ್ದಷ್ಟು ಕೆಲಸ ಚೊಕ್ಕವಾಗುತ್ತದೆ. ಇದಕ್ಕಾಗಿ ಹೆಚ್ಚಿನ ಕುಟುಂಬಗಳಲ್ಲಿ ಮಕ್ಕಳನ್ನು ಯಾವುದಾದರೊಂದು ಕೆಲಸದಲ್ಲಿ ತೊಡಗಿಸುತ್ತಾರೆ. ಸಾಮಾನ್ಯವಾಗಿ ತಿಗರಿಯಿಂದ ತೆಗೆದ ಪಾತ್ರೆಗಳನ್ನು ಬಿಸಿಲಿಗಿಡುವುದು ಮತ್ತು ಒಣಗಿದ ನಂತರ ಬಿಸಿಲಿನಿಂದ ತೆಗೆಯುವ ಕೆಲಸ ಮಾಡುತ್ತಾರೆ. ಕಟ್ಟಿಗೆ ಒಡೆದು ರಾಶಿ ಹಾಕುವ ಸಮಯದಲ್ಲಿಯೂ ಮಕ್ಕಳ ಸಹಕಾರ ಮುಖ್ಯವಾಗಿದೆ.

ಪುರುಷರ ಪಾತ್ರ

ಸಾಮಾನ್ಯವಾಗಿ ಕುಂಬಾರಿಕೆಯ ಎಲ್ಲಾ ಕೆಲಸಗಳು ಪುರುಷರಿಂದ ಸಾಗುತ್ತಿದೆ. ಕಟ್ಟಿಗೆ ಒಡೆಯುವುದು ವಿಶೇಷವಾಗಿ ಪುರುಷರಿಂದಲೇ ಆಗಬೇಕಾದ ಕೆಲಸ. ಅದೇ ರೀತಿ ಮಣ್ಣು ತುಂಬಾ ಆಳದಿಂದ ತೆಗೆಯಬೇಕಿದ್ದಲ್ಲಿ ಹಾರೆ, ಪಿಕ್ಕಾಸಿನ, ಕೆಲಸವೂ ಪುರುಷರಿಂದಲೇ ಆಗಬೇಕು. ಹ್ಯೊಯ್ಗೆ, ಮಣ್ಣು, ಕಟ್ಟಿಗೆ ಇತ್ಯಾದಿ ಹೊರುವ ಕಠಿಣ ಕೆಲಸಗಳಿಗೆ ಮಹಿಳೆಯರು, ಮಕ್ಕಳು ಕೈ ಜೋಡಿಸಿದರೂ ಪುರುಷರ ಪಾತ್ರವೇ ಹಿರಿದು.

ತಲೆಮಾರಿನಿಂದ ತಲೆಮಾರಿಗೆ ಕುಗ್ಗುತ್ತಿರುವ ಕುಂಬಾರಿಕೆ ಇನ್ನು ಕೆಲವೇ ವರ್ಷಗಳಲ್ಲಿ ನಶಿಸಿ ಹೋಗುವುದರಲ್ಲಿ ಸಂಶಯವಿಲ್ಲ. ಕುಂಬಾರರಲ್ಲಿ ಕಂಡುಬರುವ ವೃತ್ತಿ ಸಂಚಲನಾ ಪ್ರವೃತ್ತಿಗೆ ಅನೇಕ ಕಾರಣಗಳಿವೆ. ಅಭಿವೃದ್ಧಿ ಹೊಂದುತ್ತಿರುವ ಭಾರತೀಯ ಸಮಾಜದಲ್ಲಿ ವೃತ್ತಿ ಚಲನೆಗೆ ಹೆಚ್ಚಿನ ಅವಕಾಶವಿದೆ, ವ್ಯಕ್ತಿ ಸ್ವಾತಂತ್ರಕ್ಕೆ ಹೆಚ್ಚಿನ ಬೆಲೆಯೂ ಇದೆ. ತಾನು ಯಾವ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಹೇಗೆ ಜೀವಿಸಬೇಕು, ಯಾವ ಧರ್ಮವನ್ನು ಅನುಸರಿಸಬೇಕೆಂಬುದನ್ನು ವ್ಯಕ್ತಿಯೇ ನಿರ್ಧರಿಸುತ್ತಾನೆ. ಕಾನೂನು ಮತ್ತು ಪರಂಪರೆಯ ಮೂಲಕ ವ್ಯಕ್ತಿಯ ಮೇಲೆ ವೃತ್ತಿಯನ್ನು ಕಡ್ಡಾಯವಾಗಿ ಹೇರಲು ಸಾಧ್ಯವಿಲ್ಲ.

ದಕ್ಷಿಣ ಕನ್ನಡದಲ್ಲಿ ಕಂಡು ಬರುವ ಇನ್ನೊಂದು ಬೆಳವಣಿಗೆ ಎಂದರೆ ಶಿಕ್ಷಿತರ ಪ್ರಮಾಣ ಹೆಚ್ಚಿದಂತೆಲ್ಲಾ ಕುಲಕಸುಬಿನತ್ತ ಒಲವು ಕಡಿಮೆಯಾಗುತ್ತದೆ. ಅಕ್ಷರಸ್ಥ ಮತ್ತು ಅರೆ - ಅಕ್ಷರಸ್ಥ ಯುವಕರು ಬಿಳಿಪಟ್ಟಿ ಕೆಲಸಗಳನ್ನರಸಿ ಬೆಂಗಳೂರು, ಮುಂಬಯಿ, ಮುಂತಾದೆಡೆ ವಲಸೆ ಹೋಗುತ್ತಿರುವುದು ಸಾಮಾನ್ಯ. ಆಧುನಿಕ ಯುಗದ ಸುಖಭೋಗಗಳಿಗೆ ಗಂಟುಬಿದ್ದ ಮಣ್ಣಿನ ಮಕ್ಕಳು ಕುಲಕಸುಬಿನಿಂದ ದೂರ ಸರಿದದ್ದು ಮಾತ್ರವಲ್ಲದೆ ಪರಂಪರಾಗತವಾಗಿ ಬಂದಿದ್ದ ಹಳ್ಳಿಯ ಶ್ರೀಮಂತ ಸಂಸ್ಕೃತಿಯನ್ನು ಕೀಳಾಗಿ ಕಾಣುತ್ತಿದ್ದಾರೆ.

ಕುಂಭಕಲೆ ಕಣ್ಮರೆಯಾಗುತ್ತಿರುವ ಈ ಸಂದರ್ಭದಲ್ಲಿ ವೃತ್ತಿಯಲ್ಲಿ ಹೊಸ ಮಾದರಿಯ ಪ್ರವೇಶ ಅವರ ಕಸುಬುದಾರಿಕೆಯನ್ನು ಖಂಡಿತ ಬೆಳೆಸಬಹುದು. ಹೊಸ ಮಾದರಿಯ ಗಡಿಗೆಗಳ ತಯಾರಿಕೆ ತರಬೇತಿ, ಅಕ್ಷರಸ್ಥ ಮತ್ತು ನಿರುದ್ಯೋಗಿ

ಯುವಕರಿಗೆ ಕುಂಬಾರಿಕೆಯಲ್ಲಿ ಆಸಕ್ತಿ ಮೂಡಿಸುವುದು, ಸಣ್ಣ ಕೈಗಾರಿಕೆ ಮತ್ತು ಗುಡಿ ಕೈಗಾರಿಕೆಯ ಇಲಾಖೆಯಿಂದ ಆರ್ಥಿಕ ನೆರವು ನೀಡುವುದು, ಕುಂಬಾರಿಕೆಗೆ ನಿಗದಿತ ಮಾರುಕಟ್ಟೆ, ಗೋದಾಮು ಮತ್ತು ನಿಗದಿತ ಬೆಲೆ ಒದಗಿಸುವುದು. ಕುಂಬಾರರ ಸಹಕಾರಿ ಸಂಘಗಳು ಮತ್ತು ಕುಲಾಲ ಸಂಘಗಳು ವೃತ್ತಿ ಮತ್ತು ಸಮಾಜದ ಏಳಿಗೆಗೆ ಶ್ರಮಿಸುವುದು ಇವೇ ಮುಂತಾದ ಯೋಜನೆಗಳಿಂದ ಕಂಬಾರರು ನಶಿಸಿ ಹೋಗುತ್ತಿರುವ ಕಾರ್ಯಕ್ಷಮತೆಯನ್ನು ಹೆಚ್ಚಿಸಿಕೊಂಡು ಅಭಿವೃದ್ಧಿ ಪಥಕ್ಕೇರಲು ಸಾಧ್ಯ.

ದಕ್ಷಿಣ ಕರ್ನಾಟಕದಲ್ಲಿ ಕಮ್ಮಾರಿಕೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಜನಾಂಗದ ಸಂಕ್ಷಿಪ್ತ ಪರಿಚಯ :

ಕಬ್ಬಿಣದಿಂದ ವ್ಯವಸಾಯ, ಗೃಹ ನಿರ್ಮಾಣ, ಗೃಹ ಬಳಕೆ, ಬೇಟೆಯೇ ಮೊದಲಾದ ಕಾರ್ಯ ನಿರ್ವಹಿಸಲು ಅಗತ್ಯವಾದ ವಸ್ತುಗಳನ್ನು ತಯಾರು ಮಾಡುವ ಕಸುಬಿನವರೆ ಕಮ್ಮಾರರು. ನಂತರದಲ್ಲಿ ಕಸುಬು ಜಾತಿಯಾಗಿ ರೂಪಗೊಂಡಿತು. ಇವರ ಕಸುಬನ್ನು 'ಕಮ್ಮಾರಿಕೆ' ಎನ್ನುತ್ತಾರೆ. ಇವರು ವಸ್ತುಗಳನ್ನು ಸಿದ್ಧಪಡಿಸುವ ಜಾಗವನ್ನು 'ಕುಲುಮೆ ಮನೆ' ಎನ್ನುತ್ತಾರೆ.

ಹಿಂದಿನ ಕಾಲದಲ್ಲಿ ಇವರು ಗ್ರಾಮಗಳಲ್ಲಿ ವಾಸಿಸುತ್ತಾ ತಮ್ಮ ವೃತ್ತಿಯನ್ನು ನಿರ್ವಹಿಸುತ್ತಿದ್ದರು. ಆಗ ಒಕ್ಕಲುತನದ ಆಯದ ಮೇಲೆ ಜೀವನ ಸಾಗಿಸುತ್ತಿದ್ದರು. ಕಾಲ ಬದಲಾದಂತೆ ಜೀವನಾವಶ್ಯಕತೆಗಳು ಹೆಚ್ಚಾದಂತೆ ಹಣ ಪಡೆದುಕೊಂಡು ಕೆಲಸ ಮಾಡತೊಡಗಿದರು. ಆರ್ಥಿಕ ಕೊರತೆಯಿಂದಾಗಿ ಜೀವನವನ್ನು ನಿರ್ವಹಿಸುವುದು ಕಷ್ಟವೆನಿಸಿದಾಗ ಕೆಲವರು ಹಳ್ಳಿಗಳನ್ನು ತೊರೆದು ಪಟ್ಟಣ ಸೇರಿ ತಮ್ಮ ಕಸುಬನ್ನು ಮುಂದುವರೆಸಿದರು. ಮತ್ತೆ ಕೆಲವರು ವ್ಯವಸಾಯವೆ ಮೊದಲಾದ ಇತರ ಉಪಕಸುಬುಗಳತ್ತ ವಾಲಿದರು.

ದಕ್ಷಿಣ ಕರ್ನಾಟಕದ 'ಕಮ್ಮಾರ' ಜಾತಿಯಲ್ಲಿ ಎಮ್ಮೇನೋರು, ಮಲ್ಲೇನೋರು ಎಂಬ ಎರಡು 'ಬೆಡಗು'ಗಳಿವೆ. ಎಮ್ಮೆನೋರು ಕಾಳಿಯನ್ನು ಆರಾಧಿಸುತ್ತಾರೆ. ಆದರೆ ಮಲ್ಲೇನೋರು "ತಾವು ಎಲ್ಲಮ್ಮನ ಒಕ್ಕಲು" ಎಂದು ಹೇಳಿಕೊಳ್ಳುತ್ತಾರೆ.

ಇವರು ಮೂಲತಃ ವಿಶ್ವಕರ್ಮಿಗಳೆಂದು ಅಭಿಮಾನದಿಂದ ಹೇಳಿಕೊಳ್ಳುತ್ತಾರೆ. ಇವರು ತಮ್ಮ ಜನಾಂಗದ ಹುಟ್ಟಿನ ಬಗ್ಗೆ ಹೇಳುವ ಕಥೆ ಕುತೂಹಲಕಾರಿಯಾಗಿದೆ. ವಿಶ್ವಕರ್ಮ ಮತ್ತು ಕಾಳಮ್ಮನನ್ನು ಅವರವರ ಮನೆಯವರು ದೂರ ದೂರ ಇರಿಸಿದ್ದರು. ಮುಂದೆ ವಿಶ್ವ ಕರ್ಮನನ್ನು ಅರಗಿನ

ಕೋಟೆಯಲ್ಲಿರಿಸಿದರು. ಕಾಳಮ್ಮ ಇಲ್ಲೇ ಬೆಳೆಯುತ್ತಿದ್ದಳು. ಹೀಗೆ 14 ವರ್ಷ ಕಳೆಯಿತು. ಕಾಳಮ್ಮನಲ್ಲಿ ಆಸೆ ಅರಳತೊಡಗಿತು. ಅವಳು ತನ್ನ ಮೂಲ ವಾಸಸ್ಥಾನವನ್ನು ಬದಲಿಸಿದಳು.

ಕಾಳಮ್ಮ ಒಂದು ತೀರ್ಮಾನ ತಗಂಡು ಅರಗಿನ ಕೋಟೆ ಬಾಗಿಲ ಸಮೀಪದಲ್ಲಿಯೆ ಗುಡಿಸಲು ಕಟ್ಟಿಕೊಂಡಳು. ಒಂದು ದಿನ ವಿಶ್ವಕರ್ಮ ಅರಗಿನ ಕೋಟೆಯ ಒಳಭಾಗದಲ್ಲಿ ಚೆಂಡಾಟವಾಡುತ್ತಿದ್ದು, ಒಮ್ಮೆ ಆ ಚೆಂಡು ಅರಗಿನ ಕೋಟೆ ದಾಟಿ ಹೊರಗೆ ಬಂದು ಬಿತ್ತು. ಆಗ ಅಲ್ಲೆ ಇದ್ದ ಕಾಳಮ್ಮ ಆ ಚೆಂಡನ್ನು ತೆಗೆದುಕೊಂಡು ತನ್ನ ಕುಬಸದ ಎದೆ ಭಾಗದಲ್ಲಿಟ್ಟುಕೊಂಡಳು. ವಿಶ್ವಕರ್ಮ ಕೋಟೆ ದಾಟಿ ಬಂದು ಕಾಳಮ್ಮನನ್ನು ನೋಡಿ "ನನ್ನ ಚೆಂಡು ನಿನಗೆ ಸಿಕ್ಕಿದೆ" ಕೊಡು ಅಂದ. ಅದಕ್ಕೆ ಅವಳು "ನಾನು ನಿನ್ನ ಚೆಂಡನ್ನು ಕಾಣೆ" ಎಂದಳು. ಆಗ ಮತ್ತೆ "ಆ ಚೆಂಡು ಎಲ್ಲಿದೆ ಅಂತ ನನಗೆ ಗೊತ್ತು, ಕೊಟ್ಬಿಡು" ಎಂದು ಅವಳನ್ನು ಕೇಳಿದ. ಅದಕ್ಕೆ ಅವಳು ಏನೂ ಮಾತಾಡ್ದೆ ಸುಮ್ನೆ ಇದ್ದಳು. ಆಗ ವಿಶ್ವಕರ್ಮನೇ "ನಾನು ನಿನ್ನ ಲಗ್ಣ ಆಗಬೇಕು ಅಂತಿದ್ದೀನಿ, ನಿನ್ನಭಿಪ್ರಾಯ ಏನು" ಅಂತ ಕೇಳ್ದ. "ಸ್ವಲ್ಪ ನಿಧಾನ ಮಾಡು" ಅಂತ ಅಭಿಪ್ರಾಯ ತಿಳಿಸಿದಳು. ಇನ್ನೇನು ಏಳು ದಿನ ಆದಮೇಲೆ ಮತ್ತೆ ಬಂದು ಅವಳನ್ನು ಕೇಳ್ದ ಆಗ "ನಾನೇ ನಿನ್ನ ಬಾಲಿಕೆ, ನೀವೇ ನಮ್ಮೆಜಮಾನ್ರು" ಅಂತ ಹೇಳಿದ್ಲು. ಅವರಿಬ್ಬರಿಗೂ ಹುಟ್ಟಿದ ಮಕ್ಕಳೆ ನಾವು - ಕಮ್ಮಾರ್ರು. (ಈ ಕಥೆಯ ವಕ್ತೃ ಕಾಳಪ್ಪ, 75 ವರ್ಷ)

ಕಮ್ಮಾರರದು ಉರ್ದು, ಮರಾಠಿ ಮಿಶ್ರಿತವಾದ ಭಾಷೆ. ಉದಾ : ಏರೆ (ಬಾ), ಜಾರೆ (ಹೋಗು), ಸಂಗಟಿ (ಹಿಟ್ಟು), ಅದುಮ (ಸಾರು), ಬಾತು (ಅನ್ನ), ಗಾಯ್ (ದನ), ಶಾತು (ಹೊಲ), ಈರಿ (ಬಾವಿ), ಬೆಯ್‌ಲೆ (ಎತ್ತು), ಮೇಸಿ (ಎಮ್ಮೆ), ದೂಡ (ಕರು).

ವಿವಾಹ ಪದ್ಧತಿ

ಇವರು ಬ್ರಾಹ್ಮಣ ಪುರೋಹಿತರನ್ನು ಲಗ್ನ ಕಟ್ಟಿಸಲು ಮಾತ್ರ ಕರೆಯುತ್ತಾರೆ. ಮದುವೆ ಶಾಸ್ತ್ರಕ್ಕೆ ಕರೆಸುವುದಿಲ್ಲ. ಹೆಣ್ಣು-ಗಂಡಿನ ಕಡೆಯ ಕುಲದ ಹಿರಿಯರೆ ಧಾರೆ ಶಾಸ್ತ್ರವನ್ನು ಮಾಡುತ್ತಾರೆ. ವಿಶೇಷವೆಂದರೆ ಇವರು ಮದುವೆಗೆ ಹಸಿರು ಚಪ್ಪರ ಹಾಕುವುದಿಲ್ಲ. ಕಾರಣವೆಂದರೆ, ಬಹಳ ಹಿಂದೆ ಹೆಣ್ಣಿನ ಸೋದರಮಾವ

ಚಪ್ಪರಕ್ಕೆ ಗರಿ, ಕಂಬ ತರಲು ಹೋದವನು ಬೇಗನೆ ಅಂದರೆ ಸಮಯಕ್ಕೆ ಸರಿಯಾಗಿ ಬರಲಿಲ್ಲ. ಕುಲದ ಹಿರಿಯರೆಲ್ಲ ಕಾಯ್ದು ಕಾಯ್ದು ಬೇಜಾರಾಗಿ ಮುಹೂರ್ತದ ಹೊತ್ತಿಗೆ ಮದುವೆ ಮಾಡಿಬಿಟ್ಟರು. ಮುಹೂರ್ತ ಆದ ಮೇಲೆ ಅವರ ಮಾವ ಬಂದ. ಆ ದಿನದಿಂದ ಈ ಜನಾಂಗದವರು ಚಪ್ಪರ ಇಲ್ಲದೆಯೆ ಮದುವೆ ಮಾಡುತ್ತಾರೆ ಅಲ್ಲದೆ ಈ ಜಾತಿಯ ಕೆಲವು ಹೆಂಗಸರು ಮೂಗುತಿ ಧರಿಸುವುದಿಲ್ಲ.

ಆದರೆ ಎಂಟು ಅರಣಿ ತಂದು ನಾಲ್ಕು ದಿಕ್ಕಿನ ಮೂಲೆಗೂ ಎರಡೆರಡು ಇರಿಸಿ ಅವಕ್ಕೆ ಚೌಕಾಕಾರದಲ್ಲಿ ನೂಲು ಸುತ್ತುತ್ತಾರೆ. ಆ ನಡುವಿನ ಜಾಗದಲ್ಲೆ ಧಾರೆ ನಡೆಯುವುದು. ಹತ್ತಿ ಕೊನೆ, ಒನಕೆ ತಂದು ಗಂಡು ಹೆಣ್ಣಿನ ಬಳಿ ಇರಿಸುತ್ತಾರೆ.

ತೆರ ಕೊಡುವ ಪದ್ಧತಿ ಈಗಲೂ ರೂಢಿಯಲ್ಲಿದೆ. ಹೆಣ್ಣಿನ ತಾಯಿಗೆ ಸೀರೆ, ಕಣ ಕೊಟ್ಟು 21 ರೂಪಾಯಿ ಕೊಡುತ್ತಾರೆ. ಆಕೆ 20 ರೂ.ಗಳನ್ನು ತೆಗೆದುಕೊಂಡು, ಗಂಡಿನ ಕಡೆಯವರಿಗೆ 1 ರೂ. ವಾಪಾಸು ಕೊಡುತ್ತಾಳೆ. ಆ ರೂಪಾಯಿಯನ್ನು ಬಳಸುವಂತಿಲ್ಲವಾದ್ದರಿಂದ ಅದನ್ನು ದೇವಸ್ಥಾನಕ್ಕೆ ಕೊಡುತ್ತಾರೆ.

ಹಬ್ಬ ಹರಿದಿನಗಳು

ಇವರಲ್ಲಿ 'ಹೊರಬೀಡು' ಎಂಬ ವಿಶೇಷ ಆಚರಣೆ ಕಂಡು ಬರುತ್ತದೆ. ಆಷಾಢ ಮಾಸದಲ್ಲಿ ಇವರು ತಾವು ವಾಸಿಸುವ ಸ್ಥಳದಿಂದ ಒಂದೆರಡು ಮೈಲಿ ದೂರ ಹೋಗಿ ಅಲ್ಲಿಯೆ ಮಾಂಸದ ಅಡಿಗೆ ಮಾಡಿ, ಎಡೆ ಹಾಕಿ ಉಂಡು ಬರುತ್ತಾರೆ. ಆದರೆ ಮನೆಯಿಂದ ಹೊರಡುವಾಗ ಹಳೆಯ ಮೊರ, ಸ್ವಲ್ಪ ಕಸ, ಬೂದಿ, ಒಂದು ಮೊಂಡು ಪರಕೆ, ಹಿಟ್ಟು (ಮುದ್ದೆ) ಮಾಡುವ ಕವಗಟ್ಟೆಗೆ, ತೊಳಸುವ ಕೋಲು ತೆಗೆದುಕೊಂಡು ಹೋಗುತ್ತಾರೆ. ಇವನ್ನೆಲ್ಲ ಹೊರ ಬೀಡಿನಲ್ಲೆ ಬಿಟ್ಟು ಬರುತ್ತಾರೆ. ಇದರಿಂದ ದೋಷ ಪರಿಹಾರವಾಗುತ್ತದೆಂದು ನಂಬಿಕೊಂಡಿದ್ದಾರೆ. ಹಾಗೆ ಬರುವಾಗ ದೇವಸ್ಥಾನಕ್ಕೆ ಹಣ್ಣು-ಕಾಯಿ ಕೊಟ್ಟು ಬರುತ್ತಾರೆ. ಮನೆಯ ಮುಂದೆ ಸ್ವಲ್ಪ ಕೆಂಡಮಾಡಿ ಹರಡಿ, ಕೈಕಾಲು ಮುಖ ತೊಳೆದುಕೊಂಡು, ತಲೆ ಮೇಲೆ ಗೋಮ (ಗಂಜಳ) ಚಿಮುಕಿಸಿ ಕೊಂಡು ಕೆಂಡ ತುಳಿದು ಮನೆಯೊಳಕ್ಕೆ ಹೋಗುತ್ತಾರೆ.

ಆಯುಧಪೂಜೆ

ವಿಜಯ ದಶಮಿಯಲ್ಲಿ ತಾವು ಕೆಲಸಕ್ಕೆ ಬಳಸುವ ಸಾಮಗ್ರಿಗಳನ್ನು ಶುಭ್ರಗೊಳಿಸಿ ಅರಿಷಿಣ, ಕುಂಕುಮವಿಟ್ಟು, ಹೂವಿರಿಸಿ ತಮ್ಮ ಆರ್ಥಿಕ ಸಾಮರ್ಥ್ಯಕ್ಕೆ ತಕ್ಕಂತೆ ಕೋಳಿ ಇಲ್ಲವೆ ಮೇಕೆಯನ್ನು ಕಡಿದು ರಕ್ತಶಾಂತಿ ಮಾಡುತ್ತಾರೆ.

ಸಿದ್ಧಪಡಿಸುವ ವಸ್ತುಗಳು

ಗೃಹ ಬಳಕೆ ವಸ್ತುಗಳು	ಕೃಷಿ ಬಳಕೆ	ಇತರೆ
ಚಾಕು	ಸಲಿಕೆ	ಕತ್ತಿ
ಚೂರಿ	ಗುದ್ದಲಿ	ಗುರಾಣಿ
ಇಕ್ಕುಳ	ಹಾರೆ	ಭರ್ಜಿ
ಕಬ್ಬಿಣದ ಒಲೆಗಳು	ಪಿಕಾಸಿ	ಈಟಿ
ರೋಟಿ ಬೀಗ	ಕುಡುಗೋಲು	ಗರುಡು ಗಂಬ
ಒನಕೆ ಬಳೆ	ಕುರ್ಜಿಗೆ	ಕತ್ತಿ (ದೇವಸ್ಥಾನಕ್ಕೆ
ಮಚ್ಚು	ಚಮ್ಮಟಿಗೆ	ಎಲೆ ಪೂಜೆ ಕಟ್ಟುವ ಕಮಾನು)
ಈಳಿಗೆ ಮಣೆ	ಮೇಕು	ಎತ್ತಿನ ಕಾಲಿಗೆ ಕಟ್ಟುವ 'ಲಾಳ'
ಚಿಲಕ	ಗಡಾರಿ	ಅರ
ಕೀಲುಗೂಟ	ಕೊಡಲಿ	ಉಳಿ
	ಗಾಲಿ ಅಚ್ಚು	
	ಕಡಾಣಿ	
	ಗುಂಬದ ಬಳೆ	
	ಹೊಂಗು ಬಳೆ	
	ಗಾಲಿಪಟ್ಟಿ	
	ಸುತ್ತಿಗೆ	
	ಚಾಣ	
	ಬಾಚಿ	
	ಕಬ್ಬಿಣದ ನೇಗಿಲು	

ಬಳಸುವ ಸಾಧನ ಮತ್ತು ಉಪಕರಣಗಳು

ತಿದಿ, ದೊಡ್ಡ ಸುತ್ತಿಗೆ, ಸಣ್ಣ ಸುತ್ತಿಗೆಗಳು, ಇಕ್ಕಳ, ಚಾಣಗಳು ನೀರಿನ ದೋಣಿ, ಅಡಿಗಲ್ಲು, ಚಮ್ಮಟಿಗೆ, ಪಾಗರಿ (ರಂಧ್ರ ಮಾಡಲು ಬಳಸುವುದು) ಸುತ್ತು (ರಂಧ್ರ ಮಾಡುವಾಗ ವಸ್ತುವಿನ ಕೆಳ ಭಾಗದಲ್ಲಿಡುವುದು), ಸರಗೋಲು (ಇದ್ದಿಲನ್ನು ಒಳನೂಕುವುದು, ಈಚಿ ತೆಗೆಯುವುದು, ಕಿಟ್ಟ ತೆಗೆಯಲು) ಇದ್ದಿಲು, ಹೊಟ್ಟು, ತೆಂಗಿನ ಮಟ್ಟಿಗಳು (ನಾರು ಸಮೇತವಾದ ತೆಂಗಿನ ಚಿಪ್ಪು).

ಬಳಸುವ ಕಚ್ಚಾ ವಸ್ತುಗಳು

ಕಬ್ಬಿಣ, ಅವಶ್ಯವಿದ್ದರೆ 'ಬೆಳಗಾರ' (ಇದು ಉಂಡುಂಡೆಯಾಗಿರುತ್ತದೆ. ಇದನ್ನು ಪುಡಿ ಮಾಡಿ ಕಾದ ಕಬ್ಬಿಣದ ಮೇಲೆ ಹಾಕುವುದರಿಂದ, ಅದರಲ್ಲಿರುವ ಕಿಲುಬು ಸುಲಭವಾಗಿ ಬೇರ್ಪಡುತ್ತದೆ)

ತಿದಿ

ಕಮ್ಮಾರರು ಬಳಸುವ ಉಪಕರಣಗಳಲ್ಲಿ 'ತಿದಿ' ಮುಖ್ಯವಾದುದು. ಅದನ್ನು ಇವರೆ ತಯಾರಿಸಿ ಕೊಳ್ಳುತ್ತಾರೆ. ಹಸುವಿನ ಕರು, ಎಮ್ಮೆಯ ಕರು ಅಥರಾ ಕುರಿ, ಮೇಕೆ ಚರ್ಮ ಮತ್ತು ಹಲಗೆಗಳನ್ನು ಬಳಸಿಕೊಂಡು ಸಿದ್ಧಪಡಿಸುತ್ತಾರೆ. ಈ ಪ್ರಾಣಿಗಳ ಚರ್ಮಗಳು ತೆಳುವಾಗಿದ್ದು ನಿರಿಗೆ ಮಾಡಲು ಸುಲಭವಾಗಿರುತ್ತದೆ. ಬಲಿತ ಪ್ರಾಣಿಗಳಾದ ಎಮ್ಮೆ ಮೊದಲಾದವುಗಳ ಚರ್ಮ ತುಸು ದಪ್ಪವಾಗಿ, ಒರಟಾಗಿರುವುದರಿಂದ ನಿರಿಗೆ ಮೂಡಿಸಲು ಕಷ್ಟವಾಗುತ್ತದಲ್ಲದೆ, ನಿರಿಗೆಯ ಭಾಗದಲ್ಲಿ ಬೇಗ ಹರಿದು ಹೋಗುವ ಸಾಧ್ಯತೆಗಳು ಹೆಚ್ಚು. ಕರುಗಳ ಚರ್ಮವನ್ನು ನಿರಿಗೆ ನಿರಿಗೆಯಾಗಿ ಮಡಚಿ ಅದರ ಮೇಲೆ ಹಲಗೆಯನ್ನಿಟ್ಟು ಮತ್ತೆ ಅದರ ಮೇಲೆ ಭಾರವಾದ ಕಲ್ಲು ಗುಂಡನ್ನು ಹೇರಿ ನಾಲ್ಕಾರು ದಿನಗಳವರೆಗೆ ಇಡುತ್ತಾರೆ. ಅದು ಚೆನ್ನಾಗಿ ನಿರಿಗೆ ಮೂಡಿದ ನಂತರ ಅದರ ಕೆಳಭಾಗವನ್ನು ಒಂದು ಮರದ ಹಲಗೆಗೂ ಮತ್ತು ಮೇಲು ಭಾಗವನ್ನು ಇನ್ನೊಂದು ಹಲಗೆಗೂ ಜೋಡಿಸುತ್ತಾರೆ. ಮೇಲು ಭಾಗದ ಹಲಗೆಯಲ್ಲಿ ಸಣ್ಣ ರಂಧ್ರವಿದ್ದು ಚರ್ಮಕೋಶದಲ್ಲಿ ಗಾಳಿ ಸೇರಲು ಅವಕಾಶವಿರುತ್ತದೆ. ತಿದಿಯ ಮುಂಭಾಗದಲ್ಲಿ ಸಣ್ಣರಂಧ್ರವಿದ್ದು, ಆ ಭಾಗದಲ್ಲಿ ತಗಡಿನ ಕೊಳವೆಯನ್ನು ಜೋಡಿಸುತ್ತಾರೆ. ಆ ಕೊಳವೆಯ ಮತ್ತೊಂದು ತುದಿಯನ್ನು ಒಲೆ ಭಾಗದಲ್ಲಿ ಜೋಡಿಸುತ್ತಾರೆ. ಹೀಗೆ

ತಯಾರಿಸಿದ ತಿದಿಯ ಹಿಂಭಾಗದ ಹಲಗೆಯ ತಳಭಾಗದಲ್ಲಿ ಭಾರ ಉಂಟು ಮಾಡುವ ಸಲುವಾಗಿ ಕಬ್ಬಿಣದ ಗುಂಡನ್ನು ಜೋಡಿಸಿ, ಅದಕ್ಕೆ ಕಬ್ಬಿಣದ ಸರಪಳಿಯನ್ನು ಕಟ್ಟಿ ತಿದಿಯ ಮೇಲು ಭಾಗದಲ್ಲಿ ಉದ್ದವಾಗಿ ಜೋಡಿಸಿರುವ ಬಿದಿರಿನ ಗಳಕ್ಕೆ ಬಂಧಿಸುತ್ತಾರೆ. ಆ ಗಳಕ್ಕೆ ಸನ್ನೆಯನ್ನು ಬಳಸಿರುತ್ತಾರೆ. ಆ ಗಳವನ್ನು ಕುಲುಮೆಯ ಮುಂಭಾಗಕ್ಕೆ ಬರುವಂತೆ ಜೋಡಿಸಿರುತ್ತಾರೆ. ಅದರ ಮುಂದಿನ ತುದಿಗೆ ಬಲವಾದ ಹಗ್ಗವನ್ನು ಅಥವಾ ಕಬ್ಬಿಣದ ಸರಪಳಿಯನ್ನು ಜೋಡಿಸಿ ಸರಾಗವಾಗಿ ಎಳೆಯಲು ಅನುವು ಮಾಡಿಕೊಂಡಿರುತ್ತಾರೆ.

ಆ ಗಳವನ್ನು ಕೆಳಗೆ ಎಳೆದಾಗ ಚರ್ಮದ ಕೋಶವು ಸಂಕುಚಿತಗೊಂಡು ಮೇಲಿನ ಹಲಗೆಯ ರಂಧ್ರವು ಮುಚ್ಚಿಕೊಳ್ಳುತ್ತದೆ. ಅಲ್ಲಿಗಾಗಲೆ ಆ ಕೋಶದಲ್ಲಿರುವ ಗಾಳಿಯು ಒಲೆ ಭಾಗದಲ್ಲಿ ಜೋಡಿಸಿರುವ ಕೊಳವೆಯ ಮೂಲಕ ಕುಲುಮೆಗೆ ಹೋಗುತ್ತದೆ. ಮತ್ತೆ ಗಳವನ್ನು ಬಿಟ್ಟಾಗ ಚರ್ಮದ ಕೋಶವು ವಿಕಸನಗೊಂಡು ಮೇಲಿನ ಹಲಗೆಯ ರಂಧ್ರದ ಮೂಲಕ ಗಾಳಿಯು ಕೋಶದೊಳಗಡೆ ಸೇರಿಕೊಳ್ಳುತ್ತದೆ. ಹೀಗೆ ಗಳವನ್ನು ಸಾವಕಾಶವಾಗಿ ಮೇಲಕ್ಕೆ ಕೆಳಕ್ಕೆ ಆಡಿಸುವುದರ ಮೂಲಕ ಕುಲುಮೆಗೆ ಗಾಳಿ ಸರಬರಾಜಾಗುವುದರಿಂದ ಬೆಂಕಿ ಅಥವಾ ಉರಿ ಮೂಡುತ್ತದೆ, ಶಾಖ ಹೊಮ್ಮುತ್ತಿರುತ್ತದೆ.

ಕುಲುಮೆ (ಒಲೆ)

ತಿದಿಗೆ ಜೋಡಿಸಿರುವ ಕೊಳವೆಯ ಮುಂಭಾಗದ ನೆಲದಲ್ಲಿ ಸ್ವಲ್ಪ ತಗ್ಗು ಅಂದರೆ ಸಣ್ಣ ಕುಳಿ ಮಾಡಿರುತ್ತಾರೆ. ಅದನ್ನು ಮಣ್ಣಿನಿಂದ ಮೆತ್ತಿರುತ್ತಾರೆ. ಇಲ್ಲವೆ ಇಟ್ಟಿಗೆಯಿಂದ ಕಿರಿದಾದ ಗೋಡೆ ಕಟ್ಟಿರುತ್ತಾರೆ. ಇದರಿಂದ ಕುಲುಮೆಯಲ್ಲಿ ಹಾಕಿರುವ ಇದ್ದಿಲು ಮತ್ತು ಹೊಟ್ಟು ಅತ್ತಿತ್ತ ಸರಿಯದಂತಿರುತ್ತದೆ. ಸಿದ್ಧಪಡಿಸುತ್ತಿರುವ ವಸ್ತುವಿಗೆ ಅಗತ್ಯವಾಗಿರುವಷ್ಟು ಶಾಖವನ್ನು ಬಳಸಿಕೊಳ್ಳುವ ಸಲುವಾಗಿ ಮತ್ತು ಕಿಡಿ ಮೇಲೇರುವುದನ್ನು ನಿಯಂತ್ರಿಸುವ ಸಲುವಾಗಿ ಕೈಯನ್ನು ನೀರಿನ ದೋಣಿ (ಪಾತ್ರೆ)ಯಲ್ಲಿ ಅಡ್ಡಿ ಆಗಾಗ ಕುಲುಮೆಗೆ ನೀರಿನ ಹನಿ ಚಿಮುಕಿಸುವುದುಂಟು.

ತಿದಿಯ ಬಗೆಗಳು

ಈ ಹಿಂದೆ ಚರ್ಮವನ್ನು ಮಾತ್ರ ಬಳಸಿ ತಿದಿಯನ್ನು ತಯಾರು ಮಾಡುತ್ತಿದ್ದರಂತೆ. ಕಾಲಕ್ರಮೇಣ ಅದು ಮರೆಯಾಗಿ ಹೋಗಿದೆ. ಚರ್ಮವು ಪದೇ ಪದೇ ಹರಿಯುವ ಸಾಧ್ಯತೆಗಳಿರುವುದರಿಂದ ಅದರ ದುರಸ್ತಿಯನ್ನು

ಮಾಡಿಸುವ ಇಲ್ಲವೆ ಹೊಸ ಚರ್ಮವನ್ನು ತಂದು ಮತ್ತೆ ತಿದಿಯನ್ನು ಸಿದ್ಧಪಡಿಸಿ ಕೊಳ್ಳಬೇಕಾಗುತ್ತದೆಂಬ ಕಾರಣಕ್ಕಾಗಿ ತಿದಿಗೆ ಬದಲಾಗಿ ಕೆಲವರು ಬ್ಲೋವರ್ ಬಳಸಿಕೊಳ್ಳುತ್ತಿರುವರು. ಇದು ಸಿದ್ಧವಾಗಿ ಮಾರುಕಟ್ಟೆಯಲ್ಲಿ ದೊರೆಯುವುದರಿಂದ ತಿದಿಯನ್ನು ತಯಾರಿಸುವ ಶ್ರಮ ಇಲ್ಲವಾಗುತ್ತದೆ ಅಲ್ಲದೆ ತಿದಿಗಿಂತ ಹೆಚ್ಚು ಬಾಳಿಕೆ ಬರುತ್ತದೆ, ಮಿತವ್ಯಯ ಕೂಡ ಆಗುತ್ತದೆಂದು ಕೆಲವರು ಹೇಳುತ್ತಾರೆ.

ಗಾಡಿ ಚಕ್ರದ ಪಟ್ಟಿ ಜೋಡಿಸುವ ಕ್ರಮ :

ಗಾಡಿ ಚಕ್ರದ ಪಟ್ಟಿ ತಯಾರಿಸುವಾಗ ಮಾತ್ರ ವಿಶಿಷ್ಟವಾದ ರೀತಿಯಲ್ಲಿ ಅದನ್ನು ಕಾಯಿಸಬೇಕಾಗುತ್ತದೆ. ವೃತ್ತಾಕಾರದ ಕಬ್ಬಿಣದ ಪಟ್ಟಿಯನ್ನು ನೆಲದ ಮೇಲಿರಿಸಿ ಚಿಪ್ಪು ಸಮೇತವಾಗಿರುವ ತೆಂಗಿನ ಮಟ್ಟೆಯಿಂದ ಅದನ್ನು ಚೆನ್ನಾಗಿ ಮುಚ್ಚಿ ಬೆಂಕಿ ಹಾಕಿ ಕಾಯಿಸುತ್ತಾರೆ. ಇದಕ್ಕೆ ಕಟ್ಟಿಗೆ ಚೂರುಗಳನ್ನು ಜೊತೆಯಲ್ಲಿ ಬಳಸಿಕೊಳ್ಳುತ್ತಾರೆ. ಕೆಲವರು ಸಗಣಿಯಿಂದ ಮಾಡಿರುವ ಬೆರಣಿ (ಕುಳ್ಳು) ಉಪಯೋಗಿಸುವುದುಂಟು.

ಚಕ್ರದ ಪಟ್ಟಿ ಬೆಂಕಿಯಲ್ಲಿ ಚೆನ್ನಾಗಿ ಕಾದು ಹದವಾಗಿ ವಿಕಸನಗೊಂಡಿರುವುದನ್ನು ಖಾತ್ರಿ ಮಾಡಿಕೊಂಡ ನಂತರ, ಅದನ್ನು ಚಾಕಚಕ್ಯತೆಯಿಂದ ಚಕ್ರದ ಹೊರಭಾಗಕ್ಕೆ ಸೇರಿಸಿ ನೀರುಣಿಸುತ್ತಾರೆ. ಆಗ ಅದು ಸಂಕುಚಿತಗೊಂಡು ಚಕ್ರಕ್ಕೆ ಬಲವಾಗಿ ಕೂಡಿಕೊಳ್ಳುತ್ತದೆ. ನೀರುಣಿಸುವುದು ಸ್ವಲ್ಪತಡವಾದರೂ ಚಕ್ರ ಸುಟ್ಟು ಹೋಗುವ ಸಾಧ್ಯತೆಗಳಿರುತ್ತವೆ. ಇದೆಲ್ಲಾ ಅನುಭವದ ಮೇಲೆ ಮಾಡುವ ಕೆಲಸವಾಗಿರುತ್ತದೆ.

ತಯಾರಿಕೆಯ ವಿವಿಧ ಹಂತಗಳು :

ಕಮ್ಮಾರರು ಯಾವುದೇ ವಸ್ತುವನ್ನು ಸಿದ್ಧಗೊಳಿಸುವ ಮುನ್ನ ಕಬ್ಬಿಣವನ್ನು ಚೆನ್ನಾಗಿ ಕಾಯಿಸಬೇಕಾಗುತ್ತದೆ. ಹದವರಿತು ಕಾಯಿಸಬೇಕು. ಕಬ್ಬಿಣದಲ್ಲಿ ತುಕ್ಕು, ಕಿಟ್ಟ ಇದ್ದಾಗ ಅದನ್ನು ಬೇರ್ಪಡಿಸಲು ಸ್ವಲ್ಪ ಬೆಳಗಾರವನ್ನು ಉಪಯೋಗಿಸುತ್ತಾರೆ. ಹಾಗೆ ಕಾದ ಕಬ್ಬಿಣದಿಂದ ದೊಡ್ಡ ದೊಡ್ಡ ವಸ್ತುಗಳನ್ನು ತಯಾರು ಮಾಡಬೇಕಾಗಿದ್ದಲ್ಲಿ, ಅದರ ಮೇಲೆ ಬಲವಾದ ಪೆಟ್ಟುಗಳು ಬೀಳಬೇಕಾಗುತ್ತದೆ. ಆದ್ದರಿಂದ ಒಬ್ಬ ವ್ಯಕ್ತಿ ಅದನ್ನು ಅಡಿಗಲ್ಲಿನ ಮೇಲಿರಿಸಿಕೊಂಡಿರುತ್ತಾನೆ. ಮತ್ತೊಬ್ಬ ವ್ಯಕ್ತಿ ದೊಡ್ಡ ಸುತ್ತಿಗೆಯಿಂದ ಬಲವಾದ ಪೆಟ್ಟುಗಳನ್ನು ಅದರ ಮೇಲೆ ಹಾಕುತ್ತಿರುತ್ತಾನೆ. ಆ ಸಂದರ್ಭದಲ್ಲಿ ಅದನ್ನು ಹಿಡಿದಿರುವ ವ್ಯಕ್ತಿ ಪೆಟ್ಟು ಬೀಳಬೇಕಾದ ಭಾಗವನ್ನು

ನಿರ್ದೇಶಿಸುತ್ತಿರುತ್ತಾನೆ. ಆದರೆ ಸಣ್ಣಪುಟ್ಟ ವಸ್ತುಗಳನ್ನು ತಯಾರಿಸುವಾಗ, ಒಬ್ಬನೇ ವ್ಯಕ್ತಿ ಕಾದ ಕಬ್ಬಿಣವನ್ನು ಇಕ್ಕಳದಿಂದ ಹಿಡಿದುಕೊಂಡು ಬೇಕಾದ ಆಕಾರಕ್ಕೆ ತಕ್ಕಂತೆ ಹೊರಳಿಸುತ್ತ, ಸಣ್ಣ ಸುತ್ತಿಗೆಯಿಂದ ಬಡಿಯುತ್ತ ಆಕಾರ ಕೊಡುತ್ತಾನೆ.

ಕೆಲಸದ ನಿಪುಣತೆ

ಕಮ್ಮಾರಿಕೆ ಇತರೆ ಪಾಂಚಾಳ ವೃತ್ತಿಯಂತೆ ಹೆಚ್ಚು ಕೌಶಲ ವೃತ್ತಿಯಲ್ಲವಾದರೂ ಇದಕ್ಕೆ ತನ್ನದೇ ಆದ ಕುಶಲತೆ ಇರುತ್ತದೆ. ಕಬ್ಬಿಣವನ್ನು ಕಾಯಿಸುವಾಗ, ನೀರುಣಿಸುವಾಗ ಸಾಕಷ್ಟು ಎಚ್ಚರವಹಿಸಬೇಕಾಗುತ್ತದೆ. ಇಂಥ ಕೆಲಸ ಮಾಡುವಾಗ ಅನುಭವವು ನೆರವಾಗುತ್ತದೆ. ಕಾದ ಕಬ್ಬಿಣಕ್ಕೆ ಆಕಾರ ಕೊಡುವಾಗ ಹೆಚ್ಚು ನೀರುಣಿಸಿದರೆ ಉಪಕರಣವು ಬಿರುಸುಗೊಂಡು ಬಳಸುವ ಸಂದರ್ಭದಲ್ಲಿ ಹೆಚ್ಚು ಪೆಟ್ಟು ಬಿದ್ದಾಗ ತುಂಡಾಗುವುದು. ಹಾಗೆಯೆ ನೀರುಣಿಸುವಾಗ ಕಡಿಮೆ ಬಳಸಿದ್ದಲ್ಲಿ ಉಪಕರಣವು ಮೃದುಗೊಂಡು ಬೇಗ ಬಾಗುವುದು. ಆದ್ದರಿಂದ ಕಾದ ಉಪಕರಣವು ನೀಲಿವರ್ಣಕ್ಕೆ ತಿರುಗುವಷ್ಟು ಮಾತ್ರ ನೀರುಣಿಸಬೇಕಾಗುತ್ತದೆ. ಕಾದ ಕಬ್ಬಿಣವನ್ನು ಬಡಿಯುವಾಗ ಹೆಚ್ಚು ನೀರುಣಿಸಿದ್ದೆ ಆದರೆ ಅದು ಬಿಳಿ ವರ್ಣಕ್ಕೆ ತಿರುಗುತ್ತದೆ. ಅಥವಾ ಬಡಿಯುವಾಗ ಕಾಲ ವಿಳಂಬವಾಗಿ ಕಾದ ಕಬ್ಬಿಣ ಆರಿದರೆ ಅಂಥ ಸಂದರ್ಭಗಳಲ್ಲಿ ಮತ್ತೆ ಕಬ್ಬಿಣವನ್ನು ಕಾಯಿಸಬೇಕಾಗುತ್ತದೆ. ಇದನ್ನು ವೃತ್ತಿಯಲ್ಲಿ ಚೆನ್ನಾಗಿ ಪಳಗಿದವರು ಮಾತ್ರ ಬಲ್ಲರು.

ಕಮ್ಮಾರ ಸಾಲೆಯ ನಿರ್ಮಾಣ

ಸಾಮಾನ್ಯವಾಗಿ ಕಮ್ಮಾರಸಾಲೆ (ಕುಲುಮೆ ಮನೆ)ಗಳು ಊರ ಹೊರಗಿರುತ್ತವೆ. ಅಗ್ನಿ ಆಕಸ್ಮಿಕಗಳುಂಟಾಗುವ ಸಾಧ್ಯತೆಗಳಿರುವುದರಿಂದ ಮುನ್ನೆಚ್ಚರಿಕೆಯನ್ನು ವಹಿಸಿ ಊರ ಹೊರಗೆ ಕಟ್ಟಿರುತ್ತಾರೆ. ಕುಲುಮೆ ಮನೆಯೆಂದರೆ ಅದು ಮನೆಯಲ್ಲ, ವಿಶಾಲವಾದ ಜಾಗದಲ್ಲಿ ಮೂರು ಅಥವಾ ಎರಡು ಕಡೆ ಇಟ್ಟಿಗೆಯಿಂದ ಗೋಡೆಗಳನ್ನು ಕಟ್ಟಿ, ಅದರ ಮೇಲ್ಛಾವಣಿಗೆ ಹೆಂಚು ಅಥವಾ ಜಿಂಕ್‌ಶೀಟು, ಅಸ್‌ಬೆಸ್ಟಾಸ್ ಶೀಟುಗಳನ್ನು ಹಾಕಿರುತ್ತಾರೆ. ಯಾವುದೇ ಕಾರಣಕ್ಕೂ ಒಣಗಿದ ಗರಿಯನ್ನು ಬಳಸುವುದಿಲ್ಲ. ಕಿಡಿಹಾರಿ ಅಗ್ನಿ ಅನಾಹುತವಾಗುವ ಸಾಧ್ಯತೆಗಳಿರುವುದರಿಂದ ಗರಿಯನ್ನು ಬಳಸುವುದಿಲ್ಲವೆಂದು ಕಮ್ಮಾರರು ಹೇಳುತ್ತಾರೆ.

ದುರಸ್ತಿಯ ಕಾರ್ಯ

ಕಬ್ಬಿಣದ ಉಪಕರಣಗಳು ಮುರಿದಾಗ ಬೆಸುಗೆ ಹಾಕಿಕೊಡುತ್ತಾರೆ. ವ್ಯವಸಾಯಕ್ಕೆ ಬಳಸುವ ಸಾಧನಗಳು ಬಳಸಿ ಬಳಸಿ ಹರಿತವನ್ನು ಕಳೆದುಕೊಂಡು ಮುಕ್ಕಾದಾಗ, ಅಂಥವನ್ನು ಮತ್ತೆ ಚೆನ್ನಾಗಿ ಕಾಯಿಸಿ ಮುಂಭಾಗವನ್ನು ತಟ್ಟಿ ತೆಳ್ಳಗೆ ಮಾಡಿ, ಅರದಿಂದ ಉಜ್ಜಿ ಹರಿತವಾಗಿಸುತ್ತಾರೆ.

ಇವರಲ್ಲದೆ ಬಯಲು ಕುಂಬಾರರು ಎಂಬ ಜನಾಂಗದವರು ಅಲ್ಲಲ್ಲಿ ಕಂಡು ಬರುತ್ತಾರೆ. ಇವರು ಒಂದೆಡೆ ನೆಲೆಸುವುದಿಲ್ಲ. ಹಳ್ಳಿಯಿಂದ ಹಳ್ಳಿಗೆ ಸಂಚರಿಸುತ್ತ ತಮ್ಮ ವೃತ್ತಿಯನ್ನು ಮಾಡುತ್ತಿರುತ್ತಾರೆ.

ಈಗೀಗ ಮೂಲ ಕಮ್ಮಾರ ಜನಾಂಗದವರಲ್ಲದೆ ಇತರೆ ಜನಾಂಗದವರೂ ಈ ವೃತ್ತಿಯನ್ನು ಮಾಡುತ್ತಿರುವುದು ಕಂಡು ಬರುತ್ತದೆ. ಮುಸ್ಲಿಮ್ ಕಂಬಾರರು ಕೂಡ ಅಲ್ಲಲ್ಲಿ ಕಂಡು ಬರುತ್ತಾರೆ.

ವ್ಯವಸಾಯದ ದಿನಗಳಲ್ಲಿ ಉಪಕರಣಗಳನ್ನು ತಯಾರಿಸುವ, ದುರಸ್ತಿಗೊಳಿಸುವ, ಹರಿತಗೊಳಿಸುವ ಕೆಲಸಗಳು ಹೆಚ್ಚಾಗಿ ಕಂಡುಬರುತ್ತವೆ. ಉಳಿದಂತೆ ಕೆಲಸ ಕಡಿಮೆಯಿರುತ್ತದೆ.

ಕೆಲಸಕ್ಕೆ ಎದುರಾಗುವ ಅಡ್ಡಿ ಆತಂಕಗಳು

ಹವಾಮಾನದ ಏರಿಳಿತಗಳಿಂದ ಯಾವ ಪ್ರತಿಕೂಲಗಳಿಲ್ಲವಾದರೂ ಗಾಳಿ ಕಾಲದಲ್ಲಿ ವಿಶೇಷವಾಗಿ ಆಷಾಢದಲ್ಲಿ ಅಗ್ನಿ ಅನಾಹುತಗಳಾಗುವ ಸಾಧ್ಯತೆಗಳು ಹೆಚ್ಚಾಗಿರುತ್ತದೆ. ಅಂತೆಯೆ ಮಳೆಗಾಲ, ಗಾಳಿ ಕಾಲದಲ್ಲಿ ಬೇಗ ಕಬ್ಬಿಣ ಕಾಯುವುದಿಲ್ಲವಾದರಿಂದ ಹೆಚ್ಚಿನ ಇದ್ದಿಲು, ಹೊಟ್ಟು ಬೇಕಾಗುತ್ತದೆ. ಅಲ್ಲದೆ ಮಳೆಗಾಲದಲ್ಲಿ, ಚಳಿಗಾಲದಲ್ಲಿ ಕಾದ ಕಬ್ಬಿಣ ತ್ವರಿತವಾಗಿ ತನ್ನ ಶಾಖವನ್ನು ಕಳೆದುಕೊಳ್ಳುವುದರಿಂದ ಪದೇ ಪದೇ ಕಬ್ಬಿಣವನ್ನು ಕಾಯಿಸಬೇಕಾಗುತ್ತದೆ.

ಯಾರು, ಯಾವ ಕೆಲಸ

ಇದು ಬಲಿಷ್ಠಕಾಯರು ಮಾಡುವ ಕೆಲಸವಾಗಿರುವುದರಿಂದ ಹೆಂಗಸರು ಈ ವೃತ್ತಿಯನ್ನು ಮಾಡುವುದಿಲ್ಲ. ಮಕ್ಕಳಲ್ಲಿ ಕಸುವು ಕಡಿಮೆಯಿರುವುದರಿಂದ

ಅವರು ಸಣ್ಣ ಪುಟ್ಟ ಕಾರ್ಯದಲ್ಲಿ ನೆರವಾಗುತ್ತಾರೆ.

ತರಬೇತಿ

ಇದು ನೋಡಿ ಕಲಿಯುವ ಕಸುಬು. ಮಕ್ಕಳು ಕಮ್ಮಾರಸಾಲೆಯಲ್ಲಿ ತಮ್ಮ ಹಿರಿಯರು ಮಾಡುವ ಕಾರ್ಯದ ವಿವಿಧ ಹಂತಗಳನ್ನು ಸೂಕ್ಷ್ಮವಾಗಿ ಗಮನಿಸುತ್ತಿರುತ್ತಾರೆ. ಸುತ್ತಿಗೆ ಎತ್ತುವಷ್ಟು ಶಕ್ತಿ ಬಂದ ನಂತರ ಮೊದಮೊದಲು ಎತ್ತಿನ ಕಾಲಿಗೆ ಕಟ್ಟುವ 'ಲಾಳ'ಗಳನ್ನು ತಯಾರಿಸುತ್ತ ತರಬೇತಿ ಪಡೆದುಕೊಳ್ಳುತ್ತಾರೆ. ತದನಂತರ ಸಣ್ಣಪುಟ್ಟ ವಸ್ತುಗಳಾದ ಕುಡುಗೋಲು, ಮಚ್ಚು ಮೊದಲಾದುವನ್ನು ತಯಾರಿಸುವ ನೈಪುಣ್ಯತೆಯನ್ನು ಗಳಿಸಿ ಕೊಳ್ಳುತ್ತಾರೆ.

ಆಕಸ್ಮಿಕಗಳು

ದೊಡ್ಡ ಸುತ್ತಿಗೆಯಿಂದ ಬಡಿಯುವಾಗ ಕಾದ ಕಬ್ಬಿಣದ ಮೇಲೆ 'ಜಾರು ಹೊಡೆತ'ಗಳು ಬೀಳುವ ಸಾಧ್ಯತೆಗಳಿರುವುದರಿಂದ ಕೈ ಕಾಲುಗಳಿಗೆ ಪೆಟ್ಟು ಬೀಳುವುದೂ ಉಂಟು. ಅಲ್ಲದೆ ಕಬ್ಬಿಣವನ್ನು ಹದವಾಗಿ ಕಾಯಿಸದೆ ಇದ್ದಾಗ, ಹೆಚ್ಚು ನೀರುಣಿಸಿದಾಗ ತಯಾರಿಸುತ್ತಿರುವ ಉಪಕರಣಗಳು ತುಂಡಾಗಿ ಕಾಲಿಗೊ, ಕೈಗೊ, ಹಣೆಗೊ, ಕಣ್ಣಿಗೊ, ತಲೆಗೊ ಸಿಡಿದು ಸಣ್ಣಪುಟ್ಟಗಾಯಗಳು ಒಮ್ಮೊಮ್ಮೆ ತೀವ್ರ ತರದ ಗಾಯಗಳಾಗಿ ರಕ್ತಸ್ರಾವಾಗುವುದುಂಟು. ಕೆಲವರು ಜೀವಾಪಾಯಗಳನ್ನು ತಂದುಕೊಂಡಿದ್ದಾರೆಂದು ಹಿರಿಯರು ಹೇಳುತ್ತಾರೆ.

ಸರ್ಕಾರ ಕೂಡ ಇತ್ತೀಚೆಗೆ ವೃತ್ತಿ ತರಬೇತಿ ಶಾಲೆಗಳನ್ನು ತೆರೆದಿದೆ. ಆ ಶಾಲೆಯಿಂದ ಶಿಕ್ಷಣ ಪಡೆದು ಕಮ್ಮಾರಿಕೆ ಮಾಡುವವರು ಬಹಳ ಕಡಿಮೆ. ವಂಶಪಾರಂಪರ್ಯವಾಗಿ ಈ ಕಸುಬನ್ನು ಕಲಿತು ಈ ವೃತ್ತಿಯನ್ನು ಕೈಗೊಳ್ಳುವವರೇ ಹೆಚ್ಚು.

ಇತ್ತೀಚಿನ ದಿನಗಳಲ್ಲಿ ಈ ವೃತ್ತಿ ಕಡಿಮೆಯಾಗುತ್ತಿದೆ. ಕಮ್ಮಾರರು ತಯಾರಿಸಿ ಕೊಡಬಹುದಾದ ವಸ್ತುಗಳು ದೊಡ್ಡ ದೊಡ್ಡ ಕಾರ್ಖಾನೆಯಲ್ಲಿಯೆ ತಯಾರಾಗಿ ಸಿದ್ಧಗೊಂಡ ವಸ್ತುಗಳು ಮಾರುಕಟ್ಟೆಯಲ್ಲಿ ದೊರಕುತ್ತಿರುವುದೆ ಇದಕ್ಕೆ ಕಾರಣವಿರಬಹುದು.

ಉತ್ತರ ಕನ್ನಡ ಜಿಲ್ಲೆಯ 'ಕಮ್ಮಾರಿಕೆ'

ಡಾ. ಸೈಯದ್ ಜಮೀರುಲ್ಲಾ ಷರೀಫ್

ಶಿಲಾಯುಗ ಮಾನವನ ಬುದ್ಧಿ ವಿಕಾಸದ ಹಂತಗಳಲ್ಲಿ ಅತಿ ಪ್ರಾಚೀನವಾದುದು. ಆ ಸಂದರ್ಭದಲ್ಲಿ ಆಹಾರಕ್ಕಾಗಿ ಬೇಟೆಯಾಡುವುದನ್ನು ಕಲಿತಾಗ ಅದಕ್ಕೆ ಪೂರಕವಾಗಿ ಶಿಲಾಯುಧಗಳು ತಯಾರಿಕೆಯಾದವು. ಅವು ಅಷ್ಟು ಪರಿಣಾಮಕಾರಿಯಾಗದೇ ಇರುವುದರಿಂದ ಲೋಹಯುಗ ಹುಟ್ಟಿತು. ಆ ಯುಗದ ಮಹತ್ತರ ಕೊಡುಗೆಯೆಂದರೆ ಲೋಹಾಯುಧಗಳು. ಪ್ರಾರಂಭದಲ್ಲಿ ಬೇಟೆ ಸಹಾಯಕ್ಕಾಗಿ ತಯಾರಿಸಲ್ಪಟ್ಟ ಲೋಹಾಯುಧಗಳು ಕಾಲ ಕ್ರಮೇಣ ಮಾನವನ ಅವಶ್ಯಕತೆಗಳ ಪೂರೈಕೆಗೆ ನೆರವಾದವು.

ಕಬ್ಬಿಣ ಕಂಡು ಹಿಡಿಯುವುದರ ಜೊತೆಗೆ ಅದನ್ನು ಯಾವ ಯಾವ ರೂಪದಲ್ಲಿ ಬಳಸಬಹುದೆಂಬ ಚಾಣಾಕ್ಷತನವು ಮಾನವನಲ್ಲಿ ಮೂಡಿತು. ಆಗ ಅಗತ್ಯಕ್ಕನುಸಾರವಾಗಿ ಕಬ್ಬಿಣದ ವಸ್ತುಗಳನ್ನು ತಯಾರಿಸುವ ಕೆಲಸ ಪ್ರಾರಂಭವಾಯಿತು. ಅದಕ್ಕಾಗಿಯೇ ಒಂದು ವರ್ಗದ ಜನ ಸೀಮಿತವಾದರು. ಅವರನ್ನು ಕಮ್ಮಾರರೆಂದು ಕೆಲವರು ಕರೆದರೆ, ಕೆಲವರು 'ಆಚಾರಿಗಳು' ಎಂದು ಕರೆದರು. ಕಬ್ಬಿಣದ ಕೆಲಸವು ಒಂದು ವೃತ್ತಿಯಾದ ಕಾರಣದಿಂದ ಜಾತಿ ಮತಗಳ ಭೇದ ಭಾವನೆಯಿಲ್ಲದೆ ದುಡಿಮೆಯ ಉದ್ದೇಶದಿಂದ ಆ ವೃತ್ತಿಯನ್ನು ಜನ ಆಯ್ಕೆ ಮಾಡಿಕೊಂಡರು. ಆದ್ದರಿಂದ ಕಮ್ಮಾರಿಕೆಯಲ್ಲಿ ನಿರತರಾದ ವರ್ಗದಲ್ಲಿ ಹಿಂದೂಗಳು, ಕ್ರಿಶ್ಚಿಯನ್ನರು, ಮುಸ್ಲಿಮ್ಮರು ಸಿಗುತ್ತಾರೆ. ಒಂದು ದೃಷ್ಟಿಯಲ್ಲಿ ಈ ವೃತ್ತಿಯು ಭಾವೈಕ್ಯತೆಯನ್ನು ಬಿಂಬಿಸುತ್ತದೆ.

ಉತ್ತರ ಕನ್ನಡ ಜಿಲ್ಲೆ ಉಳಿದ ಜಿಲ್ಲೆಗಳಂತೆ ಒಂದೇ ಸಂಸ್ಕೃತಿಯ ಜಿಲ್ಲೆಯಲ್ಲ. ಭೌಗೋಳಿಕವಾಗಿ ಇಬ್ಬಗೆಯಾಗಿರುವಂತೆ ಸಂಸ್ಕೃತಿಯು ದೃಷ್ಟಿಯಿಂದಲೂ ಎರಡು ಬಗೆಯ ಸಂಸ್ಕೃತಿಯನ್ನು ಇಲ್ಲಿ ಕಾಣಬಹುದು. ಘಟ್ಟದ ಮೇಲಿನ ಭಾಗವಾದ ಸಿರಸಿ, ಹಳಿಯಾಳ, ಸಿದ್ಧಾಪುರ, ಯಲ್ಲಾಪುರ ಮೊದಲಾದ ಪ್ರದೇಶಗಳಲ್ಲಿ ಕಾಣುವ ಜನಜೀವನಕ್ಕೂ, ಕರಾವಳಿ ಪ್ರದೇಶಕ್ಕೆ

ಸೇರಿದ ಕಾರವಾರ, ಅಂಕೋಲಾ, ಕುಮಟಾ, ಭಟ್ಕಳ ಈ ತಾಲ್ಲೋಕುಗಳಲ್ಲಿ ಕಾಣುವ ಜನಜೀವನಕ್ಕೂ ವ್ಯತ್ಯಾಸವಿದೆ. ಇದೇ ರೀತಿ ಕಮ್ಮಾರರ ಸಂಪ್ರದಾಯ ಮತ್ತು ಆಚರಣೆಗಳು ಕರಾವಳಿ ಪ್ರದೇಶಕ್ಕೂ ಘಟ್ಟದ ಮೇಲಿನ ಪ್ರದೇಶಕ್ಕೂ ವ್ಯತ್ಯಾಸಗೊಳ್ಳುತ್ತಾ ಹೋಗುತ್ತವೆ. ಕರಾವಳಿ ಪ್ರದೇಶದಲ್ಲಿ ಕಬ್ಬಿಣದ ಕೆಲಸ ಮಾಡುವವರನ್ನು ಕಮ್ಮಾರರೆಂದು ಕರೆಯದೆ 'ಆಚಾರಿ' ಗಳೆನ್ನುತ್ತಾರೆ. ಮರದ ಕೆಲಸದವರನ್ನೂ ಸಹ ಅದೇ ಹೆಸರಿಂದ ಕರೆಯುವುದು ಇಲ್ಲಿ ರೂಢಿಯಲ್ಲಿದೆ. ಒಂದು ಕಾಲದಲ್ಲಿ ಆಚಾರಿಗಳು ಕಬ್ಬಿಣದ ಮತ್ತು ಮರದ ಕೆಲಸಗಳೆರಡನ್ನೂ ಮಾಡುತ್ತಿದ್ದು ಕಾಲಕ್ರಮೇಣ ಕೆಲಸದ ಹೆಚ್ಚಿನ ಒತ್ತಡದಿಂದ ಅವೆರಡು ಕೆಲಸಗಳು ಪ್ರತ್ಯೇಕಗೊಂಡಿರಬಹುದೆಂದು ಕಾಣುತ್ತದೆ. ಆದರೂ 'ಆಚಾರಿ' ಎಂಬ ಹೆಸರು ಎರಡು ವೃತ್ತಿಗಳಿಗೂ ಒಂದಾಗಿಯೇ ಉಳಿದುಕೊಂಡಿತು. ಇದಲ್ಲದೆ ಕರ್ನಾಟಕದಲ್ಲಿ ಕಬ್ಬಿಣದ, ಮರದ ಚಿನ್ನದ, ತಾಮ್ರದ, ಕಂಚಿನ ಮತ್ತು ಕಲ್ಲಿನ ಕೆಲಸ ಮಾಡುವವರನ್ನೆಲ್ಲಾ "ಪಾಂಚಾಲರು" ಎಂದು ಕರೆಯುತ್ತಾರೆ. ಐದು ವೃತ್ತಿಗಳನ್ನು ನಿರ್ವಹಿಸಬಲ್ಲ ಪ್ರತ್ಯೇಕ ವರ್ಗಗಳ ಜನರಿಗೆ ಪಾಂಚಾಲರೆಂಬ ಹೆಸರು ಬಂದಿತು. ಕಮ್ಮಾರರನ್ನು ವಿಶ್ವಕರ್ಮನ ವಂಶೋದ್ಭವರೆಂದು ನಂಬುತ್ತಾರೆ.

ಕಮ್ಮಾರಿಕೆಯ ಕೆಲಸಕ್ಕೆ ದೈಹಿಕ ಬಲವೇ ಬಂಡವಾಳ. ದೃಢಕಾಯವಾದ ಮೈಕಟ್ಟು, ಆರೋಗ್ಯಕರ ದೇಹ ಹೊಂದಿರುವ ಈ ಜನರು ಶ್ರಮಜೀವಿಗಳು. ಉರಿಯುವ ಒಲೆಯ ಮುಂದೆ ಬೆವರಿನ ಸ್ನಾನ ಮಾಡುತ್ತಾ ಕೆಲಸ ಮಾಡುವ ಅವರು ಹಗಲಿರುಳು ದುಡಿದರೂ ತಮ್ಮ ಅವಶ್ಯಕತೆಗಳನ್ನು ಪೂರೈಸಿಕೊಳ್ಳಲಾಗುತ್ತಿಲ್ಲ. ಈ ಯಂತ್ರ ಯುಗದಲ್ಲಂತೂ ಕಮ್ಮಾರನ ಕುಲುಮೆಯಿಂದ ತಯಾರಾಗುವ ವಸ್ತುಗಳ ಸಂಖ್ಯೆ ಕಡಿಮೆಯಾಗುತ್ತಿದೆ. ವೃತ್ತಿಯಲ್ಲಿ ಪೈಪೋಟಿ ಹೆಚ್ಚಿರುವುದರಿಂದ ಕೆಲಸಕ್ಕೆ ತಕ್ಕ ಬೆಲೆ ದೊರೆಯದೆ ಕಮ್ಮಾರರು ಬೇರೆ ಬೇರೆ ಕೆಲಸಗಳನ್ನು ಹುಡುಕಿಕೊಂಡು ನಗರಗಳನ್ನು ಸೇರುತ್ತಿದ್ದಾರೆ. ಉಳಿದಿರುವ ಕಮ್ಮಾರರು ಸಹ ಹಿಂದಿನ ವಿಧಿ-ವಿಧಾನಗಳನ್ನು ಬಿಟ್ಟು ನಾಗರೀಕತೆಗೆ ಹೊಂದಿಕೊಂಡು ಬದುಕುತ್ತಿದ್ದಾರೆ. ಆದ್ದರಿಂದ ಅವರ ಮನೆಗಳಲ್ಲಿ ಹಿರಿಯರು ಆಚರಿಸುತ್ತಿದ್ದ ಸಂಪ್ರದಾಯಗಳು, ನಂಬುತ್ತಿದ್ದ ನಂಬಿಕೆಗಳು, ಮಾಡುತ್ತಿದ್ದ ವಸ್ತುಗಳು ಮರೆಯಾಗಿವೆ. ಅಳಿದುಳಿದ ಸಂಪ್ರದಾಯಗಳು, ನಂಬಿಕೆಗಳು ಅವರಿಗೇ ವಿಶಿಷ್ಟವಾಗಿರದೆ ಸಾಮಾನ್ಯವಾಗಿವೆ.

ಹಬ್ಬಗಳು

ಕಮ್ಮಾರಿಕೆಯನ್ನವಲಂಬಿಸಿದ ವಿವಿಧ ಮತಧರ್ಮದ ಜನರು ತಮ್ಮ ತಮ್ಮ ಧರ್ಮದ ಹಬ್ಬಗಳನ್ನು ಆಚರಿಸುತ್ತಾರೆ. ಹಿಂದೂ ಧರ್ಮದನುಸಾರ ಹಿಂದೂ ಕಮ್ಮಾರರು ಹಬ್ಬಗಳನ್ನು ಆಚರಿಸಿದರೆ ಇಸ್ಲಾಂ ಧರ್ಮಕ್ಕನುಸಾರವಾಗಿ ಮುಸ್ಲಿಮ್ಮರು, ಕ್ರೈಸ್ತ ಧರ್ಮಕ್ಕನುಸಾರವಾಗಿ ಕ್ರಿಶ್ಚಿಯನ್ನರು ಹಬ್ಬಗಳನ್ನು ಆಚರಿಸುವುದು ಕಂಡು ಬರುತ್ತದೆ. ಯಲ್ಲಾಪುರ, ಮುಂಡಗೋಡು, ಸಿದ್ದಾಪುರ, ಸಿರ್ಸಿ ಈ ಮೊದಲಾದ ಸ್ಥಳಗಳಲ್ಲಿ ಹಿಂದೂ ಮತ್ತು ಮುಸ್ಲಿಮ್ ಕಮ್ಮಾರರಿದ್ದಾರೆ. ಕರಾವಳಿ ಪ್ರದೇಶವಾದ ಕಾರವಾರ, ಅಂಕೋಲಾ, ಕುಮಟಾ, ಭಟ್ಕಳ ತಾಲ್ಲೂಕುಗಳಲ್ಲಿ ಹಿಂದು ಆಚಾರಿಗಳು ಹೆಚ್ಚಿದ್ದು ಕ್ರಿಶ್ಚಿಯನ್ ಆಚಾರಿಗಳ ಸಂಖ್ಯೆ ಕಡಿಮೆ ಇದೆ.

ಹಿಂದೂ ಆಚಾರಿಗಳು ದೀಪಾವಳಿ, ಸಂಕ್ರಾಂತಿ, ಹೊಸ್ತು, ತುಳಸಿ ಪೂಜೆ ಮೊದಲಾದ ಹಬ್ಬಗಳನ್ನು ಆಚರಿಸುತ್ತಾರೆ. ದೀಪಾವಳಿಯು ಅವರು ಆಚರಿಸುವ ಹಬ್ಬಗಳಲ್ಲೆಲ್ಲಾ ಗಮನಾರ್ಹವಾದ ಹಬ್ಬವಾಗಿದೆ. ಆ ಸಂದರ್ಭದಲ್ಲಿ ಅವರು ತಾವು ಬಳಸುವ ವಸ್ತುಗಳನ್ನೆಲ್ಲಾ ತೊಳೆದು ಚೊಕ್ಕಟಗೊಳಿಸಿ ಅವುಗಳಿಗೆ ಪೂಜೆ ಸಲ್ಲಿಸುತ್ತಾರೆ. ಆ ದಿನ ಕಮ್ಮಾರನ ಕಾಲೆಯನ್ನು ಮಾವಿನ ಎಲೆಯ ತೋರಣಗಳಿಂದ, ಮತ್ತು ಹೂಗಳಿಂದ ಅಲಂಕರಿಸುತ್ತಾರೆ. ಆಯುಧಗಳನ್ನು ತಿದಿ ಒಲೆಯ ಅಕ್ಕಪಕ್ಕ ಇಡುತ್ತಾರೆ. ಒಲೆಗೆ ಅವರು 'ಕಾಳಿ' ಎಂದು ಕರೆಯುತ್ತಾರೆ. ಅದಕ್ಕೆ ಪ್ರಾಣಿ ಬಲಿ ನೀಡುವ ಸಂಪ್ರದಾಯ ರೂಢಿಯಲ್ಲಿದೆ. ಆ ಸಂದರ್ಭದಲ್ಲಿ ಪಟಾಕಿ ಸುಟ್ಟು, ಸಿಹಿ ಹಂಚಿ ಸಂತೋಷ ಪಡುತ್ತಾರೆ.

'ಹೊಸ್ತು' ಹಬ್ಬವು ಹೊಸ ಧಾನ್ಯಕ್ಕೆ ಸಲ್ಲಿಸುವ ಪೂಜೆಯಾಗಿದೆ. ಆ ದಿನ ಮನೆಯ ಯಜಮಾನನು ಪೂಜಾಸಾಮಗ್ರಿಗಳನ್ನು ಹರಿವಾಣದಲ್ಲಿಟ್ಟುಕೊಂಡು ಬೆಳೆದು ನಿಂತ ಬತ್ತದ ಗದ್ದೆಗೆ ಹೋಗುತ್ತಾನೆ. ಅಲ್ಲಿ ಹಿಂದಿನ ದಿನದ ಸಂಜೆ ಕೊಯ್ದಿಟ್ಟ ಮೂರು ಹಿಡಿ ಭತ್ತದ ಕಟ್ಟಿಗೆ ಪೂಜೆ ಸಲ್ಲಿಸುತ್ತಾನೆ. ಅನಂತರ ಭತ್ತದ ಕಟ್ಟನ್ನು ಹರಿವಾಣದಲ್ಲಿಟ್ಟುಕೊಂಡು ತಲೆಯ ಮೇಲೆ ಹೊತ್ತು ಮನೆಗೆ ಬರುತ್ತಾನೆ. ಆಗ ಮನೆಯೊಡತಿ ಅವನ ಕಾಲಿಗೆ ನೀರು ಹಾಕಿ, ಅಡ್ಡಬಿದ್ದು ನಮಸ್ಕರಿಸುತ್ತಾಳೆ. ಹೀಗೆ ತಂದ ಭತ್ತದ ತೆನೆಗಳನ್ನು 'ಕದಿರು' ಎಂದು ಕರೆಯುತ್ತಾರೆ. ಆ ಕದಿರನ್ನು ಮನೆ ಬಾಗಿಲ ತೋರಣದ ಎರಡು ಬದಿಗೆ, ಮನೆಯ ಮುಂದಿನ

ಕಣದ ಮೇಟಿ ಕಂಬಕ್ಕೆ ಸಿಕ್ಕಿಸುತ್ತಾರೆ. ಉಳಿದ ತೆನೆಗಳಿಂದ ಅಕ್ಕಿ ಮಾಡಿ ಅದರಿಂದ ಪಾಯಸ ಮಾಡಿ ಊಟ ಮಾಡುತ್ತಾರೆ.

'ತುಳಸಿಹಬ್ಬ' ವನ್ನು 'ತುಳಸಿ ಲಗ್ನ' ಎಂದೂ ಸಹ ಕರೆಯುತ್ತಾರೆ. ಕರಾವಳಿಯಲ್ಲಿ ಪ್ರತಿಯೊಂದು ಮನೆಯ ಮುಂದೂ ತುಳಸಿ ಕಟ್ಟೆ ಸಾಮಾನ್ಯವಾಗಿದೆ. ಹಬ್ಬದ ದಿನ ಆ ಕಟ್ಟೆಗೆ ಮಣ್ಣು ಮೆತ್ತಿ, ಕೆಂಪು ಮಣ್ಣಿನ ಬಣ್ಣ ಬಳೆದು, ಗಿಡದ ಬುಡಕ್ಕೆ ಹೊಸಮಣ್ಣು ಹಾಕಿ ನೀರೆರೆದಿರುತ್ತಾರೆ. ಕಟ್ಟೆಯ ಮೇಲೊಂದು ಹಸಿರು ಚಪ್ಪರ ಹಾಕಿ ಅದರ ಸುತ್ತಾ ತೋರಣ ಕಟ್ಟಿರುತ್ತಾರೆ. ಚಪ್ಪರದ ಮಧ್ಯಭಾಗದಲ್ಲಿ ಮಾವಿನ ಎಲೆಯ ಗೊಂಚಲೊಡನೆ ಹಸಿ ಅಡಿಕೆಯ ಗೊಂಚಲನ್ನು ತೂಗುಹಾಕಿರುತ್ತಾರೆ. ಚಪ್ಪರದ ನಾಲ್ಕು ಕಂಬಗಳಿಗೂ ನಾಲ್ಕು ಕಬ್ಬಿನ ಜಲ್ಲೆಗಳನ್ನು ನಿಲ್ಲಿಸಿರುತ್ತಾರೆ. ಸೇವಂತಿಕೆ ಹೂವಿನಿಂದ ಚಪ್ಪದರದ ಸುತ್ತಾ ಅಲಂಕರಿಸಿರುತ್ತಾರೆ. ಆ ದಿನ ರಾತ್ರಿ ಸುಮಾರು ೮ ಗಂಟೆಯ ಹೊತ್ತಿಗೆ ತುಳಸಿ ಕಟ್ಟೆಗೆ ಪೂಜೆ ಸಲ್ಲಿಸಿ ಪಟಾಕಿ ಹೊಡೆಯುತ್ತಾರೆ. ಪೂಜೆಯ ನಂತರ ಪ್ರಸಾದವಾಗಿ ಪುರಿಯನ್ನು ಹಂಚಲಾಗುತ್ತದೆ. ಪೂಜೆ ಮುಗಿಸಿದ ಸಂಕೇತವಾಗಿ 'ಗರ್ನಲ್' (ಪಟಾಕಿ) ಹೊಡೆಯುತ್ತಾರೆ.

ಕಮ್ಮಾರರ ಕುಲದೇವತೆ ಕಾಳಭೈರವನಾಗಿದ್ದು ಆತನಿಗೆ ಹರಕೆ ಸಲ್ಲಿಸುವ ಸಂಪ್ರದಾಯ ರೂಢಿಯಲ್ಲಿದೆ. ಅದರ ವಿಶೇಷ ಭಕ್ತಿ ಕುಲದೇವರಿಗೆ ಸಂದರೂ, ಮಾರಿ, ತಿರುಪತಿ ತಿಮ್ಮಪ್ಪ, ಐಯ್ಯಪ್ಪ ಕಾಳಿ, ಜಟ್ಕ, ಮಾಸ್ತಿ, ಗಣಪತಿ ಈ ಮೊದಲಾದ ದೇವತೆಗಳನ್ನು ಅವರು ಮರೆಯದೆ ಆರಾಧಿಸುತ್ತಾರೆ. ಮಾರಿ, ಕಾಳಿ, ಕಾಳಭೈರವ, ಈ ದೇವತೆಗಳಿಗೆ ಬಲಿಕೊಡುವ ಸಂಪ್ರದಾಯವನ್ನಿಟ್ಟುಕೊಂಡಿದ್ದಾರೆ.

ಮಾಂಸಾಹಾರಿಗಳಾದ ಕಮ್ಮಾರರು ಸೋಮವಾರ, ಶನಿವಾರ ಮತ್ತು ಸಂಕಷ್ಟಿ ದಿನಗಳಲ್ಲಿ ಪೂರ್ಣ ಸಸ್ಯಾಹಾರಿಗಳಾಗಿರುತ್ತಾರೆ. ಉಳಿದ ದಿನಗಳಲ್ಲಿ ಅವರು ಮೀನು, ಕೋಳಿ, ಕುರಿ ಮಾಂಸವನ್ನು ಸ್ವೀಕರಿಸಲಡ್ಡಿಯಿಲ್ಲ. ಕರಾವಳಿಯ ಕಮ್ಮಾರರು ಮೀನೂಟ ಪ್ರಿಯರು. ಸೋಮವಾರ ಮತ್ತು ಶನಿವಾರದ ಹೊರತು ಅವರು ಪ್ರತಿದಿನ ಮೀನೂಟ ಮಾಡುತ್ತಾರೆ.

ಮುಸ್ಲಿಮ್ ಆಚಾರಿಗಳನ್ನು 'ಲೋಹಾರ್' ಎಂದು ಉರ್ದುವಿನಲ್ಲಿ ಕರೆಯುತ್ತಾರೆ. ಅವರು ಮುಸಲ್ಮಾನರು ಆಚರಿಸುವ ರಂಜಾನ್, ಬಕ್ರೀದ್,

ಮೊಹರಂ ಹಬ್ಬಗಳನ್ನು ಆಚರಿಸುತ್ತಾರೆ. ಕ್ರಿಶ್ಚಿಯನ್ನರು ಗುಡ್‌ಫ್ರೈಡೆ ಮತ್ತು ಕ್ರಿಸ್‌ಮಸ್ ಹಬ್ಬಗಳನ್ನು ಆರಿಸುತ್ತಾರೆ.

ಸಿದ್ಧಪಡಿಸುವ ವಸ್ತುಗಳು

ಹಿಂದೆ ಯಂತ್ರಗಳ ಪ್ರಭಾವ ಕಡಿಮೆಯಿದ್ದ ಕಾರಣದಿಂದ ಕಮ್ಮಾರನ ಸಹಾಯವಿಲ್ಲದೆ ವ್ಯವಸಾಯ ಸಾಗುತ್ತಿರಲಿಲ್ಲ. ಮನೆ ನಿರ್ಮಾಣವಾಗುತ್ತಿರಲಿಲ್ಲ. ಅಡಿಗೆ ಮಾಡುವುದು ಸಾಧ್ಯವಿರಲಿಲ್ಲ. ಈ ಎಲ್ಲಾ ಕೆಲಸಗಳಿಗೂ ಕಮ್ಮಾರನ ಶಾಲೆಯಿಂದ ಸಿದ್ಧವಾದ ವಸ್ತುಗಳು ನೆರವಾಗುತ್ತಿದ್ದವು. ಆದರೆ ಇಂದು ಟ್ರ್ಯಾಕ್ಟರು ಗಳು ಉಳುಮೆ ಮಾಡಲು ಪ್ರಾರಂಭಿಸಿದ್ದರಿಂದ ಮರದ ನೇಗಿಲು, ಕುಳಗಳು ಮಾಯವಾದವು. ಮನೆ ಕಟ್ಟಲು ಬೇಕಾದ ಕಬ್ಬಿಣದ ವಸ್ತುಗಳೆಲ್ಲಾ ಯಂತ್ರಗಳಿಂದ ಸಿದ್ಧ ಮಾಡುತ್ತಿರುವುದರಿಂದ ಕಮ್ಮಾರನ ಶಾಲೆಯಿಂದ ಸಿದ್ಧವಾಗುತ್ತಿದ್ದ ಚಿಲಕ, ಅಣಸು, ಕಬ್ಬಿಣದ ಪಟ್ಟಿ ಮೊದಲಾದವು ಮರೆಯಾಗುತ್ತಿವೆ. ನಗರಗಳಲ್ಲಂತೂ ಕಮ್ಮಾರನ - ಶಾಲೆ ಕಾಣುವುದು ಅಪರೂಪವಾಗಿದೆ. ಕೇವಲ ಹಳ್ಳಿಗಳಲ್ಲಿ ಮಾತ್ರ ಉಳಿದುಕೊಂಡಿರುವ ಕಮ್ಮಾರರು ಹಳ್ಳಿಗರ ಅಗತ್ಯಕ್ಕನುಸಾರ ಕಬ್ಬಿಣದ ವಸ್ತುಗಳನ್ನು ತಯಾರಿಸುತ್ತಿದ್ದಾರೆ.

ಕೃಷಿಕ ಮತ್ತು ಕಮ್ಮಾರರಿಬ್ಬರು ಹಿಂದೆ ಪರಸ್ಪರ ಅವಲಂಬಿಗಳಾಗಿದ್ದುದು ತಿಳಿದು ಬರುತ್ತದೆ. ಕಮ್ಮಾರರು ಕೃಷಿಕರಲ್ಲಿ ಆಯಗಾರರಾಗಿ ಕೆಲಸ ಮಾಡುತ್ತಿದ್ದರು. ವ್ಯವಸಾಯಕ್ಕೆ ಬೇಕಾದ ಉಪಕರಣಗಳನ್ನು ತಯಾರಿಸಿಕೊಟ್ಟು ಅದಕ್ಕೆ ಪ್ರತಿಯಾಗಿ ಬೆಳೆದ ಧಾನ್ಯದ ಒಂದು ಭಾಗವನ್ನು ಪಡೆಯುತ್ತಿದ್ದರು. ಕೃಷಿಕರವನಿಗೆ ಕಮ್ಮಾರನ ಹೊರತು ಕೃಷಿ ಮಾಡುವುದು ಅಸಾಧ್ಯವಾಗಿದ್ದ ಕಾರಣದಿಂದ ತಾನು ಬೆಳೆದ ಧಾನ್ಯದಿಂದ ಕಮ್ಮಾರನನ್ನು ಸಂತೋಷ ಪಡಿಸಿ ಅವನ ಸಹಕಾರವನ್ನು ಅಗತ್ಯ ಬಿದ್ದಾಗ ಪಡೆಯುತ್ತಿದ್ದನು. ಆದರೆ ಈ ಪ್ರಾಮಾಣಿಕತೆ ಕಾಲಕ್ರಮೇಣ ಮಾಯ ವಾಗುತ್ತಾ ಹೋದದ್ದರಿಂದ ಆಯವನ್ನು ಅವಲಂಬಿಸುವುದು ದೂರವಾಗಿ ಮಾಡಿದ ಕೆಲಸಕ್ಕೆ ತಕ್ಕ ಹಣ ಪಡೆಯುವ ಪದ್ಧತಿಯು ಸಾಮಾನ್ಯವಾಯಿತು. ಇಂದಿನ ಪರಿಸರಕ್ಕೆ ತಕ್ಕಂತೆ ಬದುಕು ಸಾಗಿಸುವುದು ಕಮ್ಮಾರನಿಗೆ ಅನಿವಾರ್ಯ ವಾಗಿದ್ದರಿಂದಲೂ ಹಣಕ್ಕಾಗಿ ಕೆಲಸ ಮಾಡುವ ಪ್ರವೃತ್ತಿ ಆತ ಬೆಳಸಿಕೊಳ್ಳ ಬೇಕಾಯಿತು.

ಕಮ್ಮಾರನು ತಯಾರಿಸುವ ವಸ್ತುಗಳನ್ನು ಪ್ರಮುಖವಾಗಿ ಮೂರು ಬಗೆಯನ್ನಾಗಿ ಮಾಡಬಹುದು.

1) ಕೃಷಿ ಬಳಕೆಯ ವಸ್ತುಗಳು

2) ಗೃಹ ಬಳಕೆಯ ಮತ್ತು ಗೃಹ ನಿರ್ಮಾಣದ ವಸ್ತುಗಳು

3) ಹೊರಾಂಗಣ ವಸ್ತುಗಳು

1) ಕೃಷಿ ಬಳಕೆಯ ವಸ್ತುಗಳು

ಉತ್ತರ ಕನ್ನಡ ಜಿಲ್ಲೆಯ ಶಿರ್ಸಿ, ಸಿದ್ದಾಪುರ, ಯಲ್ಲಾಪುರ ಮತ್ತು ಹಳಿಯಾಳ ತಾಲ್ಲೋಕುಗಳಲ್ಲಿ ಕೃಷಿಕರ ಸಂಖ್ಯೆ ಹೆಚ್ಚಾಗಿರುವುದರಿಂದ ಅವರಿಗೆ ಅಗತ್ಯವಾದ ಸಾಧನಗಳನ್ನು ಕಮ್ಮಾರರು ತಯಾರಿಸಿ ಕೊಡುತ್ತಾರೆ. ಅವುಗಳಲ್ಲಿ ಪ್ರಮುಖವಾದವುಗಳೆಂದರೆ ಪಿಕಾಸಿ, ಹಾರೆ, ಕತ್ತಿ, ಕೊಡಲಿ, ನೇಗಿಲು, ಕುಳ, ಕುರುಪಿ ಮೊದಲಾದವುಗಳು. ಅವು ಬಳಸಿ ಸವೆದಾಗ ಇಲ್ಲವೆ ಮುರಿದಾಗ ಅವುಗಳನ್ನು ರಿಪೇರಿ ಮಾಡಿ ಕೊಡುತ್ತಾರೆ. ಕರಾವಳಿಯಲ್ಲಿ ನೆಲದ ಕೃಷಿಗಿಂತ ಜಲಕೃಷಿ ಹೆಚ್ಚಾಗಿದೆ. ಅಂತಹವರಿಗೂ ಬೋಟಿಗೆ ಬೇಕಾಗುವ ಕಬ್ಬಿಣದ ಸಮಾನುಗಳನ್ನು ತಯಾರಿಸಿಕೊಡುವ, ಮೀನು ಹಿಡಿಯಲು ಗಾಳ ಮಾಡಿಕೊಡುವ ಜವಾಬ್ದಾರಿಯೂ ಆಚಾರಿಯದೇ ಆಗಿರುತ್ತದೆ.

ಕೃಷಿಕನ ವಾಹನ ಚಕ್ಕಡಿಯಾಗಿದೆ. ಅದನ್ನು ಮಾಡಲು ಆಚಾರಿಯಲ್ಲಿ ಮರಗೆಲಸದ ಜ್ಞಾನ ಅನಿವಾರ್ಯ. ಕಬ್ಬಿಣದ ಮತ್ತು ಮರದ ಕೆಲಸಗಳೆರಡನ್ನೂ ಬಲ್ಲ ಆಚಾರಿಗಳು ಕಡಿಮೆ ಸಂಖ್ಯೆಯಲ್ಲಿರುತ್ತಾರೆ. ಅಂತಹ ಆಚಾರಿಗಳು ಒಂದು ಚಕ್ಕಡಿ ಸಿದ್ಧ ಮಾಡಲು 20 ರಿಂದ 30 ದಿನಗಳು ತೆಗೆದುಕೊಳ್ಳುತ್ತಾರೆ. ಹೊಸ ಚಕ್ಕಡಿಯೊಂದಕ್ಕೆ ರೂ. 3000 ದಿಂದ ಐದಾರು ಸಾವಿರದವರೆಗೆ ಬೆಲೆ ಇದೆ. ಸಾಮಾನ್ಯವಾಗಿ ಮರದ ಜಾತಿಯನುಸಾರ ಚಕ್ಕಡಿ ಬೆಲೆ ಹೆಚ್ಚು ಕಡಿಮೆಯಾಗುತ್ತದೆ. ಅಲ್ಲದೆ ಚಕ್ಕಡಿಯ ಕಲಾತ್ಮಕ ಕೆಲಸ, ಬಳಸಲ್ಪಡುವ ಹಿತ್ತಾಳೆಯ ಗುಂಬದ ಬಳೆ ಮೊದಲಾದವುಗಳಿಂದಲೂ ಚಕ್ಕಡಿ ಬೆಲೆ ಹೆಚ್ಚುತ್ತದೆ. ಈ ದೃಷ್ಟಿಯಿಂದ ಆಚಾರಿ ಕೇವಲ ಒಬ್ಬ ಕೆಲಸಗಾರ ಮಾತ್ರನಾಗದೆ ಒಬ್ಬ ಒಳ್ಳೆಯ ಕಲಾವಿದನೂ ಆಗಿರಬೇಕಾಗುತ್ತದೆ.

ಹಳೆಯ ಚಕ್ಕಡಿಯ ರಿಪೇರಿ, ಹಳಿಬಿಟ್ಟ ಚಕ್ರಗಳಿಗೆ ಹಳಿ ಹಾಕುವುದು, ಅಚ್ಚು (ಹಾರೆ) ಮುರಿದರೆ ಅದನ್ನು ಜೋಡಿಸುವುದು, ಚಕ್ರಗಳ ಗುಂಬದ ಹಳಿ ಬಿಟ್ಟರೆ ಹಾಕುವುದು ಈ ಮೊದಲಾದ ಕೆಲಸಗಳನ್ನು ಆಚಾರಿ ಮಾಡುತ್ತಾನೆ.

ಒಂದು ಜೊತೆ ಚಕ್ರಕ್ಕೆ ಹಳಿ ಹಾಕಿಕೊಟ್ಟರೆ ರೂ. 300 ತೆಗೆದುಕೊಳ್ಳುತ್ತಾರೆ. ಇದರಲ್ಲಿ ಹಳಿ ಕಾಯಿಸುವ ತೆಂಗಿನ ಸಿಪ್ಪೆಗೆ ಅರ್ಧಹಣ ಹೋಗುತ್ತೆ ಎನ್ನುತ್ತಾರೆ. ಟೈರಿನ ಗಾಡಿಗಳು ಬಂದು ಹಳಿ ಹಾಕುವ ಕೆಲಸ ನಿಂತು ಹೋಗಿದೆ. ಚಕ್ಕಡಿಯಲ್ಲಿ ಓಡಾಡುವವರಂತೂ ಇಲ್ಲವೇ ಇಲ್ಲ. ವಸ್ತುಗಳೆಲ್ಲವನ್ನೂ ಟೆಂಪೋದಲ್ಲಿ ಸಾಗಿಸುವ ಕೆಲಸ ಹೆಚ್ಚಿರುವುದರಿದ ಚಕ್ಕಡಿ ಮಾಡಿಸುವವರು ಅಪರೂಪವಾಗಿದ್ದಾರೆಂದು ಅವರು ಗೊಣಗುತ್ತಾರೆ.

2) ಗೃಹ ನಿರ್ಮಾಣದ ಮತ್ತು ಗೃಹ ಬಳಕೆಯ ವಸ್ತುಗಳು

ಆಚಾರಿಗಳ ಸಾಧನಗಳಿಲ್ಲದೆ ಮನೆಯ ನಿರ್ಮಾಣವಾಗಲಿ, ಮನೆಯೊಳಗಿನ ಆಹಾರವಾಗಲಿ ಸಿದ್ಧವಾಗುವುದು ಕಷ್ಟ. ಆಹಾರ ತಯಾರಿಸುವಾಗ ತರಕಾರಿ ಕೊಚ್ಚುವ, ತೆಂಗಿನ ಕಾಯಿ ತುರಿಯುವ ಕೆಲಸಕ್ಕೆ ಕತ್ತಿ ಇಲ್ಲವೆ ತುರಿಮಣೆಯ ಅಗತ್ಯ ಬೀಳುತ್ತದೆ. ಅದೇ ರೀತಿ ಒಲೆಯಲ್ಲಿನ ಕೆಂಡ ತೆಗೆಯಲು ಇಕ್ಕಳ ಬೇಕಾಗುತ್ತದೆ. ಈ ಎಲ್ಲಾ ವಸ್ತುಗಳು ಆಚಾರಿಯ ಶಾಲೆಯಿಂದಲೇ ಸಿದ್ಧವಾಗಬೇಕು. ಕರಾವಳಿಯ ಮುಖ್ಯ ಆಹಾರ ಮೀನಾಗಿರುವುದರಿಂದ ಅದನ್ನು ಕೊಚ್ಚುವ 'ಮೆಟ್‌ಕತ್ತಿ' ಪ್ರತಿ ಮನೆಯಲ್ಲೂ ಇದ್ದೇ ಇರಬೇಕು. ಘಟ್ಟದ ಮೇಲಿನ ಜನರು ವೀಳ್ಯ ತಿನ್ನುವ ಹವ್ಯಾಸ ಉಳ್ಳವರು. ಅವರು ತಿನ್ನುವ ಅಡಿಕೆ ಹಸಿಯಾಗಿದ್ದು ಅದನ್ನು 'ಬೆಟ್ಟೆ' ಎಂದು ಕರೆಯುತ್ತಾರೆ. ಅಂತಹ ಬೆಟ್ಟೆ ಅಡಕೆಯನ್ನು ಸುಲಿಯಲು ಮತ್ತು ಅದನ್ನು ತುಂಡು ತುಂಡಾಗಿ ಕತ್ತರಿಸಲು ಚಿಕ್ಕ ಕತ್ತರಿಯೊಂದು ಚೀಲದಲ್ಲಿ ಇದ್ದೇ ಇರುತ್ತದೆ. ಈ ಎಲ್ಲಾ ಸಾಧನಗಳನ್ನು ಆಚಾರಿಯೇ ತಯಾರಿಸುತ್ತಾನೆ. ಹಲ್ಲು ಇಲ್ಲದವರಿಗೆ ವೀಳ್ಯ ಅಡಿಕೆ ಪುಡಿ ಮಾಡಿಕೊಡುವ 'ಕುಟ್ಟಣೆ'ಯು ಸಹ ಆಚಾರಿಯ ಕೈಯಿಂದಲೇ ಸಿದ್ಧವಾಗುತ್ತದೆ. ಗೋಡೆಗೆ ಹೊಡೆವ ಮೊಳೆಯಿಂದ ಹಿಡಿದು ಕಾಯಿ ಸುಲಿಯುವ ಊಸಿ, ಬಾಗಿಲ ಚಿಲುಕ, ಪಟ್ಟಿ ಮೊದಲಾದ ವಸ್ತುಗಳ ತಯಾರಕ ಆಚಾರಿಯೇ ಆಗಿರುತ್ತಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಮಳೆ ಮತ್ತು ಬಿಸಿಲಿನ ತಾಪ ಇವೆರಡೂ ಹೆಚ್ಚಾಗಿರುವುದರಿದ ತಾರಸಿ ಮನೆಗಳಿಗಿಂತ ಮಂಗಳೂರು ಹೆಂಚಿನ ಮನೆಗಳೇ ಹೆಚ್ಚು. ಸುಮಾರು 20 ಅಡಿ ಎತ್ತರದ ಮನೆಯ ಮೇಲೆ ಪಿರಮಿಡ್ಡಿನಾಕಾರದಲ್ಲಿ ಹೆಂಚು ಹೊದಿಸಿ ನಡುವೆ ಪುಟ್ಟ ಮಾಳಿಗೆ ಇರುತ್ತದೆ. ಹಲಗೆ ಹಾಕಿ ಪುಟ್ಟ

ಮಾಳಿಗೆ ಮಾಡಿರುತ್ತಾರೆ. ಪಿರಿಮಿಡ್ಡಿನಾಕಾರದಲ್ಲಿ ಹೊದಿಸಿದ ಹೆಂಚು ಹೆಚ್ಚು ಕಡಿದಾಗಿರುವುದರಿಂದ ಅದು ಕೆಳಗೆ ಜಾರಿ ಬರದಂತೆ ನಾಲ್ಕು ಮೂಲೆಗೂ ಕಬ್ಬಿಣದ ನಾಗರಹೆಡೆ ಯನ್ನು ಸಿಕ್ಕಿಸಿರುತ್ತಾರೆ. ಹೆಂಚಿನ ನೀರು ಒಂದೆಡೆಹರಿದು ಬರಲು "ಕಡುಮಾಡಿನ" ಹೆಂಚಿನ ಕೊನೆಯಲ್ಲಿ ಅರ್ಧ ಕತ್ತರಿಸಿದ ಪ್ಲಾಸ್ಟಿಕ್ ಪೈಪನ್ನು 'ಹರಿಣಿ ಹುಕ್ಕಿ ನ' ಮೇಲೆ ಸಿಕ್ಕಿಸಿರುತ್ತಾರೆ. ಒಟ್ಟಿನಲ್ಲಿ ಉತ್ತರ ಕನ್ನಡ ಜಿಲ್ಲೆಯ ಹೆಂಚಿನ ಮನೆಗಳು ಆಕರ್ಷಣೀಯವಾರುತ್ತವೆ.

ಕರಾವಳಿಯ ಕೃಷಿಕರ ಮನೆಯಲ್ಲಿ 'ಹಡಿ ಮಂಚ' ಇದ್ದೇ ಇರುತ್ತದೆ. ಈ ಮಂಚವು ಮನೆಯ ಯಜಮಾನ ಮಲಗಲು ಬಳಸಲಾಗುತ್ತದೆ. ಸುಗ್ಗಿಯ ಸಂದರ್ಭದಲ್ಲಿ ಅದನ್ನು ಭತ್ತ ಬಡಿಯಲು ಉಪಯೋಗಿಸುತ್ತಾರೆ. ಅಂತಹ ಮಂಚದ ಕಾಲು ಮತ್ತು ಅಡ್ಡ ಪಟ್ಟಿಯನ್ನು ಸೇರಿಸಲು 'L' ಈ ಪಟ್ಟಿಯನ್ನು ಬಳಸಲಾಗುತ್ತದೆ. ಇದಕ್ಕೆ ಹಡಿ ಮಂಚದ ಪಟ್ಟಿ ಎನ್ನುತ್ತಾರೆ. ಈ ಮೇಲಿನ ವಸ್ತುಗಳೆಲ್ಲಾ ಆಚಾರಿಯ ಕಾರ್ಖಾನೆಯಲ್ಲಿ ಸಿದ್ಧವಾಗುತ್ತದೆ.

ಹಿಂದೆ ಬಳಸುತ್ತಿದ್ದ 'ಹಾನೆ', 'ಕೊಳಗ' ಮೊದಲಾದ ಅಳತೆಯ ಸಾಧನಗಳಿಗೆ ಕಬ್ಬಿಣ ಇಲ್ಲವೆ ಹಿತ್ತಾಳೆಯ ಪಟ್ಟಿ ಹಾಕುವ, ಒಲೆ ಊದಲು ಬಳಸುವ ಊದುಗೊಳವಿ ಮಾಡುವ ಕೆಲಸ ಆಚಾರಿಯದಾಗಿರುತ್ತದೆ. ಇಂದಿಗೂ ಉತ್ತರ ಕನ್ನಡ ಜಿಲ್ಲೆಯ ಹಳ್ಳಿಗಳಲ್ಲಿ ಹಿದಿನ ಅಳತೆ ಸಾಧನಗಳೇ ರೂಢಿಯಲ್ಲಿವೆ. ಇದಕ್ಕೆ ಕಾರಣ ಅವರು ದಟ್ಟ ಅಡವಿಯ ನಡುವೆ ಬದುಕುತ್ತಿದ್ದು ನಗರಗಳ ಸಂಬಂಧದಿಂದ ದೂರ ಉಳಿದಿರುವುದು. ಇತ್ತೀಚೆಗೆ ಕೆಲವರು ವೆಲ್ಡಿಂಗ್ ಶಾಪ್ ತೆರೆದು ಗ್ರೀಲು, ಕಬ್ಬಿಣದ ಬಾಗಿಲು, ಕಬ್ಬಿಣದ ಉಯ್ಯಾಲೆ ಮೊದಲಾದವುಗಳನ್ನು ತಯಾರಿಸುತ್ತಾರೆ.

3) ಹೊರಾಂಗಣ ವಸ್ತುಗಳು

ಹಿಂದೆ ಸೈನ್ಯಕ್ಕೆ ಬೇಕಾಗುವ ಶಿರಸ್ತ್ರಾಣ, ಭರ್ಚಿ, ಕತ್ತಿ, ಅಂಗಾಂಗಗಳ ಕವಚ ಮೊದಲಾದವುಗಳನ್ನು ಆಚಾರಿಗಳೇ ಸಿದ್ಧಮಾಡುತ್ತಿದ್ದರು. ಇಂದು ಆ ಕೆಲಸವನ್ನು ಯಂತ್ರಗಳು ಮಾಡುತ್ತಿವೆ.

ಬಡಗಿ, ಅಕ್ಕಸಾಲಿಗ, ಮನೆ ಕಟ್ಟುವ "ಗೊಂಡಿ", ಕಲ್ಲು ಕಡಿವ ವಡ್ಡರು ಈ ಮೊದಲಾದವರಿಗೆ ಬಳಸುವ ಸಾಧನಗಳೆಲ್ಲಾ ಆಚಾರಿಯೆ

ಸಿದ್ಧಮಾಡುತ್ತಾನೆ. ಅವುಗಳಲ್ಲಿ ಪ್ರಮುಖವೆಂದರೆ, ಉಳಿ ಬಾಚಿ, ಇಕ್ಕಳ, ಕೊಂಡಿ, ಅಡಿಗಲ್ಲು, ಗನ, ಚಾಣ ಮೊದಲಾದವು, ಕೆಲವು ಆಚಾರಿಗಳು ರಹಸ್ಯವಾಗಿ ನಾಡಬಂದೂಕುಗಳನ್ನು ತಯಾರಿಸುತ್ತಿದ್ದರೆಂದು ಅದು ಕಾನೂನು ಬಾಹಿರವೆಂದು ತಿಳಿದ ನಂತರ ನಿಲ್ಲಿಸಿದ್ದಾರೆಂದು ಕೆಲವರ ಹೇಳಿಕೆ.

ಬಳಸುವ ಕಚ್ಚಾ ಸಾಮಗ್ರಿಗಳು

ಕಬ್ಬಿಣದ ಕಾರ್ಖಾನೆಯಿಂದ ಸಿದ್ಧವಾದ ಕಬ್ಬಿಣವನ್ನು ಕಮಮಾರನು ಕಚ್ಚಾ ಸಾಮಗ್ರಿಯನ್ನಾಗಿ ಬಳಸಿ ಜನರ ಅಗತ್ಯಕ್ಕನುಸಾರ ವಸ್ತುಗಳನ್ನು ತಯಾರಿಸುತ್ತಾನೆ. ಕಬ್ಬಿಣದ ಬೆಸಿಗೆಗೆ ಬಿಳಿಗಾರವನ್ನು, ಬೆಂಕಿಗಾಗಿ ಇದ್ದಿಲನ್ನು, ಹದಕ್ಕೆ ನೀರನ್ನು ಬಳಸಲಾಗುತ್ತದೆ.

ಬಳಸುವ ಸಾಧನ ಮತ್ತು ಉಪಕರಣಗಳು

ಅಡಿಗಲ್ಲು : ಕಬ್ಬಿಣವನ್ನು ಕಾಸಿದ ನಂತರ ಅದನ್ನು ಬೇಕಾದ ಆಕಾರಕ್ಕೆ ತರಲು ಅಡಿಗಲ್ಲು ಮತ್ತು ಸುತ್ತಿಗೆ ಅತಿ ಅವಶ್ಯಕ. ಅಡಿಗಲ್ಲಿನಲ್ಲಿ ಎರಡು ಬಗೆಯ ಅಡಿಗಲ್ಲನ್ನು ಬಳಸಲಾಗುತ್ತದೆ. ಚಿಕ್ಕ ವಸ್ತುಗಳ ತಯಾರಿಕೆಗಾಗಿ ಸಣ್ಣ ಅಡಿಗಲ್ಲನ್ನು ಬಳಸುತ್ತಾರೆ. ಆ ಕಬ್ಬಿಣದ ಅಡಿಗಲ್ಲನ್ನು ಮರದ ತುಂಡಿನ ಮೇಲೆ ಕೂಡಿಸಿರುತ್ತಾರೆ. ಆ ತುಂಡನ್ನು ಅರ್ಧದಷ್ಟು ನೆಲದಲ್ಲಿ ಮುಚ್ಚಿರುತ್ತಾರೆ. ಇದರಿಂದ ಕಬ್ಬಿಣದ ಅಡಿಗಲ್ಲು ತುಕ್ಕು ಹಿಡಿಯದು ಅಲ್ಲದೆ ಬಡಿಯುವಾಗ ಅಲುಗಾಡದಂತೆ ಸ್ಥಿರವಾಗಿ ನಿಂತಿರುತ್ತದೆ. ಈ ಅಡಿಗಲ್ಲನ್ನು ಕತ್ತಿ, ಕುಳ, ಉಳಿ, ಮೊದಲಾದ ಚಿಕ್ಕ ಸಾಧನಗಳನ್ನು ತಯಾರಿಸಲು ಬಳಸಲಾಗುವುದು. ದೊಡ್ಡ ಅಡಿಗಲ್ಲಿನ ಕಬ್ಬಿಣದ ತುಂಡನ್ನು ನೆಲದ ಮೇಲೆ ಹಾಕಿರುತ್ತಾರೆ. ಆ ತುಂಡಿನ ಅಗಲ ಸುಮಾರು ಒಂದು ಅಡಿ ಇದ್ದು, 9" ದಪ್ಪ ಇರುತ್ತದೆ. ಗಾಡಿಯ ಹಳಿಗೆ ಬೆಸುಗೆ ಹಾಕಲು ಪಿಕಾಸಿ ಹಾರೆ ಮೊದಲಾದವುಗಳನ್ನು ತಯಾರಿಸುವಾಗ ಅದರ ಮೇಲಿಟ್ಟು ಬಡಿಯುತ್ತಾರೆ.

ಘನ

ದೊಡ್ಡ ಸುತ್ತಿಗೆಯನ್ನು ಕರಾವಳಿಯೆಡೆ 'ಘನ' ಎನ್ನುತ್ತಾರೆ. ಇದನ್ನು ಸಣ್ಣ ಸುತ್ತಿಗೆಯಿಂದ ಬಡಿಯಲು ಸಾಧ್ಯವಾಗದೇ ಇರುವಾಗ ಬಳಸಲಾಗುತ್ತದೆ. ಸಾಮಾನ್ಯವಾಗಿ ದೊಡ್ಡ ಗಾತ್ರದ ಕಬ್ಬಿಣವನ್ನು ಬಡಿಯಲು ಇದನ್ನು ಬಳಸುತ್ತಾರೆ.

ಕಾದ ಕಬ್ಬಿಣವನ್ನು ಇಕ್ಕಳದಿಂದ ಹಿಡಿದ ಅಡಿಗಲ್ಲಿನ ಮೇಲೆ ಇಟ್ಟಾಗ ಮತ್ತೊಬ್ಬ 'ಘನ' ದಿಂದ ಅದನ್ನು ಬಡಿಯುತ್ತಾನೆ.

ಇಕ್ಕಳ

ಕಾದ ಕಬ್ಬಿಣವನ್ನು ಹಿಡಿಯಲು ಮತ್ತು ಒಲೆಯಲ್ಲಿ ಕಬ್ಬಿಣ ಮೆದುವಾಗುವ ಮಟ್ಟಕ್ಕೆ ಕಾದಿದೆಯೆ ಎಂಬುದನ್ನು ಪರೀಕ್ಷಿಸಲು ಇಕ್ಕಳವನ್ನು ಬಳಸಲಾಗುತ್ತದೆ. ಇದರಲ್ಲಿ ಸಣ್ಣ ಮತ್ತು ದೊಡ್ಡ ಇಕ್ಕಳಗಳಿರುತ್ತವೆ. ಕಮ್ಮಾರನೇ ಇದನ್ನು ತಯಾರಿಸಿಕೊಳ್ಳುತ್ತಾನೆ. ಕರಾವಳಿಯ ಕಮ್ಮಾರರು ಇದನ್ನು "ಪಕ್ಕಡ" ಎಂದೂ ಕರೆಯುತ್ತಾರೆ.

ಬರಗಲ್ಲು

ಘಟ್ಟದ ಮೇಲೆ ಇದನ್ನು ಕೊಕ್ಕಿ ಎನ್ನುತ್ತಾರೆ. ಕರಾವಳಿಯ ಕಮ್ಮಾರರು ಬರಗಲ್ಲು ಎನ್ನುತ್ತಾರೆ. ಎರಡು ಅಡಿ ಉದ್ದವಾದ ಕಬ್ಬಿಣದ ಸಲಾಕೆಯನ್ನು ಒಂದು ಬದಿಯಲ್ಲಿ ತಟ್ಟಿ ಚಮಚದ ಬಾಯಿಯಂತೆ ಮಾಡಿರುತ್ತಾರೆ. ಈ ಸಾಧನವನ್ನು ಕಬ್ಬಿಣ ಕಾದಿರುವುದೋ ಇಲ್ಲವೋ ಎಂಬುದನ್ನು ಪರೀಕ್ಷಿಸಲು ಮತ್ತು ಒಲೆಯೊಳಗೆ ಇದ್ದಿಲನ್ನು ನೂಕಲು ಬಳಸುತ್ತಾರೆ. ಇದನ್ನು ಕಮ್ಮಾರನೇ ತಯಾರಿಸಿಕೊಳ್ಳುತ್ತಾನೆ.

ಚಾಣ

ಇದರಲ್ಲಿ 'ಸಪೂರ' ಬಾಯಿಯ ಚಾಣ, ಅಗಲ ಬಾಯಿಯ ಚಾಣವೆಂದು ಎರಡು ವಿಧಗಳು. ಸಪೂರ ಬಾಯಿಯ ಚಾಣವನ್ನು ಕಬ್ಬಿಣಕ್ಕೆ ರಂಧ್ರ ಮಾಡಲು ಬಳಸಿದರೆ, ಅಗಲ ಬಾಯಿಯ ಚಾಣವನ್ನು ಕಬ್ಬಿಣ ಕತ್ತರಿಸಲು ಬಳಸಲಾಗುತ್ತದೆ. ಸಪೂರ ಬಾಯಿಯ ಚಾಣಕ್ಕೆ 'ಪಂಚ್' ಎಂದೂ ಸಹ ಕರೆಯುತ್ತಾರೆ.

ಕಾನೂಸ್

ಕಬ್ಬಿಣಕ್ಕೆ ಹದ ಕೊಟ್ಟ ನಂತರ ಅದು ಸರಿಯಾಗಿ ಹದ ಹಿಡಿದಿದೆಯೋ ಇಲ್ಲವೋ ಎಂಬುದನ್ನು 'ಕಾನೂಸ್' ನಿಂದ ಉಜ್ಜಿ ನೋಡಿ ನಿರ್ಧರಿಸುತ್ತಾರೆ. ಮುಸ್ಲಿಮ್ ಆಚಾರಿಗಳು ಇದನ್ನು 'ಅರಾ' ಎಂದೂ ಘಟ್ಟದ ಮೇಲಿನವರು 'ಫೈಲ್', 'ಕಾನಸ್' ಎಂದು ಕರೆಯುತ್ತಾರೆ.

ತಿದಿ

ಕಮ್ಮಾರನ ಕುಲುಮೆಯ ಜೀವಾಳ. 'ತಿದಿ'ಯಾಗಿದೆ. ಇದನ್ನು ಎಮ್ಮೆಯ ಇಲ್ಲವೆ ದನದ ಚರ್ಮದಿಂದ ಮಾಡುತ್ತಾರೆ. ಕಮ್ಮಾರನಿಗೆ ಕೆಲಸದಲ್ಲಿ ಸಹಾಯ ಮಾಡುವವನು ತಿದಿ ಒತ್ತುವವನಾಗಿರುತ್ತಾನೆ. ಕಬ್ಬಿಣ ಕಾಯುವವರೆಗೂ ಅವನು ತಿದಿ ಒತ್ತಿ ಅನಂತರ ಕಬ್ಬಿಣವನ್ನು ದೊಡ್ಡ ಸುತ್ತಿಗೆಯಿಂದ ಬಡಿಯುವ ಕೆಲಸ ಮಾಡುತ್ತಾನೆ.

ಇತ್ತೀಚೆಗೆ ಬ್ಲೋವರ್‌ನ ಬಳಕೆ ಹೆಚ್ಚಾಗಿ ತಿದಿ ಮರೆಯಾಗುತ್ತಿದೆ. ಅಲ್ಲದೆ ತಿದಿಯ ಚರ್ಮದ ಬೆಲೆ ಹೆಚ್ಚಿರುವ ಕಾರಣದಿಂದ ಅದು ದುಬಾರಿ ಸಾಧನವಾಗಿದೆ. ಆದ್ದರಿಂದ ಕಮ್ಮಾರರು ಬ್ಲೋವರ್‌ನನ್ನು ಹೆಚ್ಚಾಗಿ ಬಳಸುತ್ತಿದ್ದಾರೆ.

ಗಾಡಿಯ ಗುಂಬ (ಬುರುಡೆ) ಮಾಡುವ ಚಕ್ರ

ಮೂರು ಅಡಿ ಎತ್ತರದ ಮರದ ಇಲ್ಲವೆ ಕಬ್ಬಿಣದ ಸ್ಟ್ಯಾಂಡಿನ ಮೇಲೆ ಒಂದು ಕಬ್ಬಿಣದ ಚಕ್ರವನ್ನುಇಟ್ಟು, ಅದರ ಒಂದು ಬದಿಯಲ್ಲಿ ಚಕ್ರ ತಿರುಗಿಸುವ ಹಿಡಿಯಿರುತ್ತದೆ. ಮತ್ತೊಂದು ಬದಿಗೆ ಕಬ್ಬಿಣದ ಕೊಳವೆ ಇರುತ್ತದೆ. ಇದಕ್ಕೆ ಗುಂಬ ಮಾಡುವ ಮರದ ತುಂಡನ್ನು ಸಿಕ್ಕಿಸಿ ಅದು ಹೊರಬರದಂತೆ ಕಬ್ಬಿಣದ ಕೊಳವೆಗೆ ಕೊಂಡಿಯಾಕಾರದ ಮೊಳೆ ಸಿಕ್ಕಿಸುತ್ತಾರೆ. ಹಿಡಿಯ ಸಹಾಯದಿಂದ ಒಬ್ಬ ಚಕ್ರವನ್ನು ಜೋರಾಗಿ ತಿರುಗಿಸುತ್ತಾನೆ. ಆಗ ಗುಂಬದ ಮರವು ಜೋರಾಗಿ ತಿರುಗುತ್ತದೆ. ಕಮ್ಮಾರನು ಅಥಕ್ಕೆ ವಿವಿಧಾಕಾರದ ಉಳಿಗಳನ್ನು ಹಿಡಿಯುತ್ತಾ ಹೋದ ಹಾಗೆ ಮರದ ಆಕಾರವು ಬದಲಾಗುತ್ತಾ ಕೊನೆಗೆ 'ಗುಂಬ'ದ ಆಕಾರ ಬರುತ್ತದೆ.

ಸಾಧನದಿಂದ ಹಿಡಿದು ಗಾಡಿ ಮಾಡುವ ದೊಡ್ಡ ಸಾಧನಗಳವರೆಗೂ ವಿವಿಧ ಬಗೆಯ ಸಾಧನಗಳನ್ನು ಕಾಣಬಹುದು. ಅವುಗಳಲ್ಲಿ ಬಹಳಷ್ಟು ಸಾಧನಗಳನ್ನು ಕಮ್ಮಾರರೇ ತಯಾರಿಸಿಕೊಳ್ಳುತ್ತಾರೆ. ದೊಡ್ಡ ಮತ್ತು ಚಿಕ್ಕ ಸುತ್ತಿಗೆಗಳನ್ನು ಮಾತ್ರ ಅವರು ಅಂಗಡಿಯಿಂದ ಕೊಂಡು ತರುತ್ತಾರೆ.

ಕಬ್ಬಿಣಕ್ಕೆ ಹದ ಕೊಡುವ ವಿಧಾನ

ಕಮ್ಮಾರನ ಕೆಲಸದ ಶ್ರೇಷ್ಠತೆಯನ್ನು ಆತನು ಕಬ್ಬಿಣಕ್ಕೆ ಹದಕೊಡುವುದರ ಮೇಲೆ ನಿರ್ಧರಿಸಲಾಗುತ್ತದೆ. ಪಿಕಾಸಿ, ಕೊಡಲಿ, ಹಾರೆ, ಕತ್ತಿ ಮೊದಲಾದ

ಆಯುಧಗಳನ್ನು ಹರಿತ ಮಾಡುವಾಗ ಹದ ಕೊಡಲಾಗುತ್ತದೆ.

ಹರಿತ ಮಾಡುವ ಆಯುಧದ ಬಾಯಿಯನ್ನು ಮೊದಲು ಚೆನ್ನಾಗಿ ಕಾಸಿ, ಅಡಿಗಲ್ಲಿನ ಮೇಲಟ್ಟು ತಟ್ಟಿ ತೆಳ್ಳಗೆ ಮಾಡಲಾಗುತ್ತದೆ. ಅದರ ನಂತರ ಮತ್ತೊಮ್ಮೆ ಕಾಸಿ ಅದರ ಬಾಯಿಯನ್ನು ನೀರಿನ ತೊಟ್ಟಿಯಲ್ಲಿ ಕ್ಷಣಕಾಲ ಮುಳುಗಿಸಿ ಹೊರ ತೆಗೆದಿಡಲಾಗುವುದು. ಅದು ಸರಿಯಾದ ಹದದಲ್ಲಿರುವುದೋ ಇಲ್ಲವೋ ಎಂಬುದನ್ನು "ಕಾನೂಸ್" ನಿಂದ ಉಜ್ಜಿ ಪರೀಕ್ಷಿಸಲಾಗುವುದು. ನೀರಿನಿಂದ ಹೊರ ತೆಗೆದ ತಕ್ಷಣ ಬೆಳ್ಳಗಿದ್ದ ಆಯುಧದ ಬಾಯಿಯು ಕ್ಷಣಕಾಲದಲ್ಲಿ ಕಪ್ಪು ಮಿಶ್ರಿತ ನೀಲಿ ಬಣ್ಣಕ್ಕೆ ತಿರುಗುತ್ತದೆ. ಆಗ ಅದು ಸರಿಯಾದ ಹದ ಪಡೆದಿದೆ ಎಂದು ತಿಳಿಯುತ್ತದೆ. ಒಂದು ವೇಳೆ ಅದು ನೀಲಿ ಬಣ್ಣಕ್ಕೆ ಬದಲಾಗದೆ ಬಿಳಿಯಾಗಿಯೇ ಉಳಿದರೆ ಹದ ಹೆಚ್ಚಾಗಿದೆ ಎಂದು ತಿಳಿಯುತ್ತಾರೆ. ಹದ ಹೆಚ್ಚಾದರೆ ಬಾಳಿಕೆ ಕಡಿಮೆ. ಪಿಕಾಸಿಯ ಬಾಯಿಗೆ ಹದ ಹೆಚ್ಚಾದರೆ ತುಂಡಾಗುತ್ತದೆ. ಹೀಗೆಯೇ ಹದ ಹೆಚ್ಚಾದ ಪ್ರತಿಯೊಂದು ಆಯುಧವು ಬಳಸುವಾಗ ಮುರಿಯುವ ಸಂಭವ ಹೆಚ್ಚಾಗಿರುತ್ತದೆ. ಈ ಕಾರಣದಿಂದ ಹದ ಹೆಚ್ಚಾಗಿದೆ ಎಂದು ತಿಳಿದ ತಕ್ಷಣ ಆ ಆಯುಧವನ್ನು ಮತ್ತೊಮ್ಮೆ ಕಾಸಿ ಸರಿಯಾದ ಪ್ರಮಾಣದಲ್ಲಿ ಹದ ಕೊಡಲಾಗುತ್ತದೆ. ಸಾಮಾನ್ಯಾರ್ಥದಲ್ಲಿ ಹದಕೊಡುವುದೆಂದರೆ ಆಯುಧವನ್ನು ಒಂದು ಮಟ್ಟಕ್ಕೆ ಕಾಯಿಸಿ ಅದನ್ನು ಒಂದು ಕಾಲದ ಮಿತಿಯನುಸಾರ ನೀರಲ್ಲಿಟ್ಟು ಹೊರ ತೆಗೆಯುವುದಾಗಿದೆ.

ಮೂಲ ವಿನ್ಯಾಸ

ಕಮ್ಮಾರನ ಕುಲುಮೆಯಲ್ಲಿ ಸಿದ್ಧವಾಗುವ ಕಬ್ಬಿಣದ ಸಾಧನಗಳಿಗೆಲ್ಲಾ ಕಮ್ಮಾರನ ಅನುಭವ ಜ್ಞಾನವೇ ಆಧಾರ. ತಾನು ಪಡೆದ ಅನುಭವದ ಅನುಸಾರ ಜನರ ಬೇಡಿಕೆಗೆ ತಕ್ಕಂತಹ ವಸ್ತುಗಳನ್ನು ಅವನು ತಯಾರಿಸುತ್ತಾನೆ. ಕೆಲವು ವೇಳೆ ಅಂಗಡಿಯವರು ಕೊಟ್ಟ ಮಾದರಿಯಂತೆ ಕಬ್ಬಿಣದ ವಿವಿಧ ಬಗೆಯ ಸಾಧನಗಳನ್ನು ಸಿದ್ಧಪಡಿಸಿಕೊಡುತ್ತಾನೆ.

ಕಮ್ಮಾರನ ಕೆಲಸಕ್ಕೆ ಅಡ್ಡಿಯಾಗುವ ಆತಂಕಗಳು

ಕಮ್ಮಾರರು ಎದುರಿಸುತ್ತಿರುವ ಸಾಮಾನ್ಯ ಸಮಸ್ಯೆಯೆಂದರೆ 'ಮಸಿ' (ಇದ್ದಿಲು)ಯ ಕೊರತೆ. ತಿದಿ ಒಲೆಯ ಮೂಲ ಶಕ್ತಿಯೇ ಇದ್ದಿಲು, ಅದು

ಇಲ್ಲದೆ ಕಮ್ಮಾರನ ಕೆಲಸ ಸಾಗುವುದೇ ಇಲ್ಲ. ಅರಣ್ಯ ಇಲಾಖೆಯವರ ಬಿಗಿಯಾದ ಕಾವಲಿನ ಕಾರಣ ಇದ್ದಿಲು ಸುಡುವ ಕೆಲಸ ಸ್ಥಗಿತಗೊಂಡಿದೆ. ಆದ್ದರಿಂದ ಕಮ್ಮಾರರು ಇದ್ದಿಲಿಗಾಗಿ ಊರಿನಲ್ಲಿನ ಪ್ರತಿ ಮನೆಯವರನ್ನು ಬೇಡುವಂತಾಗಿದೆ. ಕೆಲವು ವೇಳೆ ಇದ್ದಿಲು ಸಿಕ್ಕಾಗ ಸಂಗ್ರಹಿಸಿಟ್ಟರೆ ಅರಣ್ಯ ಇಲಾಖೆಯವರ ಪ್ರಶ್ನೆಗಳಿಗೆ ಉತ್ತರಿಸುವುದು ಕಷ್ಟವಾಗುತ್ತದೆ. ಸಂಗ್ರಹಿಸಿಟ್ಟು ಕೊಳ್ಳದಿದ್ದರೆ ಕೆಲಸ ಹೆಚ್ಚಾಗಿದ್ದಾಗ ಇದ್ದಿಲ ಕೊರತೆಯಾಗುತ್ತದೆ. ಈ ಕಾರಣದಿದ ಇತ್ತೀಚೆಗೆ ಕಮ್ಮಾರರು ಹೊಸ ಕಾನೂನನ್ನು ಮಾಡಿಕೊಂಡಿದ್ದಾರೆ. ಕೆಲಸ ಬೇಗ ಆಗಬೇಕೆಂದರೆ ತಮ್ಮ ಮನೆಯಿಂದ ಇದ್ದಿಲು ತಂದುಕೊಡಬೇಕು ಎಂದು ತಮ್ಮ ಗಿರಾಕಿಗಳಿಗೆಲ್ಲಾ ಕಿವಿ ಮಾತು ಹೇಳಿಟ್ಟಿದ್ದಾರೆ.

ಉತ್ತರ ಕನ್ನಡ ಜಿಲ್ಲೆಯಲ್ಲಿ ಜೂನ್ ನಿಂದ ಸೆಪ್ಟೆಂಬರ್‌ವರೆಗೆ ಮಳೆಯ ಪ್ರಭಾವ ಹೆಚ್ಚು. ಅದೇ ಸಂದರ್ಭದಲ್ಲಿ ವ್ಯವಸಾಯದ ಕೆಲಸ ಸಹ ಹೆಚ್ಚು. ಆದ್ದರಿಂದ ಕೃಷಿಕರಿಗೆ ಬೇಕಾಗುವ ಕಬ್ಬಿಣದ ವಸ್ತುಗಳನ್ನು ಕಮ್ಮಾರನು ಸಿದ್ಧಪಡಿಸಲೇ ಬೇಕಾಗುತ್ತದೆ. ಆದರೆ ಊರ ಹೊರಗೆ ಬಯಲು ಪ್ರದೇಶದಲ್ಲಿ ತೆಂಗಿನ ಗರಿಯ ಮೇಲ್ಛಾವಣಿಯ 'ಕಮ್ಮಾರನ ಕುಲುಮೆ' ರಭಸದ ಮಳೆಗೆ ಸಿಕ್ಕಿ ನೀರುಮಯವಾಗಿ ಹೋಗಿರುತ್ತದೆ. ಇಂತಹ ಸಂದರ್ಭದಲ್ಲಿ ತಿದಿ ಒಲೆ ಉರಿಯುವುದು ಹೇಗೆ? ಒಂದು ವೇಳೆ ಛಾವಣಿಯನ್ನು ಭದ್ರಗೊಳಿಸಿ ಕೆಲಸ ಮಾಡಲು ಕುಳಿತರೆ ಒಮ್ಮೊಮ್ಮೆ ಬೀಸುವ ಬಿರುಗಾಳಿ ಛಾವಣಿಯನ್ನು ಗಾಳಿಪಟ ಮಾಡಿ ಬಿಡುವ ಸಾಧ್ಯತೆ ಇದೆ. ಆದ್ದರಿಂದ ಉತ್ತರ ಕನ್ನಡ ಜಿಲ್ಲೆಯ ಕಮ್ಮಾರರು ಮಳೆಗಾಲದಲ್ಲಿ ಕೆಲಸ ಮಾಡಿದರೆ ಅದೊಂದು ಮಹಾ ಸಾಹಸ ಕಾರ್ಯವಾಗುತ್ತದೆ. ಅವರಿಗೆ ಮಳೆಗಾಲದಲ್ಲಿಯೇ ಕೃಷಿಯ ಉಪಕರಣಗಳನ್ನು ಸಿದ್ಧಪಡಿಸುವ ಕೆಲಸದ ಒತ್ತಡ ಹೆಚ್ಚು. ಆದರೆ ಮಳೆರಾಯ ಅದಕ್ಕೆ ಅಡ್ಡಿ ಮಾಡಿ ಅವರ ಹೊಟ್ಟೆಯ ಮೇಲೆ ಕಲ್ಲು ಹಾಕುತ್ತಾನೆ. ಇದನ್ನರಿತ ಕೆಲವರು ತಮ್ಮ ಮನೆಗಿಂತ ತಾವು ಕೆಲಸ ಮಾಡುವ ಸ್ಥಳವನ್ನು ಗಾಳಿ ಮಳೆಯಿಂದ ರಕ್ಷಿಸಿಟ್ಟುಕೊಂಡಿರುತ್ತಾರೆ. ಅವರ ಮನೆ ಹುಲ್ಲು ಹೊದಿಕೆಯ ಗುಡಿಸಲಾಗಿದ್ದರೂ ಕೆಲಸ ಮಾಡುವ ಸ್ಥಳವು ಹೆಂಚಿನ ಹೊದಿಕೆಯದ್ದಾಗಿರುತ್ತೆ ಇದು ಎಲ್ಲರಿಂದಲೂ ಸಾಧ್ಯವಿಲ್ಲ. ಕೇವಲ ಕೈಯಲ್ಲಿ ಹಣವಾಡುವ ಕೆಲವೇ ಮಂದಿ ಕಮ್ಮಾರರು ಮಾತ್ರ ತಮ್ಮ ಕೆಲಸದ ಸ್ಥಳವನ್ನು ಬಹಳ ಎಚ್ಚರಿಕೆಯಿಂದ ರಕ್ಷಿಸಿಟ್ಟುಕೊಂಡಿದ್ದಾರೆ.

ಕರಾವಳಿಯ ಕಮ್ಮಾರರು ಮಳೆಗಾಲದಲ್ಲಿ ಒಂದು ಬಗೆಯ ಸಮಸ್ಯೆಗೆ

ಎದೆಯೊಡ್ಡಿದರ, ಬೇಸಿಗೆಯಲ್ಲಿ ಮತ್ತೊಂದು ಬಗೆಯ ಸಮಸ್ಯೆಯನ್ನು ಎದುರಿಸ ಬೇಕಾಗುತ್ತದೆ. ಮಳೆಗಾಲಕ್ಕಾಗಿ ತಮ್ಮ ಕೆಲಸದ ಸ್ಥಳಕ್ಕೆ ಸುತ್ತಲೂ ಗೋಡೆ ಹಾಕಿ ಹೆಂಚಿನ ಛಾವಣಿ ಹಾಕಿ ಭದ್ರಪಡಿಸಿಕೊಂಡರೆ ಬೇಸಿಗೆಯ ಬಿಸಿಲಿನಲ್ಲಿ ಅದು ಕೆಲಸ ಮಾಡಲು ಯೋಗ್ಯ ಸ್ಥಳವೆನಿಸದು. ಏಕೆಂದರೆ ಕರಾವಳಿಯ ಬಿಸಿಲಿನ ತಾಪವನ್ನು ಬಯಲಿನಲ್ಲಿಯೇ ಸಹಿಸಿಕೊಳ್ಳಲಾಗದಿರುವಾಗ ಇನ್ನೂ ಸುತ್ತಲೂ ಗೋಡೆಗಳ ನಡುವೆ ಹೊಗೆಯಾಡುವ ಕುಲುಮೆಯ ಒಲೆಯ ಮುಂದೆ ಕುಳಿತು ಸಹಿಸಿಕೊಳ್ಳಲು ಸಾಧ್ಯವೇ? ಆ ಸಂಧರ್ಭದಲ್ಲಿ ಸುತ್ತಲಿನ ಗೋಡೆಗಳನ್ನು ಅವರು ತೆಗೆಯಲೇ ಬೇಕಾಗುತ್ತದೆ. ಹೀಗಿದ್ದರೂ ಉರಿವ ಒಲೆಯ ಮುಂದೆ ಸುರಿಯುವ ಬೆವರಿನಲ್ಲಿ ಮುಳುಗಿ ಕೆಲಸ ಮಾಡುವ ಕರ್ಮ ಕಮ್ಮಾರರದಾಗಿರುತ್ತದೆ. ಬಿಸಿಲಿನ ತಾಪದಿಂದ ಆಯಾಸ ಹೆಚ್ಚಾಗಿ ಕೆಲಸದ ಆಸಕ್ತಿ ಕಡಿಮೆಯಾಗುತ್ತದೆ ಎಂದು ಅನುಭವಸ್ಥರು ಹೇಳುತ್ತಾರೆ. ಒಟ್ಟಿನಲ್ಲಿ ಮೇಲಿಂದ ಸೂರ್ಯನ ಶಾಖ, ಮುಂದಿನಿಂದ ಒಲೆಯ ಶಾಖ ಇವೆರಡರ ನಡುವೆ ಬೇಯುತ್ತಲೇ ಕೆಲಸ ಮಾಡುವ ಕಮ್ಮಾರರನ್ನು ಕಂಡಾಗ ಮಾತ್ರ ಅವರು ಎದುರಿಸುವ ಅಡ್ಡಿ ಆತಂಕಗಳ ಅರಿವಾಗುವುದು.

ಕಮ್ಮಾರನ ಸಹಾಯಕ್ಕಾಗಿ ಜನ ಸಿಗುವುದು ಕಡಿಮೆ. ಏಕೆಂದರೆ ಇದು ಶ್ರಮದ ಕೆಲಸ, ಅಲ್ಲದೆ ಉರಿವ ಬೆಂಕಿಯ ಮುಂದಿನ ಕೆಲಸ. ಈ ದೃಷ್ಟಿಯಿಂದ ಸಹಾಯಕನು ಬೆಳಿಗ್ಗೆಯಾದರೆ ಬರುವನೋ ಇಲ್ಲವೋ ಎಂಬ ಚಿಂತೆ ಕಮ್ಮಾರನ ನಿದ್ದೆ ಕೆಡಿಸಿರುತ್ತದೆ. ಸಹಾಯಕ ನಿಲ್ಲದೆ ಒಬ್ಬನಿಂದ ಕೆಲಸ ಮಾಡುವುದು ಸಾಧ್ಯವೇ ಇಲ್ಲ ಎಂದು ಕಮ್ಮಾರನ ಅನಿಸಿಕೆ.

ಮೇಲ್ಕಾಣಿಸಿದ ಸಮಸ್ಯೆಗಳನ್ನು ಎದುರಿಸಿಕೊಂಡು ಕೆಲಸ ಮಾಡೋಣವೆಂದು ಕಮ್ಮಾರ ನಿರ್ಧರಿಸಿದರೂ ಯಂತ್ರಗಳ ಪ್ರಭಾವವು ಅವನನ್ನು ಮುಂದೆ ಸಾಗಲು ಬಿಡದು. ಕಮ್ಮಾರನು ಸಿದ್ಧಪಡಿಸುವ ಸಾಧನಗಳನ್ನು ಕಡಿಮೆ ಬೆಲೆಯಲ್ಲಿ ಯಂತ್ರಗಳು ತಯಾರಿಸುತ್ತಿವೆ. ಮಾರುಕಟ್ಟೆಯಲ್ಲಿ ಯಂತ್ರಗಳಿಂದ ಸಿದ್ಧವಾದ ವಸ್ತುಗಳಿಗೆ ಇರುವಷ್ಟು ಬೇಡಿಕೆ ಕಮ್ಮಾರನ ಕೈಚಳಕದಿಂದ ಸಿದ್ಧವಾದ ವಸ್ತುಗಳಿಗೆ ಇಲ್ಲದಂತಾಗಿದೆ. ಶ್ರಮಕ್ಕೆ ತಕ್ಕ ಬೆಲೆ ಸಿಗದೆ ಇರುವುದರಿಂದ ಕಮ್ಮಾರಿಕೆಗೆ "ತಿಲಾಂಜಲಿ" ಕೊಟ್ಟು ಬೇರೆ ಬೇರೆ ಕೆಲಸ ಹುಡುಕಿಕೊಂಡುತ್ತಿರುವ ಕಮ್ಮಾರರ ಸಂಖ್ಯೆ ದಿನಂಪ್ರತಿ ಹೆಚ್ಚುತ್ತಿದೆ. ಹೀಗೆ ಮುಂದುವರಿದರೆ ವಿಶೇಷವಾಗಿ ಕೃಷಿಕರು ಬಹುದೊಡ್ಡ ಸಮಸ್ಯೆಯನ್ನು ಎದುರಿಸಬೇಕಾಗುತ್ತದೆ. ಆದ್ದರಿಂದ ಸರ್ಕಾರ

ಕಮ್ಮಾರಿಕೆಯನ್ನುಳಿಸುವ ಕಡೆಗೆ ಗಮನಹರಿಸಬೇಕಾಗಿದೆ. ಕಮ್ಮಾರರಿಗೆ ಸಾಲದ ಸೌಲಭ್ಯ ಒದಗಿಸಿ ಅವರಿಗೆ ಸರಿಯಾದ ತರಬೇತಿ ಕೊಡಬೇಕಾಗಿದೆ. ಅವರಿಗೆ ಅಗತ್ಯವಾದ ಯಂತ್ರ ಹಾಗೂ ಆಧುನಿಕ ಸಾಧನಗಳನ್ನು ಪೂರೈಸಬೇಕಾಗಿದೆ.

ಕಮ್ಮಾರರು ಸಿದ್ಧಪಡಿಸಿದ ವಸ್ತುಗಳಿಗೆ ಮಾರುಕಟ್ಟೆಯಲ್ಲಿ ಬೇಡಿಕೆ ಸಿಗುವಂತೆ ನೋಡಿಕೊಳ್ಳಬೇಕು. ಅವರ ಜೀವನ ಮಟ್ಟ ಸುಧಾರಿಸುವ ಕ್ರಮ ಕೈಗೊಳ್ಳಬೇಕು. ಅವರು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸಿ ಅವರ ಆರೋಗ್ಯ ಕಾಪಾಡುವಲ್ಲಿ ಗಮನ ಹರಿಸಬೇಕು. ಕಮ್ಮಾರರ ಕಲ್ಯಾಣ ನಿಧಿಯನ್ನು ಸ್ಥಾಪಿಸಿ ಅದರಲ್ಲಿ ಅವರ ಏಳಿಗೆಯಾಗಲು ಮತ್ತು ಆಕಸ್ಮಿಕ ವಾಗಿ ಮರಣವನ್ನಪ್ಪಿದ ಮನೆ ಯಜಮಾನನ ಕುಟುಂಬಕ್ಕೆ ಸಹಾಯಕವಾಗಲು ಅವಕಾಶವಿರಬೇಕು. ಆಗ ಮಾತ್ರ ಕಮ್ಮಾರರು ತಮ್ಮ ವೃತ್ತಿಯನ್ನು ಆಸಕ್ತಿಯಿಂದ ಮುಂದುವರಿಸಲು ಸಾಧ್ಯ.

ಪಾರಿಭಾಷಿಕ ಶಬ್ದಗಳು

ಆಚಾರಿ = ಕಮ್ಮಾರ, ಲೋಹಾರ

ಹಾರೆ = ಸಲಿಕೆ

ಹಾರೆಕೋಲು = ಹಾರೆ

ಪಕ್ಕಡ್ = ಇಕ್ಕಳ

ಘನ = ದೊಡ್ಡಸುತ್ತಿಗೆ

ಗುಂಬ = ಚಕ್ರದ ನಡುವೆ ಇರುವ ಗುಂಬ. ಇದಕ್ಕೆ ಹಾರೆ ಕೋಲನ್ನು ಸಿಕ್ಕಿಸಿ ಚಕ್ರಕ್ಕೆ ಬಲಕೊಡಲಾಗುತ್ತದೆ.

ಕಾನೂಸ್ = ಪೈಲು

ಗರ್ನಲ್ = ದೊಡ್ಡಪಟಾಕಿ

ಕದಿರು	=	ಬತ್ತದ ತೆನೆ
ಹಡಿಮಂಚ	=	ಮರದ ಫ್ರೇಮಿನ ಮಂಚಕ್ಕೆ ಹಗ್ಗ ಕಟ್ಟಿರುತ್ತಾರೆ ಇಲ್ಲವೆ ಹಲಗೆ ಹಾಸಿರುತ್ತಾರೆ
ಚಕ್ಕಡಿ	=	ಗಾಡಿ
ಹಾರೆ	=	ಅಚ್ಚು
ಮೆಟ್‌ಕತ್ತಿ	=	ತುರಿಮಣೆಯಲ್ಲಿ ಕುಡುಗೋಲು ಸಿಕ್ಕಿಸಿ ಮಾಡಿರುತ್ತಾರೆ. ಅದು ತರಕಾರಿ ಕೊಯ್ಯಲು ಮತ್ತು ಮೀನು ಕೊಚ್ಚಲು ಬಳಸಲಾಗುತ್ತದೆ.
ಕಡುಮಾಡು	=	ಹೆಂಚಿನ ಮನೆಯ ಕೊನೆಯಲ್ಲಿರುವ ಮನೆಯ ಮುಂದಿನ ಇಲ್ಲವೆ ಹಿಂದಿನ ಭಾಗ.
ನಾಗರಹೆಡೆ	=	ಇದು ನಾಗರ ಹೆಡೆಯ ರೂಪದಲ್ಲಿದ್ದು ಹೆಂಚು ಕೆಳಗಡೆ ಜಾರದಂತೆ ಹಿಡಿಯಲು ಬಳಸುವ ಕಬ್ಬಿಣ ಸಾಧನ
ಚಾಣ	=	ಪಂಚ್
ಮಸಿ	=	ಇದ್ದಿಲು

ಉತ್ತರ ಕನ್ನಡ ಜಿಲ್ಲೆಯ 'ಕಮ್ಮಾರಿಕೆ'




ಕಮ್ಮಾರನ ಕುಲುಮೆಯ ಸುತ್ತಾ ಕಟ್ಟಿರುವ ಗೋಡೆ ಹಾಗೂ ಕೆಲಸದ ಸ್ಥಳದ ಸ್ವರೂಪ



ಕೆಲಸದಲ್ಲಿ ನಿರತನಾಗಿರುವ ಕಮ್ಮಾರ




ಕೆಲಸದಲ್ಲಿ ನಿರತನಾದ ಕಮ್ಮಾರನ ಮುಂದಿನ 'ಘನ'



ಹದ ಕೊಡಲು ಬಳಸುವ ನೀರಿನ ತೊಟ್ಟಿ




ದೊಡ್ಡ ಮತ್ತು ಚಿಕ್ಕ ಅಡಿಗಲ್ಲು
ಅದರ ಮುಂದೆ ಸಿದ್ಧ ಮಾಡಿರುವ "ಹರಣೆ ಹುಕ್ಕು"



ಗಾಡಿಯ ಗುಂಬ ತಯಾರಿಸುವ ಕಬ್ಬಿಣದ ಚಕ್ರ



ಗಾಡಿಯ ಗುಂಬ



ತಿದಿಯ ಬದಲಾಗಿ ಬಳಕೆಯಾಗುತ್ತಿರುವರುವ ಬ್ಲೋವರ್



ಬ್ಲೋವರ್ ತಿರುಗಿಸುತ್ತಿರುವ ಕಮ್ಮಾರನ ಸಹಾಯಕ

ಚಿನಿವಾರಿಕೆ - ದಕ್ಷಿಣ ಕರ್ನಾಟಕದಲ್ಲಿ

ನರಸಿಂಹೇಗೌಡ ನಾರಣಾಪುರ

ಜನಪದ ಸಾಹಿತ್ಯಕ್ಕೆ ಮಾತ್ರ ಸೀಮಿತವಾಗಿದ್ದ ಕನ್ನಡ ಜಾನಪದ ಅಧ್ಯಯನ ಪಾಶ್ಚಿಮಾತ್ಯರ ಜಾನಪದ ಸಿದ್ಧಾಂತಗಳ ತಳಹದಿಯ ಮೇರೆಗೆ ಇತರ ವಿಭಿನ್ನ ಶಾಖೆಗಳತ್ತ ಗಮನ ಹರಿದದ್ದು ಕಳೆದೆರಡು ದಶಕಗಳಲ್ಲಿ ಎನ್ನಬಹುದು. ಇತ್ತೀಚೆಗೆ ಕನ್ನಡ ಜಾನಪದ ಸಂಶೋಧಕರು ಜಾನಪದದ ಹೊಸ ಶಾಖೆಗಳತ್ತ ಹಲವಾರು ದೃಷ್ಟಿಕೋನಗಳಲ್ಲಿ ಗಮನ ಹರಿಸುತ್ತಿದ್ದಾರೆ. ಇದರಿಂದಾಗಿ ವಿಶಿಷ್ಟವಾದ ವಿಷಯಗಳನ್ನು ಗುರುತಿಸಲು ಸಾಧ್ಯವಾಗುತ್ತಿದೆ. ಉದಾ : ಆದಿವಾಸಿ ಜಾನಪದ, ಪ್ರಾಕೃತಿಕ ಜಾನಪದ, ಪ್ರಾಣಿ ಜಾನಪದ, ಸಸ್ಯ ಜಾನಪದ, ಖನಿಜ ಜಾನಪದ, ಕೃಷಿ ಜಾನಪದ, ಆಕಾಶ ಜಾನಪದ, ಬೇಟೆ, ಕುಂಬಾರಿಕೆ, ಕಮ್ಮಾರಿಕೆ, ಬಡಗಿ, ಅಕ್ಕಸಾಲಿ, ಕಲ್ಲುಕುಟಿಗ ಮುಂತಾದ ಕಸುಬುಗಳನ್ನು ಕುರಿತ ಜಾನಪದ ಹೀಗೆ ನಾನಾ ದೃಷ್ಟಿ ಕೋನಗಳಿಂದ ಜಾನಪದವನ್ನು ಅಧ್ಯಯನ ಮಾಡುವ ಪ್ರಯತ್ನಗಳು ನಡೆದಿವೆ, ನಡೆಯುತ್ತಲಿವೆ.

ಹಿಂದಿನ ನಮ್ಮ ಗ್ರಾಮೀಣ ಸಮಾಜದ ಆಡಳಿತ ವ್ಯವಸ್ಥೆಯಲ್ಲಿ ಊರಿನ ರೈತರುಗಳಿಗೆ ಮಾಡುತ್ತಿದ್ದ ವಿವಿಧ ರೀತಿಯ ಸೇವಾ ಕಾರ್ಯಗಳಿಗೆ ಪ್ರತಿಯಾಗಿ ವರ್ಷಕ್ಕೊಮ್ಮೆ 'ಅಡದೆ' ಪಡೆಯುತ್ತಿದ್ದವರಿಗೆ 'ಆಯಗಾರರು' ಎನ್ನುತ್ತಾರೆ. ಕೈವಾಡದವರು, ಅಡದೆಕುಳಗಳು, ಹಕ್‌ದಾರರು, ಬಾಬುದಾರರು, ಬಾಬಿನವರು, ಎಚ್ಚಗಾರರು ಮುಂತಾಗಿ ನಾನಾ ಹೆಸರುಗಳಿಂದ ಕರ್ನಾಟಕದ ವಿವಿದೆಡೆಗಳಲ್ಲಿ ಇವರನ್ನು ಕರೆಯಲಾಗುತ್ತಿದೆ. ಕುಂಬಾರ, ಕಮ್ಮಾರ, ಅಗಸ, ಅಕ್ಕಸಾಲಿಗ (ಚಿನಿವಾರ), ಬಡಗಿ, ಚಮ್ಮಾರ, ಕ್ಷೌರಿಕ ಮುಂತಾದವರು ಆಯಾ ಜಾತಿಗಳಿಂದಲೇ ವಂಶಪಾರಂಪರ್ಯವಾಗಿ 'ಆಯ' ಮಾಡುತ್ತ ಬರುತ್ತಿದ್ದಾರೆ. ಹಿರಿಯ ಮಗನಿಗೆ ಇದರ ಸಂಪೂರ್ಣ ಹಕ್ಕು. ಮಕ್ಕಳಿಲ್ಲದಿದ್ದಾಗ ದಾಯಾದಿಗಳಿಗೆ ಈ ಹಕ್ಕು ದೊರೆಯುತ್ತದೆ. ಗಂಡಂದಿರು ಆಯಗಾರರಾಗಿದ್ದು ಅಕಾಲ ಮೃತ್ಯು ಹೊಂದಿದಾಗ ಅವರ ಹೆಂಡತಿಯರು ಆ ಕೆಲಸವನ್ನು ನಿರ್ವಹಿಸಿದ ನಿದರ್ಶನಗಳೂ

ಇವೆ. ಆಯಾ ಮಾಡಿಸಿಕೊಳ್ಳುವ ರೈತ ಆಯಗಾರರಿಗೆ ಪ್ರತ್ಯೇಕವಾದ ನಿಗದಿ ಪಡಿಸಿದ ದವಸ ಧಾನ್ಯ ಇತ್ಯಾದಿಯನ್ನು ವರ್ಷಕ್ಕೊಮ್ಮೆ ಸುಗ್ಗಿಯ ಕಾಲದಲ್ಲಿ ತಪ್ಪದೆ ಕೊಡಬೇಕೆಂಬುದು ನಿಯಮ. ರೈತಾಪಿ ಕುಟುಂಬಗಳಲ್ಲಿ ಸಂಸಾರಗಳು ಚಿಕ್ಕವು/ದೊಡ್ಡವು ಇದ್ದಾಗ ಆಯದ ಪ್ರಮಾಣವೂ ವ್ಯತ್ಯಾಸವಾಗುವುದುಂಟು. ಸುಗ್ಗಿಯ ಕಾಲದಲ್ಲಿನ ರಾಶಿಯ ತುದಿಯ ಭಾಗವನ್ನು ಪೂಜಾರಿಗೆ, ಅಕ್ಕಸಾಲಿಗೆ, ಕಮ್ಮಾರ, ಬಡಗಿ, ಅಗಸ ಮುಂತಾದವರಿಗೆ ಕ್ರಮವಾಗಿ ಅಳೆದು ಕೊಡಲಾಗುತ್ತದೆ. ಗ್ರಾಮ ದೇವತೆಗೆ ಪ್ರಾಣಿಗಳನ್ನು ಬಲಿ ನೀಡಿದಾಗ ಆಯಗಾರರಿಗೆ ಅದರಲ್ಲಿ ಸಾಲನ್ನು ಕೊಡುವ ಸಂಪ್ರದಾಯವಿದೆ. ಆ ಪ್ರಾಣಿಯ ನಿರ್ದಿಷ್ಟ ಅಂಗಾಂಗಗಳು ಇಂತಿಂಥ ಜಾತಿಯ ಆಯಗಾರರಿಗೇ ಸೇರಬೇಕೆಂಬ ವ್ಯವಸ್ಥೆ ಈಗಲೂ ಇದೆ. ಒಂದು ವೇಳೆ ಆಯಗಾರ ಸಸ್ಯಾಹಾರಿಯಾಗಿದ್ದರೆ, ಆತ ತನ್ನ ಪಾಲನ್ನು ಬೇರೆಯವರಿಗೆ ಕೊಡುವ ಸಾಧ್ಯತೆ ಇದೆ. ಹೀಗೆ ಹಳ್ಳಿಗಳಲ್ಲಿ ಜಾತಿ ಅಥವಾ ವೃತ್ತಿಯನ್ನು ಅವಲಂಬಿಸಿ ಆಯದ ಪ್ರಮಾಣವನ್ನು ನಿಗದಿ ಮಾಡಿ ಕೊಡುವ ಸಂಪ್ರದಾಯ ಸಾಮಾನ್ಯವಾಗಿ ಎಲ್ಲ ಹಳ್ಳಿಗಳಲ್ಲಿ ಈಗಲೂ ಉಂಟು. ಆಯಗಾರರಲ್ಲಿ ಕೆಲವರಿಗೆ ಊರ ಜಮೀನಿನಲ್ಲಿ ಒಂದಿಷ್ಟು ಪ್ರಮಾಣದ ಭೂಮಿಯನ್ನು ಉಂಬಳಿಯಾಗಿ ಕೊಟ್ಟಿರುವುದನ್ನು ಗಮನಿಸಬಹುದು. ಇದನ್ನು 'ಕೊಡುಗೆ ಜಮೀನು' ಎನ್ನುತ್ತಾರೆ. ಈ ಜಮೀನಿನ ಹಕ್ಕು ವಂಶ ಪಾರಂಪರ್ಯವಾಗಿ ಮುಂದುವರಿಯಲು ಅವಕಾಶವಿದೆ. ರೈತರ ಬೇಸಾಯಕ್ಕೆ ಬೇಕಾಗುವ ಕಬ್ಬಿಣದ ಸಾಮಾನುಗಳನ್ನು ಕಮ್ಮಾರನೂ, ಮರಮುಟ್ಟುಗಳಿಂದ ಬೇಸಾಯಕ್ಕೆ ಬೇಕಾದ ನೇಗಿಲು, ನೊಗ, ಕೂರಿಗೆ, ಕುಂಟೆ, ಹಲುಬೆಗಳನ್ನು ಬಡಗಿಯೂ, ಚಿನ್ನ ಬೆಳ್ಳಿಯ ಕೆಲಸವನ್ನು ಅಕ್ಕಸಾಲಿಗನೂ ನಿರ್ವಹಿಸುತ್ತಿದ್ದಾರೆ. ಮದುವೆ ಸಂದರ್ಭಗಳಲ್ಲಿ ಈಗಲೂ ಅಕ್ಕಸಾಲಿಗನಿಗೆ ಬಿಡುವಿಲ್ಲದ ಕೆಲಸವಿರುತ್ತದೆ.

ಆಭರಣ ಮಾಡುವ ಅನುಭವವನ್ನು ದಕ್ಷತೆಯನ್ನು ಗಳಿಸಿಕೊಂಡಿರುವವನೂ, ಶಾಸ್ತ್ರಜ್ಞನೂ, ಬಹುಶ್ರುತನೂ, ಯಜ್ಞ ಮತ್ತು ಮಂತ್ರ ಕ್ರಿಯೆಗಳಲ್ಲಿ ಪಾರಂಗತನೂ, ತಂತ್ರ ಶಾಸ್ತ್ರದಲ್ಲಿ ಕೋವಿದನೂ, ಅಧ್ಯಯನ - ಅಧ್ಯಾಪನಾದಿ ಷಟ್ಕರ್ಮನಿರತನೂ, ಸ್ನಾನ ಸಂಧ್ಯಾ, ಜಪ-ತಪ ಹೋಮಾದಿ ನಿರತನೂ, ಆಚಾರವಂತನಾದವನೂ, ದೇವ, ಋಷಿ, ಪಿತೃ ತರ್ಪಣಗಳನ್ನು ಸಕ್ರಮವಾಗಿ ಪಾಲಿಸುವವನೂ, ವಿಧಿವತ್ ಸಂಕಲ್ಪ ಮಾಡಿ ವಿಶ್ವಕರ್ಮ ಸೂಕ್ತ, ಪುರುಷ ಸೂಕ್ತ, ನಾಸದೀಯ ಸೂಕ್ತ, ಅಘಮರ್ಷಣ ಸೂಕ್ತಾದಿಗಳನ್ನು

ನಿಯಮಿತವಾಗಿ ಪಠಿಸುವವನೂ, ವಿಶ್ವಬ್ರಾಹ್ಮಣ ಧರ್ಮದ ಪೂರ್ವಾಚಾರಗಳನ್ನೆಲ್ಲಾ ವಿಸ್ಮರಿಸದೆ ಪಾಲಿಸುತ್ತ ಶ್ರೇಷ್ಠನಾಗಿರುವ ವಿಶ್ವಕರ್ಮವಂಶ ಸಂಭೂತನಾಗಿರುವವನೇ "ಮಾಂಗಲ್ಯ, ಮೂಗುತಿ, ಬಳೆ, ಕುತ್ತಿಗೆ ಸರ, ಕಾಲುಂಗುರ (ಸುತ್ತು)" ಮಾಡಬೇಕೆಂಬ ನಿಯಮ ಇತ್ತು. ಆದರೂ ಈಗ ಅದು ಶಿಥಿಲಗೊಂಡಿದ್ದು ವಿಶ್ವಬ್ರಾಹ್ಮಣರಲ್ಲದ (ಉದಾ : ಮುಸ್ಲಿಮರು, ರೆಡ್ಡಿಯವರು, ಕುರುಬರು ಮುಂತಾದ) ಜನಾಂಗದವರು ಕೋಲಾರ, ಮಂಡ್ಯ, ಮೈಸೂರು, ಹಾಸನ, ಬೆಂಗಳೂರುಗಳಲ್ಲಿ ರಚಿಸುತ್ತಿದ್ದಾರೆ. ಆದರೆ ಈಗಲೂ ಸಹ 'ಮಾಂಗಲ್ಯ' ಒಂದನ್ನು ಮಾತ್ರ ವೈದಿಕ ಸಂಪ್ರದಾಯಕ್ಕನುಗುಣವಾಗಿ ತಯಾರಿಸಲಾಗುತ್ತಿದೆ. ಮೇಲೆ ತಿಳಿಸಿರುವ ಪಂಚ ಆಭರಣಗಳೂ ಮಂಗಳ ವಸ್ತುಗಳಾಗಿದ್ದು ಸುಮಂಗಲಿಯಾದವಳು ಕಡ್ಡಾಯವಾಗಿ ತೊಡಲೇಬೇಕಾದ ಆಭರಣಗಳೆಂಬ ನಂಬಿಕೆ ಇದ್ದಿತಾದರೂ ಇತ್ತೀಚೆಗೆ ಈ ನಂಬಿಕೆ ಅರ್ಥಕಳೆದುಕೊಂಡಿದೆ. ಹೀಗಾಗಿ ಮದುವೆಯ ದಿನದಂದೋ ಅಥವಾ ಅದರ ಹಿಂದಿನ ದಿನದಂದೋ ಮೊದಲೇ ಅಣಿಗೊಳಿಸಿಟ್ಟಿರುವ ಅಂಗಡಿಗಳಿಂದ ಕೊಂಡು ತರುವ ಸಂದರ್ಭವೂ ಉಂಟು.

ಚಿನ್ನ ಬೆಳ್ಳಿಯ ಕೆಲಸ ಮಾಡುವವರು ಬಹುತೇಕ ಪರಂಪರೆಯನ್ನೇ ಅನುಸರಿಸುತ್ತಾರೆ. ಅವರ ಉದ್ಯೋಗ ಪರಂಪರಾಗತವಾಗಿರುತ್ತದೆ. ಅವರು ದೇವರ ಪೂಜೆ, ಧರ್ಮ ಕಾರ್ಯಗಳಿಗೆ ಬೇಕಾದ ಸಲಕರಣೆ, ಆಭರಣಗಳನ್ನು ಶಾಸ್ತ್ರಬದ್ಧವಾಗಿ ಮಾಡುತ್ತಾರೆ. ಆದರೆ ಸ್ತ್ರೀ ಪುರುಷರು ಧರಿಸುವ ಆಭರಣಗಳನ್ನು ಆಯಾ ಕಾಲದ ರುಚಿ, ಬೇಡಿಕೆಗಳನ್ನು ಅನುಸರಿಸಿ ತಯಾರಿಸುತ್ತಾರೆ. ಚಿನ್ನ ಬೆಳ್ಳಿಯ ಉದ್ಯೋಗವನ್ನು ವಿಶಿಷ್ಟ ಜಾತಿಯವರು ಮಾಡುತ್ತಿದ್ದು, ಅವರನ್ನು ವಿಶ್ವಕರ್ಮರು, ವಿಶ್ವಬ್ರಾಹ್ಮಣರು, ದೈವ ಬ್ರಾಹ್ಮಣರು, ಪಾಂಚಾಲಿಯರು, ಪತ್ತಾರರು, ಸೋನಾರರು, ಅಕ್ಕಸಾಲಿಗರು, ಚಿನಿವಾರರು, ಅರ್ಕಚಾರಿಗಳು, ಆಚಾರಿಗಳು, ಪಂಚಾನನರು, ಸುವರ್ಣಕಾರರು ಎಂದೂ ಕರೆಯುತ್ತಾರೆ. ಆಧುನಿಕ ನಾಗರೀಕತೆಯಲ್ಲಿ ಜನರು ಸೂಕ್ಷ್ಮತರ ಮತ್ತು ವೈವಿಧ್ಯಮಯವಾದ ಆಭರಣಗಳನ್ನು ಹೆಚ್ಚಾಗಿ ಇಚ್ಛಿಸುತ್ತಾರಾಗಿ ಚಿನಿವಾರರು, ಪರಂಪರಾಗತವಾಗಿ ಬಂದ ಆಭರಣ ತಯಾರಿಕೆಯ ಜ್ಞಾನ ಸಾಕಾಗದ್ದರಿಂದ ವಿಶೇಷ ತರಬೇತಿಯನ್ನು ಪಡೆಯುತ್ತಿದ್ದಾರೆ. ಇದುವರೆಗೆ ತಂದೆ, ಮಕ್ಕಳು ಹೆಚ್ಚೆಂದರೆ ಹತ್ತಿರದ ಸಂಬಂಧಿಗಳು ಒಟ್ಟಾಗಿ ಈ ಕೆಲಸ ಮಾಡುತ್ತಿದ್ದರು. ಹೊರಗಿನ ನೌಕರರನ್ನು ನಿಯಮಿಸಿಕೊಳ್ಳುವ

ರೂಢಿ ಇತ್ತೀಚೆಗೆ ಬರುತ್ತಿದೆ. ಒಂದು ಚಿಕ್ಕ ಕೊಠಡಿಯಲ್ಲಿ ಅಕ್ಕಸಾಲಿಗನ ಕೆಲಸ ನಡೆಯುತ್ತದೆ. ಅದು ಬಹುತೇಕ ಮನೆಯ ಹೊರಭಾಗ. ಅವನ ಸುತ್ತಮುತ್ತ ಆಭರಣಗಳನ್ನು ತಯಾರಿಸಲು ಬೇಕಾದ ಸಲಕರಣೆಗಳನ್ನು ಇಟ್ಟುಕೊಂಡಿರುತ್ತಾನೆ. ಐರಣೆ, ಸುತ್ತಿಗೆ, ಚಿಮಟಿಗೆ, ಊದುಗೊಳಪೆ, ಅಗ್ನಿಕುಂಡ, ಮೂಸೆ, ಕುದ್ದಾಲಿ, ಕೆತ್ತನೆಯ ಚಾಣಗಳು, ಬೈರಿಗೆ, ಕರಗಸ, ತರತರದ ಅಚ್ಚುಗಳು, ಸುತ್ತಿಗೆ, ಪಂಕ, ನಾನಾ ಬಗೆಯ ಅರಗಳು, ಸ್ರಾವಣ, ತ್ರಾಸು, ಅಡಿಗಲ್ಲು, ತೂಕ-ಅಳತೆಗಳು, ಗುಂಜಿಗಳು-ಇಕ್ಕಳ, ಚಿಮಣಿ ಮುಂತಾದ ಹತಾರಗಳು ಅಲ್ಲದೆ ಬಂಗಾರವನ್ನು ಶುದ್ಧಗೊಳಿಸಲು ನೈಟ್ರಿಕ್ ಆಸಿಡ್ (ಆಮ್ಲ) ಗಂಧಕಾಮ್ಲಗಳು, ಅಡಿಗೆಸೋಡ, ಪಟಿಕ, ಆಭರಣದ ವಿವಿಧ ಮಾದರಿಯ ಚಿತ್ರಗಳುಳ್ಳ ಪುಸ್ತಕಗಳು ಅವನ ಬಳಿ ಇರುತ್ತವೆ.

ಬಂಗಾರದ ಮತ್ತು ಬೆಳ್ಳಿ ಆಭರಣಗಳನ್ನು ತಯಾರಿಸುವ ಕುಶಲಕರ್ಮಿಯೇ ಅಕ್ಕಸಾಲಿಗ. ಓಜರು, ಚಿನಿವಾರರು, ರಥಕಾರರು, ಸೊನೆಗಾರರು, ಚಿನ್ನಾಚಾರಿ, ಆಚಾರಿ, ಆಚಾರ್ರು, ಅರ್ಕಸಾಲಿಗ, ಪತ್ತರ್, ವಿಶ್ವಕರ್ಮ ಮುಂತಾದ ಹೆಸರುಗಳಿಂದ ಕರೆಯಲ್ಪಡುತ್ತಾರೆ. ಬಂಗಾರ, ಬೆಳ್ಳಿ ಜೊತೆಗೆ ವಜ್ರ, ರತ್ನ, ಮಣಿ, ಮುತ್ತು ಮುಂತಾದ ಅಮೂಲ್ಯ ಆಭರಣಗಳನ್ನು ಸಿದ್ಧಪಡಿಸುವುದರಲ್ಲೂ, ಸೂಕ್ಷ್ಮ ಕೆಲಸ ಮಾಡುವುದರಲ್ಲೂ ಇವರು ನಿಪುಣರು. ಜಗತ್ತನ್ನು ಸೃಷ್ಟಿಸಿದವನೆಂದೂ, ಪರಬ್ರಹ್ಮ ಸ್ವರೂಪನೆಂದೂ ವೇದಗಳಲ್ಲಿ ವರ್ಣಿತವಾಗಿರುವ 'ವಿಶ್ವಕರ್ಮ' ಅಕ್ಕಸಾಲಿಗ ವಂಶದ ಮೂಲಪುರುಷ. ಬಂಗಾರದ ಆಭರಣಗಳನ್ನು ಮಾಡುವ ಸ್ಥಳವನ್ನು 'ಅಕ್ಷಶಾಲೆ' ಎನ್ನುತ್ತಾರೆ. ಪ್ರಾಚೀನ ಕಾಲದ ನಾಗರೀಕತೆಯನ್ನು ಗುರುತಿಸುವಾಗ ಅಕ್ಕಸಾಲಿಗರು ರಚಿಸಿರುವ ಆಭರಣ ವಿನ್ಯಾಸಗಳನ್ನು ಪರಿಗಣಿಸಲ್ಪಡುತ್ತದೆ. ಪ್ರಾಚೀನ ಶಿಲ್ಪಗಳಲ್ಲಿ ಚಿತ್ರಗಳಲ್ಲಿ ಅವರ ರಚನಾ ಕೌಶಲ ವ್ಯಕ್ತವಾಗಿದೆ. ನಾಗರಿಕರಿಂದ ಬೆಳ್ಳಿ, ಬಂಗಾರವನ್ನು ಪಡೆದು ಆಭರಣ, ನಾಣ್ಯಗಳನ್ನು ತಯಾರಿಸುತ್ತಿದ್ದರೆಂದು ಪ್ರಾಚೀನ ಕಾಲದಿಂದಲೇ ರೂಢಿಯಿದೆ. ಸಿಂಧೂ ಕಣಿವೆ ನಾಗರೀಕತೆಯಲ್ಲಿ ಅಕ್ಕಸಾಲಿಗರು ಬೆಳ್ಳಿ, ಬಂಗಾರ, ತಾಮ್ರದ ಆಭರಣಗಳನ್ನು ತಯಾರಿಸುವುದು ಕಂಡು ಬಂದಿದೆ. ಇಂದಿಗೂ ಗ್ರಾಮೀಣ ಹಾಗೂ ನಗರಗಳಲ್ಲಿ ಅಕ್ಕಸಾಲಿಗರು ವಿಪುಲವಾಗಿದ್ದಾರೆ. ಬಂಗಾರವನ್ನು ಕಾಯಿಸುವುದು, ಎರಕಹುಯ್ಯುವುದು, ಅಚ್ಚೊತ್ತುವುದು, ಆಭರಣ ತಯಾರಿಸುವುದು ಮುಂತಾದ ಕೆಲಸ ಮಾಡುತ್ತಾರೆ. ಅನುಭವಿಗಳಾದ

ಅಕ್ಕಸಾಲಿಗರ ಬಗೆಗೆ ಉಲ್ಲೇಖವಿದೆ. ಅಪರೂಪಕ್ಕೆ ಶಾಸನ ಕೆತ್ತುತ್ತಿದ್ದರೆಂದೂ ಟಂಕಶಾಲೆಗಳಲ್ಲಿ ನಾಣ್ಯಗಳನ್ನು ತಯಾರಿಸಲು ನೇಮಿಸಲ್ಪಡುತ್ತಿದ್ದರೆಂದು ಶಾಸನಗಳಿಂದ ತಿಳಿಯುತ್ತದೆ. "ಹಿಂದೆ ರಾಜನ ಅರಮನೆಯಲ್ಲಿ ಅತ್ಯುತ್ತಮವಾದ ಕುಶಲ ಕೆಲಸಗಾರರು ಇದ್ದರು. ರಾಜನು ಅವರಿಗೆ ವಾಸಕ್ಕೆ ಪುಕ್ಕಟೆಯಾಗಿ ಮನೆಗಳನ್ನು ಕಟ್ಟಿಸಿಕೊಟ್ಟಿದ್ದನು. ಅಕ್ಕಸಾಲಿಗರನ್ನು ಅರಮನೆಯಲ್ಲೆ ಇಟ್ಟುಕೊಂಡು ಬೆಲೆಯಾದ ವಜ್ರಗಳನ್ನು ಸಾಣೆ ಹಿಡಿಯುವ ಕೆಲಸವನ್ನು ಇವರಿಗೆ ಮಾತ್ರ ವಹಿಸುತ್ತಿದ್ದ" ಎಂದು ಎಚ್.ಎಲ್. ನಾಗೇಗೌಡರ ಪ್ರವಾಸಿ ಕಂಡ ಇಂಡಿಯಾ ಸಂಪುಟ ಏಳರಲ್ಲಿ (ಪು.ಸಂ. ೯೫) ತಿಳಿದುಬರುತ್ತದೆ. ಈಗಲೂ ಸಹ ಇವರಲ್ಲಿ ಆಭರಣಗಳನ್ನು ಮಾಡಿಸಲು ಚಿನ್ನ ಅಥವ ಹಣವನ್ನು ಮುಂಗಡವಾಗಿ ನೀಡಿದರೆ ಅಥವಾ ಆಭರಣಗಳನ್ನು ಪಡೆದ ನಂತರ ಯಾವುದೇ ರೀತಿಯ ರಸೀದಿ ಮುಂತಾದ ದಾಖಲಾತಿಗಳನ್ನು ಇವರಿಂದ ಪಡೆಯಲಾಗುತ್ತಿಲ್ಲ. ಇದರಿಂದ ಇವರು ನಂಬಿಕೆಗೆ ಅರ್ಹರಾದವರೆಂಬುದು ವೇದ್ಯವಾಗುತ್ತದೆ. ಆದರೆ ಇವರಲ್ಲಿ ವಂಚಕರಿದ್ದರು ಎಂಬುದಕ್ಕೆ ಒಂದು ಹಾಸ್ಯ ಕಥೆಯಲ್ಲಿ ಹೀಗೆ ತಿಳಿಯುತ್ತದೆ. ಅಕ್ಕಸಾಲಿಯ ಮಗ ಅಂಗಡಿಯಲ್ಲಿರುತ್ತಾನೆ. ಅಕ್ಕ ಕೊಟ್ಟ ಚಿನ್ನದಲ್ಲಿ ಆತ ಒಡವೆ ಮಾಡುತ್ತಿರುತ್ತಾನೆ. ಅಕ್ಕ ಎಂಬ ಕಾರಣಕ್ಕಾಗಿ ಆತ ಚಿನ್ನವನ್ನು ಅಪಹರಿಸದಿರಬಹುದು ಎಂಬ ಅನುಮಾನ ತಂದೆಗೆ ಉಂಟಾಗುತ್ತದೆ. ಕದಿ ಎಂಬುದನ್ನು ಸೂಚಿಸುವುದಕ್ಕಾಗಿ ಇದ್ದಕ್ಕಿದ್ದಂತೆ 'ರಾಮರಾಮಾ' ಎಂದು ಕೂಗುತ್ತಾನೆ. ಮಗ ಇನ್ನೂ ಚಾಣಾಕ್ಷ ರಾಮನ ಹೆಂಡತಿ ಸೀತೆಯನ್ನು ಆಗಲೇ ರಾವಣ ಅಪಹರಿಸಿದ್ದಾನೆಂದು ಹೇಳಿ ತಂದೆಯ ಸಂಶಯವನ್ನು ಬಗೆಹರಿಸುತ್ತಾನೆ. (ಕನ್ನಡ ಜಾನಪದ ವಿಶ್ವಕೋಶ. ಸಂಪುಟ-೧, ಪುಟ ಸಂಖ್ಯೆ ೧೮-೧೯). ಪ್ರಾಯಶಃ ಇದು ಹಾಸ್ಯಕ್ಕಾಗಿ ಹೆಣೆದಿರುವ ಕಥೆ ಆಗಿರಬಹುದು.

ಚಿನಿವಾರರ ಬಗೆಗೆ 'ಕನ್ನಡ ನಿಘಂಟು'ಗಳಲ್ಲಿ ಚಿನಿವರ, ಚಿನಿವಲ, ಚಿನಿವಾರ= ಚಿನವಾರ, ಚಿನಿವರ, ಚಿನಿವಲ, ಚಿನಿವಾಲ, ಚಿನ್ನವಾರ, ಚಿನ್ನವಾಲ, ಚಿನ್ನಿವಾರ, ಚಿನ್ನದ ವ್ಯಾಪಾರಿ : ನಾಣ್ಯಗಳ ವಿನಿಮಯ ಮಾಡಿ ಕೊಡುವವನು, ಸರಾಫ; ರತ್ನ ವ್ಯಾಪಾರಿ, ಚಿನವಾರ; ಚಿನಿವರ, ಚಿನಿವಲ, ಚಿನಿವಾಲ, ಚಿನ್ನವಾರ, ಚಿನ್ನವಾಲ, ಚಿನ್ನಿವಾರ [ಪು.ಸಂ.೨೮೪೧ ಮೂರನೆ ಸಂಪುಟ] ಎಂದರೆ; ಅಕ್ಕಸಾಲ, ಅಕ್ಕಸಾಲೆ, ಅಕಸಾಲ, ಅಕ್ಕಸಾಲಿ, ಅಗಸಾಲ, ಆಗಸಾಲೆ, ಅರ್ಕಸಾಲೆ, ಅಕ್ಕಸಾಲಿಗ = ಚಿನ್ನಬೆಳ್ಳಿ ಮುಂತಾದವುಗಳ ಕೆಲಸ ಮಾಡುವವನು

ಎಂದು ಕನ್ನಡ ನಿಘಂಟಿನ ಮೊದಲನೆಯ ಸಂಪುಟ [ಪು.ಸಂ. ೬೨] ದಲ್ಲಿ ಅರ್ಥೈಸಲಾಗಿದೆ.

ಈ ಹಿನ್ನೆಲೆಯಲ್ಲಿ ಚಿನ್ನ, ಬೆಳ್ಳಿ ಆಭರಣಗಳನ್ನು ತಯಾರಿಸುವ ವಿಶ್ವಬ್ರಹ್ಮ [ಚಿನಿವಾರ] ರನ್ನು ಕುರಿತು ಮಲೆನಾಡು ಹಾಗೂ ಬಯಲ ಸೀಮೆಯ ಪ್ರದೇಶಗಳಾದ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಹಾಗೂ ಹಾಸನ ಜಿಲ್ಲೆಗಳಲ್ಲಿ ಕ್ಷೇತ್ರಕಾರ್ಯವನ್ನು ನಡೆಸಿ ಮಾಹಿತಿಯನ್ನು ಸಂಗ್ರಹಿಸಿರುವ ಆಧಾರದಿಂದ ಈ ಲೇಖನವನ್ನು ಅಣಿಗೊಳಿಸಲಾಗಿದೆ.

ವಿಶ್ವಕರ್ಮನ ಕುರಿತು ಬಂದ ಕಥೆ

ವಿಶ್ವಕರ್ಮನ ವಂಶಸ್ಥರಲ್ಲಿ ಏಳಿಗೆ ಇಲ್ಲದಿರಲು ಬಹಳ ಹಿಂದೆ ಬಸವಣ್ಣ ಶಾಪ ನೀಡಿರುವುದೇ ಕಾರಣ ಎನ್ನುತ್ತಾರೆ ನಮ್ಮ ಜನಪದರು. ಪ್ರಪಂಚದಲ್ಲಿ ಯಾವುದನ್ನು ಬೇಕಾದರೂ ಬಗ್ಗಿಸಬಹುದಿತ್ತಾದರೂ ಬಸವಣ್ಣನನ್ನು ಬಗ್ಗಿಸಲು ಮಾತ್ರ ಆಗುತ್ತಿರಲಿಲ್ಲವಂತೆ. ಆಗ ಇಡೀ ಜನಸಮುದಾಯ ಆಲೋಚಿಸಿ ವಿಶ್ವಕರ್ಮ ಪ್ರಪಂಚದ ಸರ್ವವನ್ನು ಸೃಷ್ಟಿಸಿದ್ದಾನೆ. ಆತನೊಬ್ಬನಿಂದಲ್ಲದೆ ಮತ್ತಾರಿಂದಲೂ ಬಗ್ಗಿಸಲು ಆಗದು ಎಂದು ನಿಶ್ಚಯಿಸಿ ವಿಶ್ವಕರ್ಮನಲ್ಲಿ ಮೊರೆಹೋದರಂತೆ. ಆಗ ವಿಶ್ವಕರ್ಮನು ಚಿಂತಿಸಿ ಬಸವಣ್ಣನ ಕೊರಳಿಗೆ, ಕೊಂಬಿಗೆ, ಹಣೆಗೆ, ಮೈಗೆ ಕಾಲಿಗೆ (ಪಾದಕ್ಕೆ) ಸಂಬಂಧಿಸಿದಂತೆ ಬಗೆ ಬಗೆಯ ಆಭರಣಗಳನ್ನು ಮಾಡಿ ಹಾಕಿ ಅದರ ಮನವನ್ನು ಗೆದ್ದನಂತೆ. ಅಂತಿಮದಲ್ಲಿ ಅದರ ಮೂಗಿಗೂ ಅಲಂಕಾರಭರಿತ ಮೂಗುದಾರವನ್ನು ಹಾಕಿದನಂತೆ. ಅಂದಿನಿಂದ ಅದು ಬಗ್ಗಿತು. ಆವಾಗ ಬಸವಣ್ಣ ಕೋಪಗೊಂಡು 'ನಂಬಿಸಿ ಬಗ್ಗಿಸಿದ ನಿನಗೆ ನಿನ್ನ ವಂಶ ಏಳಿಗೆ ಆಗದಿರಲಿ' ಎಂದು ಶಾಪ ನೀಡಿದನಂತೆ. ಇದರಿಂದಲೇ ತಮಗೆ ಬರಕತ್ತಿಲ್ಲ ಎನ್ನುತ್ತಾರೆ.*[1]

ಮಂಡ್ಯ, ಮೈಸೂರು, ಹಾಸನ ಪ್ರದೇಶದಲ್ಲಿ ವಾಸವಿರುವ ಜನಾಂಗದಲ್ಲಿ ಬೇರೆಡೆಯಂತೆ ಪಂಚಾದ್ಯಬ್ರಹ್ಮರು ಇರುವರಾದರೂ ಗೋತ್ರಕ್ಕಿಂತಲೂ ಜನಾಂಗಕ್ಕೆ ಹೆಚ್ಚಿನ ಪ್ರಾಶಸ್ತ್ಯವನ್ನು ನೀಡುತ್ತಾರೆ. ಇಲ್ಲಿರುವ ಐದು ಜನಾಂಗಗಳೆಂದರೆ :

★[1] ಬಿ.ಎಂ. ಕೃಷ್ಣಾಚಾರ್, ೪೬ ವರ್ಷ. ಬಸವನಾಯ್ಕನಹಳ್ಳಿ, ಹಾಸನ ಜಿಲ್ಲೆ.

(೧) ಚಿಕ್ಕಮನೆ ಆಚಾರ್‍ರು.

(೨) ದೊಡ್ಡಮನೆ ಆಚಾರ್‍ರು.

(೩) ಕುಲಾಚಾರ್‍ರು.

(೪) ಮತಾಚಾರ್‍ರು ಹಾಗೂ

(೫) ಲಿಂಗಾಚಾರ್‍ರು

ಚಿಕ್ಕಮನೆ ಆಚಾರ್‍ರು ಮಾಂಸ ತಿನ್ನುವುದಿಲ್ಲ. ಆದರೆ ದೊಡ್ಡಮನೆ ಆಚಾರ್‍ರು ಮಾಂಸ ತಿನ್ನುವುದರ ಜೊತೆಗೆ ಹೆಂಡ, ಸಾರಾಯಿ ಸೇವಿಸುತ್ತಾರೆ. ಕುಲಾಚಾರ್‍ರಲ್ಲಿ ಮಾಂಸ ತಿನ್ನುವುದು ರೂಢಿ ಇರುವುದಾದರೂ ಸೇಂದಿ ಸರಾಪು ಸೇವಿಸುವ ಅಭ್ಯಾಸವಿಲ್ಲ. ಲಿಂಗಾಚಾರ್‍ರು ಲಿಂಗ ಧಾರಣೆ ಮಾಡಿರುತ್ತಾರೆ ಜೊತೆಗೆ ಮಾಂಸಾಹಾರಿಗಳಲ್ಲ; ಶಾಖಾಹಾರಿಗಳಾಗಿರುತ್ತಾರೆ. ಆದರೆ ಮತಾಚಾರ್‍ರು ಸೇಂದಿ ಸರಾಪನ್ನು ಕುಡಿಯುವುದರ ಜೊತೆಗೆ ಹಂದಿ ಮುಂತಾದ ಪ್ರಾಣಿಗಳ ಮಾಂಸ ತಿನ್ನುವುದು ರೂಢಿಯಿದೆ.★[2] ಇತ್ತೀಚೆಗೆ ಎಲ್ಲ ಜನಾಂಗದಲ್ಲೂ ತಿನ್ನುವುದು ರೂಢಿಯಾಗುತ್ತಿದೆ. ಮನೆಯಲ್ಲಿ ಅಡಿಗೆ ಮಾಡುವುದಿಲ್ಲವಾದರೂ 'ಸಂಗದಂತೆ ಸಾವಾಸ' ಎಂಬಂತೆ ಹೋದ ಬಂದಕಡೆ ತಿನ್ನುವ, ಕುಡಿಯುವ ಅಭ್ಯಾಸವನ್ನು ಈಚಿನ ತಲೆಮಾರಿನವರು ಅಭ್ಯಾಸ ಮಾಡಿಕೊಳ್ಳುತ್ತಿದ್ದಾರೆ.

ಹುಟ್ಟಿನಿಂದ ಆರಂಭವಾಗಿ ಬದುಕಿನ ವಿವಿಧ ಹಂತಗಳನ್ನೊಳಗೊಂಡಂತೆ ಮರಣದವರೆಗೆ ನಾನಾ ವಿಧಿ ನಿಷೇದಗಳು, ಆಚಾರ ಸಂಪ್ರದಾಯಗಳನ್ನು ಎಲ್ಲ ಸಮುದಾಯಗಳಲ್ಲೂ ಕಾಣಬಹುದು. ಆದರೆ ಮುಖ್ಯವಾಗಿ ಗಮನಿಸಬೇಕಾದ ಸಂಗತಿ ಎಂದರೆ ಕುಲದಿಂದ ಕುಲಕ್ಕೆ, ಸಮುದಾಯದಿಂದ ಸಮುದಾಯಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ಆಚರಣೆ ಸಂಪ್ರದಾಯದ ವಿಧಿ ವಿಧಾನಗಳು ಭಿನ್ನವಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಲೇಖನದ ಮೂಲಕ ಕೋಲಾರ, ಬೆಂಗಳೂರು, ಮಂಡ್ಯ, ಮೈಸೂರು ಹಾಗೂ ಹಾಸನ ಜಿಲ್ಲೆಗಳ ಚಿನಿವಾರರ ಕಸುಬು, ನಂಬಿಕೆ, ಗಾದೆ, ಸಂಪ್ರದಾಯ, ವಿಧಿ, ನಿಷೇಧಗಳನ್ನು ಕ್ಷೇತ್ರಕಾರ್ಯಾಧಾರ ಹಾಗೂ ವಕ್ತೃಗಳ ಹೇಳಿಕೆಗಳ ಆಧಾರದ ಮೇಲೆ ತಿಳಿಸುವ ಪ್ರಯತ್ನ ಮಾಡಿದ್ದೇನೆ.

★[2] ವಕ್ತೃ : ಯಜಮಾನ್ ನರಸಿಂಹಾಚಾರ್. ಬಳಿಘಟ್ಟ ಹಾಗೂ ಬಿ.ಎಂ. ಕೃಷ್ಣಾಚಾರ್ ಬಸವನಾಯ್ಕನಹಳ್ಳಿ.

ಸಾಮಾನ್ಯವಾಗಿ ಹಿಂದೂಗಳು ಆಚರಿಸಲ್ಪಡುವ ಎಲ್ಲ ಹಬ್ಬ - ಹರಿದಿನಗಳನ್ನು ಇವರೂ ಆಚರಿಸುತ್ತಾರೆ. ಇವರಿಗೇ ವಿಶಿಷ್ಟವಾದ ಹಬ್ಬಗಳು ಇರುವುದಿಲ್ಲ. ಮದುವೆಯಾದ ಮಾರನೆ ದಿನದಂದು 'ಕಾಳಿಕಾ ಮಾತೆ'ಯ ಪೂಜೆಯನ್ನು ಇವರು ಮಾಡುತ್ತಾರೆ. ಈ ಹಬ್ಬ [ಪೂಜೆ] ಮಾಡುವ ಹಿನ್ನೆಲೆಗೆ ಒಂದು ಕಥೆಯೇ ವಿಶ್ವಕರ್ಮರಲ್ಲಿ ಪ್ರಚಲಿತವಿದೆ.

ಒಮ್ಮೆ ಶಿವ ಮತ್ತು ಪಾರ್ವತಿಯರ ನಡುವೆ ಚರ್ಚೆ ಆರಂಭವಾಗುತ್ತದೆ. ತಮ್ಮಿಬ್ಬರಲ್ಲಿ ಯಾರು ಅಂದವಾಗಿದ್ದಾರೆಂಬುದು ಅವರ ಸಮಸ್ಯೆ. ಅಲ್ಲಿಗೆ ದೇವಾನುದೇವತೆಗಳನ್ನು ಸೇರಿಸಿ ತಮ್ಮಿಬ್ಬರಲ್ಲಿ ಯಾರು ಚೆನ್ನಾಗಿರುವವರು ಎಂದು ಪ್ರಶ್ನಿಸಿದರು. ಆಗ ದೇವತೆಗಳೆಲ್ಲ ಚಿಂತಿಸಿ ತಮ್ಮ ಉತ್ತರದಿಂದ ಶಿವ ಎಲ್ಲಿ ಕೋಪಗೊಳ್ಳುವನೋ ಎಂದು ಹೆದರಿ ನಿಮ್ಮ ಪ್ರಶ್ನೆಗೆ ನಾರದ ಮಹಾತ್ಮರು ಉತ್ತರಿಸಬಲ್ಲರು ಎನ್ನುತ್ತಾರೆ. ನಾರದನನ್ನು ಪ್ರಶ್ನಿಸಿದಾಗ ಆತನೂ ಉತ್ತರಿಸದೆ ವಿಶ್ವಕರ್ಮನನ್ನು ಪ್ರಶ್ನಿಸಿದರೆ ಉತ್ತರಿಸಬಲ್ಲ ಎಂದು ಸಲಹೆ ಕೊಡುತ್ತಾನೆ. ವಿಶ್ವಕರ್ಮನನ್ನು ಕರೆಸಿ ಪ್ರಶ್ನಿಸಿದಾಗ ಆತನೂ ಸಹ ಉತ್ತರಿಸದೆ ಚೆನ್ನಾಗಿ ಹೊಳೆಯುವ ತ್ರಿಶೂಲವೊಂದನ್ನು ತಯಾರಿಸಿ ತಂದು ನಿಮ್ಮ ನಿಮ್ಮ ಮುಖವನ್ನು ನೀವೇ ನೋಡಿಕೊಳ್ಳಿ ಎಂದು ಕೊಡುತ್ತಾನೆ. ಅದರ ಸಹಾಯದಿಂದ ತಮ್ಮ ಸೌಂದರ್ಯವನ್ನು ನೋಡಿ ಸಂತೋಷಪಟ್ಟ ಶಿವ 'ನಿನಗೆ ಏನು ವರ ಬೇಕು ಕೇಳಿಕೊ' ಎನ್ನುತ್ತಾರೆ. ಅದಕ್ಕೆ ವಿಶ್ವಕರ್ಮ ನನಗೆ ಸಕಲವೂ ಇರುವುದರಿಂದ ಯಾವ ವರವೂ ಬೇಡ ಎನ್ನುತ್ತಾನೆ. ಕುಪಿತನಾದ ಶಿವ 'ಹಾಗಾದರೆ ನಿನಗೆ ದರಿದ್ರವುಂಟಾಗಲಿ' ಎಂದು ಶಪಿಸುತ್ತಾನೆ. ಪ್ರತಿಯಾಗಿ ವಿಶ್ವಕರ್ಮನೂ 'ಆತನಿಗೆ ನೀನು ಗುಂಡ್ಕಲ್ಲಾಗು' ಎಂದು ಶಾಪ ನೀಡಿದನು. ಶಿವ ಗುಂಡುಕಲ್ಲಾದಾಗ ಪಾರ್ವತಿಯು ನನ್ನ ಪತಿ ನನಗೆ ಬೇಕೆಂದು ಕೇಳಿಕೊಳ್ಳುವುದರೊಂದಿಗೆ 'ನಿನಗೆ ಪೂರ್ಣ ದರಿದ್ರ ಉಂಟಾಗದಿರಲಿ' ಎಂದು ವರ ನೀಡಿದಳಂತೆ. ಅಂದಿನಿಂದ ಇವರ ಮನೆತನದವರು ತಾವೆಷ್ಟೇ ಸಂಪಾದಿಸಿದರೂ ಅವರ ಕೈನಲ್ಲಿ ಉಳಿಯದೆ, ಅತಿ ಬಡವರೂ ಅಲ್ಲದೆ ಅತಿ ಶ್ರೀಮಂತರೂ ಅಲ್ಲದೆ ಮಧ್ಯಮ ಸ್ಥಿತಿಯಲ್ಲಿ ಕಾಲಹರಣ ಮಾಡುತ್ತಿದ್ದಾರಂತೆ. ಪಾರ್ವತಿಯು ಅವರಿಗೆ ವರ ನೀಡಿದ

ಪರಿಣಾಮವಾಗಿ ಈ ಜನಾಂಗದವರು ಮದುವೆ ಆದ ಮಾರನೆ ದಿನದಂದು ಗಂಡು ಹುಡುಗನಿಗೆ ಹುಡುಗಿಯ ಅಲಂಕಾರವನ್ನು ಮಾಡಿಸಿ 'ಕಾಳಿಕಾದೇವಿ' ಪೂಜೆ ಎಂದು ಪಾರ್ವತಿಗೆ ಪೂಜೆ ಸಲ್ಲಿಸುತ್ತಿದ್ದಾರೆಂತೆ.★[1]

ವಿಶ್ವಕರ್ಮ ಜನಾಂಗದವರಲ್ಲಿ ಪ್ರಚಲಿತವಿರುವ ಕೆಲವು ನಂಬಿಕೆಗಳು:

★ ಮೊಸರಿನಿಂದ ತುಂಬಿರುವ ಮಣ್ಣಿನ ಪಾತ್ರೆ, ಹಾಲಿನ ಚೆಂಬು ಅಥವಾ ಬಿಂದಿಗೆ ಎದುರಾದರೆ ಶುಭ.

★ ಕಿವಿ ಕತ್ತರಿಸಲ್ಪಟ್ಟವನು ಎದುರಾದರೆ ಅಶುಭ.

★ ಶಿಲ್ಪಿಯೇ ತಾಯಿ, ಸುವರ್ಣ ಮಗು, ಪೂಜಕರೆಲ್ಲ ಭಕ್ತರೆಂಬ ನಂಬಿಕೆ ಇದೆ.

★ ಪ್ರತಿಯೊಂದು ವಸ್ತುವಿಗೂ ಆತ್ಮವಿರುತ್ತದೆ. ಆದ್ದರಿಂದ ಮಂತ್ರ ತಂತ್ರಗಳನ್ನು ಬಲ್ಲವ ಹಾಗೂ ಆಗಮ ಶಾಸ್ತ್ರಗಳಲ್ಲಿ ಪ್ರವೀಣನಾಗಿರುವ ಶಿಲ್ಪೋತ್ತಮನಿಂದ ಪ್ರಾಣ ಪತ್ರಿಷ್ಠೆ ನಡೆಸಬೇಕು.

★ ಶಿಲ್ಪಿಯು ಮೊದಲು ಪ್ರಾಣಪ್ರತಿಷ್ಠೆ ನಡೆಸಿದ ನಂತರ ಬ್ರಾಹ್ಮಣ ಪೂಜಿಸಬೇಕು. ಇಲ್ಲದಿದ್ದಲ್ಲಿ ಅದು ನಿರ್ಜೀವವಾಗಿದ್ದು ಯಾವುದೇ ಶುಭಫಲವನ್ನು ನೀಡುವುದರಲ್ಲಿ ಅಸಮರ್ಥವಾಗಿರುತ್ತದೆಂಬ ನಂಬಿಕೆ ಇದೆ.

★ ಪ್ರಕೃತಿ ತಾಯಿ, ಶಿಲ್ಪಿ ತಂದೆ, ದೇವತೆಗಳೆಲ್ಲ ಇವರ ಸಂತಾನ.

★ ಶಿಲ್ಪಾಚಾರ್ಯನು ಸಕಲರಿಗೂ ದೀಕ್ಷಾ-ಮೋಕ್ಷ ಗುರುವಾಗಿದ್ದಾನೆ.

★ ಜಗತ್ತನ್ನು ಸೃಷ್ಟಿಸಿದವನೇ ವಿಶ್ವಕರ್ಮ.

★[1] ವಕ್ತೃಗಳು : ೧. ಆರ್. ಚಂದ್ರಶೇಖರಾಚಾರಿ, ೫೦ವರ್ಷ, ಜಕ್ಕರಸನಕುಪ್ಪ, ಬಂಗಾರಪೇಟೆ. ತಾ.
೨. ನಾಗರತ್ನಮ್ಮ ೪೬ ವರ್ಷ, ತಾವರೆಕೆರೆ, ಹೊಸಕೋಟೆ ತಾಲ್ಲುಕು.

★ ಪರಬ್ರಹ್ಮ ಸ್ವರೂಪನಾದ ವಿಶ್ವಕರ್ಮನೇ ಅಕ್ಕಸಾಲಿಗ ವಂಶದ ಮೂಲಪುರುಷ.

★ ಪ್ರಯಾಣದ ಸಂದರ್ಭದಲ್ಲಿ ಆಚಾರಿ ಎದುರಾದರೆ ಶುಭ.

★ ಆಚಾರಿಯು ಸುತ್ತಿಗೆಯಿಂದ ಚಿನ್ನ ಬಡಿಯುವಾಗ ಅದರ ಶಬ್ದವು ಕೇಳುವವರ ಕಿವಿಗೆ ಹೀಗೆ ಕೇಳಿಸುತ್ತದೆಯಂತೆ. "ಕೊಟ್ಟೋನ್ ಕೆಟ್ಟ, ಕೊಟ್ಟೋನ್ ಕೆಟ್ಟ, ಕುಟ್ಟಾ ಕುಟ್ಟಾ ಕೊಟ್ಟೋನ್ ಕೆಟ್ಟ"★1

★ ಆಚಾರಿಯ ಕೈಯಲ್ಲಿ ಮಕ್ಕಳ ಕಿವಿ, ಮೂಗನ್ನು ಚುಚ್ಚಿಸಿದರೆ ಗಾಯ ಆಗುವುದಿಲ್ಲ.

★ ಅಮಾವಾಸ್ಯೆ, ಪೌರ್ಣಮೆಯಂದು ಆಭರಣಗಳನ್ನು ಮಾಡಬಾರದು.

★ ಆಚಾರ ಮಾಡುವವನೇ ಆಚಾರಿ. ಪ್ರತಿನಿತ್ಯ ಬೆಳಿಗ್ಗೆ, ಮಧ್ಯಾಹ್ನ ಹಾಗೂ ಸಾಯಂಕಾಲ ತಪ್ಪದೆ ಸಾಂಪ್ರದಾಯಕವಾಗಿ ನಡೆದುಕೊಳ್ಳಬೇಕು.

★ ಆಚಾರಿಗಳನ್ನು 'ತಪ್ಪೇಟಿನವರು' ಎನ್ನುತ್ತಾರೆ. [ಒಂದು ಏಟನ್ನು ಚಿನ್ನದ ಮೇಲೆ ಬಡಿದರೆ, ಮತ್ತೊಂದು ಏಟನ್ನು ಹಿಡುಗಲ್ಲಿನ ಮೇಲೆ ಒಡೆಯುವುದರಿಂದ]

★ ಆಚಾರಿ ತನ್ನ ಕೆಲಸ ಆರಂಭಿಸುವ ಮೊದಲು ಕುಲುಮೆ [ಅಗ್ಗಿಷ್ಟಿಕೆ] ಯನ್ನು ಪೂಜಿಸಬೇಕು.

★ ಮದುಮಗಳು ಮುಹೂರ್ತದ ದಿನ ವರಲಕ್ಷ್ಮಿ ಪೂಜೆಯನ್ನು ಮಾಡಬೇಕು.

★ ಮದುವೆಯ ಮಾರನೆ ದಿನದಂದು ಕಾಳಿಕಾಮಾತೆಯನ್ನು ಆರಾಧಿಸಬೇಕು.

★1 ಕನ್ನಡ ಜಾನಪದ ವಿಶ್ವಕೋಶ. ಸಂ. ಡಾ॥ ಚಂದ್ರಶೇಖರ ಕಂಬಾರ. ಸಂಪುಟ-೧ ಪು. ೧೮-೧೯ ಪ್ರ.ವ.೧೯೮೫

★ ಆಯಾ ಗೋತ್ರದವರು ಶುಭಾಶುಭ ಕಾರ್ಯಗಳನ್ನು ಮಾಡುವಾಗ ತಮ್ಮ ಗೋತ್ರಕ್ಕೆ ಸಂಬಂಧಿಸಿದ ಹೋಮಕುಂಡಗಳನ್ನು ರಚಿಸಿ, ಆಯಾ ಮಂತ್ರಗಳನ್ನು ಪಠಿಸಬೇಕು.

★ ಬಂಗಾರ ಲಕ್ಷ್ಮಿ ಇದ್ದಂತೆ; ಆದ್ದರಿಂದ ಸೊಂಟದಿಂದ ಕೆಳಗೆ ಆಭರಣದ ರೂಪದಲ್ಲಿ ಹಾಕಿಕೊಂಡರೆ ಅವಳಿಗೆ ಅವಮಾನ ಮಾಡಿದಂತೆ.

★ ಹೊಸ ಆಭರಣಗಳನ್ನು ಪೂಜಿಸಿ ನಂತರ ಧರಿಸಬೇಕು.

★ ವಿಧವೆಯರು ಲೋಹದ ಬಳೆಗಳನ್ನು ಧರಿಸಬಹುದು; ಗಾಜಿನ ಬಳೆ ಧರಿಸಬಾರದು.

★ ದೇವರಿಗೆ ಹರಕೆ ಹೊತ್ತು ಹಾರ, ತುರಾಯಿ, ಉಂಗುರ, ತೊಟ್ಟಿಲನ್ನು ಮಾಡಿಸಿ ಮುಡಿಪಿಟ್ಟರೆ ಶುಭವಾಗುತ್ತದೆ.

★ ನವರತ್ನವಿದ್ದರೂ ನರರತ್ನವಿರಬೇಕು.

★ ವಿಶ್ವಕರ್ಮರು ಅಗ್ಗಿಷ್ಟಿಕೆಯನ್ನು ಸಾಕ್ಷಾತ್ ಕಾಳಿಕಾ [ದುರ್ಗಾ] ಮಾತೆ ಎನ್ನುತ್ತಾರೆ.

★ ಭೂಮಿಯಿಂದ ಚಿನ್ನವನ್ನು ತೆಗೆದ ತಕ್ಷಣ ಅದರ ಆತ್ಮ ಹೋಗುತ್ತದೆ.

★ ಮದುವೆಯಲ್ಲಿ ಮಾಡಿರುವ ಚಿನ್ನದ ಒಡವೆಯಿಂದ ಒಂಭತ್ತು ಸಲ ಕಣ್ಣು ಕುಟಿಕೆಯ ಮೇಲೆ ಸವರಿದರೆ ಅದು ನಿವಾರಣೆಯಾಗುತ್ತದೆ.

★ ಮದುವೆ ಚಪ್ಪರ ಹಾಕುವಾಗ ಕಳ್ಳಿಯ ಕವೆಯ ಕೆಳಗೆ ಚೂರು ಚಿನ್ನ, ಬೆಳ್ಳಿ ಮತ್ತು ಹವಳಗಳನ್ನು ಇಟ್ಟು ಹಾಲು ತುಪ್ಪ ಎರೆದು ಅದರ ಮೇಲೆ 'ಹಸೆಜಗಲಿ' ನಿರ್ಮಿಸಿದರೆ ಶುಭ.

★ ಬಂಗಾರ ದಾನ ಮಾಡುವವರ ಜೀವನ ಸಂತೋಷದಾಯಕ ಹಾಗೂ ವೈಭವಯುತವಾಗಿರುತ್ತದೆ.

★ ದಕ್ಷಿಣ ದಿಕ್ಕಿಗೆ ಹರಿಯುವ ನದಿಗಳಲ್ಲಿ ಚಿನ್ನ, ಮುತ್ತುಗಳು ದೊರಕುತ್ತವೆ.

★ ಸೂರ್ಯನಿಂದ ಚಿನ್ನ ದೊರೆಯುತ್ತದೆ.

★ ಸತು ಹಾಗೂ ದಂತವನ್ನು ಚಿನ್ನದ ಗಣಿಯೊಳಗೆ ಒಯ್ಯಬಾರದು.

★ ಚಿನ್ನವನ್ನು ಗಣಿಯಿಂದ ತೆಗೆದವರ ಮೇಲೆ ಅದರ ಆತ್ಮ ಸೇಡು ತೀರಿಸಿಕೊಳ್ಳುತ್ತದೆ.

★ ಸೋಮನಾಥಪುರದ ಕೇಶವ ದೇವಾಲಯದ ಸೌಂದರ್ಯಕ್ಕೆ ಮನ ಸೋತ ದೇವತೆಗಳು ಅದನ್ನು ಅಮರಾವತಿಗೆಂದು ಮೇಲಕ್ಕೆ ಒಯ್ಯುತ್ತಿದ್ದಂತೆ ಅದನ್ನು ಕಂಡ ಜಕಣಾಚಾರಿ ತನ್ನ ಕೈಯಲ್ಲಿದ್ದ ಉಳಿಯನ್ನು ಅವರತ್ತ ಎಸೆದನು. ಆಗ ದೇವಾಲಯವನ್ನು ಭೂಮಿಗೆ ಎಸೆದರು. ಹಾಗೆ ಎಸೆದಾಗ ಸ್ವಲ್ಪ ಓರೆಯಾದ್ದರಿಂದ ಅದರ ಮುಂದೆ ಇರುವ ಗರುಡಗಂಬವು ಈಗಲೂ ಸ್ವಲ್ಪ ವಾಲಿರುವಂತೆ ಕಾಣುತ್ತದೆಂಬ ನಂಬಿಕೆ ಇದೆ.

★ ಕೈದಾಳದಲ್ಲಿನ ಕೇಶವ ದೇವಾಲಯವನ್ನು ಜಕಣಾಚಾರಿಯೇ ನಿರ್ಮಿಸಿದ್ದು ಅಲ್ಲಿಯ ಕಂಬದ ಮೇಲಿರುವ ವಿಗ್ರಹವೊಂದು 'ಜಕಣಾಚಾರಿಯ' ವಿಗ್ರಹ ಎಂಬ ನಂಬಿಕೆ ಇದೆ.★[1]

★ ಗೃಹಿಣಿಯರು ಮೂಗುತಿಯನ್ನು ಧರಿಸಿರಬೇಕು.

★ ಭೂಮಿ ಮತ್ತು ಸ್ವರ್ಗವನ್ನು ಸೃಷ್ಟಿಸಿದವನೇ ವಿಶ್ವಕರ್ಮ.

★ ದೇವತೆಗಳಿಗೆ ಹೆಸರು ಕೊಟ್ಟವನೇ ವಿಶ್ವಕರ್ಮ.

★ ವಾಸ್ತುಶಿಲ್ಪದ ವಿಜ್ಞಾನವನ್ನು ತಿಳಿಸಿದವನು ವಿಶ್ವಕರ್ಮ.

★ ರಾಮನಿಗೆ ಸೇತುವೆಯನ್ನು ಕಟ್ಟಲು 'ನಳ' ಎಂಬ ಕಪಿಯನ್ನು ನಿರ್ಮಿಸಿದವನೇ ವಿಶ್ವಕರ್ಮ.

★[1] ಕನ್ನಡ ಜಾನಪದ ವಿಶ್ವಕೋಶ. (ಸಂ-೧) ಪು.ಸಂ.೭೮೯ ೧೯೮೫

★ ಇಂದ್ರನ ಆಸ್ಥಾನದಲ್ಲಿ ವಿಶ್ವಕರ್ಮ ಮಹರ್ಷಿಯ ರೂಪದಲ್ಲಿ ಬೆಳಗುತ್ತಿದ್ದಾನೆ.

★ ಯಮನ ಅರಮನೆಯನ್ನು ಕಟ್ಟಿದವನು ವಿಶ್ವಕರ್ಮ.

★ ಪುಷ್ಪಕ ವಿಮಾನವನ್ನು ರಚಿಸಿಥವನು ವಿಶ್ವಕರ್ಮ.

★ ತ್ರಿಪುರ ದಹನದ ಸಂದರ್ಭದಲ್ಲಿ ವಿಶ್ವಕರ್ಮ ದೈವದತ್ತವಾದ ರಥವೊಂದನ್ನು ಸೃಷ್ಟಿಸಿ ಶಿವನಿಗೆ ಕೊಟ್ಟನು.

★ ವಿಶ್ವಕರ್ಮ ಕುದುರೆಯ ಮುಖವನ್ನು ಕತ್ತರಿಸಿ ರುಂಡವಿಲ್ಲದ ವಿಷ್ಣುವಿನ ದೇಹಕ್ಕೆ ಜೋಡಿಸಿ 'ಹಯಗ್ರೀವ' ಎಂಬ ಹೆಸರನ್ನು ನೀಡಿದ.

★ ಲಂಕಾನಗರವು ವಿಶ್ವಕರ್ಮನಿಂದ ಸೃಷ್ಟಿಸಲ್ಪಟ್ಟುದು.

★ ವಿಶ್ರಕರ್ಮನು ಒಮ್ಮೆ ಸೂರ್ಯನನ್ನು ತನ್ನ ತಿರುಗು ಯಂತ್ರದಲ್ಲಿ ಹಾಕಿ ತಿರುಗಿಸಿದ್ದನು.

★ ತಿಲೋತ್ತಮೆ ಎಂಬುವವಳು ವಿಶ್ವಕರ್ಮನಿಂದ ಸೃಷ್ಟಿಸಲ್ಪಟ್ಟವಳು.★1

★ ಸೂರ್ಯನ ಧೂಳಿನ ಕಣದಿಂದ ಸುದರ್ಶನ ಚಕ್ರವನ್ನು ವಿಶ್ವಕರ್ಮ ಮಾಡಿದ.★2

★ ಹವಳದ ಆಭರಣಗಳನ್ನು ಧರಿಸಿದರೆ ಮರುಳು, ಹುಚ್ಚು ನಿವಾರಣೆ ಆಗುತ್ತದೆ.

★ ಕಂದುಬಣ್ಣದ ಹವಳವನ್ನು ಬಳಸಬಾರದು. ದುಷ್ಟಶಕ್ತಿಗೆ ಈ ಬಣ್ಣ ಕಂಡರೆ ಇಷ್ಟ.

★ ಹವಳವನ್ನು ಮನೆಯಲ್ಲಿ ತೂಗು ಹಾಕಿದರೆ ಶುಭ. ಕೆಟ್ಟ ಶಕ್ತಿಗಳು ಪ್ರವೇಶಿಸುವುದಿಲ್ಲ.

★1 ನೋಡಿ : ಕನ್ನಡ ಜಾನಪದ ವಿಶ್ವಕೋಶ. (ಸಂ.೨) ಪು.ಸಂ. ೧೮೧೦.ಪ್ರ.ವ.೧೯೮೫.

★2 ನೋಡಿ : ಕನ್ನಡ ಜಾನಪದ ವಿಶ್ವಕೋಶ. (ಸಂ.೨) ಪು.ಸಂ.೧೯೨೦.ಪ್ರ.ವ.೧೯೮೫.

★ ಮಂಚದ ಬಳಿ ಹವಳ ತೂಗುಹಾಕಿದರೆ ಭಯವಾಗುವುದು, ಬೆವರುವುದು ಇಲ್ಲವಾಗುತ್ತದೆ.

★ ಮೈಮೇಲೆ ಧರಿಸಿದರೆ ಆಪತ್ತುಗಳಿಂದ ರಕ್ಷಿಸಲ್ಪಡುತ್ತಾರೆ.

★ ಸೃಷ್ಟಿಗೆ ಮೂಲ 'ಕುಲುಮೆ'.

★ ಕುಲುಮೆ ಹುಟ್ಟಿದ ಮೇಲೆ ಕುಲ ಹುಟ್ಟಿತು.

★ ವಜ್ರದ ಒಡವೆಯನ್ನು ಅಕ್ಕಿ ತುಂಬಿದ ಪಾತ್ರೆಯಲ್ಲಿಟ್ಟು ಅಕ್ಕಿ ಉಕ್ಕಿ ಕೆಳಗೆ ಚೆಲ್ಲಿದರೆ ಶುಭ; ಇಲ್ಲದಿದ್ದರೆ ಅಶುಭವೆಂಬ ನಂಬಿಕೆ ಇದೆ.★1

★ ವಿಶ್ವಕರ್ಮ ವಂಶ ಸಂಭೂತನಾಗಿರುವವನೇ ಮಾಂಗಲ್ಯ, ಮೂಗುತಿ, ಬಳೆ, ಕಾಲುಂಗುರ ಕುತ್ತಿಗೆ ಸರವನ್ನು ಮಾಡಬೇಕು.

★ ಕೆ.ಡಿ.ಎಂ. ವೆಲ್ಡಿಂಗ್ ಮಾಡಿದರೆ ಕ್ಯಾನ್ಸರ್ ಬರುತ್ತದೆಂಬ ನಂಬಿಕೆ ಇದೆ.

ಹೀಗೆ ವಿಶ್ವಕರ್ಮರಲ್ಲಿ ಹಾಗೂ ಈ ಜನಾಂಗದವರನ್ನು ಕುರಿತು ನೂರಾರು ನಂಬಿಕೆಗಳೇ ಪ್ರಚಲಿತವಾಗಿವೆ. ಲೇಖನದ ಗಾತ್ರದ ಹಿನ್ನೆಲೆಯಲ್ಲಿ ಕೆಲವನ್ನು ಮಾತ್ರ ನಾನಿಲ್ಲಿ ಸೂಚಿಸುವ ಪ್ರಯತ್ನ ಮಾಡಿದ್ದೇನೆ.

ವಿಶ್ವಕರ್ಮ ಜನಾಂಗವನ್ನು ಕುರಿತ ಗಾದೆಗಳು :

★ ಆಚಾರಿ ಆಳಲ್ಲ, ಅಂಬಲಿ ಪಾಯಸಲ್ಲ, ಸೂಬು ಸೆಂಟಲ್ಲ.

★ ಆಚಾರಿಗೆ ಊಟದ ಚಿಂತೆ ಆದ್ರೆ, ಕುದುರಿಗೆ ಗೂಟದ ಚಿಂತಿ.

★ ಆಚಾರಿಗೆ ಔತಣ ಸಿಹಿ ಹತ್ತಿದರೆ, ಹೇತ ಬಂದ ಉಣತೇನಿ ಅಂತಿದ್ನಂತ.★2

★1 ನೋಡಿ : ಸುವರ್ಣಜಾನಪದ-ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ. ಪು.ಸಂ. ೫೩೧ ಮು: ೧೯೯೬

★2 ನೋಡಿ : ಬೆತ್ತಲೆ ಗಾದೆಗಳು, ಸಂ.ಬಿ.ಬಿ. ಬಿರಾದಾರ. ಪ್ರ.೧೯೮೬. ಪು.ಸಂ.೨೪.

★೧ ಅಕ್ಕಸಾಲೆ ಅಕ್ಕ ಕೊಟ್ಟ ಚಿನ್ನವಾದರೂ ಎಕ್ಕ ಹುಟ್ಟಿಸ್ದದೆ ಬಿಡ.

★ ವಾಜರು ಎಮ್ಮೆ ಕೊಟ್ಟು ಹಮ್ಮುಯಿಳಾಸ್ಕೊಂಡ್ರು.

★ ವಾಜರ ಮಾತು ಗೋಜು ಗೋಜು.★1

★ ಅಗಸ ಮಾಡಿದ್ದು ಬಟ್ಟೆಗೆ, ಅಕ್ಕಸಾಲೆ ಮಾಡಿದ್ದು ಅಗ್ಗಿಷ್ಟಿಕೆಗೆ.

★ ಅಕ್ಕನ ಚಿನ್ನವಾದರೂ ಅಕ್ಕಸಾಲಿಗ ತೂನೆಯದೆ ಬಿಡ.

★ ಅಕ್ಕಸಾಲಿಗಿಂತ ಕಳ್ಳನಿಲ್ಲ, ಮೆಕ್ಕೆಗದ್ದೆಗಿಂತ ಬೆಳೆಯಿಲ್ಲ.

★ ಆಚಾರಿ ಆಳಲ್ಲ, ಅಂಬಲಿ ಪಾಯಸ ಅಲ್ಲ.★2

★ ಬೆಳ್ಗಾರ ಇಲ್ದಿದ್ರೆ ವೆಲ್ಡಿಂಗ್ ಆಗೊಲ್ಲ.★3

★ ಮೂಗಿಗಿಂತ ಮೂಗುತಿ ಭಾರ.

★ ತಬ್ಬುಗಾತ್ರದ ಮುತ್ತು ಮೂಗುತಿಗಾದೀತೆ?

★ ಬೀಗತಿ ಇಲ್ಲದ ಮನೆ, ಮೂಗುತಿ ಇಲ್ಲದ ಮಾರೆ.

★ ನೆಗಡಿಯಂಥ ರೋಗವಿಲ್ಲ, ಬುಗುಡಿಯಂಥ ಒಡವೆಯಿಲ್ಲ.

★ ಬುಗುಡಿಯಾದರೆ ಧಗಡೀ ಮಗಳಿಗೆ ಆಗದೆ?

★ ಕಡಗ ಇದ್ದವಳು ಕಡೆಗೋಲು ಹಿಡಿಯಲಾರಳೆ?

★ ಗೆಜ್ಜೆ ಕಟ್ಟಿದ ಮೇಲೆ ಲಜ್ಜೆ ನಾಚಿಕೆ ಯಾಕೆ?

★ ಮಾತು ಆಡಿದರೆ ಹೋಯಿತು, ಮುತ್ತು ಒಡೆದರೆ ಹೋಯಿತು.

★ ಮಂಗನ ಕೈಯಲ್ಲಿ ಮಾಣಿಕ್ಯ ಕೊಟ್ಟ ಹಾಗೆ.

★ ರತ್ನ ಒಳ್ಳೆಯದಾದರೆ ಇದ್ದಕಡೆಯೇ ಬೆಲೆ.

★ ಅಕ್ಕನ ಚಿನ್ನವಾದರೂ ಅಕ್ಕಸಾಲೆ ಕದಿಯದೆ ಬಿಡ.

★1 ನಮ್ಮ ಗಾದೆಗಳು-ರಾಗೌ.ತೃ.ಮುದ್ರಣ ೧೯೮೬ : ಪು.ಸಂ.-೧೫೭.

★2 ಪ್ರಬುದ್ಧ ಕರ್ನಾಟಕ, ಅಮೃತ ಸಂಪುಟ: ೧೯೯೩-೯೪. ಪ್ರಸಾರಾಂಗ, ಮೈಸೂರು ವಿ.ವಿದ್ಯಾಲಯ. ಪು.ಸಂ. ೨೫೯

★3 ವಕ್ತೃ : ಆನಂದಾಚಾರಿ, ೪೨ ವರ್ಷ, ರಾಬರ್ಟ್‌ಸನ್ ಪೇಟೆ. ಕೆ.ಜಿ.ಎಫ್.

- ★ ಬಡವೆಗೇಕೆ ಒಡವೆಯ ಚಿಂತೆ.★1
- ★ ಚಿನ್ನದ ಸೂಜಿ ಅಂತ ಕಣ್ಣು ಚುಚ್ಚಿಕೊಳ್ಳೊಕಾಗ್ತದ?
- ★ ಚಿನ್ನದ ಅರಿವಾಣಕ್ಕೆ ಬದುಕಿದ್ರು ಮಣ್ಣುಗೋಡೆಗೆ ಒರಗಬೇಕು.★2
- ★ ನವರತ್ನವಿದ್ದರೂ ನರರತ್ನವಿರಬೇಕು.
- ★ ನಾಗರಹಾವಿನ ತಲೆ ಮೇಲೆ ಮಾಣಿಕ್ಯ ಇದ್ದ ಹಾಗೆ.
- ★ ಗಂಡ ಸತ್ತರೆ ಸಾಯಲಿ, ಕಿವಿಗೊಂದು ಒಲೆಯಾದರೆ ಸೈ.
- ★ ಮಾಣಿಕ್ಯ ಬಿದ್ದರೆ ಹೆಕ್ಕಬಹುದು, ಮಾತು ಬಿದ್ದರೆ ಹೆಕ್ಕಲಾಗದು.
- ★ ಮಾತು ಬಲ್ಲವ ಮಾಣಿಕ್ಯ ತಂದ, ಮಾತು ಬಾರದವ ಜಗಳ ತಂದ.
- ★ ಒಲಿದರೆ ನೀಲ, ಇಲ್ಲದಿದ್ದರೆ ಮೂಲ.★3
- ★ ಹೊನ್ನಿದ್ದಮ್ಮನ ತೊನ್ನು ಮುಚ್ಚಿತು, ಮಕ್ಕಳಿದ್ದಮ್ಮನ ಹಾದರ ಮುಚ್ಚಿತು.
- ★ ಮೈಯೆಲ್ಲ ಚಿನ್ನ, ಕಿವಿ ಚುಚ್ಚಿದರೆ ನೊಚ್ಚಗೆ.★4
- ★ ಅಕ್ಕಸಾಲೆ ಕಿವಿ ಚುಚ್ಚಿದರೆ ನೊಚ್ಚಗೆ.★5
- ★ ಚಿನ್ನಿವಾರನ ಮನೇ ನಾಯಿಯಾದರೆ ನಾಣ್ಯದ ನೋಟಾ ಬಲ್ಲುದೇ?★6

★1 ಕನ್ನಡ ಜಾನಪದ ವಿಶ್ವಕೋಶ. ಸಂಪುಟ-೧. ಪು.ಸಂ. ೧೪೩. ಆ ೧೪೭.

★2 ಕನ್ನಡ ಜಾನಪದ ವಿಶ್ವಕೋಶ. ಸಂಪುಟ-೧. ಪು.ಸಂ. ೭೬೯. ಆ ೧೪೭.

★3 ಸುವರ್ಣ ಜಾನಪದ. ಸಂಪುಟ-೨ ೧೯೯೮. ಪು.ಸಂ.೫೩೩

★4 ಸುವರ್ಣ ಜಾನಪದ. ಸಂಪುಟ-೨ ೧೯೯೮. ಪು.ಸಂ. ೩೧೮

★5 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು. ಮೊದಲನೆ ಸಂಪುಟ. ಪು.ಸಂ.೨೯೭೦ ಪ್ರ.ಸಂ.೬೦

★6 ಕನ್ನಡ ನಿಘಂಟು, ಕನ್ನಡ ಸಾಹಿತ್ಯ ಪರಿಷತ್ತು. ಮೂರನೆಯ ಸಂಪುಟ. ಪು.ಸಂ.೨೮೪೧.ಪ್ರ.ವ.೧೯೭೭

- ★ ಆಚಾರಿ ಮಾತು ಆಚ್ಗೊಂದು, ಈಚ್ಗೊಂದು.
- ★ ಕಬ್ಬಿಣದ ಅಂಗಡಿಯಲ್ಲಿ ನೊಣಕ್ಕೇನು ಕೆಲಸ.
- ★ ಕಿವಿ ಕಿತ್ತು ಕಿರುಬೆರಳಿಗೆ ಉಂಗುರ ಹಾಕಿದಂತೆ.
- ★ ಮಾತು ಬೆಳ್ಳಿ ಮೌನ ಬಂಗಾರ.
- ★ ಮುಂಡೆಗೆ ಗಂಡ ಬಾಳೊಲ್ಲ, ಮೂಳಿಕಿವಿಗೆ ಓಲೆ ಬಾಳೊಲ್ಲ. ★1
- ★ ಕಮ್ಮಸಾಲಿ ತನ್ನ ಕಡುಜಾತಿ ಲೇದುರಾ. [ಅಕ್ಕಸಾಲಿಗಿಂತ ವಿಶೇಷ ಜಾತಿ ಇಲ್ಲ] ★2
- ★ ಬಂಗಾರವನ್ನು ಬೆಂಕಿಯಲ್ಲಿ ಪರೀಕ್ಷಿಸಬೇಕು; ಸ್ನೇಹಿತರನ್ನು ಕಷ್ಟದಲ್ಲಿ ಪರೀಕ್ಷಿಸಬೇಕು.
- ★ ಪೋಲಿ ಮುಕ್ಕನಿಗೆ ತಾಲಿ ಕಟ್ಟಿದರೆ ತಾಲಿ ತಾಲಿ, ಪೋಲಿ ಪೋಲಿ.
- ★ ಕಬ್ಬಿಣ ಯಾರಿಗೆ ಬಗ್ಗೋದು ಅಂದರೆ ಆಚಾರಿಗೇ. ★3
- ★ ಬರಿಕೈಗಿಂತ ಕಬ್ಬಿಣದ ಕಡಗ ಲೇಸು.
- ★ ಹಿತ್ತಾಳೆ ಕಿವಿಯೋಳು.

ಹೀಗೆ ನೂರಾರು ಗಾದೆಗಳು ನಾಡಿನಾದ್ಯಂತ ಪ್ರಚಲಿತವಾಗಿದೆ.

ಪ್ರಾಚೀನ ಕಾಲದಿಂದಲೂ ಜನರು ಲೋಹಗಳನ್ನು ಬಳಸುತ್ತಿದ್ದರು. ಇವುಗಳ ಬಗೆಗೆ ಅವರು ಅನುಭವದಿಂದ ಪಡೆದುಕೊಂಡ ಅವರದೇ ಆದ ಜ್ಞಾನ ಸಂಪತ್ತು ಇತ್ತು. ಲೋಹಗಳು ಒಂದು ವಿಶಿಷ್ಟ ರೀತಿಯಲ್ಲಿ ಅವರ ನಂಬಿಕೆ, ಆಚರಣೆ, ಪದ್ಧತಿ, ಸಂಪ್ರದಾಯ, ಸಾಹಿತ್ಯ ಮುಂತಾದುವುಗಳಲ್ಲಿ

★1 ಕನ್ನಡ ಜಾನಪದ ವಿಶ್ವಕೋಶ. ಸಂಪುಟ-೧. ಪುಟ-೧೪೪.

★2 ವಕ್ತೃ : ನಾಗರತ್ನಮ್ಮ, ೪೬ ವರ್ಷ, ತಾವರೆಕೆರೆ, ಹೊಸಕೋಟೆ ತಾಲ್ಲೂಕು.

★3 ಕನ್ನಡಗಾದೆಗಳ ಮಹಾಕೋಶ. ಹು.ಮ. ರಾಮಾರಾಧ್ಯ. ಸಂಪುಟ-೨. ೧೯೮೨ ಪ್ರ.ಸಂ.೨೦

ಪಾತ್ರವಹಿಸಿದ್ದವು. ದೇವರಿಗೆ ಹರಕೆ ಹೊತ್ತು ಕಾರ್ಯ ಫಲಿಸಿದಲ್ಲಿ ಹಾರ, ಉಂಗುರ, ಕಡಗ, ತೊಟ್ಟಿಲು ಮುಂತಾದ ಆಭರಣಗಳನ್ನು ಮಾಡಿಸಿ ಮುಡಿಪಿಟ್ಟು ದೇವರಿಗೆ ಅರ್ಪಿಸುವ ಸಂಪ್ರದಾಯವಿದೆ. ಹೀಗೆ ಆಭರಣಗಳ ರಚನೆಯಲ್ಲಿ ಬಳಕೆಯಾಗುವ ಲೋಹಗಳಿಗೆ ಧಾರ್ಮಿಕ ಶ್ರದ್ಧೆ ನಂಬಿಕೆಗಳ ಹಿನ್ನೆಲೆಯಿದೆ. ಚಿನ್ನ, ಬೆಳ್ಳಿ, ಮೊದಲಾದ ಲೋಹವು ಪ್ರಕೃತಿಯಲ್ಲಿ ಸಹಜವಾಗಿ ಸಿಗುತ್ತಿದ್ದುದರಿಂದ ಅದುರಿನಿಂದ ಲೋಹಗಳನ್ನು ಬೇರ್ಪಡಿಸುವ ವಿಧಾನವನ್ನು ಜನರು ಕಂಡು ಕೊಂಡರು. ಪುಡಿರೂಪದ ಅದುರನ್ನು ದ್ರವರೂಪಕ್ಕೆ ಪರಿವರ್ತಿಸಿ ಪುನಃ ಅದನ್ನು ಘನರೂಪಕ್ಕೆ ತರುವ ಲೋಹ ಗೆಲಸದವರನ್ನು ಜನರು ಭೀತಿಯಿಂದ ಕಾಣುತ್ತಿದ್ದರು; ಪೂಜಿಸುತ್ತಿದ್ದರು. ಬಂಗಾರವು 'ಲಕ್ಷ್ಮಿ' ಇದ್ದಂತೆ. ಸೊಂಟದಿಂದ ಕೆಳಗೆ ಹಾಕಿಕೊಂಡರೆ ಆಕೆಗೆ ಅವಮಾನ ಮಾಡಿದಂತೆ ಎಂಬ ನಂಬಿಕೆಯಿಂದಾಗಿ ಬಂಗಾರದ ಆಭರಣಗಳು ಆಕಸ್ಮಾತ್ತಾಗಿ ಕಾಲಿಗೆ ತಗುಲಿದರೆ ಹಣೆಗೆ ಮುಟ್ಟಿಸಿಕೊಂಡು ನಮಸ್ಕಾರ ಮಾಡುತ್ತಾರೆ. ದೇಹದ ಮೇಲೆ ಚಿನ್ನದ ಆಭರಣಗಳನ್ನು ಧರಿಸಿದರೂ ಕಾಲಿನ ಆಭರಣಗಳು ಮಾತ್ರ ಚಿನ್ನದವಾಗಿಲ್ಲದಿರುವುದಕ್ಕೆ ಈ ನಂಬಿಕೆಯೇ ಕಾರಣವಾಗಿದೆ. ಹಾಗೆಯೇ ವಜ್ರವನ್ನು ಸಾಕ್ಷಾತ್ ಲಕ್ಷ್ಮಿಯೆಂದು ಪರಿಗಣಿಸಿ ಭಕ್ತಿಯಿಂದ ಕಾಣುತ್ತಾರೆ. ಹೊಸ ಒಡವೆಗಳನ್ನು ಪೂಜೆ ಮಾಡಿಯೇ ಧರಿಸುತ್ತಾರೆ.

ಸೃಷ್ಟಿಗೆ ಮೂಲ 'ಕುಲುಮೆ' ಎಂಬ ನಂಬಿಕೆ ವಿಶ್ವಕರ್ಮರಲ್ಲಿದೆ. ವಿಶ್ವಕರ್ಮನ ಮಕ್ಕಳಾದ ಪಂಚಕರ್ಮಿಗಳಲ್ಲಿ 'ಮನು' ಮೊದಲನೆಯವನು. ಈತನೇ ಸೃಷ್ಟಿಕರ್ತ. 'ಕುಲುಮೆ ಹುಟ್ಟಿದ ಮೇಲೆಯೇ ಕುಲ ಹುಟ್ಟಿತು' ಎಂಬ ಮಾತು ಪ್ರಚಲಿತವಾಗಿದೆ. ಹುಟ್ಟಿನಿಂದ ಹಿಡಿದು ಸಾಯುವವರೆಗಿನ ಅವಧಿಯಲ್ಲಿ ಈತನ ಅವಶ್ಯಕತೆ ಬಹಳ. ಕುಲುಮೆ ಪಂಚಾಳರ ಆರಾಧ್ಯದೈವ; ಕಾಳಮ್ಮನ ಪ್ರತೀಕ. 'ಅಡಿಕಟ್ಟೆ' ಸಹ ಕಾಳಮ್ಮನ ಪ್ರತೀಕ.

"ಕೂಸು ಹುಟ್ಟಿದರೆ ಕಮ್ಮಾರಬೇಕು, ಸತ್ತರೆ ಕಮ್ಮಾರಬೇಕು. ಹುಟ್ಟಿದ ಕೂಸನ್ನು ತಾಯಿಯಿಂದ ಬೇರ್ಪಡಿಸುವಾಗ ಹುರಿಕೊಯ್ಯಲುಬೇಕು ಕುಡುಕೋಲು, ಹಾಗೆ ಬಿತ್ತುವ ಕೆಲಸಕ್ಕೆ ಮೊದಲುಬೇಕು ಮೊಳೆ"★1 ಎಂಬಲ್ಲಿ ವಿಶ್ವದಲ್ಲಿ ವಿಶ್ವಕರ್ಮನ ಅವಶ್ಯಕತೆ ಎಷ್ಟೆಂಬುದರ ಅರಿವಾಗುತ್ತದೆ.

★1 ಸುವರ್ಣಜಾನಪದ : ಸಂಪುಟ-೨ ೧೯೯೮ ಪು.ಸಂ. ೬೫೩ (ವೀರೇಶ ಬಡಿಗೇರ ಲೇಖನ)

ಚಿನ್ನ-ಬೆಳ್ಳಿಯ ಕೈಗಾರಿಕೆ ಕೇವಲ ಕೈ ಕಸುಬಲ್ಲ. ಅದು ಉಪಯುಕ್ತ ಕಲೆ. ಕಲೆ ಮತ್ತು ಕೈ ಕಸುಬುಗಳ ಕೌಶಲದಲ್ಲಿ ಈ ದಂಧೆ ಲಾಭದಾಯಕವೂ ಆಗಿದೆ. ಆರ್ಥಿಕವಾಗಿ ಈ ವೃತ್ತಿ ಮಧ್ಯಮ ವರ್ಗಕ್ಕೆ ಸೇರುತ್ತದೆ. ಗ್ರಾಹಕರ, ಅಕ್ಕಸಾಲಿಗರ ಮಧ್ಯದಲ್ಲಿ ದಲಾಲಿ ಮಾಡುವ ಸರಾಫರು ಮಾತ್ರ ಶ್ರೀಮಂತ ವರ್ಗಕ್ಕೆ ಸೇರುತ್ತಾರೆ. ಈ ದಂಧೆಗೆ ಪ್ರಾಮಾಣಿಕತೆ, ಕುಶಲತೆ ಅಷ್ಟೇ ಮಹತ್ವ ದ್ದಾಗಿವೆ. ೧೯೬೨ರಲ್ಲಿ ಭಾರತದ ಸುವರ್ಣ ನಿಯಂತ್ರಣ ಕಾನೂನು ಬಳಕೆಗೆ ಬಂತು. ಅದರ ಪ್ರಕಾರ ಬಂಗಾರವನ್ನು ಸಂಗ್ರಹಿಸಿಟ್ಟುಕೊಳ್ಳಬಾರದೆಂದಾಯಿತು. ೧೪ ಕ್ಯಾರೆಟ್ಟುಗಳಿಗಿಂತ ಹೆಚ್ಚು ಶುದ್ಧ ಬಂಗಾರವನ್ನು ಉಪಯೋಗಿಸಿ ಆಭರಣ ಗಳನ್ನು ಮಾರಬಾರದೆಂದು ನಿರ್ಬಂಧಿಸಲಾಯಿತು. ಇದರಿಂದ ಅಕ್ಕಸಾಲಿಗರಿಗೆ ತಮ್ಮಲ್ಲಿರುವ ಸಲಕರಣೆಗಳಿಂದ ಆಭರಣ ತಯಾರಿಸಲು ಸಾಧ್ಯವಾಗದಷ್ಟು ಧಾತು ಗಟ್ಟಿಯಾಯಿತು. ಹೆಚ್ಚು ಬಂಡವಾಳವನ್ನು ತೊಡಗಿಸಿ ಆಭರಣ ತಯಾರಿಸಲು ಬೇಕಾಗುವ ಯಂತ್ರಗಳನ್ನು ಕೊಳ್ಳಬೇಕಾದ ಪ್ರಸಂಗ ಒದಗಿತು. ೧೯೬೭ರಲ್ಲಿ ಈ ಕಾಯದೆಯಲ್ಲಿ ಕೆಲಮಟ್ಟಿನ ಮಾರ್ಪಾಡು ನಡೆಯಿತಾದರೂ ಮೊದಲಿನಷ್ಟು ಈ ಉದ್ಯೋಗ ಲಾಭದಾಯಕವೂ ಸುಲಭವೂ ಆಗಿ ಉಳಿಯಲಿಲ್ಲ.★1

ಪರಿಶುದ್ಧವಾದ ಚಿನ್ನ ಬಹಳ ಮೆದುವಾದುದರಿಂದ ಆಭರಣಗಳಿಗೆ ಮತ್ತು ನಾಣ್ಯಗಳಿಗೆ ಅಷ್ಟು ಉಪಯುಕ್ತವಲ್ಲ. ಇದರಿಂದಾಗಿ ತಾಮ್ರ ಮತ್ತು ಬೆಳ್ಳಿಯನ್ನು ಸೇರಿಸುವುದು ರೂಢಿ. ಚಿನ್ನದ ಪರಿಶುದ್ಧತೆಯನ್ನು ಇಂತಿಷ್ಟು ಕ್ಯಾರೆಟ್ಟುಗಳು ಎಂದು ಸೂಚಿಸುವುದು ವಾಡಿಕೆ. ೨೪ ಕ್ಯಾರೆಟ್ಟಿನದು ಪರಿಶುದ್ಧವಾದ ಬಂಗಾರ. ೧೪ ಕ್ಯಾರೆಟ್ ಚಿನ್ನವೆಂದರೆ ೧೪ ತೂಕ ಭಾಗ ಚಿನ್ನ ಮತ್ತು ೧೦ ತೂಕ ಭಾಗ ಇತರೆ ಲೋಹ ಕೂಡಿದೆ ಎಂದರ್ಥ. ಇದರ ಪ್ರಕಾರ ೧೮ ಕ್ಯಾರೆಟ್ ಚಿನ್ನದ ಪರಿಶುದ್ಧತೆ ೭೫%. ಚಿನ್ನದ ನಾಣ್ಯಗಳಲ್ಲಿ ೯೦% ಚಿನ್ನ ಮತ್ತು ೧೦% ತಾಮ್ರವೂ; ಒಡವೆ ತಯಾರಿಸಲು ಬಳಸುವ ಲೋಹದಲ್ಲಿ ೮೪% ಚಿನ್ನ ಮತ್ತು ೧೬% ತಾಮ್ರ ಇರುತ್ತದೆ.

★1 ಕನ್ನಡ ವಿಶ್ವಕೋಶ. ಸಂಪುಟ-೭. ಕನ್ನಡ ಅಧ್ಯಯನ ಸಂಸ್ಥೆ: ೧೯೭೪; ಪು.ಸಂ.-೪೨೫.

ಚಿನ್ನ, ಬೆಳ್ಳಿ, ವಜ್ರಗಳ ಬೆಲೆಯನ್ನು ತೂಕದ ಮೇಲೆ ಕಟ್ಟುತ್ತಾರೆ. ಹಿಂದೆ ತೂಕಕ್ಕೆ ಗುಲಗಂಜಿ ಉಪಯೋಗಿಸುತ್ತಿದ್ದರು.★1 ಈಗ ಗ್ರಾಂ.ಮಿಲಿಗ್ರಾಂಗಳು ಬಳಕೆಗೆ ಬಂದಿವೆಯಾದರೂ ಗ್ರಾಮೀಣ ಪ್ರದೇಶಗಳಲ್ಲಿ ಅಲ್ಪಸಲ್ಪ ಈಗಲೂ ಉಳಿದಿರುವುದು ಕಂಡು ಬರುತ್ತದೆ.

೧	ತೊಲ	=	೧೧.೬೫ ಮಿಲಿಗ್ರಾಂ.
೧	ತೊಲ	=	೧೬ ಆಣೆತೂಕ
೧	ಹಣ	=	೪ ಗುಂಜಿ [ಗುಲಗಂಜಿ]
೧	ಗುಂಜಿ	=	೧೦೦ ಮಿಲಿ
೧	ಅಡ್ಡ	=	೨ ಗುಂಜಿ
೯	ಅಣೆ	=	೧ ವರ
೩೨	ಹಣ	=	೧ ತೊಲ.

ಮುಂತಾದುವಾಗಿ ತೂಗುತ್ತಾರೆ.★2 ಆದರೆ ಇತ್ತೀಚೆಗೆ ಬಂಗಾರವನ್ನು ತೂಗಲು ಕಂಪ್ಯೂಟರ್ ತ್ರಾಸುಗಳೇ ಬಂದಿವೆ.

ಚಿನ್ನ, ಬೆಳ್ಳಿ, ಕಂಚು, ತಾಮ್ರ, ಸತು, ಹಿತ್ತಾಳೆ, ಕಬ್ಬಿಣ, ಸೀಸ ಈ ಎಂಟು ಬಗೆಯ ಲೋಹಗಳು ಪ್ರಶಸ್ತವಾದುವೆಂಬುದಾಗಿ ಆಗಮ ಶಾಸ್ತ್ರವು ಹೇಳುತ್ತದೆ. ಶುದ್ಧ ಲೋಹಗಳಲ್ಲಿ ಶಿಲ್ಪಗಳನ್ನು ಅಥವಾ ಲಿಂಗಗಳನ್ನು ಅಥವಾ ಆಭರಣಗಳನ್ನು ಮಾಡುವುದು ದುಸ್ಸಾಧ್ಯ. ಆದ್ದರಿಂದ ಪಂಚಲೋಹಗಳನ್ನು ಮಿಶ್ರಮಾಡಿ ಬಳಸುತ್ತಾರೆ. ಯಾವ ಲೋಹದ ಪ್ರಮಾಣ ಹೆಚ್ಚಾಗಿರುತ್ತದೆಯೋ ಆ ಶಿಲ್ಪ / ಲಿಂಗ / ಆಭರಣಗಳನ್ನು ಆ 'ಲೋಹ' ಎಂದು ಪರಿಗಣಿಸಲಾಗುತ್ತದೆ.

ರೈತರು ತಮ್ಮ ಕೆಲಸವನ್ನು ಆರಂಭಿಸುವ ಮೊದಲು 'ನೇಗಿಲು' ಪೂಜೆ ಮಾಡುವಂತೆ ಕುಂಬಾರರು ಮೊದಲು 'ಕುಂಬಾರ ಚಕ್ರಕ್ಕೆ' ನಮಿಸುವಂತೆ,

---

★1 ಪ್ರವಾಸಿ ಕಂಡ ಇಂಡಿಯಾ. ಸಂಪುಟ-ಏಳು. ಎಚ್.ಎಲ್. ನಾಗೇಗೌಡ. ಪು.ಸಂ. ೯೪. ೧೯೮೩

★2 ವಕ್ತೃ : ಯಜಮಾನ್ ನರಸಿಂಹಾಚಾರಿ, ೬೫ ವರ್ಷ, ಬಳಿಘಟ್ಟ, ಮಂಡ್ಯ ಜಿಲ್ಲೆ.

ಚಿನಿವಾರರು ಪ್ರತಿನಿತ್ಯ ತಮ್ಮ ಕೆಲಸ ಆರಂಭಿಸುವ ಮೊದಲು ತಮ್ಮ 'ಕುಮಟಿಗೆ' (ಅಗ್ಗಿಷ್ಟಿಕೆ) ಕೈಮುಗಿಯುತ್ತಾರೆ. ಕುಮಟಿಯು ಅವರ ಪಾಲಿಗೆ ಸಾಕ್ಷಾತ್ 'ಕಾಳಿಕಾ ಮಾತೆ' ಆಗಿದ್ದಾಳೆ. ನಂತರ ತಮಗೆ ಬಂದಿರುವ ಒಡವೆಗಳನ್ನು ತಯಾರಿಸಲು ತೊಡಗುತ್ತಾರೆ. ಆಭರಣಗಳು ಅಂಗ ಸೌಂದರ್ಯವನ್ನು ಹೆಚ್ಚಿಸುವ ಸಾಧನಗಳಾಗಿವೆ. ಅಲ್ಲದೆ ಇವು ಶ್ರೀಮಂತಿಕೆಯ ಸಂಕೇತವೂ ಆಗಿವೆ. ಆಭರಣಗಳನ್ನು ಪುರುಷರಿಗೆ ಸಂಬಂಧಿಸಿದುವು ಹೆಂಗಸರಿಗೆ ಸಂಬಂಧಿಸಿದುವು ಮತ್ತು ಮಕ್ಕಳಿಗೆ ಸಂಬಂಧಿಸಿದುವು ಎಂದು ಮೂರು ಗುಂಪುಗಳನ್ನಾಗಿ ಮಾಡಬಹುದು.

ನವರತ್ನಗಳನ್ನು ಆಭರಣಗಳಿಗೆ ಕೂರಿಸುವಾಗ ಆಯಾ ರತ್ನಕ್ಕೆ ವಿಧಿಸಿರುವ ದಿಕ್ಕುಗಳಿಗೆ ಅನುಗುಣವಾಗಿ ಕೂಡಿಸಬೇಕೆಂಬ ನಂಬಿಕೆ ಇದೆ.★1

ಉದಾ :

ಪಚ್ಚೆ ಈಶಾನ್ಯ	ವಜ್ರ ಪೂರ್ವ	ಮುತ್ತು ಆಗ್ನೇಯ
ಪುಷ್ಯರಾಗ ಉತ್ತರ	ಮಾಣಿಕ್ಯ ಮಧ್ಯ	ಹವಳ ದಕ್ಷಿಣ
ವೈಢೂರ್ಯ ವಾಯವ್ಯ	ನೀಲ ಪಶ್ಚಿಮ	ಗೋಮೇಧಿಕ ನೈರುತ್ಯ

ಚಿನಿವಾರರು ಆಭರಣಗಳನ್ನು ರಚಿಸಲು ಚಿನ್ನ, ಬೆಳ್ಳಿ, ತಾಮ್ರ, ಮುತ್ತು, ರತ್ನ, ಹವಳ, ವಜ್ರ ಮುಂತಾದುವನ್ನು ಕಚ್ಚಾ ಸಾಮಗ್ರಿಗಳಾಗಿ ಬಳಸುತ್ತಾರೆ. ಪರಿಶುದ್ಧವಾದ ಚಿನ್ನ ಬಹಳ ಮೆದುವಾಗಿರುವುದರಿಂದ ಆಭರಣಗಳು ಮತ್ತು ನಾಣ್ಯಗಳನ್ನು ಮಾಡುವಾಗ ಬೆಳ್ಳಿ ಮತ್ತು ತಾಮ್ರವನ್ನು ಸೇರಿಸುವುದು ರೂಢಿಯಾಗಿದೆ. ಕುಂದಣ ಕೆಲಸದಲ್ಲಿ ಅಂದರೆ ಅಪ್ಪಟ ಬಂಗಾರವನ್ನು ದೇವರ ವಿಗ್ರಹ, ಪ್ರಭಾವಳಿ, ಕಿರೀಟ ಮುಂತಾದುವುಗಳನ್ನು ಮಾಡಲು ಮಾತ್ರ ಬಳಸುತ್ತಾರೆ.

★1 ಸುವರ್ಣ ಜಾನಪದ. (ಸಂ.೨) ಪ್ರ. ೧೯೯೮. ಪು.ಸಂ. ೫೩೦

ಚಿನ್ನ

ಅತ್ಯಂತ ಭಾರವಾದ ಲೋಹಗಳ ಗುಂಪಿಗೆ ಸೇರಿದೆ. ಹೊಂಬಣ್ಣ ಮತ್ತು ಹೊಳಪುಳ್ಳ ಚಿನ್ನವನ್ನು ಒರೆ ಹಚ್ಚಿದಾಗಲೂ ಅದೇ ಹೊಂಬಣ್ಣ ಮತ್ತು ಹೊಳಪು ಬರುತ್ತದೆ. ಇದು ಮೆದುವಾದ ಲೋಹವಾದ್ದರಿಂದ ಬಹು ನವುರಾದ ತಗಡುಗಳನ್ನಾಗಿ ತಟ್ಟಬಹುದು. ಬಹು ಸೂಕ್ಷ್ಮವಾದ ತಂತಿಗಳನ್ನಾಗಿ ಎಳೆಯಬಹುದು. ಚಿನ್ನವನ್ನು ನಾನಾ ವಿಧಗಳಿಂದ ತೆಗೆಯಬಹುದು.★1

ಆಭರಣಗಳನ್ನು ಮಾಡುವಾಗ ಬಂಗಾರದ ಜೊತೆಗೆ ಬೆಳ್ಳಿ ಅಥವಾ ತಾಮ್ರವನ್ನು ಕೂಡಿಸಿ ಮಾಡುವುದರಿಂದ ಆಭರಣಗಳಿಗೆ ಬಳಸುವ ಕಚ್ಚಾ ಸಾಮಗ್ರಿಗಳೆಂದರೆ; ಚಿನ್ನ, ಬೆಳ್ಳಿ, ತಾಮ್ರಗಳೇ ಆಗಿವೆ. ಆಭರಣಗಳಲ್ಲಿ ಟೊಳ್ಳಾದ ಭಾಗವನ್ನು ಭರ್ತಿ ಮಾಡಲು ಅರಗನ್ನು ಬಳಸುತ್ತಾರೆ. ಆಭರಣಗಳ ಜೊತೆಗೆ ಈ ಲೋಹಗಳಿಂದ ಹಿಂದೆ ನಾಣ್ಯಗಳನ್ನು ರಚಿಸುತ್ತಿದ್ದುದು ತಿಳಿದು ಬರುತ್ತದೆ.★2

ಚಿನಿವಾರರು ಆಭರಣಗಳನ್ನು ತಯಾರಿಸಲು ಮುಖ್ಯವಾಗಿ ಬೇಕಾಗಿರುವ ಸಾಧನಗಳ ಪರಿಚಯವನ್ನು ಈ ಕೆಳಗೆ ನೀಡಲಾಗಿದೆ.

ಮೂಸೆ

ಇದನ್ನು 'ನುಸಿ', 'ಡಬ್ಬಿ', 'ಭರಣಿ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಮಣ್ಣಿನಿಂದ ತಯಾರಿಸಲ್ಪಟ್ಟಿದ್ದು ವಿವಿಧ ಗಾತ್ರಗಳಲ್ಲಿವೆ. ಚಿನ್ನ ಕರಗಿಸಲು ಬಳಸುವ ಸಾಧನ ಇದಾಗಿದೆ.

ಅಡಿಗಲ್ಲು

ಇದನ್ನು 'ಅದ್ದಾಣಿ', 'ಪಟ್ಟಡಿ', 'ಇಡುಗಲ್ಲು', 'ಪೆಣೆ', 'ಪಣೆ', 'ಡೈಯಿ', 'ಅಡೆ' ಮುಂತಾದ ಹೆಸರಿನಿಂದ ಕರೆಯುತ್ತಾರೆ. ಆಭರಣಗಳನ್ನು ಸುತ್ತಿಗೆಯ ಸಹಾಯದಿಂದ ಬಡಿಯಲು ಬಳಸುತ್ತಾರೆ. ಒಂದು ಮರದ ದಿಮ್ಮಿ [ತುಂಡಿಗೆ] ಕಬ್ಬಿಣದ ಪೆಣೆಯನ್ನು ಸೇರಿಸಿರುತ್ತಾರೆ.

★1 ಹೆಚ್ಚಿನ ವಿವರಗಳಿಗೆ ನೋಡಿ: ಕನ್ನಡ ವಿಶ್ವಕೋಶ. ಸಂಪುಟ-೭. ಪು. ೪೨೦-೪೨೨

★2 ಹೆಚ್ಚಿನ ವಿವರಗಳಿಗೆ ನೋಡಿ: ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ. ಪ್ರ.೧೯೭೯ ಪು.ಸಂ. ೮೩೫-೮೩೯

ಕುಮಟಿ

ಚಿನ್ನವನ್ನು ಕಾಯಿಸಲು ಪ್ರಮುಖವಾಗಿರುವ ಸಾಧನ. ಇದನ್ನು 'ಕುಮ್ಟಿ', 'ಅಗ್ಗಿಷ್ಟಿಕೆ', 'ಕುಲುಮೆ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಚಿನಿವಾರರು ಕೆಲಸವನ್ನು ಆರಂಭಿಸುವ ಮೊದಲು 'ಕುಮಟಿಗೆ' ನಮಸ್ಕರಿಸುತ್ತಾರೆ. ಕುಮಟಿಯನ್ನು ಕೆಲವರು ಮಣ್ಣಿನಿಂದ ಮಾಡಿಸಿಕೊಂಡಿದ್ದಾರೆ; ಕೆಲವರು ತಾಮ್ರದಿಂದ ಮಾಡಿಸಿಕೊಂಡಿರುತ್ತಾರೆ. ಮಣ್ಣಿನ/ತಾಮ್ರದ ಗುಂಡಾದ 'ಪಾಟಿಗೆ' ತುಂಬಲೂ ಭತ್ತದ ಜಳ್ಳನ್ನು ತುಂಬಿರುತ್ತಾರೆ. ಮೇಲುತುದಿಯಲ್ಲಿ ಇದ್ದಿಲನ್ನು ಹಾಕಿ ಬಿಸಿ ಮಾಡುವ ಸ್ಥಳದಲ್ಲಿ ಮಾತ್ರ ಸ್ವಲ್ಪ ಹಳ್ಳವಿರುತ್ತದೆ. ಇಲ್ಲಿ ಬೆಂಕಿಯನ್ನು ಹತ್ತಿಸಿ ಮೂಸೆಗಳ ಸಹಾಯದಿಂದ ಚಿನ್ನ ಕಾಯಿಸಲು ಇಡುತ್ತಾರೆ.

ಸುತ್ತಿಗೆ

ಚಿನ್ನವನ್ನು, ಆಭರಣಗಳನ್ನು ಕುಟ್ಟಲು ಬಳಸುವ ಒಂದು ಸಾಧನ. ಕಬ್ಬಿಣದಿಂದ ರಚಿಸಿರುವಂತದ್ದು, ಮರದ ಹಿಡಿಯನ್ನು ಸ್ವಲ್ಪ ಉದ್ದವಾಗಿ ಹಿಡಿದುಕೊಳ್ಳಲು ಅನುಕೂಲವಾಗುವಂತೆ ಸೇರಿಸಿರುತ್ತಾರೆ.

ಸ್ರಾವಣ

ಇದನ್ನು 'ಚಿಮಟ' ಎಂದೂ ಕರೆಯುತ್ತಾರೆ. ನಾನು ಸೈಜುಗಳ ಚಿಮಟಗಳನ್ನು ಇಟ್ಟುಕೊಂಡಿರುತ್ತಾರೆ. ಆಭರಣಗಳಿಗೆ ಹರಳು, ಮುತ್ತುಗಳನ್ನಿಡಲು, ಬೆಸುಗೆ ಹಾಕುವಾಗ ಆಭರಣಗಳನ್ನು ಹಿಡಿದುಕೊಳ್ಳಲು, ಬೆಸುಗೆ ಹಾಕುವಾಗ ಪುಡಿ/ಕೆ.ಡಿ.ಎಂ. ಇಡಲು, ಬಿಸಿಯಾದ ಆಭರಣಗಳನ್ನು ಹಿಡಿದುಕೊಳ್ಳಲು ಬಳಸುತ್ತಾರೆ.

ನೀಳ್ಗಾರ

ಮೂಸೆಯನ್ನು ಅಗ್ಗಿಷ್ಟಿಕೆಯ ಮೇಲಿಡುವುದು, ಅಲ್ಲಿಂದ ಈಚೆಗೆ ತೆಗೆಯುವುದು, ಊದುವ ಕೊಳವೆಯಿಂದ ಅಥವಾ ತಿದಿಯಿಂದ ಗಾಳಿ ಊದುವಾಗ ಇದ್ದಿಲನ್ನು ಹಾಕುವುದು. ಬೆಂಕಿ ಕೆಂಡವನ್ನು ಕೆದರುವುದು ಮುಂತಾದ ಸಂದರ್ಭಕ್ಕೆ ಇದನ್ನು ಬಳಸುತ್ತಾರೆ. ಇದನ್ನು 'ನೀಳ್ಳುಗಾರ', 'ನೀರ್ಕಾರ' ಎಂದೂ, 'ತಣಸ' ಎಂಬ ಹೆಸರಿನಿಂದಲೂ ಕರೆಯುತ್ತಾರೆ.

ಕಂಬಚ್ಚು

ಇದು ಹಲವಾರು ಸೈಜುಗಳ ರಂಧ್ರಗಳನ್ನೊಳಗೊಂಡ ಕಬ್ಬಿಣದ ಪಟ್ಟಿ. ಚಿನ್ನ ಅಥವಾ ಬೆಳ್ಳಿಯ ತಂತಿಯನ್ನು ಗಾತ್ರಕ್ಕೆ ತಕ್ಕಂತೆ ಉದ್ದ ಮಾಡಿಕೊಳ್ಳಲು ಹಿಗ್ಗಿಸಿಕೊಳ್ಳಲ್ಲು ಬಳಸುವ ಸಾಧನ. ಕಂಬಿಯನ್ನು ಹೆಚ್ಚುವಂತೆ ಮಾಡುವ ಸಾಧನವೇ 'ಕಂಬಚ್ಚು' ಎಂಬ ಹೆಸರನ್ನು ಪಡೆದುಕೊಂಡಿದೆ. ಇದರಿಂದ ತಮಗೆ ಬೇಕಾದ ಸೈಜಿಗೆ ತಕ್ಕಂತೆ ಉದ್ದವನ್ನು ಮಾಡಿಕೊಳ್ಳಲು ಅನುಕೂಲ. ಇತ್ತೀಚೆಗೆ ಕಂಬಚ್ಚಿಗೆ ಬದಲು ನಾನಾ ಆಕಾರಗಳ ಕಂಬಿಗಳನ್ನೇ ಮಾಡುವಂತೆ ಡ್ರೈಯಿಂಗ್ ಮಿಷನ್‌ಗಳೇ ಬಂದಿವೆ. ಆದರೂ ಕಡಿಮೆ ಖರ್ಚಿನಲ್ಲಿ ಹಾಗೂ ಸಾದಾ ಕಂಬಿಯನ್ನು ಮಾಡಲು ಕಂಬಚ್ಚು ಬಹಳ ಉಪಯುಕ್ತವಾಗಿದೆ.

ದಿಮ್ಮಿ

ಹಲವು ಆಕಾರಗಳ/ಗಾತ್ರಗಳ ಓಲೆಗಳನ್ನು ಗೆಜ್ಜೆಗಳನ್ನು ಮಾಡುವ ಸಾಧನ. ಇದು ಕಂಚಿನಿಂದ ಅಥವಾ ಕಬ್ಬಿಣದಿಂದ ಮಾಡಲ್ಪಟ್ಟಿರುತ್ತದೆ. ಅದರಲ್ಲಿ ಹಲವಾರು ಸೈಜುಗಳ ಹಳ್ಳ [ಕುಳಿ] ಗಳು ಇರುತ್ತವೆ. ಚಿನ್ನದ ತೆಳುವಾದ ತಗುಡನ್ನು ತಮಗೆ ಬೇಕಾಗಿರುವ ಆಳತೆಯ ಕುಳಿಗಿಟ್ಟು ಓಲೆಗಳನ್ನು, ಗೆಜ್ಜೆಗಳನ್ನು ಸೈಕಲ್ ಚೈನು ಮುಂತಾದ ಆಭರಣಗಳನ್ನು ಮಾಡುತ್ತಾರೆ. ಇದನ್ನು 'ದಿಮ್ಮಿ', 'ಅಚ್ಚು', 'ಚಂದ್ರಿಕೆ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

ಊದುವ ಕೊಳವೆ

ಬೆಂಕಿ ಹತ್ತಿಸಲು ಗಾಳಿ ಊದುವ ಸಾಧನ. ತಿದಿ ಅಥವಾ ಚಕ್ರದ ತಿಧಿ ಇಲ್ಲದಿರುವವರು ಬೆಂಕಿ ಹತ್ತಿಸಲು ಇದನ್ನು ಬಳಸುತ್ತಾರೆ. ತಿದಿ ಇರುವವರೂ ಇದನ್ನು ಇಟ್ಟುಕೊಂಡಿರುತ್ತಾರೆ. ಇದನ್ನು 'ಊದೊ ಕೊಳವೆ', 'ಊದ್ಬುರ್ರ' ಮುಂತಾದ ಹೆಸರಿನಿಂದ ಕರೆಯುತ್ತಾರೆ. ಪ್ರತಿಯೊಬ್ಬ ಚಿನಿವಾರನೂ ಊದೊಕೊಳವೆಯನ್ನು ಇಟ್ಟಿರುತ್ತಾನೆ. ಕಬ್ಬಿಣದಿಂದ ಇದನ್ನು ಮಾಡಿರುತ್ತಾರೆ.

ಬಾಗಿದ ಊದೊ ಕೊಳವೆ

ಇದೂ ಸಹ ಲೋಹದ್ದು, ಊದುವ ಕೊಳವೆಯಂತೆ ಇದ್ದು ಮುಂದಿನ ತುದಿ ಬಾಗಿರುತ್ತದೆ. ಸಾಮಾನ್ಯವಾಗಿ ಇದನ್ನು ಆಭರಣಗಳಿಗೆ ಬೆಸುಗೆ ಹಾಕುವಾಗ, ಹೆಚ್ಚು ಉರಿಯಿಂದ ಕಡಿಮೆ ಬಿಸಿ ಬೇಕಿದ್ದಾಗ ಅಥವಾ ಬೆಸುಗೆ ಹಾಕುವ

ಜಾಗಕ್ಕೆ ಮಾತ್ರ ಬಿಸಿ ಬರುವಂತೆ ಗಾಳಿಯನ್ನು ಈ ಕೊಳವೆ ಮೂಲಕ ಊದಿ ಬರಿಸಲು ಬಳಸುತ್ತಾರೆ. ಇದನ್ನು 'ಗಾಳಿ ಊದುವ ಬಾಗಿದ ಪೈಪು', 'ಬ್ಲೋಪೈಪು' ಎಂಬ ಹೆಸರಿನಿಂದ ಕರೆಯುತ್ತಾರೆ. ಬೆಸುಗೆ ಹಾಕಲು ಮಾತ್ರ ಬಳಸುವುದರಿಂದ ಇದನ್ನು 'ಬೆಸೆಯೊ ಪೈಪು' ಎಂದೂ ಕರೆಯುವುದು ರೂಢಿ ಇದೆ.

ಇಕ್ಕಳ

ಕಬ್ಬಿಣದಿಂದ ಮಾಡಿರುವ ಇದು ಬಿಸಿಯಾದ ಮೂಸೆಯನ್ನು, ಆಭರಣಗಳನ್ನು ಹಿಡಿದುಕೊಳ್ಳಲು ಬಳಸುವ ಸಾಧನವಾಗಿದೆ. ಇದರಲ್ಲಿ ಚಿಕ್ಕದರಿಂದ ಹಿಡಿದು ದೊಡ್ಡದವರೆಗೂ, ಹಲವಾರು ಸೈಜು ಹಾಗೂ ಆಕಾರಗಳಿಂದ ರಚಿಸಲ್ಪಟ್ಟಿವೆ. ಇವನ್ನು 'ಪಟಕ', 'ಪಟಕಾರ', 'ಪಟ್ಕಾರ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಚಿಕ್ಕದನ್ನು 'ಚಿನ್ ಪಟ್ಕಾರ' [ಚಿಕ್ಕ ಇಕ್ಕಳ] ಎಂದೂ; ದೊಡ್ಡದನ್ನು ಪೆದ್ ಪಟ್ಕಾರ [ದೊಡ್ಡ ಇಕ್ಕಳ] ಎಂದೂ ಕರೆಯುತ್ತಾರೆ. ಮೂಸೆಯ ಸಹಾಯದಿಂದ ಬಂಗಾರವನ್ನು ಕಾಯಿಸಿ ಆಯಾ ಅಚ್ಚಿನ ಮಣೆಗೆ ಸುರಿಯುವಾಗ, ಬಿಸಿ ವಸ್ತುಗಳನ್ನು ಹಿಡಿದುಕೊಳ್ಳುವಾಗ ಇವುಗಳ ಉಪಯೋಗ ಬಹಳ. ಹೀಗಾಗಿ ಪ್ರತಿಯೊಬ್ಬ ಚಿನಿವಾರನೂ ಈ ಸಾಧನಗಳನ್ನು ಪ್ರಮುಖವಾಗಿ ಹೊಂದಿರುತ್ತಾನೆ.

ವಾಲ್ಬೊ

ಆಭರಣಗಳಲ್ಲಿ ಸೂಕ್ಷ್ಮ ರಂಧ್ರಗಳನ್ನು, ನಾನಾ ಆಕಾರಗಳನ್ನು ಕೊರೆಯಲು ಬಳಸುವ ಲೋಹದ ಸಾಧನ. ಇದನ್ನು 'ರಂಪ', 'ರಂಪಾತಗಡು' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಆಭರಣಗಳಲ್ಲಿ ರಂಧ್ರ ಹಾಗೂ ಆಕಾರಕ್ಕೆ ತಕ್ಕಂತೆ ಕೊರೆಯಲು 'ರಂಪದ' ತಂತಿಯನ್ನು ವಾಲ್ಬೊನಲ್ಲಿ ಬಿಗಿಗೊಳಿಸಿ ಬಳಸುತ್ತಾರೆ. 'ಬೈರಿಗೆ' ಎಂದೂ ಕರೆಯುವುದುಂಟು. ಆದರೆ ಬೈರಿಗೆಯಿಂದ ಇಷ್ಟು ಸೂಕ್ಷ್ಮವಾದ ರಂಧ್ರಗಳನ್ನು ಮತ್ತು ಆಕಾರಗಳನ್ನು ಕೊರೆಯಲು ಸಾಧ್ಯ ವಾಗುವುದಿಲ್ಲ. ಅಗಲವಾದ / ದೊಡ್ಡದಾದ ರಂಧ್ರಗಳನ್ನು ಕೊರೆಯಲು ಮಾತ್ರ 'ಬೈರಿಗೆ' ಯನ್ನು ಬಳಸುತ್ತಾರೆ.

ಸ್ವಯಂವರ

ಕಬ್ಬಿಣದ ಸಾಧನ. ಇದನ್ನು 'ಗಡಪಾರು', 'ಗಡಾರು', 'ರಿಂಗ್‌ಗಡಾರು', 'ಉಂಗುರದ ಹಾರೆ', 'ಹಾರೆ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ.

'ಉಂಗುರ' ಮಾಡುವುದಕ್ಕೆ ಅಥವಾ ವರ್ತುಲಾಕಾರದ ಯಾವುದೇ ಆಭರಣಗಳನ್ನು ಗಾತ್ರಕ್ಕೆ ತಕ್ಕಂತೆ ಹಿಗ್ಗಿಸಿಕೊಳ್ಳಲು ಈ ಸಾಧನದ ಅಗತ್ಯತೆ ಬಹಳ. ಉಂಗುವನ್ನು ಇದಕ್ಕೆ ಸೇರಿಸಿಕೊಂಡು ಸುತ್ತಿಗೆ, ಎಮ್ಮೆಯ ಕೊಂಬಿನಿಂದ ಮಾಡಿಕೊಂಡಿರುವ ಸುತ್ತಿಗೆಯಿಂದ ಬಡಿಯುತ್ತಾರೆ. ಇದರಿಂದ ಉಂಗುರದ ಮೇಲೆ ಯಾವುದೇ ರೀತಿಯ 'ಗುನ್ನ' ಬೀಳದೆ ನಯಸಾಗಿರುವಂತೆ ತಟ್ಟಲು ಬಳಸುತ್ತಾರೆ. ಸ್ವಯಂವರದ ಸಹಾಯದಿಂದ ನಾನಾ ಸೈಜುಗಳನ್ನು ಮಾಡಿಕೊಳ್ಳಬಹುದು.

ಶಿವಬಳೆ

ಕಬ್ಬಿಣದ ಒಂದು ಸಾಧನ. ಇದನ್ನು 'ಸೀಉಳಿ' ಎಂದೂ ಕರೆಯುತ್ತಾರೆ. ಇದು ಉದ್ದವಾಗಿದ್ದು ತ್ರಿಕೋನಾಕಾರದಲ್ಲಿರುತ್ತದೆ. ಆಭರಣಗಳಿಗೆ ಹರಳು/ಮುತ್ತುಗಳನ್ನು ಕೂರಿಸುವ ಮೊದಲು ಆ ಜಾಗದಲ್ಲಿನ ಚಿನ್ನದ ಪಿಸರನ್ನೆತ್ತಲು ಬಳಸುತ್ತಾರೆ. ಹರಳನ್ನು ಕೂರಿದ ನಂತರ ಅದರ ಮೇಲೆ ಎತ್ತಿರುವ ಈ ಚಿನ್ನದ ಪಿಸರನ್ನು ಅದರ ಮೇಲೆ ಕೂರಿಸುವುದರಿಂದ ಹರಳಾಗಲೀ ಅಥವಾ ಮುತ್ತುಗಳಾಗಲೀ ಬೀಳದಂತೆ ಆಸರೆಯಾಗಿರುತ್ತದೆ. ಹರಳನ್ನು ಕೂರಿಸುವ ಮೊದಲಿನ ಕೆಲಸಕ್ಕೆ ಇದರ ಸಹಾಯ ಅಪಾರ. ಆ ಭಾಗವನ್ನು ನಯಗೊಳಿಸಲು 'ಸೀಉಳಿ' ಯನ್ನು ಬಳಸುತ್ತಾರೆ. 'ಕೆತ್ತುವ ಸಲಾಕೆ' ಎಂದೂ ಕರೆಯುತ್ತಾರೆ. ಮಗ್ಗುಲು ಮತ್ತು ಅಂಚುಗಳನ್ನು ಉಜ್ಜಿ ನಯಗೊಳಿಸಲು ಬಳಸುತ್ತಾರೆ.

ಸೀ ಉಳಿಗಳಲ್ಲಿ ಎರಡು ಬಗೆ ಇವೆ. (೧) ನೆಟ್ಟಗಿರುವುದು, (೨) ಬಾಗಿರುವುದು. ನೆಟ್ಟಗಿರುವುದರಿಂದ ಆಭರಣಗಳ ಹಿಂಭಾಗವನ್ನು ನಯಗೊಳಿಸಲು ಬಳಸಿದರೆ; ಬಾಗಿರುವುದರಿಂದ, ಆಭರಣಗಳ ಸೈಡುಗಳನ್ನು ನಯಗೊಳಿಸಲು ಬಳಸುತ್ತಾರೆ. ಇದನ್ನು 'ಕೆತ್ತೊಸಲಾಕೆ' ಎಂದೂ ಕರೆಯುತ್ತಾರೆ.

ಅಚ್ಚು

ಲೋಹದ ಸಾಧನ. ಇದನ್ನು 'ಅಚ್ಚಿನ ಮಣೆ', 'ಗಾಡಿಕಲ್ಲು' ಎಂದೂ ಕರೆಯುತ್ತಾರೆ. ಚಿನ್ನವನ್ನು ಕರಗಿಸಿದ ನಂತರ 'ಎರಕ ಹುಯ್ಯಲು' ಅಥವಾ 'ಗಟ್ಟಿಗೆ' ಹಾಕಲು ಬಳಸುವ ಸಾಧನ ಇದಾಗಿದೆ.

ಅರ

ಉಕ್ಕಿನಿಂದ ಮಾಡಿರುವ ಸಾಧನ. ಇದನ್ನು 'ಫೈಲ್' ಎಂದೂ

ಕರೆಯುತ್ತಾರೆ. ಆಭರಣಗಳನ್ನು ಉಜ್ಜಲು ಬಳಸುತ್ತಾರೆ. ಅರಗಳಲ್ಲಿ ವಿವಿಧ ಆಕಾರಗಳಿವೆ. ತೆಲುಗಿನಲ್ಲಿ 'ಆಕರಾಯಿ' ಎನ್ನುತ್ತಾರೆ.

ಗುಂಡಾದ ಅರ-ಗುಂಡಾಕರಾಯಿ - Round File
ಅರ್ಧಗುಂಡಾದ ಅರ-ಬದ್ ಆಕರಾಯಿ - Half Round File
ತ್ರಿಕೋಣಾಕಾರದ ಅರ-ಮೂಲಾಕರಾಯಿ - Triangular file
ಚತುರ್ಭುಜಾಕಾರದ ಅರ - Square file

ಹೀಗೆ ವಿವಿಧ ಆಕಾರದ ಅರಗಳಿಂದ ಆಭರಣಗಳ ಅಂಚನ್ನು ತಿಕ್ಕಲು, ನಡುವೆ ನಾನಾ ಸಂದರ್ಭಗಳಲ್ಲಿ ಅರಗಳ ಸಹಾಯ ಕಂಡು ಬರುತ್ತದೆ.

ತಿದಿ

ಅಗ್ಗಿಷ್ಟಿಕೆ ಉರಿಸಲು ತಿದಿಯನ್ನು ಬಳಸುತ್ತಾರೆ. ಮೊದಲು ಚರ್ಮದಿಂದ ಮಾಡಿದ್ದುದಾಗಿತ್ತಾದರೂ ಈಗ ಕಬ್ಬಿಣದ ಚಕ್ರಗಳಿಂದ ಮಾಡಿದ ಮಿಷನ್ ಆಗಿದೆ. ಇದರ ಜೊತೆಗೆ ಊದುವ ಕೊಳಪೆಯನ್ನು ಹೆಚ್ಚು ಬಳಸುತ್ತಾರೆ.

ಮೌಲ್ಡಿಂಗ್ ಬಾಕ್ಸ್

ಅಚ್ಚು ಹಾಕುವ ಮಣೆ. ಇದು ಉಕ್ಕಿನಿಂದ ಮಾಡಿರುವ ಸಾಧನವಾಗಿದೆ. ವಿವಿಧ ಸೈಜುಗಳ ಅಚ್ಚಿನ ಮಣೆಗಳಿವೆ. ಚಿಕ್ಕ ಆಕಾರದಲ್ಲಿ ಒಂದು ಅಥವಾ ಎರಡು ಉಂಗುರಗಳನ್ನು ಕಡಿಮೆ ಚಿನ್ನದಲ್ಲಿ ಅಚ್ಚು ಮಾಡಿಕೊಳ್ಳಬಹುದು. ದೊಡ್ಡ ಆಕಾರದಲ್ಲಿ ಒಂದೇ ಭಾರಿಗೆ ಅಪಾರ ಚಿನ್ನವನ್ನು ಕಾಯಿಸಿಕೊಂಡು ಬೇರೆ ಬೇರೆ ಆಕಾರದ ಹತ್ತಾರು ಉಂಗುರಗಳನ್ನು ಬೇಕಾದರೂ ಅಚ್ಚು ಮಾಡಿಕೊಳ್ಳಬಹುದು. ಇದನ್ನು 'ಅಚ್ಚಿನ ಮಣೆ' ಎಂದು ಕರೆಯುತ್ತಾರೆ.

ಬದ್ದಚ್ಚು

ಲೋಹದ ಸಾಧನ. ಇದರಿಂದ ಅರ್ಧವರ್ತುಲಾಕಾರವನ್ನು ವೆಡ್ಡಿಂಗ್ ರಿಂಗ್ ಮಾಡಲು ಅನುಕೂಲ.

ಪೇಡುಪೋಗರ

ಉಂಗುರ ಅಥವಾ ಆಭರಣಗಳಿಗೆ ಹರಳನ್ನು/ಮುತ್ತನ್ನು ಕೂರಿಸಬೇಕಾದರೆ, ಕೂರಿಸುವ ಮೊದಲು ಆಭರಣಗಳ ಒಳ ಆಯವನ್ನು [ಭಾಗ] ಕೆತ್ತುವುದಕ್ಕಾಗಿ ಬಳಸುವ ಲೋಹದ ಸಾಧನವಾಗಿದೆ.

ಮೆರುವೆಪೋಗರ

ಉಂಗುರ ಅಥವಾ ಆಭರಣಗಳಿಗೆ ಹರಳನ್ನು /ಮುತ್ತನ್ನು ಕೂರಿಸಿದ ನಂತರ ಅವು ಬೀಳದಂತೆ ಹರಳು/ಮುತ್ತಿನ ಸುತ್ತಲೂ ದಡದಲ್ಲಿನ ಚಿನ್ನ [ಪಿಸುರು] ವನ್ನು ಬಡಿಯಲು ಬಳಸುವ ಸಾಧನ. ಇದರಿಂದ ಸುತ್ತಲೂ ಅಪ್ಪಟೆಯಾಗುವಂತೆ ಬಡಿಯುತ್ತಾರೆ. ಇದನ್ನೆ 'ಮಸೆ ಹಾಕುವುದು' ಎನ್ನುತ್ತಾರೆ. ಮಸೆ ಹಾಕಲು ಪಿಡಸರಾಯಿ, ಕರ್‌ಸಾನು, ಮಸೆಸುತ್ತಿ, ಮೆರುವೆ ಪೋಗರಗಳನ್ನು ಬಳಸುತ್ತಾರೆ.

ನೀವು ಪೋಗರ

ಹರಳು / ಮುತ್ತನ್ನು ಆಭರಣಗಳಿಗೆ ಕೂರಿಸಿದ ನಂತರ ಉಜ್ಜಿ ನಯಗೊಳಿಸಲು ಈ ಸಾಧನವನ್ನು ಬಳಸುತ್ತಾರೆ.

ಗುಪ್ಪೋಗರ

ಆಭರಣದಲ್ಲಿನ ಚಿಕ್ಕದಾದ ರಂಧ್ರವನ್ನು ಅಥವಾ ಹಳ್ಳವನ್ನು ದೊಡ್ಡದನ್ನಾಗಿ ಮಾಡಿಕೊಳ್ಳಲು ಬಳಸುವ ಸಾಧನ ಇದಾಗಿದೆ.

ನಯಸಾನಿ

ಮಸಗಲ್ಲು. ಇದು ಸ್ವಲ್ಪ ನಯಸ್ಸಾಗಿರುತ್ತದೆ. ಪೋಗರೆ, ಪೇಡು ಪೋಗರೆಯನ್ನು ಉಜ್ಜಿ ಹರಿತಗೊಳಿಸಲು ಬಳಸುತ್ತಾರೆ.

ಕರ್‌ಸಾನು

ಮಸಗಲ್ಲು. ಇದು ಸ್ವಲ್ಪ ತುರಿತುರಿಯಾಗಿರುತ್ತದೆ. ಶಿವಬಳೆ ಮತ್ತು ಪೋಗರಗಳ ತುದಿಯನ್ನು ಹರಿತ ಮಾಡಿಕೊಳ್ಳಲು ಉಜ್ಜುವ ಕಲ್ಲು ಇದಾಗಿದೆ. ಇದನ್ನೇ 'ಸಾಣೆಕಲ್ಲು' ಎಂದೂ ಕರೆಯುತ್ತಾರೆ. ಇದು ಸ್ವಲ್ಪ ಒರಟಾಗಿರುತ್ತದೆ.

ತಿರುವಾಣಿ

ಆಭರಣಗಳಿಗೆ ತ್ರೆಡ್ ಹಾಕುವುದನ್ನು 'ತಿರುವಾಣಿ' ಎನ್ನುತ್ತಾರೆ.

ಬರ್ಮ

ಆಭರಣಗಳಿಗೆ ಕೈಯಿಂದ ರಂಧ್ರ ಹಾಕಲು ಬಳಸುವ ಸಾಧನ. ಇದಕ್ಕೂ

ಮೊದಲು 'ಬೈರಿಗೆ' ಯಿಂದಲೇ ಹಾಕುತ್ತಿದ್ದರು. ಬರ್ಮದ ಸಹಾಯದಿಂದ ಅತಿ ಸೂಕ್ಷ್ಮವಾದ ರಂಧ್ರ ಹಾಕಬಹುದು. ಇತ್ತೀಚೆಗೆ ಡ್ರಿಲ್ಲಿಂಗ್ ಮಿಷನ್ ಬಂದಿದೆ. ಆ ಮಿಷನ್ನಿಗೆ ಬಳಸುವ ಕಬ್ಬಿಣದ ಸರಳುಗಳನ್ನು 'ಡ್ರಿಲ್‌ಬಿಟ್ಸ್', 'ಡ್ರಿಲ್ಲಿಂಗ್ ಬಿಟ್ಸ್' ಎಂದು ಕರೆಯುತ್ತಾರೆ. ಇವುಗಳಲ್ಲಿ ಹಲವಾರು ಸೈಜುಗಳಿವೆ. ಆಭರಣಗಳಿಗೆ ಹಾಕಬೇಕಾದ ಅಳತೆಗೆ ತಕ್ಕ 'ಬಿಟ್' ಸಹಾಯದಿಂದ ರಂಧ್ರ ಹಾಕುತ್ತಾರೆ. ಬಡಗಿಯು ಮರದ ಸಾಮಾನಿಗೆ ರಂಧ್ರ ಕೊರೆಯಲು ಬಳಸುವ ಸಾಧನಕ್ಕೆ 'ಆಗ್ರ' ಎಂದರೆ, ಆಭರಣಗಳಿಗೆ ರಂಧ್ರಕೊರೆಯಲು ಬಳಸುವ ಸಾಧನಕ್ಕೆ 'ಬೈರಿಗೆ' ಎನ್ನುತ್ತಾರೆ. ಬೈರಿಗೆ ನಂತರ 'ಬರ್ಮ'ವನ್ನು ಬಳಸುತ್ತಿದ್ದಾರೆ.

ಚಾಣ

ಇದು ಕಬ್ಬಿಣದ ಸಾಧನ. 'ಸಾಣ', 'ಉಳಿ' ಮುಂತಾದ ಹೆಸರುಗಳಿಂದ ಕರೆಯುತ್ತಾರೆ. ಚಿನ್ನ ಅಥವಾ ಬೆಳ್ಳಿಯ ತಗಡನ್ನು ಹಾಗೂ ಕಂಬಿಗಳನ್ನು ಕತ್ತರಿಸಲು ಚಾಣಗಳನ್ನು ಬಳಸುತ್ತಾರೆ. ವಿವಿಧ ಆಕಾರಗಳಿದ್ದು 'ಚಿಕ್ಕ ಚಾಣ', 'ದೊಡ್ಡಚಾಣ' ಎಂದು ಕರೆಯುತ್ತಾರೆ.. ತಗಡು ಮತ್ತು ಕಂಬಿಗಳ ಗಾತ್ರಕ್ಕೆ ತಕ್ಕಂತೆ ಚಾಣಗಳನ್ನು ಬಳಸುತ್ತಾರೆ.

ಕತ್ತರಿ

ಚಿನ್ನ ಹಾಗೂ ಬೆಳ್ಳಿಯ ತೆಳುವಾದ ತಗಡು ಅಥವಾ ತಂತಿಯನ್ನು ಕತ್ತರಿಸಲು ಬಳಸುವ ಸಾಧನವಾಗಿದೆ.

ಕುದುಸೊಕೊಂಬು

ಎಮ್ಮೆಯ ಕೊಂಬಿನಿಂದ ಮಾಡಿರುವ ಸಾಧನ. ಇದರಲ್ಲಿ ವಿವಿಧ ಸೈಜಿನ ಹಳ್ಳಗಳಿರುತ್ತವೆ. ಸೈಕಲ್ ಚೈನು ಮುಂತಾದ ಚಿಪ್ಪೆ [ಗುಪ್ಪಿ] ಗಳನ್ನು ಮಾಡಿಕೊಳ್ಳಲು ಇದನ್ನು ಬಳಸುತ್ತಾರೆ. ಕೆಲವರಲ್ಲಿ ಕಂಚಿನಿಂದ ಮಾಡಿರುವ 'ದಿಂಡು' ಇರುತ್ತದೆ. ಇದನ್ನು 'ಚಂದ್ರಿಕೆ' ಎನ್ನುತ್ತಾರೆ.★1

ಕೊಂಬಿನ ಸುತ್ತಿಗೆ

ಎಮ್ಮೆ ಕೊಂಬಿನಿಂದ ಮಾಡಿರುವ ಸಾಧನ. ಇದನ್ನು 'ಕೊಮ್ಮುಸುತ್ತಿ'

★1 ನೋಡಿ : ದಿಮ್ಮಿ

ಎಂದೂ ಕರೆಯುತ್ತಾರೆ. ಈ ಸುತ್ತಿಗೆಯ ಸಹಾಯದಿಂದ ಉಂಗುರವನ್ನು ಸ್ವಯಂವರಕ್ಕೆ ಸೇರಿಸಿಕೊಂಡು ಸುತ್ತಲೂ ಬಡಿಯುತ್ತಾರೆ. ಹೀಗೆ ಬಡಿಯುವುದರಿಂದ ಆಭರಣದ ಮೇಲೆ 'ಕಚ್ಚು' [ಗುನ್ನ] ಬೀಳದೆ, ಉಂಗುರ ನಯಸ್ಸಾಗಿ ಆಗುವುದಲ್ಲದೆ ಸಂಪೂರ್ಣ ವರ್ತುಲಾಕಾರವಾಗುತ್ತದೆ. ಹೀಗೆಯೇ 'ಎಮ್ಮೆ ಕೊಂಬನ್ನು' ಸುತ್ತಿಗೆಯಂತೆಯೆ ಬಳಸುತ್ತಾರೆ. ಉಂಗುರ ಬೆಂಡಿಲ್ಲದಂತೆ, ಸ್ವಲ್ಪವೂ 'ಗುನ್ನ' ಬೀಳದಂತೆ ಬಡಿಯಲು ಸಾಧ್ಯವಿದೆ. ಉಂಗುರ ಮಾಡುವವರು ಕಡ್ಡಾಯವಾಗಿ ಈ ಸುತ್ತಿಗೆಯನ್ನು ಬಳಸುತ್ತಾರೆ.

ಒರೆಗಲ್ಲು

ಆಭರಣಗಳನ್ನು ಅಥವಾ ಬಂಗಾವವನ್ನು ಒರೆಹಚ್ಚಲು ಈ ಕಲ್ಲನ್ನು ಬಳಸುತ್ತಾರೆ. ಇದರ ಮೇಲೆ ಆಭರಣವನ್ನು ಉಜ್ಜುತ್ತಾರೆ. ಅದರ ಮೇಲೆ ಎರಡು ಹನಿ (ತೊಟ್ಟು) ನೈಟಿಕ್ ಆಮ್ಲವನ್ನು ಹಾಕುತ್ತಾರೆ. ನಂತರ ಉಪ್ಪಿನ ದ್ರಾವಣವನ್ನು ಎರಡು ತೊಟ್ಟು ಹಾಕುತ್ತಾರೆ. ಆಗ ಅದು ಕೆಂಪುಬಣ್ಣಕ್ಕೆ ತಿರುಗಿದರೆ ಆಭರಣದಲ್ಲಿ ತಾಮ್ರದ ಅಂಶ ಹೆಚ್ಚಿದೆ ಎಂದೂ; ಬಿಳಿ ಬಣ್ಣ ಬಂದರೆ ಬೆಳ್ಳಿಯ ಅಂಶ ಹೆಚ್ಚಿದೆ ಎಂದೂ; ಹಾಗೆಯೇ ಹಳದಿ ಬಣ್ಣಕ್ಕೆ ತಿರುಗಿದರೆ 'ಅಪ್ಪಟ ಚಿನ್ನ' ಎಂದೂ ಗುರುತಿಸುತ್ತಾರೆ. ಇದನ್ನೇ 'ಒರೆ ಹಚ್ಚುವಿಕೆ' ಎನ್ನುತ್ತಾರೆ. ಈ ಕಾರ್ಯಕ್ಕೆ ಒರೆಗಲ್ಲಿನ ಅಗತ್ಯತೆ ಇರುವುದರಿಂದ ಪ್ರತಿಯೊಬ್ಬ ಚಿನಿವಾರನಲ್ಲೂ ಒರೆಗಲ್ಲು ಇರುತ್ತದೆ.

ಹಿಡಿ

ಉಂಗುರ, ಓಲೆ ಮುಂತಾದ ಆಭರಣಗಳನ್ನು ಬರಿಕೈಯಲ್ಲಿ ಹಿಡಿದುಕೊಂಡು ಮಸೆ ಹಾಕುವುದಕ್ಕೆ, ನಯಸ್ಸು ಮಾಡುವುದಕ್ಕೆ, ಹರಳು ಕೂರಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಹಿಡಿಯ ಸಹಾಯದಿಂದ ಚಿಕ್ಕ ಚಿಕ್ಕ ಆಭರಣಗಳನ್ನು ಹಿಡಿದುಕೊಂಡು ಉಜ್ಜಲು, ಹರಳು ಕೂರಿಸಲು, ಮಸೆ ಹಾಕಲು, ನಯಸ್ಸು ಮಾಡಲು, ಪಾಲಿಷ್ ಮಾಡ್ಗಲು ಉಪಯೋಗಿಸುತ್ತಾರೆ. ಹಿಡಿಯನ್ನು 'ಪಿಡಸರಾಯಿ' ಎಂದೂ ತೆಲುಗಿನಲ್ಲಿ ಕರೆಯುತ್ತಾರೆ.

ದೀಪ

'ಚಿಮಣಿ' ಎನ್ನುತ್ತಾರೆ. ಆಭರಣಗಳಿಗೆ ಬೆಸುಗೆ ಹಾಕಲು ದೀಪವನ್ನು

ಬಳಸುತ್ತಾರೆ. ಈ ದೀಪ ಉರಿಸಲು ಮೇಣದ ಬತ್ತಿಯನ್ನು ಉಪಯೋಗಿಸುತ್ತಾರೆ. ಇತ್ತೀಚೆಗೆ 'ಗ್ಯಾಸ್ ಚಿಮಿಣಿ'ಗಳೇ ಬಂದಿವೆ. ಆದರೂ ಅದರ ಬಳಕೆ ದುಬಾರಿ ಆಗುವುದರಿಂದ ಮೇಣದ ಬತ್ತಿಯ ಚಿಮಣಿಗಳೇ ಹೆಚ್ಚು ಉಪಯುಕ್ತತೆ ಹಾಗೂ ಬಳಕೆಯಲ್ಲಿವೆ.

ಕಂಪಾಸ್

ಆಭರಣಗಳ ಮೇಲೆ ಮಾರ್ಕನ್ನು [ಗುರುತು] ಹಾಕಿಕೊಳ್ಳಲು 'ಕಂಪಾಸ್' ಬಳಸುತ್ತಾರೆ.

ಬಫ್‌ಕಟ್ಟ

ಬಫಿಂಗ್ ಪೇಪರನ್ನು ಸಣ್ಣ ಕಡ್ಡಿಗಳಿಗೆ ಸುತ್ತಿರುತ್ತಾರೆ. ಇದನ್ನೇ 'ಬಫ್‌ಕಟ್ಟ' ಎನ್ನುತ್ತಾರೆ. ಆಭರಣಗಳನ್ನು ಉಜ್ಜಿ ನಯಗೊಳಿಸಲು, ಯಾವುದೇ ರೀತಿಯ ಗೆರೆ ಇಲ್ಲದಂತೆ ಉಜ್ಜಲು ಇದರ ಅಗತ್ಯವಿದೆ.

ಗ್ರೀಸ್‌ದಾರ

ಉಂಗುರ ಮುಂತಾದ ಆಭರಣಗಳ ಕೆಲಸ ಮುಗಿದ ನಂತರ ದಾರದ ಸಹಾಯದಿಂದ ಗ್ರೀಸನ್ನು ಹಚ್ಚುತ್ತಾರೆ. ಬಫಿಂಗ್ ಪೇಪರಿನಿಂದ ಉಜ್ಜಿದಾಗ ಉಳಿದಿರುವ ಸಣ್ಣ ಪುಟ್ಟ ಗೆರೆಗಳು, ಸೂಕ್ಷ್ಮವಾದ ಮಾರ್ಕುಗಳು ಹೀಗೆ ಉಜ್ಜುವುದರಿಂದ ಹೋಗುತ್ತವೆ. ಗ್ರೀಸಿಲ್ಲದ ಬಿಳಿಯ ದಾರದಿಂದ ಉಜ್ಜುವುದರಿಂದ ಆಭರಣದಲ್ಲಿನ ಗ್ರೀಸ್ ಸಂಪೂರ್ಣ ಹೋಗುವುದರ ಜೊತೆಗೆ ಆಭರಣವು ಹೊಳೆಯುತ್ತದೆ.

ಇದ್ದಿಲು

ಅಗ್ಗಿಷ್ಟಿಕೆ ಉರಿಸಲು ಸಾಮಾನ್ಯವಾಗಿ ತೆಂಗಿನ ಕಾಯಿಯ ಕರಟದಿಂದ ಸಿದ್ಧಗೊಳಿಸಿದ ಇದ್ದಿಲನ್ನು ಬಳಸುತ್ತಾರೆ. ಬಂಗಾರ ಕರಗಿಸಲು, ಆಭರಣಗಳನ್ನು ಕಾಯಿಸಲು ಇದ್ದಿಲಿನ ಅಗತ್ಯ ಬಹಳ. ಬೆಳಿಗ್ಗೆ ಕುಲುಮೆಗೆ ಬಂದ ತಕ್ಷಣ ಅಗ್ಗಿಷ್ಟಿಕೆಗೆ ಇದ್ದಿಲನ್ನು ಇಟ್ಟು ಬೆಂಕಿ ಹತ್ತಿಸಿ ಪೂಜೆ ಮಾಡಿ ನಂತರ ಉಳಿದ ಕೆಲಸದಲ್ಲಿ ತೊಡಗುತ್ತಾರೆ.

ಜೊಳ್ಳು

ಭತ್ತದ ಜೊಳ್ಳು ಅಥವಾ ಹೊಟ್ಟನ್ನು ಅಗ್ಗಿಷ್ಟಿಕೆಗೆ ತುಂಬಿರುತ್ತಾರೆ. ಇದರ ಮೇಲೆ ಇದ್ದಿಲನ್ನಿಟ್ಟು ಬೆಂಕಿ ಹಚ್ಚಿ ಮೂಸೆ ಸಹಾಯದಿಂದ ಬಂಗಾರ ಕರಗಿಸುತ್ತಾರೆ.

ಬ್ರಷ್

ಆಭರಣಗಳಿಗೆ ಡ್ರಿಲ್ಲಿಂಗ್ ಮಾಡುವಾಗ, ರಂಧ್ರ/ಆಕಾರಗಳನ್ನು ಕೊರೆಯುವಾಗ 'ಡ್ರಿಲ್ಲಿಂಗ್ ಬಿಟ್ಸ್‌ಗೆ ನೀರನ್ನು ಹಾಕಲು ಬ್ರಷ್ ಬಳಸುತ್ತಾರೆ. ಆಭರಣಗಳ ಕೆತ್ತನೆಯ ಸಂದರ್ಭದಲ್ಲಿ ಚೆದುರಿರುವ ಚಿನ್ನದ ಚೂರನ್ನು ಸಂಗ್ರಹಿಸಲು ಬ್ರಷ್‌ಗಳ ಅವಶ್ಯಕತೆ ಇರುತ್ತದೆ.

ಮೇಜು

ಆಭರಣಗಳಿಗೆ ಮಾರ್ಕ್ ಹಾಕಲು, ಹರಳು ಕೂರಿಸಲು, ರಂಧ್ರ ಕೊರೆಯಲು, ಯಾವುದೇ ಕುಸುರಿ ಕೆಲಸಗಳಿಗೆ ಮೇಜಿನ ಅಗತ್ಯತೆ ಇದೆ. ಅಲ್ಲದೆ ಆಭರಣಗಳನ್ನು ಇಟ್ಟು ಕೊಳ್ಳುವುದಕ್ಕೂ ಇದರ ಅಗತ್ಯವಿದೆ.

ಮಾದರಿ ಉಂಗುರಗಳು

ಬೇರೆ ಬೇರೆ ಆಕಾರಗಳಿಂದ ಕೂಡಿರುವ ಬೆಳ್ಳಿ ಮುಂತಾದ ಲೋಹಗಳಿಂದ ಮಾಡಿರುವ ಮಾದರಿ ಉಂಗುರಗಳನ್ನು ಇಟ್ಟುಕೊಂಡಿರುತ್ತಾರೆ. ಮೌಲ್ಡಿಂಗ್ ಬಾಕ್ಸ್ / ಅಚ್ಚಿನ ಮಣೆಯೊಳಗೆ ಇದನ್ನು ಸೇರಿಸಿ ಮಾರ್ಕನ್ನು ಮಾಡಿಕೊಂಡು ನಂತರ ಈ ಮಾರ್ಕಿನೊಳಕ್ಕೆ 'ದ್ರವಬಂಗಾರ'ವನ್ನು ಸುರಿದು ಉಂಗುರಗಳನ್ನು ತಯಾರಿಸುತ್ತಾರೆ. ಹೀಗೆ ಅಣಿಗೊಳಿಸಿರುವ ವಿವಿಧ ಬಗೆಯ ಉಂಗುರಗಳು ಇವರಲ್ಲಿರುತ್ತವೆ.

ಅಯಸ್ಕಾಂತ

ಆಭರಣಗಳನ್ನು ಅರದಿಂದ ಉಜ್ಜುವಾಗ ಬಂಗಾರದ ಪುಡಿಯ ಜೊತೆಯಲ್ಲಿ ಅರದಲ್ಲಿನ ಕಬ್ಬಿಣದ ಪುಡಿಯೂ ಬೆರಕೆಯಾಗುತ್ತದೆ. ಈ ಮಿಶ್ರಣದಿಂದ ಕಬ್ಬಿಣದ ಪುಡಿಯನ್ನು ಪ್ರತ್ಯೇಕಗೊಳಿಸಲು ಅಯಸ್ಕಾಂತ ಬಳಸುತ್ತಾರೆ.

ಚಿನಿವಾರರ ಕೆಲಸಗಳಿಗೆ ಕೇವಲ ಲೋಹಗಳ ಉಪಕರಣಗಳಷ್ಟೇ ಅಲ್ಲದೆ ಬೆಳ್ಗಾರ, ಪುಡಿ, ಕೆ.ಡಿ.ಎಮ್. ಪಾದರಸ, ಅರಗು, ನವಸಾಗರ, ಅಡಿಗೆಸೋಡ, ನೈಟ್ರಿಕ್ ಆಮ್ಲ, ಗಂಧಕಾಮ್ಲ, ರೋಸ್‌ಗಡ್ಡೆ, ಮೌಲ್ಡಿಂಗ್ ಮಣ್ಣು, ರಾಜಾಮ್ಲ, ಜಲಜನಕಾಮ್ಲ ಮುಂತಾದವುಗಳ ಅಗತ್ಯ ಬಹಳ.

'ಬೆಳ್ಗಾರ' ಎಂದರೆ ಆಭರಣಗಳನ್ನು 'ಬೆಸುಗೆ' ಮಾಡಬೇಕಾದರೆ ಪ್ರಮುಖವಾಗಿ ಬಳಸಲೇಬೇಕಾದ ಒಂದು ಕಲ್ಲು. "ಬೆಳ್ಗಾರ ಇಲ್ದಿದ್ರೆ ವೆಲ್ಡಿಂಗ್ ಆಗೊಲ್ಲ' ಎಂಬ ಮಾತಿನಿಂದ ಬೆಸುಗೆಗೆ ಇದರ ಅಗತ್ಯ ಎಷ್ಟೆಂಬುದು ತಿಳಿದುಬರುತ್ತದೆ. ಬೆಸುಗೆ ಮಾಡಬೇಕಾದ ಆಭರಣದ ಮೇಲೆ ನೀರಿನಲ್ಲಿ ಅದ್ದಿರುವ ಬೆಳ್ಗಾರವನ್ನು 'ಸ್ರಾವಣದ' ಸಹಾಯದಿಂದ ತೆಗೆದಿಟ್ಟು ಬ್ಲೋಪೈಪ್ ಸಹಾಯದಿಂದ ಗಾಳಿಯನ್ನು ಊದುತ್ತಾರೆ. ಆಗ ದೀಪದ ಉರಿಯ ಬಿಸಿ ಬೆಳ್ಗಾರದ ಮೇಲೆ ಬಿದ್ದಾಗ ಅದು ಕರಗಿ ಆಭರಣ ಕೂಡುವಂತೆ ಸಾಧ್ಯವಾಗುತ್ತದೆ. ಬೆಳ್ಗಾರ ಬಳಸದೆ ಕಾಯಿಸಿದರೆ ಅದು ಸೇರುವುದಿಲ್ಲ. ಹೀಗೆಯೇ 'ಪೊಡಿ' ಬೆಸುಗೆ ಎಂಬ ಮತ್ತೊಂದು ವಿಧಾನದಿಂದ ಬೆಸುಗೆ ಮಾಡುತ್ತಾರೆ. 'ಪೊಡಿ' ಎಂದರೆ ಬೆಳ್ಳಿ, ತಾಮ್ರ ಹಾಗೂ ಚಿನ್ನದ ಮಿಶ್ರಣದ ಪುಡಿ ಆಗಿರುತ್ತದೆ. ಇದರಲ್ಲಿ ಚಿನ್ನಕ್ಕಿಂತ ಬೆಳ್ಳಿಯ ಪ್ರಮಾಣ ಹೆಚ್ಚಿರುತ್ತದೆ. 'ಪೊಡಿ' ಬೆಸುಗೆ ಮಾಡಿರುವ ಆಭರಣವನ್ನು ಕರಗಿಸಿದರೆ ಹೆಚ್ಚಿನ ಭಾಗ ವೇಸ್ಟೇಜ್ ಹೋಗುತ್ತದೆ. ಇದರಿಂದ ಆಭರಣ ಮಾಡುವವನಿಗೆ ಹೆಚ್ಚಿನ ಲಾಭ ಆಗುವುದಲ್ಲದೆ, ಆಭರಣ ಮಾಡಿಸಿಕೊಂಡವನಿಗೆ ಹೆಚ್ಚಿನ ನಷ್ಟ ಆಗುತ್ತದೆ. ಆದರೂ ಹೆಚ್ಚಿನ ಪ್ರಮಾಣದಲ್ಲಿ ಈ ರೀತಿಯ 'ಬೆಸುಗೆ' ಕೆಲಸ ನಡೆಯುತ್ತಿದೆ. ಇದಲ್ಲದೆ 'ಕೆ.ಡಿ.ಎಂ. ಬೆಸುಗೆ' ಎಂಬ ಮತ್ತೊಂದು ವಿಧಾನದಲ್ಲಿ 'ಬೆಸುಗೆ' ಕೆಲಸ ನಡೆಯುತ್ತಿದೆ.★1 ಕೆ.ಡಿ.ಎಂ. ಎಂದರೆ ಚಿನ್ನ, ಬೆಳ್ಳಿ ಹಾಗೂ ತಾಮ್ರದ ಮಿಶ್ರಣದ ಲೋಹವಾಗಿರುತ್ತದೆ. ಮೂಸೆಯಲ್ಲಿ ಈ ಮೂರೂ ಲೋಹಗಳನ್ನು ಹಾಕಿ ಕಾಯಿಸುತ್ತಾರೆ. ಅದರ ಜೊತೆಗೆ ಸ್ವಲ್ಪ ಅಡಿಗೆ ಸೋಡದ ಪುಡಿಯನ್ನು ಬೆರೆಸುತ್ತಾರೆ. ಆಗ ಮೂರು ಲೋಹಗಳು ಸಮನಾಗಿ ಬೆರೆತು ದ್ರಾವಣ ಆಗುತ್ತದೆ. ದ್ರಾವಣವನ್ನು ಅಚ್ಚಿಗೆ ಹಾಕಿ, ನೀರಲ್ಲಿ ಅದ್ದುವುದರ ಮೂಲಕ ತಂಪುಗೊಳಿಸುತ್ತಾರೆ. ಅನಂತರ ಕತ್ತರಿಯ ಸಹಾಯದಿಂದ ಸಣ್ಣ ಚೂರುಗಳನ್ನಾಗಿ ಕತ್ತರಿಸಿಕೊಂಡು ಆಭರಣಗಳಿಗೆ

★1 ಸುವರ್ಣ ಜಾನಪದ. (ಸಂ.೨) ಪ್ರ. ೧೯೯೮. ಪು.ಸಂ. ೪೩೦

ಬೆಸುಗೆ ಮಾಡುತ್ತಾರೆ. ಆಭರಣ ಕೂಡುವಾಗ ಬೇರೆ ಬೇರೆ ಲೋಹಗಳು ಹೊಗೆಯ ರೂಪದಲ್ಲಿ ಹೊರಕ್ಕೆ ಹೋಗುತ್ತದೆ. ಈ ಹೊಗೆ ವಿಷಕಾರಿಯೆಂದೂ; ಇದರಿಂದ 'ಕ್ಯಾನ್ಸರ್' ಕಾಯಿಲೆ ಬರುತ್ತದೆಂದು ನಂಬಿಕೆ ಇದೆ. ಆದರೆ ಈ ಬೆಸುಗೆ ಮಾಡಿದ ಆಭರಣಗಳನ್ನು ಕರಗಿಸಿದರೆ ಹೆಚ್ಚು ವೇಸ್ಟೇಜ್ ಹೋಗುವುದಿಲ್ಲ. ಸಾಮಾನ್ಯವಾಗಿ ಕೆ.ಡಿ.ಎಂ. ಬೆಸುಗೆ ಮಾಡಿದ್ದಲ್ಲಿ ಆ ಆಭರಣಗಳ ಮೇಲೆ 'ಕೆಡಿಎಂ' ಎಂಬ ಮುದ್ರೆಯನ್ನು ಬಳಸುವುದುಂಟು. ಇದರಿಂದ ಆಭರಣ ಮಾಡಿಸಿದವನಿಗೆ ಹೆಚ್ಚು ನಷ್ಟ ಆಗುವುದಿಲ್ಲ. ಆದರೆ 'ಬೆಸುಗೆ' ಸ್ವಲ್ಪ ದುಬಾರಿಯದಾಗಿರುತ್ತದೆ.

ಆಭರಣಗಳಿಗೆ ರಂಧ್ರ ಹಾಕುವಾಗ, ಬೇರೆ ಬೇರೆ ಆಕಾರಗಳನ್ನು ಕೊರೆಯುವಾಗ, ಕೆತ್ತುವಾಗ, ಉಜ್ಜುವಾಗ, ನಯಗೊಳಿಸುವಾಗ ಬೇರೆ ಬೇರೆ ಸಂದರ್ಭಗಳಲ್ಲಿ ಬಂಗಾರದ ಸೂಕ್ಷ್ಮವಾದ ಚೂರುಗಳು ಮಣ್ಣಲ್ಲಿ ಕೂಡುವುದುಂಟು. ಮಣ್ಣಿನೊಳಗಿನ ಬಂಗಾರವನ್ನು ಪ್ರತ್ಯೇಕಿಸಲು ಪಾದ ರಸವನ್ನು ಬಳಸುತ್ತಾರೆ. ತಕ್ಷಣ ಪಾದರಸ ಹಾಗೂ ಬಂಗಾರದ ಮಿಶ್ರಣವನ್ನು 'ಮೂಸೆ'ಯ ಸಹಾಯದಿಂದ ಕಾಯಿಸದಿದ್ದಲ್ಲಿ ಬಂಗಾರ ಕರಗುತ್ತದೆ. ಆದ್ದರಿಂದ ಕಾಯಿಸಿದಾಗ ಪಾದರಸ ಆವಿಯಾಗುತ್ತದೆ. ಬಂಗಾರ ಮಾತ್ರ ಶುದ್ಧವಾಗಿ ಮೂಸೆಯಲ್ಲಿ ಉಳಿಯುತ್ತದೆ.

ಚಿನ್ನವನ್ನು ಶುದ್ಧೀಕರಿಸಲು ಅಡಿಗೆ ಸೋಡವನ್ನು ಬಳಸುತ್ತಾರೆ. ಆಭರಣಗಳನ್ನು ಮಾಡಲು ಮೂಸೆಯಲ್ಲಿ ಬಂಗಾರ, ತಾಮ್ರ ಮತ್ತು ಬೆಳ್ಳಿಯ ಚೂರುಗಳನ್ನು ತೆಗೆದುಕೊಂಡು 'ಪಟಕಾರ'ದ ಸಹಾಯದಿಂದ ಅಗ್ಗಿಷ್ಟಿಕೆಯ 'ಉರಿ' ಮೇಲೆ ಇಡುತ್ತಾರೆ. ಉರಿಯನ್ನು 'ಊದ್ಬುರ್ರ'ದಿಂದ ಗಾಳಿ ಊದಿ ಜಾಸ್ತಿ ಮಾಡುತ್ತಾರೆ. ಬಂಗಾರ ಕರಗುತ್ತಿರುವಾಗ ಒಂದೆರಡು ಚಿಟಿಕೆಯಷ್ಟು ಅಡಿಗೆ ಸೋಡವನ್ನು ಹಾಕುತ್ತಾರೆ. ಇದರಿಂದ ಮೂಸೆಯೊಳಗಿರುವ ವಿವಿಧ ಲೋಹಗಳ ಮಿಶ್ರಣ ಗಂಟಾಗದೆ ಚೆನ್ನಾಗಿ ಕಲೆಯುತ್ತದೆ. ಜೊತೆಗೆ 'ಅಡಿಗೆ ಸೋಡ' ಬಳಸುವುದರಿಂದ ಚಿನ್ನದಲ್ಲಿನ ಕಶ್ಮಲ ಹೋಗಿ ಪ್ರಕಾಶತೆ ಉಂಟಾಗುತ್ತದೆ. ಇದರ ಜೊತೆಗೆ ಸ್ವಲ್ಪ 'ನವಾಸಾಗರ'ವನ್ನೂ ಸೇರಿಸುತ್ತಾರೆ. ಇದರಿಂದ 'ದ್ರವ ಬಂಗಾರವು' ಸ್ವಲ್ಪವೂ ಮೂಸೆಯೊಳಗೆ ಉಳಿಯದಂತೆ ಸಂಪೂರ್ಣ ಹೊರಬರಲು ಸಹಕಾರಿಯಾಗುತ್ತದೆ. ಮಣ್ಣಿನಲ್ಲಿನ ಅಶುದ್ಧ ಚಿನ್ನವನ್ನು ಶುದ್ಧಿಗೊಳಿಸಲು ಪಾದರಸದ ಜೊತೆಗೆ ಅಡಿಗೆ ಉಪ್ಪು ಅಥವ ಸ್ವಲ್ಪ ಗಂಧಕವನ್ನು ಹಾಕಿ

ಮೂಸೆಯಿಂದ ಕಾಯಿಸಿದರೆ ಬಂಗಾರ ಶುದ್ಧವಾಗುತ್ತದೆ. ಬಂಗಾರದಲ್ಲಿ ಜಿಡ್ಡಿನ ಅಂಶವಿದ್ದಲ್ಲಿ [ಮಂಕಾಗಿದ್ದಲ್ಲಿ] ಹೊಳಪು ಕಡಿಮೆ ಇದ್ದಲ್ಲಿ ಗಂಧಕಾಮ್ಲವನ್ನು ಹಾಕಿ ಕಾಯಿಸಿದರೆ, ಅದು ಶುದ್ಧವಾಗುವುದರ ಜೊತೆಗೆ ಹೊಳಪೂ ಉಂಟಾಗುತ್ತದೆ. ಆಭರಣಗಳಲ್ಲಿ ಟೊಳ್ಳಾದ ಭಾಗ ಇದ್ದರೆ ಅದನ್ನು ಅರಗಿನಿಂದ ಭರ್ತಿ ಮಾಡುತ್ತಾರೆ. ಆಗ ಆಭರಣಗಳನ್ನು ಒತ್ತಿದರೂ ಉಬ್ಬಿದಂತಿರುವ ಭಾಗ ಅಪ್ಪಟೆಯಾಗದು.

'ರೋಸ್‌ಗೆಡ್ಡೆ' ಇದು ಗ್ರೀಸ್ ಮಾದರಿಯಲ್ಲಿರುತ್ತದೆ. ಇದರಿಂದ ಆಭರಣಗಳನ್ನು ಉಜ್ಜುವುದರಿಂದ ಸಂಪೂರ್ಣ ಪಾಲಿಷ್ ಮಾಡಿದಂತಾಗುತ್ತದೆ. ಈ ಪಾಲಿಷ್ ಮಾಡಿದ ನಂತರ ಆಮ್ಲದಲ್ಲಿ ಪಾಲಿಷ್ ಮಾಡುವ ಅಗತ್ಯವಿಲ್ಲ ಇದನ್ನು 'ದಾರದ ಪಾಲಿಷ್' ಎನ್ನಲಾಗುತ್ತದೆ. ಆಮ್ಲದ ಪಾಲಿಷ್‌ನಲ್ಲಿ ಚಿನ್ನದ ಅಂಶ ಕರಗುವ ಸಾಧ್ಯತೆ ಇದೆಯಾದರೂ ದಾರದ ಪಾಲಿಷ್‌ನಲ್ಲಿ ಚಿನ್ನ ಕರಗಲು ಸಾಧ್ಯವಿಲ್ಲ.

ಆಭರಣಗಳನ್ನು ಸಿದ್ಧಗೊಳಿಸಲು ಮುಖ್ಯವಾಗಿ ಬೆಳಕು ಹಾಗೂ ಪರಿಶುದ್ಧ ಗಾಳಿಯ ಅಗತ್ಯ ಇರುತ್ತದೆ. ಬೆಳಕಿಗಾಗಿ ವಿದ್ಯುತ್ ಅನ್ನು ಆಶ್ರಯಿಸುವುದುಂಟು. ಹೀಗಾಗಿ ವಿದ್ಯುತ್ತಿನ ಅಗತ್ಯತೆ ಇರುತ್ತದೆ. ಆಭರಣಗಳನ್ನು ತೂಕ ಮಾಡಲು 'ತ್ರಾಸು' ಅಥವಾ 'ತಕ್ಕಡಿ' ಬಳಸುತ್ತಾರೆ. ಮಿಲಿಗಳ ಬಟ್ಟುಗಳು ಮತ್ತು 'ಗುಲಗಂಜಿ' [ಗುಂಜಿ] ಗಳು ಅಳತೆಯ ಮಾಪನಗಳಾಗಿ ಬಳಸುವ ಉಪಕರಣಗಳಾಗಿವೆ.

ಉಂಗುರ ಮುಂತಾದ ಆಭರಣಗಳನ್ನು ತಯಾರಿಸುವಾಗ ಮೊದಲು 'ಮೌಲ್ಡ್' ಮಾಡಬೇಕಾಗುತ್ತದೆ. ಇದನ್ನೆ 'ಅಚ್ಚು' ಹಾಕುವಿಕೆ ಎನ್ನುತ್ತಾರೆ. ಅಚ್ಚು ಹಾಕಲು ಅಚ್ಚಿನ ಮಣೆಗೆ ಮಣ್ಣನ್ನು ಸಿದ್ಧಗೊಳಿಸುತ್ತಾರೆ. ಇದನ್ನು 'ಶುದ್ಧೀಕರಣ' ಎನ್ನುತ್ತಾರೆ.

ಮಣ್ಣನ್ನು ಶುದ್ಧೀಕರಣ ಮಾಡುವ ಬಗೆ [ಮೌಲ್ಡಿಂಗ್ ಮಣ್ಣನ್ನು ತಯಾರಿಸುವ ಬಗೆ] :

ಮರಳನ್ನು ತಂದು ಜರಡಿ ಹಿಡಿಯಬೇಕು. ನಂತರ ತೆಳುವಾದ ಹತ್ತಿ ಬಟ್ಟೆಯಿಂದ ಜರಡಿ ಹಿಡಿದ ಮಣ್ಣನ್ನು ತೋಳಿಸಬೇಕು. ಆಗ ಬಹಳ ನಯಸ್ಸಾದ

ಮಣ್ಣು ಬರುತ್ತದೆ. ಒಂದು ಪಿಂಗಾಣಿ ಬಟ್ಟಲಿನಲ್ಲಿ ನೂರು ಗ್ರಾಂ ಹರಳೆಣ್ಣೆ; ¼ ಕೆ.ಜಿ., ರೋಜಲು; ೫೦ ಗ್ರಾಮು ಮುಸಾಮರವೆಂಬ ಗಿಡಮೂಲಿಕೆಯನ್ನು ಬೆರೆಸಿ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಬೇಕು. ಕಜ್ಜಾಯ ಅಥವಾ ಮೈಸೂರು ಪಾಕ್ ಮಾಡಲು ಒಂದು ಹದಕ್ಕೆ ಕಾಯಿಸುವಂತೆ ಈ ಮಿಶ್ರಣವನ್ನು ಕಾಯಿಸ ಬೇಕು. ಅನಂತರ ಇದಕ್ಕೆ ಜಲಡಿ ಹಿಡಿದಿರುವ ಮಣ್ಣನ್ನು ಪಾಕದೊಳಕ್ಕೆ ಸ್ವಲ್ಪ ಸ್ವಲ್ಪವನ್ನಾಗಿ ಹಾಕಿಕೊಂಡು ಗಂಟು ಬಾರದಂತೆ ಒಂದು ಕಡ್ಡಿಯ ಸಹಾಯದಿಂದ ತಿರುಗುತ್ತಿರ ಬೇಕು. ಹಿಟ್ಟನ್ನು ಮಿದಿಯುವಂತೆ ಮೃದುವಾಗುವವರೆಗೆ ಮಣ್ಣನ್ನು ಸೇರಿಸುತ್ತಿರ ಬೇಕು. ನಂತರ ಇದನ್ನು ಆರಿಸಿ ಮೌಲ್ಡಿಂಗ್ ಮಾಡಲು ಬಳಸಬಹುದು. ಇದನ್ನು 'ಮಣ್ಣನ್ನು ಶುದ್ಧಿಗೊಳಿಸುವುದು' ಎನ್ನುತ್ತಾರೆ.

ಅಚ್ಚು ಹಾಕುವಿಕೆ [ಮೌಲ್ಡಿಂಗ್ ಮಾಡುವಿಕೆ] :

ಅಚ್ಚು ಹಾಕುವ ಮಣೆಗಳು ಕಬ್ಬಿಣದ ಎರಡು ಕವಾಟಗಳು. ಚಿಕ್ಕದರಿಂದ ಹಿಡಿದು ದೊಡ್ಡದವರೆಗೆ ವಿವಿಧ ಗಾತ್ರಗಳ ಅಚ್ಚುಗಳಿರುತ್ತವೆ. ಒಂದು ಅಥವಾ ಎರಡು ಉಂಗುರಗಳನ್ನು ಕಡಿಮೆ ಚಿನ್ನದಲ್ಲಿ ಮಾಡುವಾಗ ಚಿಕ್ಕ ಗಾತ್ರದ ಅಚ್ಚನ್ನು; ಹೆಚ್ಚಿನ ಸಂಖ್ಯೆಯ ಉಂಗುರಗಳನ್ನು ಅಪಾರ ಚಿನ್ನದಲ್ಲಿ ಮಾಡುವಾಗ ದೊಡ್ಡ ಗಾತ್ರದ ಅಚ್ಚನ್ನು ಬಳಸುತ್ತಾರೆ. ಅಚ್ಚಿನ ಮಣೆಗೆ ಮೌಲ್ಡಿಂಗ್ ಮಣ್ಣನ್ನು [ಶುದ್ಧಿಗೊಳಿಸಿದ ಮಣ್ಣನ್ನು] ತುಂಬುತ್ತಾರೆ. ಎರಡು ಕವಾಟಗಳನ್ನು ಬೇರೆ ಮಾಡಿ ಅವುಗಳ ನಡುವೆ ತಾವು ಮಾಡಬೇಕಾಗಿರುವ ಆಭರಣಗಳ ಆಕಾರದ ಮಾಡೆಲ್‌ಗಳನ್ನು ಇಟ್ಟು ಮತ್ತೆ ಕೂಡಿಸುತ್ತಾರೆ. ಅಚ್ಚನ್ನು ಚೆನ್ನಾಗಿ ಅದುಮಿ ಒಳಗಡೆ ಇಟ್ಟಿರುವ ಆಭರಣಗಳ ಗುರುತು ಬೀಳುವಂತೆ ಮಾಡುತ್ತಾರೆ. ಕವಾಟಗಳನ್ನು ತೆರೆದು ಮಾಡೆಲ್ ಆಭರಣವನ್ನು ಹೊರಗಡೆ ತೆಗೆಯುತ್ತಾರೆ. ಅದುವರೆಗೆ ಇದ್ದ ಆಭರಣಗಳ ಗುರುತಿನ ಭಾಗದಲ್ಲಿ ಕುಳಿ ಬಿದ್ದಿರುತ್ತದೆ. ಆ ಭಾಗಕ್ಕೆ ಸ್ವಲ್ಪ ಚಾಕ್ ಪೌಡರ್‌ಗಳನ್ನು ಸಿಂಪಡಿಸುತ್ತಾರೆ. ಇದರಿಂದ ಚಿನ್ನವು ಆಯಾ ಮಾರ್ಕಿನಲ್ಲಿಳಿದು ಕವಾಟಗಳನ್ನು ತೆರೆದಾಗ ಮಣ್ಣಿಗೆ ಅಂಟದೆ ಅಲುಗಿಸಿದರೆ ಕೆಳಗೆ ಬೀಳಲು ಸುಲಭವಾಗುತ್ತದೆ. ನುಸಿ [ಮೂಸೆ] ಯಲ್ಲಿ ಬಂಗಾರ, ಬೆಳ್ಳಿ ಮತ್ತು ತಾಮ್ರದ ಚೂರುಗಳನ್ನು ಹಾಕುತ್ತಾರೆ. 'ಕುಮಟೆ'ಯ ಬೆಂಕಿಯನ್ನು 'ನೀಳ್ಗಾರ'ದಿಂದ ಚದುರಿಸಿ, 'ಊದ್ಬುರ್ರ'ದ ಸಹಾಯದಿಂದ ಬೆಂಕಿಯನ್ನು ಊದುತ್ತಾರೆ. 'ಪಟಕಾರ' [ಗಂಟು] ಇರುವುದಿಲ್ಲ. ಜೊತೆಗೆ ಸ್ವಲ್ಪ

'ನವಸಾಗರ'ವನ್ನು ಬೆರೆಸುತ್ತಾರೆ. ಇದು ಚಿನ್ನ ಸ್ವಲ್ಪವೂ ಮೂಸೆಯಲ್ಲಿ ಉಳಿಯದಂತೆ ಕಾರ್ಯ ನಿರ್ವಹಿಸುತ್ತದೆ. ಇದನ್ನು 'ಬಂಗಾರದ ದ್ರಾವಣ' ಎನ್ನುತ್ತಾರೆ. ಸುರಿದ ತಕ್ಷಣ ದ್ರವ ಬಂಗಾರವು ಆಯಾ ರಂಧ್ರಗಳಲ್ಲಿ ಹಾಯ್ದು ಆಯಾ ಆಕಾರಗಳಿಗೆ ತಕ್ಕಂತೆ ಗಟ್ಟಿಯಾಗುತ್ತದೆ. ಕೆಲವು ಸೆಕೆಂಡುಗಳ ನಂತರ ಜೋಡಿಸಿರುವ ಕವಾಟಗಳನ್ನು ಬಿಚ್ಚಿ 'ಗಟ್ಟಿ ಹಾಕಿದ' [ಅಚ್ಚುಹಾಕಿದ] ಆಭರಣವನ್ನು ತಮ್ಮ ಆಕಾರ, ಗಾತ್ರ, ತೂಕಗಳಿಗನುಗುಣವಾಗಿ ತಯಾರಿಸಿಕೊಳ್ಳುತ್ತಾರೆ. ಇದನ್ನು 'ಅಚ್ಚು ಹಾಕುವಿಕೆ' ಅಥವಾ 'ಮೌಲ್ಡಿಂಗ್ ಮಾಡುವಿಕೆ' ಎನ್ನುತ್ತಾರೆ. ಅಚ್ಚಿನ ಮಣಿಗಳಲ್ಲಿ 'ಗೋಳಾಕಾರ' ಹಾಗೂ 'ಚತುರ್ಭುಜದಾಕಾರ'ಗಳು ಇರುತ್ತವೆ.

ಆಭರಣಗಳಿಗೆ ಪಾಲಿಷ್ ಮಾಡುವ ವಿಧಾನ★ :

ಸುಮಾರು ಐದಾರು ದಶಕಗಳಿಗೂ ಮೊದಲು ಪಾಲಿಷ್ ಮಾಡುವ ವಿಧಾನ ರೂಢಿಯಲ್ಲಿದ್ದ ಬಗೆ : ಎರಡು ಆಣೆ 'ಪಟಿಕ'ದೊಡನೆ ಅರ್ಧಹಿಡಿ 'ಅಡಿಗೆ ಉಪ್ಪನ್ನು' ಕೂಡಿಸಿ ನೀರಿನ ಸಹಾಯದಿಂದ ದಟ್ಟವಾಗಿ ನುಣ್ಣಗಿರುವಂತೆ ಅರೆಯುವುದು. ಪಾಲಿಷ್ ಮಾಡಬೇಕಾದ ಆಭರಣವನ್ನು ಈ ದ್ರಾವಕದಲ್ಲಿ ಸ್ವಲ್ಪ ಸಮಯ ಅದ್ದಿದ್ದು ನಂತರ ಬೆಂಕಿಯಲ್ಲಿ ಕಾಯಿಸುವುದು. ಆಭರಣ ಸ್ವಲ್ಪ ಬಿಸಿಯಾದ ಮೇಲೆ ನೀರಿನಲ್ಲಿ ಅದ್ದಿದರೆ ಅದು ಬಿಳಿ ಬಣ್ಣಕ್ಕೆ ತಿರುಗುತ್ತದೆ. ಮತ್ತೆ ಇದನ್ನು 'ಹುಣಿಸೆಹುಳಿ'ಯಲ್ಲಿ ಅದ್ದಿ ಒಂದು ಕಬ್ಬಿಣದ ರಿಂಗಿಗೆ ಹಂದಿಯ ಕೂದಲನ್ನು ಸುತ್ತಿ ಬ್ರಷ್‌ನಂತೆ ಮಾಡಿರುವ ಸಾಧನದಿಂದ ಚೆನ್ನಾಗಿ ಉಜ್ಜುವುದು. ಮತ್ತೆ ಹುಣಿಸೆ ಹುಳಿಗೆ ಅದ್ದಿ ಗಂಧ ಮತ್ತು ನೀರಿನ ದ್ರಾವಣದೊಳಗೆ ಎಜ್ಜಬೇಕು. ಅನಂತರ ಬೆಂಕಿಯಲ್ಲಿ ಕಾಯಿಸಿ ನೀರಿಗೆ ಎಜ್ಜಿದರೆ ಅದು ಬೆಳ್ಳಗೆ ಹೊಳೆಯುತ್ತದೆ. ಅರಿಸಿನ ಮತ್ತು ನೀರಿನ ಸಹಾಯದಿಂದ ಅಣಿಗೊಳಿಸಿರುವ ಅರಿಸಿನದ ದ್ರಾವಣದೊಳಗೆ ಸ್ವಲ್ಪ ಸಮಯ ಅದ್ದಿ ಮತ್ತೆ ಬೆಂಕಿಯಲ್ಲಿ ಕಾಯಿಸುವುದು. ಅದು ಬಿಸಿಯಾದ ನಂತರ ನೀರಿನಲ್ಲಿ ಅದ್ದಿದರೆ ಆಭರಣ

★ ವಕ್ತೃ : ಪಾಲಿಷ್ ಮಾಡುವ ವಿಧಾನ : ಚಿನ್ನದ ಪಾಲಿಷ್ ಹಾಗೂ ಬೆಳ್ಳಿ ಪಾಲಿಷ್ ಬಗೆಗಿನ ಸಂಪೂರ್ಣ ವಿವರಗಳು ತಿಳಿಸಿದವರು: ಆರ್. ಚಂದ್ರಶೇಖರಾಚಾರಿ ಬಿನ್ ರಾಮಾಚಾರಿ. ಜಕ್ಕರಸನಕುಪ್ಪ. ಕ್ಯಾಸಂಬಳ್ಳಿ ಹೋಬಳಿ, ಬಂಗಾರಪೇಟೆ ತಾಲ್ಲೂಕು: ಕೋಲಾರ ಜಿಲ್ಲೆ.

ಅರಿಸಿನದ [ಬಂಗಾರದ] ಬಣ್ಣಕ್ಕೆ ಬಂದಿರುತ್ತದೆ. ಹೀಗೆ ಹಿಂದೆ ಹರಳಿಲ್ಲದ ಪ್ಲೈನ್ ಆಭರಣಗಳೇ ಇದ್ದುದರಿಂದ ಕಡಿಮೆ ಖರ್ಚಿನಲ್ಲಿ ಪಾಲಿಷ್ ಮಾಡುವ ವಿಧಾನ ಬಳಕೆಯಲ್ಲಿತ್ತು. ಆಭರಣಗಳಲ್ಲೂ ಮುತ್ತು, ಹವಳ, ರತ್ನ, ಹರಳುಗಳ ಮಾದರಿಗೆ ಮಾರ್ಪಾಟಾದಂತೆಲ್ಲಾ ಪಾಲಿಷ್ ಮಾಡುವ ವಿಧಾನವೂ ಬದಲಾವಣೆ ಆಗಿದೆ ಎಂಬುದನ್ನು ವಕ್ತೃಗಳು ವಿವರಿಸುತ್ತಾರೆ★.

ಇತ್ತೀಚೆಗೆ ರೂಢಿಯಲ್ಲಿರುವ ಚಿನ್ನದ ಪಾಲಿಷ್ ವಿಧಾನ :

ಬೆಳ್ಳಿ ಆಭರಣಗಳಿಗೆ ನೇರವಾಗಿ 'ಚಿನ್ನದ ಪಾಲಿಷ್' ಅಥವಾ 'ಚಿನ್ನದ ಲೇಪನ' ಮಾಡಬಹುದಾದರೂ; ತಾಮ್ರಕ್ಕೆ ನೇರವಾಗಿ ಮಾಡಲು ಸಾಧ್ಯವಿಲ್ಲ. ಆದ್ದರಿಂದ ತಾಮ್ರದವುಗಳಿಗೆ ಮೊದಲು 'ಬೆಳ್ಳಿಯ ಲೇಪನ' ಮಾಡಿ ನಂತರ ಅದರ ಮೇಲೆ 'ಚಿನ್ನದ ಲೇಪನ' ಮಾಡಬಹುದು. ಪಿಂಗಾಣಿ ಸಾಮಾನುಗಳ ಮೇಲೆ ಚಿತ್ರಿಸಲು 'ದ್ರವ ಬಂಗಾರ' ಬಳಸುತ್ತಾರೆ. ಸಸ್ಯಜನ್ಯ ಎಣ್ಣೆಯಲ್ಲಿ ಸೂಕ್ಷ್ಮಕಣಗಳ ರೂಪದಲ್ಲಿ ವಿಲಂಬಿತವಾಗಿರುವ ಚಿನ್ನಕ್ಕೆ 'ದ್ರವಬಂಗಾರ' ಎನ್ನುತ್ತಾರೆ.

ಅಗಲವಾದ ಪಿಂಗಾಣಿ ಬಟ್ಟಲಿನಲ್ಲಿ ಒಂದು ಲೀಟರ್‌ನಷ್ಟು ಶುದ್ಧವಾದ ನೀರನ್ನು ತೆಗೆದುಕೊಳ್ಳಬೇಕು. ಅದರಲ್ಲಿ ¼ ಔಂಸ್‌ನಷ್ಟು ನೈಟ್ರಿಕ್ ಆಮ್ಲವನ್ನು ಸೇರಿಸಬೇಕು. ಎರಡು ಗ್ರಾಂನಷ್ಟು ಮರಾಠಿಕ್ ಆಮ್ಲವನ್ನು ಕೂಡಿಸಿ ಜೊತೆಗೆ 2½ ಗ್ರಾಂ ತೂಕದಷ್ಟು ಸಯನೈಡನ್ನು ಮಿಶ್ರಣ ಮಾಡಬೇಕು.

ಒಂದು ಗಾಜಿನ ಬೀಕರಿನಲ್ಲಿ ಅರ್ಧಗ್ರಾಂನಷ್ಟು ಅಪರಂಜಿಯ ತೆಳುವಾದ ತಗಡನ್ನು ತೆಗೆದುಕೊಂಡು ಕತ್ತರಿಯ ಸಹಾಯದಿಂದ ಸಣ್ಣ ಸಣ್ಣ ಚೂರುಗಳನ್ನಾಗಿ ಮಾಡಿ ಹಾಕಬೇಕು. ಅದಕ್ಕೆ ಸಾರಯುತ ನೈಟ್ರಿಕ್ ಆಮ್ಲವನ್ನು ಹಾಕಿ ಬೆಂಕಿಯಲ್ಲಿ ಚೆನ್ನಾಗಿ ಕಾಯಿಸಬೇಕು. ಆಮ್ಲವೆಲ್ಲ ಆವಿಯಾಗಿ ಹಳದಿಬಣ್ಣದ ಪುಡಿಯು ಬರುತ್ತದೆ. ಈ ಪುಡಿಯನ್ನು ಪಿಂಗಾಣಿ ಬಟ್ಟಲಿನಲ್ಲಿನ ಮಿಶ್ರಣದೊಳಕ್ಕೆ ಸುರಿದು

★ ವಕ್ತೃಗಳು : ೧. ಆರ್. ಚಂದ್ರಶೇಕರಾಚಾರಿ, ಜಕ್ಕರಸನ ಕುಪ್ಪಂ, ಕೆ.ಜಿ.ಎಫ್.
೨. ಅನ್ವರ್ ಅಲಿಖಾನ್, ೨೮ ವರ್ಷ, ಎರಡನೇ ಅಡ್ಡರಸ್ತೆ, ರಾಬರ್ಟ್‌ಸನ್ ಪೇಟೆ, ಕೆ.ಜಿ.ಎಫ್.
೩. ಕೆ. ಆನಂದಾಚಾರ್ ಬಿನ್ ಆದಿನಾರಾಯಣಾಚಾರ್. ಮೋತಕಪಲ್ಲಿ ಕೆ.ಜಿ.ಎಫ್.

ಒಲೆಯ ಮೇಲಿಟ್ಟು ಚೆನ್ನಾಗಿ ಕುದಿಯುವಂತೆ ಕಾಯಿಸಬೇಕು. ಕುದಿದ ನಂತರ ಕೆಳಗಿಳಿಸಿ ಅದನ್ನು ತಂಪಾಗುವಂತೆ ಆರಿಸಬೇಕು. ಈ ದ್ರಾವಣವನ್ನು 'ಚಿನ್ನದ ದ್ರಾವಣ' ಎನ್ನುತ್ತಾರೆ.

ಒಂದು 'ಎಲಿಮಿನೇಟರ್' ಅಥವಾ 'ಎರಡು ಬ್ಯಾಟರಿ ಷೆಲ್' ಅನ್ನು ತೆಗೆದುಕೊಂಡು ಅದಕ್ಕೆ ಎರಡು ವೈರುಗಳನ್ನು ಜೋಡಿಸಬೇಕು. ಅದರಲ್ಲಿ ಒಂದು ವೈರು ಸ್ವಲ್ಪ ಉದ್ದವಿರುವಂತೆ ಎಚ್ಚರವಹಿಸಬೇಕು. ಈ ಉದ್ದವಾದ ವೈರಿಗೆ ತೆಳ್ಳಗಿನ ತಾಮ್ರದ ತಂತಿಯನ್ನು ಸುತ್ತಬೇಕು. ಈಗ ನಾವು ಪಾಲಿಷ್ ಮಾಡಬೇಕಾದ ಆಭರಣವನ್ನು ಮೊದಲು ಬೆಂಕಿಯಲ್ಲಿ ಸ್ವಲ್ಪ ಬಿಸಿ ಮಾಡಬೇಕು. ಬಿಸಿಯಾದ ಮೇಲೆ ಅದನ್ನು 'ಗಂಧಕಾಮ್ಲ'ದಲ್ಲಿ ಅದ್ದಿದರೆ ಬೆಳ್ಳಗಾಗುತ್ತದೆ. ಅದನ್ನು ತೆಗೆದು ಸೋಪುಕಾಯಿ [ಅಂಟುವಾಳದಕಾಯಿ] ಯ ದ್ರಾವಣವನ್ನು ಕಾಯಿಸಿ ಒಂದು ಪಾತ್ರೆಯಲ್ಲಿ ಅಣಿಯಾಗಿಟ್ಟಿರಬೇಕು. ಅದರಲ್ಲಿ ಚೆನ್ನಾಗಿ ನೊರೆ ಬರುವಂತೆ 'ಹಿತ್ತಾಳೆ ಬ್ರಷ್' ಸಹಾಯದಿಂದ ಉಜ್ಜಬೇಕು. ಅನಂತರ ಎಲಿಮಿನೇಟರ್‌ನ ಮತ್ತೊಂದು ವೈರಿಗೆ ಇದನ್ನು ಕಟ್ಟಬೇಕು. ಜೊತೆಗೆ ಮಗ್ಗುಲಲ್ಲಿ ಮತ್ತೊಂದು ಪಾತ್ರೆಯಲ್ಲಿ ಶುದ್ಧವಾದ ನೀರನ್ನು ಇಟ್ಟುಕೊಂಡಿರಬೇಕು. ಈಗ ಎಲಿಮಿನೇಟರ್ ವೈರುಗಳಿಗೆ ಅಳವಡಿಸಿರುವ ವೈರುಗಳೆರಡನ್ನೂ ಎರಡು ಕೈಗಳಲ್ಲೂ ಹಿಡಿದು ಪಿಂಗಾಣಿ ಬಟ್ಟಲಿನಲ್ಲಿನ 'ಚಿನ್ನದ ದ್ರಾವಣ'ದೊಳಗೆ ನಾಲ್ಕೈದು ನಿಮಿಷಗಳವರೆಗೆ ಅದ್ದಿ ಚೆನ್ನಾಗಿ ಅಲುಗಾಡಿಸುತ್ತಿರಬೇಕು. ನಂತರ ತೆಗೆದು ಮಗ್ಗುಲಲ್ಲಿರುವ ಶುದ್ಧವಾದ ನೀರಿನಲ್ಲಿ ಹಾಕಿ ಕಲಕಿದರೆ ಅದು ಶುದ್ಧವಾದ [ಚಿನ್ನದ] ಬಣ್ಣಕ್ಕೆ ಬರುತ್ತದೆ. ಚೆನ್ನಾಗಿ ಹೊಳಪು ಬರುವಂತೆ ಆಗಿರುತ್ತದೆ. ಇದನ್ನೇ 'ಚಿನ್ನದ ಪಾಲಿಷ್' ಅಥವಾ 'ಚಿನ್ನದ ಲೇಪನ' ಎನ್ನುತ್ತಾರೆ.

½ ಗ್ರಾಂ ಅಪರಂಜಿ + ನೈಟ್ರಿಕಾಮ್ಲ $\xrightarrow{\text{ಕಾಯಿಸಿದರೆ}}$ ಹಳದಿ ಪುಡಿ [ಚಿನ್ನದ ಪುಡಿ]

1 ಲೀಟರ್ ನೀರು + ¼ ಔಂಸ್ ನೈಟ್ರಿಕಾಮ್ಲ + 2 ಗ್ರಾಂ ಮರಾಠಿಕ್ ಆಮ್ಲ + 2½ ಗ್ರಾಂ ಸಯನೈಡು + ಹಳದಿ [ಚಿನ್ನದ] ಪುಡಿ $\longrightarrow$ ಚಿನ್ನದ ದ್ರಾವಣ

ಬೆಳ್ಳಿಯ ಪಾಲಿಷ್ [ಬೆಳ್ಳಿಯ ಲೇಪನ] :

5 ಗ್ರಾಂನಷ್ಟು ಶುದ್ಧವಾದ ಬೆಳ್ಳಿಯ ತೆಳುವಾದ ತಗಡನ್ನು ತೆಗೆದುಕೊಂಡು ಕತ್ತರಿಯ ಸಹಾಯದಿಂದ ಸಣ್ಣ ಚೂರುಗಳನ್ನಾಗಿ ಕತ್ತರಿಸಿಕೊಳ್ಳಬೇಕು. ಈ ಚೂರುಗಳನ್ನು ಒಂದು ಪಿಂಗಾಣಿ ಬಟ್ಟಲಿನಲ್ಲಿ ಹಾಕಿ ಅದಕ್ಕೆ ½ ಔಂಸಿನಷ್ಟು ನೈಟ್ರಿಕಾಮ್ಲವನ್ನು ಬೆರೆಸಿ ಬೆಂಕಿಯ ಸಹಾಯದಿಂದ ಚೆನ್ನಾಗಿ ಕುದಿಸಬೇಕು. ಈ ದ್ರಾವಣಕ್ಕೆ ಎರಡು ಲೀಟರಿನಷ್ಟು ಶುದ್ಧವಾದ ನೀರನ್ನು ಹಾಕಿ ಚೆನ್ನಾಗಿ ಕಲಕಬೇಕು. ಆಗ ಬೆಳ್ಳಿಯು ಪುಡಿರೂಪವಾಗುತ್ತದೆ. ಸ್ವಲ್ಪ ಸಮಯದವರೆಗೆ ಇದನ್ನು ಅಲುಗಾಡಿಸದೆ ಹಾಗೆ ಇಡಬೇಕು. ಭಾರವಾದ ಬೆಳ್ಳಿಯ ಪುಡಿಯೆಲ್ಲ ಪಿಂಗಾಣಿ ಬಟ್ಟಲಿನ ತಳಭಾಗದಲ್ಲಿ ಶೇಖರವಾಗುತ್ತದೆ. ಆಗ ಮೇಲಿನ ನೀರನ್ನೆಲ್ಲ ಹೊರಗೆ ಬಸಿಯಬೇಕು. ಕೆಳಭಾಗದಲ್ಲಿ ಉಳಿದಿರುವ ಬೆಳ್ಳಿಯ ಪುಡಿ ದ್ರಾವಣಕ್ಕೆ ಎರಡು ಲೀಟರಿನಷ್ಟು ಶುದ್ಧವಾದ ನೀರನ್ನು ಹಾಕಿ, ಅದಕ್ಕೆ ಒಂದು ಹಿಡಿಯಷ್ಟು ಅಡಿಗೆ ಉಪ್ಪನ್ನು ಸೇರಿಸಬೇಕು. ಜೊತೆಗೆ 1 ಗಡ್ಡೆ [ಸು. ೫ಗ್ರಾನಷ್ಟು] ಯಷ್ಟು ಸಯನೈಡ್ ಬೆರೆಸಿದರೆ ಬೆಳ್ಳಿಯೆಲ್ಲವೂ ಕರಗಿ ಬೆಳ್ಳನೆಯ ದ್ರಾವಣವಾಗುತ್ತದೆ. ಇದನ್ನೆ 'ಬೆಳ್ಳಿಯ ದ್ರಾವಣ' ಎನ್ನುತ್ತಾರೆ. ಅನಂತರ ಬೆಳ್ಳಿ ಪಾಲಿಷ್ ಮಾಡಬೇಕಾದ ಆಭರಣವನ್ನೂ 'ಚಿನ್ನದ ಪಾಲಿಷ್' ಮಾಡಿದಂತೆಯೇ, ಆಭರಣದೊಡನೆ ಸತುವಿನ ತಂತಿಯೊಂದನ್ನು ಹಿಡಿದು 'ಬೆಳ್ಳಿದ್ರಾವಣ'ದಲ್ಲಿ ನಾಲ್ಕೈದು ನಿಮಿಷದವರೆಗೆ ಅಲುಗಾಡಿಸಿದರೆ, ಆಭರಣದ ಮೇಲೆ 'ಬೆಳ್ಳಿಯು ಲೇಪನ'ವಾಗುತ್ತದೆ. ಇದನ್ನೇ ಬೆಳ್ಳಿಯ ಪಾಲಿಷ್ ಅಥವಾ 'ಲೇಪನ' ಮಾಡುವುದು ಎನ್ನುತ್ತಾರೆ★.

5 ಗ್ರಾಂ ಬೆಳ್ಳಿಚೂರು + ½ ಔಂಸು ನೈಟ್ರಿಕಾಮ್ಲ $\xrightarrow{\text{ಕಾಯಿಸು}}$ ಬೆಳ್ಳಿ + ನೀರು [ಬೆಳ್ಳಿ ಪುಡಿ]

ಬೆಳ್ಳಿ ಪುಡಿ + 2 ಲೀಟರ್ ನೀರು + 1 ಹಿಡಿ ಅಡಿಗೆ ಉಪ್ಪು + 5 ಗ್ರಾಂ ಸಯನೈಡು ⟶ ಬೆಳ್ಳಿ ದ್ರಾವಣ

★ ಚಿನ್ನ ಹಾಗೂ ಬೆಳ್ಳಿ ಪಾಲಿಷ್ ವಿಧಾನವನ್ನು ಆರ್. ಚಂದ್ರಶೇಖರಾಚಾರಿ ಎಂಬುವರು ಅವರ ತಂದೆಯವರಿಂದ ಕಲಿತಿರುವುದಾಗಿ ತಿಳಿಸಿರುತ್ತಾರೆ.

ಮಸೆ ಹಾಕುವುದು

ಉಂಗುರಕ್ಕೆ ಹರಳನ್ನು ಕೂರಿಸಿದ ನಂತರ ಹರಳಿನ ಸುತ್ತಲೂ ಇರುವ ಚಿನ್ನದ 'ಪಿಸರ'ನ್ನು 'ಪೋಗರೆ'ಯ ಸಹಾಯದಿಂದ ಮಡಿಸುತ್ತಾರೆ. ಇದರ ಮೇಲೆ 'ಮಸೆ ಸುತ್ತಿ' [ಚಿಕ್ಕ ಸುತ್ತಿಗೆ] ಯಿಂದ ಮೆಲ್ಲಗೆ ಬಡಿದು ಹರಳು ಬೀಳದಂತೆ ನಯವಾಗಿ ಕೂರಿಸುತ್ತಾರೆ. ಇದನ್ನೆ 'ಮಸೆ ಹಾಕುವುದು' ಎನ್ನುತ್ತಾರೆ. ಮಸೆ ಹಾಕಲು 'ಪೋಗರ'ಗಳು, ಸ್ರಾವಣ, ಕರ್‌ಸಾನು, ಮಸೆಸುತ್ತಿ, ಹಿಡಿ, ಪಟ್ಟಡಿ ಮುಂತಾದುವುಗಳ ಅಗತ್ಯವಿದೆ.

ಹೀಗೆ ಪ್ರತಿಯೊಂದು ಆಭರಣಗಳನ್ನೂ ತಯಾರಿಸಲು ವಿವಿಧ ಹಂತಗಳಿವೆಯಾದರೂ ನಾನಿಲ್ಲಿ ಒಂದೆರಡು ಆಭರಣಗಳ ತಯಾರಿಕೆಯ ಪರಿಚಯವನ್ನು ಕೊಡಲು ಬಯಸುತ್ತೇನೆ. ಉದಾಹರಣೆಗೆ 'ಉಂಗುರ':

ಮೊದಲು ಅಚ್ಚಿನ ಮಣೆಗೆ ಶುದ್ಧವಾದ ಮಣ್ಣನ್ನು [ಮೌಲ್ಡಿಂಗ್ ಮಣ್ಣು] ಭರ್ತಿ ಮಾಡಿ ಅದರೊಳಗೆ ಮಾದರಿ ಉಂಗುರಗಳನ್ನಿಟ್ಟು ಮಾರ್ಕನ್ನು ಮಾಡಿಕೊಳ್ಳಬೇಕು. ತಾವು ಬಳಸುವ ಬಂಗಾರ ಎಷ್ಟು ತೂಕದ್ದು, ಎಷ್ಟು ಉಂಗುರಗಳನ್ನು ಮಾಡಬೇಕೆಂಬುದರ ಆಧಾರದ ಮೇಲೆ ಚಿಕ್ಕದು ಅಥವಾ ದೊಡ್ಡದಾದ ಅಚ್ಚಿನ ಮಣೆಯನ್ನು ಅಣಿಗೊಳಿಸಿಕೊಳ್ಳಬೇಕು. ನಂತರ 'ಮೂಸೆ'ಯಲ್ಲಿ ಬಂಗಾರ, ಬೆಳ್ಳಿ ಹಾಗೂ ತಾಮ್ರವನ್ನು ತಾವು ಎಷ್ಟು ಕ್ಯಾರೆಟ್ಟಿನ ಉಂಗುರ ಮಾಡಬೇಕಿದೆಯೋ ಅದಕ್ಕೆ ತಕ್ಕಂತೆ ಈ ಲೋಹಗಳ ಮಿಶ್ರಣವನ್ನು ಕೂಡಿಸಿ 'ಅಗ್ಗಿಷ್ಟಿಕೆ'ಯಲ್ಲಿಟ್ಟು ತಿದಿಯ ಸಹಾಯದಿಂದ ಬೆಂಕಿಯನ್ನು ಉರಿಸುತ್ತಾರೆ. ಅದರೊಳಗೆ ಒಂದೆರಡು ಚಿಟಿಕೆಯಷ್ಟು 'ಅಡಿಗೆ ಸೋಡ'ವನ್ನೂ ಹಾಗೆಯೇ ಸ್ವಲ್ಪ 'ನವಸಾಗರ'ವನ್ನೂ ಹಾಕುತ್ತಾರೆ. ನಾವು ದೋಸೆ, ಇಡ್ಲಿ ಮಾಡುವಾಗ ಆ ಹಿಟ್ಟಿಗೆ ಸೋಡ ಬಳಸಿದರೆ ಹಿಟ್ಟು ಹೇಗೆ ಉಕ್ಕಿ ತಿಂಡಿಗಳು ಮೃದುವಾಗಿರುತ್ತವೆಯೋ ಹಾಗೆಯೇ ಇಲ್ಲಿ ಬಳಸಿದರೆ ಚಿನ್ನ, ಬೆಳ್ಳಿ, ತಾಮ್ರಗಳು ಒಂದಕ್ಕೊಂದು ಚೆನ್ನಾಗಿ ಮಿಶ್ರಣವಾಗುತ್ತವೆ. ಅಲ್ಲದೆ 'ನವಸಾಗರ' ಸೇರಿಸುವುದರಿಂದ ಏನಾದರೂ ಕಸವಿದ್ದಲ್ಲಿ ಹೋಗಿ ಬಂಗಾರ ಹೊಳೆಯಲು ಅನುಕೂಲವಾಗುತ್ತದೆ. ಜೊತೆಗೆ ಬಂಗಾರದ ದ್ರವವನ್ನು ಅಚ್ಚಿನ ಮಣೆಗೆ ಬಸಿಯುವಾಗ ಮೂಸೆಯಲ್ಲಿ ಸ್ವಲ್ಪವೂ ಉಳಿಯತಂತೆ ಸಹಕರಿಸುತ್ತದೆ. ಹೀಗೆ ಚೆನ್ನಾಗಿ ಬಂಗಾರದ ದ್ರಾವಣ ಕುದಿದ ನಂತರ 'ಕೊಕ್ಕಿಕ್ಕಳ' [ಓಂಪಟಕಾರ]

ದ ಸಹಾಯದಿಂದ ಅಚ್ಚಿನ ಮಣೆಗೆ ಸುರಿಯಬೇಕು. ಕೆಲವು ಸೆಕೆಂಡುಗಳಲ್ಲಿ ಇದು ಗಟ್ಟಿಯಾಗಿರುತ್ತದೆ. ಅಚ್ಚಿನ ಮಣೆಯ ಕವಾಟಗಳನ್ನು ತೆರೆದು ಒಳಗಡೆ ಇದ್ದ ಮಾದರಿ ಬಂಗಾರದ ಗಟ್ಟಿಯನ್ನು 'ಸ್ರಾವಣ'ದ ಸಹಾಯದಿಂದ ನೀರಿಗೆ ಅದಿಯುತ್ತಾರೆ. ಹೀಗೆ ಆರಿಸಿದ ನಂತರ ಅದಕ್ಕೆ ಯಾವ ಸೈಜು, ಆಕಾರ ಇತ್ಯಾದಿಯಾಗಿ ಮಾರ್ಕನ್ನು [ಗೆರೆ] ಹಾಕುತ್ತಾರೆ. ನಂತರ ಹಿಡಿಗೆ ಅದನ್ನು ಸಿಕ್ಕಿಸಿಕೊಂಡು ಡ್ರಿಲ್ಲಿಂಗ್ ಮಿಷನ್ನಿಗೆ 'ಬಿಟ್ಸ್' ಹಾಕಿಕೊಂಡು ಅದರಲ್ಲಿ ಹರಳು ಕೂರಿಸಲು ರಂಧ್ರವನ್ನು ಕೊರೆಯುತ್ತಾರೆ. ತಮಗೆ ಬೇಕಾದಂತೆ ಡಿಸೈನ್‌ಗೆ [ಆಕಾರಕ್ಕೆ] ಕತ್ತರಿಸಿಕೊಳ್ಳುತ್ತಾರೆ ಅನಂತರ ಅದನ್ನು ವರ್ತುಲಾಕಾರವಾಗಿ ಮಾಡಿಕೊಂಡು ಸುತ್ತಲೂ 'ಅರ' ದಿಂದ ಉಜ್ಜುತ್ತಾರೆ. ಹರಳು ಕೂರಿಸಬೇಕಾದ ಜಾಗದಲ್ಲಿ ಮೊದಲು 'ಅರ'ದಿಂದ ಉಜ್ಜುತ್ತಾರೆ. ಹರಳು ಕೂರಿಸಬೇಕಾದ ಜಾಗದಲ್ಲಿ ಮೊದಲು 'ಸೀಉಳಿ'ಯಿಂದ ಚಿನ್ನದ ಪಿಸರನ್ನು ಎತ್ತುತ್ತಾರೆ. ಅಲ್ಲಿಗೆ ಸ್ರಾವಣದ ಸಹಾಯದಿಂದ ಹರಳನ್ನು ಕೂರಿಸುತ್ತಾರೆ. ಹರಳನ್ನು ಕೂರಿಸಿದ ನಂತರ 'ಮಸೆ' ಹಾಕುತ್ತಾರೆ.

ಉಂಗುರವನ್ನು ಹಿಡಿದುಕೊಳ್ಳಲು ಅನುಕಾಲವಾಗುವಂತೆ ಹಿಡಿ [ಪಿಡಸರಾಯಿ] ಗೆ ಅದನ್ನು ಸಿಕ್ಕಿಸಿಕೊಳ್ಳುತ್ತಾರೆ. 'ಕರ ಸಾನಿ'ನಿಂದ 'ಮೆರುವೆ ಪೋಗರ'ವನ್ನು ಚೆನ್ನಾಗಿ ಉಜ್ಜಿ ಹಂತ ಮಾಡಿಕೊಂಡು ಸುತ್ತಲಿನ ಪಿಸರನ್ನು ಹರಳಿನ ಮೇಲೆ ಕೂರಿಸುತ್ತಾರೆ. ಮೆದುವಾಗಿ 'ಮಸೆ ಸುತ್ತಿ'ಯಿಂದ ಬಡಿಯುತ್ತಾರೆ. ಅನಂತರ 'ಸ್ವಯಂವರ'ಕ್ಕೆ ಉಂಗುರವನ್ನು ಸಿಕ್ಕಿಸಿಕೊಂಡು ತಮಗೆ ಬೇಕಾದ ಸೈಜಿಗೆ ತಕ್ಕಂತೆ ವರ್ತುಲಾಕಾರವನ್ನು ಮಾಡಿಕೊಂಡು 'ಬೆಳ್ಗಾರ'ದ ಸಹಾಯದಿಂದ 'ಬೆಸುಗೆ' ಹಾಕುತ್ತಾರೆ. ತಮಗೆ ಬೇಕಾದ ಆಕಾರಕ್ಕೆ ಅನುಗುಣವಾಗಿ ಅರಗಳಿಂದ ಉಜ್ಜುತ್ತಾರೆ. ಚಿನ್ನವನ್ನು ಕತ್ತರಿಸುವಾಗ ಆಭರಣಗಳನ್ನು ಉಜ್ಜುವಾಗ, ಮಸೆ ಹಾಕುವಾಗ ಕೆಳಗಡೆ ಒಂದು ಅಗಲವಾದ ಹಸುವಿನ ಚರ್ಮವನ್ನು ಬಳಸುತ್ತಾರೆ. ಅದರಲ್ಲಿ ಉದುರಿದ ಬಂಗಾರದ ಪುಡಿಯನ್ನು ಬ್ರಷ್ ಸಹಾಯದಿಂದ ಸಂಗ್ರಹಿಸಿ ಕರಗಿಸಿ ಮತ್ತೆ ಆಭರಣವನ್ನು ಮಾಡಲು ಅನುಕೂಲವಾಗುತ್ತದೆ. ಬೆಸುಗೆ ಕೆಲಸವೆಲ್ಲ ಮುಗಿದ ನಂತರ ಸ್ವಯಂವರಕ್ಕೆ ಸೇರಿಸಿಕೊಂಡು ಉಂಗುರದಲ್ಲಿನ ಉಬ್ಬು ತಗ್ಗುಗಳು ಸಮನಾಗುವಂತೆ ಮೊದಲು 'ಕೊಂಬಿನ ಸುತ್ತಿಗೆ'ಯಿಂದ ಸುತ್ತಲೂ ಬಡಿಯುತ್ತಾರೆ. ಇದರಿಂದ ಉಂಗುರದ ಮೇಲೆ ಅಷ್ಟಾಗಿ 'ಕಚ್ಚು' [ಗುರುತು] ಬೀಳದೆ ನಯಸ್ಸಾಗುವ ಸಂಭವ ಇರುತ್ತದೆ. ಇದರ ನಂತರ

'ನಯಸಾನಿ' ಕೆಲಸ ನಡೆಯುತ್ತದೆ. ಅಂತ್ಯದಲ್ಲಿ ಪಾಲಿಷ್ ಮಾಡಿ ಗ್ರಾಹಕರಿಗೆ ನೀಡುತ್ತಾರೆ. ಹೀಗೆ ಒಂದು ಉಂಗುರವನ್ನು ಮಾಡಬೇಕಾದಲ್ಲಿ ಸುಮಾರು ಎಂಟರಿಂದ ಹತ್ತು ಹಂತಗಳಲ್ಲಿ ಕೆಲಸ ಸಾಗುತ್ತದೆ.

ಕೆಲವರು ಉಂಗುರದ ಅಥವಾ ಯಾವುದೇ ಆಭರಣಗಳ ವಿವಿಧ ಹಂತಗಳನ್ನು ತಾವೊಬ್ಬರೇ ಮಾಡುತ್ತಾರಾದರೂ ಕೆಲವರು ಸಂಪೂರ್ಣ ಕೆಲಸವನ್ನು ಒಬ್ಬರೇ ಮಾಡುವುದಿಲ್ಲ. ಒಂದೊಂದು ಹಂತಕ್ಕೂ ಈ ಆಭರಣ ಹಲವರ ಕೈ ತಲುಪುವ ಹಂತವಿರುತ್ತದೆ. ಅಂದರೆ ಬಂಗಾರವನ್ನು ಕರಗಿಸಿ ಅಚ್ಚಿಗೆ ಹಾಕುವವನೇ ಒಬ್ಬ. ಅಚ್ಚಿನಿಂದ ಬಂದ ಗಟ್ಟಿಗೆ ಬೇಕಾದ ಚಿತ್ರ ಬರೆವವನು ಒಬ್ಬ; ಆಕಾರಕ್ಕೆ ಕೊರೆಯುವವ ಇನ್ನೊಬ್ಬ, ಅದಕ್ಕೆ ಹರಳು ಕೂರಿಸುವವನೇ ಮತ್ತೊಬ್ಬ. ಕೂರಿಸಿದ ನಂತರ ಪಾಲಿಷ್ ಮಾಡುವವ ಮಗುದೊಬ್ಬ. ಕೊನೆಯಲ್ಲಿ ನಯಸಾಗಿ ಮಾಡುವವನೇ ಒಬ್ಬ. ಹೀಗೆ ಹಲವು ಮಂದಿಯ ಕೈಯಾಡಿ ಒಂದು ಉಂಗುರ ಅಣಿಯಾಗುತ್ತದೆ. ಕಾರಣ ಒಂದೊಂದು ಕೆಲಸದಲ್ಲಿ ಒಬ್ಬೊಬ್ಬ ಪ್ರವೀಣನಾಗಿರುತ್ತಾನೆ.

ಪ್ರತಿಯೊಂದು ಆಭರಣಗಳೂ ಸಹ ವಿವಿಧ ಹಂತಗಳಲ್ಲಿ ಸಿದ್ಧವಾಗುತ್ತವೆ. ಪ್ರಾಚೀನ ಕಾಲದ ನಾಗರೀಕತೆಯನ್ನು ಗುರುತಿಸುವಾಗ ಅಕ್ಕಸಾಲಿಗರಿಂದ ರಚಿಸಲ್ಪಟ್ಟ ಆಭರಣ ವಿನ್ಯಾಸಗಳನ್ನು ಪರಿಗಣಿಸಲ್ಪಡುತ್ತದೆ. ಪ್ರಾಚೀನ ಶಿಲ್ಪಗಳಲ್ಲಿ, ಚಿತ್ರಗಳಲ್ಲಿ, ಆಭರಣಗಳಲ್ಲಿ ಅವರ ರಚನಾ ಕೌಶಲ ವ್ಯಕ್ತವಾಗಿದೆ. ಸಿಂಧೂ ಕಣಿವೆಯ ನಾಗರೀಕತೆಯಲ್ಲಿ ಅಕ್ಕಸಾಲಿಗರು ಬೆಳ್ಳಿ, ಬಂಗಾರ, ತಾಮ್ರದ ಆಭರಣಗಳನ್ನು ತಯಾರಿಸುವುದು ಕಂಡು ಬಂದಿದೆ. ಆಯಾ ಸಮಾಜದ ನಾಗರೀಕತೆಗೆ ತಕ್ಕಂತೆ ಅವರ ಆಭರಣಗಳ ಮಾದರಿಯಲ್ಲೂ ಬದಲಾವಣೆ ಆಗುತ್ತಿರುವುದನ್ನು ಕಾಣಬಹುದಾಗಿದೆ.

ಚಿನಿವಾರರು ಆಭರಣಗಳನ್ನು ತಯಾರಿಸಲು ಮಾದರಿ ಆಭರಣಗಳನ್ನೋ; ಮಾದರಿಯ ಚಿತ್ರವಿರುವ ಹೊತ್ತಿಗೆಗಳು [ಕ್ಯಾಟ್‌ಲಾಗ್] ಗಳನ್ನೋ ಬಳಸುತ್ತಾರೆ. ಇವರು ಕೇವಲ ಆಭರಣಗಳನ್ನು ಮಾತ್ರವೇ ಅಲ್ಲದೆ ತಟ್ಟೆಗಳು, ಲೋಟ, ಭರಣಿ, ದೇವರ ವಿಗ್ರಹಗಳು, ಪ್ರಭಾವಳಿಗಳು ಹೀಗೆ ಬೇರೆ ಬೇರೆಯವುಗಳನ್ನೂ ಮಾಡುತ್ತಾರೆ.

ಚಿನಿವಾರರ ಕೆಲಸಕ್ಕೆ ಸಾಕಷ್ಟು ಅಡೆತಡೆಗಳುಂಟಾಗುವುದು ಕಂಡು

ಬರುತ್ತದೆ. ಯಾವುದೇ ಒಂದು ಆಭರಣವನ್ನು ಪೂರ್ಣಗೊಳಿಸಲು ನಾನಾ ಹಂತಗಳಲ್ಲಿ ಬೇರೆ ಬೇರೆಯ ಪರಿಣತರಿಂದ ಎಂಬುದು ಈಗಾಗಲೇ ನಮಗೆ ತಿಳಿದಿದೆ. ಆಯಾ ಕೆಲಸಗಳ ಪರಿಣತರ ಕೊರತೆ ಇರಬಹುದು. ಅಥವಾ ಆಭರಣಗಳನ್ನು ಮಾಡಲು ಸಾಕಷ್ಟು ಬೆಳಕಿನ ಅಗತ್ಯ ಇರುತ್ತದೆ. ವಿದ್ಯುತ್ ಕೊರತೆ ಆದಾಗ ಕೆಲಸ ನಡುವೆಯೇ ನಿಲ್ಲಬಹುದು. ಅಗ್ಗಿಷ್ಟಿಕೆಗೆ ಬೇಕಾಗುವ ಇದ್ದಿಲಿನ ಕೊರತೆ ಆಗಬಹುದು. ಬಂಗಾರಕ್ಕೆ ಬಳಸುವ ವಿವಿಧ ಆಮ್ಲಗಳ ಕೊರತೆ ಇರಬಹುದು. ರಂಧ್ರಗಳನ್ನು ಕೊರೆಯಲು ಡ್ರಿಲ್ಲಿಂಗ್ ಮಿಷನ್‌ನ ಕೊರತೆ ಆಗಬಹುದು. ರಂಧ್ರಗಳ ಸೈಜಿಗೆ ಬೇಕಾದ 'ಬಿಟ್ಸ್' ಗಳ ಅಭಾವ ಇರಬಹುದು. ರಂಧ್ರಗಳ ಸೈಜಿಗೆ ಬೇಕಾದ 'ಬಿಟ್ಸ್'ಗಳ ಅಭಾವ ಇರಬಹುದು. ಕೊರೆಯುವಾಗ ಸರಿಯಾಗಿ ಕೊರೆಯದೆ ಮತ್ತೆ ಕರಗಿಸಿ ಅಚ್ಚಿಗೆ ಹಾಕಿ ಮತ್ತೆ ಮಾಡಬೇಕಾಗಬಹುದು. ಮಾರ್ಕ್ ಮಾಡುವವ ಬಹಳ ಪರಿಣಿತನಾಗಿರ ಬೇಕಾಗುತ್ತದೆ. ಅವರ ಕೊರತೆ ಕೂಡ ಆಗಬಹುದು. ಪಾಲಿಷ್ ಮಾಡಬೇಕಾದರೆ ಎಲಿಮಿನೇಟರ್ ಹಾಗೂ ವಿದ್ಯುತ್ ಕೊರತೆ ಆಗಬಹುದು. ಪರಿಣತನ ಅನಾರೋಗ್ಯದಿಂದಾಗಿ ಗ್ರಾಹಕರಿಗೆ ಒಪ್ಪಿಕೊಂಡ ಸಮಯಕ್ಕೆ ಕೊಡಲು ಸಾಧ್ಯವಾಗದಿರಬಹುದು.

ಬೆಳಿಗ್ಗೆಯಿಂದ ಸಂಜೆಯುವರೆಗೆ ಚಿನಿವಾರ ಕೂತು ಕೆಲಸ ಮಾಡಬೇಕಾಗುತ್ತದೆ. ಇವನಿಗೆ ಸೊಂಟದ ನೋವು ಬೇಗ ಉಂಟಾಗುತ್ತದೆ. ಕುಸುರಿ ಕೆಲಸ ಮಾಡುವಾಗ ಇವನ ಕಣ್ಣುಗಳಿಗೆ ಬಹಳ ಕಸರತ್ತನ್ನು ನೀಡಬೇಕಾಗುತ್ತದೆ. ಇದರಿಂದ ದೃಷ್ಟಿದೋಷ ಇವನಿಗೆ ಬಹಳ ಬೇಗ ಬರುವ ಸಂಭವ ಇರುತ್ತದೆ. ಕೆ.ಡಿ.ಎಂ. ಬೆಸುಗೆ ಮಾಡುವುದರಿಂದ ಅದರ ಹೊಗೆಯ ಸೇವನೆಯಿಂದ 'ಕ್ಯಾನ್ಸರ್' ಬರುವ ಸಾಧ್ಯತೆ ಇದೆಯೆಂದು ಇತ್ತೀಚೆಗೆ ತಿಳಿದು ಬಂದಿದೆ. ಸದಾಕಾಲ ಅಗ್ಗಿಷ್ಟಿಕೆಯ ನಡುವೆ ಇರುವುದರಿಂದ ಆತ ಕೆಲಸ ಮಾಡುವ ಕೊಠಡಿ ಬಹಳ ಚಿಕ್ಕದಿರುವುದರಿಂದ ಮೂಲವ್ಯಾಧಿ ಅಸ್ತಮ ಮುಂತಾದ ರೋಗಗಳಿಗೆ ಆತ ಬೇಗ ತುತ್ತಾಗುವ ಸಂಭವವಿರುತ್ತದೆ.

ಚಿನಿವಾರನು ಸುಮಾರು ಎಂಟ್ಹತ್ತು ವರುಷದ ಮಗುವಿನಿಂದಲೇ ಈ ವೃತ್ತಿಯಲ್ಲಿ ತೊಡಗುವುದರಿಂದ ಚಿನ್ನದ ಬಗೆಗೆ, ಆಭರಣಗಳ ಬಗೆಗೆ ಹೆಚ್ಚಿನ ಅನುಭವ ಇರುತ್ತದೆ. ಕೈಯಲ್ಲಿ ಹಿಡಿದ ತಕ್ಷಣ ಆ ಬಂಗಾರದ ಪ್ರಮಾಣ ಇಂತಿಷ್ಟು ಎಂಬುದಾಗಿ ಅಳತೆ ಮಾಡಬಲ್ಲ. ಇಷ್ಟು ತೂಕದ ಬಂಗಾರದಿಂದ

ಇಂತಿಂತೆ ಗಾತ್ರಗಳ ಆಭರಣಗಳನ್ನು ಮಾಡಬಹುದೆಂದು ನಿರ್ಣಯಿಸಬಲ್ಲ. ಒಮ್ಮೆ ಒಂದು ಆಕಾರವನ್ನು ನೋಡಿದರೇ ಸಾಕು. ಆತ ಅದನ್ನು ಮಾಡಿಯೇ ಸಾಧಿಸುವೆನೆಂಬ ಛಲ ಇರುವವನಾಗಿರುತ್ತಾನೆ. ಅವನ ಕೈಚಳಕದ ಮಾನದಂಡವೇನೆಂಬುದನ್ನು; ಎಷ್ಟೆಂಬುದನ್ನು ಇವತ್ತಿನ ಸೂಕ್ಷ್ಮಾತಿ- ಸೂಕ್ಷ್ಮ ಆಭರಣಗಳ ಮಾದರಿಯನ್ನು ನೋಡಿದರೆ ಹೇಳಬಹುದಾಗಿದೆ. ಆಭರಣಗಳ ತುಂಡುಗಳನ್ನು ಬೆಸೆದಿರುವ ಬಗೆ, ಕೆತ್ತನೆ ಕೆಲಸ ಮುಂತಾದುವುಗಳಿಂದ ಆತನ ಕಲೆ ಅಭಿವ್ಯಕ್ತಿಸಲ್ಪಟ್ಟಿರುತ್ತದೆ.

ಚಿನಿವಾರರು ಕೇವಲ ಆಭರಣಗಳು, ವಿಗ್ರಹಗಳು, ಗೃಹಬಳಕೆಯ ವಸ್ತುಗಳಾದ ತಟ್ಟೆ, ಲೋಟ, ಚೊಂಬು, ಉದ್ಧರಣೆ, ಭರಣಿಗಳೇ ಅಲ್ಲದೆ ನಾಣ್ಯಗಳನ್ನು ಕೆತ್ತುತ್ತಿದ್ದರೆಂದು ತಿಳಿದು ಬರುತ್ತದೆ. ಕನ್ನಡ ನಾಡಿನಲ್ಲಿ ನಾಣ್ಯಗಳು ಯಾವಾಗ ಬಳಕೆಗೆ ಬಂದಿತೆಂಬುದನ್ನು ಹೇಳುವುದು ಕಷ್ಟ ಸಾಧ್ಯ. ಬಹು ಪ್ರಾಚೀನ ಕಾಲದಲ್ಲಿ ನಾಣ್ಯ ಪದ್ಧತಿ ಆರಂಭವಾಗುವುದಕ್ಕೆ ಮುಂಚೆ ಕವಡೆ ಮುಂತಾದುವು ವಿನಿಮಯ ಮಾಧ್ಯಮವಾಗಿದ್ದುವು. ಇವುಗಳಿಗಿದ್ದ ನ್ಯೂನತೆಯನ್ನು, ತೊಂದರೆಯನ್ನು ತಪ್ಪಿಸಲೋಸುಗ ಚಿನ್ನದ ಚೂರುಗಳನ್ನು ಒಂದು ನಿರ್ದಿಷ್ಟ ಆಕಾರದಲ್ಲಿ ಕತ್ತರಿಸಿ ಬಳಸುವುದು ಪದ್ಧತಿಯಾಯಿತು. ಇದರಿಂದ ನಾಣ್ಯಪದ್ಧತಿ ವ್ಯವಸ್ಥೆಗೆ ಕಾರಣವಾಗಿದೆ.

ಚಿನಿವಾರರಲ್ಲಿ ಪುರುಷರು, ಸ್ತ್ರೀಯರು ಮತ್ತು ಮಕ್ಕಳು ಇದೇ ಕೆಲಸವನ್ನು ಮಾಡಬೇಕೆಂಬ ನಿಯಮಗಳಿಲ್ಲ. ಆದರೂ ಬಹಳ ಸೂಕ್ಷ್ಮವಾದ, ಕಠಿಣವಾದ ಕುಸುರಿ ಕೆಲಸಗಳನ್ನೆಲ್ಲ ಪುರುಷರೇ ಮಾಡುತ್ತಾರೆ. ಬಹುತೇಕ ಆಭರಣದ ಆದಿಯಿಂದ ಅಂತ್ಯದವರೆಗಿನ ಸಂಪೂರ್ಣ ಕೆಲಸವನ್ನೂ ಪುರುಷರೇ ಮಾಡುತ್ತಾರಾದರೂ ಸಣ್ಣಪುಟ್ಟ ಕೆಲಸಗಳಾದ ಹರಳನ್ನು ಕೂರಿಸುವುದು, ಮಸೆ ಹಾಕುವುದು, ಮುತ್ತುಗಳನ್ನು ಕೂರಿಸುವುದು, ತಿದಿ ಒತ್ತುವುದು ಮುಂತಾದ ಸಣ್ಣಪುಟ್ಟ ಕೆಲಸಗಳಲ್ಲಿ ಮಹಿಳೆಯೂ ಸಹಕರಿಸುತ್ತಾಳೆ. ಅವಳ ಸಂಪೂರ್ಣ ಕೆಲಸ ಮನೆಕೆಲಸವಾಗಿರುತ್ತದೆ. ಚಿಕ್ಕ ಮಕ್ಕಳು ಸುಮಾರು ಎಂಟ್ಹತ್ತು ವರ್ಷಗಳಿಂದಲೇ ಈ ಕೆಲಸದಲ್ಲಿ ಭಾಗವಹಿಸುವುದರಿಂದ ಪ್ರತಿನಿತ್ಯ ಕೊಠಡಿಯನ್ನು ಶುದ್ಧಮಾಡುವುದು, ಅಗ್ಗಿಷ್ಟಿಕೆಗೆ ಇದ್ದಿಲು ತುಂಬಿ ಬೆಂಕಿ ಹಚ್ಚಿ ಅಣಿ ಮಾಡುವುದು, ತಿದಿ ಒತ್ತುವುದು, ಬಂಗಾರ ಕರಗಿಸುವುದು, ಮೌಲ್ಡಿಂಗ್ ಮಾಡುವುದು, ಆಭರಣಗಳಿಗೆ ರಂಧ್ರ ಹಾಕುವುದು, ಉಜ್ಜುವುದು, ಬೆಸುಗೆ ಕೆಲಸ, ಹರಳು

ಅಥವಾ ಮುತ್ತುಗಳನ್ನು ಕೂರಿಸುವುದು, ಮಸೆ ಹಾಕುವುದು, ಆಭರಣಗಳನ್ನು ಸೋಪು ಕಾಯಿ ನೀರಿನಲ್ಲಿ ಉಜ್ಜಿ ತೊಳೆಯುವುದು, ಪಾಲಿಷ್ ಮಾಡುವುದು. ಹಿರಿಯರು ಕೇಳಿದ ಸಾಮಾನುಗಳನ್ನು ಒದಗಿಸುವುದು. ಅಂಗಡಿಗೆ ಬೇಕಾದ ಸಾಮಾನುಗಳನ್ನು ಬೇರೆಡೆಯಿಂದ ತರುವುದು ಹಾಗೂ ಬೇರೆಡೆಗೆ ಒಯ್ಯುವುದು ಹೀಗೆ ಹಲವಾರು ರೀತಿಯಲ್ಲಿ ತಮ್ಮ ಸಹಕಾರವನ್ನು ಒದಗಿಸುತ್ತಾರೆ. ಇವರುಗಳ ಅನುಭವದ ಮೇರೆಗೆ ಆಭರಣಗಳ ಸೂಕ್ಷ್ಮತೆಯ ಕೆಲಸವನ್ನು ಹಿರಿಯರು ಇವರಿಗೆ ವಹಿಸುತ್ತಾರೆ. ಆದರೆ ದೊಡ್ಡವರು ಇದೇ ಕೆಲಸ ಮಾಡಬೇಕು, ಚಿಕ್ಕವರು ಅದನ್ನು ಮಾಡಬಾರದೆಂಬ ನಿಯಮ ಇವರಲ್ಲಿಲ್ಲವೆಂಬುದು ಗೋಚರವಾಗುತ್ತದೆ. ಯಾರಿಗೂ ಸೀಮಿತವಾದ ಕೆಲಸಗಳು ಇಲ್ಲ.

ಚಿನಿವಾರರಲ್ಲಿ ಸಾಮಾನ್ಯವಾಗಿ ಈ ಕೆಲಸವನ್ನು ಕಲಿಸುವ ಪ್ರತ್ಯೇಕ ಸಂಸ್ಥೆಗಳಾಗಲೀ ಅಥವಾ ಪ್ರತ್ಯೇಕ ತರಬೇತಿಯ ಕ್ರಮಗಳಾಗಲೀ ಇರುವುದಿಲ್ಲ. ಇದು ವಂಶಪಾರಂಪರ್ಯವಾಗಿ ಬೆಳೆದು ಮುಂದುವರಿಯುತ್ತಿದೆ. ಚಿಕ್ಕಂದಿನಿಂದಲೇ ಇವರು ತಮ್ಮ ಮಕ್ಕಳನ್ನು ಅನುಭವಸ್ಥ ಕೆಲಸಗಾರರ ಜೊತೆಗೆ ಸೇರಿಸುತ್ತಾರೆ. ವಿದ್ಯೆ ಕಲಿಯುವುದಕ್ಕಿಂತಲೂ ಇವರಿಗೆ ಪರಂಪರೆಯ ಕೆಲಸ ಮುಖ್ಯವಾಗಿರುವುದ ರಿಂದ ಚಿನಿವಾರಿಕೆಯ ಕೆಲಸ ಮುಖ್ಯವಾಗಿರುತ್ತದೆ. ಹೀಗಾಗಿ ಈ ಮಕ್ಕಳು ಚಿಕ್ಕಂದಿನಿಂದಲೇ ಕುಸುರಿ ಕೆಲಸಗಳಲ್ಲಿ ತೊಡಗುತ್ತಾರೆ. ನುರಿತವರ ನಡುವೆ ಪಳಗಿದಷ್ಟೂ ಹೆಚ್ಚು ಹೆಚ್ಚು ಅನುಭವ ಇವರಿಗಾಗುತ್ತದೆ.

ಚಿನಿವಾರರ ವೃತ್ತಿಯ ಪಾರಿಭಾಷಿಕ ಪದಗಳ ಅರ್ಥಗಳನ್ನೆಲ್ಲ ಪರಿಚಯಿಸುವುದು ಕಷ್ಟಸಾಧ್ಯ. 'ಮಾಂಡಲಿಕ ಪದಕೋಶಮು' ಎಂಬುದಾಗಿ ಈ ವೃತ್ತಿಗೆ ಸಂಬಂಧಿಸಿದಂತೆ ಕೆಲವು ಸಂಪುಟಗಳಲ್ಲಿ ಪದಗಳು ಪರಿಚಯಿಸಲ್ಪಟ್ಟಿವೆ ಎಂದರೆ ಇದರ ವ್ಯಾಪ್ತಿ ಎಷ್ಟು ಹಿರಿದಾದುದು ಎಂಬುದು ವೇದ್ಯವಾಗುತ್ತದೆ. ಈ ಕಾರ್ಯ ಆಯಾ ಪ್ರದೇಶಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಜನರ ಕಾರ್ಯಕ್ಷೇತ್ರದಿಂದ ಸಾಧನೆಯಾಗಲು ಸಾಧ್ಯ. ಕೇವಲ ಒಂದು ಮೂಲೆಯಲ್ಲಿ ಕುಳಿತು ಒಬ್ಬನಿಂದ ಸಾಧಿಸಲಾಗದು. ಒಂದು ವಸ್ತುವನ್ನು ಕುರಿತು ವಿವಿಧ ಕ್ಷೇತ್ರಗಳಲ್ಲಿ ವಿವಿಧ ಹೆಸರುಗಳಿಂದ ವಾಚಿಸಲ್ಪಡುತ್ತದೆ. ಇದಕ್ಕೆ ಸಾಕಷ್ಟು ಸಮಯದ ಅಗತ್ಯತೆಯೂ ಇದೆ. ಕೆಲವು ದಿನಗಳಲ್ಲಿ ಇವರ ಸಂಪೂರ್ಣ ವಿವರವನ್ನು ಸಂಪ್ರದಾಯ-ಆಚರಣೆಗಳನ್ನು, ವಿಧಿ-ನಿಷೇಧಗಳನ್ನು ಪರಿಚಯಿಸಿಕೊಳ್ಳುವುದು ದುಸ್ಸಾಧ್ಯವಾಗುತ್ತದೆ. ಈ ಹಿನ್ನೆಲೆಯಲ್ಲಿ ಕೆಲವು

ದಿನಗಳಲ್ಲಿ ನಾನು ಮಾಡಿರುವ ಕ್ಷೇತ್ರ ಕಾರ್ಯದ ಆಧಾರದಿಂದ, ಕೆಲವು ಗ್ರಂಥಗಳ ಆಧಾರದಿಂದ ಹಾಗೂ ಕೆಲ ವಕ್ತೃಗಳ ಸಹಕಾರದಿಂದ ಈ ಲೇಖನವನ್ನು ಸಿದ್ಧಪಡಿಸಿದ್ದೇನೆ.

ಈ ಕಾರ್ಯವನ್ನು ನನಗೆ ವಹಿಸಿಕೊಟ್ಟ ಪುಸ್ತಕ ಪ್ರಾಧಿಕಾರಕ್ಕೆ ಧನ್ಯವಾದಗಳನ್ನು ಅರ್ಪಿಸುತ್ತೇನೆ. ಜೊತೆಗೆ ಕ್ಷೇತ್ರ ಕಾರ್ಯದಲ್ಲಿ ಹಲವಾರು ರೀತಿಯಲ್ಲಿ ಮಾರ್ಗದರ್ಶಿಗಳೂ, ಸಹಕಾರಿಗಳೂ ಆದ ಆತ್ಮೀಯರಿಗೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಕೆಲವರು ವಕ್ತೃಗಳಂತೂ ತಮ್ಮ ಅಮೂಲ್ಯ ಕೆಲಸವನ್ನು ತೊರೆದು, ನಾನು ಕೇಳಿದ ಪ್ರಶ್ನೆಗಳಿಗೆ ಶಾಂತರೀತಿಯಲ್ಲಿ ಉತ್ತರಿಸುತ್ತ, ತಾವು ಬಳಸುವ ವಿವಿಧ ಸಾಧನ-ಸಲಕರಣಗಳ ಪರಿಚಯವನ್ನೂ ಮಾಡಿಕೊಡುತ್ತ ನಗುಮುಖದಿಂದ ಕಳಿಸಿಕೊಡುತ್ತಿದ್ದ ಸಂದರ್ಭ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಈ ಎಲ್ಲ ವಕ್ತೃಗಳಿಗೂ ಅಭಿನಂದನೆಗಳನ್ನು ಸಲ್ಲಿಸುವುದು ನನ್ನ ಆದ್ಯ ಕರ್ತವ್ಯ. ಕೆಲ ಆತ್ಮೀಯ ಮಿತ್ರರು ಚಿನಿವಾರರ ಬಗೆಗೆ ತಮ್ಮಲ್ಲಿದ್ದ ಕೃತಿ ಮುಂತಾದ ಉಪಯುಕ್ತ ದಾಖಲಾತಿಗಳನ್ನೂ ಒದಗಿಸಿ ಸಹಕರಿಸಿದ್ದಾರೆ. ಹೀಗೆ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಸಹಕರಿಸಲ್ಪಟ್ಟ ಎಲ್ಲ ಬಂಧುಗಳಿಗೂ ನನ್ನ ಮನಃಪೂರ್ವಕ ವಂದನೆಗಳು ಸಲ್ಲುತ್ತವೆ.

ಆಕರ ಗ್ರಂಥಗಳು

(1) ಶ್ರೀ ಕಾಶ್ಯಪ ಶಿಲ್ಪ ಶಾಸ್ತ್ರಂ - ಜಿ.ಜ್ಞಾನಾನಂದ. ಪ್ರ.ವರ್ಷ. 1997

(2) ಪುರಾಣನಾಮಚೂಡಾಮಣಿ - ಬೆನಗಲ್ ರಾಮರಾವ್, ಪಾನ್ಯಂಸುಂದರಶಾಸ್ತ್ರಿ. ಪ್ರ.ವ. 1977.

(3) ಪುರಾಣ-ಭಾರತಕೋಶ-ಪಂಡಿತ್ ಯಜ್ಞನಾರಾಯಣ ಉಡುಪ - ಪ್ರ.ವ. 1975.

(4) ವಿಶ್ವಕರ್ಮೋಪಾಖ್ಯಾನ - ಜಿ. ಜ್ಞಾನಾನಂದ - ಪ್ರ.ವ. 1990.

(5) ಯಜುರ್ವೇದ ನಿತ್ಯಕರ್ಮ-ಶ್ರೀ ಬಿ. ಶಂಕರಶಾಸ್ತ್ರಿ - ಪ್ರ.ವ. 1982.

(6) ಶ್ರೀ ತೈತ್ತಿರೀಯ ನಿತ್ಯಕರ್ಮಾನುಷ್ಠಾನ ಸಂಗ್ರಹ - ಮ. ಗಂಗಾಧರಮೂರ್ತಿ - ಪ್ರ.ವ. 1947.

(7) ಕನ್ನಡ ಜಾನಪದ ವಿಶ್ವಕೋಶ. ಸಂ. ಡಾ।। ಚಂದ್ರಶೇಖರ ಕಂಬಾರ - ಸಂಪುಣ-೧. ಪ್ರ.ವ. 1985.

(8) ಕನ್ನಡ ಜಾನಪದ ವಿಶ್ವಕೋಶ. ಸಂ. ಡಾ।। ಚಂದ್ರಶೇಖರ ಕಂಬಾರ - ಸಂಪುಟ-೨. ಪ್ರ.ವ. 1985.

(9) ಸುವರ್ಣ ಜಾನಪದ - ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ. ಪ್ರ.ವ. 1998.

(10) ಬೆತ್ತಲೆ ಗಾದೆಗಳು. ರಾಗೌ.ತೃ.ಮುದ್ರಣ.ಸಂ.ಬಿ.ಬಿ. ಬಿರಾದಾರ. ಪ್ರ.ವ. 1986.

(11) ನಮ್ಮ ಗಾದೆಗಳು. ರಾಗೌ. ತೃ. ಮುದ್ರಣ. 1986.

(12) ಪ್ರಬುದ್ಧ ಕರ್ಣಾಟಕ, ಅಮೃತ ಸಂಪುಟ. 1993-94 ಪ್ರಸಾರಾಂಗ ಮೈಸೂರು ವಿ.ವಿ.

(13) ಕನ್ನಡ ನಿಘಂಟು, ಮೊದಲನೆಯ ಸಂಪುಟ. ಕನ್ನಡ ಸಾಹಿತ್ಯ ಪರಿಷತ್ತು. ಪ್ರ.ವ. 1970.

(14) ಕನ್ನಡ ನಿಘಂಟು, ಮೂರನೆಯ ಸಂಪುಟ. ಪ್ರ.ವ. 1977.

(15) ಕನ್ನಡ ಗಾದೆಗಳ ಮಹಾಕೋಶ. ಹು.ಮ. ರಾಮಾರಾಧ್ಯ. ಪ್ರ.ವ. 1982.

(16) ಕನ್ನಡ ವಿಶ್ವಕೋಶ. ಸಂಪುಟ-ಏಳು. ಕನ್ನಡ ಅಧ್ಯಯನ ಸಂಸ್ಥೆ. ಪ್ರ.ವ. 1974.

(17) ಪ್ರವಾಸಿ ಕಂಡ ಇಂಡಿಯಾ, ಸಂಪುಟ-ಏಳು. ಎಚ್.ಎಲ್. ನಾಗೇಗೌಡ. ಪ್ರ.ವ. 1983.

(18) ಕರ್ನಾಟಕ ಕನ್ನಡ ವಿಷಯ ವಿಶ್ವಕೋಶ. ಪ್ರ.ವ. 1979.

ವಕ್ತೃಗಳ ಪರಿಚಯ :

(1) ಯಜಮಾನ್ ನರಸಿಂಹಾಚಾರ್.ಬಿನ್.ನರಸಿಂಹಾಚಾರ್. 65 ವರ್ಷ ಬಳಿಘಟ್ಟ ಪಾಂಡವಪುರ ತಾಲ್ಲೂಕು, ಮಂಡ್ಯಜಿಲ್ಲೆ.

(2) ಚಿನ್ನಸ್ವಾಮಾಚಾರಿ 86 ವರ್ಷ, ಮೇಲುಕೋಟೆ.

(3) ಪುಟ್ಟಸ್ವಾಮಾಚಾರ್ ಬಿನ್ ಅಣ್ಣಸ್ವಾಮಾಚಾರ್, 56 ವರ್ಷ ಕದಲಗೆರೆ, ಮಂಡ್ಯಜಿಲ್ಲೆ.

(4) ಕಾಶಿ ವಿಶ್ವನಾಥಮೂರ್ತಿ ಎಂ.ಕೆ. 40 ವರ್ಷ ಮೇಲುಕೋಟೆ, ಮಂಡ್ಯಜಿಲ್ಲೆ.

(5) ಬನುಮಾಚಾರ್, 63 ವರ್ಷ, ಬಳಿಘಟ್ಟ, ಮಂಡ್ಯ ಜಿಲ್ಲೆ.

(6) ಕುಮಾರ್ ಬಿನ್ ಸುಬ್ಬಣ್ಣಾಚಾರ್, 36 ವರ್ಷ, ಚನ್ನರಾಯಪಟ್ಟಣ, ಹಾಸನಜಿಲ್ಲೆ.

(7) ಬಿ.ಎಂ. ಕೃಷ್ಣಾಚಾರ್ ಬಿನ್ ಮೊಗಣ್ಣಾಚಾರ್, 45 ವರ್ಷ, ಬಸವನಾಯ್ಕನಹಳ್ಳಿ, ಹಾಸನಜಿಲ್ಲೆ.

(8) ನಾಗರತ್ನಮ್ಮ ಕೋಂ. ಗಣಪತಿ ಆಚಾರ್, 48 ವರ್ಷ, ತಾವರೆಕೆರೆ, ಹೊಸಕೋಟೆ.

(9) ಕೆ. ಆನಂದಾಚಾರ್ ಬಿನ್ ಆದಿನಾರಾಯಣಾಚಾರ್. 42 ವರ್ಷ, ಮೋತಕಪಲ್ಲಿ, ಕೆ.ಜಿ.ಎಫ್.

(10) ಆರ್. ಚಂದ್ರಶೇಖರಾಚಾರಿ. ಬಿನ್. ರಾಮಚಂದ್ರಾಚಾರಿ, 50 ವರ್ಷ, ಜಕ್ಕರಸನಕುಪ್ಪ, ಕ್ಯಾಸಂಬಳ್ಳಿ ಹೋಬಳಿ, ಬಂಗಾರಪೇಟೆ ತಾಲ್ಲೂಕು, ಕೋಲಾರ ಜಿಲ್ಲೆ.

(11) ಎಲ್. ಸುಬ್ರಮಣ್ಯಾಚಾರಿ ಬಿನ್. ಲಕ್ಷ್ಮಣಾಚಾರಿ, 45 ವರ್ಷ, ಕೆ.ಜಿ.ಎಫ್.

(12) ಸಿ. ಪಾಪಾಚಾರಿ, 69 ವರ್ಷ, ಪುರೋಹಿತರು, ಕೆ.ಜಿ.ಎಫ್.

(13) ಶ್ರೀನಿವಾಸಾಚಾರಿ ಬಿನ್ ಆರ್. ನಾರಾಯಣಾಚಾರಿ, ಕೆ.ಜಿ.ಎಫ್.

(14) ಬ್ರಹ್ಮಯ್ಯಾಳಾಚಾರಿ ಬಿನ್ ಗೋವಿಂದಾಚಾರ್, 65 ವರ್ಷ, ಕೋಲಾರ ಜಿಲ್ಲೆ.

(15) ಗಣಪತಿ ಆಚಾರ್, ವಳಾಪನಪಲ್ಲಿ 48 ವರ್ಷ, ಕೋಲಾರ ಜಿಲ್ಲೆ.

(16) ಪ್ರಭಾಕರಾಚಾರಿ ಬಿನ್ ಬ್ರಹ್ಮಾಚಾರಿ, 38 ವರ್ಷ, ಕೋಲಾರ ಜಿಲ್ಲೆ.

(17) ಎಂ. ಕೃಷ್ಣಾಚಾರ್, 38 ವರ್ಷ, 3ನೇ ಅಡ್ಡರಸ್ತೆ, ರಾಬರ್ಟ್‌ಸನ್ ಪೇಟೆ.

(18) ಶಿವಶಂಕರಾಚಾರ್ ಬಿನ್ ನಳಿನಾಚಾರ್, 33 ವರ್ಷ, ಬೆಮೆಲ್ ನಗರ.

(19) ಮಲ್ಲೇಶ್ ಆಚಾರ್, 40 ವರ್ಷ ಚಿಕ್ಕಬಳ್ಳಾಪುರ.

(20) ಎಂ. ಚಂದ್ರಾಚಾರಿ ಬಿನ್ ಮುನಿಸ್ವಾಮಾಚಾರಿ, 30 ವರ್ಷ, ತೀರ್ಥ.

(21) ಜಿ. ಜ್ಞಾನಾನಂದ, 58 ವರ್ಷ, ಬೆಮೆಲ್ನಗರ್.

(22) ಸಂತ ಜ್ಞಾನಾನಂದ, 58 ವರ್ಷ, ಬೆಮೆಲ್‌ನಗರ.

(23) ಸುಧ ರಂಗರಾಜು, 43 ವರ್ಷ, ಬೆಂಗಳೂರು.

(24) ವೆಂಕಟರಮಣಾಚಾರ್, 48 ವರ್ಷ, ರಾಬರ್ಟ್‌ಸನ್‌ಪೇಟೆ.

(25) ಶ್ರೀನಿವಾಸಾಚಾರಿ ಬಿನ್. ಆರ್. ನಾರಾಯಣಾಚಾರಿ, 34 ವರ್ಷ, ಕೆ.ಜಿ.ಎಫ್.

(26) ಅನ್ವರ್ ಅಲಿಖಾನ್ ಬಿನ್ ಅಹಮದ್ ಖಾನ್, 28 ವರ್ಷ, ಪಾಲಿಷ್ ಕೆಲಸ, ಕೆ.ಜಿ.ಎಫ್.

(27) ಆರ್. ಪ್ರಭಾಕರ ಪತ್ತರ್, 44 ವರ್ಷ, ಊರಿಗಂಪೇಟೆ.

(28) ಶಾರದಮ್ಮ ಕೋಂ. ರಾಮಚಂದ್ರಾಚಾರಿ, 45 ವರ್ಷ, ಗುಡಿಬಂಡೆ.

(29) ರಾಮಚಂದ್ರಾಚಾರಿ, 50 ವರ್ಷ, ಗುಡಿಬಂಡೆ.

(30) ಶೇಖರ್ ಬಿನ್ ನಟೇಶಾಚಾರಿ, 38 ವರ್ಷ, ರಾಬರ್ಟ್‌ಸನ್ ಪೇಟೆ.

(31) ರುಕ್ಮಿಣಿ ಪತ್ತರ್ ಕೋಂ. ಪ್ರಭಾಕರ ಪತ್ತರ್, 40 ವರ್ಷ, ಊರಿಗಂಪೇಟೆ.

(32) ದಾಕ್ಷಾಯಿಣಿ, 38 ವರ್ಷ, ಊರಿಗಂಪೇಟೆ.

(33) ವೆಂಕಬಾಯಿ ಬಡಿಗೇರ, 35 ವರ್ಷ, ಊರಿಗಂಪೇಟೆ.

(34) ಗಿರಿಜಮ್ಮ, 36 ವರ್ಷ, ಬೆಂಗಳೂರು.

(35) ಶ್ರೀನಿವಾಸಾಚಾರಿ, 42 ವರ್ಷ, ಬಂಗಾರಪೇಟೆ.

(36) ಕೃಷ್ಣಾಚಾರ್ ಬಿನ್ ರಾಮಾಚಾರ್, 53 ವರ್ಷ, 6ನೇ ಕ್ರಾಸ್, ಕೆ.ಜಿ.ಎಫ್.

(37) ರಾಮಕೃಷ್ಣಾಚಾರಿ, 46 ವರ್ಷ, ಪುರೋಹಿತರು, ಪಾಪಾಚಾರಿ ಶಿಷ್ಯ, ಕೆ.ಜಿ.ಎಫ್.


(38) ಶಿವಾನಂದ ಬಿನ್ ಬಸವಾಚಾರ್, 32 ವರ್ಷ, ಚನ್ನರಾಯಪಟ್ಟಣ.

(39) ಮಂಜಾಚಾರ್ ಬಿನ್ ನಂಜಾಚಾರ್, 38 ವರ್ಷ, ಕಟ್ಟೆಪುರ, ಅರಕಲಗೂಡು ತಾ।, ಹಾಸನಜಿಲ್ಲೆ.


(40) ಚಂದ್ರಾಚಾರಿ ಬಿನ್ ಬಸವಾಚಾರ್, 49 ವರ್ಷ, ಚನ್ನರಾಯಪಟ್ಟಣ.

(41) ರುದ್ರೇಗೌಡ, ಕಾಚೇನಹಳ್ಳಿ, ಚನ್ನರಾಯಪಟ್ಟಣ ತಾಲ್ಲೂಕು, ಹಾಸನ ಜಿಲ್ಲೆ.


ಗೋತ್ರ - ಹೋಮಕುಂಡಗಳು - ಮಂತ್ರಗಳು




1. ಸಾನಗ ಗೋತ್ರ
ಏಕ್ಕ್ಷರೀ ಹೋಮಕುಂಡ
ಏಕಾಕ್ಷರೀ ಮಂತ್ರ




2. ಸನಾತನ ಗೋತ್ರ
ಚತುರಾಕ್ಷರೀ ಹೋಮಕುಂಡ
ಚತುರಾಕ್ಷರೀ ಮಂತ



ಅಯುಭವನಸ ಗೋತ್ರ
ಪಂಚಾಕ್ಷರೀ ಹೋಮ ಕುಂಡ; ಪಂಚಾಕ್ಷರೀ ಮಂತ್ರ



4. ಪ್ರತ್ನಸ ಗೋತ್ರ
ಷತಾಕ್ಷರೀ ಹೋಮ ಕುಂಡ
ಷತಾಕ್ಷರೀ ಮಂತ್ರ



5. ಸುಪರ್ಣಗೋತ್ರ ಅಷ್ಟಾಕ್ಷರೀ
ಹೋಮಕುಂಡ ಅಷ್ಟಾಕ್ಷರೀ ಮಂತ್ರ



ಶ್ರೀ ವಿಶ್ವಕರ್ಮ ಪರಮೇಶ್ವರ
ವಂದೇ ಶಿಲ್ಪ ಸಹಸ್ರ ಮೂಲಪುರುಷರಿ





ಶ್ರೀ ಗಾಯತ್ರಿ ಮಾತೆ
ವೇದ ಸ್ತುತಾಂ ದೇವೀಂ ಜಗನ್ಮಾತರಂ




ವಿಶ್ವಜ್ಞ ಬ್ರಹ್ಮ - ಸ್ವರ್ಣಶಿಲ್ಪದ ಮೂಲ ಪ್ರವರ್ತಕ
ವಿಶ್ವಕರ್ಮನ ಈಶಾನ ಮುಖೋದ್ಭವ. ಆದ್ದರಿಂದ ಈಶಾನ ಮೂರ್ತಿ

ಚಿನಿವಾರರು ಬಳಸುವ ಪ್ರಮುಖ ಉಪಕರಣಗಳು






ದಿಂಡು (ಚಂದ್ರಿಕೆ)




ಸುತ್ತಿಗೆ




ಕತ್ತರಿ




ಮೊರ



ಮೇಜು



ದೀಪ (ಚಿಮಣಿ)



ಬ್ರಷ್

ವಿವಿಧ ಬಗೆಯ ಅರಗಳು, ಚಾಣಗಳು, ಪೋಗರೆಗಳು, ಇಕ್ಕಳಗಳು, ಪಾಳಾರಿಯ ಅಚ್ಚು, ಬೈರಿಗೆ, ಬರ್ಮ, ಕಂಪಾಸು, ಸ್ರಾವಣಗಳು, ಕದರ ಸಟ್ಟುಗಳು, ಬೆಸೆಯೊಹಲಗೆ, ಬೆಳಗಾರದ ಹಲಗೆ, ತ್ರಾಸು, ಬಟ್ಟುಗಳು, ಅಗಲವಾದ ಚರ್ಮದ ತುಂಡು, ವಿದ್ಯುತ್ ದೀಪ, ಸುತ್ತಿಗೆ ಮುಂತಾದ ಸಾಧನಗಳ ಬಳಕೆ ಬಹಳ ಮುಖ್ಯವಾದುವಾಗಿವೆ.

ದಕ್ಷಿಣ ಕನ್ನಡದಲ್ಲಿ ಚಿನಿವಾರಿಕೆ

ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್

ಪ್ರಾಚೀನ ಕಾಲದಲ್ಲಿ ಅಶನ, ವಸನ, ವಸತಿಗಳೇ ಮನುಷ್ಯನ ಮೂಲಭೂತ ಅವಶ್ಯಕತೆಗಳಾಗಿದ್ದುವು. ಆಲೋಚನಾ ಶಕ್ತಿ ಬೆಳೆದಂತೆ ಆತನಲ್ಲಿ ಸೌಂದರ್ಯ ಪ್ರಜ್ಞೆ ಕೂಡಾ ಬೆಳೆಯುತ್ತಾ ಬಂತು, ಸೌಂದರ್ಯ ಪ್ರಜ್ಞೆ ಮನಸ್ಸನ್ನು ಸೊಗಸಿನ ಕಡೆಗೆ ಜಾಗೃತಗೊಳಿಸುತ್ತದೆ. ಇದು ಭಾವನಾ ಪ್ರಪಂಚಕ್ಕೆ ಸಂಬಂಧಿಸಿದ ವಿಚಾರವಾದರೂ ಇದಕ್ಕೆ ಹಿನ್ನೆಲೆಯಾಗಿ ಒಂದು ವಸ್ತು ಅಥವಾ ವಿಷಯದ ಪ್ರಚೋದನೆ ಇದ್ದೇ ಇರುತ್ತದೆ. ಬಾಹ್ಯ ಪ್ರಚೋದನೆಯಿಂದ ಮನಸ್ಸಿನಲ್ಲಿ ಭಾವನೆಗಳು ಉದ್ಭವಿಸುತ್ತವೆ. ಒಂದು ಕ್ರಿಯೆಯ ಬಗ್ಗೆ ಮನಸ್ಸಿನಲ್ಲಿ ಉಂಟಾಗುವ ಸುಂದರ ಪ್ರತಿಕ್ರಿಯೇ ಸೌಂದರ್ಯ ಪ್ರಜ್ಞೆಯ ಜ್ಞಾನದಲ್ಲಿ ಮನಸ್ಸು ಮತ್ತು ವಸ್ತುಗಳೆರಡೂ ಪ್ರಧಾನ ಅಂಶಗಳಾಗಿವೆ.

"ಮಾನವ ತನ್ನನ್ನು ಪ್ರೀತಿಸಿಕೊಂಡಷ್ಟು ಇನ್ನ್ಯಾರನ್ನೂ ಪ್ರೀತಿಸುವುದಿಲ್ಲ" ಎಂಬೊಂದು ಮಾತಿದೆ. ಪ್ರಾಚೀನ ಕಾಲದಿಂದಲೂ ಮಾನವರು ತಮ್ಮ ದೇಹ ಸೌಂದರ್ಯವನ್ನು ಹೆಚ್ಚಿಸುವ ದೃಷ್ಟಿಯಿಂದ ಬಗೆ ಬಗೆಯ ಅಲಂಕಾರ ಸಾಧನಗಳನ್ನು ಸೃಷ್ಟಿಸುತ್ತಲೇ ಬಂದಿದ್ದಾರೆ. ಅಲಂಕಾರ ಸಾಧನಗಳಲ್ಲಿ ಆಭರಣಗಳು ಪ್ರಮುಖ ಸ್ಥಾನ ಪಡೆಯುತ್ತವೆ. ಆಭರಣಗಳ ಬಳಕೆ ಸುಮಾರು ೫೦೦೦ ವರ್ಷಗಳಷ್ಟು ಹಿಂದಿನದು. ಲೋಹದ ಸಂಶೋಧನೆಯಾಗುವ ಮೊದಲು ಮಾನವರು ಅಲಂಕಾರಕ್ಕಾಗಿ ಕವಡೆ, ಚಿಪ್ಪು, ದಂತ, ಬೆಂಡು, ಗರಿ, ಬಣ್ಣದ ಕಲ್ಲು ಇತ್ಯಾದಿಗಳನ್ನೆಲ್ಲಾ ಬಳಸುತ್ತಿದ್ದರು. ಚಿನ್ನದ ಸಂಶೋಧನೆಯಾದ ಬಳಿಕ ಚಿನ್ನದಿಂದ ಆಭರಣಗಳನ್ನು ತಯಾರಿಸಿ ಧರಿಸಿಕೊಳ್ಳುವ ಪದ್ಧತಿ ರೂಢಿಗೆ ಬಂತು.

ಜಗತ್ತಿನಲ್ಲಿ ಮೊತ್ತ ಮೊದಲು ಸಂಶೋಧನೆಯಾದ ಲೋಹ ತಾಮ್ರವಾದರೂ ಚಿನ್ನವು ಅದಕ್ಕಿಂತ ಮೇಲ್ಮಟ್ಟದ ಸ್ಥಾನವನ್ನು ಪಡೆಯಿತು. ಕಿಲುಬು ಹಿಡಿಯದ, ತುಕ್ಕು ಹಿಡಿಯದ, ಹೆಚ್ಚು ಸಾಂದ್ರತೆಯನ್ನು ಹೊಂದಿರುವ

ಮತ್ತು ಅದರಲ್ಲಿರುವ ಹೊಳೆಯುವ ಗುಣವೇ ಇದಕ್ಕೆ ಕಾರಣ. 'ಪೊನ್' ಎಂದರೆ ಹೊಳೆಯುವಂಥದ್ದು ಎಂಬ ಅರ್ಥ ಇದ್ದು, ಲೋಹಕ್ಕೆ ಬಳಕೆಯಾಗುವ ಪದವಾಗಿದ್ದರೂ ಈಗ ಚಿನ್ನ ಎಂಬ ಪದಕ್ಕೆ ಮಾತ್ರ ಪರ್ಯಾಯವಾಗಿ ಬಳಸಲ್ಪಡುತ್ತದೆ. ಲೋಹಗಳಲ್ಲೆಲ್ಲಾ ಚಿನ್ನವೇ ಶ್ರೇಷ್ಠವಾದುದರಿಂದ ಅದನ್ನೇ ಪೊನ್ ಅಥವಾ ಹೊನ್ನು ಎಂದೀಗ ಕರೆಯಲಾಗುತ್ತದೆ.

ಹೊಸ ಶಿಲಾಯುಗದ ಆರಂಭ ಕಾಲದ (ಕ್ರಿ.ಪೂ. ೩೦೦೦ ಕ್ಕಿಂತ ಪೂರ್ವ) ಆಭರಣಗಳು ತೆಕ್ಕಲ ಕೋಟೆಯ ಉತ್ಖನನದಿಂದ ದೊರೆತಿವೆ. ಆಂಧ್ರಪ್ರದೇಶದ ಜಗ್ಗಯ್ಯ ಪೇಟೆಯಲ್ಲಿ ದೊರೆತ ಕ್ರಿಸ್ತಪೂರ್ವ ಒಂದನೆಯ ಶತಮಾನದ ಕರ್ಣಾಭರಣವೊಂದು ನ್ಯೂಯಾರ್ಕಿನ ವಸ್ತು ಸಂಗ್ರಹಾಲಯದಲ್ಲಿದೆ. ಭಾರತದಲ್ಲಿ ಮೊತ್ತ ಮೊದಲಿಗೆ ಕರ್ನಾಟಕದಲ್ಲಿ ಚಿನ್ನದ ಗಣಿಯು ಸಂಶೋಧನೆಯಾಯಿತು. ಹೊಸ ಶಿಲಾಯುಗದ ಕಾಲದಲ್ಲಿ ಹಟ್ಟಿ ಮತ್ತು ಕೋಲಾರದ ಕೆಲವು ಪ್ರದೇಶಗಳಲ್ಲಿ ಚಿನ್ನದ ಅದಿರೆತ್ತಲು ಮಾಡಿದ ಗುಳಿಗಳು ಕಂಡು ಹಿಡಿಯಲ್ಪಟ್ಟಿವೆ. ಗಣಿಕಾರರು ಕರ್ನಾಟಕದ ವಿವಿಧ ಭಾಗಗಳ ಹರಳುಗಳನ್ನು ಪರೀಕ್ಷಿಸಿ ಅಲ್ಲಲ್ಲಿ ಚಿನ್ನ ದೊರೆಯುವ ಸಾಧ್ಯತೆಗಳನ್ನು ಪರಿಶೀಲಿಸಿದ್ದರು. ಆ ಕಾಲದಲ್ಲಿ ಕೋಲಾರ, ಮೈಸೂರು, ಶಿವಮೊಗ್ಗ, ರಾಯಚೂರು ಜಿಲ್ಲೆಗಳಲ್ಲಿ ಚಿನ್ನದ ನಿಕ್ಷೇಪ ಹೊರತೆಗೆಯಲು ಪ್ರಯತ್ನ ಮಾಡಲಾಗಿತ್ತು. ಕರ್ನಾಟಕದ ಅತ್ಯಂತ ಪ್ರಾಚೀನ ಚಿನ್ನದ ಗಣಿ ಹಟ್ಟಿ, ಆಧುನಿಕ ಕಾಲದಲ್ಲಿ ಚಿನ್ನದ ನಿಕ್ಷೇಪಗಳನ್ನು ಕಂಡು ಹಿಡಿಯಲು ಬಳಸುವ ತಂತ್ರಜ್ಞಾನವನ್ನು ಪ್ರಾಚೀನ ಕಾಲದ ಜನರೂ ಹೊಂದಿದ್ದರು. ಏಕೆಂದರೆ ಹಿಂದೆ ಯಾವ ಪ್ರದೇಶಗಳನ್ನು ಚಿನ್ನದ ಅದಿರು ಹುದುಗಿರಬಹುದೆಂದು ಊಹಿಸಿ ಅಗೆದಿದ್ದರೋ ಆ ಸ್ಥಳವನ್ನು ಬಿಟ್ಟು ಇನ್ನಿತರ ಯಾವ ಸ್ಥಳದಲ್ಲೂ ಇಂದಿನ ಭೂ ಗರ್ಭ ಶಾಸ್ತ್ರಜ್ಞರಿಗೂ ಚಿನ್ನದ ಅದಿರನ್ನು ಪತ್ತೆ ಮಾಡಲು ಸಾಧ್ಯವಾಗಲಿಲ್ಲ. ಭಾರತದಲ್ಲಿ ಕರ್ನಾಟಕವನ್ನು ಬಿಟ್ಟರೆ ಬೇರೆಲ್ಲೂ ಚಿನ್ನದ ಅದಿರು ದೊರೆಯುತ್ತಿರಲಿಲ್ಲವಾದ ಕಾರಣ ಸಿಂಧೂ ನದಿ ಕಣಿವೆಯ ನಾಗರಿಕರಿಗೆ ಆಭರಣ ತಯಾರಿಗೆ ಕರ್ನಾಟಕದಿಂದಲೇ ಚಿನ್ನ ಪೂರೈಕೆಯಾಗುತ್ತಿದ್ದಿರಬಹುದು.

ಕ್ರಿ.ಪೂ. ೨೫೦೦ರಷ್ಟು ಪ್ರಾಚೀನ ಕಾಲದಲ್ಲಿ ಸಿಂಧೂ ನದಿಯ ನಾಗರಿಕರು ಚಿನ್ನದ ಆಭರಣಗಳನ್ನು ಧರಿಸುತ್ತಿದ್ದರು. ಸ್ತ್ರೀ ಪುರುಷರು ಬೆಳ್ಳಿ ಬಂಗಾರ ಮತ್ತು

ತಾಮ್ರದಿಂದ ಮಾಡಿದ ವಿವಿಧ ಬಗೆಯ ಆಭರಣಗಳಿಂದ ಅಲಂಕಾರ ಮಾಡಿಕೊಳ್ಳುತ್ತಿದ್ದರು. ಅವುಗಳಲ್ಲಿ ತೋಳಬಂದಿ (armlet) ಮಣಿಸರ ಮತ್ತು ಕೇಶರಾಶಿಯನ್ನು ಬಿಗಿ ಹಿಡಿದು ಕಟ್ಟಿಕೊಳ್ಳುವ ತಲೆಗೂದಲ ಪಟ್ಟಿಗಳನ್ನು (villet) ಪುರುಷರು ಕೂಡಾ ಧರಿಸುತ್ತಿದ್ದರು, ಇವೆಲ್ಲವುಗಳ ಜೊತೆಗೆ ಸ್ತ್ರೀಯರು ಓಲೆ, ಕೈಬಳೆ, ಮೂಗುತಿ, ಮೆರುಗು ಕೊಟ್ಟ ಡಾಬು (girdle) ಕೊರಳಹಾರ, ಉಂಗುರ, ಕಾಲಂದಿಗೆಗಳನ್ನು ಉಪಯೋಗಿಸುತ್ತಿದ್ದರು. ಕಂಚಿನ ಕನ್ನಡಿಗಳನ್ನು ಬಳಸುತ್ತಿದ್ದರು. ಆಭರಣಗಳಿಗೆ ನೀಲಿ, ಕೆಂಪು, ಪಚ್ಚೆ, ಹವಳ ಮುಂತಾದ ಹರಳುಗಳನ್ನು ಪೋಣಿಸಿದ ಸರ ಮತ್ತು ಇತರ ಆಭರಣಗಳನ್ನು ಧರಿಸುತ್ತಿದ್ದರು.

ವೇದಗಳಲ್ಲಿ, ಪುರಾಣಗಳಲ್ಲಿ, ರಾಮಾಯಣ, ಮಹಾಭಾರತಗಳಲ್ಲಿ ಚಿನ್ನ ಮತ್ತು ಚಿನ್ನಾಭರಣಗಳ ವರ್ಣನೆ ಇದೆ. ಸೀತೆಯನ್ನು ಹುಡುಕಲು ಹೊರಟ ಹನುಮಂತನಿಗೆ ಶ್ರೀರಾಮನು ತನ್ನ ಗುರುತಿಗಾಗಿ ಉಂಗುರವನ್ನು ನೀಡಿದರೆ, ಸೀತೆಯು ರಾಮನಿಗೆ ತನ್ನ ಗುರುತಿಗಾಗಿ ಚೂಡಾಮಣಿಯನ್ನು ಕೊಡುತ್ತಾಳೆ. ದುಷ್ಯಂತನು ತನ್ನ ಗುರುತಿಗಾಗಿ ಶಕುಂತಲೆಗೆ ತನ್ನ ಮುದ್ರೆಯುಂಗುರ ನೀಡುತ್ತಾನೆ. ಕ್ರಿ.ಶ. ಒಂದನೆಯ ಶತಮಾನದ್ದೆನ್ನಲಾದ ಸುಮಾರು ೧೮೦ ಆಭರಣಗಳು ತಕ್ಷ ಶಿಲೆಯಲ್ಲಿ ದೊರೆತಿವೆ. ನಾಗಾರ್ಜುನನೆಂಬ ರಸಾಯನ ಶಾಸ್ತ್ರಜ್ಞ ಕೀಳು ಲೋಹದಿಂದ ಚಿನ್ನವನ್ನು ತೆಗೆಯುವ (Alchemy) ವಿದ್ಯೆಯನ್ನು ಕಲಿತಿದ್ದನು, ಮೌರ್ಯರ ಚಂದ್ರಗುಪ್ತನ ಕಾಲದಲ್ಲಿ ಚಿನ್ನದ ಆಭರಣ ತಯಾರಿಯ, ಚಿನ್ನದ ನಾಣ್ಯ ತಯಾರಿಯ ಟಂಕಸಾಲೆಗಳಿದ್ದು ವೆಂಬುದು ಕೌಟಿಲ್ಯನ ಅರ್ಥಶಾಸ್ತ್ರದಿಂದ ತಿಳಿದುಬರುತ್ತದೆ.

ಚಂದ್ರಗುಪ್ತ ಮೌರ್ಯನ ಕಾಲದಲ್ಲಿ (ಕ್ರಿ.ಪೂ. ೩೨೦-೨೯೮) ಚಿನ್ನದ ಆಭರಣ ತಯಾರಿಯ ಕಸುಬಿನ ಮೇಲೆ ಸರಕಾರದ ನಿಯಂತ್ರಣವಿತ್ತು. ಈ ಕೆಲಸದಲ್ಲಿ ನಿರತರಾಗಿದ್ದ ಸುವರ್ಣಕಾರರು ಮೇಲ್ವರ್ಗದವರಾಗಿದ್ದರು. ಸದಾಚಾರ ಸಂಪನ್ನರಾಗಿದ್ದರು. ಅತ್ಯಂತ ಕೌಶಲ್ಯವನ್ನು ಹೊಂದಿದವರಾಗಿದ್ದರು. ಇವರಿಗೆ ಪ್ರಧಾನರಸ್ತೆಯ ಪಕ್ಕದಲ್ಲಿ ಆಭರಣಗಳ ಅಂಗಡಿಗಳನ್ನಿಟ್ಟುಕೊಳ್ಳಲು ಅನುಮತಿ ನೀಡಲಾಗುತ್ತಿತ್ತು. ಅವರು ಸಾರ್ವಜನಿಕರಿಂದ ಚಿನ್ನವನ್ನು ಪಡೆದು ಆಭರಣಗಳನ್ನು ತಯಾರಿಸಿ ಕೊಡುತ್ತಿದ್ದರು. ಘನ ಸುಶಿರ (ಬಿಂದಿಗೆ ಅಥವಾ ಚೊಂಬು ಮತ್ತು ಇತರ ಪಾತ್ರೆಗಳ ತಯಾರಿ) ಸಂಯ್ಯೂಹ (ಬೆಸುಗೆ) ಅವಲೇಪ್ಯ (ಧಾತುಗಳ

ಸಂಯೋಜನೆ) ವಾಸೀತಕಂ (ಲೇಪನ) ಕ್ಷಪಣ (ರತ್ನ ಮಣಿ ಹುದುಗಿಸುವುದು) ಗುಣ (ಬೆಳ್ಳಿ ಬಂಗಾರದ ಸರಿಗೆ ಮಾಡುವ ಕಲೆ) ಮುಂತಾದ ಕೆಲಸಗಳಲ್ಲಿ ಆಗಿನ ಸುವರ್ಣಕಾರರು ಪರಿಣತರಾಗಿದ್ದರು.

ಚಿನ್ನವನ್ನು ಒಡವೆಗಳ ತಯಾರಿಗೆ ಬಳಸುವುದೇ ಹೆಚ್ಚು. ವಸ್ತು ವಿನಿಮಯ ಪದ್ಧತಿ ನಿಂತು ಹೋಗಿ ನಾಣ್ಯ ಚಲಾವಣೆ ಬಂದ ನಂತರ ನಾಣ್ಯ ತಯಾರಿಗಾಗಿಯೂ ಚಿನ್ನವನ್ನು ಬಳಸಲಾಯಿತು. ಆರ್ಯರ ಕಾಲದಲ್ಲಿ ನಿಷ್ಕ ಎಂಬ ಚಿನ್ನದ ನಾಣ್ಯವನ್ನು ಬಳಸುತ್ತಿದ್ದರು. ವೇದೋತ್ತರ ಕಾಲದಲ್ಲಿ ಕಾರ್ಷಾಪಣವೆಂಬ ಚಿನ್ನದ ನಾಣ್ಯವಿತ್ತು. ಈ ಕಾರ್ಷಾಪಣವೇ ಮುಂದೆ ಕಾಸು, ಹಣ, ಪರಾವು ಎಂಬ ಹೆಸರಿನಿಂದ ಬೇರೆ ಬೇರೆ ನಾಣ್ಯಗಳಾದುವು.

ಪುರುಷರಿಗಿಂತ ಹೆಚ್ಚು ಸ್ತ್ರೀಯರು ಸೌಂದರ್ಯ ಪ್ರಿಯರು, ಗಂಡಸರು ಕೂಡಾ ತಮ್ಮ ಹೆಂಗಸರು ಆಭರಣಗಳಿಂದ ಶೋಭಿತೆಯರಾಗಿರಬೇಕೆಂದು ಬಯಸುತ್ತಾರೆ, ತಮ್ಮಲ್ಲಿರುವ ಹಣದಿಂದ ಸಾಧ್ಯವಾದಷ್ಟು ಆಭರಣಗಳನ್ನು ತಯಾರಿಸಿ ತಮ್ಮ ಮಡದಿ ಮಕ್ಕಳಿಗೆ ತೊಡಿಸಿ ಅವರ ಶೃಂಗಾರವನ್ನು ಕಣ್ತುಂಬ ನೋಡಿ ಸಂತೋಷ ಪಡುತ್ತಾರೆ. ಆಭರಣಗಳನ್ನು ತೊಡುವುದರಿಂದ ತಾವು ಅಂದವಾಗಿ ಕಾಣುತ್ತೇವೆಂದು ಹಿಂದಿನ ಕಾಲದಿಂದಲೂ ಬಹು ಮಂದಿ ಸ್ತ್ರೀ ಪುರುಷರು ಭಾವಿಸಿಕೊಂಡು ಬಂದಿದ್ದಾರೆ. ಆಭರಣಗಳಿಂದ ಸೌಂದರ್ಯ ವರ್ಧನೆಯಾಗುತ್ತದೆ. ಆಕರ್ಷಣೆ, ಪ್ರತಿಷ್ಠೆ, ಆರ್ಥಿಕ ಅಂತಸ್ತಿನ ಪ್ರದರ್ಶನವೂ ಆಭರಣ ಧರಿಸುವ ಮುಖ್ಯ ಉದ್ದೇಶ. ಸೌಂದರ್ಯೋಪಾಸನೆಯ ದೃಷ್ಟಿಯಿಂದ ದೇಹದ ಯಾವ ಅಂಗವನ್ನು ಬಿಡದೆ ಅಲಂಕರಿಸುವ ಶೃಂಗಾರ ಪ್ರಿಯತೆ ಮಾನವರದು. ಅಷ್ಟೇ ಅಲ್ಲ ಧಾರ್ಮಿಕ ಶ್ರದ್ಧೆ, ನಂಬಿಕೆಗಳೂ ಆಭರಣಧಾರಣೆಗೆ ಕಾರಣವಾಗುತ್ತವೆ. ದುಷ್ಟ ಶಕ್ತಿಗಳ ಬಾಧೆಯಿಂದ ಪಾರಾಗಲು ಕೆಲವೊಂದು ಆಭರಣಗಳು, ಲೋಹಗಳು ನೆರವಾಗುತ್ತವೆ ಎಂಬ ನಂಬಿಕೆ ಜನಪದರಲ್ಲಿದೆ, ಆಭರಣಗಳು ಆಪದ್ಧನವೂ ಹೌದು. ಒಟ್ಟಿನಲ್ಲಿ ಒಡವೆ ಎನ್ನುವುದು ಜನಸಾಮಾನ್ಯರ ದೃಷ್ಟಿಯಲ್ಲಿ ಜೀವನ ಮೌಲ್ಯಗಳಿಗೆ ಸಂಕೇತವಾಗಿ ನಿಲ್ಲುವ ವಸ್ತು ಎನ್ನಬಹುದು.

ಚಿನ್ನ ಮತ್ತು ಬೆಳ್ಳಿಗಳು ಅವಳಿ ಮಕ್ಕಳಿದ್ದಂತೆ, ಚಿನ್ನ ಬೆಳ್ಳಿಯ ಕೆಲಸ

ಈಗ ಒಂದು ಲಾಭದಾಯಕ ಉದ್ಯಮ. ಪರಂಪರಾನುಗತವಾಗಿ ಬಂದ ಈ ವಿದ್ಯೆ ಜಾನಪದ ಮೂಲಕ್ಕೆ ಹೆಚ್ಚು ಸಂಬಂಧವನ್ನು ಹೊಂದಿದೆ. ಇದು ಕುಸುರಿ ಕೆಲಸವಾದುದರಿಂದ ವಿಶೇಷ ಯಂತ್ರೋಪಕರಣಗಳನ್ನು ಬಳಸಿಕೊಳ್ಳಲು ಈ ಕಸುಬಿನಲ್ಲಿ ಸಾಧ್ಯವಾಗುವುದಿಲ್ಲ. ಚಿನ್ನದ ತಗಡು, ಸರಿಕೆ ತಯಾರಿಸುವುದು ಬಳೆ ಮಾಡುವುದು ಇತ್ಯಾದಿಗಳೆಲ್ಲ ಈಗ ಯಂತ್ರಗಳಿಂದಲೇ ನಡೆಯುತ್ತದಾದರೂ ಉಳಿದ ಕೆಲಸಗಳು ಕರಕೌಶಲ್ಯದಿಂದಲೇ ನಡೆಯಬೇಕಾಗುತ್ತದೆ. ಚಿನ್ನ ಹೆಚ್ಚು ಬೆಲೆ ಬಾಳುವ ಲೋಹವಾದ್ದರಿಂದ ಸೂಕ್ಷ್ಮ ಕೆಲಸಗಳನ್ನು ಹೆಚ್ಚು ನಷ್ಟ ಬಾರದಂತೆ ಬಹಳ ಜಾಗ್ರತಿಯಿಂದ ನಡೆಸಬೇಕಾಗುತ್ತದೆ. ಆಭರಣಗಳು ನಮ್ಮ ಜನಪದ ಕಲೆಯ ವೈಶಿಷ್ಟ್ಯವನ್ನು ಸಾರುತ್ತದೆ. ಪರಂಪರಾನುಗತವಾಗಿ ಕುಶಲ ಕರ್ಮಿಗಳು ಈ ವಿದ್ಯೆಯನ್ನು ಬೆಳೆಸಿಕೊಂಡು ಬಂದಿದ್ದಾರೆ. ಜಾನಪದದ ಅಧ್ಯಯನ ದೃಷ್ಟಿಯಿಂದ ಸುವರ್ಣಕಾರರ ಜೀವನ ಕ್ರಮ ಹಾಗೂ ವೃತ್ತಿ ಬಹಳ ಮಹತ್ವದ್ದಾಗಿವೆ.

ದಕ್ಷಿಣ ಕನ್ನಡದ ಸುವರ್ಣಕಾರರು

ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಚಿನ್ನಾಭರಣಗಳ ತಯಾರಿಗೆ ಭಾರತದಲ್ಲೇ ಹೆಸರು ಪಡೆದಿದೆ. ಇಲ್ಲಿನ ಕುಶಲಕರ್ಮಿಗಳು ಕರ್ನಾಟಕದಲ್ಲಿ ಮಾತ್ರವಲ್ಲ ಮುಂಬಯಿ, ಚೆನ್ನೈ, ಕೊಯಮುತ್ತೂರು ಮುಂತಾದ ಕಡೆಗಳಿಗೆ ಹೋಗಿ ಆಭರಣ ತಯಾರಿ ಕೆಲಸದಲ್ಲಿ ಮೇಲ್ಮೆ ಸಾಧಿಸಿದ್ದಾರೆ. ಬಹಳಷ್ಟು ಜನ ಕೊಲ್ಲಿ ರಾಷ್ಟ್ರಗಳಲ್ಲಿ ಚಿನ್ನದ ಕೆಲಸದ ವೃತ್ತಿಯನ್ನು ಕೈಗೊಂಡು ಜೀವನ ನಿರ್ವಹಿಸುತ್ತಿದ್ದಾರೆ. ಮಂಗಳೂರು, ಉಡುಪಿ ನಗರಗಳಲ್ಲಿ ತಯಾರಾದ ಚಿನ್ನಾಭರಣಗಳಿಗೆ ವಿದೇಶಗಳಲ್ಲಿಯೂ ಬೇಡಿಕೆ ಇದೆ.

ವಿಶ್ವಕರ್ಮ ಬ್ರಾಹ್ಮಣರು ಅಥವಾ ವಿಶ್ವಬ್ರಾಹ್ಮಣ ಜನಾಂಗದವರು ಇಲ್ಲಿ ಆಭರಣ ತಯಾರಿ ವೃತ್ತಿಯನ್ನು ಕುಲಕಸುಬನ್ನಾಗಿ ನಡೆಸಿಕೊಂಡು ಬಂದವರು, ಉತ್ತರ ಕನ್ನಡದಲ್ಲಿ ಈ ವೃತ್ತಿಯನ್ನು ನಡೆಸುವವರು ದೈವಜ್ಞ ಬ್ರಾಹ್ಮಣರು, ದೈವಜ್ಞ ಬ್ರಾಹ್ಮಣರ ಕೆಲವೊಂದು ಕುಟುಂಬಗಳು ಈಗ ಮಂಗಳೂರು, ಉಡುಪಿ ನಗರಗಳಲ್ಲಿ ನೆಲೆಸಿ ಚಿನಿವಾರಿಕೆಯನ್ನು ನಡೆಸಿಕೊಂಡು ಬರುತ್ತಿವೆ. ಹಿಂದೆ ಪ್ರತಿಯೊಂದು ಹಳ್ಳಿಯಲ್ಲಿಯೂ ಒಂದೆರಡು ಚಿನ್ನದ

ಕೆಲಸಗಾರರ ಕುಟುಂಬಗಳಿದ್ದುವು. ಪೇಟೆಗೆ ಬಂದು ಚಿನ್ನವನ್ನು ಖರೀದಿಸಿಕೊಂಡು ಹಳ್ಳಿಯ ಜನರಿಗೆ ಆಭರಣಗಳನ್ನು ತಯಾರಿಸಿಕೊಡುತ್ತಿದ್ದರು. ಮಂಗಳೂರು, ಉಡುಪಿ, ಪುತ್ತೂರು, ಕಾರ್ಕಳ, ಕುಂದಾಪುರ ಮುಂತಾದ ಪಟ್ಟಣಗಳಲ್ಲಿ ಮಾತ್ರ ಚಿನ್ನ ಮಾರಾಟ ಮಾಡುವ ಅಂಗಡಿಗಳಿದ್ದುವು. ಈ ಅಂಗಡಿಗಳನ್ನು ಬಂಗಾರದ ಕಟ್ಟೆ (ಬಂಗಾರದ ಮಾರುಕಟ್ಟೆ) ಸರಾಫ್‌ಕಟ್ಟೆ ಗಳೆಂದು ಕರೆಯುತ್ತಿದ್ದರು. ಚಿನ್ನದ ವ್ಯಾಪಾರಿಗಳನ್ನು ಸರಾಫರೆಂದು ಗೌರವದಿಂದ ಸಂಬೋಧಿಸುತ್ತಿದ್ದರು. ಬ್ರಾಹ್ಮಣ ವರ್ಗದವರು ಮಾತ್ರ ಚಿನ್ನದ ವ್ಯಾಪಾರ ಮಾಡುತ್ತಿದ್ದರು.

ಆಗಿನ ಕಾಲದಲ್ಲಿ ಆಭರಣಗಳನ್ನು ಮಾಡಿಸುತ್ತಿದ್ದವರು ಕೇವಲ ಶ್ರೀಮಂತರು ಮಾತ್ರ. ಮಧ್ಯಮ ವರ್ಗದವರು ಬೆಳ್ಳಿಯ ಆಭರಣ ಧರಿಸುತ್ತಿದ್ದರು. ಬಡವರು ಸಂತೆಯಲ್ಲಿ ಸಿಗುವ ಮಣಿ ಸರ ಧರಿಸುತ್ತಿದ್ದರು. ಶ್ರೀಮಂತರು ಚಿನ್ನದ ಕೆಲಸ ಮಾಡುವವರನ್ನು ತಮ್ಮ ಮನೆಗಳಿಗೆ ಕರೆಸಿಕೊಂಡು ತಿಂಗಳು ಗಟ್ಲೆ ಮನೆಯಲ್ಲೇ ನಿಲ್ಲಿಸಿಕೊಂಡು ಕೆಲಸ ಮಾಡಿಸುತ್ತಿದ್ದರು, ಕೆಲಸಗಾರರಿಗೆ ಮನೆಯವರಿಂದ ಪಡಿಯಕ್ಕಿ ಪಡೆದು ತಮ್ಮ ಊಟದ ವ್ಯವಸ್ಥೆ ತಾವೇ ನೋಡಿಕೊಳ್ಳುತ್ತಿದ್ದರು, ಬಡವರಾದ ಕೆಲಸಗಾರರಿಗೆ ಆಭರಣ ತಯಾರಿಯ ಮಜೂರಿಯ ಜೊತೆ ದಿನದ ಊಟದ ಖರ್ಚು ಪುಕ್ಕಟೆಯಾಗಿ ಹೋಗುತ್ತಿತ್ತು. ಹೀಗಾಗಿ ಇದಕ್ಕವರು ಒಪ್ಪಿ ಕೆಲಸಕ್ಕಾಗಿ ಕರೆದ ಶ್ರೀಮಂತರ ಮನೆಗೆ ಹೋಗುತ್ತಿದ್ದರು.

ದಕ್ಷಿಣ ಕನ್ನಡದಲ್ಲಿರುವ ಚಿನ್ನದ ಕಸುಬನ್ನು ಹೊಂದಿದ ವಿಶ್ವ ಕರ್ಮರನ್ನು ಆಚಾರ್ಯ, ಆಚಾರಿ, ಅರ್ಕಶಾಲಿ, ಅಕ್ಕಸಾಲಿಗ, ಅಕ್ಸಾಲಿ ಎಂಬ ಕುಲನಾಮದಿಂದ ಸಂಬೋಧಿಸುತ್ತಾರೆ. ಆಚಾರ್ಯ ಮತ್ತು ಆಚಾರಿ ಎಂಬ ಎರಡು ಪದಗಳೂ ಸಂಸ್ಕೃತ ಮೂಲದ ಪದಗಳು ತನ್ನ ಶಿಷ್ಯರಿಗೆ ಕಲಿಸಬೇಕಾದುದನ್ನು ತನ್ನ ಆಚರಣೆಯ ಮೂಲಕ ಕಲಿಸುವವರನ್ನು, ವಿಚಾರಗಳನ್ನು ಆಚರಣೆಯ ಮೂಲಕ ತರುವವರನ್ನು ಆಚಾರಿ ಅಥವಾ ಆಚಾರ್ಯ ಎನ್ನುತ್ತಾರೆ. ಪೌರೋಹಿತ್ಯ, ಆಭರಣ ತಯಾರಿ, ಪೀಠೋಪಕರಣಗಳ ತಯಾರಿ, ಅಡುಗೆ ಕೆಲಸ, ಕಲ್ಲಿನ ಮೂರ್ತಿ ತಯಾರಿ, ಎರಕದ ಕೆಲಸ, ಕಬ್ಬಿಣದ ವಸ್ತುಗಳ ತಯಾರಿ, ಅಡುಗೆ ತಯಾರಿ - ಇವೆಲ್ಲ ಒಂದು ಕಾಲದಲ್ಲಿ ನೋಡಿ ತಿಳಿದುಕೊಂಡು ಅನುಕರಣೆಯ ಮೂಲಕ ಕಲಿತು ಕೊಳ್ಳುವ ಕೆಲಸಗಳಾಗಿದ್ದವು. ಆದುದರಿಂದ

ಈ ಕೆಲಸ ನಿರ್ವಹಿಸುವವರನ್ನು ಆಚಾರಿ ಅಥವಾ ಆಚಾರ್ಯ ಎಂಬ ಉಪನಾಮದಿಂದ ಕರೆಯುವುದು ರೂಢಿಗೆ ಬಂತು. (ನೋಡಿ: ರೆ.ಫಾ.ಕಿಟ್ಟೆಲ್ - ಅರ್ಥಕೋಶ. ಆಚಾರಿ, ಆಚ್ಯಾರಿ. Following Established rites or practice (2) At bh of ಆಚಾರ್ಯ which as a title is assumed, e.g. also by bramin cook. Idol makers, smiths and carpenters, Artifices)

ಕುಂದಾಪುರದ ಕಡೆ ಅರ್ಕಶಾಲಿ, ಅಕ್ಶಾಲಿ ಎಂಬ ಪದಗಳು ಬಳಕೆಯಲ್ಲಿವೆ. ಈ ಹೆಸರು ಬಂದಿರುವ ಬಗ್ಗೆ ಒಂದು ಪುರಾಣದ ಕಥೆ ಇದೆ. ದೇವಶಿಲ್ಪಿ ವಿಶ್ವಕರ್ಮ ತನ್ನ ಮಗಳಾದ ಸಂಜ್ಞಾಳನ್ನು ಸೂರ್ಯನಿಗೆ ಮದುವೆ ಮಾಡಿ ಕೊಟ್ಟನು. ಸೂರ್ಯನ ಪ್ರಖರವಾದ ಕಿರಣಗಳನ್ನು ಆಕೆಗೆ ಸಹಿಸಲಾಗಲಿಲ್ಲ. ಆತನ ಸನಿಹಕ್ಕೆ ಹೋಗಲು ಆಕೆಗೆ ಸಾಧ್ಯವಾಗಲಿಲ್ಲ. ತನ್ನ ಪ್ರತಿರೂಪ ಛಾಯಾಳನ್ನು ಆತನ ಬಳಿ ಬಿಟ್ಟು ಆಕೆ ತನ್ನ ತಂದೆಯ ಬಳಿ ಓಡಿ ಬಂದು ತನ್ನ ಕಷ್ಟವನ್ನು ತೋಡಿಕೊಂಡಳು. ಮಗಳ ಕಷ್ಟವನ್ನರಿತ ವಿಶ್ವಕರ್ಮ ಸೂರ್ಯನಿಗೆ ಸಾಣೆ ಹಿಡಿದು ಆತನ ತೀಕ್ಷ್ಣವಾದ ಕಿರಣಗಳನ್ನು ಮೊಂಡುಗೊಳಿಸಿ, ತನ್ನ ಮಗಳನ್ನು ಆತನ ಬಳಿಗೆ ಕಳುಹಿಸಿ ಕೊಟ್ಟನು. ಸೂರ್ಯನನ್ನು ಸಾಣೆಗೆ ಹಿಡಿದ ವಿಶ್ವಕರ್ಮನಿಗೆ ಅರ್ಕಸಾಣೆಗ, ಅರ್ಕಸಾಲಿಗ, ಅಕ್ಕಸಾಲಿ - ಎಂಬ ಹೆಸರು ಬಂತು. ಆತನ ಸಂತತಿಯವರು ಕೂಡ ಅಕ್ಕಸಾಲಿ ಎಂದು ಕರೆಯಲ್ಪಟ್ಟರು.

ಪುರಾಣದ ಕಥೆ ಹೀಗಿದ್ದರೆ ಸಂಶೋಧಕರು ಈ ಬಗ್ಗೆ ಬೇರೆಯೇ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಚಂದ್ರಗುಪ್ತ ಮೌರ್ಯನ ಕಾಲದಲ್ಲಿ ಚಿನ್ನದ ಆಭರಣ ಹಾಗೂ ನಾಣ್ಯಗಳನ್ನು ತಯಾರಿಸುವ ಟಂಕಸಾಲೆಗಳನ್ನು 'ಅಕ್ಷಶಾಲಾ' ಎಂದು ಕರೆಯುತ್ತಿದ್ದರು. ಅಕ್ಷಶಾಲೆಗಳಲ್ಲಿ ಕೆಲಸ ಮಾಡುವವರು ಅಕ್ಷಶಾಲಿಗಳು. ಅಕ್ಷಶಾಲಿ ಎಂಬ ಪದವೇ ಅಪಭ್ರಂಶಗೊಂಡು ಅಕ್ಕಸಾಲಿ ಎಂದಾಗಿದೆ.

ವಿಶ್ವಕರ್ಮರು ತುಳು ನಾಡಿನ ಮೂಲ ನಿವಾಸಿಗಳಲ್ಲ. ಅವರು ಕನ್ನಡ ನಾಡಿನ ಬೇರೆ ಬೇರೆ ಕಡೆಗಳಿಂದ ಇಲ್ಲಿಗೆ ವಲಸೆ ಬಂದವರು. ತುಳು ನಾಡು ಕರ್ನಾಟಕದ ಬೇರೆ ಬೇರೆ ಅರಸು ಮನೆತನಗಳ ಆಡಳಿತಕ್ಕೊಳಪಟ್ಟಿತ್ತು. ಬೇರೆ ಬೇರೆ ಆಳರಸರ ಕಾಲದಲ್ಲಿ ಬೇರೆ ಬೇರೆ ಕಡೆಗಳಿಂದ ಶಿಲ್ಪಿಗಳು ಬಂದು

ಇಲ್ಲಿ ನೆಲೆಸಿದ್ದಾರೆ. ವಿಜಯನಗರದ ಅರಸರು ತುಳುನಾಡನ್ನು ಆಳುತ್ತಿದ್ದ ಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಶಿಲ್ಪಿಗಳು ಇಲ್ಲಿಗೆ ಬಂದಿದ್ದಾರೆ. ಮೂಲತಃ ತಾವು ಉತ್ತರ ಭಾರತದವರು. ಸೈಂಧವ ಸಂಸ್ಕೃತಿಯ ಪ್ರವರ್ತಕರೆಂದು ಹೇಳಿ ಕೊಳ್ಳುತ್ತಾರೆ. ಇವರು ವೈದಿಕ ಧರ್ಮಾವಲಂಬಿಗಳು. ಸೃಷ್ಟಿಕರ್ತನನ್ನು ಇವರು 'ವಿಶ್ವಕರ್ಮ ಪರಬ್ರಹ್ಮ' (ಋಗ್ವೇದ. ೧೦.೮೧-೮೨) ನೆಂಬ ಹೆಸರಿನಿಂದ ಕರೆಯುತ್ತಾರೆ. ದೇವಶಿಲ್ಪಿ ವಿಶ್ವಶರ್ಮನನ್ನು ತಮ್ಮ ಆದಿ ಗುರು ಎಂಬುದಾಗಿ ಪರಿಗಣಿಸುತ್ತಾರೆ. ಪ್ರಪಂಚದ ಎಲ್ಲಾ ಕಲಾ ಸಂಗ್ರಹಾಲಯಗಳಲ್ಲಿ ಭಾರತೀಯ ವಿಶ್ವಕರ್ಮ ಆಭರಣ ಮತ್ತು ಶಿಲ್ಪ ಕಲಾ ಕುಶಲತಾ ಸಾಮಗ್ರಿಗಳು ಇದ್ದೇ ಇರುತ್ತವೆ. ಬೆಳ್ಳಿ ಬಂಗಾರದ ಕುಶಲ ಕರ್ಮಿಗಳ ಕಲೆ ಪೂರ್ವ ಸಂಸ್ಕಾರದಿಂದ ಪ್ರಾಪ್ತವಾಗುವುದು ಎಂಬ ನಂಬಿಕೆಯಿಂದ ಇದನ್ನು 'ವಿಶ್ವಕರ್ಮ ನಿರ್ಮಾಣ' ಎನ್ನುವುದುಂಟು.

ತುಳುನಾಡಿನ ಮೂಲ ಸಂಸ್ಕೃತಿಗಿಂತ ಇವರು ಭಿನ್ನ ಸಂಸ್ಕೃತಿಯವರಾದ ಕಾರಣ ಮೂಲತಃ ಇವರು ತುಳುವರಲ್ಲ ಎಂಬುದು ಸ್ಪಷ್ಟವಾಗುತ್ತದೆ. ತುಳುನಾಡಿನ ಮೂಲದವರು ಮಾತೃಪ್ರಧಾನ ಸಂಸ್ಕೃತಿಯವರು, ಸೌರಮಾನ ಪದ್ಧತಿ ಅನುಸರಿಸುವವರು, ವಿಶ್ವಕರ್ಮರು ಪಿತೃ ಪ್ರಧಾನ ಸಂಸ್ಕೃತಿಯವರು. ಚಾಂದ್ರಮಾನ ಪದ್ಧತಿಯನ್ನು ಪಾಲಿಸುವವರು ಮತ್ತು ವೈದಿಕಗೋತ್ರ ಪದ್ಧತಿಯನ್ನು ಹೊಂದಿದವರು. ತುಳು ನಾಡಿನ ಅಕ್ಕಸಾಲಿಗರ ಬಗ್ಗೆ ಜೆ. ಸ್ಟರಕ್ ಈ ರೀತಿ ವಿವರಣೆ ನೀಡಿದ್ದಾರೆ.

Akkasalis are goldsmiths of Tulu origin but a number of them work in iron, brass and wood also. The caste is divided into exogamous division. (Gothras) caste affairs are settled by the swami of Anegundi to whom reports are made by the local headmen called Mukthesaras. Brahmins are employed as purohithas only when men their own caste are not available to perform that duty. In their customs and manners they closely resembles the Shivalli Brahmins. Both infant and adult marriages are allowed, widow marriage is strictly prohibited. The patron

diety of the caste is kalamma. Like all artisan castes they worship the implements of their craft once a year. They style themselves Achari (ಮದ್ರಾಸ್ ಡಿಸ್ಟ್ರಿಕ್ಟ್ ಮ್ಯಾನುವಲ್ - ಸೌತ್‌ಕೆನರಾ. 1894-165)

ಚಿನ್ನದ ಕೆಲಸ ಮಾಡುವ ಅಕ್ಕಸಾಲೆಗಳು ತುಳು ಮೂಲದವರು. ಸ್ವರಕ್‌ನ ಕಾಲಕ್ಕಾಗುವಾಗ ಹೊರಗಿನಿಂದ ಬಂದ ಇವರು ತುಳು ಸಂಸ್ಕೃತಿಯನ್ನು ಸ್ವೀಕರಿಸಿ ತುಳು ಮೂಲದವರೇ ಆಗಿ ಹೋಗಿದ್ದಾರೆ. ಆದರೆ ಇವರಲ್ಲಿ ಅನೇಕರು ಕಬ್ಬಿಣ, ಹಿತ್ತಾಳೆ ಮತ್ತು ಮರದ ಕೆಲಸವನ್ನು ಕೂಡಾ ಮಾಡುತ್ತಾರೆ. ಜಾತಿಯು ಗೋತ್ರಗಳಾಗಿ ವಿಂಗಡಿಸಲ್ಪಟ್ಟಿದೆ. ಸ್ಥಳೀಯ ಸಾಮಾಜಿಕ ಮುಖ್ಯಸ್ಥರಾದ ಮುಕ್ತೇಸರರ ಮೂಲಕ ಸಲ್ಲಿಸಲಾದ ಮಾಹಿತಿಯ ಪ್ರಕಾರ ಜಾತಿಗೆ ಸಂಬಂಧಪಟ್ಟ ಇವರ ಯಾವುದೇ ವಿವಾದವನ್ನು ಆನೆಗೊಂದಿಯ ಸ್ವಾಮಿಗಳು ತೀರ್ಮಾನಮಾಡುತ್ತಾರೆ. ಅವರ ಸಂಸ್ಕಾರಗಳನ್ನು ಅವರದ್ದೇ ಆದ ಪುರೋಹಿತರು ನಡೆಸುತ್ತಾರೆ. ಅವರ ಪುರೋಹಿತರು ಸಿಗದೆ ಹೋದಾಗ ಬ್ರಾಹ್ಮಣ ಪುರೋಹಿತರನ್ನು ಕರೆದು ಸಂಸ್ಕಾರಗಳನ್ನು ಮಾಡಿಸಿಕೊಳ್ಳುತ್ತಾರೆ. ಇವರ ಆಚಾರ ವಿಧಿಗಳೆಲ್ಲ ಶಿವಳ್ಳಿ ಬ್ರಾಹ್ಮಣರ ಆಚಾರ ವಿಧಿಗಳನ್ನು ಬಹಳಷ್ಟು ಹೋಲುತ್ತವೆ. ಇವರಲ್ಲಿ ಬಾಲ್ಯವಿವಾಹ ಮತ್ತು ಪ್ರಾಪ್ತವಯಸ್ಕ ವಿವಾಹ - ಎರಡು ಪದ್ಧತಿಗಳೂ ರೂಢಿಯಲ್ಲಿವೆ. ವಿಧವಾ ಮರು ವಿವಾಹಕ್ಕೆ ಸಂಪೂರ್ಣ ನಿಷೇಧವಿದೆ. ಇವರ ಕುಲದೇವತೆ ಕಾಳಮ್ಮ. ಇತರ ಕುಶಲ ಕರ್ಮಿಗಳಂತೆ ಇವರು ವರ್ಷಕ್ಕೊಮ್ಮೆ ತಮ್ಮ ವೃತ್ತಿ ಉಪಕರಣಗಳಿಗೆ ಪೂಜೆ ನಡೆಸುತ್ತಾರೆ. ಇವರು ಆಚಾರಿ ಎಂಬ ಉಪನಾಮ ಇಟ್ಟುಕೊಳ್ಳುತ್ತಾರೆ.

ಸೃಷ್ಟಿಕರ್ತ ವಿರಾಡ್ವಿಶ್ವಕರ್ಮ ಪರಮೇಶ್ವರನ ಪಂಚ ಮುಖಗಳಿಂದ ಆವಿರ್ಭವಿಸಿದ ಪಂಚ ಋಷಿಗಳಾದ ಮನು, ಮಯ, ತ್ವಷ್ಟ, ಶಿಲ್ಪಿ, ವಿಶ್ವಜ್ಞ ಅಥವಾ ದೈವಜ್ಞರು ಲೋಕ ಸಂಗ್ರಹಕಗಳಾದ ಕಬ್ಬಿಣ, ಮರ, ಕಂಚು, ಕಲ್ಲು, ಚಿನ್ನದ ಕೆಲಸಗಳಿಗೆ ಮೂಲಕಾರಣರು. ಇವರ ಸಂತತಿಯವರು ಪಂಚಾಳಬ್ರಾಹ್ಮಣರು ಅಥವಾ ವಿಶ್ವಕರ್ಮರು, ವಿಶ್ವಕರ್ಮರು ಪೌರುಷೇಯ ಪಂಚ ಗೋತ್ರಜರೆಂದು ಬ್ರಹ್ಮಾಂಡ ಪುರಾಣ, ಸ್ಕಾಂದ ಪುರಾಣ, ಬ್ರಾಹ್ಮಣೋತ್ಪತ್ತಿ ಮುಂತಾದ ಗ್ರಂಥಗಳಲ್ಲಿ ಹೇಳಲಾಗಿದೆ. ಇದಕ್ಕೆ ಪೂರಕವಾಗಿ ತುಳು ನಾಡಿನ

ಅತ್ಯಂತ ಪ್ರಸಿದ್ಧವಾದ ಕಲ್ಕುಡ - ಕಲ್ಲುರ್ಟ್ಟಿ ಭೂತಗಳ ಪಾಡ್ದನ (ಜನಪದ ಗೀತ)ಗಳಲ್ಲಿ ಕೆಲವೊಂದು ವಿಚಾರಗಳು ಕಂಡು ಬರುತ್ತವೆ.

ಕಡಿರ ಮಗಕ್ ಮರತ ಬೇಲೆ, ಮಡಿರ ಮಗಕ್ ಕರ್ಬೊದ ಬೇಲೆ
ನಡುತಮಗಕ್ ಬಂಗಾರ್ದ ಬೇಲೆ, ಬಿರಿಯಗ್ ಚೆಂಬು, ಪಿತ್ತಾಳೆಯ ಬೇಲೆ
ಶಿದ್ದಿಮಗೆ ಆಯೆಶಿದ್ಯಾದ್ ಪುಟ್ಯೆ ಹಿರಿಯಾದ್ ಬಲತೆ ಕಲ್ಲ್‌ದ ಬೇಲೆ ಬೆಂದೆ
ಮರತ ಬೇಲೆ ಬೆಂದಿನಾಯೆ ಮಲೆನಾಡಚ್ಚವೆ
ಕರ್ಬೊದ ಬೇಲೆ ಬೆಂದಿನಾಯೆ ನಡ್ತಚ್ಚವೆ
ಚೆಂಬುದ ಬೇಲೆ ಬೆಂದಿನಾಯೆ ಚೆಮ್ಮಟ್ಟಿಗಾರೆ
ಬಂಗಾರ್ದ ಬೇಲೆ ಬೆಂದಿನಾಯೆ ಯಾರಣ್ಣೆ
ಕಲ್ಲ್‌ದ ಬೇಲೆ ಬೆಂದಿನಾಯೆ ಕಲ್ಕುಡೆ (ರೆ.ಎ. ಮೆನ್ನರ್ - ಪಾಡ್ದನೊಲು-೧೮೮೬)

ದೊಡ್ಡಮಗನಿಗೆ ಮರದ ಕೆಲಸ, ಎರಡನೆಯ ಮಗನಿಗೆ ಕಬ್ಬಿಣದ ಕೆಲಸ
ಮಧ್ಯದ ಮಗನಿಗೆ ಬಂಗಾರದ ಕೆಲಸ, ಒಬ್ಬನಿಗೆ ತಾಮ್ರ ಹಿತ್ತಾಳೆಯ ಕೆಲಸ
ಸಣ್ಣಮಗ ಸಣ್ಣವನಾಗಿ ಹುಟ್ಟಿದ ಆದರೆ ಹಿರಿಯವನಾಗಿ ಬಳೆದ
ಕಲ್ಲಿನ ಕೆಲಸ ಮಾಡಿದ.
ಮರದ ಕೆಲಸ ಮಾಡಿದವ ಮಲೆನಾಡಚ್ಚವ
ಕಬ್ಬಿಣದ ಕೆಲಸ ಮಾಡಿದವ ನಡ್ತಚ್ಚವ
ತಾಮ್ರದ ಕೆಲಸ ಮಾಡಿದವ ಚೆಂಬುಟ್ಟಿಗಾರ
ಬಂಗಾರದ ಕೆಲಸ ಮಾಡಿದವ ಯಾರಣ್ಣ
ಕಲ್ಲಿನ ಕೆಲಸ ಮಾಡಿದವನು ಕಲ್ಕುಡ

ಪಾಡ್ದನದ ಉಲ್ಲೇಖದ ಪ್ರಕಾರ ಈ ಪಂಚಕಸುಬುಗಳನ್ನು ಮಾಡುವವರು ಮೂಲತಃ ಒಂದೇ ಜನಾಂಗಕ್ಕೆ ಸೇರಿದವರೆಂಬುದು ತಿಳಿದು ಬರುತ್ತದೆ. ಒಬ್ಬ ತಂದೆಯ ಐದು ಜನ ಮಕ್ಕಳಿಗೆ ಐದು ಕಸುಬುಗಳನ್ನು ಕಲಿಸುವುದರ ಮೂಲಕ ಗೋತ್ರ ವಿಂಗಡಣೆಯನ್ನು ಇಲ್ಲಿ ಸೂಚ್ಯವಾಗಿ ತಿಳಿಸಲಾಗಿದೆ. ತುಳು ಜನಪದ ಸಾಹಿತ್ಯದಲ್ಲಿ ಚಿನ್ನದ ಕೆಲಸದವರನ್ನು ಯಾರಣ್ಣ, 'ಐರಣೆ' ಎಂದು ಹೆಸರಿಸಲಾಗಿದೆ. ವಡ್ಡಾರಧನೆಯ ಗಜಕುಮಾರ ಕತೆಯಲ್ಲಿ ಸುವರ್ಣಕಾರನಿಗೆ 'ಪರಣೆಗ'ನೆಂದು

ಸಂಬೋಧಿಸಲಾಗಿದೆ. ಡಿ.ಎಲ್. ನರಸಿಂಹಾಚಾರ್ಯರು ಪರಣೆಗ ಶಬ್ದದ ನಿಷ್ಪತ್ತಿಯನ್ನು ವಿವರಿಸುತ್ತಾ ಪಾಲಿಬಾಷೆಯ ಹೇರಣೆಗ ಕನ್ನಡದಲ್ಲಿ ಪರಣೆಗ ಆಗಿದೆ ಎಂದು ತಿಳಿಸಿದ್ದಾರೆ. ಪಾಲಿ ಭಾಷೆಯ ಹೇರಣೆಗ ತುಳುವಿಗೆ ಬರುವಾಗ 'ಏರಣೆಗ - ಏರಣೆ' ಆಗಿದೆ ಎಂಬುದನ್ನು ಸುಲಭವಾಗಿ ಹೇಳಬಹುದಾಗಿದೆ. ('ಹ' ಕಾರದಿಂದ ಆರಂಭವಾಗುವ ಇತರ ಭಾಷೆಯ ಪದಗಳು ಸಾಮಾನ್ಯವಾಗಿ ತುಳುವಿನಲ್ಲಿ 'ಅ' ಕಾರವನ್ನು ತಾಳುತ್ತವೆ.) ಅದೇ ರೀತಿ ಮರದ ಕೆಲಸದವರಿಗೆ 'ತಚ್ಚವ' ಎಂಬ ಪದ ಬಳಸಲಾಗಿದೆ. ತಚ್ಚವ ಎಂಬುದು ಸಂಸ್ಕೃತದ ತಕ್ಷಕ ಎಂಬ ಪದದ ಅಪಭ್ರಂಶ. ತಕ್ಷಕ ಎಂಬ ಪದಕ್ಕೇ ಬಡಗಿ ಎಂಬರ್ಥವಿದೆ. (ಶಂ.ಬಾ. ಜೋಶಿ - ಹಾಲುಮತ ದರ್ಶನ - ೧೯೯೭) ಆಚಾರ್ಯ ಎಂಬ ಪದವು ಈ ಪಾಡ್ದನದಲ್ಲಿ ಅಚ್ಚವ ಎಂದಾಗಿದೆ. ಈ ಎಲ್ಲಾ ವಿಚಾರಗಳು ಪಂಚಾಲರು ಅಥವಾ ವಿಶ್ವಕರ್ಮರು ಪೂರ್ವಕಾಲದಲ್ಲಿ ಉತ್ತರ ಭಾರತದ ನಿವಾಸಿಗಳಾಗಿದ್ದಿರಬಹುದೆಂಬ ಬಗ್ಗೆ ಹೆಚ್ಚು ಪುರಾವೆಗಳನ್ನು ನೀಡುತ್ತವೆ.

ವಿಶ್ವಕರ್ಮರು ಶೈವ ಸಂಪ್ರದಾಯಕ್ಕೆ ಸೇರಿದವರು. ಕಾಳಿಕಾ ದೇವಿಯ ಭಕ್ತರು, ಇವರು ತಮ್ಮ ಕೊಠಡಿಯನ್ನು ಕಮ್ಮಟಿ (ಕೊಟ್ಯ) ಎನ್ನುತ್ತಾರೆ. ವಿಶ್ವಕರ್ಮನೇ ಕಮ್ಮಟಕ್ಕೆ ಅಧೀಶ್ವರ. ಹೀಗಾಗಿ ವಿಶ್ವಕರ್ಮನನ್ನು ಕಮ್ಮಟೇಶ್ವರನೆಂಬ ಹೆಸರಿನಿಂದ ಆರಾಧಿಸುತ್ತಾರೆ. ಭಟ್ಕಳದಿಂದ ಕೇರಳದ ಕಾಂಞಂಗಾಡಿನವರೆಗೆ ಇವರದ್ದೇ ಆದ ೧೫ ಕಾಳಿಕಾ ದೇವಾಲಯಗಳಿವೆ, ವಿಶ್ವಕರ್ಮ ಮಠಗಳಿವೆ. ವಿಶ್ವಕರ್ಮರು ದಕ್ಷಿಣ ಕನ್ನಡ ಜಿಲ್ಲೆಗೆ ಯಾವಾಗ ಬಂದು ನೆಲೆಸಿದರು ಎಂದು ನಿಖರವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಹಂತ ಹಂತವಾಗಿ ಬಂದು ನೆಲೆಸಿರಬಹುದು. ಇವರಲ್ಲಿ ಬಹುತೇಕ ಮಂದಿ ತುಳು ಮಾತನಾಡುವವರು. ಇತ್ತೀಚೆಗೆ ಹೆಚ್ಚಿನವರು ಮತ್ತೆ ಕನ್ನಡದ ಕಡೆಗೆ ವಾಲುತ್ತಿದ್ದಾರೆ. ಇವರು ಮೂಲತಃ ನಾಗಾರಾಧಕರು, ತುಳು ನಾಡಿನ ಮುಖ್ಯ ಆರಾಧನಾ ಕಲೆಯಾದ ಭೂತಾರಾಧನೆಯ ಸಂಸ್ಕೃತಿಯನ್ನು ಇವರು ಸ್ವೀಕರಿಸಿಕೊಂಡಿದ್ದಾರೆ. ಪ್ರಚಲಿತವಿರುವ ತುಳು ಸಂಸ್ಕೃತಿಯ ಎಲ್ಲ ಆಚರಣೆಗಳನ್ನು ಮತ್ತು ಸಂಪ್ರದಾಯಗಳನ್ನು ಅನುಸರಿಸುತ್ತಾರೆ.

ಇವರಲ್ಲಿ ಸಾಮಾಜಿಕ ಪದ್ಧತಿ ಬಹಳ ವ್ಯವಸ್ಥಿತವಾಗಿದೆ. ಗ್ರಾಮದಲ್ಲಿರುವ ಹತ್ತಾರು ಕುಟುಂಬಗಳನ್ನು ಒಂದು ಕೂಡು ಕಟ್ಟು ಅಥವಾ ಕೂಡುವಳಿಕೆ

ಎನ್ನುತ್ತಾರೆ. ಈ ಕೂಡುವಳಿಕೆಗೆ ಒಬ್ಬ ಮೊಕ್ತೇಸರನನ್ನು ಆರಿಸಿಕೊಳ್ಳುತ್ತಾರೆ. ವರ್ಷಕ್ಕೊಮ್ಮೆ ಪ್ರತಿ ಕುಟುಂಬದಿಂದ ನಿಗದಿತ ಶುಲ್ಕ ವಸೂಲಾಗುತ್ತದೆ. ಇದನ್ನು ಶಿಸ್ತಿನ ಹಣ ಎನ್ನುತ್ತಾರೆ. ಈ ಹಣವನ್ನು ಮೊಕ್ತೇಸರನು ಸಂಗ್ರಹಿಸಿ ಸಂಬಂಧಪಟ್ಟ ತಮ್ಮ ದೇವಾಲಯಕ್ಕೆ ಒಪ್ಪಿಸುತ್ತಾರೆ. ಶಿಸ್ತುಬದ್ಧವಾಗಿ ಆಚಾರ ವಿಚಾರಗಳನ್ನು ತನ್ನ ಕೂಡುವಳಿಕೆಯ ಸದಸ್ಯರು ಅನುಸರಿಸುವಂತೆ ಮೊಕ್ತೇಸರನು ನೋಡಿಕೊಳ್ಳುತ್ತಾನೆ. ಮದುವೆ, ನಿಶ್ಚಯ (ಲಗ್ನಪತ್ರಿಕೆ) ಉಪನಯನ ಮುಂತಾದ ಸಮಾರಂಭಗಳಲ್ಲಿ ಆತನ ಉಪಸ್ಥಿತಿ ಅವಶ್ಯವಾಗಿರುತ್ತದೆ. ವಿಶ್ವಕರ್ಮರು ಕಟ್ಟಾ ಸಂಪ್ರದಾಯವಾದಿಗಳು, ಜಪ-ತಪ, ಹಬ್ಬ, ವ್ರತಗಳನ್ನು ತಪ್ಪದೆ ಪಾಲಿಸಿಕೊಂಡು ಬರುವವರು. ವೈದಿಕ ಪದ್ಧತಿಗನುಸಾರವಾಗಿ ಜೀವನಾವರ್ತನ ಆಚರಣೆಗಳನ್ನು ನಡೆಸಿಕೊಂಡು ಬರುವವರು.

ವಿಶ್ವಕರ್ಮರು ಹುಟ್ಟುಕಲಾವಿದರು, ಚಿತ್ರಕಲೆಯಲ್ಲಿ ಪರಿಣತರು, ಮರ, ಕಲ್ಲು, ಚಿನ್ನ-ಬೆಳ್ಳಿಯ ಕೆತ್ತನೆ ಕೆಲಸದಲ್ಲಿ ನಿಷ್ಣಾತರು. ಕುಸುರಿ ಕೆಲಸದಲ್ಲಿ ಪ್ರೌಢಿಮೆಯನ್ನು ಪಡೆದವರು. ಹೊಸ ಹೊಸ ವರಸೆಯನ್ನು ಆಭರಣಗಳಲ್ಲಿ ತರುವ ಸೃಜನಶೀಲರು, ಶಿಲ್ಪಕಲೆಯಲ್ಲಷ್ಟೇ ಅಲ್ಲ ಕರಾವಳಿಯ ಖ್ಯಾತ ರಂಗಕಲೆ ಯಕ್ಷಗಾನದಲ್ಲೂ ಆಸಕ್ತಿ ಹೊಂದಿದವರು. ಹಿಂದೆ ಗ್ರಾಮೀಣ ಪ್ರದೇಶದ ವಿಶ್ವಕರ್ಮರ ಮನೆ ಮನೆಗಳಲ್ಲೂ ಯಕ್ಷಗಾನ ತಾಳ ಮದ್ದಳೆ ನಡೆಯುತ್ತಿತ್ತು. ಭಾಗವತರಾಗಿ, ವೇಷಧಾರಿಗಳಾಗಿ, ಅರ್ಥದಾರಿಗಳಾಗಿ, ಚೆಂಡೆ- ಮೃದಂಗ ವಾದಕರಾಗಿ ಇವರು ಯಕ್ಷಗಾನ ಕ್ಷೇತ್ರಕ್ಕೆ ಸಲ್ಲಿಸಿದ ಸೇವೆ ಅಮೂಲ್ಯವಾದುದು.

ಬಹಳ ಹಿಂದಿನ ಕಾಲದಲ್ಲಿ ಆಭರಣ ತಯಾರಿ ಗೃಹ ಕೈಗಾರಿಕೆಯಾಗಿತ್ತು. ಅಲ್ಪ ಸ್ವಲ್ಪ ಭಂಡವಾಳದಲ್ಲಿ ಇದು ನಡೆಯುತ್ತಿತ್ತು. ಯಜಮಾನ ಕೆಲಸ ಮಾಡುವಾಗ ಮಕ್ಕಳು ಅಥವಾ ಕೆಲಸ ಕಲಿಯಲು ಬಂದ ಹುಡುಗರು ಬೆಂಕಿ ಊದುವುದು ಚಿನ್ನ ಕರಗಿಸುವುದು, ಗಟ್ಟಿ ಬಡಿಯುವುದು, ಸರಿಗೆ ಮಾಡುವುದು, ಬೆಸೆಯುವುದು ಮುಂತಾದ ಕೆಲಸಗಳಲ್ಲಿ ಸಹಕರಿಸುತ್ತಿದ್ದರು. ಹೆಂಗಸರು ಕೂಡಾ ಒಪ್ಪ ಹಾಕುವುದು. ನೇವಳ ನೇಯುವುದು ಮುಂತಾದ ಕೆಲಸದಲ್ಲಿ ಸಹಕರಿಸುತ್ತಿದ್ದರು.

ನಗರಗಳು ಬೆಳವಣಿಗೆಯಾದಂತೆ ಚಿನ್ನದ ಕೆಲಸ ನಗರಗಳಲ್ಲಿ

ಕೇಂದ್ರೀಕೃತವಾಯಿತು. ಒಬ್ಬ ಪರಿಣತ ಕೆಲಸಗಾರ ಕೆಲಸ ಕಲಿಯುತ್ತಿರುವ ಹಲವಾರು ಶಿಷ್ಯರನ್ನು ಇಟ್ಟುಕೊಂಡು ಅವರಿಗೆ ಕೆಲಸದ ಬಗ್ಗೆ ಮಾಹಿತಿ ಕೊಡುವುದರ ಜೊತೆಗೆ ಕೆಲಸಮಾಡಿಸುವ ಪದ್ಧತಿ ರೂಢಿಗೆ ಬಂತು. ಆಗ ಹಳ್ಳಿಯ ಕುಶಲಕರ್ಮಿಗಳ ಮಕ್ಕಳೆಲ್ಲ ಕೆಲಸ ಕಲಿಯುವುದಕ್ಕೋಸ್ಕರ ಪಟ್ಟಣದ ಕಡೆಗೆ ಬರಲು ಪ್ರಾರಂಭಿಸಿದರು. ಹಳ್ಳಿಯಲ್ಲಿ ಕೆಲಸ ಕಡಿಮೆಯಾಯಿತು. ಹಳ್ಳಿಯ ಗಿರಾಕಿಗಳು ಪೇಟೆಗೆ ಬಂದು ಆಭರಣಗಳನ್ನು ಕೊಂಡುಕೊಳ್ಳಲು ಪ್ರಾರಂಭಿಸಿದರು. ಪೇಟೆಯ ಆಭರಣದ ಅಂಗಡಿಗಳಲ್ಲಿ ಸಿದ್ಧಪಡಿಸಿಟ್ಟ ಆಭರಣಗಳು ಸಿಗುತ್ತಿದ್ದವು. ಮುಂಗಡವಾಗಿ ಚಿನ್ನ ಅಥವಾ ಹಣಕೊಟ್ಟು ಆಭರಣದ ಕೆಲಸ ಪೂರ್ತಿಯಾಗುವವರೆಗೆ ಅವರು ಕಾದು ನಿಲ್ಲುವ ಅವಶ್ಯಕತೆ ಇರಲಿಲ್ಲ.

ಈಗ ಆಭರಣ ತಯಾರಿ ಕಾರ್ಖಾನೆಯ ರೂಪಕ್ಕೆ ಬೆಳೆದಿದೆ. ನಗರಗಳಲ್ಲಿರುವ ಪ್ರತಿಯೊಂದು ಆಭರಣದ ಅಂಗಡಿಯ ಹಿಂದೆ ಚಿನ್ನದ ಕೆಲಸ ಮಾಡುವವರ ಒಂದು ಪುಟ್ಟ ಕಾರ್ಖಾನೆ ಇರುತ್ತದೆ. ಈ ಕಾರ್ಖಾನೆಯಲ್ಲಿ ೫೦-೧೦೦ ಕೆಲಸಗಾರರಿರುತ್ತಾರೆ. ಶ್ರಮ ವಿಭಜನೆಯ ಸೋಂಕು ಆಭರಣ ತಯಾರಿಯ ಕೆಲಸಕ್ಕೂ ತಟ್ಟಿದೆ. ಸರಿಗೆ ಮಾಡುವ ಅಚ್ಚು ಹೊಡೆಯುವ, ತಗಡು ಮಾಡುವ ಕೆಲಸಗಳೆಲ್ಲ ಯಂತ್ರಗಳ ಮೂಲಕವೇ ನಡೆಯುತ್ತದೆ. ಉಳಿದ ಕೆಲಸಗಳು ಕೂಡಾ ವಿಭಜನೆಗೊಂಡಿವೆ. ಒಂದು ಚಿನ್ನದ ಹಾರ ತಯಾರಿಯಲ್ಲಿ ಸರಿಗೆ ಮಾಡುವವರು, ಸರಿಗೆಯನ್ನು ಸುತ್ತಿ ಬೆಸೆದು ಕೊಡುವವರು, ಹರಳು ಕುಳ್ಳಿರಿಸಿ ಕೆತ್ತನೆ ಕೆಲಸ ಮಾಡುವವರು, ಒಪ್ಪಹಾಕುವವರು - ಹೀಗೆ ಬಹಳಷ್ಟು ಜನರು ಕೆಲಸ ಮಾಡಬೇಕಾಗುತ್ತದೆ. ಹೀಗೆ ಕುಶಲಕರ್ಮಿಗಳು ಕೆಲಸದ ಒಂದು ನಿರ್ದಿಷ್ಟ ಭಾಗದಲ್ಲಷ್ಟೇ ಪರಿಣತಿಯನ್ನು ಪಡೆದುಕೊಂಡು ಒಟ್ಟು ಪರಿಣತಿಯನ್ನು ಕಳೆದುಕೊಂಡಿದ್ದಾರೆ. ಮಾಲೀಕರು ಹೆಚ್ಚು ಲಾಭಗಳಿಸಲು ಸಾಧ್ಯವಾಗಿದೆ. ಆಭರಣ ತಯಾರಕರು ಕಾರ್ಖಾನೆಯ ಮಟ್ಟದಲ್ಲಿ ಕೆಲಸ ಮಾಡುವ ಕಾರ್ಮಿಕರಂತಾಗಿದ್ದಾರೆ. ಆದರೆ ಕಾರ್ಮಿಕರ ಯಾವ ಕಾನೂನುಗಳೂ ಇವರಿಗೆ ಬಾಧ್ಯವಾಗಿಲ್ಲ. ಅವರಿಗೆ ಕೆಲಸದ ರಕ್ಷಣೆಯಾಗಲೀ ಜೀವನ ಸುರಕ್ಷತೆಯಾಗಲೀ ಸಿಗುತ್ತಾ ಇಲ್ಲ. ಇದರಿಂದಾಗಿ ಕುಶಲಕರ್ಮಿಗಳ ಜೀವನ ಇನ್ನು ಸುಧಾರಣೆಯಾಗಿಲ್ಲ.

ಜೀವನಾವರ್ತನ ಆಚರಣೆಗಳು

ವೈದಿಕ ಸಂಸ್ಕೃತಿಯ ಪ್ರಕಾರ ಇವರ ಜೀವನಾವರ್ತನ ಆಚರಣೆಗಳು ನಡೆಯುತ್ತವೆ. ಮಗು ಹುಟ್ಟಿದ ಹನ್ನೊಂದನೆಯ ದಿನ ಅಮೆ ಕಳೆಯುವ ಆಚರಣೆ (ಶುದ್ಧ) ನಡೆಯುತ್ತದೆ. ಪುರೋಹಿತರು ಬಂದು ಪಂಚಗವ್ಯ ಮಾಡಿಕೊಡುತ್ತಾರೆ. ಪಂಚಗವ್ಯ ಪ್ರೋಕ್ಷಿಸಿ ಶುದ್ಧವಾದ ಬಳಿಕ ಮಗುವಿಗೆ ಹುಟ್ಟಿದ ನಕ್ಷತ್ರದ ಪ್ರಕಾರ ನಾಮಕರಣ ಮಾಡುತ್ತಾರೆ. ನಂತರ ಹಿರಿಯರೆಲ್ಲ ಮಗುವಿಗೆ ಚಿನ್ನ, ಬಜೆ (ತೀಕ್ಷ್ಣ ಚೊಗರು ರುಚಿಯ ಒಂದು ಜಾತಿಯ ಸಸ್ಯ ಅದರ ಬೇರನ್ನು ಔಷಧಿಯಲ್ಲಿ ಬಳಸುತ್ತಾರೆ.) ಜೇನಿನಲ್ಲಿ ಅರೆದು ನಾಲಗೆಗೆ ನೆಕ್ಕಿಸಿ ಬಳಿಕ ಉಡುಗೊರೆ ನೀಡುತ್ತಾರೆ. ಮಗುವಿನ ಹೆಸರನ್ನು ಅಕ್ಕಿಯಲ್ಲಿ ಬರೆದು ತಂದೆ ಮಗುವಿನ ಕಿವಿಯಲ್ಲಿ ಉಸುರುವುದೇ ನಾಮಕರಣ.

ಅದೇ ದಿವಸ ಅಥವಾ ಮುಂದಿನ ಒಂದು ಶುಭ ಮುಹೂರ್ತದಲ್ಲಿ ಮುಸ್ಸಂಜೆ ಹೊತ್ತು ಗೋಧೂಳಿ ಲಗ್ನದಲ್ಲಿ ಮಗುವನ್ನು ತೊಟ್ಟಿಲಿಗೆ ಹಾಕುತ್ತಾರೆ. ಆ ದಿನ ಅಜ್ಜಿಯಂದಿರಿಗೆ ಬಹಳ ಸಂಭ್ರಮ. ತೊಟ್ಟಿಲನ್ನು ಶೃಂಗರಿಸಿ ತೊಟ್ಟಿಲಿಗೆ ತಮ್ಮ ಹಳೆಯ ಸೀರೆಗಳನ್ನು ಹಾಸಿ ಮಗುವನ್ನು ತೊಟ್ಟಿಲ ಅಡಿ ಮೇಲಿನಿಂದ ಮೂರು ಸುತ್ತು ತೆಗೆದು ತೊಟ್ಟಿಲಲಿ ಹಾಕಿ ಜೋಗುಳ ಹಾಕಿ ತೂಗುತ್ತಾರೆ. ನೆರೆದವರಿಗೆಲ್ಲಾ ಸಿಹಿ ತಿಂಡಿ ಹಂಚುತ್ತಾರೆ.

ಬಾಣಂತಿ ೪೦ ದಿವಸಗಳವರೆಗೆ ಮಲಗಿರುವುದು ಪದ್ಧತಿ. ಆದರೆ ಅನಿವಾರ್ಯ ಪ್ರಸಂಗಗಳಲ್ಲಿ ಬೇಗನೆ ಬಾಣಂತಿ ಸ್ನಾನ ಮಾಡುವುದೂ ಇದೆ. ಬಾಣಂತಿಗೆ ಆ ದಿನ ೪೦ ಬಿಂದಿಗೆ ನೀರು ಹೊಯ್ದು ಸ್ನಾನಮಾಡಿಸುತ್ತಾರೆ. ಹೆತ್ತ ದಿವಸದಿಂದ ಆಕೆ ಕುಡಿಯುವ ಔಷಧಿ, ಧಾತುಪುಷ್ಠಿ ಔಷಧಗಳೆಲ್ಲ ಅಂದಿಗೆ ಮುಗಿಯುತ್ತದೆ. ಆಕೆ ಮಿಂದು ಒಂದು ಹೊಸ ಸೀರೆ, ರವಿಕೆಯುಟ್ಟು ಆಭರಣ ತೊಟ್ಟು ಮಗುವಿನೊಂದಿಗೆ ಗಂಡನ ಮನೆಗೆ ಹೊರಡುತ್ತಾಳೆ. ಸಾಮಾನ್ಯವಾಗಿ ಹೆರಿಗೆ ತವರು ಮನೆಯಲ್ಲಿ ನಡೆಯುತ್ತದೆ. ಕನಿಷ್ಟ ಪ್ರಥಮ ಹೆರಿಗೆಯಾದರೂ ತವರಿನಲ್ಲಿ ನಡೆಯಬೇಕು ಬಾಣಂತಿ ಚಾಕರಿ ಮಾಡಿದವರಿಗೆ ಅಥವಾ ಅತ್ತೆಗೆ ಅಳಿಯ ಆ ದಿನ ಸೀರೆ ಕೊಡುವ ಪದ್ಧತಿ ಇದೆ.

'ಅನ್ನಪ್ರಾಶನ' ಎಂದರೆ ಮಗುವಿಗೆ ಪ್ರಥಮ ಬಾರಿಗೆ ಅನ್ನ ಕೊಡುವುದು.

ಇದು ಕೂಡಾ ಒಂದು ಸಂಸ್ಕಾರ. ಆ ದಿನ ವಿಶೇಷ ಅಡುಗೆ ಮಾಡುತ್ತಾರೆ. ಹಿರಿಯರೆಲ್ಲ ಮಗುವಿಗೆ ಒಂದೊಂದು ಅಗುಳು ತಿನಿಸಿ ಹರಸುತ್ತಾರೆ. ಉಡುಗೊರೆ ನೀಡುತ್ತಾರೆ.

ಮಗುವಿಗೆ ಕಿವಿಚುಚ್ಚುವ ಆಚರಣೆ ಬಹಳ ಸಂಭ್ರಮದಿಂದ ನಡೆಯುತ್ತದೆ. ಕಿವಿ ಚುಚ್ಚುವ ಬಗ್ಗೆ ಮಗುವಿನ ಪ್ರಾಯದ ಲೆಕ್ಕವಿಲ್ಲ. ೪ ವರ್ಷ ಪ್ರಾಯ ತುಂಬುವ ಮೊದಲು ಶುಭ ಮುಹೂರ್ತ ನೋಡಿ ಕಿವಿ ಚುಚ್ಚುತ್ತಾರೆ. ಸಿಹಿ ತಿಂಡಿ ಹಂಚುತ್ತಾರೆ. ಮಗುವಿನ ಕೂದಲನ್ನು ಪ್ರಥಮ ಬಾರಿಗೆ ಕತ್ತರಿಸುವ 'ಚವಲ' ಕಾರ್ಯಕ್ರಮ ಈಗ ಪ್ರತ್ಯೇಕವಾಗಿ ನಡೆಯುವುದಿಲ್ಲ. ಮುಂದೆ ನಡೆಯುವ ಉಪನಯನದಂದೇ ಪೂರ್ವಭಾವಿಯಾಗಿ ನಡೆಯುತ್ತದೆ. ಕೆಲವರು ಅನ್ನಪ್ರಾಶನ ಮಾಡಿಸುವ ಸಲುವಾಗಿ ಅಥವಾ ಚವಲ ಆಚರಣೆ ಮಾಡಿಸುವ ಬಗ್ಗೆ ಬೇರೆ ಬೇರೆ ದೇವರಿಗೆ ಹರಕೆ ಹೇಳಿಕೊಂಡಿರುತ್ತಾರೆ. ಹಾಗೆ ಹರಕೆ ಹೇಳಿಕೊಂಡಿದ್ದರೆ ಆಯಾಯ ದೇವಾಲಯಕ್ಕೆ ಹೋಗಿ ದೇವರ ಸಾನಿಧ್ಯದಲ್ಲಿ ಅನ್ನಪ್ರಾಶನ, ಚವಲ ನಡೆಸುತ್ತಾರೆ.

ಎಂಟನೆಯ ವರ್ಷದ ನಂತರ ಯಾವುದೇ ಬೆಸ ಸಂಖ್ಯೆಯ ವಯಸ್ಸಿನಲ್ಲಿ ಉಪನಯನ ಆಗಬಹುದು, ಈಗೀಗ ಉಪನಯನವನ್ನು ಶ್ರೀಮಂತರು ಬಹಳ ಅದ್ದೂರಿಯಿಂದ ನಡೆಸುತ್ತಾರೆ. ಈ ಸಂಸ್ಕಾರ ಪುರೋಹಿತರ ನೇತೃತ್ವದಲ್ಲಿ ನಡೆಯುತ್ತದೆ. ಉಪನಯನವಾದ ಬಳಿಕ ವಟುವು ಜೀವನದಲ್ಲಿ ಕೆಲವೊಂದು ನಿಯಮಗಳನ್ನು ಪಾಲಿಸಬೇಕೆಂಬ ನಿಯಮವಿದೆ. ದಿನಂಪ್ರತಿ ಕನಿಷ್ಟ ದಿನಕ್ಕೆರಡು ಸಲವಾದರೂ ಸಂಧ್ಯಾವಂದನೆ ಮಾಡಬೇಕು. ದೇಹ ಮತ್ತು ಉಡುಪುಗಳನ್ನು ಸ್ವಚ್ಛವಾಗಿಟ್ಟುಕೊಳ್ಳಬೇಕು. ಪ್ರಾಣಿಹಿಂಸೆ ಮಾಡಬಾರದು, ಎಂಜಲು ಮತ್ತು ಹಳಸಿದ ಪದಾರ್ಥಗಳನ್ನು ತಿನ್ನಬಾರದು. ಸಾತ್ವಿಕವಾದ ಆಹಾರವನ್ನೇ ಸೇವಿಸಬೇಕು. ಮಧ್ಯಾಹ್ನ ನಿದ್ದೆ ಮಾಡಬಾರದು, ಮುಂಜಾನೆ ಬೇಗನೆ ಏಳಬೇಕು, ಸ್ನಾನ ಮಾಡದೆ ಊಟ ಮಾಡಬಾರದು - ಇತ್ಯಾದಿ ವಿಚಾರಗಳನ್ನು ಆತನಿಗೆ ಉಪನಯನದ ಸಂದರ್ಭದಲ್ಲಿ ಬೋಧಿಸಲಾಗುತ್ತದೆ. ಕನಿಷ್ಟ ಒಂದು ವರ್ಷದವರೆಗಾದರೂ ಈ ನಿಯಮಗಳನ್ನು ಹೆಚ್ಚಿನವರು ಪಾಲಿಸುತ್ತಾರೆ.

ಹೆಣ್ಣು ಮಕ್ಕಳು ಪ್ರಥಮ ಬಾರಿ ಋತುಮತಿಯಾದಾಗ ಹಿಂದಿನ

ಕಾಲದಲ್ಲಿ ಅವರಿಗೆ 'ಮದುಮಗಳ ಮದುವೆ' ಎಂಬ ಒಂದು ಆಚರಣೆ ಮಾಡುವ ಪದ್ಧತಿ ಇತ್ತು. ಋತುಮತಿಯಾದ ಹೆಣ್ಣನ್ನು ನಾಲ್ಕು ದಿವಸಗಳವರೆಗೆ ಮನೆಯಿಂದ ಬೇರೆಯಾಗಿ ಕುಳ್ಳಿರಿಸಿ ಐದನೆಯ ದಿನ ಮುತ್ತೈದೆಯರೆಲ್ಲ ಸೇರಿ ಸ್ನಾನ ಮಾಡಿಸುತ್ತಿದ್ದರು. ಬಳಿಕ ಆಕೆಗೆ ಹೊಸ ಉಡುಪು ತೊಡಿಸಿ ತೆಂಗು ಇಲ್ಲವೇ ಹಲಸಿನ ಮರಕ್ಕೆ ನೀರು ಹೊಯಿಸುತ್ತಿದ್ದರು. ಒಳಗೆ ಕರೆದು ಅಡುಗೆ ಕೋಣೆಯ ಪಾತ್ರೆಗಳ ಪರಿಚಯ ಮಾಡಿಸಿ ಆಕೆಯಿಂದ ಒಲೆ ಬೆಂಕಿ ಹಚ್ಚಿಸುತ್ತಿದ್ದರು. ಅಂದಿನಿಂದ ಆಕೆ ಅಡುಗೆ ಮಾಡುವ ಅಧಿಕಾರ ಹೊಂದುತ್ತಾಳೆ ಎಂಬುದಕ್ಕಿದು ಸಂಕೇತ. ಬಳಿಕ ಕೆಲವು ದಿವಸಗಳವರೆಗೆ ಹಾಲನ್ನ, ತೆಂಗಿನಕಾಯಿ ಗಂಜಿ, ಮೆಂತೆ ಗಂಜಿ, ಕೊತ್ತಂಬರಿ ಗಂಜಿ ಇತ್ಯಾದಿಗಳನ್ನು ಮಾಡಿಕೊಡುತ್ತಾರೆ. ಮದುವೆಯಾಗುವವರೆಗೆ ಇಲ್ಲವೆ ಕೆಲವು ತಿಂಗಳವರೆಗಾದರೂ ಈ ರೀತಿ ಉಪಚಾರ ಮಾಡುವ ಪದ್ಧತಿ ಇದೆ. ಈಗ ಈ ಪದ್ಧತಿ ನಿಂತು ಹೋಗಿದೆ. ಈಗ ಮದುವೆಯ ದಿವಸ ನಾಂದಿ ಕಾರ್ಯಕ್ರಮದಲ್ಲಿ ಪುರೋಹಿತರೇ ಈ ಸಂಸ್ಕಾರ ನೆರವೇರಿಸುತ್ತಾರೆ.

ವರನೇ ವಧು ಅನ್ವೇಷಣೆ ಮಾಡಿ ಮದುವೆಯಾಗುವುದು ವಿಶ್ವಕರ್ಮರ ಪದ್ಧತಿ. ಸಕುಟುಂಬಿಕನಾಗಿ ವಧುವಿನ ಮನೆಗೆ ತೆರಳಿ ವಧುವನ್ನು ವರನು ನೋಡಿಕೊಂಡು ಬರುತ್ತಾನೆ. ತನಗೆ ವಧು ಆಗಬಹುದೆಂದಾದಲ್ಲಿ ವಧುವಿನ ಕಡೆಯವರನ್ನು ಬರಮಾಡಿಕೊಳ್ಳುತ್ತಾನೆ. ಪರಸ್ಪರ ಒಪ್ಪಿಗೆಯಾಗದಿದ್ದಲ್ಲಿ ಒಂದು ಕಡೆಯವರು ಇನ್ನೊಂದು ಕಡೆಯವರಲ್ಲಿ ಊಟ ಮಾಡುವುದಿಲ್ಲ. ಒಪ್ಪಿಗೆಯಾದ ನಂತರ ಮದುವೆಗೆ ದಿನ ನಿಶ್ಚಯ ಮಾಡುವ ಒಂದು ಕಾರ್ಯಕ್ರಮವಿದೆ. ಇದು ಹೆಣ್ಣಿನ ಮನೆಯಲ್ಲಿ ನಡೆಯುತ್ತದೆ. ಈ ಕಾರ್ಯಕ್ರಮಕ್ಕೆ ಗಂಡಿನ ಕಡೆಯ ಅವರು ಬಂಧುಮಿತ್ರರೊಡಗೂಡಿ ಬರುತ್ತಾರೆ. ಪುರೋಹಿತರು ಹಾಗೂ ಎರಡು ಕಡೆಯ ಮೊಕ್ತೇಸರರೂ ಇರುತ್ತಾರೆ. ಮಾತುಕತೆಯಾಗಿ ಮದುವೆ ದಿನ ನಿಶ್ಚಯವಾದ ಬಳಿಕ ಅದನ್ನು ಬೇರೆ ಬೇರೆ ಕಾಗದದಲ್ಲಿ ಬರೆದಿಡಲಾಗುತ್ತದೆ. ಇದನ್ನು ಲಗ್ನ ಪತ್ರಿಕೆ ಎನ್ನುತ್ತಾರೆ. ಒಂದು ಪತ್ರದಲ್ಲಿ ಹೆಣ್ಣು ಕೊಡುವ ಬಗ್ಗೆ ಒಪ್ಪಿಗೆ ಬರೆದು ಹೆಣ್ಣಿನ ಕಡೆಯ ಹಿರಿಯರೆಲ್ಲರ ಸಹಿ ಮಾಡಿಸಲಾಗುತ್ತದೆ. ಇನ್ನೊಂದು ಪತ್ರದಲ್ಲಿ ಹೆಣ್ಣನ್ನು ವಧುವಾಗಿ ಸ್ವೀಕರಿಸುವ ಬಗ್ಗೆ ಒಪ್ಪಿಗೆ ಬರೆದು ಗಂಡಿನ ಕಡೆಯ ಹಿರಿಯರ ಸಹಿ ಹಾಕಿಸಲಾಗುತ್ತದೆ. ಈ ಪತ್ರಗಳನ್ನು ಅಡಿಕೆ, ವೀಳ್ಯದ ಜೊತೆ

ಹರಿವಾಣದಲ್ಲಿಟ್ಟು ಪರಸ್ಪರ ವಿನಿಮಯ ಮಾಡಿಕೊಳ್ಳುತ್ತಾರೆ. ಆ ದಿನ ವರನ ಕಡೆಯವರು ವಧುವಿಗೆ ಹೂ, ಸೀರೆ ಕೊಡುವ ಕ್ರಮವಿದೆ. ಅದನ್ನು ಆಕೆ ಉಟ್ಟು ಗಂಡಿನ ಕಡೆಯವರ ಸಹಿತ ಹಿರಿಯರೆಲ್ಲರ ಕಾಲಿಗೆ ನಮಸ್ಕಾರ ಮಾಡಬೇಕು. ಹಿಂದಿನ ಕಾಲದಲ್ಲಿ ವರನು ಲಗ್ನಪತ್ರಿಕೆ ಸಮಾರಂಭಕ್ಕೆ ಬರುವ ಪದ್ಧತಿ ಇರಲಿಲ್ಲ. ಇತ್ತೀಚೆಗೆ ಗಂಡು ಭಾಗವಹಿಸುವುದು ಮಾತ್ರವಲ್ಲ, ಹೆಣ್ಣಿನ ಬೆರಳಿಗೆ ಉಂಗುರವಿಟ್ಟು ಒಟ್ಟು ನಿಂತು ಭಾವಚಿತ್ರ ತೆಗೆಸಿಕೊಳ್ಳುವವರೆಗೆ ಬದಲಾವಣೆಗೊಂಡಿದೆ. ಆ ದಿನ ಭರ್ಜರಿ ಊಟವಂತೂ ಆಗಲೇ ಬೇಕು. ಬಹುಶಃ ವಿಶ್ವಕರ್ಮರಲ್ಲಿದ್ದಂತೆ ಲಗ್ನದ ಬಗ್ಗೆ ಲಿಖಿತ ಒಪ್ಪಿಗೆ ಪತ್ರ ಬರೆಸಿ ವಿನಿಮಯ ಮಾಡಿಕೊಳ್ಳುವ ಪದ್ಧತಿ ಇನ್ಯಾವ ಜಾತಿಯವರಲ್ಲೂ ಅಪರೂಪವಾಗಿರಬಹುದು, ಆದರೆ ಒಂದು ವಿಶೇಷವೆಂದರೆ ಈ ಲಗ್ನಪತ್ರಿಕೆಯಲ್ಲಿ ವರನ ಅಥವಾ ವಧುವಿನ ಸಹಿ ಹಾಕಿಸುವ ವಾಡಿಕೆಯೇ ಇಲ್ಲ.

ಹಿಂದಿನ ಕಾಲದಲ್ಲಿ ಮದುವೆ ಹೆಣ್ಣಿನ ಕಡೆಯಲ್ಲಿ ನಡೆಯುತ್ತಿತ್ತು. ವಿಶ್ವಕರ್ಮರಲ್ಲಿ ವರದಕ್ಷಿಣೆ ಪದ್ಧತಿ ಇರಲಿಲ್ಲ. ಇತ್ತೀಚೆಗೆ ವರೋಪಚಾರವಾಗಿ ಕೊಡುವ ಚಿನ್ನದ ಜನಿವಾರ, ಪವಿತ್ರದ ಉಂಗುರ ಬೆಳ್ಳಿಯ ಕವಳಿಗೆ, ಸೌಟು, ಪಂಚೆ, ಶಾಲು ಇದರ ಜೊತೆಗೆ ವರದಕ್ಷಿಣೆಯನ್ನು ಚಿನ್ನದ ಆಭರಣದ ರೂಪದಲ್ಲಿ ಪಡೆಯುವ ಪದ್ಧತಿ ರೂಢಿಗೆ ಬಂದಿದೆ. ಮದುವೆಯು ಬ್ರಾಹ್ಮಣ ಪದ್ಧತಿಯಲ್ಲಿ ನಡೆಯುತ್ತದೆ. ಮದುವೆಯ ಮರುದಿನ ಅಥವಾ ಅನುಕೂಲಕ್ಕೆ ಸರಿಯಾಗಿ ಇನ್ನೊಂದು ದಿನ ಪ್ರಸ್ತ ನಡೆಯುತ್ತದೆ. ಪ್ರಸ್ತವನ್ನು ಅವರವರು ಇಷ್ಟಪಟ್ಟಂತೆ ಹೆಣ್ಣಿನ ಮನೆಯಲ್ಲಿ ಅಥವಾ ಗಂಡಿನ ಮನೆಯಲ್ಲಿ ಇಟ್ಟುಕೊಳ್ಳುತ್ತಾರೆ. ಮದುವೆಯಾದ ಬಳಿಕ ಹೆಣ್ಣಿನ ಕಡೆಯವರು ಬಂದು ಮದು ಮಕ್ಕಳನ್ನು ಕರೆದುಕೊಂಡು ಹೋಗುತ್ತಾರೆ. ಹಾಗೆ ಹೆಣ್ಣಿನ ಮನೆಗೆ ಹೋದ ಮದು ಮಕ್ಕಳನ್ನು ಗಂಡಿನ ಕಡೆಯವರು ಹೋಗಿ ಕರೆದುಕೊಂಡು ಬರುತ್ತಾರೆ.

ಹೆಣ್ಣು ಗರ್ಭಿಣಿಯಾಗಿ ಏಳನೇ ತಿಂಗಳಲ್ಲಿ ಸೀಮಂತ ನಡೆಯುತ್ತದೆ. ಸೀಮಂತ ಗಂಡನ ಮನೆಯಲ್ಲಿ ನಡೆಯುತ್ತದೆ. ತವರು ಮನೆಯವರು ಸೀಮಂತಕ್ಕೆ ಬರುವಾಗ ಹೊದ್ಲು, ಅವಲಕ್ಕಿ, ಚಕ್ಕುಲಿ, ಬಾಳೆಹಣ್ಣು ತರುತ್ತಾರೆ. ಪುರೋಹಿತರ ಮಾರ್ಗದರ್ಶನದಲ್ಲಿ ಸೀಮಂತ ಸಂಸ್ಕಾರ ನಡೆಯುತ್ತದೆ. ಕೂಡಿರುವ ಮುತ್ತೈದೆಯರು ಗರ್ಭಿಣಿಗೆ ಹೊಸ ಸೀರೆ ಉಡಿಸಿ ಆಭರಣಗಳನ್ನು ತೊಡಿಸಿ

ಶೃಂಗರಿಸುತ್ತಾರೆ. ಅಡಿಕೆ ಹೂ (ಪಿಂಗಾರ) ಮಲ್ಲಿಗೆ ಗುಲಾಬಿ ಇತ್ಯಾದಿಗಳನ್ನು ಮುಡಿಸುತ್ತಾರೆ. ಹೀಗೆ ಮುಡಿಸುವ ಪಿಂಗಾರದ ಬುಡದಲ್ಲಿ ಅಡಿಕೆಮಿಡಿ (ನಳ್ಳಿ) ಇರಬೇಕು. ನಳ್ಳಿ ಇರದ ಪಿಂಗಾರ ಬಳಸುವುದಿಲ್ಲ. ಮುಳ್ಳು ಹಂದಿಯ ಕಣಶೇ (ಮುಳ್ಳು)ಗೆ ಅಡಿಕೆ, ಅತ್ತಿಕಾಯಿ ಪೋಣಿಸಿ ಮುಡಿಗಿಡುತ್ತಾರೆ. ಕುಳ್ಳಿರಿಸಿ ಆರತಿ ಎತ್ತುತ್ತಾರೆ. ನಂತರ ತವರು ಮನೆಯಿಂದ ತಂದ ಭಕ್ಷ್ಯಗಳ ಜೊತೆಯಲ್ಲಿ ತಾವು ತಂದಿರಿಸಿದ ಹೊದ್ಲು ಬೆಲ್ಲ ತೆಂಗಿನಕಾಯಿ ಅವಲಕ್ಕಿ ಬೆರೆಸಿ ಬಡಿಸುತ್ತಾರೆ. ಜೊತೆಯಲ್ಲಿ ಚಕ್ಕುಲಿ, ಬಾಳೆಹಣ್ಣು ಹಾಗೂ ಸಿಹಿ ತಿಂಡಿಗಳನ್ನು ಬಡಿಸುತ್ತಾರೆ. ಆ ಸಂದರ್ಭದಲ್ಲಿ ಒಂದು ಚಿಕ್ಕ ಮಗು ಚಕ್ಕುಲಿ, ಹೋಳಿಗೆ ಜಿಲೇಬಿ ಎತ್ತಿದ್ದರೆ ಹುಟ್ಟುವ ಮಗು ಹೆಣ್ಣು. ಬಾಳೆಹಣ್ಣು, ಲಾಡು ಎತ್ತಿದರೆ ಗಂಡೆಂದು ಊಹಿಸಿಕೊಳ್ಳುತ್ತಾರೆ. ಸೀಮಂತವಾದ ಬಳಿಕ ಗರ್ಭಿಣಿಯನ್ನು ತಂದೆ-ತಾಯಿ ತವರಿಗೆ ಕರೆದುಕೊಂಡು ಹೋಗುತ್ತಾರೆ.

ಹುಟ್ಟಿದ ಮನುಷ್ಯನಿಗೆ ಸಾವು ನಿಶ್ಚಿತ. ಸತ್ತ ಬಳಿಕ ವ್ಯಕ್ತಿಗೆ ಮಾಡುವ ಸಂಸ್ಕಾರಗಳು ಬೇರೆ ಬೇರೆ ಜಾತಿ ಧರ್ಮಗಳಲ್ಲಿ ಬೇರೆ ಬೇರೆ ರೀತಿಯದ್ದಾಗಿರುತ್ತದೆ. ವಿಶ್ವಕರ್ಮರಲ್ಲಿ ಯಾರಾದರೊಬ್ಬ ವ್ಯಕ್ತಿ ಸಾಯುವ ಸ್ಥಿತಿಯಲ್ಲಿರುವಾಗ ಮಕ್ಕಳು ಕುಟುಂಬದವರೆಲ್ಲ ಬಂದು ಸೇರುತ್ತಾರೆ. ಪ್ರಾಣ ಹೋಗುವ ಸಂದರ್ಭದಲ್ಲಿ ಬಾಯಿಗೆ ತುಳಸಿದಳ ಅಕ್ಕಿ ಬೆರೆಸಿದ ನೀರನ್ನು ಬಿಟ್ಟು "ಸ್ವರ್ಗಕ್ಕೆ ಹೋಗಿ" ಎನ್ನುತ್ತಾರೆ. ಬಳಿಕ ಬಿಳಿ ಬಟ್ಟೆಯಿಂದ ಮುಸುಕು ಹಾಕುತ್ತಾರೆ. ತಲೆ ಮತ್ತು ಕಾಲಿನ ಬಳಿ ಒಂದಿಷ್ಟು ಅಕ್ಕಿ ಮತ್ತು ಭತ್ತರಾಶಿ ಹಾಕುತ್ತಾರೆ. ತೆಂಗಿನಕಾಯಿ ಒಡೆದು ಅದರ ಗಡಿ (ಹೋಳು)ಗಳನ್ನು ಈ ರಾಶಿಯಲ್ಲಿಟ್ಟು ಅದಕ್ಕೆ ಎಣ್ಣೆಹೊೖದು ಬತ್ತಿ ಹಾಕಿ ದೀಪ ಹಚ್ಚಿಡುತ್ತಾರೆ.

ಅಂಗಳದ ಮೂಲೆಯಲ್ಲಿ ಮಣ್ಣಿನ ಮಡಕೆಯಲ್ಲಿ ನೀರು ಕಾಯಿಸುತ್ತಾರೆ. ಆ ಮಡಕೆಗೆ ಮುಚ್ಚಳವಿರುವುದಿಲ್ಲ. ನೀರು ಬಿಸಿಯಾದ ಮೇಲೆ ಹೆಣವನ್ನು ತಂದು ಮರದ ಹಲಗೆಯ ಮೇಲೆ ಮಲಗಿಸಿ ಹೆಂಗಸರು ಶೀಗೆ, ಬಾಗೆ ಹಚ್ಚಿ ಸ್ನಾನ ಮಾಡಿಸುತ್ತಾರೆ. ನಂತರ ಗಂಡಸರು ಉಡುಪು ತೊಡಸಿ ಶೃಂಗಾರ ಮಾಡುತ್ತಾರೆ. ಪಂಚೆ ಉಡಿಸಿ ಶಾಲು ಹಾಕಿ ತಲೆಗೆ ಮುಂಡಾಸು ಕಟ್ಟುತ್ತಾರೆ. ಹಣೆಗೆ ವಿಭೂತಿ ಹಚ್ಚುತ್ತಾರೆ. ಮನೆಯ ಜಗಲಿಯಲ್ಲಿ ಮಲಗಿಸಿ ಪಕ್ಕದಲ್ಲಿ ದೀಪ ಹಚ್ಚಿಡುತ್ತಾರೆ. ಹೊಸ್ತಿಲಲ್ಲಿ ವೀಳ್ಯ ಜಜ್ಜಿ ಬಾಯಿಗಿಡುತ್ತಾರೆ. ಹಣೆಗೆ

ನಾಣ್ಯ ಇಡುತ್ತಾರೆ. ಬಂದಿರುವ ಎಲ್ಲ ನೆಂಟರಿಷ್ಟರು ಹೆಣಕ್ಕೆ ಹೂಮಾಲೆ ಹಾಕಿ ನಮಸ್ಕಾರ ಮಾಡುತ್ತಾರೆ. ಎಲ್ಲರೂ ಹೆಣದ ಬಾಯಿಗೆ ಮತ್ತೊಮ್ಮೆ ನೀರು ಬಿಟ್ಟು ಹೆಣದ ಕಾಲಿನ ಹೆಬ್ಬೆರಳು ಹಾಗೂ ಕೈಗಳ ಹೆಬ್ಬೆರಳುಗಳನ್ನು ಜೋಡಿಸಿ ಕಟ್ಟುತ್ತಾರೆ. ಹೆಣವನ್ನು ಬಿದಿರಿನ ಚಟ್ಟ (ಸಿದಿಗೆ)ಕ್ಕೆ ಏರಿಸುತ್ತಾರೆ. ಹೆಣವನ್ನು ಸತ್ತ ವ್ಯಕ್ತಿಯ ಮಕ್ಕಳು ಇಲ್ಲವೇ ಹತ್ತಿರದ ಸಂಬಂಧಿಗಳು ಸಿದಿಗೆಯಲ್ಲಿ ಶ್ಮಶಾನದೆಡೆಗೆ ಕೊಂಡೊಯ್ಯುತ್ತಾರೆ. ಒಬ್ಬಾತ ಮಣ್ಣಿನ ಮಡಕೆಯಲ್ಲಿ ತೆಂಗಿನ ಸಿಪ್ಪೆಯಲ್ಲಿ ಬೆಂಕಿ ಕೆಂಡ ಹಾಕಿ, ಮಡಕೆಯ ಬಾಯಿಗೆ ಹಗ್ಗ ಹಾಕಿ ಅವರ ಜೊತೆ ಹಿಡಿದುಕೊಂಡು ಹೋಗುತ್ತಾನೆ. ಹೆಣವನ್ನು ಚಿತೆಯಲ್ಲಿ ಉತ್ತರ ದಕ್ಷಿಣವಾಗಿ ಇಟ್ಟ ಬಳಿಕ ಮಕ್ಕಳು ಚಿತೆಗೆ ಅಪ್ರದಕ್ಷಿಣವಾಗಿ ಮೂರು ಸುತ್ತು ಬಂದು ಬೆಂಕಿ ಕೊಡುತ್ತಾರೆ. ಚಿತೆಗೆ ಮಾವು, ಹಲಸು ಮತ್ತು ಶ್ರೀಗಂಧದ ಕಟ್ಟಿಗೆಯನ್ನು ಬಳಸುವುದು ರೂಢಿ. ಹೆಣ ಸುಟ್ಟ ಬಳಿಕ ವೈದಿಕ ಪದ್ಧತಿಗನುಸಾರವಾಗಿ ಮೂರು, ಏಳು ಅಥವಾ ಒಂಭತ್ತನೆಯ ದಿನದಿಂದ ಕ್ರಿಯೆಗಳು ಪ್ರಾರಂಭವಾಗುತ್ತವೆ. ಹನ್ನೊಂದನೆಯ ದಿನ ಶುದ್ದ, ಹನ್ನೆರಡನೆಯ ದಿನ ಉತ್ತರ ಕ್ರಿಯೆ ಮತ್ತು ಹದಿಮೂರನೆಯ ದಿನ ಸಮಾರಾಧನೆ ನಡೆಯುತ್ತದೆ. ಉತ್ತರ ಕ್ರಿಯೆ ಮತ್ತು ಮುಂದೆ ಒಂದು ವರ್ಷದವರೆಗೆ ತಿಂಗಳಿಗೊಮ್ಮೆ ನಡೆಯುವ ಮಾಸಿಕ, ವರ್ಷಕ್ಕೊಮ್ಮೆ ನಡೆಯುವ ಶ್ರಾದ್ಧದ ಊಟಕ್ಕೆ ಕುಂಬಳಕಾಯಿ, ಬಾಳೆಕಾಯಿ, ಹೆಸರು - ಇವುಗಳಿಂದ ತಯಾರಿಸಿದ ವ್ಯಂಜನ ಗಳು, ಉದ್ದು, ಅಕ್ಕಿ ಬೆರೆಸಿ ಮಾಡಿದ ತಿಂಡಿ (ಕೊಟ್ಟಿಗೆ, ಮೂಡೆ) ವಡೆ ಮತ್ತು ಗೋಧಿಯ ಪಾಯಸ ಆಗಲೇಬೇಕು.

ಹಬ್ಬಗಳು

ವಿಶ್ವಕರ್ಮರು ಹಿಂದೂ ಪದ್ಧತಿಯ ಎಲ್ಲಾ ಹಬ್ಬಗಳನ್ನು ಆಚರಿಸುತ್ತಾರೆ. ಋಗೂಪಾಕರ್ಮ (ನೂಲಶ್ರವಣ) ನಾಗರಪಂಚಮಿ, ಕೃಷ್ಣಾಷ್ಟಮಿ, ಗಣೇಶ ಚತುರ್ಥಿ, ನವರಾತ್ರಿ, ದೀಪಾವಳಿ, ಯುಗಾದಿ ಇತ್ಯಾದಿ ಹಬ್ಬಗಳು ಅವರಿಗೆ ಮುಖ್ಯವಾಗಿರುತ್ತವೆ. ಉಪಾಕರ್ಮ, ಗಣೇಶ ಚತುರ್ಥಿ, ನವರಾತ್ರಿ, ಯುಗಾದಿ ಹಬ್ಬಗಳನ್ನು ಪ್ರತಿಯೊಂದು ಮನೆಯಲ್ಲೂ ವಿಶೇಷ ರೀತಿಯಲ್ಲಿ ಆಚರಿಸುತ್ತಾರೆ. ಕನ್ಯಾ ಸಂಕ್ರಮಣದಂದು ಸಾಮೂಹಿಕವಾಗಿ ವಿಶ್ವಕರ್ಮ ಪೂಜೆ ನಡೆಸಲಾಗುತ್ತದೆ.

ನವರಾತ್ರಿಯ ಪೂಜೆ ಪ್ರತಿಯೊಂದು ಮನೆಯಲ್ಲೂ ನಡೆಯುತ್ತದೆ. ಚಾಂದ್ರಮಾನ ಯುಗಾದಿಯಿಂದ ಇವರು ಹೊಸ ವರ್ಷವನ್ನು ಪ್ರಾರಂಭಿಸುತ್ತಾರೆ. ಶ್ರಾವಣ ಮಾಸ ಇವರಿಗೆ ಪ್ರವಿತ್ರ ತಿಂಗಳು. ಈ ತಿಂಗಳಲ್ಲಿ ಮಹಿಳೆಯರು ಪ್ರತಿದಿನ ಶುಚಿರ್ಭೂತರಾಗಿ ರಂಗವಲ್ಲಿ ಬರೆದು ಹೊಸ್ತಿಲ ಪೂಜೆ ನಡೆಸುತ್ತಾರೆ. ಹಳ್ಳಿ ಪ್ರದೇಶಗಳಲ್ಲಿ ಈಗಲೂ ಸ್ಥಳೀಯ ಸಾಂಪ್ರದಾಯಕ ಹಬ್ಬಗಳನ್ನು ಚಾಂದ್ರಮಾನ ಹಬ್ಬಗಳ ಜೊತೆಯಲ್ಲಿ ಆಚರಿಸಿಕೊಂಡು ಬರುವುದನ್ನು ಬಿಟ್ಟಿಲ್ಲ. ಸಾಮಾನ್ಯವಾಗಿ ಊರ ದೈವ ದೇವರುಗಳಿಗೆ ಬೇಕಾದ ಆಭರಣಗಳನ್ನು ತಯಾರಿಸಿ ಕೊಡುವುದು, ವರ್ಷಕ್ಕೊಮ್ಮೆ ಜಾತ್ರೆಯ ಸಂದರ್ಭದಲ್ಲಿ ಆಭರಣಗಳನ್ನು ತೊಳೆದುಕೊಡುವುದು ಇವರ ಹಕ್ಕಿನ ಕೆಲಸ. ಕಲ್ಕುಡ, ಕಲ್ಲುರ್ಟಿ ಪಂಜುರ್ಲಿ, ಗುಳಿಗಭೂತಗಳು ಹೆಚ್ಚಾಗಿ ಇವರ ಆರಾಧ್ಯ ದೈವಗಳು.

ಸಂಸ್ಕೃತಿ :

ವಿಶ್ವಕರ್ಮ ಮಹಿಳೆಯರು ಕೂಡಾ ತುಂಬಾ ಆಚಾರವಂತರು. ಮನೆಯನ್ನು ಚೆನ್ನಾಗಿ ಸಾರಿಸಿ ಸ್ವಚ್ಛವಾಗಿ ಇಟ್ಟುಕೊಳ್ಳುತ್ತಾರೆ. ಹಿಂದೆ ಹಳ್ಳಿ ಮನೆಗಳಲ್ಲಿ ಸಿಮೆಂಟಿನ ಬಳಕೆ ಇದ್ದಿರಲಿಲ್ಲ. ಅಂತಹ ಕಾಲದಲ್ಲಿ ಈ ಮಹಿಳೆಯರೇ ನೆಲವನ್ನು ಕಲ್ಲಿನಿಂದ ಅರೆದು ಅರೆದು ನಯಗೊಳಿಸಿ ಹೊಳೆಯುವಂತೆ ಮಾಡಿಡುತ್ತಿದ್ದರು. ಕೇವಲ ಮನೆಯೊಳಗೆ ಮಾತ್ರವಲ್ಲ ಅಂಗಳವನ್ನು, ತುಳಸಿ ಕಟ್ಟೆಯನ್ನು ಕೂಡಾ ಅದೇ ರೀತಿ ಅರೆದು ಬಹಳ ಅಂದವಾಗಿ ಇಡುತ್ತಿದ್ದರು. ತುಳಸಿ ಕಟ್ಟೆಯ ಎದುರು ಪ್ರತಿದಿನ ರಂಗೋಲಿ ಬಿಡಿಸುತ್ತಾರೆ. ಮುಂಜಾನೆ ಮತ್ತು ಸಂಜೆ ಎರಡು ಹೊತ್ತು ತುಳಸಿಗೆ ನೀರೆರೆದು ನಮಸ್ಕಾರ ಮಾಡುತ್ತಾರೆ. ಸ್ನಾನ ಮಾಡಿ ಅಡುಗೆ ಮಾಡುತ್ತಾರೆ. ಹಬ್ಬದ ದಿನಗಳಲ್ಲಿ ವಿಶೇಷ ಭಕ್ಷ್ಯಗಳಿಂದ ಕೂಡಿದ ಮೃಷ್ಟಾನ್ನ ತಯಾರಿಸಿ ಅತಿಥಿಗಳಿಗೆ ನೀಡುತ್ತಾರೆ. ಅತಿಥಿ ಸತ್ಕಾರ ಮಾಡುವುದರಲ್ಲೂ ಇವರು ಪರಿಣತರು, ಮನೆ ಮನೆಯಲ್ಲೂ ಸಂಜೆ ಹೊತ್ತಿಗೆ ಭಜನೆ ನಡೆಯುತ್ತದೆ, ಮದುವೆ ಸಂದರ್ಭದಲ್ಲಿ ಧರಿಸಿದಂತಹ ತಾಳಿಯನ್ನು ಬಹಳ ಪವಿತ್ರ ಭಾವನೆಯಿಂದ ನೋಡುತ್ತಾರೆ. ತಾಳಿ ಕೊರಳಲ್ಲಿ ಇಲ್ಲದಿದ್ದರೆ ಊಟ ಮಾಡುವುದಿಲ್ಲ. ಬಹಿಷ್ಟೆಯಾದಾಗ ನಾಲ್ಕು ದಿವಸ ಸೂತಕದ ದಿನಗಳೆಂದು ಪರಿಗಣಿಸುತ್ತಾರೆ. ಹಳ್ಳಿಗಳಲ್ಲಿ ಈ ದಿನಗಳನ್ನು ಬಹಳ ಸಂಪ್ರದಾಯಬದ್ಧವಾಗಿ

ಆಚರಿಸುತ್ತಾರೆ. ಹಿಂದೆ ಆಚಾರವಂತ ಗಣ್ಯ ಮನೆತನದ ಸ್ತ್ರೀಯರು ೮ ಮೊಳ ಉದ್ದದ ಸೀರೆಯನ್ನ ಕಚ್ಚೆ ಹಾಕಿ ಉಡುತ್ತಿದ್ದರು. ಹಣೆಗೆ ಅಡ್ಡ ಕುಂಕುಮ ನಾಮ ಹಾಕುತ್ತಿದ್ದರು. ಶ್ರಾವಣ ಮಾಸದ ವಿಶೇಷ ದಿನಗಳಲ್ಲಿ ಮತ್ತು ಇತರ ವ್ರತ ದಿನಗಳನ್ನು ಕಟ್ಟುನಿಟ್ಟಾಗಿ ಪಾಲಿಸುತ್ತಿದ್ದರು. ಇತ್ತೀಚೆಗೆ ಇವರಲ್ಲಿ ಪುರುಷರಿಗಿಂತ ಮಹಿಳೆಯರೇ ಹೆಚ್ಚು ವಿದ್ಯಾವಂತರಾಗಿದ್ದಾರೆ. ಮಹಿಳೆಯರು ಕೂಲಿ ಕೆಲಸಕ್ಕೆ ಹೋಗುವುದಿಲ್ಲ. ಹಳ್ಳಿಯ ಬಡಕುಟುಂಬಗಳ ಮಹಿಳೆಯರು ಹಿಂದೆ ಚಿನ್ನಕ್ಕೆ ಒಪ್ಪ ಹಾಕಿ ಗೋಪು ನೇಯುವ ಕೆಲಸ, ಚಿನ್ನದ ತೂಕ ಪದ್ಧತಿ ಕೆಲಸ ಮಾಡುತ್ತಿದ್ದರು. ಈಗ ಟೈಲರಿಂಗ್ ಮಾಡುವ ಬೀಡಿ ಸುತ್ತುವ ಕೆಲಸಗಳನ್ನು ಮಾಡುತ್ತಾರೆ.

ವಿಶ್ವಕರ್ಮರದ್ದು ಪಿತೃ ಪ್ರಧಾನ ಕುಟುಂಬ ಪದ್ಧತಿ. ಹಿಂದಿನ ಕಾಲದಲ್ಲಿ ಗಣ್ಯ ಪುರುಷರು ಕಚ್ಚೆ ಹಾಕಿ ಪಂಚೆ ಉಡುತ್ತಿದ್ದರು. ಹಣೆಗೆ ವಿಭೂತಿ ಅಡ್ಡನಾಮ ಹಾಕಿ ಮಧ್ಯೆ ಕುಂಕುಮದ ಬೊಟ್ಟ ಇಟ್ಟುಕೊಳ್ಳುತ್ತಿದ್ದರು. ಕಿವಿಯಲ್ಲಿ ಹರಳು ಹುದುಗಿಸಿದ ಕಾಲಿನ ಒಂಟಿ ಇರುತ್ತಿತ್ತು. ಶಿಖೆ ಧರಿಸುತ್ತಿದ್ದರು, ಹೊರಗಡೆ ಹೋಗುವಾಗ ನಿಲುವಂಗಿ ಧರಿಸಿ ಹೆಗಲಿಗೊಂದು ಶಾಲು ಧರಿಸಿಕೊಳ್ಳುತ್ತಿದ್ದರು. ತಲೆಗೆ ರುಮಾಲು ಸುತ್ತಿಕೊಳ್ಳುತ್ತಿದ್ದರು. ಮನೆಯಲ್ಲಿರುವಾಗ ಧೋತಿ ಉಟ್ಟುಕೊಂಡು ಹೆಗಲಿಗೊಂದು ಬೈರಾಸು ಹಾಕಿಕೊಳ್ಳುತ್ತಿದ್ದರು. ಇವರು ಈಗಲೂ ಕೂಡಾ ಊಟ ಮಾಡುವ ಸಂದರ್ಭದಲ್ಲಿ ಅಂಗಿ ಧರಿಸುವುದಿಲ್ಲ. ಮದುವೆ ಸಮಾರಂಭಗಳಲ್ಲಿ ಸಹಭೋಜನದ ನಿಯಮಗಳನ್ನು ಪಾಲಿಸುತ್ತಾರೆ. ಹಿಂದೆ ಸ್ವಜಾತಿಯವರ ಮನೆಗಳನ್ನು ಬಿಟ್ಟರೆ ಬೇರೆಲ್ಲೂ ಊಟ ಮಾಡುತ್ತಿರಲಿಲ್ಲ. ವಿಶ್ವಕರ್ಮರಲ್ಲಿ ಹೆಚ್ಚಿನವರು ಅಕ್ಷರಜ್ಞಾನವುಳ್ಳವರು, ಪ್ರತಿಯೊಬ್ಬ ಚಿನ್ನದ ಕೆಲಸಗಾರರೂ ಗಿರಾಕಿಗಳು ಕೊಟ್ಟ ಚಿನ್ನದ ತೂಕವನ್ನು ಬರೆದಿಟ್ಟು ಕೊಳ್ಳಬೇಕಾಗುತ್ತದೆ. ಹೀಗಾಗಿ ಇವರ ಓದು ಬರಹ ಅನಿವಾರ್ಯವಾಗಿ ಕಲಿಯಬೇಕಾಗುತ್ತದೆ. ಇವರಲ್ಲಿ ಹೆಚ್ಚಿನವರು ಕುಲಕಸುಬಿನಲ್ಲೇ ಆಸಕ್ತರಿರುವುದರಿಂದ ಪುರುಷರು ವಿದ್ಯಾಭ್ಯಾಸವನ್ನು ಮುಂದುವರಿಸುವುದಿಲ್ಲ. ಏಳನೇ ತರಗತಿಯಿಂದ ಹತ್ತನೇ ತರಗತಿಯ ಮಧ್ಯೆ ವಿದ್ಯಾಭ್ಯಾಸವನ್ನು ನಿಲ್ಲಿಸಿ ಬಿಡುತ್ತಾರೆ. ಹೀಗಾಗಿ ಉನ್ನತ ಶಿಕ್ಷಣ ಪಡೆದವರ ಸಂಖ್ಯೆ ಬಹಳ ವಿರಳ. ರಾಜಕೀಯ ಕ್ಷೇತ್ರದಲ್ಲಿ ಇವರು ಬಹಳ ಹಿಂದುಳಿದಿದ್ದಾರೆ. ಇಡಿಯ ಕರ್ನಾಟಕದಲ್ಲಿ

ವಿಶ್ವಕರ್ಮರನ್ನು ಪ್ರತಿನಿಧಿಸುವ ಒಬ್ಬನೇ ಒಬ್ಬ ವಿಧಾನ ಸಭಾ ಸದಸ್ಯನಿಲ್ಲ. ಗ್ರಾಮೀಣ ಮಟ್ಟದಲ್ಲಿಯೂ ರಾಜಕೀಯ ನಾಯಕರಿಲ್ಲ. ವಿಶ್ವಶರ್ಮರು ಹಿಂದುಗಳಲ್ಲಿ ಅಲ್ಪಸಂಖ್ಯಾತರಾದುದರಿಂದ ಅವರಲ್ಲಿ ನಾಯಕತ್ವದ ಕೊರತೆ ಇರುವುದರಿಂದ, ಶ್ರೀಮಂತರ ಸಂಖ್ಯೆ ಕಡಿಮೆ ಇರುವುದರಿಂದ ಇವರು ರಾಜಕೀಯದಲ್ಲಿ ಹಿಂದುಳಿಯಲು ಕಾರಣವಾಯಿತು.

ಆದರೆ ಇವರು ಸಂಘ ಸಂಸ್ಥೆಗಳನ್ನು ಕಟ್ಟಿಕೊಳ್ಳುವುದರಲ್ಲಿ ಆಸಕ್ತರು. ದಕ್ಷಿಣ ಕನ್ನಡದಲ್ಲಿ ವಿಶ್ವಕರ್ಮರ ಸುಮಾರು ೫೦-೬೦ ಸಂಘ ಸಂಸ್ಥೆಗಳಿವೆ. ಈ ಸಂಘ ಸಂಸ್ಥೆಗಳೆಲ್ಲ ಧಾರ್ಮಿಕ ತಳಹದಿಯ ಮೇಲೆ ರೂಪುಗೊಂಡವುಗಳಾದ ಕಾರಣ ಹೆಚ್ಚು ಬೆಳವಣಿಗೆಯನ್ನು ಹೊಂದಲು ಸಾಧ್ಯವಾಗಲಿಲ್ಲ. ಎಲ್ಲಾ ಸಂಘಗಳೂ ಸಾಮೂಹಿಕ ಉಪಾಕರ್ಮಗಳು, ವಿಶ್ವಕರ್ಮ ಪೂಜೆ, ಸಾಮೂಹಿಕ ಉಪನಯನ, ವಿವಾಹಗಳನ್ನಷ್ಟೇ ನಡೆಸುವುದು ತಮ್ಮ ಧ್ಯೇಯೋದ್ದೇಶಗಳೆಂದು ಭಾವಿಸಿಕೊಳ್ಳುತ್ತವೆ. ಸಾಮಾಜಿಕ ಪ್ರಜ್ಞೆಯನ್ನು ಮೂಡಿಸುವಂತಹ, ಆರ್ಥಿಕ ಅಭಿವೃದ್ಧಿಯನ್ನು ಸಾಧಿಸುವ ಬಗ್ಗೆ ಉತ್ತೇಜನ ನೀಡುವಂತಹ ಯಾವುದೇ ರಚನಾತ್ಮಕ ಕಾರ್ಯಕ್ರಮಗಳನ್ನು ನಡೆಸಲು ಸಂಘ ಸಂಸ್ಥೆಗಳು ಮುಂದೆ ಬರುತ್ತಿಲ್ಲ. ಈ ಬಗ್ಗೆ ಮಾರ್ಗದರ್ಶನ ಕೊರತೆಯೂ ಇದೆ. ಜಿಲ್ಲಾ ಮಟ್ಟದಲ್ಲಿ ಚಿನ್ನದ ಕೆಲಸಗಾರರ ಸಂಘವಿದೆ. ಈ ಸಂಘ ಚಿನ್ನದ ಕೆಲಸಗಾರರ ಮಕ್ಕಳಿಗೆ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯ, ಪೋಲೀಸರ ಕಿರುಕುಳದಿಂದ ಚಿನ್ನದ ಕೆಲಸಗಾರರಿಗೆ ಆಗುವ ತೊಂದರೆಗಳನ್ನು ತಪ್ಪಿಸಲು ಪ್ರಯತ್ನ ನಡೆಸುತ್ತದೆ. ಆದರೆ ಚಿನ್ನದ ಕೆಲಸಗಾರರ ಉದ್ಯೋಗ ಸುರಕ್ಷತೆಯ ಬಗ್ಗೆ ಯಾವುದೇ ಕ್ರಮಗಳನ್ನು ಕೈಗೊಂಡಿಲ್ಲ. ಒಟ್ಟಿನಲ್ಲಿ ಸಂಘಗಳು ವಿಶ್ವಕರ್ಮ ಸಮಾಜ ಅನನ್ಯವಾಗಿರಬೇಕೆಂದು ಬಯಸುವುದೇ ಅಭಿವೃದ್ಧಿ ಕುಂಠಿತವಾಗಲು ಕಾರಣವಾಗಿದೆ.

ಆರ್ಥಿಕವಾಗಿ ಹಿಂದೆ ವಿಶ್ವಕರ್ಮರು ತೀರಾ ಹಿಂದುಳಿದವರಾಗಿದ್ದರು. ನಗರ ಪ್ರದೇಶದ ನಿವಾಸಿಗಳಲ್ಲಿ ಈಗ ಸ್ವಲ್ಪ ಮಟ್ಟಿನ ಸುಧಾರಣೆಯಾಗಿದೆ. ಆದರೆ ಹಳ್ಳಿಗಳಲ್ಲಿ ಇಂದಿಗೂ ಕೂಡಾ ಅದೇ ಪರಿಸ್ಥಿತಿಯಾಗಿದೆ. ಜಿಲ್ಲೆಯಲ್ಲಿ ವಿಶ್ವಕರ್ಮರದ್ದೇ ಆದ ಎರಡು ಸಹಕಾರಿ ಬ್ಯಾಂಕುಗಳು ಸ್ಥಾಪನೆಗೊಂಡಿವೆ. ಅವೆರಡು ಅಭಿವೃದ್ಧಿ ಪಥದಲ್ಲಿವೆ.

ಒಂದು ಪ್ರದೇಶದ ಸಂಸ್ಕೃತಿಯನ್ನು ನಿರ್ಧರಿಸುವಲ್ಲಿ ಅಲ್ಲಿನ ಜನರ

ವೇಷ-ಭೂಷಣಗಳು, ಅಲಂಕಾರ ಸಾಧನಗಳು, ಆಭರಣಗಳು ಬಹು ಮುಖ್ಯ ಪಾತ್ರ ವಹಿಸುತ್ತವೆ. ರಾಜಕೀಯ, ಆರ್ಥಿಕ ಮತ್ತು ಸಾಂಸ್ಕೃತಿಕ ಇತಿಹಾಸವನ್ನು ಹೇಳಲು ಅವು ಮಾಧ್ಯಮಗಳಾಗುತ್ತವೆ. ಆಭರಣಗಳು ಒಂದು ಸಂಸ್ಕೃತಿಯನ್ನೇ ಮಾರ್ಪಾಡು ಮಾಡುವಷ್ಟು ಸಾಮರ್ಥ್ಯ ಹೊಂದಿವೆ. ಚಿನ್ನದ ಕೆಲಸದಲ್ಲಿ ಯಂತ್ರಗಳನ್ನು ಪೂರ್ತಿಯಾಗಿ ಬಳಸಲು ಸಾಧ್ಯವಾಗಲಿಲ್ಲ, ಇದರಿಂದಾಗಿ "ವಿಶ್ವಕರ್ಮರ ರಕ್ತದಲ್ಲೇ ಕಲೆಯ ಬೀಜ ಅಡಗಿದೆ. ಇವರು ಸರಸ್ವತಿಯ ಕಿವಿಭೂಷಣರಾದವರು" ಎಂದು ವಿಮರ್ಶಕರು ಕೊಂಡಾಡಿದ್ದಾರೆ.

ಪ್ರತಿಯೊಂದು ಆಭರಣ ರಚನೆಯುಲ್ಲೂ, ಸ್ವಂತಿಕೆಯು ಮುದ್ರೆಯೊತ್ತುವುದು ಆಭರಣ ಶಿಲ್ಪಿಯ ವಿಶೇಷ. ಆದ್ದರಿಂದಲೇ ಒಂದು ಆಭರಣ ಇನ್ನೊಂದರಂತಿಲ್ಲ. ಪ್ರತಿಯೊಂದನ್ನು ಸೂಕ್ಷ್ಮವಾಗಿ ಪರಿಶೀಲಿಸಿದರೆ ಆಭರಣ ಶಿಲ್ಪಿಯ ಮನೋಗತಿಯ ಸೂಕ್ಷ್ಮತೆ ಅರ್ಥವಾಗುತ್ತದೆ. ಇದು ಜಾನಪದದ ಒಂದು ಲಕ್ಷಣ.

ಆಭರಣ ಶಿಲ್ಪಿಗೂ ನಿಸರ್ಗವೇ ಉತ್ಸಾಹದ ಹೊನಲು. ಪ್ರಕೃತಿಯ ಫಲಪುಷ್ಪ ಖಗ, ಮೃಗ, ಪತಂಗ, ಧಾನ್ಯ, ತರಕಾರಿ - ಹೀಗೆ ಯಾವುದನ್ನು ಬಿಡದೆ ಅವುಗಳ ಚೆಲುವನ್ನು ಸ್ವರ್ಣ, ರಜತದಲ್ಲಿ ರೂಪಿಸುವ ಚಾಕಚಕ್ಯತೆ ಇವರದು.

ಸೈಂಧವ ಸಂಸ್ಕೃತಿ ವೇದ ಪೂರ್ವಕಾಲದ್ದು ಎಂಬುದು ನಿಜವಾಗಿದ್ದರೆ ಅಲ್ಲಿಯ ವಾಸ್ತುಶಿಲ್ಪ ಕುಶಲಕಲೆಗಳ ಸೃಷ್ಟಿಕರ್ತರು ವಿಶ್ವಕರ್ಮ ಬ್ರಾಹ್ಮಣರು ಎನ್ನುವ ಶಂ.ಬಾ. ಜೋಶಿಯವರ ಅಭಿಮತವನ್ನು ಅನುಸರಿಸಿದರೆ, ಮೊಹೆಂಜೋದಾರೋ ಕಾಲದಿಂದಲೇ ಪ್ರತಿಮಾ ಶಿಲ್ಪದ ಅಂಗವಾದ ಆಭರಣ ಶಿಲ್ಪದಲ್ಲೂ ತಮ್ಮ ಪ್ರತಿಭೆಯನ್ನು ಘನೀಕರಿಸುತ್ತ ಬಂದವರು ವಿಶ್ವಕರ್ಮ ಬ್ರಾಹ್ಮಣರು ಎಂಬುದು ಸ್ವತಃ ಸಿದ್ಧ.

ಚಿನಿವಾರಿಕೆಯ ಉಪಕರಣಗಳು :

ಚಿನ್ನದ ಕೆಲಸಗಾರರ ಭೌತಿಕ ಸಂಸ್ಕೃತಿ ವಿಶಿಷ್ಟವಾದುದು. ಹಿಂದಿನ ಕಾಲದಲ್ಲಿ ಹಳ್ಳಿ ಪ್ರದೇಶಗಳಲ್ಲಿ ಯಾವುದೇ ಯಂತ್ರಗಳ ಬಳಕೆ ಇದ್ದಿರಲಿಲ್ಲ. ವಿದ್ಯುತ್ತಿನ ಪೂರೈಕೆ ಇದ್ದಿರಲಿಲ್ಲ. ಆ ಕಾಲದಲ್ಲಿ ಪೂರ್ತಿ ಜಾನಪದೀಯ

ನೆಲೆಯಲ್ಲಿ ಕೆಲವೊಂದು ಉಪಕರಣಗಳನ್ನು ಬಳಸಿಕೊಂಡು ಆಭರಣಗಳ ತಯಾರಿ ನಡೆಸಲಾಗುತ್ತಿತ್ತು. ಆ ಉಪಕರಣಗಳ ಹೆಸರು ಮತ್ತು ಬಳಕೆಯ ವಿಧಾನಗಳನ್ನು ಕೊಡಲಾಗಿದೆ.

ಅಗಿಷ್ಟಿಕೆ (ಅಗುಷ್ಟೆ)

ಆಭರಣ ತಯಾರಿಯಲ್ಲಿ ಬೆಂಕಿಯ ಬಳಕೆ ಅತಿ ಅವಶ್ಯ. ಕರಗಿಸಲು, ಬೆಸುಗೆ ಹಾಕಲು, ಮೆದುಗೊಳಿಸಲು ಚಿನ್ನವನ್ನು ಕಾಯಿಸಬೇಕಾಗುತ್ತದೆ. ಹಿಂದೆ ಒಡೆದ ಮಡಕೆಯ ತಳಭಾಗವನ್ನು ಅಗಿಷ್ಟಿಕೆಯಾಗಿ ಬಳಸುತ್ತಿದ್ದರು. ಈಗ ಚಟ್ಟಿಗಳನ್ನು ಬಳಸುತ್ತಾರೆ. ಉಮಿ (ಭತ್ತದ ಹೊಟ್ಟು)ಗೆ ನೀರು ಬೆರೆಸಿ ಚೆನ್ನಾಗಿ ಕಲಸಿ ಈ ಚಟ್ಟಿಯನ್ನು ಒತ್ತಿ ಒತ್ತಿ ತುಂಬಿಸುತ್ತಾರೆ. ನಂತರ ಮೇಲ್ಭಾಗದಲ್ಲಿ ಮಧ್ಯೆ ತೆಂಗಿನ ಕರಟದ ಮಸಿಯನ್ನು ಹಾಕಿ ಉರುವಲಾಗಿ ಬಳಸುತ್ತಾರೆ. ತೆಂಗಿನ ಕರಟದ ಮಸಿ ಹೆಚ್ಚು ಶಾಖವನ್ನು ಕೊಟ್ಟು ಉರಿಯುತ್ತದೆ. ಮತ್ತು ಅದು ಬೇಗನೆ ನಂದಿ ಹೋಗುವುದಿಲ್ಲ. ಚಿನ್ನದ ಕೆಲಸಕ್ಕೆ ತಿದಿಯ ಬಳಕೆ ಕಡಿಮೆ. ಅಗಿಷ್ಟಿಕೆ ಎಂದರೆ ವಿಶ್ವಕರ್ಮರಿಗೆ ಯಜ್ಞಕುಂಡವಿದ್ದಂತೆ, ಪ್ರಾತಃಕಾಲದಲ್ಲಿ ಶುಚಿರ್ಭೂತರಾಗಿ ಅಗ್ಗಿಷ್ಟಿಕೆ ಬೆಂಕಿ ಹಚ್ಚುತ್ತಾರೆ. ಇವರು ತಮ್ಮ ಕಸುಬನ್ನು ಯಜ್ಞ ಎಂಬುದಾಗಿ ಪರಿಗಣಿಸುತ್ತಾರೆ.

ಊದು ಕೊಳವೆ (ಓಟೆ ಓಂಟೆ)

ಅಗಿಷ್ಟಿಕೆಯಲ್ಲಿ ಬೆಂಕಿ ಮಾಡಲು ಊದು ಕೊಳವೆ ಬೇಕು. ಹಿಂದೆ ಬಿದಿರಿನ ಕೊಳವೆಯನ್ನು ಬಳಸುತ್ತಿದ್ದರು. ಈಗ ಕಬ್ಬಿಣದ ಇಲ್ಲವೇ ಹಿತ್ತಾಳೆಯ ಕೊಳವೆಯನ್ನು ಬಳಸುತ್ತಾರೆ.

ಹಿಡಿ (ದಂಡಾಸು)

ಅಗಿಷ್ಟಿಕೆಯಿಂದ ಚಿನ್ನವನ್ನು ಮೇಲಕ್ಕೆತ್ತಿ ನೀರಿಗೆ ಮುಳುಗಿಸಲು, ಅಗ್ಗಿಷ್ಟಿಕೆಗೆ ನೀರು ಚಿಮುಕಿಸಲು ಹಿಡಿಬೇಕು. ಇದೊಂದು ಬಾಗಿದ ಸಪೂರವಾದ ಚಪ್ಪಟೆಯಾದ ಕಬ್ಬಿಣದ ದಂಡ, ತುದಿ ಹೆಚ್ಚು ಚಪ್ಪಟೆಯಾಗಿದ್ದು ಬಾಗಿದ ಕೊನೆಯಲ್ಲಿ ಒತ್ತಿದ ತುದಿಯಲ್ಲಿ ವಸ್ತುವನ್ನು ಗಟ್ಟಿಯಾಗಿ ಹಿಡಿದುಕೊಳ್ಳಲು ಸಾಧ್ಯವಾಗುತ್ತದೆ.

ಜಲಪಾತ್ರೆ (ನೀರಮುರಯಿ)

ಅಗಿಷ್ಟಿಕೆಯ ಪಕ್ಕದಲ್ಲಿ ಜಲಪಾತ್ರೆ ಇರಬೇಕಾಗುತ್ತದೆ. ಇದನ್ನು ವಿಶ್ವಕರ್ಮರು ತಮ್ಮ ಕಮಂಡಲವೆಂದೇ ಭಾವಿಸಿಕೊಳ್ಳುತ್ತಾರೆ.

ಅಡಿಗಲ್ಲು (ರೇಜ)

ಚಿನ್ನವನ್ನು ಬೇಕಾದ ಆಕಾರಕ್ಕೆ ತರಲು ಕಾಯಿಸಿ ಬಡಿಯಬೇಕಾಗುತ್ತದೆ. ಬಡಿಯಬೇಕಾದರೆ ಅದನ್ನ ಇಟ್ಟುಕೊಳ್ಳಲು ಗಟ್ಟಿ ಲೋಹದ ತಳಬೇಕು. ಅದುವೇ ಅಡಿಗಲ್ಲು. ಅಡಿಗಲ್ಲನ್ನು ಕಬ್ಬಿಣ ಇಲ್ಲವೇ ಉಕ್ಕಿನಿಂದ ತಯಾರಿಸುತ್ತಾರೆ. ಅದರ ಮೇಲ್ಭಾಗ ಚೌಕಾಕಾರವಿದ್ದು ಹೆಚ್ಚು ನಯ ಹಾಗೂ ಹೊಳಪುಳ್ಳದ್ದಾಗಿರುತ್ತದೆ. ತಳಭಾಗ ಮೇಲ್ಭಾಗಕ್ಕಿಂತ ಸಪುರವಾಗಿರುತ್ತದೆ. ಇದನ್ನು ಘನಾಕೃತಿಯ ಗಟ್ಟಿಮರದ ಮಧ್ಯೆ ತೆಗೆದ ಹೊಂಡದಲ್ಲಿ ತಗ್ಗಿನಲ್ಲಿ ಕೂರಿಸುತ್ತಾರೆ. ಅಲುಗಾಡದಂತೆ ಪಕ್ಕಕ್ಕೆ ಗೂಟ ಕೊಡುತ್ತಾರೆ. ಈ ಗಟ್ಟಿ ಮರದ ತುಂಡನ್ನ ಕಮ್ಮರ ಎನ್ನುತ್ತಾರೆ.

ಮೂಸೆ (ಕೋವೆ)

ಇದು ಚಿನ್ನವನ್ನು ಕರಗಿಸಲು ಬಳಸುವ ಆವೆಮಣ್ಣಿನ ಸಾಧನ. ಇದರ ಒಳಭಾಗ ಅತ್ಯಂತ ನಯವಾಗಿರುವುದರಿಂದ ಚಿನ್ನ ಅಂಟಿಕೊಳ್ಳುವುದಿಲ್ಲ.

ಎರಕದ ಕಲ್ಲು (ರೇಜ)

ಅಕ್ಕಸಾಲಿಗರು ಕರಗಿದ ಚಿನ್ನವನ್ನು ಉದ್ದದ ಚಡಿ (ಕಣಿವೆ) ಇರುವ ಎರಕದ ಕಲ್ಲಿನಲ್ಲಿ ಹೊಯ್ಯುತ್ತಾರೆ. ಎರಕದ ಕಲ್ಲನ್ನು ಬಳಪದ ಕಲ್ಲಿನಿಂದ, ಕಬ್ಬಿಣದಿಂದ ತಯಾರಿಸುತ್ತಾರೆ. ಹಿಂದೆ ಗಟ್ಟಿ ಸಗಣಿಯ ಮೇಲೆ ಬಿಳಿ ಅರಿವೆ ತುಂಡು ಹಚ್ಚಿ ಅದರಲ್ಲಿ ಉದ್ದಕ್ಕೆ ತಗ್ಗು ರಚಿಸಿ ಅದಕ್ಕೆ ಸ್ವಲ್ಪ ಸೀಮೆಎಣ್ಣೆ ಎರೆದು ಅದರ ಮೇಲೆ ಕರಗಿದ ಚಿನ್ನ ಹೊಯ್ಯುತ್ತಿದ್ದರು. ಇದರಿಂದ ಏಕ ಗಾತ್ರದ ಚಿನ್ನದ ಕೋಲಿನಂತಹ ಗಟ್ಟಿಯನ್ನು ಪಡೆಯಲು ಸಾಧ್ಯವಾಗುತ್ತದೆ.

ಸುತ್ತಿಗೆ (ಸುತ್ತ, ಸುತ್ಯೆ)

ಚಿನ್ನವನ್ನು ಕಾಯಿಸಿ ಬಡಿದು ಹದಗೊಳಿಸಲು ಬೇಕಾದ ಆಕಾರಕ್ಕೆ ರೂಪಿಸಲು ಸುತ್ತಿಗೆ ಬೇಕು. ಚಪ್ಪಟೆ ಬಾಯಿಯ ಸುತ್ತಿಗೆ, ಎದುರು ಬಾಯಿಯ ಸುತ್ತಿಗೆ, ಗಟ್ಟಿ ಬಡಿಯುವ ಸುತ್ತಿಗೆ. ಹೀಗೆ ಬೇರೆ ಬೇರೆ ಆಕಾರದ ಸುತ್ತಿಗೆಗಳಿವೆ.

ಸುತ್ತಿಗೆಗಳನ್ನು ಕಬ್ಬಿಣದಿಂದ ತಯಾರಿಸುತ್ತಾರೆ. ಮೆದು ಬಡಿತಕ್ಕೆ ಸಣ್ಣ ಗಾತ್ರದ ಕಂಚಿನ ಸುತ್ತಿಗೆ ಇರುತ್ತದೆ. ಇದನ್ನು 'ಕಂಚಷ್ಟೆ' ಎನ್ನುತ್ತಾರೆ.

ಒರೆಗಲ್ಲು (ಉರೆಕ್ಕಲ್)

ಚಿನ್ನದ ಶುದ್ಧತೆಯನ್ನು ಪರೀಕ್ಷಿಸಲು ಒರೆಗಲ್ಲನ್ನು ಬಳಸುತ್ತಾರೆ. ಒರೆಗಲ್ಲು ಚೌಕಾಕಾರದ ಸಣ್ಣ ಗಾತ್ರದ ದೊರಗು ಕಲ್ಲು, ಚಿನ್ನವನ್ನು ಇದಕ್ಕೆ ಉಜ್ಜಿದಾಗ ಚಿನ್ನದ ಬಣ್ಣ ಇದರಲ್ಲಿ ಗೊತ್ತಾಗುತ್ತದೆ. ಬಣ್ಣ ನೋಡಿ ಅಕ್ಕಸಾಲಿಗರು ಚಿನ್ನದ ಶುದ್ಧಾ ಶುದ್ಧತೆಯ ಬಗ್ಗೆ ಹೇಳುತ್ತಾರೆ. ಕಡು ಹಳದಿ ಬಣ್ಣವಿದ್ದರೆ ಶುದ್ಧ ಚಿನ್ನ ಅಥವಾ 'ಪುತ್ಥಳಿ'. ಕೆಂಪು ಬಣ್ಣಕ್ಕೆ ತಿರುಗಿದಷ್ಟು ಅದರಲ್ಲಿ ತಾಮ್ರದ ಅಂಶ ಹೆಚ್ಚಾಗುತ್ತದೆ.

ಇಕ್ಕುಳ (ಮನೆಗವು)

ಬೇರೆ ಬೇರೆ ಆಕಾರದ ಇಕ್ಕುಳಗಳಿವೆ. ದೊಡ್ಡ ಗಾತ್ರದ ಇಕ್ಕುಳಗಳು ದೊಡ್ಡ ತುಂಡನ್ನು ಹಿಡಿದು ಬಗ್ಗಿಸಲು ಸಹಕಾರಿಯಾಗುತ್ತವೆ. ಸರಿಗೆ ಬಗ್ಗಿಸಲು ಮತ್ತು ಸಣ್ಣ ತುಂಡುಗಳನ್ನು ಹಿಡಿಯಲು ಸಣ್ಣ ಇಕ್ಕುಳಗಳನ್ನು ಬಳಸುತ್ತಾರೆ.

ಚಿಮುಟ (ಸಮುಸಿ)

ಇದು ಚಿನ್ನವನ್ನು ಹಿಡಿಯಲು ಬಳಸುವ ಸಾಧನ. ಇದರಲ್ಲಿ ಬೇರೆ ಬೇರೆ ಗಾತ್ರದವುಗಳಿರುತ್ತವೆ. ಅತಿ ಸೂಕ್ಷ್ಮವಾದ ವಸ್ತುವನ್ನು ಹಿಡಿಯಲು ಕೂಡಾ ಚಿಮುಟದಿಂದ ಸಾಧ್ಯವಾಗುತ್ತದೆ.

ಸರಿಗೆ ಮಾಡುವ ಸಾಧನ (ಕಂಬಚ್ಚಿ)

ಇದು ಹಲವು ಗಾತ್ರದ ತೂತುಗಳಿರುವ ಒಂದು ಕಬ್ಬಿಣದ ಪಟ್ಟಿ. ಸರಿಗೆಯ ತುದಿ ಚೂಪು ಮಾಡಿ ಚೂಪಾದ ತುದಿಯನ್ನು ತೂತಿನಿಂದ ತುರುಕಿಸಿ ಇಕ್ಕುಳದಲ್ಲಿ ಹಿಡಿದು ಎಳೆದಾಗ ಸರಿಗೆ ಇನ್ನಷ್ಟು ಸಪುರಗೊಂಡು ಉದ್ದವಾಗುತ್ತದೆ. ಹೀಗೆ ದೊಡ್ಡ ತೂತಿನಿಂದ ಪ್ರಾರಂಭಿಸಿ ಸಣ್ಣವಾಗುತ್ತಾ ಇನ್ನಷ್ಟು ಉದ್ದವಾಗುತ್ತ ಹೋಗುತ್ತದೆ. ಹಿಂದೆ ಅಕ್ಕಸಾಲಿಗರು ಕಾಲು ನೀಡಿ ಕುಳಿತು ಎರಡು ಹಿಮ್ಮಡಿಗಳ ಮಧ್ಯೆ ಕಂಬಚ್ಚಿ ಇಟ್ಟು ತೂತಿನ ಮೂಲಕ ಸರಿಗೆಯನ್ನು ಇಕ್ಕುಳದಲ್ಲಿ ಹಿಡಿದು ಬಲವಾಗಿ ಎಳೆಯುತ್ತಿದ್ದರು. ದೊಡ್ಡ

ಗಾತ್ರದ ಮರಕ್ಕೆ ಕಬ್ಬಿಣದ ಕೊಂಡಿ ಬಡಿದು ಅದಕ್ಕೆ ಅಡ್ಡಕಂಬಚ್ಚಿ ಇಟ್ಟು ತೂತಿನ ಮೂಲಕ ಸರಿಗೆಯನ್ನು ಇಕ್ಕುಳದಿಂದ ಎಳೆಯುತ್ತಾ ಮರಕ್ಕೆ ಸುತ್ತು ಬರುತ್ತಿದ್ದರು. ಹೀಗೆ ಎಷ್ಟು ಉದ್ದದ ಸರಿಗೆಯನ್ನು ಕೂಡಾ ಮಾಡಲು ಸಾಧ್ಯವಾಗುತ್ತಿತ್ತು. ಈಗ ಕಂಬಚ್ಚಿಯ ಬಳಕೆ ನಿಂತು ಹೋಗಿದೆ. ಸರಿಗೆಯನ್ನು ಯಂತ್ರಗಳ ಮೂಲಕ ತಯಾರಿಸಲಾಗುತ್ತದೆ.

ಅರ (Pile)

ಅರ ಎಂದರೆ ಎಲ್ಲರಿಗೂ ಗೊತ್ತು. ಆಭರಣಗಳನ್ನು ಉಜ್ಜಿನಯಗೊಳಿಸಲು ಅರಬೇಕಾಗುತ್ತದೆ. ಚಿನ್ನದ ಕೆಲಸದವರು ಬೇರೆ ಬೇರೆ ಆಭರಣಗಳನ್ನು ಉಜ್ಜಿ ರೂಪುಕೊಡಲು ಬೇರೆ ಬೇರೆ ಆಕಾರದ ಅರಗಳನ್ನು ಬಳಸುತ್ತಾರೆ. ಚಪ್ಪಟೆಯಾದ ಅರ, ಅರ್ಧ ಬಾಗಿ ಅರ್ಧ ಚಪ್ಪಟೆಯಾಗಿರುವ ಬಾದಾಮು ಅರ, ಉರುಟು ಅರ, ಮೂರು ಪಟ್ಟಿಯ ಅರ, ಚೌಕಾಕಾರದ ಅರ ಮುಂತಾದ ಅರಗಳಿವೆ. ಅರಗಳು ಬುಡ ದಪ್ಪವಾಗಿದ್ದು ತುದಿ ಸಪುರ ಉಳ್ಳವುಗಳಾಗಿರುತ್ತವೆ.

ಕತ್ತರಿ

ಕತ್ತರಿಯಲ್ಲಿ ಬೇರೆ ಬೇರೆ ಗಾತ್ರದವುಗಳಿವೆ. ಚಿನ್ನದ ಗಟ್ಟಿಗಳನ್ನು ಕತ್ತರಿಸಲು ದೊಡ್ಡ ಗಾತ್ರದ ಕತ್ತರಿಬೇಕು. ಸಪೂರವಾದ ಸರಿಗೆ ಕತ್ತರಿಸಲು ಸಣ್ಣ ಕತ್ತರಿ ಬೇಕು. ಅಕ್ಕಸಾಲಿಗರು ಬಳಸುವ ಕತ್ತರಿ ದರ್ಜಿಯ ಕತ್ತರಿಗಿಂತ ಭಿನ್ನವಾಗಿರುತ್ತವೆ. ಹೆಚ್ಚು ಹರಿತವಾಗಿರುತ್ತವೆ. ಕೆಲವೊಂದು ವಸ್ತುಗಳನ್ನು ತುಂಡರಿಸಲು ಕತ್ತರಿಯ ಬದಲು ಅರವನ್ನು ಬಳಸುತ್ತಾರೆ. ತುಂಡರಿಸಲು ಬಳಸುವ ಅರವನ್ನು ಕತ್ತಿ ಬಾಯಿಯ ಅರ ಎನ್ನುತ್ತಾರೆ.

ಗರಗಸ

ಚಿನ್ನವನ್ನು ಕೊಯ್ಯಲು ಬಹಳ ಸೂಕ್ಷ್ಮವಾದ ಗರಗಸದಂತಿರುವ ಕಡ್ಡಿಗಳು ಸಿಗುತ್ತವೆ. ಹಿಡಿ ಇರುವ ಕಮಾನ್ ಆಕಾರದ ಕಬ್ಬಿಣದ ಉಪಕರಣಕ್ಕೆ ಈ ಗರಗಸ ಕಡ್ಡಿಯನ್ನಿಟ್ಟು ತಿರುಪು ಬೆಣೆಯ ಮೂಲಕ ಗಟ್ಟಿಗೊಳಿಸುತ್ತಾರೆ. ಹಿಡಿಯಲ್ಲಿ ಹಿಡಿದುಕೊಂಡು ಆಭರಣಗಳನ್ನು ಎಡೆ ಎಡೆಯಿಂದ ಕೊಯ್ಯಲು ಇದು ಅನುಕೂಲವಾಗುತ್ತದೆ.

ಗೆಜ್ಜೆ ಕುಳಿ (ಮುಗ್ದರ)

ಇದೊಂದು ಘನಾಕೃತಿಯ ಕಂಚಿನ ಸಾಧನ. ಇದರಲ್ಲಿ ನಾಲ್ಕು ಬದಿಯಲ್ಲಿಯೂ ಬೇರೆ ಬೇರೆ ಗಾತ್ರದ ಗುಳಿಗಳಿರುತ್ತವೆ. ಈ ಗುಳಿಯಲ್ಲಿ ಚಿನ್ನದ ತಗಡನ್ನಿಟ್ಟು ದುಂಡಗಿನ ಬಾಯಿಯ ಕಡ್ಡಿಯಿಂದ ಕಂಚಪ್ಪೆಯಲ್ಲಿ ಮೆಲ್ಲ ಮೆಲ್ಲನೆ ಬಡಿದಂತೆ ತಗಡು ಅರ್ಧಗೋಲಾಕೃತಿ ತಾಳುತ್ತದೆ. ನಂತರ ಅದರಿಂದ ತೆಗೆದು ಎರಡು ಅರ್ಧಗೋಲಗಳ ಪರಸ್ಪರ ಜೋಡಿಸಿ ಬೆಸದು ಟೊಳ್ಳಾದ ಗುಂಡುಗಳನ್ನು ತಯಾರಿಸುತ್ತಾರೆ.

ಕಡ್ಡಿಗಳು

ಚಿನ್ನದ ಕೆಲಸದವರು ತೂತು ಮಾಡುವ ಸಲುವಾಗಿ ಬಳಸುವ ತುದಿಚೂಪಾದ ಹರಿತವಾದ ಕಡ್ಡಿಗೆ ಮೊನೆ ಸಲಯಿ ಎನ್ನುತ್ತಾರೆ. ಒಪ್ಪ ಹಾಕಲು (ಆಭರಣ ಪಾಲಿಶ್ ಮಾಡಲು) ಬೇರೆ ಬೇರೆ ಆಕಾರದ ಕಡ್ಡಿಗಳನ್ನು ಬಳಸುತ್ತಾರೆ. ಆಕಾರಕ್ಕನುಸಾರವಾಗಿ ಅವುಗಳಿಗೆ ಒಪ್ಪದ ಕಡ್ಡಿ, ಸೀಲ್ ಕಡ್ಡಿ, ಗುಂಪು ಕಡ್ಡಿ ಎಂಬಿತ್ಯಾದಿ ಹೆಸರುಗಳಿವೆ. ಕಬ್ಬಿಣದ ಈ ಕಡ್ಡಿಗಳು ನಯಗೊಳಿಸಲ್ಪಟ್ಟು ಹೊಳೆಯುತ್ತಿರತ್ತವೆ. ಕೆತ್ತನೆಯ ಕೆಲಸಕ್ಕೂ ಈ ಕಡ್ಡಿಗಳನ್ನು ಬಳಸುತ್ತಾರೆ. ಕೆತ್ತನೆ ಕೆಲಸಕ್ಕೆ ಅತ್ಯಂತ ಹೆಚ್ಚು ಉಪಯುಕ್ತವಾಗುವ ಕಡ್ಡಿ 'ಚಾಣ'. ಇದು ಕಲ್ಲಿನ ಕೆಲಸದವರ ಚಾಣದಂತಿಲ್ಲ. ಬರಿಯ ಕಡ್ಡಿಯಾಗಿದ್ದು ಅದರ ಬಾಯಿ ಮಾತ್ರ ಉಳಿಯಂತಿರುತ್ತದೆ. ವೃತ್ತಾಕಾರದ ಅರ್ಧವೃತ್ತಾಕಾರಾದ ಗೆರೆ ಎಳೆಯಲು ಅನುಕೂಲವಾಗುವ ಬಾಯಿಗಳಿರುವ ಚಾಣಗಳಿರುತ್ತವೆ. 'ಸೂಸಮಿ' [ಫೋಗರ್] ಕೆತ್ತನೆ ಕೆಲಸಕ್ಕೆ ಬಳಸುವ ಇನ್ನೊಂದು ಉಪಕರಣ ಈ ಕಡ್ಡಿಗಳನ್ನು ಗಟ್ಟಿಯಾಗಿ ಹಿಡಿಯಲು ಅನುಕೂಲವಾಗುವಂತೆ ಮರದ ಹಿಡಿ ಜೋಡಿಸುತ್ತಾರೆ. ಇದನ್ನು ವೈಸ್ ಎನ್ನುತ್ತಾರೆ.

ಅಚ್ಚುಗಳು

ತಗಡನ್ನು ಬಡಿದು ಬೇರೆ ಬೇರೆ ಆಕಾರವನ್ನು ತಗಡಿನಲ್ಲಿ ರೂಪಿಸಲು ಅಚ್ಚುಗಳನ್ನು ಬಳಸಲಾಗುತ್ತದೆ. ಈ ಅಚ್ಚುಗಳಲ್ಲಿ ಬೇಕಾದ ಆಕಾರವನ್ನು ಕೊರೆದಿರುತ್ತಾರೆ. ಚಿನ್ನದ ತಗಡನ್ನು ಅಚ್ಚಿನಲ್ಲಿ ಹಾಕಿ ಗುಂಪು ಕಡ್ಡಿಯಿಂದ ಬಡಿದಾಗ ತಗಡು ಅಚ್ಚಿನ ಆಕಾರವನ್ನು ತಾಳುತ್ತದೆ. ಚಕ್ರಸರದಲ್ಲಿ ಬಳಸುವ

ಚಕ್ರಗಳನ್ನು ಏಕರೂಪಕ್ಕೆ ತರಲು ಪಾದದಚ್ಚು ಎಂಬ ಸಾಧನ ಬಳಸುತ್ತಾರೆ. ಇದು ಮಧ್ಯೆ ಸೀಳು ಇರುವ ಒಂದು ಕಂಚಿನ ಘನಾಕೃತಿ.

ಬಳೆ ಮಾಡುವ ಸಾಧನ (ಬಳೆಚಿ)

ಇದು ಶಂಕು ಆಕಾರದ ಒಂದು ಮರದ ತುಂಡು. ಮೇಲ್ಭಾಗ ಮತ್ತು ಕೆಳಭಾಗ ಚಪ್ಪಟೆಯಾಗಿರುತ್ತದೆ. ಇದನ್ನು ಕೂರಿಸಲು ಒಂದು ಮರದ ಮಣೆಯಿದೆ. ಬಳಚಿಗೆ ಬಳೆಯನ್ನು ಸಿಕ್ಕಿಸಿ, ಬಳೆಚಿಯನ್ನು ಮಣೆಯ ಮೇಲಿಟ್ಟು ಬಳೆಯ ಮೇಲಿನ ಕೆತ್ತನೆ ಕೆಲಸ ಮಾಡುತ್ತಾರೆ. ಬಳೆಯನ್ನು ಸರಿಯಾದ ವೃತ್ತಾಕಾರಕ್ಕೆ ತರಲು ಕೂಡಾ ಬಳಚಿ ಬೇಕಾಗುತ್ತದೆ. ಈಗ ಬಳೆಯ ಕೆಲಸ ಯಂತ್ರದ ಮೂಲಕ ನಡೆಯುತ್ತದೆ.

ಗೂಟ (ಗೂಂಟಿಗೆ)

ಬಳೆಯ ಕೆಲಸಕ್ಕೆ ಬಳೆಚಿಯನ್ನು ಬಳಸಿದಂತೆ ಗೂಂಟಿಗೆಯನ್ನು ಉಂಗುರ ಮಾಡಲು ಬಳಸಿಕೊಳ್ಳುತ್ತಾರೆ. ಗೂಂಟಿಗೆಯಲ್ಲಿ ನೇರವಾದ ಗೂಂಟಿಗೆ ಮತ್ತು ಬಾಗಿದ ಗೂಂಟಿಗೆ ಇರುತ್ತವೆ. ಇದನ್ನು ಕಮ್ಮಿರಿನಲ್ಲಿರುವ ತೂತಿಗೆ ಬಡಿದು ನೆಟ್ಟಗೆ ಗಟ್ಟಿಯಾಗಿ ನಿಲ್ಲಿಸುತ್ತಾರೆ. ಗೂಂಟಿಗೆಯ ಬಾಗಿದ ಭಾಗದಲ್ಲಿ ಉಂಗುರವಿಟ್ಟು ಬಡಿದು ಬೇಕಾದ ಆಕಾರವನ್ನು ರೂಪಿಸಿಕೊಳ್ಳುತ್ತಾರೆ.

ಬಾಗಿದ ನಳಿಗೆ (Pipe)

ಅತಿಸೂಕ್ಷ್ಮವಾದ ಆಭರಣ ಭಾಗಗಳನ್ನು ಅಗಿಷ್ಟಿಕೆಯಲ್ಲಿಟ್ಟು ಬೆಸೆಯಲು ಸಾಧ್ಯವಾಗುವುದಿಲ್ಲ. ಅಂತಹ ಸಂದರ್ಭದಲ್ಲಿ ಮರದ ಹಗುರವಾದ ಹಲಗೆಯ ಮೇಲೆ ಬೆಸೆಯಬೇಕಾದ ಆಭರಣವನ್ನಿಟ್ಟು ಪಕ್ಕದಲ್ಲಿ ದೀಪವಿಟ್ಟು ಬಾಗಿದ ನಳಿಗೆಯ ಮೂಲಕ ಬಾಯಿಯಿಂದ ದೀಪದ ಜ್ವಾಲೆಗೆ ಊದಿ ಜ್ವಾಲೆಯನ್ನು ಜೋಡಣೆಯಾಗಬೇಕಾದ ಭಾಗಕ್ಕೆ ಹಾಯಿಸತ್ತಾರೆ. ಜ್ವಾಲೆ ತಾಗಿದ ತಕ್ಷಣ ಆ ಭಾಗ ಜೋಡಣೆಯಾಗುತ್ತದೆ. ಚಿನ್ನದ ಹಾರಗಳನ್ನು ತಯಾರಿಸುವಾಗ ಈ ರೀತಿಯಲ್ಲೇ ಬೆಸೆಯ ಬೇಕಾಗುತ್ತದೆ. ಹಿಂದೆ ಚಿಮಿಣಿ ದೀಪಗಳನ್ನು ಹಣತೆಗಳನ್ನು ಬಳಸುತ್ತಿದ್ದರು. ಈಗ ಮೇಣದ ಬತ್ತಿಯನ್ನು ಬಳಸುತ್ತಾರೆ.

ಬೈರಿಗೆ (Drill)

ತೂತು ಕೊರೆಯಲು ಬೈರಿಗೆಯನ್ನು ಬಳಸುತ್ತಾರೆ. ಆದರೆ ಈ ಬೈರಿಗೆ ಮರದ ಕೆಲಸದವರು ಅಥವಾ ಕಬ್ಬಿಣದ ಕೆಲಸದವರು ಬಳಸುವ ಬೈರಿಗೆಗಿಂತ ಭಿನ್ನವಾಗಿದ್ದು, ಇದಕ್ಕೆ ಬಳಸುವ ತೂತು ಕೊರೆಯುವ ಕಡ್ಡಿಗಳು ಅತ್ಯಂತ ಚಿಕ್ಕದಾಗಿ ಸಪೂರವಾಗಿರುತ್ತವೆ.

ತ್ರಿಜ್ಯಮಾಪಕ (Divider)

ಚಿನ್ನದ ತಗಡಿನ ಮೇಲೆ ವೃತ್ತಾಕಾರ ಗುರುತಿಸಲು ಮತ್ತು ಸಮಗಾತ್ರದ ಅಳತೆಗೆ ಗುರುತು ಹಾಕಿಕೊಳ್ಳಲು ತ್ರಿಜ್ಯ ಮಾಪಕವನ್ನು ಬಳಸುತ್ತಾರೆ. ಚಿನಿವಾರರು ಬಳಸುವ ತ್ರಿಜ್ಯಮಾಪಕದ ತುದಿಗಳು ಅತ್ಯಂತ ಚೂಪಾಗಿರುತ್ತವೆ.

ತ್ರಾಸು, ಬಟ್ಟು

ಅಕ್ಕಸಾಲಿಗರಿಗೆ ತ್ರಾಸು ಬಹಳ ಅಗತ್ಯ. ಚಿನ್ನವನ್ನು ಆಭರಣ ತಯಾರಿಗಾಗಿ ಕೊಂಡುಕೊಳ್ಳುವಾಗ ತೂಕ ಮಾಡುವುದು ಬಹಳ ಅಗತ್ಯ. ಮೊದಲು ಸಣ್ಣ ಸಣ್ಣ ತ್ರಾಸುಗಳನ್ನು ಅಕ್ಕಸಾಲಿಗೆ ಬಳಸುತ್ತಿದ್ದರು. ಇತ್ತೀಚೆಗೆ ಸುಧಾರಿತ ತ್ರಾಸುಗಳು ಬಳಕೆಗೆ ಬಂದಿವೆ. ಮೊದಲು ಪವನು, ತೊಲೆ, ಹಣತೂಕ, ಮಂಜೋಟಿ ತೂಕ, ಗುರುಗುಂಜಿ ತೂಕ ಇತ್ಯಾದಿ ಮಾನಗಳಿಂದ ಅಳೆಯುತ್ತಿದ್ದರು. ಗುಲಗುಂಜಿ ತೂಕಕ್ಕೆ ಗುಲಗುಂಜಿಯನ್ನೇ ಬಳಸುತ್ತಿದ್ದರು. ಈಗ ಗ್ರಾಂ, ಮಿಲಿಗ್ರಾಂಗಳ ಬಟ್ಟುಗಳನ್ನು ಬಳಸಲಾಗುತ್ತಿದೆ.

ಕುಂಚಗಳು (Brush)

ಚಿನ್ನದ ಕೆಲಸದವರಿಗೆ ಬೇರೆ ಬೇರೆ ರೀತಿಯ ಕುಂಚಗಳು ಬೇಕಾಗುತ್ತದೆ. ಆಭರಣಗಳನ್ನು ತೊಳೆಯಲು ಹಿತ್ತಾಳೆ ಸರಿಗೆಯ ಬ್ರಶ್, ಸಣ್ಣ ಆಭರಣಗಳನ್ನು ನೊರೆಕಾಯಿಯಲ್ಲಿ ತೊಳೆಯಲು ಹಲ್ಲುಜ್ಜಲು ಬಳಸುವ ಬ್ರಶ್, ಚಿನ್ನದ ಹುಡಿಗಳನ್ನು ಒಟ್ಟು ಸೇರಿಸಲು ನಯವಾದ ಡ್ರಾಯರ್ ಬ್ರಶ್, ಆಭರಣಗಳನ್ನು ಪಾಲಿಶ್ ಮಾಡಲು ಪಾಲಿಶ್ ಬ್ರಶ್ - ಹೀಗೆ ಹಲವು ವಿಧದ ಕುಂಚಗಳು ಬೇಕಾಗುತ್ತವೆ.

ಪಾಲಿಶ್ ಪೌಡರುಗಳು

ಚಿನ್ನದ ಆಭರಣಗಳಿಗೆ ಮೆರುಗು ತರಲು ಪಾಲಿಶ್ ಮಾಡಬೇಕಾಗುತ್ತದೆ. ಬಾಗಿದ ಕಡ್ಡಿಯ ಎರಡು ತುದಿಗಳ ಮಧ್ಯೆ ದಾರಕಟ್ಟಿ ಅದನ್ನು ಗಟ್ಟಿ ಕ್ರೀಮ್‌ನಂತಿರುವ ಪಾಲಿಶ್‌ನಲ್ಲಿ ತೀಡಿ ಆಭರಣಗಳಿಗೆ ಬಫ್ಫಿಂಗ್ ಮಾಡುತ್ತಾರೆ.

ಕಡ್ಸದ ಕೆಲಸ ಸಾಮಗ್ರಿಗಳು (Studding)

ಕಡ್ಸದ ಕೆಲಸ ಮಾಡಲು ಚಾಣ, ಕೆತ್ತನೆ ಉಳಿ, ಬಳೆಚಿ, ಕೊರ, ಸಾಣೆ ಮುಂತಾದ ಉಪಕರಣಗಳು ಬೇಕಾಗುತ್ತವೆ.

ರಾಸಾಯನಿಕ ವಸ್ತುಗಳು :

ಚಿನ್ನದ ಕೆಲಸಗಾರರಿಗೆ ಬೇರೆ ಬೇರೆ ರಾಸಾಯನಿಕ ವಸ್ತುಗಳು ಬೇಕಾಗುತ್ತವೆ. ಬಿಳಿಗಾರ, ಪಟಿಕಾರ ಪೆಟ್ಲುಪ್ಪು, ನವಸಾಗರ, ರಸಕರ್ಪೂರ, ಅರಗು, ಮೈಲುತುತ್ತು ಗಂಧಕಾಮ್ಲ, ನೈಟ್ರಿಕಾಮ್ಲ, ರಾಜದ್ರವ, ಸಯನ್ಯಾಡ್ ಇವು ಅವಶ್ಯವಾಗುವ ರಾಸಾಯನಿಕ ವಸ್ತುಗಳು, ಕೆಂಪು ಮರಳು (ಬಿಪ್ಪದ ಹೊೈಗೆ) ನೊರೆಕಾಯಿ, ಮೇರ್ ಇತರ ವಸ್ತುಗಳು.

ಕೆಲಸದ ಪೆಟ್ಟಿಗೆ (Drawer)

ಯಾವುದೇ ಚಿನ್ನದ ಕೆಲಸಗಾರ ಚಿನ್ನದ ಕೆಲಸ ಪ್ರಾರಂಭಿಸುವಾಗಲೇ ಒಂದು ಕೆಲಸದ ಪೆಟ್ಟಿಗೆ ಮಾಡಿಕೊಳ್ಳುತ್ತಾನೆ. ಈ ಪೆಟ್ಟಿಗೆ ಮೇಲ್ಭಾಗದ ಹಲಗೆ ಗಟ್ಟಿಯಾಗಿರುತ್ತದೆ. ಈ ಹಲಗೆಯ ಮಧ್ಯೆ ಚಪ್ಪಟೆಯಾದ ಒಂದು ಚಿಕ್ಕ ಮರದ ತುಂಡನ್ನು ಜೋಡಿಸಿರುತ್ತಾರೆ. ಈ ತುಂಡಿನ ಮೇಲೆ ಚಿನ್ನವನ್ನಿಟ್ಟು ಅರದಿಂದ ಉಜ್ಜುವ ಕೆಲಸ ಮಾಡುತ್ತಾರೆ. ಪೆಟ್ಟಿಗೆಗೆ ಎರಡು ಅಥವಾ ಹೆಚ್ಚು ಡ್ರಾಯರ್‌ಗಳಿರುತ್ತವೆ. ಈ ಡ್ರಾಯರ್‌ನ ಒಳಭಾಗಕ್ಕೆ ನಯವಾದ ಕಾಗದ ಹಾಸಿರುತ್ತಾರೆ. ಚಿನ್ನದ ಆಭರಣದ ಕೆಲಸದ ಸಂದರ್ಭದಲ್ಲಿ ಡ್ರಾಯರನ್ನು ಎಳೆದಿಟ್ಟು ಕೆಲಸ ಮಾಡುತ್ತಾರೆ. ಹೀಗಾಗಿ ಕೆಲಸ ಮಾಡುವಾಗ ಏಳುವ ಚಿನ್ನದ ಹುಡಿ ಡ್ರಾಯರ್‌ನೊಳಗೇನೇ ಬೀಳುತ್ತದೆ. ಈ ಹುಡಿಯನ್ನು ಮೇಣದಲ್ಲಿ ಒತ್ತಿ ಸಂಗ್ರಹಿಸಿಟ್ಟು ಮತ್ತೆ ಕರಗಿಸಿ ಚಿನ್ನವನ್ನು ಪಡೆಯುತ್ತಾರೆ. ಕೆಲಸದ ಪೆಟ್ಟಿಗೆಯನ್ನು ಬಹಳ ಪವಿತ್ರ ಭಾವನೆಯಿಂದ ನೋಡಿಕೊಳ್ಳುತ್ತಾರೆ.

ಚಿನ್ನ ಶುದ್ಧೀಕರಣ

ಶುದ್ಧ ಚಿನ್ನ ೨೪ ಕ್ಯಾರೆಟ್ಟುಗಳದ್ದಾಗಿರುತ್ತದೆ. ಇದನ್ನು ಪುತ್ಥಳಿ, ಅಪರಂಜಿ ಎನ್ನುತ್ತಾರೆ. ಇದು ತುಂಬಾ ಮೆತ್ತಗಿರುತ್ತದೆ. ಹಾಗಾಗಿ ಬಹು ಬೇಗನೆ ಸವೆಯುತ್ತದೆ. ಕಡು ಅರಶಿನ ಬಣ್ಣವಿರುವುದರಿಂದ ನೋಡಲು ಇದು ಹೆಚ್ಚು ಆಕರ್ಷಣೀಯವಾಗಿರುವುದಿಲ್ಲ. ಆಭರಣ ತಯಾರಿಸುವಾಗ ಅದಕ್ಕೆ ಶೇಕಡಾ ೮.೨೨ ರಷ್ಟು ಶುದ್ಧ ತಾಮ್ರವನ್ನು ಸೇರಿಸುತ್ತಾರೆ. ಆಗ ಅದು ೨೨ ಕ್ಯಾರೆಟಿನ ಚಿನ್ನವಾಗುತ್ತದೆ. ಇದನ್ನು ಪವನು ಚಿನ್ನವೆಂದು ಕರೆಯುತ್ತಾರೆ. ಪವನು ಚಿನ್ನ ನಸುಕೆಂಪು, ಹಳದಿ ಬಣ್ಣದಾಗಿದ್ದು ಕಾಂತಿಯುತವಾಗಿರುತ್ತದೆ. ಸ್ವಲ್ಪ ಗಟ್ಟಿಯಾಗಿರುವುದರಿಂದ ಕೆತ್ತನೆಯ ಕೆಲಸಕ್ಕೆ ಅನುಕೂಲವಾಗುತ್ತದೆ. ನಿಧಾನವಾಗಿ ಸವೆಯುತ್ತದೆ.

ಚಿನ್ನದ ಅದಿರಿನಿಂದ ಚಿನ್ನವನ್ನು ಪ್ರತ್ಯೇಕಿಸುವ ಅಥವಾ ಇತರ ಲೋಹಗಳೊಂದಿಗೆ ಬೆರೆತಿರುವ ಚಿನ್ನವನ್ನು ಶುದ್ಧಗೊಳಿಸುವ ಕ್ರಮವನ್ನು ಪುಟವಿಡುವುದು ಎಂದು ಕರೆಯುತ್ತಿದ್ದರು. ಸ್ಫುಟಗೊಳಿಸುವಿಕೆ ಎಂಬ ಮೂಲ ಪದದಿಂದ ಬಂದ ಈ ಪುಟಗೊಳಿಸುವುದು ಶಬ್ದ ಉಂಟಾಗಿದೆ. "ಚಿನ್ನವನ್ನು ಪುಟಕ್ಕಿಟ್ಟಂತೆ" ಎಂಬ ಗಾದೆ ಮಾತನ್ನು ಉಂಟು ಮಾಡಿದೆ. ಅಶುದ್ಧ ಚಿನ್ನವನ್ನು ನಯವಾಗಿ ಪುಡಿ ಮಾಡಿ ಅಥವಾ ಚಿನ್ನದ ತಗಡನ್ನು ಚೂರು ಚೂರುಗಳನ್ನಾಗಿ ಮಾಡಿ ಅದರ ಜೊತೆಗೆ ಕೆಂಪು ಕಲ್ಲಿನ ನಯವಾದ ಪುಡಿ ಬೆರೆಸಿ -ಮಣ್ಣಿನ ಪಾತ್ರೆಯಲ್ಲಿ ಹಾಕಿ ಕುಲುಮೆಯಲ್ಲಿಟ್ಟು ಬಹಳಷ್ಟು ಕಾಯಿಸಿದಾಗ ಶುದ್ಧ ಚಿನ್ನ ಸಿಗುತ್ತದೆ. ಇದು ಪ್ರಾಚೀನ ಪದ್ಧತಿ.

ಈಗಿನ ಕಾಲದಲ್ಲಿ ನೈಟ್ರಿಕ್ ಆ್ಯಸಿಡ್ ಬಳಸಿ ಚಿನ್ನವನ್ನು ಶುದ್ಧೀಕರಿಸುತ್ತಾರೆ. ಒಂದು ಪಾಲು ಚಿನ್ನಕ್ಕೆ ಎರಡು ಪಾಲು ಬೆಳ್ಳಿ ಬೆರಸಿ ತಗಡು ಮಾಡಿ, ತಗಡನ್ನು ಚೂರು ಚೂರುಗೊಳಿಸಿ ಆ್ಯಸಿಡ್‌ನಲ್ಲಿ ಹಾಕಿ ಚೆನ್ನಾಗಿ ಕುದಿಸುತ್ತಾರೆ. ಕುದಿಯುವಾಗ ಚಿನ್ನದ ಹೊರತು ಉಳಿದ ಎಲ್ಲಾ ಲೋಹಗಳು ಕರಗಿ ಹೋಗುತ್ತವೆ. ಕುದಿದ ಬಳಿಕ ಅದಕ್ಕೆ ನೀರು ಹಾಕಿ ಲೋಹ ಬೆರೆತ ದುರ್ಬಲ ಆ್ಯಸಿಡ್‌ನ್ನು ಇನ್ನೊಂದು ಗಾಜಿನ ಪಾತ್ರೆಗೆ ನಿಧಾನವಾಗಿ ಬಸಿಯುತ್ತಾರೆ. ಪೂರ್ತಿ ನೀರನ್ನು ಬಸಿದಾಗ ಪಾತ್ರೆಯ ತಳದಲ್ಲಿ ಶುದ್ಧ ಚಿನ್ನದ ಗಟ್ಟಿ ಸಿಗುತ್ತದೆ. ಬಸಿಯುವಾಗ ದೊರೆತ ನೀರಿಗೆ ಒಂದು ತಾಮ್ರದ ತುಂಡು ಹಾಕಿಡುತ್ತಾರೆ. ಒಂದು ದಿನ ಹಾಗೆಯೇ

ಬಿಟ್ಟು ಮರುದಿನ ನೋಡಿದಾಗ ತಾಮ್ರದ ತುಂಡನ್ನು ಬೆಳ್ಳಿಯ ಕಣಗಳು ಸಂಪೂರ್ಣವಾಗಿ ಆವರಿಸಿಕೊಂಡಿರುತ್ತದೆ. ತಾಮ್ರದ ತುಂಡಿನಿಂದ ಬೆಳ್ಳಿಯ ಕಣಗಳನ್ನು ಬೇರ್ಪಡಿಸಿ ಕರಗಿಸಿದಾಗ ಶುದ್ಧ ಬೆಳ್ಳಿ ಸಿಗುತ್ತದೆ. ಈಗ ಚಿನ್ನದ ಶುದ್ಧೀಕರಣವನ್ನು ಅಕ್ಕಸಾಲಿಗರೇ ಮಾಡುವುದೇ ಕಡಿಮೆ. ಶುದ್ಧೀಕರಣ ಮಾಡುವುದನ್ನೇ ವೃತ್ತಿಯನ್ನಾಗಿ ಮಾಡಿಕೊಂಡ ಕೆಲವು ಜನರಿರುತ್ತಾರೆ. ಅಂಥವರು ಚಿನ್ನ ಶುದ್ಧೀಕರಣ ಮಾಡಿಕೊಡುತ್ತಾರೆ.

ಚಿನ್ನಾಭರಣಗಳ ತಯಾರಿ ಕೆಲಸವನ್ನು ಬೇರೆ ಬೇರೆ ಪ್ರಕಾರಗಳಾಗಿ ವಿಂಗಡಿಸಬಹುದು.

೧. ಚಿನ್ನದ ಗಟ್ಟಿಯನ್ನು ಕಾಯಿಸಿ ಬಡಿದು ತಗಡು ಅಥವಾ ಸರಿಗೆ ತಯಾರಿಸುವುದು.

೨. ತಗಡು ಇಲ್ಲವೇ ಸರಿಗೆಯನ್ನು ಬೇಕಾದ ಆಕೃತಿಯಲ್ಲಿ ಕತ್ತರಿಸಿ ಜೋಡಿಸಿ ಬೆಸುಗೆ ಹಾಕುವುದು ಅಥವಾ ಸೂಕ್ಷ್ಮವಾದ ತಂತುಗಳಿಂದ ಜಾಲಂದ್ರ ವಿನ್ಯಾಸಗಳನ್ನು ಮಾಡಿ ಬೆಸುಗೆ ಹಾಕುವುದು.

೩. ತೆಳ್ಳಗಿನ ತಗಡನ್ನು ಅರ್ಧಗೋಲಾಕೃತಿಗೆ ತಂದು ಪರಸ್ಪರ ಜೋಡಿಸಿ ಟೊಳ್ಳು ಗುಂಡುಗಳನ್ನು ತಯಾರು ಮಾಡುವುದು ಅಥವಾ ಚಿನ್ನದ ಚೂರಿಗೆ ಬೆಂಕಿ ಜ್ವಾಲೆ ಹಾಯಿಸಿ ಗಟ್ಟಿಗುಂಡು, ಮುತ್ತೇರಿ (ಸಣ್ಣಗುಂಡು) ತಯಾರಿಸುವುದು.

೪. ಎರಕ ಹೊಯಿದು ಆಭರಣಗಳನ್ನು ತಯಾರಿಸುವುದು ಅಥವಾ ತಗಡುಗಳನ್ನು ಅಚ್ಚಿನಲ್ಲಿಟ್ಟು ಅಚ್ಚು ಹೊಡೆಯುವುದು (ಡೈ ಹೊಡೆಯುವುದು).

೫. ಗರಗಸದಿಂದ ಕತ್ತರಿಸಿ ಅರದಿಂದ ಉಜ್ಜಿ ಆಭರಣಗಳಿಗೆ ರೂಪು ಕೊಡುವುದು.

೬. ಆಭರಣಗಳಿಗೆ ಹರಳು ಕೂರಿಸುವುದು. ಆಕರ್ಷಕವಾಗುವಂತೆ ಆಭರಣದ ಮೇಲೆ ಕೆತ್ತನೆ ಕೆಲಸ ಮಾಡುವುದು. ಚಿತ್ತಾರಗಳನ್ನು ಬಿಡಿಸುವುದು.

೭. ಹೊಳಪು ನೀಡುವುದು (ಒಪ್ಪ ಹಾಕುವುದು) ಆಭರಣ ತಯಾರಿಯ ಕೊನೆಯ ಹಂತ, ಪಾಲಿಶ್ ಮಾಡುವುದು, ಕಡ್ಡಿಯಿಂದ ಆಭರಣವನ್ನು ತೀಡಿ ಹೊಳಪು ಭರಿಸುವುದು. ಬ್ರಶ್‌ನಿಂದ ತಿಕ್ಕಿ ಹೊಳಪು ಭರಿಸುವುದು. ಹೀಗೆ ಬೇರೆ ಬೇರೆ ವಿಧಾನಗಳಿಂದ ಆಭರಣಗಳನ್ನು ಹೊಳೆಯುವಂತೆ ಮಾಡಲಾಗುತ್ತದೆ.

ಈ ಎಲ್ಲಾ ಕೆಲಸಗಳನ್ನೂ ಮಾಡಬಲ್ಲ ಪರಿಣಿತ ಅಕ್ಕಸಾಲಿಗರು ದಕ್ಷಿಣ ಕನ್ನಡದಲ್ಲಿದ್ದಾರೆ. ಒಂದೊಂದು ಪ್ರಕಾರದ ಕೆಲಸದಲ್ಲಿ ವಿಶೇಷ ಪರಿಣಿತಿ ಪಡೆದವರಿರುತ್ತಾರೆ. ಹಾಗೆ ಒಂದೊಂದು ಬಗೆಯ ಆಭರಣ ತಯಾರಿಯಲ್ಲಿಯೂ ಪರಿಣತಿಯನ್ನು ಹೊಂದಿದವರಿರುತ್ತಾರೆ. ಒಟ್ಟು ತಮ್ಮ ಕಲ್ಪನಾ ಸಾಮರ್ಥ್ಯ ಮತ್ತು ಕ್ರಿಯಾಶೀಲತೆಯಿಂದ ಗ್ರಾಹಕರ ಅಭಿರುಚಿಗೆ ತಕ್ಕಂತೆ ಕೆಲಸ ಮಾಡಿ ಆಭರಣಗಳನ್ನು ಅಂದ ಚಂದವಾಗಿ ರಚಿಸಿ ನೋಟಕರ ಮನಸೂರೆ ಗೊಳ್ಳುವಂತೆ ಮಾಡುತ್ತಾರೆ.

ಶುದ್ಧ ಚಿನ್ನಕ್ಕೆ ಶುದ್ಧ ಚಿನ್ನದಿಂದಲೇ ಬೆಸುಗೆ ಮಾಡಲು ಬರುವುದಿಲ್ಲ. ಬೆಸುಗೆ ಹಾಕಲು ಬೆಳ್ಳಿ ಮತ್ತು ಸಮನಾಗಿ ಬೆರೆಸಿದ ಲೋಹ ಬೇಕು. ಬೆಸುಗೆ ಹಾಕಲು ಈ ರೀತಿ ತಯಾರಿಸಲಾದ ಮಿಶ್ರಲೋಹದ ಸಣ್ಣ ಸಣ್ಣ ತಗಡು ತುಂಡುಗಳನ್ನು ಅಕ್ಕಸಾಲಿಗರು ಮೊದಲೇ ತಯಾರಿಸಿಕೊಂಡಿರುತ್ತಾರೆ. ಇದನ್ನು "ಮಟ್ಟ" ಎನ್ನುತ್ತಾರೆ. ತುಂಬಾ ಬೆಸುಗೆ ಇದ್ದ ಆಭರಣವನ್ನು ಕರಗಿಸಿದಾಗ ಬಳಸಿದ ಬೆಸುಗೆಯಿಂದಾಗಿ ಒಟ್ಟು ಚಿನ್ನ ತನ್ನ ಪರಿಶುದ್ಧತೆಯನ್ನು ಕಳೆದು ಕೊಳ್ಳುತ್ತದೆ. ಇದನ್ನ ತಪ್ಪಿಸುವ ಸಲುವಾಗಿ ಈಗ ಬೆಸುಗೆ ಹಾಕಲು ಕೆಡಿಮಿಯಂ ಎಂಬ ಧಾತುವನ್ನು ಬಳಸುತ್ತಾರೆ.

ಕುಶಲ ಕರ್ಮಿಗಳಿಗೆ ಉಂಟಾಗಿರುವ ತೊಂದರೆಗಳು

ಹಿಂದಿನ ಕಾಲದಲ್ಲಿ ಚಿನ್ನದ ಆಭರಣಗಳ ಕೆಲಸ ಗೃಹ ಕೈಗಾರಿಕೆಯಾಗಿತ್ತು. ಪ್ರತಿ ಹಳ್ಳಿಯಲ್ಲಿಯೂ ಈ ಉದ್ಯೋಗವನ್ನು ಕೈಗೊಂಡ ಒಂದೆರಡು ಕುಟುಂಬಗಳಿದ್ದುವು. ನಗರಗಳ ಬೆಳವಣಿಗೆಯಾದ ಮೇಲೆ ಈ ಉದ್ಯೋಗದಲ್ಲಿ ಮಧ್ಯವರ್ತಿಗಳು ಬೆಳೆದರು. ಚಿನ್ನ ಅತ್ಯಂತ ಬೆಲೆ ಬಾಳುವ ಲೋಹವಾದುದರಿಂದ ಈ ವ್ಯಾಪಾರ ಕೈಗೊಳ್ಳುವವರೆಲ್ಲ ಸಮಾಜದಲ್ಲಿ ಅತ್ಯಂತ ಶ್ರೀಮಂತರಾಗಿದ್ದರು.

ಶ್ರೀಮಂತ ವ್ಯಾಪಾರಿಗಳು ಗ್ರಾಹಕರು ಮತ್ತು ಕೆಲಸಗಾರರ ಮಧ್ಯೆ ಮಧ್ಯವರ್ತಿಗಳಾಗಿ ಬಂದರು. ಈ ಸರಾಫರುಗಳು ಕೆಲಸಗಾರರನ್ನು ತಮ್ಮಲ್ಲಿಯೇ ಇರಿಸಿಕೊಂಡು ಈ ಉದ್ಯೋಗವನ್ನು ಕಾರ್ಖಾನೆಯ ರೂಪಕ್ಕೆ ಪರಿವರ್ತಿಸಿದರು. ಪರಿಣಾಮವಾಗಿ ಹಳ್ಳಿಯ ಕುಶಲಕರ್ಮಿಗಳು ಉದ್ಯೋಗ ಕಳೆದುಕೊಂಡರು. ಅವರ ಮಕ್ಕಳು ಪಟ್ಟಣಕ್ಕೆ ವಲಸೆ ಬರಲು ಪ್ರಾರಂಭಿಸಿದರು. ಈಗಲೂ ಆಭರಣ ತಯಾರಿ ಕೈಗಾರಿಕೆ ಕಾರ್ಖಾನೆ ಪದ್ಧತಿಯಲ್ಲಿ ನಡೆಯುತ್ತಿದೆ.

ಸರಾಫರು (ಜ್ಯುವೆಲರ್ಸ್) ಈ ಕೆಲಸಗಾರರಿಗೆ ಚಿನ್ನಕೊಟ್ಟು ಬೇಕು ಬೇಕಾದ ಒಡವೆ ಮಾಡಿಸುತ್ತಾರೆ. ಅವರು ಮಾಡಿದ ಆಭರಣಕ್ಕನುಸಾರವಾಗಿ ಮಜೂರಿ ನೀಡುತ್ತಾರೆ. ಗ್ರಾಹಕರಿಂದ ಮಾಲೀಕರು ಪಡೆಯುವ ಮಜೂರಿಗಿಂತ ಇದು ಕಡಿಮೆಯಾಗಿರುತ್ತದೆ. ಆಭರಣ ತಯಾರಿಸುವಾಗ ಚಿನ್ನದ ತೂಕದಲ್ಲಿ ಕಡಿಮೆ ಬರುತ್ತದೆ. ಈ ಕೊರತೆಯನ್ನು 'ತೇಮಾನು' ಎನ್ನುತ್ತಾರೆ. ಸರಾಫರು ಇಂತಿಷ್ಟು ತೂಕದ ಆಭರಣಕ್ಕೆ ಇಂತಿಷ್ಟೇ ತೇಮಾನು ಎಂಬುದಾಗಿ ನಿಗದಿಗೊಳಿಸಿರುತ್ತಾರೆ. ಗ್ರಾಹಕರಿಗೆ ಹೆಚ್ಚು ತೇಮಾನು ಹಾಕಿ ಕೆಲಸಗಾರರಿಗೆ ಕಡಿಮೆ ತೇಮಾನು ನೀಡುತ್ತಾರೆ.

ಹೆಚ್ಚಿನ ಕೆಲಸಗಾರರಿಗೆ ಉದ್ಯೋಗ ಭರವಸೆ ಇಲ್ಲ. ಏಕೆಂದರೆ ಅವರನ್ನು ತಿಂಗಳ ಸಂಬಳದಲ್ಲಿ ಅಥವಾ ದಿನ ಕೂಲಿಯಲ್ಲಿ ದುಡಿಸುವುದಿಲ್ಲ. ಕೆಲಸಗಾರರಿಗೆ ರಜೆಯೂ ಇಲ್ಲ. ರಜೆ ಮಜೂರಿಯೂ ಇಲ್ಲ. ಭವಿಷ್ಯ ನಿಧಿ ಇಲ್ಲ. ಜೀವವಿಮೆ ಇಲ್ಲ. ಈ ರೀತಿ ಅಭದ್ರ ಸ್ಥಿತಿಯಲ್ಲಿ ಕೆಲಸಗಾರರು ದುಡಿಯುತ್ತಿರುವ ಪರಿಸ್ಥಿತಿ ಪಟ್ಟಣಗಳಲ್ಲಿ ಈಗಲೂ ಇದೆ. ಕೆಲಸಗಾರರಿಗೂ ಸರಾಫರಿಗೂ ಇರುವ ಇನ್ನೊಂದು ತೊಂದರೆ ಎಂದರೆ ಪೋಲೀಸರ ಹಾವಳಿ. ಪೋಲೀಸರು ಚಿನ್ನಾಭರಣಗಳನ್ನು ಕದ್ದ ಕಳ್ಳರನ್ನು ಸಂಶಯದ ಮೇಲೆ ಹಿಡಿಯುತ್ತಾರೆ. ಅವರ ಕೈಯಲ್ಲಿ ಆಭರಣ ಇರುವುದಿಲ್ಲ. ಪೋಲೀಸರ ಹಿಂಸೆ ತಾಳಲಾರದೆ ಕಳ್ಳರು ಆಭರಣ ಮಾರಾಟ ಮಾಡಿದ್ದೇವೆಂದು ಸುಳ್ಳು ಹೇಳಿ ಯಾವುದಾದರೊಂದು ಚಿನ್ನದ ಅಂಗಡಿಯನ್ನೋ ಕೆಲಸಗಾರರ ಮನೆಯನ್ನೊ ತೋರಿಸುತ್ತಾರೆ. ಪೋಲೀಸರು ಆ ಅಂಗಡಿ ಅಥವಾ ಮನೆಗೆ ನುಗ್ಗಿ ಸಿಕ್ಕಿದ ಚಿನ್ನವನ್ನು ಅದು ಕಳ್ಳನೇ ಮಾರಿದ ಚಿನ್ನವೆಂದು ಹೇಳಿ ದೋಚಿಕೊಂಡು ಹೋಗುತ್ತಾರೆ. ಈ ಹಾವಳಿಯಿಂದ ಅಕ್ಕಸಾಲಿಗರು ತುಂಬಾ ಹಿಂಸೆ ಮತ್ತು ನಷ್ಟಕ್ಕೊಳಗಾಗುತ್ತಿದ್ದಾರೆ.

೧೯೬೨ರಲ್ಲಿ ಜನತಾ ಪಕ್ಷದ ಅಧಿಕಾರ ಕೇಂದ್ರದಲ್ಲಿದ್ದಾಗ ಸುವರ್ಣ ನಿಯಂತ್ರಣ ಆಜ್ಞೆ ಜಾರಿಗೆ ಬಂತು. ಇದರಿಂದಾಗಿ ಒಮ್ಮೆಗೆ ಚಿನ್ನವನ್ನು ಕೊಳ್ಳುವ-ಮಾರುವ ವ್ಯವಹಾರವೇ ನಿಂತು ಹೋಯಿತು. ಅಕ್ಕಸಾಲಿಗರು ಬಹಳ ಕಷ್ಟ ಪಡಬೇಕಾಯಿತು. ಕುಟುಂಬ ನಿರ್ವಹಣೆಯ ಕಷ್ಟವಾಗಿ ಅನೇಕರು ಆತ್ಮಹತ್ಯೆ ಮಾಡಿಕೊಂಡರು. ೧೯೬೭ರಲ್ಲಿ ಈ ಆಜ್ಞೆಯ ಮಾರ್ಪಾಡಾಯಿತು. ಈಗ ಚಿನ್ನದ ಕೆಲಸಗಾರರು ಕೈಗಾರಿಕಾ ಇಲಾಖೆಯಿಂದ ಒಂದು ಪರವಾನಿಗೆ ಪಡೆಯಬೇಕಾಗುತ್ತದೆ. ಆಭರಣ ತಯಾರಿಗಾಗಿ ಚಿನ್ನವನ್ನು ಪಡೆದ ಮತ್ತು ಹಿಂತಿರುಗಿಸಿದ ಬಗ್ಗೆ ವ್ಯವಹಾರದ ಲೆಕ್ಕಪತ್ರವನ್ನು ಮಾತ್ರ ಇಡಬೇಕಾಗುತ್ತದೆ.

ಚಿನ್ನ ಅತ್ಯಮೂಲ್ಯ ಲೋಹವಾದುದರಿಂದ ಚಿನ್ನದ ಕೆಲಸಗಾರರು ಬಹಳ ಜವಾಬ್ದಾರಿಯಿಂದ ಕೆಲಸ ಮಾಡಬೇಕಾಗುತ್ತದೆ. ಚಿನ್ನ ಕಳವಾಗಿ ಹೋದ ಸಂದರ್ಭದಲ್ಲಿ ಇಲ್ಲವೆ ಕಳೆದುಹೋದ ಸಂದರ್ಭದಲ್ಲಿ ತಾವೇ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಚಿನ್ನದ ಕೆಲಸ ವಿಶ್ವಾಸದ ಮೇಲೆ ನಡೆಯುವಂತದ್ದು ಆದುದರಿಂದ ಅವರು ಬಹಳ ಪ್ರಾಮಾಣಿಕರಾಗಿರಬೇಕಾಗುತ್ತದೆ. ಕ್ಲಪ್ತತೆಯನ್ನು ಇಟ್ಟುಕೊಳ್ಳಬೇಕಾಗುತ್ತದೆ. ಕರ್ನಾಟಕದಿಂದ ಬಹಳಷ್ಟು ಚಿನ್ನ ಬೆಳ್ಳಿಯ ಆಭರಣಗಳು ಕೊಲ್ಲಿರಾಷ್ಟ್ರಗಳಿಗೆ, ಆಫ್ರಿಕಾ ಮತ್ತು ಇಂಗ್ಲೆಂಡಿಗೆ ರಫ್ತಾಗುತ್ತದೆ. ಕಂಠಹಾರದ ಸೆಟ್ಟುಗಳು ಬಳೆಗಳು, ಕಿವಿಯ ಆಭರಣಗಳು, ಪದಕಗಳು, ಚೈನುಗಳು ಮತ್ತು ಪಿನ್ನುಗಳು ಅವುಗಳಲ್ಲಿ ಮುಖ್ಯವಾಗಿವೆ. ಕೇಂದ್ರ ಮತ್ತು ರಾಜ್ಯ ಕರಕುಶಲ ಮಂಡಳಿಗಳು ಆಭರಣಗಳ ಮಾರಾಟ ಮತ್ತು ಅಭಿವೃದ್ಧಿಯ ಬಗೆಗೆ ಸಹಾಯ ಮಾಡುತ್ತವೆ. ಬೆಂಗಳೂರಿನಲ್ಲಿರುವ ಹ್ಯಾಂಡಿಕ್ರಾಫ್ಟ್ ಡೆವಲಪ್‌ಮೆಂಟ್ ಕಾರ್ಪೊರೇಷನ್ ಕೂಡಾ ಈ ಬಗ್ಗೆ ಸಹಕರಿಸುತ್ತದೆ.

ಅಕ್ಕಸಾಲಿಗರು ತಮ್ಮ ಉದ್ಯೋಗಕ್ಕೆ ಬಳಸುವ ಕಚ್ಚಾ ವಸ್ತು ಚಿನ್ನ. ಅತ್ಯಂತ ಹೆಚ್ಚು ಬೆಲೆಯ ವಸ್ತು. ಚಿನ್ನದ ಬೆಲೆ ಯಾವತ್ತು ಒಂದೇ ರೀತಿ ಇರುವುದಿಲ್ಲ. ಜಾಗತಿಕ ಮಟ್ಟದಲ್ಲಿ ಈ ಲೋಹದ ಬೆಲೆಯಲ್ಲಿ ಏರಿಳಿತಗಳು ಆಗುತ್ತಲೇ ಇರುತ್ತವೆ. ಈ ಅಜಗಜಾಂತರದ ಏರಿಳಿತಗಳಿಂದಾಗಿ ಆಭರಣಗಳ ವ್ಯಾಪಾರ ಕುಸಿಯುತ್ತದೆ. ಇದು ಕೆಲಸಗಾರರ ಮೇಲೆ ವಿಶೇಷ ಪರಿಣಾಮವನ್ನುಂಟು ಮಾಡುತ್ತದೆ. ಸರಕಾರ ಅಕ್ಕಸಾಲಿಗರಿಗೆ ಆಗುವ ಈ ಎಲ್ಲ ತೊಂದರೆಗಳನ್ನು ಪರಿಹರಿಸುವಲ್ಲಿ ಸೂಕ್ತ ಕ್ರಮ ಕೈಗೊಂಡಲ್ಲಿ ಅಕ್ಕಸಾಲಿಗರು ನಿರ್ಭೀತಿಯಿಂದ ಸುಖವಾಗಿ ಬದುಕಲು ಸಾಧ್ಯವಾಗಬಹುದು.

ಆಕರ ಗ್ರಂಥಗಳು

೧. ಭಗವಾನ್ - ಕರ್ಣಾಭರಣ ಸೌಂದರ್ಯಸಿರಿ - ಸುಧಾ, ದೀಪಾವಳಿ ವಿಶೇಷಾಂಕ - ೧೯೯೩.

೨.. ಡಾ। ಪಾಲ್ತಾಡಿರಾಮಕೃಷ್ಣ ಆಚಾರ್ - ಜಾನಪದೀಯತೆಯನ್ನು ಉಳಿಸಿಕೊಂಡಿರುವ ಸ್ವರ್ಣಕಲೆ - ಜಾನಪದ ಮಿನದನ - ೧೯೯೭.


೩. ಆರ್.ಜಿ. ರಾಯಕರ - ಕರ್ನಾಟಕದಲ್ಲಿ ಚಿನ್ನ ಬೆಳ್ಳಿಯ ಕುಶಲ ಕೈಗಾರಿಕೆ - ೧೯೮೪. ಐ ಬಿ ಎಚ್ ಪ್ರಕಾಶನ, ಗಾಂಧಿನಗರ, ಬೆಂಗಳೂರು.


೪. ಡಾ. ವಿಜಯಲಕ್ಷ್ಮಿ ಸೀತಾಪುರ - ಮಾನವ ಮತ್ತು ಚಿನ್ನ ಬೆಳ್ಳಿ. ಜಾನಪದ ಸಾಹಿತ್ಯ ದರ್ಶನ, ಭಾಗ - ೧೮ - ೧೯೯೩ ಕನ್ನಡ ಅದ್ಯಯನ ಪೀಠ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ.

೦

ಚಿನಿವಾರಿಕೆಯ ಸಲಕರಣೆಗಳು

ಕಾ.ವಾ. ಆಚಾರ್ಯ ಮೂಡಬಿದ್ರೆ





ದಕ್ಷಿಣ ಕರ್ನಾಟಕದಲ್ಲಿ ಬಡಗಿ ವೃತ್ತಿ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಜನಾಂಗದ ಸಂಕ್ಷಿಪ್ತ ಪರಿಚಯ

ಬಡಗಿಗಳು - ಮರದಿಂದ ಉಪಕರಣಗಳನ್ನು ತಯಾರಿಸುವವರು. ರೈತರು ಕೃಷಿ ಕೆಲಸದಲ್ಲಿ ಬಳಸುವ ಉಪಕರಣಗಳ ತಯಾರಿ ಮತ್ತು ಗೃಹ ನಿರ್ಮಾಣಕ್ಕೆ ಬಳಸುವ ಕಿಟಕಿ, ಬಾಗಿಲು ಮೊದಲಾದವುಗಳ ಮರಗೆಲಸ ಇವರ ಪ್ರಧಾನ ವೃತ್ತಿ. ದಕ್ಷಿಣ ಕರ್ನಾಟಕದಲ್ಲಿ ಮೂಲ ಬಡಗಿಯರಿಗಿಂತಲೂ ಇತರೆ ಜಾತಿಯವರು ಹೆಚ್ಚಾಗಿ ಈ ವೃತ್ತಿಯನ್ನು ಮಾಡಿ ಜೀವನ ನಿರ್ವಹಣೆ ಮಾಡುತ್ತಿರುವುದು ಕಂಡು ಬರುತ್ತದೆ. ಬಡಗಿಗಳು ಮರಕಡಿಯುವುದು, ತುಂಡು ಹಾಕುವುದು, ಪಟ್ಟಿಗಳನ್ನು ಮಾಡಿಕೊಳ್ಳುವುದು, ಮರದ ಉಪಕರಣಗಳನ್ನು ತಯಾರಿಸುವುದೆ ಮೊದಲಾದ ಪಾರಂಪರಿಕ ಕೆಲಸಗಳನ್ನು ಮಾಡುತ್ತಾರೆ. ಈಗೀಗ ನಗರೀಕರಣ ಪ್ರಭಾವದಿಂದ ಮತ್ತು ವಿದೇಶಿ ಪ್ರಭಾವದಿಂದ ಮನೆಗಳಲ್ಲಿ ಷೋಕೇಸ್, ಡೈನಿಂಗ್ ಟೇಬಲ್, ಕುರ್ಚಿ, ಮೇಜು, ಮಂಚ, ಟಿ.ವಿ.ಸ್ಟ್ಯಾಂಡ್, ಟೀಪಾಯಿ, ಮಂಚ, ದಿವಾನ್ ಕಾಟ್, ಆರಾಮ ಕುರ್ಚಿ ಮೊದಲಾದವನ್ನು ಮಾಡುತ್ತಿದ್ದಾರೆ. ಈ ರೀತಿಯ ಕೆಲಸಗಳನ್ನು ನಿರ್ವಹಿಸುವುದರಿಂದ ಹೆಚ್ಚು ಹಣ ಸಂಪಾದನೆಯಾಗುತ್ತದೆ. ಆದ್ದರಿಂದ ಕೃಷಿಗೆ ಸಂಬಂಧಿಸಿದ ಉಪಕರಣಗಳನ್ನು ಮಾಡುವ ಕೆಲಸಗಳತ್ತ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ.

ಮೊದಲಿಗೆ ವೃತ್ತಿ ಮಾತ್ರವಾಗಿದ್ದ 'ಬಡಗಿ'ಯ ಕಸುಬು ತದನಂತರದಲ್ಲಿ 'ಜಾತಿ'ಯಾಗಿ ರೂಪಗೊಂಡಿತು. ಇವರು ಮುಖ್ಯವಾಗಿ 'ಕಾಳಿ' ದೇವತೆಯನ್ನು ಆರಾಧಿಸುತ್ತಾರೆ. ಆದರೆ ಇತರೆ ಜಾತಿಯ ಬಡಗಿ ವೃತ್ತಿಯವರು ತಂತಮ್ಮ ಮನೆದೇವರುಗಳನ್ನು ಆರಾಧಿಸುವುದು ಕಂಡು ಬರುತ್ತದೆ.

ಆಚರಣೆಗಳು

ಮೂಲ ಬಡಗಿಗಳು ವೈದಿಕರ ಆಚಾರಗಳನ್ನು ಅನುಸರಿಸುತ್ತಾರೆ. ತಮ್ಮ ಕುಟುಂಬದಲ್ಲಿ ಯಾರಿಗಾದರೂ ಹೆರಿಗೆಯಾದಾಗ ಮೂರು ಅಥವಾ

ಐದು ದಿನಗಳವರೆಗೆ ಯಾವುದೆ ದೇವತಾ ಪೂಜೆ, ಮಂಗಳ ಕಾರ್ಯಗಳನ್ನು ಮಾಡುವುದಿಲ್ಲ. ಆ ದಿನಗಳನ್ನು 'ಸೂತಕದಿನ' ಗಳೆಂದು ಕರೆಯುತ್ತಾರೆ. ಸೂತಕ ಕಳೆದುಕೊಂಡು, ಮಗು ಹುಟ್ಟಿದ ಹನ್ನೊಂದನೆಯ ದಿನದಂದು ಬಂಧು, ಬಳಗದವರನ್ನು ಕರೆದು, ವಿಶೇಷವಾದ ಸಿಹಿ ಅಡಿಗೆಯನ್ನು ಮಾಡಿ ಭೋಜನವನ್ನು ಏರ್ಪಡಿಸಿ, ಅಂದು ಮಗುವಿಗೆ ನಾಮಕರಣ ಮಾಡುತ್ತಾರೆ. ಮಗು ಬೆಳೆದಂತೆ ಸಂಸ್ಕಾರ, ಶಿಕ್ಷಣವನ್ನು ಪಡೆಯುತ್ತದೆ. ಗಂಡು ಮಗುವಾಗಿದ್ದರೆ, ಅವನು ೧೦-೧೨ ವರ್ಷದ ಬಾಲಕನಾದಾಗ 'ಉಪನಯನ' ಮಾಡುತ್ತಾರೆ. ಅಂದರೆ ಕೆಲವು ವಿಧಿ ವಿಧಾನಗಳನ್ನು ಆಚರಿಸಿ ಕೊರಳಿಗೆ ಮೂರೆಳೆಯ ಜನಿವಾರ ಹಾಕಿಸಿ, ಗಾಯತ್ರಿ ಮಂತ್ರೋಪದೇಶ ಮಾಡಿಸುತ್ತಾರೆ.

ಹೆಣ್ಣು ಮಕ್ಕಳಾದರೆ, ಋತುಮತಿಯಾದಾಗ ಸೂತಕವನ್ನಾಚರಿಸುತ್ತಾರೆ. ಆಚರಣೆಗಳನ್ನು ನೆರವೇರಿಸಿ ಸೂತಕ ಕಳೆದುಕೊಳ್ಳುತ್ತಾರೆ. ಮಾಸಿಕದಲ್ಲಿ (ಬಹಿಷ್ಟೆಯಾದಾಗ) ಮೂರು ದಿನಗಳವರೆಗೆ ಹೆಣ್ಣು ಮಗಳನ್ನು ಮನೆಯ ಮೂಲೆಯಲ್ಲಿ ಕೂಡಿಸುತ್ತಾರೆ. ಆ ದಿನಗಳಲ್ಲಿ ಆಕೆಯು ಯಾವುದೇ ಮನೆಗೆಲಸವನ್ನು ಮಾಡುವುದಿಲ್ಲ. ಯಾರೂ ಆಕೆಯನ್ನು ಮುಟ್ಟಬಾರದು. ಅಂತೆಯೇ ಆಕೆಯೂ ಯಾರನ್ನೂ ಮುಟ್ಟುವಂತಿಲ್ಲ. ಆಕೆ ಆ ಮೂರು ದಿನಗಳೂ ತಪ್ಪದಂತೆ ತಲೆಸ್ನಾನ ಮಾಡಬೇಕು. ಈ ವಿಧಿ ವಿಧಾನವನ್ನು ವಿವಾಹಿತರಾದ ಹೆಂಗಸರು ಬಹಿಷ್ಟೆಯರಾದಾಗಲೂ ಆಚರಿಸುತ್ತಾರೆ.

ವಿವಾಹಕ್ಕೆ ಮುನ್ನ ಗಂಡು-ಹೆಣ್ಣುಗಳ ಜಾತಕವನ್ನು ಪುರೋಹಿತರಿಗೆ ತೋರಿಸಿ ಗ್ರಹಗತಿಗಳನ್ನು ವಿಚಾರಿಸುತ್ತಾರೆ. ಗಣ, ಕೂಟ ಕೂಡಿ ಬಂದಲ್ಲಿ ಮಾತ್ರ ಮುಂದಿನ ಮಾತುಕತೆ ನಡೆಸುತ್ತಾರೆ. ಆಗಲೂ 'ದಾರಿ ಬಟ್ಟೆ' ಸರಿಯಾಗಿದ್ದರೆ, ಪಂಚಾಗ ನೋಡಿಸಿ ಶುಭ ಮುಹೂರ್ತವನ್ನು ತಿಳಿದುಕೊಂಡು ಕುಲದ ಗುರು ಹಿರಿಯರು ಆಪ್ತೇಷ್ಟರ ಸಮಕ್ಷಮದಲ್ಲಿ ಲಗ್ನ ಕಟ್ಟಿಸುತ್ತಾರೆ. ಆ ಸಂದರ್ಭದಲ್ಲಿ ಹೆಣ್ಣಿನ ಕಡೆಯವರು, ಗಂಡಿನ ಕಡೆಯವರು ಕೂತು ವರೋಪಚಾರ, ಒಡವೆ, ವಸ್ತ್ರ ಮೊದಲಾದ ಕೊಡುವ, ತೆಗೆದುಕೊಳ್ಳುವ ವಿಚಾರಗಳ ಬಗ್ಗೆ ಪರಸ್ಪರ ಮಾತುಕತೆಗಳನ್ನಾಡುತ್ತಾರೆ. ನಿಗದಿಗೊಳಿಸಿದ ಮುಹೂರ್ತದಲ್ಲಿ ವಿವಾಹ ಕಾರ್ಯಗಳು ನಡೆಯುತ್ತವೆ.

ವಿವಾಹವಾದ ನಂತರ ಗಂಡಸರು ಮೂರೆಳೆಯ ಜನಿವಾರವನ್ನು ತೆಗೆದು ಹಾಕಿ ಆರೆಳೆಯ ಜನಿವಾರವನ್ನು ಧರಿಸುತ್ತಾರೆ.

ಇವರು ಸಾವಿನ ನಂತರದ ಸಂಸ್ಕಾರಗಳಲ್ಲಿಯೂ ವೈದಿಕ ವಿಧಿ ವಿಧಾನಗಳನ್ನು ಅನುಸರಿಸುತ್ತಾರೆ. ಶವವನ್ನು ಸುಡುತ್ತಾರೆ. ಮೂರು ದಿನಗಳ ತರುವಾಯ ಆ ಅಸ್ತಿಯನ್ನು ತಂದು ಗಂಗೆಯಲ್ಲಿ ವಿಸರ್ಜಿಸತ್ತಾರೆ. ಆ ದಿನಗಳಲ್ಲಿ ಗಂಡು ಮಕ್ಕಳು ಜನಿವಾರವನ್ನು ಬದಲಿಸುತ್ತಾರಲ್ಲದೆ, ತಲೆಯ್ನನ್ನು ಬೋಳಿಸಿಕೊಳ್ಳುತ್ತಾರೆ. ಅನಂತರ ನಿಗದಿತ ದಿನದಂದು ಅನ್ನ ಸಂತರ್ಪಣೆ ಮಾಡಿಸಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾರೆ. ಅಲ್ಲದೆ ವಾರ್ಷಿಕ ಶ್ರಾದ್ಧವನ್ನು ಆಚರಿಸುತ್ತಾರೆ.

ಹಬ್ಬ ಹರಿದಿನಗಳು

ಅವರು ಹಿಂದೂಗಳಿಗಿರುವ ಎಲ್ಲ ಹಬ್ಬಗಳನ್ನು ಆಚರಿಸುತ್ತಾರೆ. ಗೌರಿ-ಗಣೇಶ, ಮಹಾನವಮಿ, ಯುಗಾದಿ, ದೀಪಾವಳಿ, ಶ್ರಾವಣ ಮೊದಲಾದ ಹಬ್ಬಗಳನ್ನು ಆಚರಿಸುವರು.

ದಸರೆಯ ದಿನಗಳಲ್ಲಿ ವಿಜಯದಶಮಿಯಂದು ತಾವು ವೃತ್ತಿಯಲ್ಲಿ ಬಳಸುವ ಉಪಕರಣಗಳನ್ನು ಶುಭ್ರಗೊಳಿಸಿ ವಿಶೇಷವಾಗಿ ಜೋಡಿಸಿ ಆಯುಧ ಪೂಜೆಯನ್ನೂ ಮಾಡುತ್ತಾರೆ. ಮೂಲತಃ ಬಡಗಿಗಳಲ್ಲದವರು (ಮುಸಲ್ಮಾನರನ್ನು ಹೊರತು ಪಡಿಸಿ) ಇತರೆ ಜಾತಿಯವರು ಆಯುಧ ಪೂಜೆ ಮಾಡುವಾಗ ಕುರಿ, ಕೋಳಿಗಳನ್ನು ಬಲಿಗೊಡುವ ಸಂಪ್ರದಾಯ ಕಂಡು ಬರುತ್ತದೆ.

ಎಷ್ಟೆಲ್ಲ ನಾಗರಿಕತೆ, ಯಾಂತ್ರಿಕತೆ ಬೆಳೆದರೂ 'ಬಡಗಿ'ಗಳ ಅವಶ್ಯಕತೆ ರೈತರಿಗೆ, ಗೃಹ ನಿರ್ಮಾಣ ಮಾಡುವವರಿಗೆ ಇದ್ದೇ ಇದೆ. ಆದ್ದರಿಂದಲೆ ಇತರೆ ಜಾತಿಯವರೂ ಈ ಕಸುಬನ್ನು ಕಲಿತು ಕಾರ್ಯನಿರತರಾಗಿದ್ದಾರೆ.

ಸಿದ್ಧಪಡಿಸುವ ವಸ್ತುಗಳು:

ವ್ಯವಸಾಯ ಸಂಬಂಧಿತ	ಪೀಠೋಪಕರಣಗಳು ಆಗತ್ಯವಾದವು	ಗೃಹ ನಿರ್ಮಾಣಕ್ಕೆ
ಎತ್ತಿನಗಾಡಿ	ಕುರ್ಚಿ	ಬಾಗಿಲು
ಮೂಕು	ಆರಾಮ ಕುರ್ಚಿ	ಕಿಟಕಿ
ನೊಗ	ಮೇಜು	ಬಟ್ಟೆ ಸ್ಟ್ಯಾಂಡ್
ಮಡಿಕೆ (ನೇಗಿಲು)	ಟೀಪಾಯಿ	ಹ್ಯಾಂಗರ್ಸ್
ಹಿಡಿ ರಂಟೆ	ಸ್ಟೂಲ್	ಅಲಮೇರಾ
ಕುಂಟೆ	ಊಟದ ಮೇಜು (ಡೈನಿಂಗ್ ಟೇಬಲ್)	ವಾರ್ಡ್‌ರೋಬು
ಕುಡುಗೋಲಿನ ಹಿಡಿ	ದುಂಡು ಮೇಜು	ಹೊಸಿಲು
ಗಾಡಿ ಚಕ್ರ	ದಿವಾನ್ ಕಾಟ್	ಅಡ್ಡ ತೊಲೆ
	ಅಡ್ಡ ತೆರೆ	ಕಂಬ
	ಸಂದೂಕ	ಅಟ್ಟ
	ಪೆಟ್ಟಿಗೆ	ಅಟ್ಟಕ್ಕೆ ಮೆಟ್ಟಿಲು
	ಮಂಚ	
	ತೂಗುಯ್ಯಾಲೆ ಮಣೆ	

ಗೃಹ ಬಳಕೆ ವಸ್ತುಗಳು	ಧಾರ್ಮಿಕವಾದುವು	ಕ್ರೀಡೆಗೆ ಸಂಬಂಧಿಸಿದವು
ಮಣೆ	ಕಳಸದ ಮಣೆ	ಕೋಲಾಟದ ಬಣ್ಣದ ಕೋಲು
ಚಪಾತಿ ಮಣೆ	ಹಸೆ ಮಣೆ	ಅಟಗುಣಿ ಮಣೆ
ಈಳಿಗೆ ಮಣೆ	ದೀಪಸ್ತಂಭ	ಗಾಲಿಬಂಡಿ
ಕವಗಟ್ಟಿಗೆ	ಪಾದುಕೆಗಳು	ಆಟದ ಕುದುರೆ

ಚಕ್ಕಲಿ ಒರಳು	ಪಾದ ಪೀಠ	ಕೇರಂಬೋರ್ಡ್
ಶಾವಿಗೆ ಒರಳು	ಮೂರು ಕಾಲಿನ ಮಣೆ	ವಿಕೆಟ್
ಬೆಲ್ಲದಚ್ಚಿನ ಮಣೆ	ದೇವರ ಮಂಟಪ	ಬ್ಯಾಟು
ಕರ್ಜಿಕಾಯಿ ಅಚ್ಚು		
ಮುದ್ದೆ ಗೋಲು		
ಕಡೆಗೋಲು	ರಥ	
ಮಸೆಯುವ ಕೋಲು	ತೇರು	
ಮರದ ಒರಳು	ಪಲ್ಲಕ್ಕಿ	
ಒನಕೆ		
ಕಡಿ	**ಶಾಲಾ ಕಾಲೇಜುಗಳಲ್ಲಿ ಬಳಸುವವು**	**ಇತರೆಯವು**
ತೊಟ್ಟಿಲು	ಸೂಚನಾ ಫಲಕ (ನೋಟಿಸ್ ಬೋರ್ಡ್)	ಕ್ರೈಸ್ತರ ಶವಪೆಟ್ಟಿಗೆ (ಕಾಫಿನ್)
ಕೈ ಪೆಟ್ಟಿಗೆ	ಕಪ್ಪು ಹಲಗೆ (ಬ್ಲಾಕ್ ಬೋರ್ಡ್)	ಮುಸಲ್ಮಾನರು ಶವ ಸಾಗಿಸುವ ಸಾಧನ
	ಉಪನ್ಯಾಸ ಮೇಜು	ಜಟಕಾ (ಕುದುರೆಗಾಡಿ)
	(ಲೆಕ್ಚರ್ ಸ್ಟ್ಯಾಂಡ್)	ಟಾಂಗಾ
	ಬೆಂಚು	ಬಾವಿಯ ಗಾಲಿಗಳು
	ಡೆಸ್ಕ್	ತಿಗರಿ (ಕುಂಬಾರ ಚಕ್ರ)
	ಕಾಲುಮಣೆ	ದೋಣಿ
	(ನೆಲದಲ್ಲಿ ಹಾಸಿರುವವು)	
	ಬರೆಯುವ ಮಣೆ	

ಬಳಸುವ (ಮರಗಳು) ಕಚ್ಚಾ ಸಾಮಗ್ರಿಗಳು

ತೇಗ (ಟೀಕ್), ಹೊನ್ನೆ, ಬೀಟೆ, ಮತ್ತಿ, ಹಲಸು, ಜಾಲಿ, ಮಾವು, ಹೆತ್ತಾಗ (ಎಲ್ಲೋ ಟೀಕ್) (ಹರಿಷಣದ ಬಣ್ಣವಿರುತ್ತದೆ), ನೇರಳೆ, ಬೇವು ಮೊದಲಾದವು.

ಗಂಧದ ಮರದಿಂದ ಪೀಠೋಪಕರಣಗಳನ್ನಾಗಲಿ, ಗೃಹ ನಿರ್ಮಾಣಕ್ಕೆ ಬಳಸುವ ಕಿಟಕಿ, ಬಾಗಿಲುಗಳನ್ನು ಯಾರೂ ಮಾಡಿಸುವುದಿಲ್ಲ. ಅದು ಅತಿ ದುಬಾರಿಯಾದ ವೆಚ್ಚವಾದುದರಿಂದ ಸಾಮಾನ್ಯವಾಗಿ ಬಳಸುವುದಿಲ್ಲ. ಅಲ್ಲದೆ ಬಡಗಿಗಳು ಅಧಿಕಾರಿಗಳಿದ ಪರವಾನಗಿ (ಲೈಸೆನ್ಸ್) ಪಡೆದುಕೊಳ್ಳಬೇಕು. ಸಾಮಾನ್ಯವಾಗಿ ಗೃಹಾಲಂಕಾರ ವಸ್ತುಗಳಾದ ಗಂಧದ ಗೊಂಬೆ, ವಿಗ್ರಹಗಳನ್ನು ಸರ್ಕಾರದಿಂದ ಅಂಗೀಕೃತವಾದ ಸಂಸ್ಥೆಗಳಲ್ಲಿ ದುಡಿಯುವ 'ಗುಡಿಗಾರರು' ಮಾತ್ರ ಮಾಡುತ್ತಾರೆ.

ಗೃಹ ನಿರ್ಮಾಣ ಮಾಡುವಾಗ ಮುಂಬಾಗಿಲ ಬಾಗಿಲು ಚೌಕಟ್ಟಿನ ತಲೆ ಭಾಗಕ್ಕೆ ಅಂಕಾಲೆ ಮರದ ಪಟ್ಟಿಯನ್ನು ಬಳಸುತ್ತಾರೆ. ಇದರಿಂದ ಮನೆಯವರಿಗೆ ಯಾವ ಕೆಡುಕು ಆಗುವುದಿಲ್ಲವೆಂದು ಜನ ನಂಬಿಕೊಂಡು ಬಂದಿದ್ದಾರೆ. ಯಾವುದೇ ಅನಿಷ್ಟಗಳಾದ ಗಾಳಿ, ಪೀಡೆ, ದೆವ್ವಗಳು ಮನೆಯೊಳಗೆ ಪ್ರವೇಶಿಸುವುದಿಲ್ಲವೆಂದು ಹಿರಿಯರು ಹೇಳುತ್ತಾರೆ.

ತಾರೆ ಮರ, ತವಸಿಮರ, ಜಗಳಗಂಟಿ ಮರಗಳಲ್ಲಿ ದೆವ್ವಗಳು ವಾಸಿಸುತ್ತವಾದ್ದರಿಂದ, ಆ ಮರಗಳನ್ನು ಬಳಸಿಕೊಂಡು ಬಡಗಿ ವಸ್ತುಗಳನ್ನು ತಯಾರು ಮಾಡಿದರೆ ಕೇಡುಂಟಾಗುವುದೆಂದು ಕಸುಬುದಾರರು ಹೇಳುತ್ತಾರೆ.

ಬಳಸುವ ಸಾಧನ ಮತ್ತು ಉಪಕರಣಗಳು

ಅಡಿಕಡ್ಡಿ (ಇಂಚುಪಟ್ಟಿ), ಅಳೆವ ಟೇಪು, ಉಪ್ಪು ಕಾಗದ, ಜೇನು ಮೇಣ, ಚಾಕ್ ಪೌಡರ್, ಹತ್ತಿ, ತೆಳುವಾಗಿರುವ ಬಿಳಿ ಬಟ್ಟೆ (ಪಾಲೀಷ್ ಮಾಡಲು ಬಣ್ಣದ ಬಟ್ಟೆಗಳನ್ನು ಬಳಸುವುದಿಲ್ಲ. ಅವು ಪಾಲೀಷ್‌ನಲ್ಲಿ ಅದ್ದಿದ್ದಾಗ ಬಣ್ಣ ಬಿಟ್ಟು ಕೊಳ್ಳುವುದರಿಂದ ತೆಳುವಾದ ಬಿಳಿ ಬಟ್ಟೆಯ ಚೂರನ್ನು ಬಳಸುತ್ತಾರೆ.)

ಆಯುಧಗಳನ್ನು ಹರಿತಗೊಳಿಸಿಕೊಳ್ಳಲು ಬೆಣಚುಕಲ್ಲಿನ ನುಣುಪನ್ನು

ಬಳಸುತ್ತಾರೆ. ಆಯುಧಗಳು ಬಳಸಿ, ಬಳಸಿ ಹರಿತ ಕಳೆದುಕೊಂಡು ಮೊಂಡಾದಾಗ ಮಸೆದುಕೊಳ್ಳ ಬೇಕಾಗುತ್ತದೆ. ಆಗ ಒಂದು ಗಟ್ಟಿಯಾದ ಮರದ ತುಂಡಿನ ಮೇಲೆ ಬೆಣಚು ಕಲ್ಲಿನ ಪುಡಿ ಹಾಕಿ ಆಯುಧಗಳನ್ನು ಮಸೆದು ಹರಿತಗೊಳಿಸಿಕೊಳ್ಳುತ್ತಾರೆ.

ಬಾಚಿಯು ಬಡಗಿಯ ಬಲಗೈಯಿದ್ದಂತೆ. ಇದರಲ್ಲಿ ಕೈಬಾಚಿ, ದೊಡ್ಡ ಬಾಚಿ ಎಂಬ ಎರಡು ವಿಧಗಳಿವೆ. ದೊಡ್ಡ ಬಾಚಿಯಿಂದ ಮರವನ್ನು ಕೆತ್ತುತ್ತಾರೆ. ಸಣ್ಣ ಪುಟ್ಟ ಕೆಲಸಗಳಿಗೆ ಕೈ ಬಾಚಿಯನ್ನು ಬಳಸಿಕೊಳ್ಳುತ್ತಾರೆ.

ಗರಗಸ (ರಂಪ). ಮರದ ತುಂಡುಗಳನ್ನು ಹಾಕುವಾಗ ದೊಡ್ಡ ಗರಗಸವನ್ನು ಬಳಸಿದರೆ, ಸಣ್ಣ ಪಟ್ಟಿಗಳನ್ನು ಅಳತೆಗೆ ತಕ್ಕಂತೆ ಸಿದ್ಧಪಡಿಸಿಕೊಳ್ಳಲು ಚಿಕ್ಕ ಗರಗಸವನ್ನು ಬಳಸುತ್ತಾರೆ. ಇದನ್ನು ಕೈ ರಂಪವೆನ್ನುತ್ತಾರೆ.

ಉಳಿಯು ಒಂದು ಅಡಿ ಉದ್ದವಾಗಿದ್ದು, ಒಂದು ಅಂಗುಲ, ಎರಡು ಅಂಗುಲ ಅಗಲ ಬಾಯುಳ್ಳ ಕಬ್ಬಿಣದ ಉಪಕರಣ. ಇದರ ಮೇಲು ಭಾಗದಲ್ಲಿ ಮರದ ಹಿಡಿಯಿರುತ್ತದೆ. ಇದರಲ್ಲಿ ದೊಡ್ಡ ಉಳಿ, ಸಣ್ಣ ಉಳಿ, ಕೀಲು ಉಳಿ ಎಂಬ ಮೂರು ವಿಧಗಳಿವೆ. ಇವುಗಳ ಬಾಯಿ ತೆಳುವಾಗಿದ್ದು ಹರಿತವಾಗಿರುತ್ತದೆ. ರಂಧ್ರ ಮಾಡುವಾಗ, ಸಮತಟ್ಟಾಗಿಸಲು, ಅಳತೆಗೆ ಸರಿಯಾಗಿ ಪಟ್ಟಿಗಳ ಪರೆ ತೆಗೆಯಲು ಕೊಡತಿಯಿಂದ ಆಗಾಗ ಉಳಿಯ ತಲೆಭಾಗದಲ್ಲಿ ಹೊಡೆಯಬೇಕಾಗುತ್ತದೆ. ಆಗ ಮರದ ಹಿಡಿಯು ಒಡೆದು ಹೋಗಬಹುದೆಂಬ ಕಾರಣದಿಂದಾಗಿ ತಲೆ ಭಾಗದ ಹಿಡಿಗೆ ಕಬ್ಬಿಣದ ಬಳೆ ಹಾಕಿರುತ್ತಾರೆ.

ಸಣ್ಣ ರಂಧ್ರಗಳನ್ನು ಮಾಡುವಾಗ ಬೈರಿಗೆ ಬಳಸುತ್ತಿದ್ದರು. ಇದಕ್ಕೆ ದಪ್ಪವಾದ ದಾರವನ್ನು ಸುತ್ತಿ ಮೇಲು ಭಾಗವನ್ನು ಅಂಗೈನಿಂದ ಭದ್ರವಾಗಿ ಒಬ್ಬರು ಅದನ್ನು ಹಿಡಿದುಕೊಂಡಿರುತ್ತಾರೆ. ಮತ್ತೊಬ್ಬರು ಮೊಸರು ಕಡೆಯುವಂತೆ ಆ ದಾರವನ್ನು ಹಿಂದೆ ಮುಂದೆ ಆಡಿಸುವುದರಿಂದ ನಿಧಾನವಾಗಿ ರಂಧ್ರವಾಗುತ್ತಿರುತ್ತದೆ. ಈಗ ಇದರ ಬದಲಾಗಿ ಕಬ್ಬಿಣದ ಡ್ರಿಲ್ಲಿಂಗ್ ಬಳಸುತ್ತಾರೆ. ತಾವು ಮಾಡಬೇಕಾದ ರಂಧ್ರಕ್ಕೆ ಅನುಗುಣವಾಗಿ ತಿರುಪು ಮೊಳೆಗಳ ಗಾತ್ರವನ್ನು ಬದಲಿಸಿಕೊಳ್ಳುವ ಅನುಕೂಲವಿದರಲ್ಲಿದೆ.

ಮೂಲೆ ಮಟ್ಟವನ್ನು ಬಳಸಿ ಮರದ ಸಮತಟ್ಟನ್ನು ಕಂಡುಕೊಳ್ಳುತ್ತಾರೆ.

ಗ್ರ್ಯಾಂಪು ಇದನ್ನು ಮರದ ಪಟ್ಟಿಗಳನ್ನು ಬಿಗಿಗೊಳಿಸಲು, (ಜಾಯಿಂಟ್ ಮಾಡಲು) ಅತ್ತು ಹಾಕಲು ಬಳಸುತ್ತಾರೆ. ಹೂಸಿ - ಇದು ಕೂಡ ರಂಧ್ರ ಮಾಡುವ ಸಾಧನ ದಪ್ಪ ಮೊಳೆ, ಸಣ್ಣ ಮೊಳೆ, ಮರದ ಸಣ್ಣ ಬೆಣೆಗಳನ್ನು ಬಳಸುತ್ತಾರೆ.

ಗಾಡಿ ಉಳಿ, ನಾಟುಳಿ, ತೋಬಡ, ಗಾಡಿ ತೋಬಡ, ಜಾಕ್ ತೋಬಡ, ಕ್ವಾರತ್ರಿ, ಮಟ್ಟತ್ರಿ, ಸುತ್ತಿಗೆ, ತಿರುಪಳಿ ಮೊದಲಾದ ಸಾಧನಗಳನ್ನು ಬಡಗಿಗಳು ಬಳಸುತ್ತಾರೆ.

ತಯಾರಿಕೆಯ ವಿವಿಧ ಹಂತಗಳು ಮತ್ತು ಪ್ರಕ್ರಿಯೆಗಳು

ಹಸಿಯ ಮರ ನೆರಳಿನಲ್ಲಿಯೆ ಒಣಗಬೇಕು (ಇದನ್ನು ಮಾಸ್ಚರೈಜಿಂಗ್ ಎನ್ನುತ್ತಾರೆ) ಅದರಲ್ಲಿರುವ ಪಸಿಮೆ ಆರಬೇಕು. ಸಾಮಾನ್ಯವಾಗಿ ಮರವನ್ನು ತೊಗಟೆಯ ಸಮೇತ ಒಣಗಿಸುತ್ತಾರೆ. ಯಾಕೆಂದರೆ, ತೂಗಟೆಯಲ್ಲಿ ಎಣ್ಣೆಯ ಅಂಶ, ರಸವಿರುವುದರಿಂದ ಅದು ನಿಧಾನವಾಗಿ ಮರಕ್ಕೆ ಸೇರಿಕೊಳ್ಳುತ್ತದೆ. ಇದರಿಂದ ಮರಕ್ಕೆ ಬಲ ಬರುತ್ತದೆ. ಅಲ್ಲದೆ ತೊಗಟೆ ತೆಗೆದು ಮರವನ್ನು ಒಣಗಿಸಿದರೆ ಅದು ಬೀಲು (ಏರ್‌ಕ್ರಾಕ್) ಬರುತ್ತದೆ. ಹೀಗೆ ೪-೫ ತಿಂಗಳು ಕಾಲ ಮರ ಉಂಡೆಯಾಗಿ (ತೊಗಟೆ ಸಮೇತ) ಒಣಗಿದರೆ ವಸ್ತುಗಳನ್ನು ಸುಲಭವಾಗಿ ಸಿದ್ಧಪಡಿಸಬಹುದು. ಹಸಿ ಮರದಲ್ಲಿ ವಸ್ತುಗಳನ್ನು ಸಿದ್ಧಪಡಿಸಿದರೆ ಕುಗ್ಗು (ಸಿಂಕ್)ತ್ತವೆ. ಇಲ್ಲವೆ ಡೊಂಕಾಗುವ (ಬೆಂಡ್) ಸಾಧ್ಯತೆ ಹೆಚ್ಚು. ಕೆಲವೊಮ್ಮೆ ಹಸಿಮರಕ್ಕೆ ಗೆದ್ದಲು ಹತ್ತುವ ಸಾಧ್ಯತೆಗಳೂ ಉಂಟು.

ಹೀಗೆ ಒಣಗಿದ ಮರಗಳನ್ನು ತೊಗಟೆ ತೆಗೆದು, ಗುಂಡಿ ಕೊಯ್ಲಿನಲ್ಲಿ ತುಂಡು ಹಾಕುತ್ತಿದ್ದರು. ಮರದ ಒಂದು ಭಾಗವನ್ನು ಬಾಚಿಯಿಂದ ಒಂದು ಮಟ್ಟಕ್ಕೆ ಕೆತ್ತುತ್ತಾರೆ. ಚಿಕ್ಕ ಬಾವಿ ತೆಗೆದು ಅಂದರೆ ಗುಂಡಿ ತೆಗೆದು ಅದರ ಮೇಲೆ ಅಡ್ಡಡ್ಡವಾಗಿ ಮರವನ್ನು ಮಟ್ಟಸವಾದ ಭಾಗವು ತಳಭಾಗಕ್ಕೆ ಬರುವಂತೆ ಹಾಕಿಕೊಳ್ಳುತ್ತಾರೆ. ಹೀಗೆ ಮಾಡುವುದರಿಂದ ಮರ ಕೊಯ್ಯುವಾಗ ಅತ್ತಿತ್ತ ಅಲುಗಾಡುವುದಿಲ್ಲ. ಗುಂಡಿಯ ಮೇಲೆ ಒಬ್ಬರು ಕುಂತು ಇಲ್ಲವೆ ನಿಂತು ಹಾಗೆಯೆ ಗುಂಡಿಯ ಒಳಗೆ ಒಬ್ಬರು ಕುಂತು ಇಲ್ಲವೆ ನಿಂತು ರಂಪದಿಂದ ಮರವನ್ನು ಕೊಯುತ್ತಿರುತ್ತಾರೆ. ಮರವು ಕುಯ್ಯುತ್ತಾ ಹೋದಂತೆ ರಂಪವನ್ನು ಬಿಗಿಯಾಗಿ ಹಿಡಿಯ ತೊಡಗುತ್ತದೆ. ಇದರಿಂದ ರಂಪವು ಸರಾಗವಾಗಿ ಮೇಲೆ

ಕೆಳಗೆ ಆಡುವುದಿಲ್ಲ. ಆದ್ದರಿದ ಮರ ಕುಯ್ದಿರುವ ಭಾಗದಲ್ಲಿ ಬೆಣೆ ಅಂದರೆ ಮರದ ದಪ್ಪವಾದ ಚಕ್ಕೆಯನ್ನು ಸಿಗಿಸಬೇಕು. ಹೀಗೆ ಮಾಡುವುದರಿಂದ ಮರವು ಕೂಡಿಕೊಳ್ಳುವುದಿಲ್ಲ. ಅದರಿಂದ ಮರ ಕೊಯ್ಯುವುದು ಸುಲಭವಾಗುತ್ತದೆ. ರಂಪ ಸಲೀಸಾಗಿ ಮೇಲೆ ಕೆಳಗೆ ಎಳೆಯಲು ಅನುಕೂಲವಾಗುತ್ತದೆ.

ಇದು ಹಳೆಯ ವಿಧಾನ. ಈಗ ಮರದ ದಿಮ್ಮಿಗಳನ್ನು ಕೊಯ್ಯುವ 'ಸಾಮಿಲ್ಲುಗಳು ಬಂದಿರುವುದರಿಂದ ತುಂಡು ಹಾಕುವ ಕಾರ್ಯ ಸುಲಭವಾಗಿದೆ. ಆದರೆ ಕೆಲವು ಗ್ರಾಮಾಂತರ ಪ್ರದೇಶಗಳಲ್ಲಿ ಈಗಲೂ ಗುಂಡಿ ಕೊಯ್ಲು ಕಂಡು ಬರುತ್ತದೆ. ಅದೇ ಸಾಮಿಲ್‌ನಲ್ಲಿ ಮರದ ತುಂಡುಗಳನ್ನು ಕೂಡ ಕುಯಿಸಿಕೊಳ ಬಹುದು. ಹೀಗೆ ಕೊಯಿಸಿದ ಪಟ್ಟಿಗಳಲ್ಲಿ ಇನ್ನೂ ಪಸಿಮೆ ಇದ್ದರೆ, ಅವುಗಳನ್ನು ಒಂದರ ಮೇಲೆ ಒಂದರಂತೆ ಮಧ್ಯೆ ಮಧ್ಯೆ ಜಾಗ ಕೊಟ್ಟು ಜೋಡಿಸುತ್ತಾರೆ. ಹೀಗೆ ಜೋಡಿಸುವುದರಿಂದ ಸುಲಭವಾಗಿ ಮರದ ಮೇಲೆ ಗಾಳಿಯಾಡಲು ಅವಕಾಶವಾಗುತ್ತದೆ. ಇದನ್ನು ಕೂಡ ನೆರಳಿನಲ್ಲಿಯೆ ಒಣಗಿಸುತ್ತಾರೆ. ಇಲ್ಲದಿದ್ದರೆ ಪಟ್ಟಿಗಳು ಬಿರುಕುವ (ಸಿಡಿಯುವ) ಸಾಧ್ಯತೆಗಳಿರುತ್ತದೆ.

ಹೀಗೆ ಸಿದ್ಧವಾದ ಪಟ್ಟಿಗಳ ಮೇಲು ಭಾಗವನ್ನು ತೋಬಡ ಹೊಡೆದು ಸಮಗೊಳಿಸಿ ಕೊಳ್ಳುತ್ತಾರೆ. ಇದರಿದ ಪಟ್ಟಿಯ ಹೊರಮೈ ನುಣುಪಾಗಿ ಕಂಡು ಬರುತ್ತದೆ. ಅಚಾತುರ್ಯದಿಂದ ಪಟ್ಟಿ ಒಣಗದೆ ಹಸಿಯಿದ್ದಲ್ಲಿ ತೋಬಡ ಹೊಡೆಯುವಾಗ ಮರದ ಸಿಪ್ಪೆಯು ಉದ್ದುದ್ದವಾಗಿಯೆ ಮೇಲೆ ಬರುತ್ತದೆ. ಚೆನ್ನಾಗಿ ಒಣಗಿದ ಮರವನ್ನು ತೋಬಡ ಹೊಡೆಯುವಾಗ ಮರದ ಸಿಪ್ಪೆ ಪುಡಿ ಪುಡಿಯಾಗಿ ಬರುತ್ತದೆ. ಇದರಿಂದಲೂ ಮರ ಚೆನ್ನಾಗಿ ಒಣಗಿದೆಯೆ ಇಲ್ಲವೆ ಎನ್ನುವುದನ್ನು ತಿಳಿಯಬಹುದು.

ಈಗ ಪ್ಲೇನಿಂಗ್ ಮೆಷಿನ್ ಬಂದಿರುವುದರಿದ ಬಡಗಿಗಳು ತೋಬಡ ಹೊಡೆಯುವ ಶ್ರಮವನ್ನು ವಹಿಸುವುದಿಲ್ಲ. ಹಿಂದೆ ಇದೆಲ್ಲವನ್ನೂ ಕೈಯಿಂದಲೆ ಮಾಡಬೇಕಾಗಿತ್ತು. ಈಗಲೂ ಹಳ್ಳಿಗಳಲ್ಲಿರುವ ಬಡಗಿಗಳು ಇದೇ ವಿಧಾನವನ್ನು ಅನುಸರಿಸುತ್ತಾರೆ.

ಮರದ ಪಟ್ಟಿಗಳನ್ನು ಸಿದ್ಧಪಡಿಸುವ ವಸ್ತುಗಳಿಗೆ ಅನುಗುಣವಾಗಿ ಇಂಚುಪಟ್ಟಿಯಿಂದ ಅಳತೆ ಮಾಡಿ ಪೆನ್ಸಿಲ್‌ನಿಂದ ಮಾರ್ಕ್ (ಗುರುತು)

ಮಾಡಿಕೊಂಡು ಅಳತೆಯ ಮೇರೆಗೆ, ಆಕಾರಕ್ಕೆ ತಕ್ಕಂತೆ ಕೈ ರಂಪ ತೆಗೆದುಕೊಂಡು ತುಂಡು ಹಾಕಿಕೊಳ್ಳುತ್ತಾರೆ. ತದನಂತರ ಗಾಳಿ ಉಳಿ, ಸಾಟುಳಿ, ಮಲಬಾರ್ ಉಳಿಗಳಂಥ ಉಪಕರಣಗಳಿಂದ ಮರದ ಪಟ್ಟಿಯ ಮೇಲೆ ನಿಗದಿತ ಭಾಗದಲ್ಲಿ ಹೆಜ್ಜೆ (ರಂಧ್ರ) ಹಾಕಿಕೊಂಡು, ಆ ಮರದ ಪಟ್ಟಿಗೆ ಹೆಜ್ಜೆ ಹಾಕಿರುವ ಇನ್ನೊಂದು ಪಟ್ಟಿಯನ್ನು ಸೇರಿಸುವರು. ಹೆಜ್ಜೆ ಮಾಡಿದ ಜಾಗದಲ್ಲಿ ಬಿದಿರಿನ ಮೊಳೆ (ಮೊಳೆಯಂತೆ ಕಟ್ಟಿಗೆಯಲ್ಲಿ ಮಾಡಿರುವುದು) ಸೇರಿಸಿ ಕಾಯಿಸಿದ ಮರ ವಜ್ರವನ್ನು ಹಾಕಿ ಬಿಗಿ ಮಾಡಿ ಭದ್ರಗೊಳಿಸುವರು. ಉದ್ದವಾದ ಮರದ ಮೊಳೆಯ ಹೆಚ್ಚಾದ, ಹೊರತಾದ ಭಾಗವನ್ನು ಕತ್ತರಿಸಿ ಹಾಕುತ್ತಾರೆ. ಇನ್ನೊಂದು ವಿಧಾನವೆಂದರೆ ಹೆಜ್ಜೆ ಹಾಕಿದ ಭಾಗಕ್ಕೆ ತಂತಿ ಮೊಳೆ ಬಡಿದು, ಪೆವಿಕಾಲ್ ಹಾಕಿ ಬಿಗಿ ಮಾಡಿ ಭದ್ರಗೊಳಿಸುವುದು. ಇದು ಇತ್ತೀಚೆಗೆ ಬಳಕೆಗೆ ಬಂದಿರುವ ವಿಧಾನ.

ತದನಂತರ ಆ ವಸ್ತುವಿನ ಮೇಲು ಮೈಯನ್ನು ತೆಳ್ಳಗಿನ ಬಾಯುಳ್ಳ ಬ್ಲೇಡ್ (ಇದು ನಾವು ಬಳಸುವ ಬ್ಲೇಡಲ್ಲ. ಬಡಗಿಗಳು ಬಳಸುವ ವಿಶೇಷವಾದ ರೀತಿಯ ಬ್ಲೇಡ್) ನಿಂದ ಜೀವುವುದು. ಸ್ಕ್ರೇಪರ್ ಮಾಡಿ ಅಂದರೆ ಜೀವಿ ಆದರ ಮೇಲಿರುವ ಉಬ್ಬು ತಗ್ಗುಗಳನ್ನು ನಯಮಾಡಿ ಸಮತಟ್ಟು ಮಾಡಬೇಕು. ತರುವಾಯ ಉಪ್ಪು ಕಾಗದ ಬಳಸಿ ಉಜ್ಜಿ ನುಣುಪು ಮಾಡಿಕೊಳ್ಳುತ್ತಾರೆ.

ಮರ ಹುಳು ಕೊರೆದು ರಂಧ್ರವಾಗಿದ್ದರೆ, ವಸ್ತು ತಯಾರಿಸುವಾಗ ಅಚಾತುರ್ಯದಿಂದ ಆಯುಧ ತಗುಲಿ ತುಸು ಮುಕ್ಕಾಗಿದ್ದರೆ, ಸಣ್ಣ ಪುಟ್ಟ ಕುಟ್ಟಾಗಿದ್ದರೆ ಅದನ್ನು ತೆಗೆದು ಚಾಕ್ ಪೌಡರನ್ನು ಮರ ವಜ್ರದಲ್ಲಿ ಹದವಾಗಿ ಬೆರೆಸಿ ಅದನ್ನು ತುಂಬುತ್ತಾರೆ (ಪ್ಯಾಕ್ ಮಾಡುತ್ತಾರೆ) ಇದು ಹಳೆಯ ವಿಧಾನ. ಈಗ ಫೆವಿಕಾಲ್ ಮತ್ತು ಚಾಕ್ ಪೌಡರನ್ನು ಹದವಾಗಿ ಮಿಶ್ರಣ ಮಾಡಿ ತುಂಬುತ್ತಾರೆ. ಅದು ಕಾಣದಂತೆ ಪಾಲಿಷ್ ಹಚ್ಚಿ, ಬಣ್ಣ ಬಳಿಯುತ್ತಾರೆ.

ಮರದ ಚಕ್ಕೆಯೊಂದನ್ನು ನೀರಿಗೆ ಹಾಕಿದಾಗ ಸ್ವಲ್ಪ ಸಮಯದ ನಂತರ ಅದು ಹರಿಷಿಣದ ಬಣ್ಣಕ್ಕೆ ಬಂದರೆ, ಆ ಕಟ್ಟಿಗೆಯು ಹೊನ್ನೆ ಮರದ್ದು ಎಂದು ಸುಲಭವಾಗಿ ಗುರುತಿಸಬಹುದು. ಹೀಗೆಯೇ ಬೇರೆ ಬೇರೆ ಮರಗಳನ್ನು ಗುರುತಿಸಲು ಬಡಗಿಗಳು ತಮ್ಮದೇ ಆದ ವಿಧಾನಗಳನ್ನು ಕಂಡುಕೊಂಡಿರುತ್ತಾರೆ.

ಹಿಂದೆ ಮನೆಗಳನ್ನು ನಿರ್ಮಿಸುವಾಗ ತೊಲೆ, ಕಂಬಗಳನ್ನು ಬಳಸುತ್ತಿದ್ದರು.

ಅಂದು ತೊಲೆ, ಕಂಬಗಳ ಮೇಲೆ ಕುಸುರಿ ಕೆಲಸ ಮಾಡಿ ವಿವಿಧ ವಿನ್ಯಾಸಗಳನ್ನು ಕೆತ್ತಿ ಅಲಂಕಾರಗೊಳಿಸುತ್ತಿದ್ದರು. ಈಗಲೂ ಕೆಲವು ಹಳೆಯ ಮನೆಗಳಲ್ಲಿ ಇಂಥ ಕಂಬ, ತೊಲೆಗಳನ್ನು ಕಾಣಬಹುದು. ಅಂತೆಯೇ ಮನೆಯ ಒಳಭಾಗದಲ್ಲಿ ಹಲಗೆಗಳನ್ನು ಜೋಡಿಸಿ ಅಟ್ಟಗಳನ್ನು ನಿರ್ಮಿಸುತ್ತಿದ್ದರು. ಅದನ್ನು ಏರಲು ಹಲಗೆಗಳಿಂದ ಅಟ್ಟದ ಮೆಟ್ಟಿಲುಗಳನ್ನು ಕೂಡ ಮಾಡುತ್ತಿದ್ದರು. ಕಾಂಕ್ರೀಟ್ ಗೃಹ ನಿರ್ಮಿಸ ತೊಡಗಿದ ನಂತರ ಅಂಥ ಕಲೆಯೆ ಕಣ್ಮರೆಯಾಗುತ್ತಿದೆ. ಆದರೂ ಮುಂಬಾಗಿಲು, ಒಳಬಾಗಿಲುಗಳ ಮೇಲೆ ವಿವಿಧ ರೀತಿಯ ವಿನ್ಯಾಸಗಳನ್ನು ಕೆತ್ತಿ ಮೆರುಗುಗೊಳಿಸಿರುವುದನ್ನು ಇಂದಿಗೂ ಕಾಣಬಹುದು.

ಬಾಗಿಲುಗಳನ್ನು ಮಾಡುವಾಗ ವಿವಿಧ ವಿನ್ಯಾಸಗಳನ್ನು ಬಳಸುತ್ತಾರೆ. ಮನೆಯ ಮುಂಬಾಗಿಲು, ಒಳಬಾಗಿಲು, ದೇವರ ಮನೆಯ ಬಾಗಿಲು, ದೇವಸ್ಥಾನದ ಬಾಗಿಲುಗಳನ್ನು ಬೇರೆ ಬೇರೆ ರೀತಿಯಲ್ಲಿಯೆ ನಿರ್ಮಿಸುತ್ತಾರೆ. ದೇವರ ಮನೆಯ ಬಾಗಿಲುಗಳಿಗೆ ಕಿಂಡಿ ಕಿಂಡಿ ಮಾಡಿರುತ್ತಾರೆ. ಬಾಗಿಲು ಮುಚ್ಚಿದ್ದರೂ ಆ ಕಿಂಡಿಗಳಿಂದ ಸುಲಭವಾಗಿ ದೇವರ ದರ್ಶನ ಮಾಡಬಹುದು.

ಇಂದಿಗೂ ಮಂಚ, ದಿವಾನ್ ಕಾಟ್, ಊಟದ ಮೇಜು (ಡೈನಿಂಗ್ ಟೇಬಲ್), ಕುರ್ಚಿಗೆ ಬಳಸುವ ಕಾಲುಗಳನ್ನು ಕಲಾತ್ಮಕವಾಗಿ ಕೆತ್ತಿ ಮಾಡಿರುತ್ತಾರೆ. ಮೊದಲಿಗೆ ಇದನ್ನು ಕೈಯಿಂದಲೇ ಬಡಗಿಗಳು ಮಾಡಬೇಕಾಗಿತ್ತು. ಈಗ ಅದನ್ನು ಲೇತ್ ಟರ್ನಿಂಗ್‌ನಿಂದ ಮಾಡುತ್ತಾರೆ.

ಹಿಂದೆ ವಸ್ತುಗಳನ್ನು ತಯಾರು ಮಾಡುವಾಗ ಬಡಗಿಗಳು ಮರದ ಬೆಳವಣಿಗೆಯನ್ನು ಅನುಸರಿಸಿ ಮರದ ಮೇಲು ಭಾಗವನ್ನು ಮೇಲು ಭಾಗಕ್ಕೂ, ಕೆಳಭಾಗವನ್ನು ಕೆಳಭಾಗಕ್ಕೂ ಬಳಸುತ್ತಿದ್ದರು. ಈಗ ಕಾಲ ಬದಲಾಗಿರುವುದರಿಂದ ಅದಕ್ಕೆ ಅಷ್ಟಾಗಿ ಗಮನ ಕೊಡುವುದಿಲ್ಲವೆಂದು ವಕ್ತೃವಾದ ಬಡಗಿ ಸಣ್ಣಪ್ಪ ತಿಳಿಸಿದರು.

ಫಾರ್ಮಿಕ ಶೀಟ್ ಬಂದ ನಂತರ ಪೀಠೋಪಕರಣಗಳನ್ನು ವಿವಿಧ ಬಣ್ಣಗಳ, ಡಿಸೈನ್‌ಗಳ ಶೀಟನ್ನು ಬಳಸಿ ಸುಂದರಗೊಳಿಸುತ್ತಿದ್ದಾರೆ.

ವ್ಯಾಪಾರೀಕರಣ ಮನೋಭಾವದವರು ಕಚ್ಚಾ ಮರಗಳಿಗೆ, ಕಡಿಮೆ ಬೆಲೆಯ ಮರದಿಂದ ತಯಾರು ಮಾಡಿದ ಪೀಠೋಪಕರಣಗಳಿಗೆ ಬೆಲೆ

ಬಾಳುವ ಮರಗಳ ಬಣ್ಣದ ಪಾಲೀಶ್ ಮಾಡಿ "ಇದು ಅಂಥ ಮರದ್ದು ಇಂಥ ಮರದ್ದು" ಎಂದು ಹೇಳಿ ವಂಚಿಸುತ್ತಿರುವರೆಂದು ಸ್ವತಃ ಬಡಗಿಯೊಬ್ಬರು ವಿಷಾದ ವ್ಯಕ್ತಪಡಿಸಿದರು.

ಸಾಮಾನ್ಯವಾಗಿ ಬಾಗಿಲನ್ನು ಏಕವಾದ ಒಂದೇ ಹಲಗೆಯಿಂದ ಮಾಡುವುದಿಲ್ಲ. ಹಾಗೆ ಏಕ ಹಲಗೆಯಿಂದ ಮಾಡಿದ್ದೆ ಆದರೆ ಅದು ಡೊಂಕು (ಬೆಂಡ್) ಬರುವ ಸಾಧ್ಯತೆಯಿದೆ ಅಲ್ಲದೆ ಅಷ್ಟೊಂದು ಬಲವೂ ಇರುವುದಿಲ್ಲ. ಆದ್ದರಿಂದ ೧ ಅಡಿ ಅಥವಾ ೧ ೧/೨ ಅಡಿ ಹಲಗೆಗಳ ಪಟ್ಟಿಯನ್ನು ತಯಾರು ಮಾಡಿಕೊಂಡು ಬಾಗಿಲ ಫ್ರೇಮ್‌ನಲ್ಲಿಟ್ಟು ಬಿಗಿಗೊಳಿಸುತ್ತಾರೆ. ಇದರಿಂದ ಬಾಗಿಲಿಗೆ ಬಲ ಮತ್ತು ಸುರಕ್ಷತೆಯು ಬರುತ್ತದೆ.

ಹೆಚ್ಚಾಗಿ ಪುರುಷರೆ ಈ ಕಸುಬನ್ನು ನಿರ್ವಹಿಸುತ್ತಾರೆ. ಹೆಂಗಸರು ಈ ಕಸುಬನ್ನು ಮಾಡುವುದು ಕಂಡು ಬರುವುದಿಲ್ಲ. ಆದರೆ ಮಕ್ಕಳು ಉಪ್ಪು ಕಾಗದದಿಂದ ಉಜ್ಜಲು, ಮರ ವಜ್ರವನ್ನು ಕಾಯಿಸಲು, ಸಣ್ಣಪುಟ್ಟ ಸಾಧನಗಳನ್ನು ತಂದು ಕೊಡುವುದರಲ್ಲಿ ನೆರವಾಗುತ್ತಾರೆ.

ಈ ಕಸುಬನ್ನು ನೋಡುತ್ತಾ ಕಲಿತುಕೊಳ್ಳಬೇಕು, ಮಾಡುತ್ತ ಕಲಿಯಬೇಕು. ನಿರುಪಯುಕ್ತ (ವೇಸ್ಟಾದ) ಮರದ ಪಟ್ಟಿಗಳಿಗೆ ತೋಬಡ ಹೊಡೆಯುವುದು, ರಂಧ್ರ ಹಾಕುವುದು, ಕೈ ರಂಪದಿಂದ ತುಂಡು ತುಂಡು ಮಾಡುವುದು, ಬೆಣೆಗಳನ್ನು ಕೆತ್ತಿ ಕೊಡುವುದು, ಭೈರಿಗೆ ಹಿಡಿಯುವುದು ಮೊದಲಾದ ಕಾರ್ಯಗಳನ್ನು ಪ್ರಾಯೋಗಿಕವಾಗಿ ನಿರ್ವಹಿಸುತ್ತಾ ತರಬೇತಿ ಪಡೆಯುತ್ತಾರೆ. ಈ ಸಂದರ್ಭಗಳಲ್ಲಿ ಹಿರಿಯ ಕಸುಬುದಾರರು ಮಾರ್ಗದರ್ಶನ ಮಾಡುತ್ತಿರುತ್ತಾರೆ.

೦

ಉತ್ತರ ಕರ್ನಾಟಕದ ಬಡಿಗ ವೃತ್ತಿ

ಡಾ. ದಸ್ತಗೀರ ಅಲ್ಲೀಭಾಯಿ

ಭಾರತ ಹಲವು ಮತ ಧರ್ಮಗಳ ನೆಲೆವೀಡು. ಇಲ್ಲಿರುವಷ್ಟು ಧರ್ಮಗಳು ಜಗತ್ತಿನ ಮತ್ತಾವ ದೇಶದಲ್ಲಿಯೂ ಇಲ್ಲ. ಆದರೆ ವಿವಿಧತೆಯಲ್ಲಿ ಏಕತೆಯಿರುವುದು ಇವುಗಳ ವೈಶಿಷ್ಟ್ಯ. ಸೂಫಿ ಸಂತರು, ಶಿವಶರಣರು, ಶಿವದಾಸರು ಹರಿದಾಸರು ಭಾವೈಕ್ಯದ ಬೀಜ ಮಂತ್ರ ಊರಿ ಭಾರತವನ್ನು ಜಾತ್ಯಾತೀತ ರಾಷ್ಟ್ರವನ್ನಾಗಿ ರೂಪಿಸಿ ಜಗತ್ತಿನಲ್ಲಿಯೇ ಪ್ರತಿಷ್ಠೆಯಿಂದ ಮೆರೆಯುವಂತೆ ಮಾಡಿದ್ದಾರೆ.

ಇತ್ತೀಚೆಗೆ ಕೆಲವು ರಾಜಕೀಯ ವ್ಯಕ್ತಿಗಳು ತಮ್ಮ ಸ್ವಾರ್ಥಸಾಧನೆಗಾಗಿ ಅಧಿಕಾರದ ಲಾಲಸೆಗಾಗಿ, ಕೋಮು ಭಾವನೆ ಕೆರಳಿಸಿ ಮತೀಯ ದಳ್ಳುರಿ ಹಬ್ಬಿಸಿ ಭಾರತವನ್ನು ಕೊಲೆ-ಸುಲಿಗೆ, ಅನ್ಯಾಯ ಅತ್ಯಾಚಾರಗಳ ಪಾಪ ಕೂಪಗಳ ಬೀಡಾಗಿಸುತ್ತಿರುವುದು ಕಂಡು ಬರುತ್ತಿದೆ.

ಆದರೆ ಗ್ರಾಮಗಳಲ್ಲಿ ಈಗಲೂ ನಡೆಯುವ ಹಬ್ಬ-ಹುಣ್ಣಿಮೆ, ಜಾತ್ರೆ-ಉರುಸುಗಳಲ್ಲಿ ಮತೀಯ ಸಾಮರಸ್ಯದ ಎಳೆಗಳು ಗೋಚರಿಸುತ್ತವೆ. ಅಲ್ಲಿ ಜೀವನ ನಡೆಸುವ ಎಲ್ಲ ಜಾತಿ-ಜನಾಂಗಗಳು ಒಂದೇ ಕುಟುಂಬದ ಸದಸ್ಯರಂತೆ ಕಷ್ಟ-ಸುಖಗಳಲ್ಲಿ ಭಾಗಿಯಾಗಿ ನಡೆದುಕೊಳ್ಳುತ್ತಿರುವುದು ಸಂತಸದ ವಿಷಯ.

ಆಯ-ಆಯಗಾರರ ಪ್ರಾಚೀನತೆ

ಭಾರತ ಹಳ್ಳಿಗಳ ದೇಶ ಮತ್ತು ಕೃಷಿ ಪ್ರಧಾನವಾದ ದೇಶ. ಆದ್ದರಿಂದ ಇಲ್ಲಿ ಭೂಮಿಗೆ ಹೆಚ್ಚು ಮಹತ್ವ. ಈ ಭೂಮಿಯ ಒಡೆಯನಾದ ರೈತನನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ವೃತ್ತಿಗಳು ರೂಪುಗೊಂಡಿರುತ್ತವೆ. ರೈತ ಎಲ್ಲರಿಗೂ ಬೇಕಾದ ಆಹಾರ ಧಾನ್ಯಗಳನ್ನು ಉತ್ಪಾದಿಸಿದರೆ ಈ ರೈತ ಕುಟುಂಬಕ್ಕೆ ಬೇಕಾದ ಸರಕುಗಳ ಸೇವೆಯನ್ನು ಉಳಿದ ಕುಟುಂಬಗಳು ಸಲ್ಲಿಸುತ್ತವೆ. ಇವರು ಸಲ್ಲಿಸುವ ಸೇವೆಗೆ ಸಂಪ್ರದಾಯದಂತೆ ರೈತ ಕುಟುಂಬ ತಾವು

[illegible]

ಬೆಳೆದುದರಲ್ಲಿ ಒಂದು ಪಾಲನ್ನು ಸಂಭಾವನೆಯಾಗಿ ಕೊಡುತ್ತದೆ. ಇದಕ್ಕೆ 'ಆಯ'ವೆಂದು ಹೆಸರು[೧].

ಎಲ್ಲ ಆಯಗಾರರಿಗೂ ವರ್ಷಕ್ಕೆ ಇಷ್ಟು ಎಂದು ನಿಗದಿ ಮಾಡಿದ ಪ್ರಕಾರ ಸುಗ್ಗಿಯಲ್ಲಿ ರೈತರು, ತಮ್ಮ ಕಣದಲ್ಲಿಯೇ ರಾಶಿಯಿಂದ ಕಾಳುಕಡಿಯನ್ನು ಸಲ್ಲಿಸುವುದು ವಾಡಿಕೆ. ಆಯ ಪದ್ಧತಿಯು ಕರ್ನಾಟಕದ ವಿವಿಧ ಭಾಗಗಳಲ್ಲಿ ಬೇರೆ ಬೇರೆ ಹೆಸರುಗಳಿಂದ ರೂಡಿಯಲ್ಲಿದ್ದುದು ಕಂಡು ಬರುತ್ತವೆ.

ಆಯ ಪದ್ಧತಿಯು 'ಬಲೂತಾ' ಎಂಬ ಹೆಸರಿನಿಂದ ಮಹಾರಾಷ್ಟ್ರದಲ್ಲಿ ಸಾರ್ವತ್ರಿಕವಾಗಿ ಕಂಡು ಬಂದಿದೆ. ಬಲೂತಾ ಎಂದರೆ ಗ್ರಾಮೀಣ ಕೈಕಸುಬಿನ ವರಿಗೆ ಹಾಗೂ ಗ್ರಾಮದ ಊಳಿಗದವರಿಗೆ ಕೊಡುವ ಧಾನ್ಯ ರೂಪದ ಸಂಭಾವನೆ ಎಂದರ್ಥ. ಮಹಾರಾಷ್ಟ್ರ ಸಂಪ್ರದಾಯದಂತೆ ಆಯಗಾರರು ಹನ್ನೆರಡು ಸಂಖ್ಯೆಯಲ್ಲಿದ್ದಾರೆ. ಅವರ ಸಂಖ್ಯೆಯು ಸ್ಥಳ ಕಾಲ ಮತ್ತು ಸನ್ನೀವೇಶಗಳಿಗೆ ಅನುಗುಣವಾಗಿ ಹೆಚ್ಚು ಕಡಿಮೆಯಾಗಬಹುದು. ದೇಶದ ಇತರ ಭಾಗದಲ್ಲೂ ಗ್ರಾಮದ ಸೇವಕರನ್ನು ಮನ್ನಿಸಿ ಧಾನ್ಯ ರೂಪದ ಸಂಭಾವನೆ ಕೊಡುವ ಪದ್ಧತಿಯಿದೆ. ಉತ್ತರ ಪ್ರದೇಶ, ರಾಜಸ್ಥಾನ, ಪಂಜಾಬ, ಗುಜರಾತ, ಆಂಧ್ರಪ್ರದೇಶ, ತಮಿಳುನಾಡು, ಕೇರಳ - ಮುಂತಾದ ಭಾಗಗಳಲ್ಲಿ ವ್ಯಾಪಕವಾಗಿ ಬಳಕೆಯಲ್ಲಿದೆ. ಉತ್ತರ ಭಾರತದ ಹಲವೆಡೆ ಇದನ್ನು 'ಜಜಮಾನಿ' ಎಂದು ಕರೆಯುತ್ತಾರೆ. ಒಟ್ಟಿನಲ್ಲಿ ಗ್ರಾಮೀಣ ಶ್ರಮ ಹಾಗೂ ಶ್ರಮಕ್ಕೆ ಕೊಡುವ ಸಂಭಾವನೆಯು ಆಯ ಅಥವಾ ಜಜಮಾನಿಯ ರೂಪದಲ್ಲಿ ಬಳಕೆಯಲ್ಲಿದೆ.[೨]

ಆಯ ಪದ್ಧತಿಯು ಜಜಮಾನಿ, ಬಲೂತಾ ಅಥವಾ ಬೇರೆ ಹೆಸರಿನಿಂದ ಗ್ರಾಮೀಣ ಭಾರತದಲ್ಲಿ ಪ್ರಾಚೀನ ಕಾಲದಿಂದಲೂ ಇದ್ದಿರಬಹುದೆಂದು ಊಹಿಸಲಾಗಿದೆ. ಕರ್ನಾಟಕದ ಮಟ್ಟಿಗೆ ಹೇಳುವುದಾದರೆ ಕ್ರಿ.ಶ. ೧೧ನೆಯ

---

೧ ಪ್ರೋ: ಎಚ್.ವಿ. ನಾಗೇಶ - ಆಯ - ಆಯಗಾರರು (ಜಾ.ಸಾ.ದರ್ಶನ ಭಾಗ-೭ ಕ.ವಿ.ವಿ.ಧಾ-೧೯೮೨) ಪು: ೪೮

೨ ಪ್ರೋ: ಎಚ್.ವಿ. ನಾಗೇಶ - ಆಯ - ಆಯಗಾರರು (ಜಾ.ಸಾ.ದ-೭ ಕ.ವಿ.ವಿ.ಧಾ-೧೯೮೨) ಪು: ೪೬

ಶತಮಾನದಿಂದೀಚೆಗೆ ಶಾಸನಗಳಲ್ಲಿ ಆಯಗಾರರ ಬಗ್ಗೆ ಹಲವು ಹತ್ತು ಪ್ರಸ್ತಾಪಗಳಿವೆ. ಚಾಲುಕ್ಯ, ಹೊಯ್ಸಳ, ಯಾದವ ಕಾಲದ ಶಾಸನಗಳಲ್ಲಿ ಗವುಂಡ, ಶಾನುಭೋಗ, ತಳಾರ, ಅಂಬಿಗ, ಬಾರಿಕಾರ, ತೋಟಿಗ, ಕಲ್ಲು ಕುಟಿಗ, ಕಮ್ಮಾರ, ಅಕ್ಕಸಾಲಿಗ, ಬಡಿಗ, ಜ್ಯೋತಿಷಿಗಳ ಹೆಸರಿವೆ.

ಆಯಗಾರರಿಗೆ ಆಯ ಕೊಡುವುದರ ಜೊತೆಗೆ ವಿವಿಧ ರೀತಿಯ ಕಾಣಿಕೆಗಳನ್ನು ಸಂಭಾವನೆಗಳನ್ನು ಕೊಡುವುದಿದೆ. ಇವುಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಕಾರಣಗಳಿಗಾಗಿ ವಿವಿಧ ರೂಪದಲ್ಲಿ ಕೊಡುತ್ತಾರೆ. ಧಾನ್ಯ, ವಸ್ತು ಅಥವಾ ಹಣದ ರೂಪದಲ್ಲಿ ಕೊಟ್ಟರೂ ಇವುಗಳನ್ನು ಆಯ ಎಂದು ಲೆಕ್ಕ ಹಾಕುವುದಿಲ್ಲ. ಇಂಥ ಕಾಣಿಕೆಗಳು ಊರಿಂದೂರಿಗೆ ಪ್ರದೇಶದಿಂದ ಪ್ರದೇಶಕ್ಕೆ ಭಿನ್ನವಾಗಿದ್ದು ಅವುಗಳ ಹೆಸರು ಉದ್ದೇಶ ರೂಪಗಳು ವೈವಿಧ್ಯಮಯವಾಗಿರುತ್ತವೆ. ಆಯದ ಸಂಬಂಧಗಳು ಕೇವಲ ವ್ಯಾಪಾರಿ ಹಾಗೂ ಕರಾರುವಾಕ್ ಸಂಬಂಧಗಳಲ್ಲ. ಅವು ತಲೆ ತಲಾಂತರದಿದ ಬಂದಿರುತ್ತವೆ. ಕುಟುಂಬಗಳನ್ನು ಪರಸ್ಪರ ಸುಖದುಃಖಗಳಲ್ಲಿ, ಧರ್ಮ-ಕರ್ಮಗಳಲ್ಲಿ ಭಾಗಿಯಾಗಿಸುತ್ತವೆ.

ಗ್ರಾಮ ಸಂಸ್ಕೃತಿಯ ಅಂಗವಾಗಿ ಬೆಳೆದು ಬಂದ ಆಯಗಾರರೆಂದು ಪ್ರಸಿದ್ಧರಾಗಿರುವ ಗ್ರಾಮೀಣ ಕಸಬುದಾರರಲ್ಲಿ ಬಡಿಗೇರರು ಮುಖ್ಯರು. ವಿಶ್ವಕರ್ಮ ವಂಶದವರಾದ ಇವರೊಂದಿಗೆ ಕಮ್ಮಾರ, ಕಂಚುಗಾರ, ಶಿಲ್ಪಿ, ಅಕ್ಕಸಾಲಿಗರು ಬರುತ್ತಾರೆ. ಇವರೆಲ್ಲರೂ ಶಿಲ್ಪ ಕಾಯಕ ಪ್ರವರ್ತಕರು. ಇವರು ತಮ್ಮನ್ನು ವಿಶ್ವಕರ್ಮ ಬ್ರಾಹ್ಮಣರೆಂದು ಕರೆದುಕೊಳ್ಳುತ್ತಾರೆ. ಮತ್ತು ಅದನ್ನು ಪೌರಾಣಿಕ, ಐತಿಹ್ಯ, ಶಾಸ್ತ್ರ, ಪುರಾಣ, ವೇದೋಪನಿಷತ್ತುಗಳ ಆಧಾರಗಳಿದ ಪುಷ್ಟೀರಿಸುತ್ತಾರೆ.

ವಿಶ್ವಕರ್ಮ

ಸನಾತನ ವಿಶ್ವಬ್ರಾಹ್ಮ ಧರ್ಮದ ಮೂಲ ಅಧಿದೇವ ವಿಶ್ವಕರ್ಮ. ವಿಶ್ವದ ಸೃಜನೆ ರಕ್ಷಣೆ ಆಗು-ಹೋಗುಗಳು ಯಾವನಿಂದ ಆಗುವವೋ ಅವನು ವಿಶ್ವಕರ್ಮನೆಂದು ಪಾಣಿನಿಯು 'ಅಷ್ಟಾಧ್ಯಾಯಿ'ಯಲ್ಲಿ ವರ್ಣಿಸಿದ್ದಾನೆ. 'ಯಾವನು

ವೇದಗಳಿಂದಲೇ ಆಳೆಯಲು ಸಾಧ್ಯನೋ ವಾಕ್ ಕ್ರಿಯೆಗಳಿಗೆ ಒಡೆಯನೋ ಶಾಶ್ವತನೋ ಆ ವಿಶ್ವಕರ್ಮನಿಗೆ ನಮಸ್ಕರಿಸುತ್ತೇನೆ' ಎಂದು ಮನು ಸ್ತುತಿಸಿದ್ದಾನೆ. ಇವೇ ಮುಂತಾದ ಶಾಸ್ತ್ರವೇದೋಕ್ತ ಆಕರಗಳಿಂದ ವಿಶ್ವಕರ್ಮನ ಮಹತ್ವವನ್ನು ಸಾರುವ ಈ ಮತದ ವಿದ್ವಾಂಸರು ವಿಶ್ವಕರ್ಮನ ವಂಶ ವಿಕಾಸ ಕ್ರಮವನ್ನು ಸ್ಪಷ್ಟಗೊಳಿಸುತ್ತಾರೆ[೩].

ವಿಶ್ವಕರ್ಮ ಪರಮಾತ್ಮನ ಪಂಚಮುಖಗಳಿಂದ ಪಂಚಬ್ರಹ್ಮರು ಜನಿಸಿದರೆಂದು ಉಪನಿಷತ್ತುಗಳಲ್ಲಿ ಪುರಾಣಗಳಲ್ಲಿ ಉಲ್ಲೇಖವಾಗಿದೆ.

ಈ ಪಂಚಬ್ರಹ್ಮರ ವಂಶಜರೇ ೧೨೫ ಗೋತ್ರ ಋಷಿಗಳಾಗಿ ಲೋಕವನ್ನು ಶಿಲ್ಪಮಯವಾಗಿಸಿದರಂತೆ. ಶಿವನೇ ಮನುವಾದ ಕಮ್ಮಾರ, ವಿಷ್ಣುವೇ ಮಯನಾದ ಬಡಿಗ, ಬ್ರಹ್ಮನೇ ತ್ರಷ್ಟನಾದ ಕಂಚುಗಾರ, ಇಂದ್ರನೇ ಶಿಲಾಕರ್ಮಿಯಾದ ಶಿಲ್ಪಿ ಹಾಗೂ ಸೂರ್ಯನೇ ವಿಶ್ವಜ್ಞನಾದ ಅಕ್ಕಸಾಲಿಗ. ವಿಶ್ವಕರ್ಮನೇ ಆಯಶಿಲ್ಪ, ದಾರುಶಿಲ್ಪ, ತಾಮ್ರಶಿಲ್ಪ, ಶಿಲಾ ಶಿಲ್ಪ, ಸುವರ್ಣಶಿಲ್ಪ ಎಂಬ ಪಂಚ ವಿದ್ಯೆಗಳನ್ನು ತನ್ನ ಐದು ಮಕ್ಕಳಿಗೆ ಬೋಧಿಸಿ ಲೋಕ ಕಲ್ಯಾಣಕ್ಕೆ ಸಿದ್ಧಗೊಳಿಸಿದನಂತೆ. ಹೀಗೆ ಪಂಚಶಿಲ್ಪ ಕಾಯಕ ನಿಷ್ಠರಾದ್ದರಿಂದಲೇ ಇವರಿಗೆ ಪಂಚಾಳರೆಂದು ಕರೆಯುತ್ತಾರೆ. ಪಂಚಶಿಲ್ಪ ನಿರತರಾದ ಈ ವಿಶ್ವಕರ್ಮ ವಿಶ್ವಬ್ರಾಹ್ಮಣ ಪಂಚಾಳರಿಗೆ ಪಂಚಗೋತ್ರ ಋಷಿಗಳನ್ನು ಕಲ್ಪಿಸಲಾಗಿದೆ. ಸಾನಗ ಗೋತ್ರದಲ್ಲಿ ಕಮ್ಮಾರನೂ ಸನಾತನ ಗೋತ್ರದಲ್ಲಿ ಬಡಿಗನು ಅಹೋಭೂನ ಗೋತ್ರದಲ್ಲಿ ಕಂಚುಗಾರನು, ಪತ್ನಗೋತ್ರದಲ್ಲಿ ಶಿಲ್ಪಿಯು ಮತ್ತು ಸುಪರ್ಣಸ ಗೋತ್ರದಲ್ಲಿ ಅಕ್ಕಸಾಲಿಯೂ ಬರುತ್ತಾರೆ[೪].

ಪಂಚಾಳರು

ಪಂಚಾಳ ಎಂಬ ಪದ ಕನ್ನಡದ ಶಾಸನಗಳಲ್ಲಿ ಬಳಕೆಯಾಗಿದೆ. ಕ್ರಿಶ

---

೩ ಡಾ.ಎಸ್.ಜಿ. ಇಮ್ರಾಪುರ - ಅಕ್ಕಸಾಲಿ (ಜಾ.ಸಾ.ದರ್ಶನ-೭ ಕ.ವಿ.ವಿ.ಧಾರವಾಡ-೧೯೮೨) ಪುಟ : ೧೬೭

೪ ಡಾ.ಎಸ್.ಜಿ. ಇಮ್ರಾಪುರ - ಅಕ್ಕಸಾಲಿ (ಜಾ.ಸಾ.ದರ್ಶನ-೭ ಕ.ವಿ.ವಿ.ಧಾರವಾಡ-೧೯೮೨) ಪುಟ : ೧೬೮

೧೩೧೨ರ ಕೃಷ್ಣರಾಜಪೇಟೆ ಬೈರಾಪುರದ ಶಾಸನದಲ್ಲಿ ಪಂಚಾಳದವರಿಗೆ ಆಯಿ ಘಂಡುಗ ಗದ್ದೆಯನ್ನು ಭೈರಾಪುರದ ಮಹಾಜನಂಗಳು ಕೊಟ್ಟಿರುವುದರ ಉಲ್ಲೇಖವಿದೆ[೫]. ಕ್ರಿಶ ೧೧೨೪ರ ಶಾಸನದ ಆಧಾರದ ಮೇಲಿಂದ 'ಕೊಡಆವಣ' ಎಂಬ ತೆರಿಗೆಯನ್ನು ಬಹುಶಃ ಕಮ್ಮಾರ ಮತ್ತು ಬಡಗಿಗಳ ಮೇಲೆ ಹಾಕುತ್ತಿದ್ದರೆಂದು ಊಹಿಸಲಾಗಿದೆ[೬]. ಕೆಲವೊಮ್ಮೆ ವೀರ ಪಂಚಾಳರ ಮೇಲಿನ ತೆರಿಗೆಯನ್ನು ಸರ್ಕಾರವು ಮಾಫಿ ಮಾಡಿದ ಉದಾಹರಣೆಗಳು ಕೂಡ ಇರುವುದಾಗಿ ಎ.ವಿ. ವೆಂಕಟರತ್ನಂ ಗುರುತಿಸುತ್ತಾರೆ. ವಿಜಯನಗರದ ಕಾಲದಲ್ಲಿ ಕ್ರಿಶ ೧೪೧೮ರ ಒಂದು ಶಾಸನವು ಹೇಳುವ ಪ್ರಕಾರ ವೀರ ಪಾಂಚಾಳರು ವಿಜಯನಗರದ ಅರಸು ಹರಿಹರ ಮಹಾರಾಯನಿಗೆ ಆಸ್ಥಾನದ ಸಿಂಹಾಸನವನ್ನು ತಯಾರು ಮಾಡಿಕೊಡುತ್ತಾರೆ. ಅದನ್ನು ನೋಡಿ ಮೆಚ್ಚಿದ ಮಹಾರಾಜನು ಪಂಚಾಳರಿಗೆ ಸೇರಿದ ಎತ್ತುಗಳು, ಎಮ್ಮೆಗಳು, ಗಾಡಿಗಳು, ಆಭರಣಗಳು ಮುಂತಾದವುಗಳ ಮೇಲಿನ ತೆರಿಗೆಯನ್ನು ಮಾಫಿ ಮಾಡಿ ಸ್ಥಿರಕಾಯ ಮಾಡಿಕೊಡುತ್ತಾನೆ[೭]. ಕ್ರಿಶ ೧೬೫೬ರ ಒಂದು ಶಾಸನ ಪಂಚಾಳರು ಕಾಳಿಕಾ ಕಮ್ಮಟೇಶ್ವರ ದುರ್ಗಾ ಮಹಾಕಾಳಿಯ ದೀಪಾರಾಧನೆಗಾಗಿ ಕೊಡುತ್ತಿದ್ದ ತೆರಿಗೆಯನ್ನು ಸೂಚಿಸುತ್ತದೆ[೮].

೧೭ನೆಯ ಶತಮಾನದ ಕರಸ್ಥಲದ ನಾಗಲಿಂಗಚರಿತೆ ಎಂಬ ಕಾವ್ಯದಲ್ಲಿ ಈ ಕುಶಲ ಕೆಲಸಗಾರರು ಮನು, ಮಯ, ತ್ವಷ್ಟಾ, ಶಿಲ್ಪಿ ಮತ್ತು ವಿಶ್ವಜ್ಞ ಎಂಬ ಐದು ಗೋತ್ರಗಳನ್ನು ಉಳ್ಳವರಾಗಿದ್ದರು ಎಂದು ಹೇಳಲಾಗಿದೆ.

ಕ್ರಿಶ ೧೮೬೪ರ ಒಂದು ಶಾಸನದಲ್ಲಿ ಲಕ್ಕಣಾಚಾರ್ಯನು ಸುಪರ್ಣಸ ಗೋತ್ರ ಕಾತ್ಯಾಯಿನಿ ಸೂತ್ರ ಪ್ರಣವ ಶಾಖೆ ಎಂದು ಹೇಳಿಕೊಂಡಿದ್ದಾನೆ.

ಒಟ್ಟಿನಲ್ಲಿ ವೇದ ಕಾವ್ಯ ಮತ್ತು ಶಾಸನಗಳಲ್ಲಿ ಗೋತ್ರಗಳಿಗೆ ಸಂಬಂಧಿಸಿದಂತೆ ಬರುವ ಮಾಹಿತಿಯನ್ನು ಪರಿಶೀಲಿಸಿ ಹೀಗೆ ಹೇಳಬಹುದಾಗಿದೆ.

---

೫ ಎಚ್.ಜೆ. ಲಕ್ಕಪ್ಪಗೌಡ (ಸಂ)-ವಿಶಿಷ್ಟ ಜಾನಪದ (ವೈ.ವಿ.ವಿ. ಮೈಸೂರು-೧೯೮೪) ಪುಟ : ೨೭೦

೬ ಮೈ ಆ.ರಿ. (೧೯೩೨) ಪು : ೧೭೧ ಕ್ರಿ.ಶ. ೧೧೨೪

೭ ಡಾ. ಕೆ.ಎಸ್. ಕುಮಾರಸ್ವಾಮಿ-ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು (ಕ.ಸಾ.ಪ. ಬೆಂ-೧೯೯೬) ಪ್ರ:೯೧

೮ Ec-vol-XII; m i 31

ಪಂಚಾಳ ಕುಶಲ ಕೆಲಸಗಾರರಲ್ಲಿ ಕ್ರಿಶ ೧೧, ೧೨ನೆಯ ಶತಮಾನದಷ್ಟು ಹಿಂದಿನಿಂದಲೂ ಗೋತ್ರದ ಪರಿಕಲ್ಪನೆ ಇತ್ತು. ೧೬ನೆಯ ಶತಮಾನ ಹಾಗೂ ಅನಂತರ ಇವರಲ್ಲಿ ಕೆಲವರು ವೇದೋಕ್ತಿ ಗೋತ್ರಗಳನ್ನು ಹೇಳಿಕೊಳ್ಳುತ್ತಿದ್ದಿರಬಹುದು. ಕ್ರಿಶ ೧೭ನೆಯ ಶತಮಾನದ ಮೌನೇಶ್ವರ್ ಎಂಬ ಸಂತ ಕವಿಯ ಒಂದ ವಚನದಲ್ಲಿ 'ವಿಶ್ವಕರ್ಮನ ಗೋತ್ರವ ಕೇಳುವ ಹಾರುವನ ಮೋರೆ ಕಂಡರೆ ಅಪಶಕುನ ಕಾಣೋ' ಎಂದು ಹೇಳಿರುವ ಮಾತು ಗಮನಾರ್ಹವಾಗಿದೆ.

ಪಂಚಾಳರನ್ನು ಆಚಾರ್ಯರೆಂದು ಓಜರೆಂದು ಕರೆಯುವರು. ಓಜ ಸಮಾಜವು ಧರ್ಮಗುರುಗಳ ಪರಿಕಲ್ಪನೆಯನ್ನು ಹೊಂದಿತ್ತು. ಕಾಳಾ ಮುಖ ಯತಿಗಳನ್ನು ಕೆಲವು ಆಚಾರಿಗಳು ತಮ್ಮ ಗುರುಗಳೆಂದು ಪರಿಗಣಿಸಿದ್ದರು. ಮತ್ತು ಒಂದಿಬ್ಬರು ಗುರುಗಳು ಸ್ವತಃ ವಿಶ್ವಕರ್ಮ ಕುಲೋದ್ಭವರೇ ಆಗಿದ್ದಾರೆ. ಅಬ್ಬಲೂರು ಚರಿತೆ ಎಂಬ ಕಾವ್ಯ ಗುರುವಿನ ವಂಶಾವಳಿಯನ್ನು ಕೊಡುತ್ತದೆ.

ಪಂಚಾಳರು ವಿಶ್ವಕರ್ಮನ ಬಗ್ಗೆ ದೇವಶಿಲ್ಪಿ ಎಂಬ ಗೌರವವನ್ನು ಹೊಂದಿದ್ದು ತಮ್ಮ ಮೂಲಪುರುಷ ವಿಶ್ವಕರ್ಮನೆಂದು ತಿಳಿಯುತ್ತಾರೆ. ಎಲ್ಲ ದೈವಗಳಲ್ಲಿ ಸಮಾನವಾದ ಭಕ್ತಿಯನ್ನಿಟ್ಟುಕೊಂಡಿದ್ದರು. ಇವರಲ್ಲಿ ಕೆಲವರು ಜಿನೋಪಾಸಕರು, ಕೆಲವರು ವಿಷ್ಣುವಿನ ಉಪಾಸಕರು. ಕೆಲವರು ಕಾಳಿಕಾದೇವಿಯ ಆರಾಧಕರು. ಬಹುಜನ ಶಿವೋಪಾಸಕರೂ ಆಗಿದ್ದರು. ಪ್ರಾಚೀನ ಕರ್ನಾಟಕದ ಪಂಚಾಳರು ಕಾಳಿಕಾದೇವಿಯನ್ನು ಪೂಜಿಸುತ್ತಿದ್ದರೆಂಬುದನ್ನು ೧೨ನೆಯ ಶತಮಾನದ ಅಬ್ಬಲೂರು ಚರಿತ್ರೆ ಮತ್ತು ಕಂಚಿ ಪುರಾಣ ಕಾವ್ಯಗಳು ಸಾಕ್ಷಿ ನುಡಿಯುತ್ತವೆ[೧೦].

ಪಂಚಾಳರಲ್ಲಿ ಸಗೋತ್ರ ವಿವಾಹ ಸಂಬಂಧ ಮಾಡುವ ಸಂಪ್ರದಾಯ ವಿಲ್ಲ ಇವರು ಅಮವಾಸ್ಯೆ ದಿನ ತಮ್ಮ ವೃತ್ತಿ ಉಪಕರಣಗಳನ್ನು ಪೂಜಿಸಿ ನಂತರ ಆ ದಿನ ಕೆಲಸಕ್ಕೆ ಬಿಡುವು ಕೊಡುತ್ತಾರೆ. ಸಸ್ಯಾಹಾರಿಗಳಾದ ಇವರು ಹುಟ್ಟು ಸಾವು ಮೊದಲಾದ ಸಂದರ್ಭಗಳಲ್ಲಿ ಮಡಿ-ಮೈಲಿಗೆ ಆಚರಿಸುತ್ತಾರೆ.

---

೯ ಜೀವಣ್ಣಾ ಮಸಳಿ (ಸಂ)-ಮೌನೇಶ್ವರ ವಚನ ಸಂಗ್ರಹ (ವಿ.ದ ಪ್ರ ಬಾಗಲಕೋಟ-೧೯೮೭) ವಚನ:೬೫

೧೦ ಡಾ. ಕೆ.ಎಸ್. ಕುಮಾರಸ್ವಾಮಿ-ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು (ಕ.ಸಾ.ಪ. ಬೆಂ-೧೯೯೬) ಪು:೧೪೧

ಮೃತರಿಗೆ ಅಗ್ನಿ ಸಂಸ್ಕಾರ ಮಾಡುತ್ತಾರೆ. ಗುಲ್ಬರ್ಗಾ ಜಿಲ್ಲೆಯ ತಿಂಥಿಣಿಯ ಮೌನೇಶ್ವರ, ರಾಯಚೂರ ಜಿಲ್ಲೆಯ ಕುಷ್ಟಗಿ ತಾಲ್ಲೂಕಿನ ಲಿಂಗನ ಬಂಡಿಯ ವರವಿ ಮೌನೇಶ್ವರ, ಬೆಳಗಾಂ ಜಿಲ್ಲೆಯ ಸಿರಸಂಗಿ ಕಾಳಿಕಾಂಬಾ ಮೊದಲಾದವು ಇವರ ಪ್ರಮುಖ ಯಾತ್ರಾಸ್ಥಳಗಳಾಗಿವೆ. ನವಲಗುಂದದಲ್ಲಿರುವ ನಾಗಲಿಂಗಸ್ವಾಮಿ ಮಠವು ಜಿಲ್ಲೆಯಲ್ಲಿರುವ ಹೆಸರಾಂತ ಮಠವಾಗಿದೆ[೧೧].

ಗ್ರಾಮ ಜೀವನದ ವಿವಿಧ ವೃತ್ತಿಗಳಲ್ಲಿ ನಿರತರಾದ ಈ ಜನಾಂಗಕ್ಕೆ ವಿಶೇಷ ಪರಂಪರೆಯಿದೆ. ಗೌರವ ಸ್ಥಾನವಿದೆ. ಅದೇನೇ ಇದ್ದರೂ ಬಡಿಗ ಮುಂತಾದ ಪಂಚಾಳರು ವಿಶೇಷ ಜ್ಞಾನಿಗಳು ಕರಕುಶಲಿಗಳು, ವೈದಿಕಾಚರಣೆ ವೇದ ವಿದ್ಯೆಗಳಲ್ಲಿ ನಂಬಿಕೆಯುಳ್ಳವರು. ಅಷ್ಟೇ ಅಲ್ಲದೆ ಚೌಷಷ್ಠಿ ಕಲೆಗಳಲ್ಲಿ ಪರಿಣಿತರು. ಶತಮಾನಗಳ ಏಳು-ಬೀಳುಗಳಲ್ಲಿ ಜೀವನ ವೃತ್ತಿಗಳನ್ನು ಮುನ್ನಡೆಯಿಸಿ ಪರಂಪರೆಯ ಆಚರಣೆಗಳನ್ನು ಉಳಿಸಿಕೊಂಡು ಬಂದ ಆಯಗಾರರು. ಇವರಲ್ಲಿ ಗ್ರಾಮೀಣ ಜನರ ವೃತ್ತಿ ಜೀವನಗಳಿಗೆ ಅನಿವಾರ್ಯನೂ ಅತಿ ಸಮೀಪನೂ ಆದ ಬಡಿಗಿಯು ಈ ಸಮನ್ವಯ ಸೂತ್ರದವ.

ಬಡಿಗರು

ಬಡಿಗ - ಬಡಗಿ - ಬಡಿಗೇರ, ಬಡಿಗ್ಯಾರ, ಬಡಗಿಯವನು, ಮರಗೆಲಸ ಮಾಡುವವನು ಎಂದರ್ಥ. ವರ್ಧಕಿ (ಸಂ) ವದ್ದತಿ ಒಡ್ಡತಿ ಬಡಗಿ ಪದ ಬೆಳೆದು ಬಂದಿರಬೇಕು. ತಮಿಳು ಮತ್ತು ಮಲೆಯಾಳಂನಲ್ಲಿ ತಚ್ಚಾನ್, ಆಷಾರಿ, ಮರಾಶಾರಿ, ತೆಲುಗಿನಲ್ಲಿ ಆಚಾರಿ, ವಡ್ರಂಗಿ ಎಂಬ ಪದ ಬಳಕೆಯಲ್ಲಿದೆ.

ಬಡಗಿತನ ಮಾಡುವ ಬಡಗಿಗಳನ್ನು ಅರೆ ಕುಶಲ ಬಡಗಿಗಳು ಕುಶಲ ಬಡಗಿಗಳು ಎಂದು ಎರಡು ಭಾಗ ಮಾಡಬಹುದು. ದಿನನಿತ್ಯ ಸಾಮಾನ್ಯ ಜನರು ಉಪಯೋಗಿಸುವ ಪೀಠೋಪಕರಣಗಳು, ನೇಗಿಲು, ಎತ್ತಿನಗಾಡಿ - ಮೊದಲಾದ ವ್ಯವಸಾಯೋಪಯೋಗಿ ವಸ್ತುಗಳು ಸಾಮಾನ್ಯ ಮನೆಮುಟ್ಟುಗಳನ್ನು ಮಾಡುವವರನ್ನು ಅರೆ ಕುಶಲ ಬಡಗಿಗಳೆಂದು, ಸೂಕ್ಷ್ಮವಾದ ಕೆತ್ತನೆ ಕೆಲಸದ

---

[೧೧] ಸೂರ್ಯನಾಥ ಕಾಮತ್ (ಸಂ)-ಧಾರವಾಡ ಜಿಲ್ಲೆ ಗೆಜೆಟಿಯರ್ (ಕರ್ನಾಟಕ ಸರ್ಕಾರ-೧೯೯೫) ಪು: ೨೨೭

ಪರಿಕರಗಳನ್ನು ಮಠದ ದೇವಸ್ಥಾನಗಳನ್ನು, ರಥಗಳನ್ನು ಮಾಡುವವರನ್ನು ಕುಶಲ ಬಡಗಿಗಳೆಂದು ಕರೆಯಬಹುದು.

ಗ್ರಾಮಗಳಲ್ಲಿ ವಾಸವಾಗಿದ್ದು ಗ್ರಾಮಸ್ಥರಿಗೆ ಬೇಕಾಗುತ್ತಿದ್ದ ಗೃಹೋಪಯೋಗಿ ವ್ಯವಸಾಯೋಪಯೋಗಿ ವಸ್ತುಗಳನ್ನು ಪೂರೈಸುತ್ತಿದ್ದ ಬಡಗಿಗಳಿಗೆ ಗ್ರಾಮಸ್ಥರು ವರ್ಷಕ್ಕೆ ಇಷ್ಟು ಎಂದು ಗೊತ್ತಾದ ಅಳತೆಯಲ್ಲಿ ಕಾಳುಗಳನ್ನು ಆಯದ ರೂಪದಲ್ಲಿ ಕೊಡುತ್ತಿದ್ದರು. ಅಥವಾ ಸ್ವಲ್ಪ ಭಾಗ ಜಮೀನನ್ನು ಅನುಭವಿಸಲು ಬಿಟ್ಟುಕೊಟ್ಟಿರುತ್ತಿದ್ದರು. ಹೀಗೆ ಹಳ್ಳಿಗೆ ಸಲ್ಲಿಸಿದ ಸೇವೆಗಾಗಿ ಬಡಗಿಗಳು ಆಯವನ್ನೋ ಭೂಮಿಯನ್ನೋ ಪಡೆದ ಉದಾಹರಣೆಗಳು ಶಾಸನಗಳಲ್ಲಿ ದೊರೆಯುತ್ತವೆ.

ಬಡಿಗ ವೃತ್ತಿ ಪ್ರಾಚೀನತೆ

ದೇವಸ್ಥಾನಕ್ಕೆ ಸಂಬಂಧಿಸಿದ ಮರಗೆಲಸಗಳನ್ನು ಮಾಡಲು ಮುರಿದು ಹೋದ ಸಾಮಾನುಗಳನ್ನು ಸರಿಪಡಿಸಲು ಬಡಿಗರಿಗೆ ಶಾಶ್ವತವಾದ ದತ್ತಿಗಳನ್ನು ಬಿಟ್ಟು ಕೊಡುತ್ತಿದ್ದರು[೧೨]. ಇವರು ಅನೇಕ ಶಾಸನಗಳನ್ನು ಸಹ ಕೆತ್ತಿದ್ದಾರೆ[೧೩].

ದಂಡಾದಿಪನೊಬ್ಬನು ಕ್ರಿಶ ೧೧೫೯ರಲ್ಲಿ ವಿರುಪಾಕ್ಷಪುರ ಎಂಬ ನಗರವನ್ನು ಕಟ್ಟಿ ಅದನ್ನು ಬ್ರಾಹ್ಮಣರಿಗೆ ದಾನ ಕೊಡುವ ಸಂದರ್ಭದಲ್ಲಿ ಒಬ್ಬೊಬ್ಬ ಬ್ರಾಹ್ಮಣನಿಗೆ ಒಂದೊಂದರಂತೆ ಅನೇಕ ಮರದ ಮಂಚಗಳನ್ನು ಬಡಗಿಗಳಿಂದ ಮಾಡಿಸಿ ದಾನವಾಗಿ ಕೊಡುತ್ತಾನೆ[೧೪]. ಕ್ರಿಶ ೧೨೨೫ರ ಒಂದು ಶಾಸನವು ಬಡಗಿ ಚಂಪೋಜ[೧೫] ಎನ್ನುವವನಿಗೆ ಅವನ ಸೇವೆಯನ್ನು ಪರಿಗಣಿಸಿ ಭೂಮಿಯನ್ನು ಅನುದಾನ ಮಾಡಿದ ವಿಷಯವನ್ನು ಪ್ರಸ್ತಾಪಿಸುತ್ತದೆ.

---

೧೨ BKI I i 68, 1032 AD; EC VII Sa 109, 1042 A D

೧೩ MAR (1931) P 191, c. 1053 AD

೧೪ ಡಾ. ಕೆ.ಎಸ್. ಕುಮಾರಸ್ವಾಮಿ-ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು (ಕ.ಸಾ.ಪ. ಬೆಂ-೧೯೯೬) ಪ್ರ:೭೬

೧೫ ಎ.ಕ. V ಚೆನ್ನರಾಯಪಟ್ಟಣ - ೨೪೪

ಬಯಿರು[೧೬] ಎನ್ನುವವನು ಸಿಮ್ಮೋಜನ ಮಗ. ಇವನ ಕಾಲ ಕ್ರಿಶ ೧೫೦೦ ಚಿಕ್ಕಬಳ್ಳಾಪುರ ತಾಲ್ಲೂಕು ನಂದಿಗ್ರಾಮದ ನಂದಿಬೆಟ್ಟದ ಯೋಗ ನಂದೀಶ್ವರ ಗುಡಿಯ ದಕ್ಷಿಣದ ಕಡೆಯ ಬಾಗಿಲ ಕದವನ್ನು ತಾನು ಮಾಡಿರುವುದಾಗಿ ಹೇಳಿಕೊಂಡಿದ್ದಾನೆ.

ಕ್ರಿಶ ೧೫೪೪ರ ಒಂದು ಶಾಸನದ ಪ್ರಕಾರ ಒಬ್ಬ ಜಿನಭಕ್ತನು ದಾರು (ಮರ) ಮಯ ಬಸದಿಯನ್ನು ಕಟ್ಟಿಸುತ್ತಾನೆ. ಅದನ್ನು ನೋಡಿದ ಆಚಾರ್ಯರು ಅವನ್ನು ಕರೆದು ಶಿಲಾಮಯ ಬಸದಿಯನ್ನು ಕಟ್ಟಿಸಬೇಕೆಂದು ಬುದ್ಧಿವಾದ ಹೇಳುತ್ತಾರೆ[೧೭]. ಇದನ್ನು ಗಮನಿಸಿದರೆ ಮಧ್ಯಮ ವರ್ಗದವರು ಹಾಗೂ ಸಾಮಾನ್ಯ ಜನತೆಯು ಮರದ ದೇವಸ್ಥಾನಗಳನ್ನು ಕಟ್ಟಿಸುತ್ತಿದ್ದರು. ಮತ್ತು ಇಂಥ ಮರದ ದೇವಾಲಯಗಳು ಕಲ್ಲಿನ ದೇವಾಲಯಗಳಿಗಿಂತ ಹೆಚ್ಚಿನ ಸಂಖ್ಯೆಯಲ್ಲಿ ಇರುತ್ತಿದ್ದವು ಎಂದು ತಿಳಿಯಬಹುದಾಗಿದೆ.

ಕ್ರಿಶ ೧೪೩೧ರ ಮಾಲೂರು ತಾಲ್ಲೂಕು ತೇಕಲ್ಲು ಗ್ರಾಮದ ವರದರಾಜಸ್ವಾಮಿ ದೇವಸ್ಥಾನದಲ್ಲಿ ಅದೇ ಗ್ರಾಮದ ವಾಸಿಯಾಗಿದ್ದ ದೇವೋಜ[೧೮] ಎಂಬ ಬಡಗಿಯು ಗುಡಿಗೆ ಸಂಬಂಧಿಸಿದ ಮರಕೆಲಸವನ್ನು ಮಾಡಿಕೊಡುತ್ತಾನೆ. ಈ ಕೆಲಸಕ್ಕಾಗಿ ಈತನಿಗೆ ಗದ್ದೆಯನ್ನು ಹೊಲವನ್ನೂ ಕೊಡಲಾಗಿದೆ. ಕ್ರಿಶ ೧೪೮೦ರ ಬಡಗಿ ಲಿಂಗೋಜನು ಜಗಳೂರು ತಾಲ್ಲೂಕು ನಿಬಗೂರಿನಲ್ಲಿ ಆಂಜನೆಯ ಗುಡಿಯನ್ನು ಕಟ್ಟುತ್ತಾನೆ. ಇದಕ್ಕಾಗಿ ಗೌಡನು ಇವನಿಗೆ ಅರವತ್ತು ಒಕ್ಕಲು ಮಾನ್ಯವನ್ನು ಕೊಡುತ್ತಾನೆ[೧೯]. ಇದು ಮರದ ದೇವಸ್ಥಾನ ಇರಬೇಕು.

ಕುಶಲಿಗಳಾದ ಬಡಗಿಗಳು ಸುಂದರವಾದ ಮರದ ರಥಗಳನ್ನು ಮಾಡುತ್ತಿದ್ದರು. ಇಂಥ ಹಲವಾರು ರಥಗಳು ಇವೆಯಾದರೂ ಅವುಗಳನ್ನು ಕಟ್ಟಿದ ಬಡಗಿಗಳ ಹೆಸರು ದೊರೆಯುವುದಿಲ್ಲ. ಕ್ರಿಶ ೧೮೫೯ ಇತ್ತೀಚಿನ

---

೧೬ ಎ.ಕ. X ಚೆನ್ನರಾಯಪಟ್ಟಣ - ೩೧

೧೭ ಎ.ಕ. I-19 ಕ್ರಿ ಶ ೧೫೪೪

೧೮ ಎ.ಕ. XVII ಮಾಲೂರು-೩.

೧೯ ಎ.ಕ. XI ಜಗಳೂರು - ೪೨

ಪಾಂಡವಪುರ ಕನ್ನಂಬಾಡಿ ಗ್ರಾಮದಲ್ಲಿರುವ ಮಹಾಲಕ್ಷ್ಮಿ ಗುಡಿಗೆ ಸೇರಿದ ರಥವನ್ನು ಧರ್ಮಲಿಂಗಾಚಾರಿ[೨೦] ಎನ್ನುವವನು ರಚನೆ ಮಾಡಿದ್ದಾನೆ. ಶಾಸನವು ಧರ್ಮಲಿಂಗಾಚಾರಿ ನಿರ್ಮಿತ ಎಂದು ಮಾತ್ರ ಹೇಳಿದೆ. ಇದನ್ನು ಭೋಗೇಗೌಡನ ಪತ್ನಿಯು ಮಹಾಲಕ್ಷ್ಮಿ ಶ್ರೀ ಮಹಾಕಾಳಿ ಅಮ್ಮನವರ ಸೇವಾರ್ಥ ಎಂಬುದಾಗಿ ಮಾಡಿಸುತ್ತಾಳೆ. ರಥಕಾರ ಧರ್ಮಲಿಂಗಾಚಾರಿಯು ತನ್ನ ಅಪರೂಪದ ಕೃತಿಯನ್ನು ಬೊಂಬೆರಥ ಎಂದು ಕರೆದಿದ್ದಾನೆ.

ಬೆಂಗಳೂರಿನ ರಥಶಿಲ್ಪಿ ಶ್ರೀ ಮನೋಹರ ಶಂಕ್ರಪ್ಪ ಬಡಿಗೇರ ಅವರು ಹಂಪೆಯ ಪಂಪಾಂಬಿಕಾ ದೇವಿಯ ರಥ ತಯಾರಿಸಲು ಅವರ ಕಲೆಯನ್ನು ಮೆಚ್ಚಿ ಲಲಿತಾಕಲಾ ಅಕಾಡೆಮಿಯು ಪ್ರಶಸ್ತಿ ನೀಡಿ ಗೌರವಿಸಿದುದು ಗಮನಾರ್ಹ.

ಬಡಗಿಗಳು ಯುದ್ಧದಲ್ಲಿ ಉಪಯೋಗಿಸುತ್ತಿದ್ದ ಮರದ ಆಯುಧಗಳನ್ನು ತಯಾರು ಮಾಡುತ್ತಿದ್ದ ವಿಷಯವನ್ನು ನಂಜುಂಡನ ಕುಮಾರ ರಾಮನ ಚರಿತೆಯು[೨೧] ಪ್ರಸ್ತಾಪಿಸಿದೆ. ಬಲಿನ ಪೆಟಲ ಬೆಣೆ, ಡೆಂಕಣೆಗೈ, ಪಂದಿದತೆ, ತಿರುಗಣೆ, ಭೀಮಗದೆ ಮೊದಲಾದ ಮರದ ಆಯುಧಗಳನ್ನು ಬಡಗಿಗಳು ಕೆತ್ತಿದರು ಎಂದು ಹೇಳುತ್ತದೆ. 'ಕೆತ್ತುವಾ ಬಡಗಿಗಳಿಂದಾ ದುರ್ಗ ಸಲೆ ಮೆರೆದುದು' ಎಂಬ ಉಕ್ತಿಯು ಬಹುಶಃ ಯುದ್ಧದ ಆಯುಧಗಳನ್ನು ಶತ್ರುಗಳಿಂದ ರಕ್ಷಿತವಾದ ರಹಸ್ಯವಾದ ದುರ್ಗದ ಒಳಗೆ ಇದ್ದುಕೊಂಡು ನಿರ್ಮಾಣ ಮಾಡುತ್ತಿದ್ದರು ಎಂಬ ಅಂಶವನ್ನು ಹೇಳುತ್ತಿರುವಂತಿದೆ.

ಬಡಗಿಗಳ ಮೇಲೆ ಪ್ರತ್ಯೇಕವಾಗಿ ಬಡಗಿದೆಜಿ[೨೨] ಎಂದು ಹೇಳಿ ತೆರವನ್ನು ವಿಧಿಸಲಾಗುತ್ತಿತ್ತು. ಚಾಲುಕ್ಯರ ಮತ್ತು ಹೊಯ್ಸಳರ ಕಾಲದಲ್ಲಿ 'ಬಡಗಿ ತೆರ'ದ ಉಲ್ಲೇಖಗಳಿವೆ.

---

[೨೦] ಎ.ಕ. VI ಪು: ೧೨೩ ನಂ. ೨೪

[೨೧] ಲಕ್ಷ್ಮಣ ತೆಲಗಾಂವಿ (ಸಂ)-ಸಂಶೋಧನೆ (ಚಿದಾನಂದಮೂರ್ತಿ ಅ.ಸ.ಬೆಂ-೧೯೯೧)ಪುಟ:೬೦೮

[೨೨] ಸೌಇಇ XVIII ಪು ೧೨೪, ನಂ ೧೧೧ ಕ್ರಿಶ ೧೧೧೫; ಎ.ಕ. IX ಕನಕಪುರ, ೯೨ ಕ್ರಿಶ ೧೩೦೦

ಪಂಚಬ್ರಹ್ಮರ ಸಂತತಿಯಾದ ಪಂಚಾಳ ಬ್ರಾಹ್ಮಣರು ಪಂಚ ವೃತ್ತಿಗಳಲ್ಲಿ ತಮ್ಮ ಮೂಲ ವೃತ್ತಿ ಯಾವುದೇ ಆಗಿದ್ದರೂ ಉಳಿದ ಪಂಚಾಳರ ವೃತ್ತಿಯನ್ನು ಕೈಗೊಳ್ಳಬಹುದು. ಇಂಥ ವೃತ್ತಿ ಬದಲಾವಣೆ ಪ್ರಾಚೀನ ಕರ್ನಾಟಕದಲ್ಲಿ ಇದ್ದಿತೆಂಬುದಕ್ಕೆ ಶಾಸನಗಳು ಆಧಾರವಾಗಿವೆ. ಕ್ರಿಶ ೧೦೩೫ರ ಒಂದು ಶಾಸನದಲ್ಲಿ 'ಅಕ್ಕಸಾಲಿಯಾಯ ಉಪ್ಪೊಳಗಾಗಿ ಧಾನ್ಯಂಗಳೊಳೆಲ್ಲಂ'[೨೩] ಕ್ರಿಶ ೧೦೯೮ರ ಶಾಸನದಲ್ಲಿ 'ಅಕ್ಕಸಾಲಿಖಾವೋಜನ ಭಾಗದಾಯ'ದ ಹೆಸರಿದೆ[೨೪]. ಈ ಶಾಸನಗಳ ಅಕ್ಕಸಾಲಿಗರು ಬಡಗಿಯ ಅಥವಾ ಕಮ್ಮಾರನ ಕೆಲಸ ಮಾಡುತ್ತಿದ್ದಿರಬೇಕು. ಕ್ರಿ.ಶ. ೧೧೩೦ರ ಒಂದು ಶಾಸನದಲ್ಲಿ 'ಅಕ್ಕಸಾಲೆ ಕಮ್ಮಾರನಾಗಿದ್ದ ಕದಿಟ್ಟೆಯ ನಾಥಾಚಾರಿ'[೨೫] ಎಂಬ ಹೆಸರು ಬರುತ್ತದೆ.

ವ್ಯವಸಾಯಕ್ಕೆ ಕಮ್ಮಾರಿಕೆಯಷ್ಟೆ ಬಡಿಗತನವು ಅಗತ್ಯವಾದುದರಿಂದ ಹಳ್ಳಿಯ ಬಹಳಷ್ಟು ಕಂಬಾರರು ಬಡಿಗತನವನ್ನು ಮಾಡಬಲ್ಲವರಾಗಿದ್ದಾರೆ. ಇವರು ಮಾಡುವ ಬಡಿಗತನ ವ್ಯವಸಾಯಕ್ಕೆ ಸೀಮಿತವಾಗಿದ್ದು ಇದರಿಂದ ಕಮ್ಮಾರನಿಗೆ ಮಾತ್ರವಲ್ಲ ಒಕ್ಕಲಿಗನಿಗೂ ಅನುಕೂಲವಾಗಿದೆ.

ಬಡಿಗರ ಸಂಪ್ರದಾಯ ಮತ್ತು ಸಂಸ್ಕಾರಗಳು

ಗ್ರಾಮ ಜೀವನದ ಕ್ರಿಯಾಶೀಲ ಜನಾಂಗವಾದ ಬಡಿಗರು ವಿಶಿಷ್ಟವಾದ ಸಂಪ್ರದಾಯವುಳ್ಳವರಾಗಿದ್ದಾರೆ. ವಿಶ್ವಕರ್ಮ ವಿಶ್ವಬ್ರಾಹ್ಮಣ ಎಂದು ಗೌರವಾನ್ವಿತವಾಗಿ ಕರೆದುಕೊಳ್ಳುವ ಪಂಚಾಳರಲ್ಲಿ ವೃತ್ತಿಗಳಲ್ಲಿ ವ್ಯತ್ಯಾಸಗಳಿದ್ದರೂ ಗೋತ್ರಮೂಲವಾದ ಪಂಥ ಪಂಗಡಗಳಿದ್ದರೂ ಸಂಸ್ಕೃತದ ಮೂಲಸ್ಥಂಬ ಪುರಾಣ, ಕಾಳಹಸ್ತಾಚಾರ್ಯನ ವಿಶ್ವಕರ್ಮ ಪುರಾಣ ರಥಾಧಿಕರಣ - ಮುಂತಾದ ಗ್ರಂಥಗಳನ್ನು ಮನ್ನಿಸುತ್ತಾರೆ. ವಿಶ್ವಕರ್ಮನ ಮಕ್ಕಳಾದ ಶಿವ, ವಿಷ್ಣು ಬ್ರಹ್ಮ ಇಂದ್ರ, ಸೂರ್ಯರಿಂದ ಮನು ಮಯ ತ್ವಷ್ಟಾ ಶಿಲ್ಪಿ ವಿಶ್ವಜ್ಞರು ಜನಿಸಿ ಕ್ರಮವಾಗಿ ಕಮ್ಮಾರ, ಬಡಗಿ, ಕಂಚುಗಾರ, ದಾರು ಶಿಲ್ಪ, ತಾಮ್ರ ಶಿಲ್ಪ, ಶಿಲಾ

---

೨೩ S I I IX i. 89, 1035 AD ಜಗಳೂರು - ೪೨

೨೪ BKI I ii, 145, 1098 AD

೨೫ EC IV Kp 78, C 1130 AD

ಶಿಲ್ಪ, ಸುವರ್ಣ ಶಿಲ್ಪ ವಿದ್ಯೆಗಳನ್ನು ನೀಡಿ ಲೋಕ ಕಲ್ಯಾಣಕ್ಕೆ ಅಣಿಗೊಳಿಸಿದನೆಂದು ನಂಬುತ್ತಾರೆ.

ಶಿವ, ವಿಷ್ಣು, ಬ್ರಹ್ಮ, ಇಂದ್ರ ಸೂರ್ಯರನ್ನು ಪೂಜಿಸುವ ಇವರು ಗಾಯತ್ರಿ ಪರಮ ದೈವ ಹಾಗೂ ಸರ್ವಸ್ವವೆಂದು ತಿಳಿಯುತ್ತಾರೆ. ಪರಂಪರೆಯಿಂದ ಧಾರ್ಮಿಕಾಚರಣೆಗಳನ್ನು ನಿಯಂತ್ರಿಸುವ ಹೋಮ-ಹವನ-ದಹನ ಕ್ರಿಯೆಗಳ ಮೇಲ್ವಿಚಾರಕರಾಗಿರುವ ಸ್ವಾಮಿಗಳಿಗೆ ಮತ್ತು ಮಠಗಳಿಗೆ ನಡೆದುಕೊಳ್ಳುತ್ತಾರೆ. ಅವುಗಳಲ್ಲಿ ಯಾತಗಿರಿಯ ಗಿರಿಯಪ್ಪಯ್ಯನವರ ಏಕದಂಡಿ ಮಠ, ರಾಣೇಬೆನ್ನೂರ ಸಮೀಪದ ಅಂತರವಳ್ಳಿಯ ಮೂರು ಜಾವದ ಮಠ, ಹೊಳೆ ಆಲೂರ ಎಚ್ಚರಪ್ಪಯ್ಯನ ಮಠ, ಕೊಪ್ಪಳ ಶಿರಸಪ್ಪಯ್ಯನ ಮಠ, ಮರವಿ, ಲಿಂಗನ ಬಂಡಿ, ತಿಂಥಿಣಿ ಮೌನೇಶ್ವರ ಮಠ, ನವಲಗುಂದದ ಅಜಾತನಾಗ ಲಿಂಗಸ್ವಾಮಿ ಮಠ - ಮುಂತಾದ ಮಠಗಳ ಸ್ವಾಮಿಗಳು ಪೂಜ್ಯರೆಂದು ಬಡಿಗೇರರು ನಂಬುತ್ತಾರೆ. ಕಾಳಿಕಾದೇವಿಯನ್ನು ತಮ್ಮ ಕುಲದೇವತೆಯೆಂದು ಪೂಜಿಸುತ್ತಾರೆ.

ಬಡಿಗರು ವಿಶೇಷವಾಗಿ ಬ್ರಾಹ್ಮಣರು ಅನುಸರಿಸುವ ಚತುರಾಶ್ರಮ, ಷಟ್ಕರ್ಮ, ಷೋಡಶ ಸಂಸ್ಕಾರಗಳನ್ನು ಪಾಲಿಸುತ್ತಾರೆ*. ಆಚಾರಿಗಳಿಂದ ಉಪನಯನದಲ್ಲಿ ನಡೆಯುವ ಹೋಮ, ಮದುವೆಯ ಸಂದರ್ಭದಲ್ಲಿ ಏರ್ಪಡುವ ಲಾಜ ಹೋಮ ಹಾಗೂ ವಿಶ್ವಕರ್ಮ ಹೋಮ, ಚಂಡಿ ಹೋಮಗಳನ್ನು ಬಡಿಗೇರರು (ಪಂಚಾಳರು) ಮಾಡಿಸುವರು. ಹಳ್ಳಿಗಳಲ್ಲಿ ವಾಸವಾಗಿರುವ ಬಡಿಗೇರರಿಗೆ ಆಚಾರಿಗಳು ದೊರೆಯದಿದ್ದರೆ ಬ್ರಾಹ್ಮಣ ಪುರೋಹಿತರಿಂದ ಈ ಕಾರ್ಯಗಳನ್ನು ಪೂರ್ಣಗೊಳಿಸುವುದುಂಟು.

ಮಗು ಹುಟ್ಟಿದಾಗ ಐದು ದಿನಗಳವರೆಗೆ ಮೈಲಿಗೆಯನ್ನು ಆಚರಿಸಿ ಅನಂತರ ಸ್ನಾನ, ಪೂಜೆ ಸಂಸ್ಕಾರ ನೀಡಿ ಮೈಲಿಗೆ ಕಳೆಯುತ್ತಾರೆ. ಮಗು ಹುಟ್ಟಿ ೧೩ನೆಯ ದಿವಸಕ್ಕೆ ನಾಮಕರಣೋತ್ಸವ ನೆರವೇರಿಸುತ್ತಾರೆ. ಒಂದು ವರ್ಷದ ಅವಧಿಯಲ್ಲಿ 'ಅನ್ನಪ್ರಾಶನ' ಸಂಸ್ಕಾರ ಮಾಡುತ್ತಾರೆ. ಜವಲ ತೆಗೆಯಿಸುವ,

---

* ಈ ವಿಷಯ ತಿಳಿಸಿದವರು : ಹುಬ್ಬಳ್ಳಿಯ ಕಾಳಮ್ಮನ ಗುಡಿಯ ಆಚಾರಿ ಶ್ರೀ ತಿಪ್ಪಣಾಚಾರ್ಯ, ಭಾ ಪ್ರಭಾಕರ.

ಅಕ್ಷರಾಭ್ಯಾಸ ನೀಡುವ-ಸಂಸ್ಕಾರಗಳ ಅನಂತರ ೭ ರಿಂದ ೧೦ ವರ್ಷಗಳ ಅವಧಿಯಲ್ಲಿ ಗಂಡು ಮಗುವಿಗೆ ಉಪನಯನವನ್ನು ಮಾಡುತ್ತಾರೆ. ಆಗ ಮೂರು ಎಳೆಯ ಜನಿವಾರ ಹಾಕಿಸುವರು. ಇದಕ್ಕೆ ಸೋಡ ಮುಂಜಿವೆಯೆಂದು ಉತ್ತರ ಕರ್ನಾಟಕದ ಬಡಿಗರು ಕರೆಯುತ್ತಾರೆ. ಮುಂದೆ ಬೆಳೆ ಬೆಳೆಯುತ್ತಿದ್ದಂತೆ ವೃತ್ತಿ ಸಂಸ್ಕಾರವು ದೊರೆಯುತ್ತದೆ. ಉಪನಯನ ಮಾಡಿಸಿಕೊಂಡವರು ಸ್ವಜಾತಿಯವರ ಮನೆ ಹೊರತು ಪಡಿಸಿ ಅನ್ಯ ಜಾತಿಯವರ ಮನೆಯಲ್ಲಿ ಊಟ ಮಾಡುವುದಿಲ್ಲ.

ಬಡಿಗೇರರ ಮದುವೆ ಕಾರ್ಯದಲ್ಲಿ ಹೋಮ ಹವನ ಧೂಮಗಳ ಆಚರಣೆಯಿದೆ. ಪಂಚಾಂಗ ನೋಡುವುದು, ಶುಭ ಮುಹೂರ್ತ ನಿರ್ಣಯಿಸುವುದು ಆಚಾರಿಗಳ ಪೌರೋಹಿತ್ಯದಲ್ಲಿ ಮದುವೆ ನಡೆಸುವುದು ಸಂಪ್ರದಾಯ. ಮದುವೆಯ ಅನಂತರ ಉಪನಯನದಲ್ಲಿ ಹಾಕಿಕೊಂಡ ಮೂರೆಳೆಯ ಜನಿವಾರ ಕಳಚಿ ಆರೆಳೆಯ ಜನಿವಾರ ಧರಿಸುವರು. ಗ್ರಹಸ್ಥಾಶ್ರಮದ ಎಲ್ಲ ಸುಖಗಳನ್ನು ಅನುಭವಿಸಲು ಅವಕಾಶ ನೀಡಲಾಗುವುದು.

ಹೆಣ್ಣುಮಕ್ಕಳು ತಾಳಿ ಬಳೆ ಕುಂಕುಮ ಧರಿಸುತ್ತಾರೆ. ಗಂಡಸರು ಮೈಮೇಲೆ ಗಂಧ-ಕುಂಕುಮ ಅಥವಾ ಕುಂಕುಮ ಮಿಶ್ರಿತ ಗಂಧವನ್ನು ಅರ್ಧಚಂದ್ರಾಕೃತಿಯಾಗಿ ಹಚ್ಚಿಕೊಳ್ಳುತ್ತಾರೆ.

ಶವಸಂಸ್ಕಾರ ವಿಧಾನದಲ್ಲಿಯೂ ಶುದ್ಧ ವೈದಿಕಾಚರಣೆಯಿದೆ. ಹೆಣವನ್ನು ದಹಿಸುವ, ತಂದೆ ಸತ್ತರೆ ಮಗ ಕ್ಷೌರ ಮಾಡಿಸಿಕೊಳ್ಳುವ, ಸತ್ತ ಮೂರನೆಯ ದಿವಸಕ್ಕೆ ಅಸ್ತಿ ಆರಿಸುವ, ನದಿ ಸಂಗಮದಲ್ಲಿ ಅಸ್ತಿ ವಿಸರ್ಜಿಸುವ ೧೨ನೆಯ ದಿನಗಳವರೆಗೆ ಸೂತಕ ಆಚರಿಸುವ ಸಂಪ್ರದಾಯವಿದೆ. ೧೨ನೆಯ ದಿನಕ್ಕೆ ಮನೆಯನ್ನು ತೊಳೆದು ಶುದ್ಧೀಕರಿಸಿ ಅನ್ನ ಸಂತರ್ಪಣೆ ಮಾಡಿ ಸತ್ತವರ ಆತ್ಮಕ್ಕೆ ಶಾಂತಿ ಕೋರಿ ಆತ್ಮತೃಪ್ತಿಯ ಶ್ರಾದ್ಧವನ್ನು ನೆರವೇರಿಸಿ ೧೩ನೆಯ ದಿವಸಕ್ಕೆ ಸಿಹಿ ತಿನ್ನಿಸುವ ಸಂಸ್ಕಾರವನ್ನು ನಡೆಸುತ್ತಾರೆ*.

---

* ಈ ವಿಷಯ ತಿಳಿಸಿದವರು : ಹುಬ್ಬಳ್ಳಿಯ ಪ್ರೋ: ಆರ್.ಬಿ. ಸರಾಫ ಅವರು.

ಹಬ್ಬ ಹರಿದಿನಗಳು

ಬಡಿಗೇರರು ವಾರ್ಷಿಕ ಮಾಸಿಕ ಹಬ್ಬಗಳನ್ನು ಆಚರಿಸುತ್ತಾರೆ. ಅಮವಾಸೆ ಹುಣ್ಣಿಮೆಗಳಲ್ಲಿ ಮನೆಯಲ್ಲಿ ಕಳಸಹೂಡಿ ದೀಪ ಬೆಳಗಿಸಿ ಪೂಜೆ ಮಾಡುತ್ತಾರೆ. ಆಸ್ತಿಕರು ಉಪವಾಸ ವ್ರತ ಆಚರಿಸುತ್ತಾರೆ. ಯುಗಾದಿ, ಮಹಾನವಮಿ, ದೀಪಾವಳಿ, ಗಣೇಶ ಚತುರ್ಥಿ-ಮುಂತಾದ ಹಬ್ಬಗಳ ಆಚರಣೆಯಲ್ಲಿ ವಿಶೇಷ ಕ್ರಮ ಬಳಸುತ್ತಾರೆ.

ಮಹಾನವಮಿ ಹಬ್ಬ, ದೇವಿಯ ಹಬ್ಬ, ಕಾಳಿಕಾದೇವಿಯ ಹಬ್ಬ ಆಚರಿಸುವವರು. ಒಂಬತ್ತು ದಿನ ಪರ್ಯಂತ ಕಾಳಿಕಾದೇವಿಗೆ ಜರದ ಮಡಿ ಉಡಿಸಿ, ಹೂ ಹಾರಗಳಿಂದ ಅಲಂಕರಿಸಿ ಪೂಜೆ ಮಾಡುವರು. ವಿಶ್ವಕರ್ಮ ಜಯಂತಿಯನ್ನು ಕಡೇ ಶ್ರಾವಣದಲ್ಲಿ ಮೌನೇಶ್ವರ ಜಯಂತಿಯನ್ನು, ಉತ್ಥಾನ ದ್ವಾದಶಿಗೆ ತುಳಸಿ ದಾಮೋದರ ವಿವಾಹವನ್ನು ಅದ್ದೂರಿಯಿಂದ ಆಚರಿಸುವರು.

ಯುಗಾದಿಯಲ್ಲಿ ನಡೆಯುವ ಸಿರಸಂಗಿ ಕಾಳಮ್ಮನ ಜಾತ್ರೆ ಬಡಿಗೇರರಿಗೆ ಅತ್ಯಂತ ಮುಖ್ಯವಾದುದು. ಕಾಳಿಕಾದೇವಿಯು ಚಂಡ ಮುಂಡ ಮುಂತಾದ ಒಂಬತ್ತು ರಾಕ್ಷಸರನ್ನು ಕೊಂದು ಲೋಕ ಕಲ್ಯಾಣ ಸಾಧಿಸಿದ ನೆನಪಿಗಾಗಿ ದೇವಿಯ ತೇರು ಎಳೆಯುವರು. ತೇರು ಎಳೆಯುವ ಹಿಂದಿನ ರಾತ್ರಿ ಅನ್ನವನ್ನು ಅರಿಷಿಣ-ಕುಂಕುಮದಲ್ಲಿ ಮಿದಿದು ಒಂಬತ್ತು ಉಂಡೆಗಳನ್ನು ಮಾಡಿ ಬೆಳಗಿನ ಜಾವ ಸೂರಾಡುತ್ತಾರೆ. ಅದು ಚೆಲ್ಲಾಪಿಲ್ಲಿಯಾಗಿ ಬಿದ್ದಾಗ ಕೈಗೆ ಸಿಕ್ಕಿದ್ದನ್ನು ಭಕ್ತರು ಪ್ರಸಾದವೆಂದು ಸ್ವೀಕರಿಸುತ್ತಾರೆ[೨೬].

ಗ್ರಾಮದೇವತೆಗಳಾದ ದ್ಯಾಮವ್ವ, ಕಾಳವ್ವರ ಪೂಜಾರಿಕೆಯನ್ನು ಮತ್ತು ಹನುಮಂತ, ವೀರಭದ್ರ, ಬಸವಣ್ಣ, ಮೈಲಾರ, ಮಾಸ್ತೆವ್ವ ಮುಂತಾದವರ ಜಾತ್ರೆ ಉತ್ಸವಗಳ ನಿರ್ವಹಣೆಯನ್ನು ಬಡಿಗೇರರು ಮಾಡುವರು - ಹೀಗೆ ಬಡಿಗೇರರ ಹಬ್ಬ ಹರಿದಿನಗಳ ಆಚರಣೆಗಳು ವೈಶಿಷ್ಟ್ಯಪೂರ್ಣವಾಗಿವೆ.

---

೨೬ ಡಾ. ಎಸ್.ಎಂ.ವಿ ಸ್ವಾಮಿ (ಸಂ) - ಜಾನಪದ ಸಾ ದರ್ಶನ-೭ (ಕ.ವಿ.ವಿ. ಧಾರವಾಡ-೧೯೮೨) ಪು : ೧೬೧

ನಂಬಿಕೆ - ಆಚರಣೆಗಳು

ಪಂಚಾಳರಲ್ಲಿ ಸಾಮಾನ್ಯವಾಗಿ ಏಕಪ್ರಕಾರದ ನಂಬಿಕೆ - ಆಚರಣೆಗಳಿವೆ. ಅವರವರ ವೃತ್ತಿಗಳಲ್ಲಿ ವ್ಯತ್ಯಾಸಗಳಿದ್ದರೂ ಗೋತ್ರ ಮೂಲವಾದ ಪಂಥ ಪಂಗಡಗಳಿದ್ದರೂ ಎಲ್ಲದರಲ್ಲಿ ಒಂದೇ ಆಗಿರುವರು.

ಈ ಜಗತ್ತು ವಿಶ್ವಕರ್ಮನ ಶಿಲ್ಪ. ನಿರ್ಗುಣ ಪರಬ್ರಹ್ಮ ಶಕ್ತಿಯಾದ ವಿಶ್ವಕರ್ಮ ಈ ವಿಶ್ವದ ಮೂಲಶಕ್ತಿಯೆಂದು ನಂಬುತ್ತಾರೆ. ಇವರು ವೈದಿಕಾಚರಣೆ ಮತ್ತು ವೇದ ವಿದ್ಯೆಗಳಲ್ಲಿ ನಂಬಿಕೆಯುಳ್ಳವರು.

ಬಡಿಗೇರರು ಒಕ್ಕಲಿಗರು ಒಕ್ಕಲಿಗರ ಕೃಷಿ ಉಪಕರಣಗಳನ್ನು ನಿರ್ಮಿಸಿ ಕೊಡುವಾಗ ಕೆಲವೊಂದು ನಂಬಿಗೆಗಳನ್ನು ಅನುಸರಿಸುತ್ತಾರೆ. ತಾಳ ಕೆತ್ತುವಾಗ ಕೂರಿಗೆ ತುಂಬಿಸಿಕೊಡುವಾಗ ಮೊದಲು ಹಿರಿಕುರುಬ ಹಾಗೂ ಕುಡು ಒಕ್ಕಲಿಗ ಬಳಿಕ ಗೌಡ ಕುಲಕರ್ಣಿ ಕೊನೆಯಲ್ಲಿ ಎಲ್ಲ ರೈತರ ಉಪಕರಣಗಳ ಕೆತ್ತನೆಗೆ ಕೈ ಹಾಕುವರು.

ವಿಧಿ - ನಿಷೇದಗಳು

ಪಂಚಾಳರನ್ನುಳಿದು ಬೇರೆ ಮತದವರೊಡನೆ ಬಡಿಗೇರರಿಗೆ ಏಕಪಂಕ್ತಿ ನಡೆಯಲಾರದು. ಉಲುಪಿಯಿಂದ ಕಾರ್ಯ ಸಾಗಿಸುತ್ತಾರೆ. ಇವರು ಶುದ್ಧ ಶಾಖಾಹಾರಿಗಳು. ಪಂಚಗೋತ್ರದವರು ಯಾರಾದರೂ ಸರಿ ಸ್ವಗೋತ್ರದ ಹೆಣ್ಣು-ಗಂಡಿನ ಕೊಡು-ಕೊಳೆಯನ್ನು ಮಾಡುವುದಿಲ್ಲ. ಚತುರಾಶ್ರಮಗಳನ್ನು, ಷಟ್ಕರ್ಮಗಳನ್ನು ಚಾಚು ತಪ್ಪದೆ ಪಾಲಿಸುವರು. ಯಜ್ಞೋಪವೀತ (ಜನಿವಾರ) ಧರಿಸುವರು. ತಲೆಯ ಮೇಲೆ ಜುಟ್ಟು ಬಿಡುವರು. ಗಾಯತ್ರಿ ಮಂತ್ರ ಪಠಣೆಸುವುದು ತುಳಸಿ ಪೂಜೆ ಮಾಡುವುದು ಪ್ರತಿಯೊಬ್ಬ ವಿಶ್ವಕರ್ಮನ ವಿಧಿ, ನಿಯಮ. ಇದಕ್ಕೆ ಬಡಿಗೇರರು ಹೊರತಾಗಿಲ್ಲ.

ಬ್ರಾಹ್ಮಣ ಹೆಣ್ಣುಮಕ್ಕಳ ಹಾಗೆ ಜನಿವಾರ ಹಾಕಬೇಕೆಂಬ ನಿಯಮವೇನು ಈ ಸಮಾಜದ ಹೆಣ್ಣು ಮಕ್ಕಳಿಗಿಲ್ಲ. ಆದರೆ ಕಚ್ಚೆಯನ್ನು ಹಾಕುವರು ಮತ್ತು ಹಣೆಯಲ್ಲಿ ಬಟ್ಟ ಕುಂಕುಮ ಧರಿಸುವರು.

ಹಳ್ಳಿಯ ವೀರಭದ್ರ ದೇವರ ಜಾತ್ರೆಯಲ್ಲಿ ಬಡಿಗೇರರಿಗೆ ಚಾಜವು

ಇದೆ. ಹಿಂದೆ ಹಳ್ಳಿಗಳಲ್ಲಿ ಒಂದು ಸೀಮೆಯಿಂದ ಇನ್ನೊಂದು ಸೀಮೆಯಲ್ಲಿ ಮಾರಿರೋಗ ಹಬ್ಬದಂತೆ 'ಸೀಮೆ ಲಕ್ಕಮ್ಮ'ಗಳೆಂಬ ಮೂರ್ತಿ ಮಾಡುತ್ತಿದ್ದರು. ಒಕ್ಕಲಿಗರು ಈ ದೇವರಿಗೆ ಸಲ್ಲಿಸುವ ಪಡಿ ಬಡಿಗೇರರದು. ಇದಕ್ಕೆ ಸೀಮೆ ಕಟ್ಟುವುದು ಎಂದು ಕಲಬುರ್ಗಿ ಜಿಲ್ಲೆಯ ಜಂಬಗಿ ಹಳ್ಳಿಯ ರೈತರು ಹೇಳುತ್ತಾರೆ[೨೭]. ಅದೇ ರೀತಿ ಕಾರ ಹುಣ್ಣಿಮೆಗೆ ಕಾರ ಹುಣ್ಣಿಮೆ ಬಂಡಿಗಳನ್ನು ರೈತರಿಗೆ ಮಾಡಿಕೊಡುವ ನಿಯಮವಿದೆ.

ಗ್ರಾಮದೇವತೆಗಳ ಪೂಜಾರಿಕೆ ಬಡಿಗೇರರಿಗೆ ಮೀಸಲು. ಆದರೂ ಬಡಿಗೇರರು ಇತರ ದೇವಸ್ಥಾನ ಮಠ-ಮಾನ್ಯಗಳಿಗೂ ಭಕ್ತರಾಗಿರುವದು ಕಂಡು ಬರುತ್ತದೆ. ಸಿರಸಂಗಿ ಕಾಳಮ್ಮನ ತೇರು ಸಾಗಿಸುವಲ್ಲಿ ಪಂಚಾಳರಿಗಿರುವಂತೆ ಬಡಿಗೇರರಿಗೂ ಪ್ರಾಮುಖ್ಯತೆಯಿದೆ.

ಹೀಗೆ ಪಂಚಾಳರಲ್ಲಿಯೇ ವೈವಿಧ್ಯ ವೈಶಿಷ್ಟತೆಯಿಂದ ನಡೆಯುವ ಬಡಿಗೇರರು ಗ್ರಾಮೀಣ ಸಂಸ್ಕೃತಿಯ ಅನಿವಾರ್ಯ ಅಂಗವಾಗಿದ್ದಾರೆಂಬುದನ್ನು ಮರೆಯಲಾಗದು.

ಸರ್ವಜ್ಞನು ತನ್ನ ವಚನಗಳಲ್ಲಿ ಪಂಚಾಳರ ಮತ್ತು ಬಡಗಿಗಳ ಅವಶ್ಯಕತೆಯನ್ನು ಸಾರಿ ಹೇಳಿದ್ದಾನೆ.

ಕಂಚಿಯ ಫಲ ಲೇಸು ಮಿಂಚು ಮುಗಿಲಿಗೆ ಲೇಸು
ಕೆಂಚನ ಹೆಣ್ಣು ಇರಲೇಸು। ಊರಿಗೊಬ್ಬ
ಪಂಚಾಳ ಲೇಸು ಸರ್ವಜ್ಞ
ಹಡಗು ಗಾಳಿಗೆ ಲೇಸು ಗುಡುಗು ಮುಗಿಲಿಗೆ ಲೇಸು
ಒಡ ಹುಟ್ಟಿದಣ್ಣ ಇರಲೇಸು। ಊರಿಗೊಬ್ಬ
ಬಡಗಿಯೇ ಲೇಸು ಸರ್ವಜ್ಞ[೨೮]

---

[೨೭] ಡಾ. ಡಾ.ವಿ. ಶಿವಾನಂದ - ಒಕ್ಕಲಿಗ (ಜಾ ಸಾ. ದರ್ಶನ-೭ ಕ.ವಿವಿ. ಧಾರವಾಡ-೧೯೮೨) ಪ್ರ: ೯೭

[೨೮] ಎಲ್ ಬಸವರಾಜ (ಸಂ) - ಸರ್ವಜ್ಞನ ವಚನಗಳು (ಗೀತಾ ಬುಕ್ ಹೌಸ್ ಮೈಸೂರು-೧೯೯೮) ಪುಟ : ೧೬೦

ಅಂತೆಯೇ .ಜನಪದ ಸಾಹಿತ್ಯ ಮತ್ತು ಜನಪದ ಗಾದೆ ಹಾಗೂ ಜನ ನುಡಿಯ ಬಳಕೆಗಳಲ್ಲಿ ಬಡಿಗರ ಬಡಿಗ ವೃತ್ತಿಯ ಅನೇಕ ಹೇಳಿಕೆಗಳಿವೆ. ಕೆತ್ತುವವನ ಮುಂದೆ ನಿಲ್ಲಬಾರದು. ಬಡಿವವನ ಹಿಂದೆ ನಿಲ್ಲಬಾರದು, ಕಂಬಾರನಿಗೆ ತುಂಡು ಕಬ್ಬಿಣಬೇಕು. ಬಡಗಿಗೆ ಉದ್ದ ಮರಬೇಕು, ದಣಿ ಹೇಳಾಟ ಬಡಗಿ ಮಾಡಾಟ - ಇತ್ಯಾದಿ.

ಕೊನೆಯದಾಗಿ ಬಡಿಗನನ್ನು ಕುರೀತ ಜನಪದ ತ್ರಿಪದಿಗಳಲ್ಲಿ ಆ ಜನಾಂಗದ ರೀತಿ-ನೀತಿಗಳ ಚಿತ್ರ ಸ್ಪಷ್ಟವಾಗುತ್ತದೆ.

ಬಡಿಗರ ಓಣ್ಯಾಗ ಸೆಡಗಕೀನ್ಹೇಳಲಿ
ಬಿಳಿಯಂಗಿ ಬೆಳ್ಳಿ ಉಡುದಾರ। ಹಾಕ್ಕೊಂಡು
ಬಡಿಗಣ್ಣ ಹೆಡ್ಡಿ ಬಿಗಿದಾನೋ.
ನಾಗಸೂರಿನ ಬಡಿಗ ನಾಶ ತೊಟ್ಟಿಲ ಮಾಡ
ನಾದೂನಿಗೊಂದು ನನಗೊಂದು। ಮನಿಯಾನ
ಸ್ವಾದರತ್ತಿಗೊಂದು ಸೊಸಿಗೊಂದು[೨೯]

ಮುಂತಾದ ಕೆಲವು ತ್ರಿಪದಿಗಳಲ್ಲಿ ಬಡಗಿಯ ಸೇವೆ, ಸಂಬಂಧ ಹಾಗೂ ಆತನ ಬಗೆಗಿರುವ ಮೆಚ್ಚುಗೆಯ ನುಡಿಗಳು ಮನಾಕರ್ಷಕವಾಗಿ ಮೂಡಿಬಂದಿದೆ.

ಬಡಿಗರು ಸಿದ್ಧಪಡಿಸುವ ವಸ್ತುಗಳು

ಹಳ್ಳಿಯ ನೆರೆ ಹೊರೆಗಳಲ್ಲಿ ತಮ್ಮ ಹೊಲಗಳಲ್ಲಿ ಸಿಕ್ಕುವ ಗಿಡ ಮರಗಳನ್ನು ಕಡಿದು ಒಕ್ಕಲಿಗರು ತಂದು ಕೊಟ್ಟ ಕಟ್ಟಿಗೆಯಲ್ಲಿ ಅವರಿಗೆ ಬೇಕಾದ ಗೃಹೋಪಯೋಗಿ, ವ್ಯವಸಾಯೋಪಯೋಗಿ ಉಪಕರಣಗಳನ್ನು ತಯಾರಿಸಿ ಕೊಡುವುದು ಬಡಿಗರ ಕೆಲಸವಾಗಿದೆ. ಇದಕ್ಕಾಗಿ ಒಂದು ಹಳ್ಳಿಯಲ್ಲಿ ತಮ್ಮ ತಮ್ಮ ಆಯದ ಬಡಿಗೇರರನ್ನು ಒಕ್ಕಲಿಗರು ನೇಮಿಸಿಕೊಳ್ಳುವರು. ಇವರನ್ನು 'ಮನೆ ಬಡಿಗ'ರೆಂದು ಕರೆಯುತ್ತಾರೆ.

ಬಡಿಗರು ಸಿದ್ಧಪಡಿಸುವ ಮರಮುಟ್ಟುಗಳನ್ನು ಗಮನಿಸಿ ಅಭ್ಯಾಸದ

---

[೨೯] ಡಾ. ದಸ್ತಗಿರಿ ಅಲ್ಲೀಭಾಯಿ (ಸಂ) - ದಣಿವು ಕಾಣದ ಪದಗಳು (ಸು.ಪ್ರ.ಹುಬ್ಬಳ್ಳಿ-೧೯೮೪) ಪು: ೧೩

ಅನುಕೂಲತೆಗಾಗಿ ಗೃಹ ಬಳಕೆಯ ವಸ್ತುಗಳು ಕೃಷಿ ಉಪಕರಣಗಳು, ಒಕ್ಕಲು (ರಾಶಿ) ಉಪಕರಣಗಳು ಹೊರಾಂಗಣವಸ್ತುಗಳೆಂದು ನಾಲ್ಕು ಭಾಗಗಳಾಗಿ ವಿಂಗಡಿಸಬಹುದು.

i) ಗೃಹ ಬಳಕೆಯ ವಸ್ತುಗಳು

ದಿನನಿತ್ಯದ ಗೃಹ ಬಳಕೆಯ ವಸ್ತುಗಳನ್ನು ಬಡಿಗರು ಆಕರ್ಷಕ ವಿನ್ಯಾಸಗಳಲ್ಲಿ ತಯಾರಿಸಿ ಒಕ್ಕಲಿಗರಿಗೆ ಕೊಡುವರು ಅವರು ತಯಾರಿಸುವ ಉಪಕರಣಗಳೆಂದರೆ - ರೊಟ್ಟಿ ಕ್ವಾಮಣಿಗಿ, ಲತ್ತಿಗುಣಿ, ಲಟ್ಟಿಸುಮಣಿ, ಈಳಿಗಿ ಮಣಿ, ಕೂಡ್ರು ಮಣಿ, ಚೋಂಗೇದ ಮಣಿ, ಕಡಗೋಲು, ಹುಟ್ಟು, ಸವಟು, ಹೊರಸು, ಸ್ಯಾಂವಿಗಿ ಮಣಿ, ಸೆಂಡಿಗಿ ಮಣಿ, ಸಂದುಕ, ಪೆಟ್ಟಿಗೆ, ಗಲ್ಲೇದ ಪೆಟ್ಟಿಗೆ, ಡೊಳ್ಳಾರಿ, ಒನಿಕೆ - ಮುಂತಾದವು.

ii) ಕೃಷಿ ಉಪಕರಣಗಳು :

ಬಡಗಿಯು ರೈತನ ವ್ಯವಸಾಯಕ್ಕೆ ಅಗತ್ಯವಾದ - ರೆಂಟೆ, ಹರಗುವ ಕುಂಟೆ, ಕೂರಿಗೆ, (ಕ್ವಾದಾಳ, ಮುಗ್ಗೂರಿಗೆ, ಚೌಗೂರಿಗೆ) ಬೆಳಸಲ ಕುಂಟೆ, ಎಡಿಕುಂಟಿ, ಪಿಳಗುಂಟಿ ದಿಂಡು, ಎಳಸೆಡ್ಡಿ, ಗುದ್ದಲಿ ಹಿಡಿ, ಸಲಿಕೆ ಹಿಡಿ, ಬಾಗುದ್ದಲಿ ಹಿಡಿ, ಕೊಡ್ಲಿ ಹಿಡಿ, ಪಿಕಾಸಿ ಹಿಡಿ ಬ್ಯಾಕೋಲು, ಬಾರಕೋಲು ಚಕ್ಕಡಿ ಎಕ್ಕಾಗಾಡಿ - ಮುಂತಾದವುಗಳನ್ನು ತಯಾರಿಸಿ ಕೊಡುವನು.

iii) ಒಕ್ಕಲು (ರಾಶಿ ಮಾಡುವ) ಉಪಕರಣಗಳು

ಉತ್ತಿ-ಬಿತ್ತಿದ ಬೆಳೆ ಹುಲುಸಾಗಿ ಬೆಳೆದು ನಿಂತಾದ ರೈತನ ಮೈ-ಮನ ಪುಳಕವಾಗುತ್ತದೆ. ಬೆಳೆ ಕಟಾವು ಮಾಡಿ ಊರ ಸಮೀಪದ ಹೊಲದಲ್ಲಿ ಕಣ ಮಾಡಿ ಹಂತಿ ಕಟ್ಟಿ ರಾಶಿ ಮಾಡಲು ಸಿದ್ಧನಾಗುತ್ತನೆ. ಆಗ ಅವಶ್ಯವಾಗುವ ಉಪಕರಣಗಳನ್ನು ಬಡಿಗನು ತಯಾರಿಸಿ ಕೊಡುತ್ತಾನೆ. ಮೇಟಿ, ಕುಡಗೋಲ (ಹಿಡಿ) ಕುರ್ಚಿಗಿ (ಹಿಡಿ) ಜಂತಗುಂಟಿ, ಗ್ವಾರಿ, ಮ್ಯಾಟಾ, ಬಡಮಣಿ, ಮ್ಯಾರಕೋಲು, ರೂಲು (ಕಲ್ಲಿನ ರೂಲಿಗೆ ಚಟ್ಟು) ನಿಚ್ಚಣಿಕೆ - ಇತ್ಯಾದಿ.

iv) ಹೊರಾಂಗಣ ವಸ್ತುಗಳು

ಗೃಹೋಪಯೋಗಿ, ವ್ಯವಸಾಯೋಪಯೋಗಿ ಉಪಕರಣಗಳಲ್ಲದೆ ಕುಶಲ

ಕರ್ಮಿಯಾದ ಬಡಗಿಯು ಮನೆಗೆ ಬೇಕಾಗುವ ಹೊರಾಂಗಣ ವಸ್ತುಗಳನ್ನು ಕಡಿಮೆ ಖರ್ಚಿನಲ್ಲಿ, ಅಲ್ಪ ಸಮಯದಲ್ಲಿ ತಯಾರಿಸಿ ರೈತನಿಗೆ ನೀಡುತ್ತಾನೆ ಅವನು ತಯಾರಿಸುವ ಹೊರಾಂಗಣ ವಸ್ತುಗಳೆಂದರೆ - ಮಡಗಿ (ಖಂಡೇದ ಮಡಗಿ, ಸಾದಾ ಮಡಗಿ) ಬಾಗಿಲು, ಚೌಕಟ್ಟು, ಹೊಸ್ತಿಲು, ಕಿಡಕಿ, ಕದ, ತೊಲಿ, ಜಂತಿ, ಕಂಭ, ಅಗಳಿ, ಸ್ಟೂಲು, ಮೇಜು, ಕುರ್ಚಿ, ಮಂಚ, ಕಪಾಟು, ಚಾಕು, ಚಂದಾಳ ಗೊಂಬಿ, ತೊಟ್ಟಿಲು ಮೂರುಗಾಲಿನ ಬಂಡಿ, ಬುಗುರಿ, ಉಳಕ - ಮುಂತಾದವು.

ಇವಲ್ಲದೆ ಊರ ದೇವ-ದೇವತೆಯರ ವಿಗ್ರಹ ಕೆತ್ತುವುದು (ಉದಾ : ದುರ್ಗಿ, ಕಾಳಿ, ದ್ಯಾಮವ್ವ, ಲಕ್ಕಮ್ಮ, ಹನುಮಂತ, ಕಾಮಣ್ಣ) ಊರ ಪರಊರ ತೇರು ಕಟ್ಟುವುದು ಕಟ್ಟಿಗೆ ಬಿದಿರುಗಳಿಂದ ಸಿದಿಗೆ* ಸಿದ್ಧಪಡಿಸುವುದು ಕೂಡ ಬಡಿಗನ ಕುಶಲತೇ ಆಗಿದೆ.

ದೇವಾಲಯದೊಳಗಿನ ಕಂಬ ಬಾಗಿಲುಗಳ ಮೇಲು ಸುಳುಹು ಹೊಳಪು ಶ್ರೀ ಕಾರ ಹಾಕುವುದು, ಬಾಗಿಲು ಕದ, ಚೌಕಟ್ಟು ಕಂಬಗಳ ಮೇಲೆ ಸೂಕ್ಷ್ಮ ಆಸೂಕ್ಷ್ಮ ಕುಸುರಿ ವಿನ್ಯಾಸ ಮಾಡುವುದು ಮಕ್ಕಳಾಡುವ ತೊಟ್ಟಿಲುಗಳ ಮೇಲೆ ಮನರಂಜಿಸುವ ಚಿತ್ರ ಬಿಡಿಸುವುದು. ಬಡಿಗನ ಅಗಾಧ ಮೇಧಾ ಶಕ್ತಿ ಮತ್ತು ಕ್ರಿಯಾ ಶಕ್ತಿಯ ದ್ಯೋತಕವಾಗಿದೆ.

---

* ಡಾ. ದಸ್ತಗಿರಿ ಅಲ್ಲೀಭಾಯಿ (ಸಂ) - ದಣಿವು ಕಾಣದ ಪದಗಳು (ಸು.ಪ್ರ.ಹುಬ್ಬಳ್ಳಿ-೧೯೮೪) ಪು: ೧೩

ಬಡಿಗರು ಬಡಿಗಿತನದಲ್ಲಿ ಬಳಸುವ ಕಚ್ಚಾ ಸಾಮಗ್ರಿಗಳು

ಕಟ್ಟಿಗೆಯನ್ನು ಬೆಣ್ಣೆಯಂತೆ ಬಳಸುವ ಕುಶಲ ಬಡಗಿ ಕಟ್ಟಿಗೆಯ ತಾಳಿಕೆ-ಬಾಳಿಕೆ ಅರಿತು ನಾನಾ ಬಗೆಯ ಮರಗಳನ್ನು ಕಡಿದು, ಕೊರೆದು, ಕೆತ್ತಿ, ಉಜ್ಜಿ ಉಪಕರಣಗಳನ್ನು ತಯಾರಿಸುವನು. ಆವನು ಬಳಸುವ ಕಚ್ಚಾ ಸಾಮಗ್ರಿಗಳೆಂದರೆ - ತೇಗು, ಹೆದ್ದೇಗು, ನಂದಿ, ಮತ್ತಿ, ಜಾಲಿ, ಬಿಲ್ವಾರ, ಬೀಟೆ, ಮಾವು, ಬೇವು, ಹುಣಿಸೆ, ಹೊನ್ನಿ, ಬನ್ನಿ, ಆರಿಗ್ಯಾ, ಬಡ್ಯಾ, ವದ್ದಿ, ನೀಲ - ಮುಂತಾದ ಮರಗಳು.

ವಿಶೇಷವೆಂದರೆ ಮನೆ ಮಡಗಿಗೆ, ತೊಟ್ಟಿಲು ತಯಾರಿಕೆಗೆ ಸಾಗವಾನಿ ಕಟ್ಟಿಗೆಯನ್ನು, ರೆಂಟೆ, ಕುಂಟೆ, ಕೂರಿಗೆ, ನೊಗ ಗಾಡಿಗಳಿಗೆ ಜಾಲಿ ಕಟ್ಟಿಗೆಯನ್ನು ಮೇಟಿಗೆ, ಕಂಬಕ್ಕೆ ಬನ್ನಿಯನ್ನು, ಪೀಠೋಪಕರಣಗಳಿಗೆ ಮಾವಿನ ಹಲಿಗೆಯನ್ನು ಬಳಸುವನು. ನಿಚ್ಚಣಿಕೆಗೆ ಡಂಬುಗಳನ್ನು ಎಡಿಕಂಟಿ ಪಿಳಗುಂಟೆಯ ಈಸುಗಳಿಗೆ ದಪ್ಪ ಗಂಡು ಬಿದಿರುಗಳನ್ನು ಇಲ್ಲವೆ ನೀಲಗಿರಿ ಮರದ ಎಳೆಗಳನ್ನು ಉಪಯೋಗಿಸುವನು ಆದರೆ ಹೊಸ್ತಿಲಿಗೆ ಬನ್ನಿಯ ಕಟ್ಟಿಗೆ, ಬೇವಿನ ಮರದ ಕಟ್ಟಿಗೆ ಬಳಸುವುದಿಲ್ಲ.

ಬಡಿಗರು ಬಳಸುವ ಸಾಧನ - ಉಪಕರಣಗಳು

ಮರಮುಟ್ಟುಗಳನ್ನು ತಯಾರಿಸಲು ಬಡಗಿಯು ಕಬ್ಬಿಣ ಮತ್ತು ಕಟ್ಟಿಗೆಯ ಹಲವಾರು ಸಾಧನ - ಸಲಕರಣೆಗಳನ್ನು ಬಳಸುತ್ತಾನೆ. (ಛಾಯಾ ಚಿತ್ರ : ೩) ಮರವನ್ನು ಕಡಿಯಲು ದೊಡ್ಡ ಕೊಡಲಿ, ಕೈಕೊಡಲಿ, ದೊಡ್ಡ ಕರಗಸ, ಉಪಕರಣಗಳನ್ನು ಸಿದ್ಧಪಡಿಸಲು ಕೈ ಕರಗಸ, ದೊಡ್ಡ ಬಾಚಿ, ಕೈಬಾಚಿ, ತಟ್ಟುಳಿ, ಕೀಲುಳಿ, ಮಟ್ಟಲಿಕೆ, ಅರ, ಕೈವಾರ, ಉಚ್ಚುಗೊಡ್ಡ, ಕೊಡತಿ, ಸುತ್ತಿಗೆ, ಎಕ್ಸಾ ಬ್ಲೇಡು, ಸ್ಕ್ರೂಡ್ರಾವರ, ಡ್ರಿಲ್ ಮಶೀನು, ಜಂತ್ರಿ (ತೂತು ಮಾಡುವ ಸಾಧನ) ಟೇಪು, ನುಲಿ - ಇತ್ಯಾದಿ ಉದ್ಯೋಗದ ಪ್ರಮುಖ ಸಾಧನಗಳಾದರೆ; ಉಜ್ಜಲು ಉಸುಗಿನ ಹಾಳೆ, ನುಣುಪು ಮಾಡುವ ಅರ, ಗುರುತು ಮಾಡಲು ಸೀಸ ಪೆನ್ಸಿಲ್, ಪೆನ್ನು, ಕಡುವು, ಮೇಣ, ವುಡ್ ಪಾಲಿಶ್, ಪೆವಿಕಾಲ, ವೆಮಿಕಾಲ, ಸನ್ ಮೈಕ, ಅರಗು, ಕಾಗದ, ಸ್ಪಿರಿಟ್, ಹಲವು ತರದ ಬಣ್ಣಗಳು - ಇವು ಇತರ ವಸ್ತುಗಳಾಗಿವೆ.

ಬಡಗಿತನದ ವಿವಿಧ ಹಂತಗಳು ಮತ್ತು ಪ್ರಕ್ರಿಯೆಗಳು

ರೈತರು ತಂದುಕೊಟ್ಟ ಕಟ್ಟಿಗೆಯನ್ನು ಯಾವ ಉಪಕರಣ ತಯಾರಿಸ ಬೇಕಾಗಿದೆಯೋ ಆ ಉಪಕರಣದ ಉದ್ದ, ಅಗಲ ನೆನಪಿಸಿಕೊಂಡು ಉಪಕರಣಕ್ಕಿಂತಲೂ ಹೆಚ್ಚು ಉದ್ದ ಅಗಲ ಇದೆಯೆಂಬುದನ್ನು ಟೇಪು ಹಿಡಿದು ಅಳೆದು ಖಾತ್ರಿ ಪಡಿಸಿಕೊಳ್ಳುವರು. ಅನಂತರ ಗರಕಸದಿಂದ ಕೊಯ್ದು ಬಾಚಿಯಿಂದ ಕೆತ್ತಿ ಒಂದು ಆಕಾರಕ್ಕೆ ತರಲು ಯತ್ನಿಸುವರು. ತಟ್ಟುಳಿಯಿಂದ ಕತ್ತರಿಸಿ ಕೀಲುಳಿಯಿಂದ ತೂತು ಕೊರೆದು ಉಜ್ಜುಗೊಡ್ಡದಿಂದ ಉಜ್ಜಿ ನುಣುಪು ಮಾಡುವರು. ಆಮೇಲೆ ಚಿಕ್ಕ ಉಳಿಯಿಂದ ಆಕರ್ಷಕವೆನಿಸುವ ಸುಳುಹು - ಹೊಳಹು ಬಿಡಿಸುವರು. (ಛಾಯಾ ಚಿತ್ರ : ೪) ನಂತರ ಪಾಲಿಶ್ ಮಾಡಿ ವಾರನೀಸ ಹಚ್ಚಿ ಹೊಳಪುಗೊಳಿಸುವರು. ರೈತನಿಗೆ ಸಮಾಧಾನವಾಗುವ ರೀತಿಯಲ್ಲಿ ಉಪಕರಣ ಸಿದ್ಧವಾದ ಮೇಲೆ ಅವನಿಗೆ ತಲುಪಿಸಿ ಕುಷಿ ಪಡೆದು ತೃಪ್ತಿಯಿಂದ ಹಿಂದಿರುಗುವರು.

ಬಡಿಗತನದಲ್ಲಿ ಬಳಸುವ ಮೂಲ ವಿನ್ಯಾಸಗಳು

ಬಡಿಗರು ಕಟ್ಟಿಗೆಯ ಗುಣಮಟ್ಟ ಗುರುತಿಸಿ, ಉಪಕರಣಗಳ ಮಹತ್ವ ಅರಿತು ರೈತರ ಮನಸ್ಸಿಗೆ ಮುದ ನೀಡುವಂತಹ ಸುಳುಹು, ಹೊಳಹುಗಳ ವಿವಿಧ ವಿನ್ಯಾಸಗಳನ್ನು ಮೂಡಿಸುವರು. ಬಾಗಿಲಿಗೆ ಸೂರ್ಯ, ಚಂದ್ರ, ನಕ್ಷತ್ರ, ಬಳ್ಳಿ, ಹೂವು-ಕಾಯಿ ತೆಗೆಯುವರು. ತೋಳುಗಳಿಗೆ ಶ್ರೀ ಎಂದು ಓಂ ಎಂದು. ಈಶ್ವರ ಲಿಂಗ ಮುದ್ರೆ ಮೂಡಿಸುವರು. ಕೂರಿಗೆ, ಕುಂಟೆಗಳ ಮೇಲೆ ಬಸವಣ್ಣನ ಚಿತ್ರ ಬಿಡಿಸುವರು. ಮನೆಯಲ್ಲಿ ಕಂಬಗಳ (ಗಜ್ಜರಿ ಗಂಬ, ಸಾದಾ ಗಂಬ, ಚೌಕು ಕಂಬ) ಮೇಲೆ ಆಕರ್ಷಕ ವಿನ್ಯಾಸ ಮೂಡಿಸುವರು. ಚಕ್ಕಡಿಯ ತೋಳು, ಗಾಲಿ, ಹಲ್ಲು, ಬುಟೇವುಗಳ ಮೇಲೆ ಮೋಹಕ ಚಿತ್ರಗಳನ್ನು ಕೆತ್ತುವರು. ನೊಗಗಳ ಮೇಲೆ ಜೋಡು ಎತ್ತಿನ ಚಿತ್ರಗಳನ್ನು ಲಕ್ಷ್ಮೀ ಮೂರ್ತಿಗಳನ್ನು ಬಿಡಿಸುವರು.

ಗೃಹೋಪಯೋಗಿ ಉಪಕರಣಗಳಲ್ಲಿ ಚೊಂಗೇದ ಮಣೆ, ಕೂಡ್ರು ಮಣೆಗೆ ಚೌಕೋನ, ಪಂಚಕೋನಗಳಲ್ಲಿ ಹೂವು ಬಳ್ಳಿ ಮೂಡಿಸುವರು. ಕಡಗೋಲಿನಲ್ಲಿ ವೃತ್ತ, ವಕ್ರರೇಖೆಗಳನ್ನು, ಸಂದುಕ ಮತ್ತು ಡೊಳ್ಳಾರಿಗಳ ಮೇಲೆ ವೃತ್ತ ತ್ರಿಕೋನ, ಚೌಕೋನ, ಪಂಚಕೋನ, ಷಟ್ಕೋನ, ಗಿಡಮರ,

ಬಳ್ಳಿ ಹೂ ಕಾಯಿಗಳನ್ನು ಆಕರ್ಷಕವಾಗಿ ಕೆತ್ತಿ ರಂಗು ರಂಗಿನ ಬಣ್ಣ ಲೇಪಿಸಿರುವರು.

ಮುಸ್ಲೀಮ ಒಕ್ಕಲಿಗರು ಮಾತ್ರ ಉಪಕರಣಗಳ ಮೇಲೆ ಹೂ ಮರ, ಬಳ್ಳಿ ಸುಳುಹು, ಹೊಳಹು ಬಿಟ್ಟರೆ ಯಾವುದೇ ವಿಧವಾದ ಪ್ರಾಣಿ, ಪಕ್ಷಿ ಮೂರ್ತಿಗಳ ಚಿತ್ರಗಳನ್ನು ಬಿಡಿಸಲು ಹೇಳುವುದಿಲ್ಲ.

ಬಡಿಗತನಕ್ಕೆ ಎದುರಾಗುವ ಅಡ್ಡಿ ಆತಂಕಗಳು

ಮೊದಲಿನಂತೆ ರೈತರು ಬಡಿಗರಿಗೆ ಅವಶ್ಯವಾದಷ್ಟು ಕಾಳು-ಕಡಿಗಳನ್ನು ಆಯದ ರೂಪದಲ್ಲಿ ಕೊಡುವುದಿಲ್ಲ. ಕಾಣಿಕೆಯ ರೂಪದಲ್ಲಿ ನೀಡುವುದೂ ಇಲ್ಲ. ಮರ-ಮುಟ್ಟುಗಳು ತಾಳಿಕೆ ಬರಲಾರವು ಎಂದು ರೈತಾಪಿ ಜನರು ನಗರದಿಂದ ಕಬ್ಬಿಣದ ನೇಗಿಲು, ಕುಂಟೆ, ರಾಳ ಮಾಡುವ ಯಂತ್ರಗಳನ್ನು ತಂದು ಬಳಸುವುದರಿಂದ ಬಡಿಗರಿಗೆ ಕೆಲಸ ಕಡಿಮೆಯಾಗಿದೆ.

ಯಾಂತ್ರಿಕ ಪ್ರಗತಿಯಿಂದಾಗಿ ಒಕ್ಕಲಿಗರು ಇಂದು ಯಂತ್ರ ನಿರ್ಮಿತ ಸಾಧನಗಳಿಗೆ ಮೊರೆ ಹೋಗುತ್ತಿದ್ದಾರೆ. ನಗರಗಳಲ್ಲಿ ಈ ಎಲ್ಲ ಕೃಷಿ ಉಪಕರಣಗಳು ದೊರೆಯುವುದರಿಂದ ರೈತರು ಅವುಗಳನ್ನು ಖರೀದಿಸಿ ತಮ್ಮ ಅವಶ್ಯಕತೆ ಪೂರೈಸಿಕೊಳ್ಳುವರು. ಹೀಗಾಗಿ ಗ್ರಾಮೀಣ ಬಡಿಗರು ಬಡಿಗತನ ಮಾಡುವುದನ್ನೇ ನಿಲ್ಲಿಸಿದ್ದಾರೆ. ಇದ್ದಂತ ಕೆಲವೊಂದು ಬಡಿಗಿಗಳು ಹಳ್ಳಿಯಿಂದ ನಗರಕ್ಕೆ ವಲಸೆ ಹೋಗಿ ಕುರ್ಚಿ, ಮೇಜು, ಷೋಕೇಸು, ಟೀಪಾಯಿ, ಕಿಟಕಿ, ಬಾಗಿಲು ತಯಾರಿಸಿ ಧನ ಸಂಪಾದಿಸತೊಡಗಿದ್ದಾರೆ. ಅಲ್ಲದೆ ಅನ್ಯ ಜಾತಿಯವರು ಬಡಿಗತನ ಕೈಕೊಂಡಿದ್ದಾರೆ. ಇದರಿಂದ ನಿಜವಾದ ಬಡಿಗರು ವೃತ್ತಿ ಮೂಲ ಉದ್ಯೋಗ ಕೈಬಿಟ್ಟು ಹೊಟ್ಟೆಯ ಪಾಡಿಗಾಗಿ ಬೇರೆ ಉದ್ಯೋಗ ಅರಸುವ ಅನಿವಾರ್ಯ ಪರಿಸ್ಥಿತಿ ಉಂಟಾಗಿದೆ. ಬಡಗಿಗಳಿಗೆ ಸಕಾಲದಲ್ಲಿ ಕಟ್ಟಿಗೆಗಳು ದೊರೆಯದೇ ಇರುವುದರಿಂದ ಕೆಲಸಕ್ಕೆ ವ್ಯತ್ಯಯವುಂಟಾಗುತ್ತದೆ.

ಹೀಗೆ ಇವೆಲ್ಲ ಅಡ್ಡಿ-ಆತಂಕವನ್ನು ಎದುರಿಸಿ ಬಡಿಗರ ಬಡಿಗ-ವೃತ್ತಿ ಉಳಿದು ಬದುಕಬೇಕಾಗಿದೆ.

ಬಡಿಗತನದಲ್ಲಿ ಬಡಿಗರ ಕುಟುಂಬದ ಸಹಕಾರ

ಬಡಿಗತನದಲ್ಲಿ ಬಡಿಗರ ಕುಟುಂಬದ ಸಹಕಾರ ಮಹತ್ವ

ಪೂರ್ಣವಾದುದು. ಮರಮುಟ್ಟು ಕೊಯ್ಯುವಾಗ ಗರಗಸ ಹಿಡಿಯುವದು, ನೊಗ ಮಾಡಲು ಬಾಚಿಯಿಂದ ಕೆತ್ತುವಾಗ ಇನ್ನೊಂದು ತುದಿಯನ್ನು ಅಲುಗಾಡದಂತೆ ಹಿಡಿಯುವುದು, ಪಾಸು ಕೊರೆಯುವಾಗ, ಕೂರಿಗೆ ತುಂಬಿಸುವಾಗ ಉಪಕರಣಗಳನ್ನು ಇನ್ನೊಬ್ಬರು ಗಟ್ಟಿಯಾಗಿ ಹಿಡಿದು ಸಹಾಯ ಮಾಡುತ್ತಾರೆ. ಉಪಕರಣ ಸಿದ್ಧವಾದ ಮೇಲೆ ಬಡಿಗರ ಮಕ್ಕಳು ಲಾಂಬಿ ಹಚ್ಚಿ ವಾರನೀಸ ಬಳಿದು ಗಾಳಿಗೆ ಅಥವಾ ಬಿಸಿಲಿಗೆ ಆರಲು ಇಡುವರು. ಒಮ್ಮೊಮ್ಮೆ ಸಿದ್ಧಪಡಿಸಿದ ವಸ್ತುಗಳನ್ನು ಹೊತ್ತೊಯ್ದು ರೈತರಿಗೆ ಮುಟ್ಟಿಸಿ ಬರುವರು.

ಬಡಿಗರ ಮನೆ ಹೆಣ್ಣು ಮಕ್ಕಳು ಬೆಳಗಿನ ಜಾವ ಬಡಿಗ ಸಾಲೆ ಕಸ ಹೊಡೆದು ಸ್ವಚ್ಛ ಮಾಡಿ ನೀರು ಚಿಮುಕಿಸಿ ರಂಗೋಲಿ ಹೊಯ್ದು ಭಕ್ತಿಯಿಂದ ಊದಿನ ಕಡ್ಡಿ ಹಚ್ಚುವರು. ಬಡಿಗತನ ಮುಗಿದ ಮೇಲೆ ಬಡಿಗಸಾಲೆಯಲ್ಲಿ ಹರಡಿದ ಬಡಿಗರ ಉಪಕರಣಗಳನ್ನು ಒಪ್ಪ ಓರಣವಾಗಿ ಹೊಂದಿಸಿಟ್ಟು ಚಲ್ಲಾಪಿಲ್ಲಿಯಾಗಿ ಹರಡಿದ ಮರದ ತುಂಡುಗಳನ್ನು ಸೆಕ್ಕೆಗಳನ್ನು, ಪುಡಿಯನ್ನು ಆರಿಸಿ ಸ್ವಚ್ಛಮಾಡಿ ನೀರು ಚಿಮುಕಿಸುವುದು ತಮ್ಮ ಕರ್ತವ್ಯವೆಂದು ತಿಳಿಯುವರು.

ಪ್ರತಿ ಅಮವಾಸ್ಯೆಗೆ, ಮಹಾನವಮಿಯ ಖಂಡೇಯ ಪೂಜೆಗೆ ಬಡಿಗತನದ ಉಪಕರಣಗಳನ್ನು ತೊಳೆದು ಒಪ್ಪವಿಟ್ಟು ಭಕ್ತಿ ಭಾವದಿಂದ ಪೂಜೆ ಸಲ್ಲಿಸುವರು. ಹೀಗೆ ಬಡಿಗತನದಲ್ಲಿ ಬಡಿಗರ ಕುಟುಂಬವೆಲ್ಲ ಸಕ್ರಿಯವಾಗಿ ಪಾಲ್ಗೊಳ್ಳುವುದು ಕಂಡು ಬರುತ್ತದೆ.

ಬಡಿಗತನದ ತರಬೇತಿ :

ಸ್ವಯಂ ಉದ್ಯೋಗ ಕಲ್ಪಿಸಿ ಕೊಡುವ ನಿಟ್ಟಿನಲ್ಲಿ ಯುವಕರಿಗೆ ಸರಕಾರಿ, ಅರೆಸರಕಾರಿ ಸಂಘ ಸಂಸ್ಥೆಗಳು ಹಲವಾರು ವೃತ್ತಿಪರ ತರಬೇತಿ ಕೋರ್ಸುಗಳನ್ನು ತೆರೆದಿವೆ. ಇವುಗಳಲ್ಲಿ ಬಡಿಗತನವು ಒಂದು. ದೊಡ್ಡ ದೊಡ್ಡ ನಗರಗಳಲ್ಲಿ ಬೆಂಗಳೂರು, ಮೈಸೂರು, ಗುಲ್‌ಬರ್ಗಾ, ಬೆಳಗಾಂವಿ ಧಾರವಾಡ ಹುಬ್ಬಳ್ಳಿ - ಮುಂತಾದ ನಗರಗಳಲ್ಲಿ ಬಡಿಗತನದ ತರಬೇತಿ ನೀಡಲಾಗುತ್ತದೆ.

ಗದುಗಿನಲ್ಲಿ ITI ಎನ್ನುವ ಹೆಸರಿನಲ್ಲಿ ಆಧುನಿಕ ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುವ ತರಬೇತಿ ಕೊಡುತ್ತಾರೆ. ಧಾರವಾಡದ ಎನ್‌ಟಿಟಿಎಫ್‌ದಲ್ಲಿ, ಬಳ್ಳಾರಿಯಲ್ಲಿ ಬಡಿಗತನದ ತರಬೇತಿ ವರ್ಗಗಳು

ನಡೆಯುತ್ತವೆ. ಹುಬ್ಬಳ್ಳಿಯ ಸರಕಾರಿ ITI ಕೇಂದ್ರದಲ್ಲಿ ಕಳೆದ ೨೬ ವರ್ಷಗಳಿಂದ ಪ್ರತಿ ವರ್ಷ ವಿದ್ಯಾರ್ಥಿಗಳಿಗೆ ಬಡಿಗತನದ ತರಬೇತಿ ನೀಡಿ ಸ್ವಂತ ಉದ್ಯೋಗ ಕೈಗೊಳ್ಳುವ ಸುವರ್ಣ ಅವಕಾಶವನ್ನು ಕಲ್ಪಿಸಿಕೊಡಲಾಗಿದೆ. ಉದ್ಯೋಗದಲ್ಲಿ ಶ್ರದ್ಧೆ, ವಿಶ್ವಾಸ, ನಂಬಿಕೆ ಇದ್ದಾಗ ಮಾತ್ರ ತರಬೇತಿ ಸಾರ್ಥಕವಾಗುತ್ತದೆಯೇ ಹೊರತು ಇಂಥ ಲಘು ಅವಧಿಯ ತರಬೇತಿಗಳಿಂದಲ್ಲ. ಆದರೂ ಈ ಬಡಗಿತನದ ತರಬೇತಿಗಳು ಅಲ್ಪಸ್ವಲ್ಪ ವಿದ್ಯೆಯ ಪರಿಚಯ ಮಾಡಬಲ್ಲವು.

ನಮ್ಮ ಸರಕಾರವು ಗ್ರಾಮೀಣ ವಿಕಾಸ ಯೋಜನೆಯಲ್ಲಿ ಬಡಿಗರಿಗೆ ಬಡಿಗರ ಕುಟುಂಬಕ್ಕೆ ವಿಶೇಷ ತರಬೇತಿ ನೀಡಿ ಧನ ಸಹಾಯ ಒದಗಿಸಿದರೆ ಬಡಿಗರ ಕುಟುಂಬಗಳು ಬದುಕಿ ಉಳಿಯಬಹುದು ಬಡಿಗತನವು ನೆಲೆಯಾಗಿ ನಿಲ್ಲಬಹುದೆಂದು ಆಶಯ ಪಡಬಹುದಾಗಿದೆ.

ಬಡಿಗ ವೃತ್ತಿ ಪಾರಿಭಾಷಿಕ ಪದಗಳು

ಇದು ಯಂತ್ರಯುಗ. ಯಂತ್ರೋಪಕರಣಗಳ ಸಹಾಯದಿಂದ ಏನೆಲ್ಲವೂ ಸಾಧ್ಯವಾಗಬಹುದು. ಆದರೆ ನಮ್ಮ ಕೃಷಿಕ ಪದ್ಧತಿ ಇಂದು ಮಾಯವಾಗುತ್ತಿದೆ. ಕೃಷಿಕರಿಗೆ ಸಂಬಂಧಿಸಿದ ಆಯಗಾರರ ವೃತ್ತಿಗಳು ಕ್ರಮೇಣವಾಗಿ ಅಗೋಚರವಾಗುತ್ತಿವೆ. ಉತ್ತುವ ಕಬ್ಬಿಣ ನೇಗಿಲುಗಳು ಬಿತ್ತುವ ಕಬ್ಬಿಣ ಕೂರಿಗೆಗಳು ಮಾರುಕಟ್ಟೆಯಲ್ಲಿ ಲೆಕ್ಕವಿಲ್ಲದಷ್ಟು ದೊರೆಯುತ್ತವೆ. ಒಕ್ಕಲು ಮಾಡುವ ಯಂತ್ರಗಳು ಹಳ್ಳಿಗಳಲ್ಲೇ ನೆಲೆಯೂರಿವೆ. ಇದರಿಂದ ನಾವು ಆರ್ಥಿಕವಾಗಿ ಮುಂದಾದರೂ ಹಿಂದಿನ ಕಾಲದ ಶಾಂತಿ ಸಮೃದ್ಧಿಗಳು ಅಪೂರ್ವವಾದ ಗ್ರಾಮೀಣ ಜೀವನ ಸೌಂದರ್ಯ ಇದಕ್ಕೆ ಸಂಬಂಧಿಸಿದ ಜಾನಪದ ವಸ್ತು, ಸಾಹಿತ್ಯ ಕಣ್ಮರೆಯಾಗುತ್ತಿರುವದು ವಿಷಾದನೀಯವೇ ಸರಿ. ಆದುದರಿಂದ ಹಳ್ಳಿಗಳಲ್ಲಿನ ವ್ಯವಸಾಯಕ್ಕೆ ಸಂಬಂಧಿಸಿದ ಪದಗಳನ್ನು ಆಯಗಾರರ ವೃತ್ತಿಗೆ ಸಂಬಂಧಿಸಿದ ಪದಗಳನ್ನು ಪ್ರತ್ಯೇಕವಾಗಿ ಸಂಗ್ರಹಿಸಿ ಪದಕೋಶವನ್ನು ಸಂಕಲನಗೊಳಿಸಬೇಕು. ಈವರೆಗೆ ರಚಿತವಾದ ಕನ್ನಡ ಕೋಶಗಳಿಗಿಂತ ಇದು ಭಿನ್ನವಾಗಿ ನಿಲ್ಲಬಹುದು. ಈ ನಿಟ್ಟಿನಲ್ಲಿ ಬಡಿಗರು ತಯಾರಿಸುವ ಮರ - ಮುಟ್ಟುಗಳನ್ನು ಮಾತ್ರ ಗಮನಿಸಿ ಬಡಿಗ ವೃತ್ತಿ ಪಾರಿಭಾಷಿಕ ಪದಕೋಶವನ್ನು ಹೀಗೆ ಸಿದ್ಧಪಡಿಸಬಹುದು.

i) ಗೃಹೋಪಯೋಗಿ ವಸ್ತುಗಳು :

ಒನಕೆ : ಭತ್ತ, ಜೋಳ, ಗೋಧಿ ಕುಟ್ಟಲು ಉಪಯೋಗಿಸುವ ಉಪಕರಣ

ಕಡಗೋಲು : ಮೊಸರು ಕಡೆದು ಬೆಣ್ಣೆ ತೆಗೆಯಲು ಬಳಸುವ ವಸ್ತು

ಕ್ವಾಮಣಿಗೆ : ಜೋಳದ ರೊಟ್ಟಿ ಮಾಡಲು ಬಳಸುವ ಉಪಕರಣ

ಕೂಡ್ರುಮಣಿ : ಅಡಿಗೆ ಮಾಡುವಾಗ ಕೂಡ್ರಲು ಉಪಯೋಗಿಸುವ ಚಿಕ್ಕ ಮಣೆ

ಕುಂಕುಮಭರಣಿ : ಕುಂಕುಮ ಹಾಕಿಡಲು ಬಳಸುವ ಉಪಕರಣ

ಚೋಂಗೇಮಣಿ : ಮೊಹರಂ ಆಚರಣೆಯಲ್ಲಿ ಚೋಂಗೆ (ವಿವಿಧ ವಿನ್ಯಾಸದ ಗೋಧಿ ರೊಟ್ಟಿ) ಮಾಡಲು ಬಳಸುವ ಕಟ್ಟಿಗೆಯ ಉಪಕರಣ.

ಡೊಳ್ಳಾರಿ : ಮಂಗಲ ಕಾರ್ಯ ನೆರವೇರಿಸಲು ಬಳಸುವ ಕಟ್ಟಿಗೆಯ ಮಣೆ

ತೊಟ್ಟಿಲು : ಚಿಕ್ಕ ಮಕ್ಕಳನ್ನು ತೂಗಲು ಉಪಯೋಗಿಸುವ ವಸ್ತು. ಇದರಲ್ಲಿ ಸಾದಾ ತೊಟ್ಟಿಲು, ಬಣ್ಣದ ತೊಟ್ಟಿಲು ಕಬ್ಬಿಣದ ತೊಟ್ಟಿಲು ಎಂದು ಇವೆ.

ಲಟ್ಟಿಸುಮಣಿ-ಲತ್ತಿಗುಣಿ : ಚಪಾತಿ, ಹೋಳಿಗೆ ಮಾಡಲು (ಲಟ್ಟಿಸಲು) ಬಳಸುವ ಉಪಕರಣ

ಸ್ಯಾಂವಿಗಿ ಮಣೆ : ಸ್ಯಾಂವಿಗೆ ಹೊಸೆಯಲು ಬಳಸುವ ಕಟ್ಟಿಗೆ ಹಲಿಗೆ

ಸುಟ್ಟು : ಕಿಚಡಿ, ಗೋದಿಹುಗ್ಗಿ, ಸ್ವಾರು ತಯಾರಿಸುವಾಗ ಬಳಸುವ ಉಪಕರಣ. ಚಿಕ್ಕದಾಗಿದ್ದರೆ ಸವಟು ಎನ್ನುವರು.

ಹೊರಸು : ಬಾಣಂತಿಗೆ ಮಲಗಲು, ಉಳಿದ ದಿನಗಳಲ್ಲಿ ಕೂಡ್ರಲು ಬಳಸುವ ವಸ್ತು. ಇದನ್ನು ಕಟ್ಟಿಗೆಯಿಂದ ತಯಾರಿಸಿ ಮೆದೆ ಹುಲ್ಲಿನ ಹಗ್ಗದಿಂದ ಹೆಣೆದಿರುತ್ತಾರೆ.

ii) ಒಕ್ಕಲುತನ (ಕೃಷಿ) ಉಪಕರಣಗಳು :

ಈಸು : ಚಕ್ಕಡಿ, ಕೂರಿಗೆ, ಕುಂಟೆಗಳಿಗೆ ಉಪಯೋಗಿಸುವ ಕೋಲುಗಳು

ಎಡಿಕುಂಟಿ : ಬೆಳೆಗಳಲ್ಲಿ ಕಳೆ ತೆಗೆಯಲು, ಮಣ್ಣು ಏರಿಸಲು ಹೂಡುವ ಉಪಕರಣ

ಕುಂಟೆ : ಹರಗುವ ಸಾಧನ ಇದಕ್ಕೆ 'ಗಳೆ' ಎಂದೂ ಸಹ ಕರೆವರು.

ಕುಡಗೋಲು : (ಕೊಂಕು + ಕೋಲು. ಹ.ಗ.) ಕೊಯ್ಯುವ ಉಪಕರಣ

ಕುರ್ಚಿಗಿ : (ಕುರ್ + ಪಿ. ಹ.ಗ.) ಕೆತ್ತನೆಯ ಉಪಕರಣ, ಹರಗುವಾಗ ಮತ್ತು ಕಳೆ ಕೆತ್ತುವಾಗ ಉಪಯೋಗಿಸುವರು. ಕುರುಪಿ ಎಂದೂ ಅನ್ನುವರು.

ಕೂರಿಗೆ : (ಕೂರ್ + ಗೆ. ಹ.ಗ.) ಬಿತ್ತುವ ದಿಂಡಿನ ಉಪಕರಣ. ಇದರಲ್ಲಿ ಕ್ವಾದಾಳ, ಮುಗ್ಗೂರಿಗಿ, ಚೌಗೂರಿಗಿ ಎಂಬ ಪ್ರಕಾರಗಳಿವೆ.

ಗುದ್ದಲಿ : (ಸಂ. ಕುದ್ದಾಲ) ಮಣ್ಣು ಅಗೆಯುವ ಚೂಪಾದ ಉಪಕರಣ. ಸಣ್ಣದಾಗಿದ್ದರೆ ಬಾಯಿಗುದ್ದಲಿ ಎನ್ನುವರು.

ತಾಳು : ಕೂರಿಗೆ, ಕುಂಟೆ, ಎಡೆದಿಂಡುಗಳಿಗೆ ಜೋಡಿಸಿದ ಕೆತ್ತನೆಯ ಕಟ್ಟಿಗೆ

ನಿಚ್ಚಣಿಕೆ : ಬಣವಿ, ಮಾಳಿಗೆ ಹತ್ತಲು ಡಂಬು ಬಿದಿರುಗಳಿಂದ ತಯಾರಿಸಿದ ೭ ರಿಂದ ೧೨ ಹಲ್ಲುಗಳ ಉಪಕರಣ.

ನೊಗ : ದಿಂಡು, ಗಾಡಿಗಳನ್ನೆಳೆಯಲು, ಕುಂಟಿ ಕೂರಿಗೆ ಎಳೆಯಲು ಎತ್ತಿನ ಹೆಗಲ ಮೇಲಿರುವ ಕಟ್ಟಿಗೆಯ ಗಂಡು ಕೊರಡು. ಇದರಲ್ಲಿ ಚಕ್ಕಡಿ ನಗ, ಕುಂಟಿನಗ, ಕೂರಿಗೆ ನಗ, ಬೆಳಸಲ ನಗ, ಎಡಿಕುಂಟಿ ನಗ ಎಂದಿವೆ.

ಪಳಿ : ನೆಲಸಮ ಮಾಡುವ ಉಪಕರಣ. ಇದಕ್ಕೆ ದಿಂಡು ಎಂದು ಕರೆವರು. ದಿಂಡು ಹೊಡೆದ ಹೊಲ ಚಂದ - ಎನ್ನುವ ಗಾದೆಯಿದೆ.

ಪಾಸು : ಬೀಜವನ್ನು ಎಲ್ಲಾ ಕೋಲುಗಳಲ್ಲಿ ಸಮಾನವಾಗಿ ಬಿಡುವ ರಂಧ್ರದ ಕೊರಡು. ಇವು ಸೆಡ್ಡಿ ಬಟ್ಟಲಕ್ಕೆ ಇರುತ್ತವೆ.

ಪಿಕಾಸಿ : (pick-axe) ಎರಡು ಕಡೆ ಮೊನಚಾಗಿರುವ ಕಬ್ಬಿಣದ ಗುದ್ದಲಿ.

ಬಡಮಣೆ : ಕಾಳಿನ ತೆನೆಗಳನ್ನು ಬಡಿಯಲು ಉಪಯೋಗಿಸುವ ಕಟ್ಟಿಗೆಯ ವಸ್ತು

ಬಾರಕೋಲು : ಎತ್ತಿಗೆ ಹೊಡೆಯುವ ಬಾರಿನ ಕಟ್ಟಿಗೆ

ಬ್ಯಾಕೋಲು : ಎಡೆದಿಂಡಿನ ಮೇಲೆ ಭಾರ ಹಾಕಲು ಉಪಯೋಗಿಸುವ ದಿಕ್ಕಿನ ಕಟ್ಟಿಗೆ

ಮೇಳಿ : ದಿಂಡು ಎತ್ತಿಡಲು ಉಪಯೋಗಿಸುವ ಕಟ್ಟಿಗೆ. ಇದರಲ್ಲಿ ಕೂರಿಗೆ ಮೇಳಿ, ಕುಂಟಿ ಮೇಳಿ, ರೆಂಟಿ ಮೇಳಿ ಎಂದು ಪ್ರಕಾರಗಳಿವೆ.

ಸಲಿಕಿ : (ಸಂ: ಶಲಾಕಾ) ಮಣ್ಣು ಎಳೆಯುವ ಉಪಕರಣ.

ಒಕ್ಕಲು (ರಾಶಿ) ಉಪಕರಣಗಳು :

ಜಂತಗುಂಟಿ : ಹಲ್ಲುಗಳಿರುವ ಕಟ್ಟಿಗೆಯ ಉಪಕರಣ. ತೆನೆಜಗ್ಗಲು, ತುಳಿಸಿದ ಗೋದಿ ಹುಲ್ಲು ಮಡ್ಡಿ ಮಾಡಲು, ಹೊಟ್ಟಿನ ಬಣವೆ ಬಟ್ಟಲು ಇದನ್ನು ಉಪಯೋಗಿಸುವರು

ಗ್ವಾರಿ : ರಾಶಿ ಕಾಲದಲ್ಲಿ ಉಪಯೋಗಿಸುವ ಅರ್ಧ ಚಂದ್ರಾಕೃತಿಯ ಉಪಕರಣ

ಮ್ಯಾಟಾ : ರಾಶಿ ತೂರಲು ಮೇಲೇರಿ ನಿಲ್ಲುವ ಮೂರು ಕಾಲಿನ ಮಣೆ

ಮೇಟಿ : ರಾಶಿ ಮಾಡುವ ಕಣದಲ್ಲಿ ಮಧ್ಯ ನೆಡುವ ಕಂಭ

ಚಕ್ಕಡಿಯ ಭಾಗಗಳು

ಓಟಿ	:	ಅಚ್ಚಿನ ಮೇಲ್ಭಾಗದಲ್ಲಿರುವ ಕಟ್ಟಿಗೆ
ಕಳಗ	:	ತೋಳಿನ ಮೇಲ್ಭಾಗ ಮತ್ತು ಡಂಬರಿಗೆ ಮಧ್ಯವಿರುವ ಕೋಲುಗಳು.
ಗಾಲಿ	:	ಚಕ್ಕಡಿಯನ್ನು ನಡೆಸಲು ಉರುಳಿಸುವ ಗೋಲಾಕಾರದ ಚಕ್ರ
ತೊಟ್ಟಿಲು	:	ಚಕ್ಕುಡಿಯಲ್ಲಿ ಕೂಡುವ ಸ್ಥಳ, ತೊಟ್ಲ, ಸಾಟಾ ಎಂಬ ಹೆಸರುಗಳಿವೆ.
ಬುಟೇವು	:	ಗಾಲಿಯ ಹಲ್ಲುಗಳ ಮುಂದೆ ಕೂಡಿಸಿರುವ ಕಟ್ಟಿಗೆಯ ಪಟ್ಟಿಗಳು
ಮೂಕ	:	ಚಕ್ಕಡಿಯ ಈಸು ನೆಲಕ್ಕೆ ಹತ್ತದಂತೆ ಅನಿಸಿರುವ ಮುಂಭಾಗದ ಆಧಾರ ಕಟ್ಟಿಗೆ ಇದಕ್ಕೆ ಕುದುರೆ ಎಂದು ಸಹ ಅನ್ನುವರು.
ಹಲ್ಲು	:	ಗಡ್ಡಿ ಮತ್ತು ಬುಟೇವುಗಳನ್ನು ಜೋಡಿಸುವ ಹನ್ನೆರಡು ಆಯತ ಆಕಾರದ ಕೊರೆದ ಚಕ್ರದ ಹಲ್ಲುಗಳು.

ಗ್ರಂಥ ಋಣ

ಈಶ್ವರಪ್ಪ ಎಂ.ಜಿ. : ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ. ಕ ಸಾ.ಪ. ಬೆಂಗಳೂರು - 1995


ಕರಿಶೆಟ್ಟಿ ರುದ್ರಪ್ಪ : ಮ್ಯಾಸ ನಾಯಕರು ಒಂದು ಜನಾಂಗಿಕ ಅಧ್ಯಯನ ಕ ಸಾ ಪ ಬೆಂಗಳೂರು - 1995

ಕುಮಾರಸ್ವಾಮಿ ಕೆ.ಎಸ್. : ಪ್ರಾಚೀನ ಕರ್ನಾಟಕದಲ್ಲಿ ಶಿಲ್ಪಾಚಾರಿಯರು. ಕ ಸಾ ಪ ಬೆಂಗಳೂರು - 1996


ಗುಬ್ಬಣ್ಣವರ ಎಸ್.ವಿ.	:	ಲಿಂಗಾಯಿತ ಸಂಸ್ಕಾರಗಳು ಕ.ವಿ.ವಿ. ಧಾರವಾಡ - 1984
ಚಿದಾನಂದ ಮೂರ್ತಿ ಎಂ.	:	ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮೈ.ವಿ.ವಿ. ಮೈಸೂರು - 1979
ಜ್ಞಾನಾನಂದ ಜಿ	:	ಭಾರತೀಯ ಸಂಸ್ಕೃತಿಗೆ ವಿಶ್ವ ಬ್ರಾಹ್ಮಣರ ಕೊಡುಗೆ ಜ್ಞಾನ ಭಂಡಾರ ಕೆ.ಜಿ.ಎಫ್ - 1976
ಜೀವಣ್ಣ ಮಸಳಿ (ಸಂ)	:	ಮೌನೇಶ್ವರ ವಚನ ಸಂಗ್ರಹ ವಿ.ದ.ಪ್ರ ಬಾಗಲಕೋಟೆ - 1987
ಥಂಗ ಡಿ.ಬಿ.	:	ಜನಾಂಗ ಪರಿಚಯ ಪೆರಿಯಾರ ಪ್ರಕಾಶನ ಧಾರವಾಡ - 1988
ದಸ್ತಗೀರ ಅಲ್ಲೀಭಾಯಿ (ಸಂ)	:	ದಣಿವು ಕಾಣದ ಪದಗಳು ಸುಲಲಿತ ಪ್ರಕಾಶನ ಹುಬ್ಬಳ್ಳಿ - 1984
ದಸ್ತಗೀರ ಅಲ್ಲೀಭಾಯಿ(ಸಂ)	:	ಉತ್ತರ ಕರ್ನಾಟಕದ ಜನಪದ ಒಡಪುಗಳು ಭಾವೈಕ್ಯ ಸಾಹಿತ್ಯ ಪ್ರಕಾಶನ ಹುಬ್ಬಳ್ಳಿ - 1992
ನಾವಲಗಿ ಸಿ.ಕೆ	:	ಜಾನಪದ' ಸ್ಪಂದನ ಭರತ ಪ್ರಕಾಶನ ಗೋಕಾಕ - 1989
ಬಸವರಾಜ ಎಲ್(ಸಂ)	:	ಸರ್ವಜ್ಞನ ವಚನಗಳು ಗೀತಾ ಬುಕ್ ಹೌಸ್ ಮೈಸೂರು - 1988
ಮುತ್ತಾಚಾರ್ಯ ಟಿ.ವಿ(ಸಂ)	:	ವಿಶ್ವಕರ್ಮ ಕಲಾ ಸಂ : 2 ಸಂ : 6 ಎಲ್ ಶಿವಲಿಂಗಯ್ಯ, ಜಯಮಹಲ್

		ಬೆಂ- 1989
ರಾಜೇಂದ್ರ ಡಿ.ಕೆ (ಸಂ)	:	ಜಾನಪದ ಸಂಭಾವನೆ ತ.ವೆಂ. ಸ್ಮಾರಕ ಗ್ರಂಥಮಾಲೆ ಮೈಸೂರು 1991
ಲಕ್ಕಪ್ಪಗೌಡ ಎಚ್.ಜೆ(ಸಂ)	:	ವಿಶಿಷ್ಟ ಜಾನಪದ ಮೈ ವಿ.ವಿ. ಮೈಸೂರು - 1984
ಲಕ್ಷ್ಮಣ ತೆಲಗಾಂವಿ (ಸಂ)	:	ಸಂಶೋಧನೆ ಚಿದಾನಂದಮೂರ್ತಿ ಅ.ಸ. ಬೆಂಗಳೂರು - 1991
ವೃಷಭೇಂದ್ರಸ್ವಾಮಿ ಎಸ್.ಎಂ(ಸಂ)	:	ಜಾನಪದ ಸಾಹಿತ್ಯ ದರ್ಶನ ಭಾಗ-7 ಕ.ವಿ.ವಿ. ಧಾರವಾಡ - 1982
ಸೂರ್ಯನಾಥ ಕಾಮತ್(ಸಂ)	:	ಧಾರವಾಡ ಜಿಲ್ಲೆ ಗೆಜಟಿಯರ ಕರ್ನಾಟಕ ಸರಕಾರ - 1995


i) ಗೃಹ ಬಳಕೆಯ ವಸ್ತುಗಳು




ii) ಕೃಷಿ ಉಪಕರಣಗಳು




ಚಕ್ಕಡಿ (ಬಂಡಿ)ಯ ಭಾಗಗಳು



ಕೃಷಿ ಉಪಕರಣಗಳು




ಎಡಿ ಹೊಡೆಯಲು ಸಿದ್ಧವಾದ ಪಿಳಗುಂಟಗಳು




ಒಕ್ಕಲಿಗನ ಮುಖ್ಯ ಕೃಷಿ ಉಪಕರಣ : ಚಕ್ಕಡಿ


iii) ಒಕ್ಕಲು ಉಪಕರಣಗಳು




iv) ಒಳಾಂಗಣ ವಸ್ತುಗಳು




ಸ್ಟೂಲು




ಟೇಬಲ್ಲು




ಕುರ್ಚಿ




ಮಂಚ.





ತೊಟ್ಟಿಲು

ಬಡಿಗರು ಬಳಸುವ ಸಾಧನಗಳು



ಬಾಚಿ, ಕರಗಸ, ಉಚ್ಚಗೊಡ್ಡ ಕೊಡಲೆ, ಉಳಿ - ಮುಂತಾದವು

ಬಡಗಿತನದ ವಿವಿಧ ಹಂತಗಳು – ಪ್ರಕ್ರಿಯೆಗಳು



ಚಕ್ಕಡಿ ನೊಗ ಸಿದ್ದಪಡಿಸುತ್ತಿರುವ ಆಯಗಾರ ಮಲ್ಲಪ್ಪ
(ಸಾ। ಸೊಟಕನಹಾಳ ತಾ।। ನವಲಗುಂದ ಜಿಲ್ಲಾ : ಧಾರವಾಡ)

ಉತ್ತರ ಕನ್ನಡದಲ್ಲಿ ಬಡಿಗತನ

ಆರ್.ಜಿ. ಶ್ಯಾನಭಾಗ,

ಬಡಿಗತನ ಮನುಕುಲದಷ್ಟೇ ಪುರಾತನವಾದುದು. ಯಮ ಮಹರ್ಷಿ ತನ್ನ ಪೀಳಿಗೆ ಉಳಿಸಿಕೊಳ್ಳಲು ಕಟ್ಟಿಗೆಯ ಹಡಗಿನ ಮೂಲಕ ಯಾನ ಮಾಡಿದ್ದು ಜ್ಞಾಪಿಸಿಕೊಳ್ಳಬಹುದು. ಎಂದು ಆದಿಮಾನವ ಮರದ ಮೇಲೆ ಕೊಡಲಿ ಪ್ರಯೋಗಿಸಿದ್ದನೋ ಅಂದಿನಿಂದ ಬಡಿಗತನಕ್ಕೆ ನಾಂದಿ ಇಟ್ಟಂತಾಯಿತು. ಶಿಲಾಯುಗದಿಂದ ಕಬ್ಬಿಣಯುಗದ ನವನಾಗರಿಕತೆಯು ಹೊಸ್ತಿಲಿಗೆ ಕಾಲಿಟ್ಟಂದಿನಿಂದ ವ್ಯವಸ್ಥಿತ ಬಡಿಗತನಕ್ಕೆ ಸುಗಮವಾದ ಹಾದಿ ದೊರಕಿದಂತಾಗಿದೆ.

ಏಸುಕ್ರಿಸ್ತನ ತಂದೆ ಜೋಸೆಫ್ ಸೇರಿದಂತೆ ಆತನೂ ಬಡಿಗ ವೃತ್ತಿಯನ್ನಾರಂಭಿಸಿದ ಎನ್ನುವುದಕ್ಕೆ ಬೈಬಲ್ ಸಾಕ್ಷಿ. ಪುರಾಣ ಜಾನಪದ, ಇತಿಹಾಸ ಹಾಗೂ ಸಾಹಿತ್ಯಗಳ ತೆಕ್ಕೆಯಲ್ಲಿ ಬಡಿಗತನದ ಬಗ್ಗೆ ವ್ಯಾಪಕ ಮಾಹಿತಿಗಳು ಲಭ್ಯ ಇದೆ. ಸಾಹಿತ್ಯ ಬಡಿಗತನವನ್ನು ಬಾಚಿ ಕಾಯಕವೆಂದು ವಚನದಲ್ಲಿ ಉಲ್ಲೇಖಿಸಿದೆ. ಬಾಚಿಗೆ ಬಡಿಗತನದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಇದ್ದಿರುವುದೇ ಕಾರಣ. ಬಾಚಿ ಕಾಯಕದ ಬಸಪ್ಪನೆಂಬ ವಚನಕಾರ ಶರಣರ ಕಾಲದ ಬಡಗಿ? ಬಾಚಿ - ಉಳಿಗಳು ಬಡಿಗಿ ಕಾಯಕಕ್ಕೆ ಅಗತ್ಯ ಸಾಧನಗಳೆನ್ನುವುದು ಆತನ ಅಂಬೋಣ. "ಕೈ ತಪ್ಪಿ ಕೆತ್ತಲು ಕಾಲಿಂಗೆ ಮೂಲ" ಎಂದರೆ ಕೆತ್ತುವಾಗ ಕೈ ತಪ್ಪಿದರೆ ಬಾಚಿ ಕಾಲಿಗೆ ತಾಗಿ ಅಪಾಯ ಸಂಭವಿಸಬಹುದಾಗಿದೆ ಎಂದು ಬಾಚಿ ಕಾಯಕದ ಬಸಪ್ಪಯ್ಯ ಪುಣ್ಯಸ್ತ್ರೀ ಕಾಳವ್ವಗಳ ವಚನದಲ್ಲಿ ಎಚ್ಚರಿಸಿದ್ದಾನೆ. ಕಾಮಾಟದ ಭೀಮಣ್ಣನೆಂಬ ಶರಣ ಮನೆಕಟ್ಟಲು ಬೇಕಾದ ಮರಮುಟ್ಟಿನ ಕೆಲಸ ಮಾಡುವ ಬಡಗಿ. ಕಾಮಾಟ ಎಂದರೆ ಮನೆ ಕಟ್ಟುವ ಕಾಯಕ. ಇದರಿಂದಾಗಿ ಭೀಮಣ್ಣನಿಗೆ ಕಾಮಾಟ ಎಂಬ ವಿಶೇಷಣ ಹೆಸರಿಂದ ಒಡಗೂಡಿ ಬಂದಿದೆ. ಕಾಯಕದ ಮಾಹಿತಿಯನ್ನು ಆತ ವಚನದಲ್ಲಿ ಸೊಗಸಾಗಿ ಕಡೆದು ನಿಲ್ಲಿಸಿದ್ದಾನೆ. ಮನೆ ಕಟ್ಟುವ ಕೆಲಸದವನಿಗೆ ಇಂದಿಗೂ ಕಾಮಾಟಿ ಎಂದು ಕರೆಯುವ ರೂಢಿ ಇದೆ.

•

ಮರ ಕಡಿದು ಕೆತ್ತಿ ಗೃಹನಿರ್ಮಾಣ ಉಪಕರಣಗಳು ಗೃಹೋಪಯೋಗಿ

ಉಪಕರಣಗಳು ರೈತೋಪಯೋಗಿ ಉಪಕರಣಗಳು ಮುಂತಾದವುಗಳನ್ನು ಪಾರಂಪರಿಕವಾಗಿ ಮಾಡುತ್ತ ಬಂದಿರುವ ಕಸಬಿಗೆ ಬಡಿಗತನ ಎಂದು ಜಾನಪದ ಸಾಹಿತ್ಯದ ವ್ಯಾಖ್ಯಾನವಾಗಿದೆ. ಬಡಿಗತನ ಗ್ರಾಮೀಣ ಕಸುಬು, ಮನೆತನದ ಉದ್ಯೋಗ ಪರಂಪರಾಗತ ವೃತ್ತಿ, ಜಾತಿ ವೃತ್ತಿ ಎಂದು ಮುಂತಾಗಿ ಹೇಳಬಹುದು. ಗ್ರಾಮೀಣ ಪರಿಸರದಲ್ಲಿ ಅಲ್ಪಸಂಖ್ಯಾತರು ಮತ್ತು ಬಡವರು ತಮ್ಮ ಹೊಟ್ಟೆ ಹೊರೆದುಕೊಳ್ಳಲೋಸುಗ ತಲೆತಲಾಂತರದಿಂದ ಕೈಗೊಂಡು ಬಂದ ಅನುವಂಶಿಕ ವೃತ್ತಿ ಬಡಿಗತನವಾಗಿದೆ. ಆದಿಯಲ್ಲಿ ಗ್ರಾಮ ಪರಿಸರದಲ್ಲಿ ಸಾಮಾನ್ಯರೆನಿಸಿ ಕೊಂಡವರ ಉಪಜೀವನದ ವೃತ್ತಿ ಬಡಿಗತನವಾಗಿದೆ. ಪರಂಪರಾನುಗತವಾಗಿ ಸಾಗಿ ಬಂದಂತಹ ಬಡಿಗತನ ಜಾತಿಸೃಷ್ಟಿಗೂ ಕಾರಣವಾಯಿತು. ಜಾತಿ ವಿಜಾತಿ ಎಂಬ ತರತಮ ಭಾವನೆ ಉಂಟಾಯಿತು. ಅದೊಂದು ಶ್ರಮವಿಭಜನೆ ಆಧಾರಿತವಾಗಿ ಜಾತಿ ಸೃಷ್ಟಿಯಾಯಿತು. ಜಾತಿ ಕ್ರಮೇಣ ಸಡಿಲಾಗಿ ವೃತ್ತಿಕಾಯಕವಾಯಿತು.

ಕಾಸಿ ಕಮ್ಮಾರನಾದ ಬೀಸಿ ಮಡಿವಾಳನಾದ ಹಾಸನಿಕ್ಕಿ ಸಾಲಿಗನಾದ ವೇದವನೋದಿ ಹಾರವನಾದ. ಕುಲವೇನೋ? ಆವಂದಿರ ಕುಲವೇನೋ? ಎಂಬ ಶರಣರ ವಚನ ಪ್ರಶ್ನಿಸುವುದರ ಮೂಲಕ ವೃತ್ತಿಯ ನಿಜಸ್ಥಿತಿಯನ್ನು ಹೇಳಿ ಜಾತಿಯನ್ನು ಗಣಿಸದೆ ವೃತ್ತಿಯ ಮಹೋನ್ನತಿಯನ್ನು ಎತ್ತರಿಸಿ ವಿವಿಧ ವೃತ್ತಿ ಸ್ತರಗಳಿಂದ ಬಂದ ಜಾನಪದ ಶರಣರು ತಮ್ಮ ಆಧ್ಯಾತ್ಮ ಅನುಭವವನ್ನು ತಮ್ಮ ತಮ್ಮ ಭಾಷೆಯಲ್ಲಿ ಭಾವಪೂರ್ವಕ ಅಭಿವ್ಯಕ್ತಿಸಿದ್ದು ಮನನೀಯ.

ಬಡಿಗರು ವಿಶ್ವಕರ್ಮ ಸಮಾಜದವರೆಂದು ಹೇಳುತ್ತಾರೆ. ಕುಶಲ ಕೆಲಸಗಾರರಿಗೆ ಇದನ್ನೇ ವೃತ್ತಿನಾಮವಾಗಿ ಬಳಸುವರು. ವಿಶ್ವಕರ್ಮ ಒಬ್ಬ ದೇವಶಿಲ್ಪಿ ಎಂಬ ಪೌರಾಣಿಕ ಪರಿಕಲ್ಪನೆ ಇದೆ. ಬಡಿಗರು ವಿಶ್ವಕರ್ಮ ಕುಲೋದ್ಭವಂ. ಅಂದರೆ ವಿಶ್ವಕರ್ಮ ಕುಲಸ್ತರು ವೇದದಲ್ಲಿ ವಿಶ್ವಕರ್ಮನನ್ನು ದೇವತೆ ಎಂಬ ಅರ್ಥದಲ್ಲಿ ಸಂಬೋಧಿಸಿದೆ. ವೇದ ಕಾಲದಲ್ಲಿ ಆರ್ಯರಲ್ಲಿ ರಥವೆಂಬ ವಾಹನ ಇದ್ದಿರುವುದು ಖಚಿತ ಅದನ್ನು ತಯಾರಿಸುವವನನ್ನು ತ್ವಷ್ಟ್ರ ಎಂದು ಕರೆಯುತ್ತಿದ್ದರು. ಅವನಿಗೂ ಅವನ ಕೌಶಲ್ಯಕ್ಕೂ ಎಲ್ಲಿಲ್ಲದ, ಮಹತ್ವ ಗೌರವಗಳಿದ್ದವು. ಹೀಗಾಗಿ ಆತನು ದೇವರ ಸಾಲಿಗೆ ಸೇರ್ಪಡೆಯಾಗಿದ್ದ, ಆತ ದೇವತೆಗಳಿಗೂ ಗುರು ಆಗಬಲ್ಲವನೆಂದು ವೇದಕಾಲದ ಜನ ತಿಳಿದಿದ್ದರು. ವಿಶ್ವಕರ್ಮನನ್ನು ತ್ವಷ್ಟಾ ಎಂದೂ ಕರೆಯುತ್ತಿದ್ದರು. ರಥ ಪರಿಕರಾದಿ ವಸ್ತುಗಳನ್ನು

ತಯಾರಿಸುವ ಶ್ರಮಜೀವಿಗಳನ್ನು ವಿಶ್ವಕರ್ಮ ತ್ವಷ್ಟಾ ಎಂದು ಕರೆಯುತ್ತಿದ್ದರಲ್ಲದೆ ಅವರು ಮಂತ್ರಗಳನ್ನು ರಚನೆ ಮಾಡುವ ಬುದ್ಧಿಜೀವಿಗಳೂ ಆಗಿದ್ದರು.

ವಿಶ್ವಕರ್ಮನಿಗೆ ಸಾನಗ, ಸನಾತನ ಅಹಭೂನ ಪ್ರತ್ನ ಮತ್ತು ಸುಪರ್ಣರೆಂಬ ಪಂಚರ್ಷಿಗಳು ಮಾನಸ ಪುತ್ರರೆಂದು ಯಜುರ್ವೇದ ಹೇಳುತ್ತದೆ. ಇದರಿಂದಲೇ ಪಂಚಶಿಲ್ಪಗಳನ್ನು ಆಚರಿಸುವ ವಿಶ್ವ ಬ್ರಾಹ್ಮಣರು ಜನಿಸಿದರೆಂದು ಪುರಾಣ ಶಿಲ್ಪ ಆಗಮ ಶಾಸ್ತ್ರಾದಿಗಳು ನುಡಿಯುತ್ತವೆ ಬಡಿಗರು ಇವರಲ್ಲಿ ಸೇರ್ಪಡೆ ಆಗಿದ್ದಾರೆ. ಸ್ಮೃತಿಕಾಲದಲ್ಲಿ ಇವರಿಗೆ ದೇವತೆಗಳಂತೆ ಗೌರವಿಸಲಾಗುತ್ತಿತ್ತು. ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ಬಡಿಗರು ಶೂದ್ರ ಸ್ಥಾನಕ್ಕೆ ತಳ್ಳಲ್ಪಟ್ಟರು. ಈ ವೃತ್ತಿ ಕುರಿತಾದ ಕೀಳರಿಮೆ ಆರಂಭವಾಯಿತು. ಯಾವನು ತಮ್ಮ ಕೈಯಿಂದ ಅಂದವಾದ ರಥವನ್ನು ನಿರ್ಮಿಸುತ್ತಾನೋ ಅವನೇ ತನ್ನ ಮೆದುಳಿನಿಂದ ಸುಂದರವಾದ ರುಕ್ಕುಗಳನ್ನು ರಚಿಸಲಿ ಎಂಬ ಪೂರ್ವ ವೈದಿಕಕಾಲದ ಪರಿಸ್ಥಿತಿಯು ಚಾತುರ್ವರ್ಣ್ಯದ ಉಗಮದೊಂದಿಗೆ ಮಾಯವಾಯಿತು.

ಬಡಿಗರು ವಿಶ್ವಕರ್ಮನನ್ನು ದೇವಶಿಲ್ಪಿ ಎಂಬ ಗೌರವ ತಳೆದರು. ಇವನು ತಮ್ಮ ಮೂಲ ಪುರುಷ ಎಂದು ನಂಬಿದವರು. ಆದರೆ ವಿಶ್ವಕರ್ಮನೇ ತಮ್ಮ ದೇವರೆಂಬ ಇವರ ಸಮರ್ಥನೆ ವಿರಳ. ಎಲ್ಲ ದೈವಗಳಲ್ಲಿ ಸಮಭಕ್ತಿ ಇರುವುದು ಇದಕ್ಕೆ ಕಾರಣ ಎಂಬ ಡಾ॥ ಚಿದಾನಂದ ಮೂರ್ತಿಯವರ ಮಾತು ಒಪ್ಪುವಂಥದು. ಇವರಲ್ಲಿ ಕೆಲವರು ಜಿನೋಪಾಸಕರು ಕೆಲವರು ವಿಷ್ಣುವಿನ ಉಪಾಸಕರು ಹಲವರು ಕಾಳಿ ಆರಾಧಕರೂ ಆಗಿದ್ದರು. ಬಹಳ ಮಂದಿ ಶಿವೋಪಾಸಕರೂ ಆಗಿದ್ದರು. ಕ್ರಿ.ಶ. ೧೨ನೇ ಶತಮಾನದಲ್ಲಿ ವಿಶ್ವಕರ್ಮ ಬಡಗಿಗಳು ಕಾಳಿ ದೇವತೆಯನ್ನು ಪೂಜಿಸುತ್ತಿದ್ದರೆಂದು ತಿಳಿಯಬಹುದು. ಉತ್ತರ ಕನ್ನಡದ ಬಡಿಗರು ವಿಶ್ವಕರ್ಮ ತಮ್ಮ ಕುಲದೇವರೆಂದು ಕಟ್ಟಾ ಭಕ್ತಿ ಪೂರ್ವಕ ಮನ್ನಿಸಿದರೂ ತಾವಿರುವ ಕಡೆಯಲ್ಲಿಯ ಸ್ಥಳೀಯ ದೇವರನ್ನು ಆರಾಧಿಸುವುದು ಹೆಚ್ಚು.

ಗ್ರಾಮಗಳಲ್ಲಿ ಮಹಾಜನರು ಬಡಿಗರು ಸೇರಿದಂತೆ ಪಂಚಕರ್ಮಿಗಳನ್ನು ಆಯಗಾರ ಎಂದು ಪರಿಗಣಿಸುತ್ತಿದ್ದರು. ಕಮ್ಮಾರ ಬಡಿಗರ ಸೇವೆ ಪಡೆದುಕೊಂಡ ವರು ಅವರಿಗೆ ಸುಗ್ಗಿಯ ಕಾಲದಲ್ಲಿ ಕಾಳನ್ನು ವಾರ್ಷಿಕ ಆಯವಾಗಿ ಕೊಡುತ್ತಿದ್ದರು. ಇದು ಅನುವಂಶಿಕ ವ್ಯವಸ್ಥೆಯಾಗಿತ್ತು. ಈ ಆಯಗಾರರು ತಮ್ಮ ಹಳ್ಳಿಗಳ

ಅಗತ್ಯವನ್ನು ಪೂರೈಸುತ್ತಿದ್ದರು. ಆಯದಲ್ಲಿಯ ಸ್ವಲ್ಪ ಭಾಗವನ್ನು ಬಡಿಗರು ದೇವರಿಗೆ ಕಾಣಿಕೆಯಾಗಿ ಸಲ್ಲಿಸುತ್ತಿದ್ದರು. ಚಾಲುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಬಡಿಗರ ವೃತ್ತಿಯ ಮೇಲೆ ಬಡಗಿದೇಟೆ ಎಂಬ ತೆರಿಗೆಯನ್ನು ವಿಧಿಸುತ್ತಿದ್ದರು.

ಬಡಗಿ ಉಪಯೋಗಿಸುತ್ತಿದ್ದ ಕೊಡತಿ ಎಂಬ ಸುತ್ತಿಗೆಯ ಮೇಲೂ ತೆರಿಗೆಯನ್ನು ಆಕರಿಸಲಾಗುತ್ತಿತ್ತು. ಬಡಿಗನ ವೃತ್ತಿ ಸೇರಿದಂತೆ ಬಳಸಿರುವ ಕಚ್ಚಾವಸ್ತು, ತಯಾರಿಸಿದ ಸಿದ್ಧವಸ್ತುಗಳು ಹಾಗೂ ತಯಾರಿಕೆಗೆ ಬಳಸಲಾಗುವ ಆಯುಧ ಹತ್ಯಾರಗಳ ಮೇಲೂ ಕರ ಆಕರಿಸುತ್ತಿದ್ದರಿಂದ ಬಡಿಗನ ಮೇಲೆ ಕರ ಭಾರ ಅಧಿಕವಾದಂತೆ ಕಾಣಬಹುದು. ಸಮುದ್ರದೊಂದಿಗೆ ನೆಂಟಸ್ತಿಕೆ ಆದರೆ, ಉಪ್ಪಿಗೆ ಬಡತನ ಅನ್ನುವಂತೆ ಉತ್ತರ ಕನ್ನಡದ ಬಡಗರಿಗೆ ಕಾಡಿನೊಂದಿಗೆ ನೆಂಟಸ್ತಿಕೆ ಆದರೆ ಕಟ್ಟಿಗೆಗೆ ಬಡತನ. ಹೀಗಾಗಿ ಜಿಲ್ಲೆಯ ಎಲ್ಲರ ಬಡಿಗತನ ಬಡವಾಗಿದೆ. ದೇಶದಲ್ಲೇ ಉತ್ತರ ಕನ್ನಡ ಕಾಡು ಸಂಪದ್ಭರಿತವಾದರೂ ಕಾಡಿನ ಕಟ್ಟಿಗೆ ಬಡಿಗರಿಗೆ ನೇರವಾಗಿ ಸಿಗುತ್ತಿಲ್ಲ. ಶ್ರೀಮಂತ ಅರಣ್ಯ ಗುತ್ತಿಗೆದಾರರ ಎದುರು ಕಟ್ಟಿಗೆ ಲಿಲಾವು ಆಗುತ್ತಿದ್ದಾಗ ಸವಾಲೆಸೆಯಲಾಗದೆ ಕೈಚೆಲ್ಲಿ ಕುಳಿತುಕೊಳ್ಳುವ ಪ್ರಸಂಗ. ಹೀಗಾಗಿ ಅವರು ಕಟ್ಟಿಗೆಯ ಭೂಗತ ವ್ಯವಹಾರಕ್ಕೆ ಇಳಿಯಬೇಕಾಗುತ್ತದೆ. ಮಾಲಕೀ ಅಂದರೆ ಖಾಸಗಿ ವ್ಯಕ್ತಿಗಳ ಜಮೀನಲ್ಲಿ ಬೆಳೆದ ಕಟ್ಟಿಗೆಯನ್ನು ಖರೀದಿಸಲು ಪೈಪೋಟಿ ನಡೆಸುವದು ಕಷ್ಟ ಸಾಧ್ಯ. ಹಿಂದೊಮ್ಮೆ ಕಾರವಾರದ ಜಿಲ್ಲಾ ಕೈಗಾರಿಕಾ ಕೇಂದ್ರದ ವ್ಯವಸ್ಥಾಪಕರು ಜಿಲ್ಲೆಯ ಕಾಡಿನಲ್ಲಿ ಬೆಳೆದ ಕಟ್ಟಿಗೆಯ ಶೇಕಡಾ ೩೦ರಷ್ಟು ಪ್ರಮಾಣ ಜಿಲ್ಲೆಯ ಬಡಿಗರಿಗೇ ನೀಡಬೇಕೆಂದು ತಿಳಿಸಿರುವ ಪ್ರಸ್ತಾವನೆ ಸರಕಾರದ ಕಿವುಡು ಕಿವಿಗೆ ಬಿದ್ದಂತಾಗಿದೆ.

ಜಿಲ್ಲಾ ಕೈಗಾರಿಕಾ ಕೇಂದ್ರದ ತಾಂತ್ರಿಕ ಸಮೀಕ್ಷಾ ವರದಿಯಂತೆ ಕಾರವಾರ ೩೬೫, ಕುಮಟಾದಲ್ಲಿ ೨೨೮, ಹೊನ್ನಾವರದಲ್ಲಿ ೩೪೭, ಅಂಕೋಲಾದಲ್ಲಿ ೨೦೦, ಭಟ್ಕಳದಲ್ಲಿ ೧೦೦, ಶಿರಸಿ, ಸಿದ್ದಾಪುರ, ಯಲ್ಲಾಪುರ, ಮುಂಡಗೋಡ, ಜೋಯಡಾಗಳಲ್ಲಿ ಸರಾಸರಿ ೩೦೦ ಅರೆಕುಶಲ ಹಾಗೂ ಕುಶಲ ಬಡಿಗರಿದ್ದಾರೆ.

ಕರ್ನಾಟಕದಲ್ಲಿ ಇತಿಹಾಸ ಕಾಲದ ಬಡಿಗರನ್ನು ಅರೆಕುಶಲ ಬಡಗಿಗಳು ಹಾಗೂ ಕುಶಲ ಬಡಿಗಿಗಳೆಂದು ಸಂಶೋಧಕರಾದ ಎಸ್. ಗುರುರಾಜಾಚಾರ್ ಅವರು ಎರಡು ಭಾಗ ಮಾಡಿರುವರು. ದಿನನಿತ್ಯ ಸಾಮಾನ್ಯ ಜನರು

ಉಪಯೋಗಿಸುವ ಪೀಠೋಪಕರಣಗಳು ನೇಗಿಲು, ಎತ್ತಿನ ಬಂಡಿ ಮೊದಲಾದ ವ್ಯವಸಾಯೋಪಯೋಗಿ ವಸ್ತುಗಳು, ಸಾಮಾನ್ಯ ಮನೆ ಮಟ್ಟುಗಳನ್ನು ಮಾಡುವವರು ಮೊದಲ ಗುಂಪಿನವರು ಆಗಿದ್ದರು. ಅರಸರು ಹಾಗೂ ವಿಲಾಸಿ ವರ್ಗದವರ ಅಭಿರುಚಿಗನುಗುಣವಾಗಿ ಸೂಕ್ಷ್ಮವಾದ ಕೆತ್ತನೆ ಕೆಲಸ ಪರಿಕರಗಳನ್ನು ವಿಶೇಷವಾಗಿ ಮರದ ದೇವಸ್ಥಾನಗಳನ್ನು ಹಾಗೂ ರಥಗಳನ್ನು ಮಾಡುವವರನ್ನು ಕುಶಲ ಬಡಗಿಗಳೆಂದೂ ಎರಡನೇ ವರ್ಗಕ್ಕೆ ಸೇರಿಸಲಾಗಿತ್ತು.

ಅರೆಕುಶಲಿಗಳು ಗ್ರಾಮ ವಾಸಿಗಳಾಗಿದ್ದು ಗ್ರಾಮಸ್ಥರಿಗೆ ಬೇಕಾಗಿರವ ಗೃಹೋಪಯೋಗಿ ಕೃಷಿ ಉಪಯೋಗಿ ವಸ್ತುಗಳನ್ನು ಪೂರೈಸುತ್ತಿದ್ದರು. ಬಡಗಿಗಳಿಗೆ ಗ್ರಾಮಸ್ಥರು ವರುಷಕ್ಕೆ ಇಂತಿಷ್ಟೇ ಎಂದು ಗೊತ್ತಾದ ಅಳತೆಯಲ್ಲಿ ಸಗಟಾಗಿ ಕಾಳು ನೀಡುತ್ತಿದ್ದರು. ಆತ ಆಯಗಾರರಲ್ಲೊಬ್ಬ ಎಂದು ಪರಿಗಣಿಸಿ ಆಯ ನೀಡುತ್ತಿದ್ದರು. ಕೆಲವು ಕಡೆ ಭೂಮಿಯ ಸ್ವಲ್ಪ ಭಾಗ ಅನುಭವಿಸಲು ಬಿಟ್ಟಿದ್ದುಂಟು. ಶಾಸನದಲ್ಲಿ ಇವರ ಉಲ್ಲೇಖಗಳಿವೆ. ಕ್ರಿ.ಶ. ೧೨೨೫ರ ಒಂದು ಶಾಸನ ಬಡಗಿ ಚಂಪೋಜ ಎಂಬವನಿಗೆ ಅವನ ಸೇವೆ ಗಮನಿಸಿ ಭೂಮಿಯನ್ನು ದಾನವಾಗಿ ನೀಡಿದ ಉಲ್ಲೇಖ ನೀಡಿದೆ. ದಂಡಾಧಿಪನೊಬ್ಬನು ಕ್ರಿ.ಶ. ೧೧೫೯ರಲ್ಲಿ ವಿರೂಪಾಕ್ಷ ನಗರ ಕಟ್ಟಿ ಬ್ರಾಹ್ಮಣರಿಗೆ ದಾನ ನೀಡುವ ಸಂದರ್ಭದಲ್ಲಿ ಒಬ್ಬೊಬ್ಬ ಬ್ರಾಹ್ಮಣರಿಗೆ ಒಂದೊಂದು ಮರದ ಮಂಚ ದಾನವಾಗಿ ನೀಡಿದನೆನ್ನಲಾಗಿದೆ. ಅಂದಿನ ಸಾರಿಗೆ ಸಂಪರ್ಕ ಸಾಧನಗಳಾದ ಎತ್ತಿನಬಂಡಿ ಬಡಿಗರೇ ತಯಾರಿಸುತ್ತಿದ್ದರು. ಬಂಡಿಗಳ ಮೇಲೆ ಕಂದಾಯ ವಿಧಿಸಿದ ದಾಖಲೆಗಳಿವೆ. ಬಯಿರ್ ಎಂಬಾತ ಕ್ರಿ.ಶ. ೧೫೦೦ ಚಿಕ್ಕಬಳ್ಳಾಪುರದ ನಂದಿಗ್ರಾಮದ ನಂದಿ ಬೆಟ್ಟದ ಯೋಗನಂದೀಶ್ವರ ಗುಡಿಯ ದಕ್ಷಿಣ ಕಡೆಯ ಬಾಗಿಲ ಕದವನ್ನು ತಾನು ಮಾಡಿಸಿದ್ದನೆಂದು ಹೇಳಿಕೊಂಡಿದ್ದಾನೆ. ದೊಡ್ಡ ಚಿಕ್ಕನಹಳ್ಳಿ ಎಂಬ ಗ್ರಾಮದ ಊರಿನ ಹೊರ ಬಾಗಿಲನ್ನು ಚಿನ್ನದ ಗಿರಿ ಎಂಬ ಬಡಗಿ ಮಾಡಿದ್ದನೆಂಬ ಉಲ್ಲೇಖ ಶಾಸನದಲ್ಲಿದೆ. ದೇವಹಳ್ಳಿ ತಪಸಿರಾಮ ಗುಡಿಯ ಮಹಾದ್ವಾರದ ಬಾಗಿಲನ್ನು ಅದೇ ಗ್ರಾಮದ ಅಕ್ಕಸಾಲೆ ಚಿಕ್ಕಾ ಚಾರಿಯು ಸೇವಾರ್ಥ ಕಟ್ಟಿಸಿದ್ದನ್ನೆಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸುಪ್ರಸಿದ್ಧ ಬನವಾಸಿಯ ಮಧುಕೇಶ್ವರ ದೇವಾಲಯದ ಬಾಗಿಲುವಾಡವನ್ನು ಕಲಾತ್ಮಕವಾಗಿ ನಿರ್ಮಿಸಿದ್ದವನು ಹೊನ್ನಾವರದ ಮೇಸ್ತನೊಬ್ಬನು ಎಂಬ ಉಲ್ಲೇಖ ಅದರಲ್ಲೆ ಬಾಗಿಲ ಇರುವುದು.

ಕುಶಲ ಬಡಗಿಗಳು ಸುಂದರ ರಥಗಳನ್ನು ನಿರ್ಮಿಸುತ್ತಿದ್ದರು. ಅಂಥವರ

ಉಲ್ಲೇಖಗಳು ಕಡಿಮೆ. ಕ್ರಿ.ಶ. ೧೮೫೯ರ ಪಾಂಡವಪುರ ಕನ್ನಂಬಾಡಿ ಗ್ರಾಮದಲ್ಲಿರುವ ಮಹಾಲಕ್ಷ್ಮಿ ಗುಡಿಗೆ ಸೇರಿದ ರಥವನ್ನು ಧರ್ಮಲಿಂಗಾಚಾರಿ ಎಂಬುವನು ಕಟ್ಟಿಸಿದ್ದಾಗಿದೆ. ಶಾಸನವೊಂದು ಧರ್ಮಲಿಂಗಾಚಾರಿ ನಿರ್ಮಿತ ಎಂದು ಹೇಳಿದೆ, ತಮ್ಮ ಅಪರೂಪದ ಈ ಕೃತಿ ಬೊಂಬೆ ರಥ ಎಂದಿದ್ದಾನೆ. ಇನ್ನೊಂದು ಶಾಸನ ಜೀವಯ್ಯ ಎಂಬ ಬಡಗಿ ವೀರಭದ್ರ ದೇವರಿಗಾಗಿ ತೇರು ನಿರ್ಮಿಸಿಕೊಟ್ಟಿದ್ದರಿಂದಲೇ ಅವನ ಗೌರವಾರ್ಥ ಕುದುರೆ ಛತ್ರಿ ಕೊಡಲಾಗಿದೆನ್ನಲಾಗಿದೆ. ಕ್ರಿ.ಶ. ೧೫೪೪ರ ಶಾಸನದ ಪ್ರಕಾರ ಮಧ್ಯಮ ಹಾಗೂ ಸಾಮಾನ್ಯ ಜನತೆಯು ಕಾಷ್ಟ ದೇವಾಲಯವನ್ನೇ ಕಟ್ಟುತ್ತಿದ್ದರು. ಶಿಲಾ ದೇಗುಲ ನಿರ್ಮಿಸಲು ಕೈಗೆ ಎಟಕುತ್ತಿರಲಿಲ್ಲ. ಆಗ ಕಲ್ಲಿನ ದೇವಾಲಯಗಳಿಗಿಂತ ಮರದ ದೇವಾಲಯಗಳೇ ಹೆಚ್ಚಿನ ಸಂಖ್ಯೆಯಲ್ಲಿರುತ್ತಿದ್ದವು. ಉತ್ತರ ಕನ್ನಡದ ಕುಮಟೆಯ ಗುಡಿಗಾರರು ಹಾಗೂ ಹೊನ್ನಾವರ ಬಳ್ಕೂರದ ಶ್ರೀ ಗಣೇಶ ಆಚಾರಿ ರಥ ನಿರ್ಮಿಸುವದರಲ್ಲಿ ಎತ್ತಿದ ಕೈ ಹೊಂದಿದವರು.

ಹಿಂದಿನ ಬಡಿಗರು ಕುಶಲಿಗಳೂ ವಾಸ್ತು ವಿಜ್ಞಾನ ತಜ್ಞರೂ ಆಗಿದ್ದರು. ಅವರಿಂದ ಅರಮನೆ ದೇವಸ್ಥಾನ ಕಟ್ಟಲ್ಪಟ್ಟಿದ್ದರೂ ಅವು ಕಾಲಗರ್ಭದಲ್ಲಿ ನಶಿಸಿ ಹೋಗಿದೆ. ವಿಜಯನಗರ ಕಾಲದಲ್ಲಿ ಅವು ಬಹಳಷ್ಟಿದ್ದವು ಅಂಥ ಅರ್ವಾಚೀನ ರಚನೆ ವಿರಳವಾಗಿ ಕಾಣುತ್ತಿದೆ. ಹಾಗಾಗಿ ಬಡಗಿಯರ ಹೆಸರುಗಳೇ ಹೇಳ ಹೆಸರಿಲ್ಲದಂತಾಗಿದೆ. ಶಿಲ್ಪಿಯನ್ನು ಬಡಗಿ ಎಂದೂ ಬಡಗಿಯನ್ನೂ ಶಿಲ್ಪಿ ಎಂದೂ ಕರೆದ ವಾಡಿಕೆ ಇದೆ. ಬಡಗಿ ಶಿಲ್ಪಿ ನಡುವೆ ತೆಳುವಾದ ರೇಖೆ ಎಳೆದು ಗುರುತಿಸಬೇಕು. ಬಡಗಿಯನ್ನು ಕಾಷ್ಟ ಶಿಲ್ಪಿ ಅನ್ನುವುದನ್ನು ಉದಾಹರಿಸಬಹುದಾಗಿದೆ. ಬಡಗಿ ಅಂಗೋಜನು ಜಗಳೂರ ತಾಲೂಕ ನಿಭಗೂರಿನಲ್ಲಿ ಅಂಜನೇಯ ಗುಡಿ ಕಟ್ಟಿಸಿದವನು. ಪ್ರತಿಫಲವಾಗಿ ಆತ ನಾಡ ಗೌಡನೊಬ್ಬರಿಂದ ಅರವತ್ತು ವಕ್ಕಲು ಮಾನ್ಯ ಪಡೆದಿರುವನು. ಕ್ರಿ.ಶ. ೧೫೧೧ ರಲ್ಲಿ ಗೌಡಯ್ಯ ಎಂಬ ಇನ್ನೋರ್ವ ಸೊಂಡೆಕೆರೆಯ ಬಡಿಗ ರಥಕಟ್ಟಿಸಿವ ಆತನ ತಂದೆ ಪರಮೋಜ ಚಿತ್ರದುರ್ಗ ತಾಲೂಕು ಜಂಪಳ ನಾಯಕನ ಕೋಟೆಯ ಹತ್ತಿರದ ಹನುಮಂತ ದೇವರ ಗುಡಿ ಕಟ್ಟಿಸಿದನು. ಕ್ರಿ.ಶ. ೧೩೯೩ರಲ್ಲಿ ಶಿವಡಿಯೋಜ ಎಂಬ ಬಡಗಿ ಮಾಳಿಗೆ ಮನೆ ರಚಿಸಿದ್ದಿದೆ.

ಕರ್ನಾಟಕದಲ್ಲಿ ಹಡಗು ಕಟ್ಟುವ ಕೈಗಾರಿಕೆಗಳಿತ್ತೆನ್ನುವುದಕ್ಕೆ ಹಲವು ದಾಖಲೆಗಳಿವೆ. ಬಾದಾಮಿ ಚಾಲುಕ್ಯರು ಹಡಗು ಯಾನದಲ್ಲಿ ಆಸಕ್ತಿ ತಳೆದಿದ್ದರು.

ಎರಡನೇ ಪುಲಕೇಶಿ ಪುರಿಯ ಮೇಲೆ ದಂಡೆತ್ತಿ ಹೋಗುವಾಗ ಒಂದುನೂರು ಹಡಗ ಬಳಸಿದನು. ಯಾದವ ದೊರೆ ತನ್ನದೇ ಆದ ನೌಕಾಪಡೆಯನ್ನು ಹೊಂದಿದ್ದ. ಹಡಗ ನಿರ್ಮಿಸುವದರಲ್ಲಿ ದಕ್ಷಿಣ ಕನ್ನಡದ ತುಳುವರು ಅಂದಿಗೇಕೆ ಇಂದಿಗೂ ನಿಪುಣರೇ ಆಗಿರುವರು.

ದಕ್ಷಿಣ ಕನ್ನಡ ಜಿಲ್ಲೆಯ ಬೊಬ್ಬರ್ಯ ಎಂಬ ಪಾಡ್ಡನದಲ್ಲಿ (ಕತೆ) ಹಡಗ ಕಟ್ಟಲು ಮರವನ್ನೆ ಕಡಿದು ಕೆಲಸ ಮಾಡಲು ಮಲೆನಾಡ ಕಡೆಯಿಂದ ಬಡಗಿ ಆಚಾರಿಗಳನ್ನು ಕರೆಯಿಸಿದರು ಎಂಬ ಪ್ರಸ್ತಾಪವಿದೆ. ಹಡಗು ಕಟ್ಟುವುದರಲ್ಲಿ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳ ಮೇಲೆ ಇತ್ತೆಂದು ತಿಳಿಯಬಹುದಾಗಿದೆ. ಬಡಗಿಯರು ನಿರ್ವಹಿಸುತ್ತಿರುವ ಮತ್ತೊಂದು ಹೊಸ ಕಾರ್ಯವೆಂದರೆ ಯುದ್ಧ ಕಾಲದಲ್ಲಿ ಬೇಕಿರುವ ಮರದ ಆಯುಧಗಳನ್ನು ತಯಾರಿಸುತ್ತಿದ್ದರು. ಶಾಸನದಲ್ಲಿ ಈ ಕುರಿತಾಗಿ ಎಲ್ಲೂ ಉಲ್ಲೇಖ ಇರದಿದ್ದರೂ ಕುಮಾರ ರಾಮನ ಚರಿತ್ರೆಯಲ್ಲಿ ಈ ಕುರಿತು ಉಲ್ಲೇಖವಿದೆ. ಆಧುನಿಕ ಪೂರ್ವಕಾಲದ ಕರ್ನಾಟಕದ ಬಡಿಗರು ಕಲ್ಲಿನ ಕೈಗಾರಿಕೆ, ಮನೆಗೆಲಸ ಕಂಚುಗಾರಿಕೆ, ಚಿನ್ನ ಬೆಳ್ಳಿ ಕೈಗಾರಿಕೆ, ಎಂಬ ಐದು ವಿಧದ ಕೈಗಾರಿಕೆಗಳಲ್ಲಿ ತೊಡಗಿದ್ದರು.

ಉ.ಕ. ಜಿಲ್ಲೆಯಲ್ಲಿ ಮಹಾಸತಿ ಜಟಿಗ ಕುಮಾರ ದೇವ ಬೀರದೇವರ ವಿಗ್ರಹಗಳನ್ನು ಆಚಾರಿಯವರು ಕಟ್ಟಿಗೆಯಿಂದಲೇ ರಚಿಸುತ್ತಿದ್ದರು. ಅವುಗಳ ಪಳೆಯುಳಿಕೆಗಳೇ ಜೀವಂತ ಸಾಕ್ಷಿ. ಕಲ್ಲು ಕಡೆಯುವ ಶಿಲ್ಪಿಗಳು ಸ್ಥಳಿಯರಾಗಿದ್ದು, ಶಿಲಾಕೃತಿಗಳನ್ನು ಆಮದಿಸಿಕೊಳ್ಳಲು ಇಂದಿನಂತೆ ಸಾರಿಗೆ ವ್ಯವಸ್ಥೆ ಇದ್ದಿಲ್ಲ. ಕಾಷ್ಟ ವಿಗ್ರಹಗಳ ಸ್ಥಾನ ಶಿಲಾ ವಿಗ್ರಹಗಳು ಆವರಿಸಿದ ನಂತರ ಮೊದಲಿನವುಗಳು ಇಲ್ಲವಾದವು. ಅಂಕೋಲೆ ಸೀಮೆಯಲ್ಲಿ ಆಚಾರಿಗಳು ತಯಾರಿಸಿದ್ದ ಕಾಷ್ಠ ವಿಗ್ರಹಗಳನ್ನು ಅಲ್ಲಲ್ಲಿ ಕಾಣಬಹುದಾಗಿದೆ. ಜೀರ್ಣೋದ್ಧಾರದ ಹಿನ್ನೆಲೆಯಲ್ಲಿ ಕಾಷ್ಠವಿಗ್ರಹಗಳು ಇನ್ನಿಲ್ಲವಾಗಿವೆ.

ಹೊನ್ನಾವರ ಕೆಳಗಿನ ಪಾಳ್ಯಾ ಶರಾವತೀ ತೀರದ ಹಳ್ಳಿಯಲ್ಲಿ ದೊಡ್ಡ ಹಡಗುಗಳನ್ನು ನಿರ್ಮಿಸುವ ಮೇಸ್ತ್ರಾ ಎಂಬ ಆಚಾರಿಗಳು ಇರುವರು.

ಜಿಲ್ಲೆಯ ಗೆಜೆಟಿಯರಿನಲ್ಲಿ ಬಡಿಗರು

ಉತ್ತರ ಕನ್ನಡ ಜಿಲ್ಲೆಯ ಕುರಿತು ಆಂಗ್ಲರ ಕಾಲದಲ್ಲಿ ೧೮೮೩ರಲ್ಲಿ

ಜೇಮ್ಸ್.ಎಂ. ಕೆಂಬಲ್ ಪ್ರಕಟಿಸಿರುವ ಗ್ಯಾಜೆಟಿಯರದಲ್ಲಿ ಬಡಿಗರ ಬಗ್ಗೆ ವೃತ್ತಾಂತ ಹೀಗೆ ನೀಡಿದ್ದಿದೆ.

ಬಡಿಗೆ ಅನ್ನುವುದು 'ಬಡ್ಡಿ' ಸಪುರಾದ ಮರದ ಕೊರಡು. ಇದರಿಂದ ನಿರ್ಮಾಣಗೊಂಡ ಮರದ ಸುತ್ತಿಗೆ ಇದರಿಂದಾಗಿ ಬಡಿಗ ಅನ್ನುವ ಶಬ್ದ ಉತ್ಪತ್ತಿಗೊಂಡಿದೆ. ಮರದ ಸುತ್ತಿಗೆ ಬಡಿಗತನದ ಜೀವಾಳ. ಸಹ್ಯಾದ್ರಿಯ ಮೇಲ್ಭಾಗ ಅಂದರೆ ತೇಂಗಾ, ಅವಗಿ, ಮಂಗಲವಾಡ ಹಾಗೂ ಹಳಿಯಾಳ ಮತ್ತು ಹಳಿಯಾಳದ ಉಪವಿಭಾಗದಲ್ಲಿ ೬,೫೬೦ ಕುಟುಂಬಗಳಿದ್ದವು. ಹಳ್ಳಿ ಮತ್ತು ಪಟ್ಟಣಗಳಲಲಿ ಇತರ ಸಮುದಾಯದೊಂದಿಗೆ ಬಡಿಗರು ಕನ್ನಡ ಮಾತನಾಡುತ್ತಿದ್ದರು. ಬೆಳಗಾವಿಯ ರಾಮದುರ್ಗ ಬಳಿಯ ಶಿರಸಂಗಿಯ ದೇವತೆಯನ್ನು ಕುಟುಂಬ ದೇವತೆ ಎಂದು ಆರಾಧಿಸುತ್ತಿದ್ದರು. ಅವರೆಲ್ಲರೂ ಬೆಳಗಾವಿಯ ಪರಸಗಡ ಮೂಲದವರು. ಬಸಪ್ಪ ನರಸಪ್ಪ, ಲಕ್ಷ್ಮಣ ರಾಯಪ್ಪ ಮತ್ತು ದೇವಪ್ಪ ಈ ಸಮಾಜಗಳಲ್ಲಿ ಪುರುಷರ ಹೆಸರುಗಳು ಸಾಮಾನ್ಯವಾಗಿದ್ದಂತೆ ಬಾಲವ್ವ ಶುದ್ರೌವಾ, ದೇಮವ್ವ ಹಾಗೂ ಕಲ್ಲವ್ವ ಅನ್ನುವಂತಹ ಮಹಿಳೆಯರ ಹೆಸರುಗಳೇ ಸಾಮಾನ್ಯವಾಗಿದ್ದವು. ಅವರಿಗೆ ಅಡ್ಡ ಹೆಸರಾಗಲೀ ಉಪಪಂಗಡದ ಹೆಸರಾಗಲೀ ಇಲ್ಲವೆ ಸಂತತಿಯ ಹೆಸರಾಗಲಿ ಇರುತ್ತಿರಲಿಲ್ಲ ಕಪ್ಪು ವರ್ಣದ ನಡು ಎತ್ತರದ ಹಾಗೂ ದುಂಡು ಮೊಗದ ವ್ಯಕ್ತಿತ್ವ ಅವರಿಗಿತ್ತು. ಅವರ ಮನೆ ಭಾಷೆ ಲಿಂಗಾಯತರು ಹಾಗೂ ಘಟ್ಟದ ಮೇಲಿನವರ ಭಾಷೆಗಿಂತ ಭಿನ್ನವೇನೂ ಆಗಿರಲಿಲ್ಲ.

ಮಣ್ಣಿನಿಂದ ಮಾಡಿದ ಗೋಡೆ, ಹುಲ್ಲು ಇಲ್ಲವೆ ಹಂಚಿನ ಸೂರು ಇರುವ ಒಂದೇ ಮಹಡಿಯ ಮನೆಯಲ್ಲಿ ಅವರ ವಾಸವಾಗಿತ್ತು. ಚಾಪೆ, ಕಟ್ಟಿಗೆಯ ಪೆಟ್ಟಿಗೆ, ಲೋಹದ ಪೆಟ್ಟಿಗೆ ಹಾಗೂ ದೀಪ ಅವರ ಮನೆಯ ಸಾಮಾನ್ಯ ಬಳಕೆಯ ವಸ್ತುಗಳಾಗಿದ್ದವು. ಮಾದಕ ದ್ರವ್ಯ ಸೇವಿಸದೆ ಇರುವವರು ಮಾಂಸ ಸೇರಿದಂತೆ ಅಕ್ಕಿ ಮತ್ತು ರಾಗಿ ಆಹಾರವಾಗಿ ಬಳಸುತ್ತಿದ್ದರು. ಲಿಂಗಾಯತ ಶೈಲಿಯ ಅಡಿಗೆ ತಯಾರಿಸುತ್ತಿದ್ದ ಇವರು ಬಡತನದಿಂದಾಗಿ ಆಹಾರ ಬಳಸುವದರಲ್ಲಿ ಮಿತವ್ಯಯಿಗಳಾಗಿದ್ದರು. ಗಂಡಸರು ತಲೆಯುಡಿಗೆ, ಸೊಂಟ ಸುತ್ತುಡಿಗೆ, ಜಾಕೆಟ ಧರಿಸುತ್ತಿದ್ದರು. ಹೆಂಗಸರು ಸೀರೆ ಧರಿಸಿ ತಲೆಯ ಮೇಲಿಂದ ಸೆರಗು ಇಳಿಸುತ್ತಿದ್ದರು. ಕುಪ್ಪಸ ರವಿಕೆಯನ್ನು ಧರಿಸುತ್ತಿದ್ದರು. ಬೆಳ್ಳಿ ಬಂಗಾರ ಧರಿಸುವುದರ ಜೊತೆಗೆ ಸುವಾಸನೆ ಹೂವು ಮುಡಿದುಕೊಂಡು

ಅಂದ ಚೆಂದವಾಗಿ ಕಾಣಿಸಿಕೊಳ್ಳಲು ಬಯಸುತ್ತಿದ್ದರು. ಧರಿಸುವ ವೇಷ ಭೂಷಣದಲ್ಲಿ ಮಹಿಳೆಯರೆಲ್ಲಾಗಲಿ ಪುರುಷರಲ್ಲಾಗಲಿ ಅಚ್ಚುಕಟ್ಟು ತನ ಅನ್ನುವುದರಲಿಲ್ಲ. ಬೆಳಗಾಂವ ಧಾರವಾಡದಲ್ಲಿ ಕೈಮಗ್ಗದ ಮೇಲೆ ತಯಾರಿಸಿದ ಬಟ್ಟೆಗಳನ್ನು ಧರಿಸುತ್ತಿದ್ದರು. ಹಬ್ಬ ಹರಿದಿನಗಳಂದು ಧರಿಸಲೆಂದು ವಿಶೇಷ ಉಡುಪುಗಳನ್ನು ಶೇಖರಿಸುತ್ತಿದ್ದರು. ರೀತಿ ರಿವಾಜಗಳಲ್ಲಿ ಬದಲಾಗಿದ್ದರೂ ಮಿತವ್ಯಯಿಗಳಾಗಿದ್ದು ದುಡಿಮೆಯಲ್ಲಿ ಪರಿಶ್ರಮ ಶಿಸ್ತುಗಳು ಎದ್ದು ಕಾಣುತ್ತಿದ್ದವು. ಬಡಿಗತನ ಅವರ ಅನುವಂಶಿಕ ವೃತ್ತಿ ಆಗಿತ್ತು. ಬಡಿಗರಿಗೆ ಮನೆಯ ಹೆಂಗಳೆಯರು ವೃತ್ತಿಯಲ್ಲಿ ನೆರವಿನ ಹಸ್ತ ಚಾಚುತ್ತಿರಲಿಲ್ಲ.

ಈ ಬಡಿಗರ ಕೃತಿಗಳಲ್ಲಿ ನವುರಾದ ಕೆತ್ತನೆ ಕಾಣಬರುತ್ತಿತ್ತು. ಕೌಶಲ್ಯ ಮತ್ತು ಕೆತ್ತನೆಗಳು ಕೃತಿಗಳಲ್ಲಿ ಸಂಕರಗೊಂಡಿದ್ದವು. ಒಂದು ಬಿಟ್ಟು ಇನ್ನೊಂದು ಇರಲಿಲ್ಲ. ಕೆತ್ತನೆ ಹಾಗೂ ಬಡಗಿ ವಿನ್ಯಾಸ ಅವಿನಾಭಾವ ಸಂಬಂಧ ಹೊಂದಿರುವುದು. ಹನ್ನೆರಡು ವರ್ಷದ ಬಡಿಗನ ಮಗ ತಂದೆಯೊಡನೆ ಬಡಗಿತನಕ್ಕೆ ಅಣಿಯಾಗುತ್ತಿದ್ದನು. ಕುಶಲ ಬಡಿಗ ದಿನಕ್ಕೆ ೧೨ ಆಣೆ ಗಳಿಸುತ್ತಿದ್ದ. ಅರೆ ಕುಶಲ ಬಡಿಗ ೬ ಆಣೆ ಗಳಿಸುತ್ತಿದ್ದ, ನಿರಂತರ ಹಾಗೂ ಉತ್ತಮ ಗಳಿಕೆ ಹೊಂದಿದ್ದ ಬಡಿಗ ಜಮೀನುದಾರನಾಗಿದ್ದನಲ್ಲದೆ, ತಮ್ಮ ಜಮೀನನ್ನು ಬಾಡಿಗೆಗೂ ನೀಡುತ್ತಿದ್ದನು. ಬಡಿಗರು ವ್ಯಾಪಾರಿಗಳಿಗಿಂತ ಕೆಳ ಸ್ತರದಲ್ಲಿದ್ದು ಮರಾಠ, ಕುಣಬಿ, ಮೇದಾರ ಹಾಗೂ ಕುಂಬಾರ ಜನಾಂಗಕ್ಕಿಂತ ಮೇಲ್ವರ್ಗವದರಾಗಿದ್ದರು. ತಮ್ಮವರೇ ಬೇಯಿಸಿದ ಆಹಾರ ಉಣ್ಣುವವರು, ಅನ್ಯರು ಬೆಯಿಸಿದ ಆಹಾರ ಉಣ್ಣಲು ಸಂಕೋಚ ಪಡುತ್ತಿದ್ದರು. ಮಧ್ಯಾಹ್ನ ಮತ್ತು ರಾತ್ರೆ ಎರಡು ಒಪ್ಪತ್ತಿನ ಊಟ ಮಾಡುವ ಇವರು ದಿನವಿಡೀ ದುಡಿಮೆಗಾಗಿ ಮೀಸಲಾಗಿರಿಸುತ್ತಿದ್ದರು. ಜೂನ್‌ದಿಂದ ಆಕ್ಟೋಬರ್‌ದವರೆಗೆ ವೃತ್ತಿ ಅವಕಾಶ ವಿರಳವಾಗಿತ್ತು. ನವಂಬರದಿಂದ ಮೇ ದವರೆಗೆ ದುಡಿಮೆಗೆ ಬಿಡುವೇ ಇರುತ್ತಿರಲಿಲ್ಲ, ಒಂದು ಕುಟುಂಬ ತಿಂಗಳೊಂದು ೮ ರೂ. ಅನ್ನು ಖರ್ಚು ಮಾಡುತ್ತಿತ್ತು. ಕಟ್ಟಿರುವ ಮನೆಯ ವೆಚ್ಚ ಮೂವತ್ತರಿಂದ ೩೦೦ ರೂ. ಮೌಲ್ಯವಿರುತ್ತಿತ್ತು. ಅಂದಿನ ಮದುವೆಗೆಂದು ಸಾಮಾನ್ಯ ರೂ. ೧೦೦ ರಿಂದ ೩೦೦ನ್ನು ಖರ್ಚು ಮಾಡುತ್ತಿದ್ದರು. ಧರ್ಮಿಷ್ಟರಾದ ಬಡಿಗರು ದೇವತಾರ್ಚನೆಯ ಕೆಲಸಕ್ಕೆ ತಮ್ಮ ಜಾತಿಯ ಪುರೋಹಿತರನ್ನು ಕರೆಯುತ್ತಿದ್ದರು. ಅನ್ಯ ಬ್ರಾಹ್ಮಣರನ್ನು ಕರೆಸಿ ಪೂಜಾಕೈಂಕರ್ಯ ನೆರವೇರಿಸುತ್ತಿರಲಿಲ್ಲ, ಹಾಗೂ ಅವರ ಮೇಲೆ ಆದರವನ್ನೂ ಹೊಂದಿರಲಿಲ್ಲ.

ಗೋಕರ್ಣ, ಬನಾರಸ, ರಾಮೇಶ್ವರ, ಪಂಡರಾಪುರ ಹಾಗೂ ತಿರುಪತಿಯ ಯಾತ್ರಾರ್ಥಿಯಾಗಿ ಹೋಗುವ ಈ ಬಡಿಗರು ಕಾಳಮ್ಮನನ್ನು ಪ್ರಧಾನವಾಗಿ ಆರಾದಿಸುತ್ತಿದ್ದರು. ಮೋನಪ್ಪ ಅನ್ನುವಾತ ಅವರ ಜಾತಿಯವನೇ ಆದ ಅವರ ಧಾರ್ಮಿಕ ನಾಯಕ, ಆತನು ಹುಬ್ಬಳ್ಳಿಯ ಮಠದಲ್ಲಿರುತ್ತಿದ್ದರು.

ಅವರು ಬ್ರಹ್ಮಚಾರಿಯಾಗಿ ಭಕ್ತ ಭಜಕರಿಂದ ವಾರ್ಷಿಕ ಆದಾಯ ಮೂಲದಿಂದ ಭಿಕ್ಷೆ ಸ್ವೀಕರಿಸುತ್ತಿದ್ದರು. ಮಾಟ ಮಂತ್ರಗಳಲ್ಲಿ ದೇವದೆವ್ವಗಳಲ್ಲಿ ಅಚಲ ನಂಬಿಕೆಯಿದ್ದರೂ ಹೋಮ ಹವನಗಳಲ್ಲಿ ಪ್ರಾಣಿ ಬಲಿಗೆ ಅವಕಾಶವನ್ನೇ ನೀಡುತ್ತಿರಲಿಲ್ಲ, ಹುಡುಗಿಯರನ್ನು ೮ ರಿಂದ ೧೨ ವರ್ಷ ವಯಸ್ಸಿನಲ್ಲೆ ನಡುವೆ ಮದುವೆ ಮಾಡುತ್ತಿದ್ದರು. ಕಲಿಕೆಯಿಂದಾಗಿ ನೆಂಟಸ್ತಿಕೆಯನ್ನು ಹುಡುಕುವ ಕಷ್ಟವಾಗುತ್ತದೆ ಎಂದು ತಿಳಿದು ಶಾಲೆಗೆ ಹುಡುಗಿಯರನ್ನು ಕಳಿಸುತ್ತಿರಲಿಲ್ಲ, ಹುಡುಗರ ವಿವಾಹ ೧೬ ರಿಂದ ೨೦ ವರ್ಷ ವಯಸ್ಸಿನ ನಡುವೆ ನಡೆಯುತ್ತಿದ್ದವು, ಶವವನ್ನು ಚಿತೆಗೇರಿಸುತ್ತಿದ್ದರು, ಹತ್ತು ದಿನಗಳವರೆಗೆ ಸೂತಕ ಆಚರಣೆ ಇರುತ್ತಿದ್ದು ಹನ್ನೊಂದನೇ ದಿನ ಕುಟುಂಬ ಪುರೋಹಿತರು ಪವಿತ್ರ ದೀಪ ಬೆಳಗಿಸಿ ಮನೆ ಮಂದಿಗೆಲ್ಲ ಪಂಚಗವ್ಯ ನೀಡಿ ಶುದ್ಧೀಕರಣ ಮಾಡುತ್ತಿದ್ದರು.

ವಿಧವಾ ವಿವಾಹ ಹಾಗೂ ಬಹುಪತ್ನಿತ್ವ ಈ ಸಮಾಜದಲ್ಲಿ ಪ್ರಚಲಿತವಿತ್ತು, ಮರಣ ಹಾಗೂ ಜನನದ ಹತ್ತನೇ ದಿನದ ನಂತರ ಕುಟುಂಬ ಸೂತಕದಿಂದ ಮುಕ್ತಿಯಾಗಿದೆ ಎಂದು ತಿಳಿಯುತ್ತಿದ್ದರು. ಮಗುವಿನ ಜನನದ ಐದನೇ ದಿನದಂದು ತೆಂಗಿನ ಕಾಯಿಯನ್ನು ಪೂಜಿಸಿ ಅಕ್ಕಿ ಮತ್ತು ಕಾಯಿ ಸುಳಿಯಿಂದ ಕಿಚಡಿ ತಯಾರಿಸಿ ಸೇವಿಸಲು ಸೂಲಗಿತ್ತಿಗೆ ನೀಡುವುದಿತ್ತು; ಆಕೆ ಮಗುವಿನ ಸೊಂಟಕ್ಕೆ ಹತ್ತಿನಾರಿನ ಬಟ್ಟೆಯನ್ನು ಸುತ್ತುತ್ತಿದ್ದಳು, ಹನ್ನೊಂದನೇ ದಿನ ಶುದ್ಧೀಕರಣದ ನಂತರ ಮಗುವಿನ ನಾಮಕರಣವಾಗಿ ತೊಟ್ಟಿಲಲ್ಲಿ ತೂಗಿಸುತ್ತಿದ್ದರು. ಅಂದು ಜಾತಿಯವರಿಗೆ ಭಾರಿ ಭೋಜನ. ೧೨ನೇ ವರ್ಷದಲ್ಲಿ ಪಾದಾರ್ಪಣೆ ಮಾಡುವ ಹುಡುಗನಿಗೆ ಕುಟುಂಬ ಪುರೋಹಿತರಿಂದ ಉಪನಯನವೂ ಸೇರಿದಂತೆ ಇತರ ಯಾವುದೇ ಧಾರ್ಮಿಕಕಾರ್ಯಗಳು ಪಾಣಿ ಹಾಗೂ ಪುರೋಹಿತ ಸಮಾಜಗಳು ನಡೆಸುವ ನಿಟ್ಟಿನಲ್ಲೇ ಬಡಿಗರು ನಡೆಸುತ್ತಿದ್ದರು. ಸಾಮಾಜಿಕ ಜಗಳಗಳೆಲ್ಲವೂ ಸಮಾಜದ ಯಜಮಾನಿಕೆ ಹೊತ್ತಂತ ಬುದವಂತ ಎಂಬ ಹಿರಿಯ ವ್ಯಕ್ತಿಯ ಹತ್ತಿರ ಆಲಿಕೆಗೆ ಹೋಗಿ ಇತ್ಯರ್ಥಗೊಳ್ಳುತ್ತಿದದವು. ಅಂತರ ಜಾತಿಗಳೊಡನೆ ಮೆಜುವಾನಿ ಸೇವಿಸಿದವರನ್ನು

ಸ್ವಸಮಾಜದಿಂದ ಹೊರದಬ್ಬಿ ಶಿಕ್ಷಿಸುತ್ತಿದ್ದರು. ಇತರ ಅಪರಾಧಗಳಿಗೆ ರೂ. ೪ ರಿಂದ ರೂ. ೨೫೦ರ ವರೆಗೆ ದಂಡ ಶುಲ್ಕವಾಗಿ ವಿಧಿಸಲಾಗುತ್ತಿತ್ತು. ಸಮಾಜದ ಬೋಧಕ ಅನ್ನುವನಿಗೆ ದಂಡ ನೀಡಬೇಕಿತ್ತು.

ಪಾಂಚಾಲ ಸಮಾಜಕ್ಕೆ ಸೇರಿದ ಬಡಿಗರು ಕಾರವಾರದ ಹಳ್ಳಿಯಲ್ಲಿದ್ದರು. ಒಂದು ಶತಮಾನದ ಹಿಂದೆ ರತ್ನಗಿರಿಯಿಂದ ವಲಸೆ ಬಂದವರು, ३೨೨೦ ಬಡಿಗರಲ್ಲಿ ೧೭೨೯ ಹೆಂಗಸರು ೧೪೯೧ ಗಂಡಸರಿದ್ದರು. ಹೊಂಡು, ಏಸು, ಶಂಬಾ, ಗೋಮಾ, ಹೊಯ್ಸು, ಜನ್ನು, ಪುಂಡಲಿಕ, ಭಿಕ್ಕು ಗಂಡಸರಲ್ಲಿ ಪ್ರಚಲಿತವಿದ್ದ ಹೆಸರು ಇವರು ಹೆಸರಿನ ಮುಂದೆ ಮೇಸ್ತ್ರಿಯ ಸಂಕ್ಷಿಪ್ತ ಪದವಾದ ಮೇಸ್ತ ಎಂದು ಹೆಸರಿಡುತ್ತಿದ್ದರು. ಸಾವಿತ್ರಿ, ಸೀತಾಗೋಪಿ, ಜಾನಕಿ, ಯಶೋಧಾ, ದ್ವಾರಕಿ, ವೆಂಕು, ಅವಡು ಎನ್ನುವ ಹೆಸರುಗಳು ಹೆಂಗಸರಲ್ಲಿ ಪ್ರಚಲಿತವಿತ್ತು, ಇವರಾರಿಗೂ ಉಪನಾಮ ಇರಲಿಲ್ಲ ರತ್ನಗಿರಿಯ ಶಾಂಬಾ, ಕೊಲ್ಲಾಪುರದ ಭವಾನಿ ರವಳನಾಥ ಸಾವಂತವಾಡಿ ಬಳಿಯ ಸಂತೋಹೆಯ ಮೌಲಿ, ಇವರ ಕುಟುಂಬದ ಆರಾಧ್ಯ ದೈವವಾಗಿದ್ದವು. ಕೊಂಕಣದಲ್ಲಿದ್ದ ತಮ್ಮ ವರ್ಗದವರಲ್ಲಷ್ಟೇ ವಿವಾಹವನ್ನು ಸೀಮಿತಗೊಳಿಸಿದ್ದರು. ಅವರಲ್ಲಿ ಉಪಪಂಗಡ ಗಳಿದ್ದಿಲ್ಲ ಕಪ್ಪು ಬಣ್ಣದ ಮಧ್ಯಮ ಶರೀರದ ಸಾಮಾನ್ಯ ನಿಲುವಿನ ತೆಳುವಾದ ದೇಹದ ಗಟ್ಟಿಮುಟ್ಟಾದ ವ್ಯಕ್ತಿತ್ವ ಅವರದಾಗಿತ್ತು. ಕೊಂಕಣಿ ಮಾತಾಡುವ ಅವರ ಮಾತುಶೇಣಿ ಸಮೂಹದ ಮನೆ ಮಾತಿಗೆ ಹೋಲುತ್ತಿತ್ತು.

ಮಣ್ಣುಗೋಡೆ, ಹಂಚಿನ ಮಾಡು ಇರುವ ಒಂದೇ ಮಾಳಿಗೆಯುಳ್ಳ ಮನೆಯಲ್ಲಿ ಅವರು ವಾಸಿಸುತ್ತಿದ್ದರು. ಅಂಗಳದಲ್ಲಿ ಮನೆಗಂಟಿ ವರಾಂಡಾವಿತ್ತು. ಮೀನು ಆಹಾರವಾಗಿ ಬಳಸುತ್ತಿದ್ದ ಇವರು ಇತರ ಮಾಂಸವಾಗಲಿ ಇಲ್ಲವೆ ಮದ್ಯಪಾನ ಮಾಡಬಾರದೆಂಬ ಕಟ್ಟು ಪಾಡಿಗೆ ಬಿದ್ದವರೇನಿದ್ದಿಲ್ಲ. ಕೂಳಬಾಕರ ಲ್ಲದವರಿವರು. ಮೀನು ಸಂಬಾರ ಹಾಗೂ ಹಳದಿ ಸೇವಿಸುವುದರಲ್ಲಿ ತೀವ್ರ ಆಸಕ್ತಿ ಹೊಂದಿದವರಾಗಿದ್ದರು, ಬಾವಕುಳೆ, ವಾಣಿಗಳಂತೆ ಸೊಂಟ, ಭುಜ ಹಾಗೂ ತಲೆಮುಡಿಗೆಯನ್ನು ಧರಿಸುತ್ತಿದ್ದರು. ಮಹಿಳೆಯರು ಒಳಉಡುಗೆಯ ಮೇಲೆ ಅಂಗಿ ಧರಿಸುತ್ತಿದ್ದರು. ಬೆಳ್ಳಿ ಬಂಗಾರ ಆಭರಣ ಪ್ರೇಮಿಗಳಾಗಿದ್ದರು, ಉತ್ತಮ ಹಾಗೂ ಪ್ರಸನ್ನ ನಡತೆಯ ಈ ಬಡಿಗರು ದುಡಿಮೆಯಲ್ಲಿ ಕಟ್ಟಾಳುಗಳಾಗಿದ್ದರು, ಮನೆ, ಮಣೆ, ಬೆಂಚು, ಸ್ಟೂಲ ನಿರ್ಮಾಣದಲ್ಲಿ ತೊಡಗಿಕೊಳ್ಳುತ್ತಿದ್ದರು ಹತ್ತು ಹನ್ನೊಂದನೇ ವರ್ಷದಲ್ಲಿ ಸಂಬಂಧಿಕರು ಇಲ್ಲವೆ

ಮನೆಮಂದಿಯೊಡನೇ ಬಡಿಗತನ ಕುಲಕಸುಬಾಗಿ ಕಲಿಯುತ್ತಿದ್ದರು. ಕಲಿಕೆಗೆಂದೇ ಪ್ರತ್ಯೇಕತೆ ಇಲ್ಲದೆ ದುಡಿಮೆಯೊಂದಿಗೆ ಕಲಿಕೆ ಕಾರ್ಯೋನ್ಮತರಾಗಿ ಸಾಗುತ್ತಿದ್ದರು. ಅವರ ದಿನಗಳಿಕೆ ಕರಕುಶಲಕ್ಕೆ ತಕ್ಕಂತೆ ಇರುತ್ತಿತ್ತು. ವೃತ್ತಿ ಸಾಹಿತ್ಯ ಹೊಂದಿದ ಇವರು ದಿನವೊಂದಕ್ಕೆ ೬ ರಿಂದ ೧೨ ಆಣೆ ಗಳಿಸುತ್ತಿದ್ದರು. ಮನೆಗೆಲಸ ಹೊರತು ಬಡಿಗತನಕ್ಕೆ ಮಹಿಳೆಯರು ನೆರವಿನ ಹಸ್ತ ಚಾಚುತ್ತಿರಲಿಲ್ಲ. ದರ್ಜೆ ಮತ್ತು ಪರಿಸ್ಥಿತಿಯಲ್ಲಿ ಕಮ್ಮಾರರಕ್ಕಿಂತ ಕೊಂಚ ಭಿನ್ನವೇ ಆಗಿದ್ದರು.

ಗಂಡಸರು ಬೆಳಗಿನ ಜಾವ ಎದ್ದು ಬಡಿಗತನಕ್ಕೆ ಹೋಗಿ ೧೨ ಘಂಟೆಗೆ ಮನೆಗೆ ಹಿಂದಿರುಗುತ್ತಿದ್ದರು. ಬೆಚ್ಚಗಿನ ನೀರು ಸ್ನಾನ ಮಾಡಿ ಗಂಜಿಯನ್ನುಣುತ್ತಿದ್ದರು. ೨ ಗಂಟೆಗೆ ಮಧ್ಯಾಹ್ನದ ಊಟ ಪುನಃ ಕೆಲಸಕ್ಕೆ ತೆರಳುತ್ತಿದ್ದರು ಸೂರ್ಯಾಸ್ತವಾದಂತೆ ಮನೆಗೆ ಹಿಂದಿರುಗಿ ರಾತ್ರಿ ೮ ಗಂಟೆಗೆ ಊಟ ಮಾಡುತ್ತಿದ್ದರು, ಐವರ ಕುಟುಂಬ ತಿಂಗಳೊಂದಕ್ಕೆ ೮ ರೂ. ಅನ್ನ ಖರ್ಚು ಮಾಡುತ್ತಿತ್ತು. ಬ್ರಾಹ್ಮಣರು ಆರಾಧಿಸುವ ದೇವರುಗಳನ್ನೇ ಆರಾಧಿಸುತ್ತಿದ್ದರು, ಕೆಲಸಕ್ಕೆ ವಾಡಿಕೆಯ ರಜೆ ಇರಿಸಿಕೊಂಡಿದ್ದರು, ಹಳ್ಳಿಯ ದೇವರಗಳೇ ಅವರ ಕುಟುಂಬ ದೇವತೆ ಆಗಿದ್ದವು. ಮಾಟಮಂತ್ರದಲ್ಲಿ ಭೂತ ಪ್ರೇತ ಪಿಶಾಚಿಗಳನ್ನು ನಂಬಿದ್ದರಲ್ಲದೆ ಗತಿಸಿದ್ದ ದುಷ್ಟ ಶಕ್ತಿಯನ್ನು ಹೆದರಿ ಬಾಳುತ್ತಿದ್ದರು. ಕೊಂಕಣಸು ಹಾಗೂ ಕಲ್ಹಾಡ ಬ್ರಾಹ್ಮಣರನ್ನು ತಮ್ಮ ಮನೆಯಲ್ಲಿ ನಡೆವ ಪೂಜಾಕಾರ್ಯಗಳಿಗೆ ಬ್ರಾಹ್ಮಣರನ್ನು ಆಹ್ವಾನಿಸುತ್ತಿದ್ದರು, ಹುಡುಗಿಯರು ೧೨ ವರ್ಷದೊಳಗಿರುವಾಗಲೇ ವಿವಾಹವಾಗಬೇಕಿತ್ತು, ಬಹುಪತ್ನಿತ್ವ ರೂಡಿಯಲ್ಲಿತ್ತು ವಿಧವಾ ವಿವಾಹಕ್ಕೆ ನಿಷೇಧವಾಗಿತ್ತು, ಶವ ಸಂಸ್ಕಾರ ನಡೆಸಿ ೧೦ ದಿನಗಳವರೆಗೆ ಸೂತಕ ಆಚರಿಸುತ್ತಿದ್ದರು, ಜಾತಿ ಮುಖಂಡರಿಂದ ಸಾಮಾಜಿಕ ಜಗಳ ಬಗೆ ಹರಿಸಲಾಗುತ್ತಿತ್ತು. ಮಕ್ಕಳನ್ನು ಶಾಲೆಗೆ ಕಳಿಸದೆ ತಮ್ಮ ವೃತ್ತಿ ಕೌಶಲ್ಯ ಸುಧಾರಣೆಗೆ ತೊಡಗಿರುತ್ತಿದ್ದರು, ಗತಕಾಲದ ಉ.ಕ.ದ ಬಡಿಗನ ಚಿತ್ರಣ ಈ ರೀತಿ ಹಳೆಯ ಗ್ಯಾಜೆಟಿಯರ ನೀಡಿದೆ.

ಮರದ ತುಂಡೊಂದು ಪೀಠೋಪಕರಣವಾಗಿ ರೂಪಗೊಳ್ಳುವ ಮುನ್ನ ಅನೇಕ ಪ್ರಕ್ರಿಯೆ ಒಳಗೊಳ್ಳುವುದಿದೆ. ಕಾನಿನಲ್ಲಿ ಮರ ಮೊದಲು ಕಡಿಯಲಾಗುತ್ತಿದೆ. ಹಿಂದೆಲ್ಲ ಮರದ ದಿಮ್ಮೆ ಉರುಳಿಸಿ ತೆಪ್ಪದಲ್ಲಿ ತೇಲಿಸಿ ಬಿಡಲು ಆನೆಗಳನ್ನು ಬಳಸಲಾಗುತ್ತಿತ್ತು. ಆಗ ಉ.ಕ.ದ ನದಿ ತೀರದಲ್ಲಿ ರಸ್ತೆಗಳು ನಿರ್ಮಾಣಗೊಂಡಿರಲಿಲ್ಲ ಕಾಳಿ, ಗಂಗಾವಳಿ, ಅಘನಾಶಿನಿ, ಶರಾವತಿ

ನದಿಗಳಲ್ಲಿ ಭರತ ಇಳಿತ ಅನುಲಕ್ಷಿಸಿ ತೆಪ್ಪಗಳ ಮೂಲಕ ದಿಮ್ಮಿಗಳನ್ನು ಅದರ ಮೇಲೆ ಇರಿಸಿ ಹಿರಿದಾದ ಕರಗಸದಿಂದ ಕೊಯ್ಯುತ್ತಿದ್ದರು. ಒಬ್ಬ ಅಟ್ಟಣಿಗೆಯ ಮೇಲೆ ನಿಂತರೆ ಇನ್ನೊಬ್ಬ ಅದರ ಕೆಳಗೆ ನಿಂತು ಕರಗಸ ದಿಮ್ಮಿಗೆ ಹದವಾಗಿರಿಸಿ ಕೊಯ್ಯುತ್ತಿದ್ದನು ಇದು ಮಾನವ ಚಾಲಿತ ಕೊಯ್ಯುವಿಕೆ. ಸಾಮಿಲ್ಲಗಳ ಆಗಮನ ಈಗ ಮಾನವ ಚಾಲಿತ ಕರಗಸದ ಕೆಲಸ ಇಲ್ಲವಾಗಿಸಿದೆ. ಕರಾವಳಿ ತೀರ ಪ್ರದೇಶ ಹೊನ್ನಾವರ, ಕುಮಟಾ ಅಂಕೋಲಾ, ಕಾರವಾರ ಭಟ್ಕಳ ತಾಲೂಕಿನಲ್ಲಿ ಸಾಮಿಲ್ಲಗಳು ತಲೆಎತ್ತಿ ನಿಂತಿವೆ. ಹೀಗಾಗಿ ಬಡಿಗತನದ ಪೂರ್ಣ ಪ್ರಮಾಣದ ಕೆಲಸ ಇಲ್ಲವಾಗಿದೆ ಯಂತ್ರಚಾಲಿತ ಲೇತ್‌ಗಳು ಬಡಿಗರ ಕೆಲಸಗಳನ್ನು ಮಾಡುತ್ತಿರುವುದರಿಂದಾಗಿ ಕೊಯ್ಯುವುದು ಹಲಗೆ ಮಾಡುವುದು ಪ್ರಮುಖವಾಗಿ ಯಂತ್ರಗಳಿಂದ ನಡೆಯುತ್ತವೆ.

ಜೋಡಣೆಯ ಕೆಲಸ ಮಾತ್ರ ಬಡಿಗತನಕ್ಕೆ ಸೀಮಿತ, ಜೋಡಣೆಗೆ ಕಲಾಸಿ ಇಲ್ಲವೆ ಕುಶಲತೆ ಅನ್ನುವರು. ಪೀಠೋಪಕರಣ ಗಟ್ಟಿ ಮುಟ್ಟಾಗಿ ಅಂದವಾಗಿರಿಸುವಲ್ಲಿ ಬಡಿಗನ ಕರಕೌಶಲ್ಯ ಎದ್ದು ಕಾಣುವುದು. ಪೀಠೋಪಕರಣ ರಂದ್ರ ಮಚ್ಚಲು ಬೆಣೆಯನ್ನು ಹಾಕಲು ಡೋವಟೇಲ್ (ಪಾರಿವಾಳ ಬಾಲದ ಜೋಡಣೆ ಸಾಮಾನ್ಯವಾದುದು) ಬಡಿಗನು ಯಾವುದಾದರೂ ಪೀಠೋಪಕರಣ ತಯಾರಿಸುವ ಮೊದಲು ಅನ್ಯರಿಗೆ ಮಾಡಿಕೊಟ್ಟಿರುವ ಉಪಕರಣವನ್ನು ಮಾದರಿಯಾಗಿರಿಸಿ ಹೊಸದನ್ನು ತಯಾರಿಸುವನು. ಇಲ್ಲವಾದರೆ ಅನುಭವ ಜನ್ಯ ಪೀಠೋಪಕರಣ ತಯಾರಿಸುವಲ್ಲಿ ಜಿಲ್ಲೆಯ ಬಡಿಗರು ಸಿದ್ದ ಹಸ್ತರು. ಗ್ರಾಹಕರ ಬೇಡಿಕೆಗೆ ಒಪ್ಪುವಂಥ ಉಪಕರಣ ತಯಾರಿಸಲು ಹಾಳೆಯ ಮೇಲೆ ಬಡಿಗನು ನೀಲನಕ್ಷೆ ತಯಾರಿಸಿಕೊಳ್ಳುವನು. ಸಾಮಾನ್ಯ ಬಡಿಗನು ಕಲ್ಪನೆಯಲ್ಲಿ ತನ್ನ ಕುಶಲತೆಯನ್ನು ಹರಿಯಗೊಟ್ಟು ಪೀಠೋಪಕರಣ ತಯಾರಿಸುವುದಿದೆ. ಕೆಲವು ಕಂಪನಿಗಳು ಬಡಿಗತನಕ್ಕೆ ಸಂಬಂಧಿಸಿದ ಪತ್ರಿಕೆಗಳನ್ನು ಹೊರಡಿಸುತ್ತಿವೆ. ಅದರಲ್ಲಿ ಪೀಠೋಪಕರಣ ಚಿತ್ರ ನಿರ್ಮಾಣಕ್ಕೆ ಬಳಸಿಕೊಳ್ಳುವುದಕ್ಕೆ ಶಾಲೆ ಕಾಲೇಜು, ಅಂಗಡಿ, ಕಂಪನಿ ಕಡೆಯಿಂದ ಪೀಠೋಪಕರಣ ಬೇಕೆಂದಾಗ ಬೇಡಿಕೆ ಇದ್ದರೆ ಅವರಿಂದ ಕೋರಿಕೆ ಪತ್ರ ಪಡೆಯುವರು. ಜಿಲ್ಲೆಯಲ್ಲಿ ಅನೇಕ ಫರ್ನಿಚರ್ಸ್ ಮಾರ್ಟಗಳಿದ್ದವು. ಅವು ಕಣ್ಮುಚ್ಚಿವೆ. ರೆಡಿಮೇಡ ಫೈಬರ್ ಫರ್ನಿಚರ್ ದೊರೆಯುವುದು ಒಂದು ಕಾರಣ, ಹೀಗಾಗಿ ಆಚಾರಿಗೆ ಬುಲಾವೊ ತಲೆಬಿಸಿ ಇಲ್ಲವಾಗಿದೆ. ಈ ಕೆಲಸ ವಿದಾಯಗೊಂಡಿರುವ ಹಿನ್ನೆಲೆಯಲ್ಲಿ ಬಡಿಗರು ಲಕ್ಷ್ಯ

ಸೆಂಟರಿಂಗ್ ಕೆಲಸದೆಡೆಗೆ ವಾಲಿದೆ. ಕಟ್ಟಡ ನಿರ್ಮಾಣಗೊಳ್ಳುವಾಗ ಮೇಲ್ಛಾವಣೆ ಇಲ್ಲವೆ ಇತರ ಕಾಂಕ್ರೀಟ್ ಕೆಲಸಕ್ಕೆ ಕಟ್ಟಿಗೆ ಹಲಗೆಗಳನ್ನು ತಾತ್ಕಾಲಿಕವಾಗಿ ನಿಲ್ಲಿಸುವ ಕಾರ್ಯಕ್ಕೆ ಸೆಂಟರಿಂಗ್ ಅನ್ನುವರು.

ಸಿದ್ಧ ಬಾಗಿಲು ಚೌಕಟ್ಟು, ಅಲುಮಿನಿಯಂ ಕಿಡಕಿಗಳು ಬಂದಿವೆ. ಇದರಿಂದ ಬಡಿಗತನಕ್ಕೆ ಸಂಚುಕಾರ ಬಂದಂತಾಗಿದೆ. ಬಡಿಗತನವು ಸಾಂಪ್ರದಾಯಿಕ ಪದ್ಧತಿಯಿಂದ ತಿರುಗಿ ಆಧುನಿಕತೆ ಕಡೆಗೆ ವಾಲುತ್ತಿದೆ. ಫೆವಿಕಾಲ್, ಪ್ಲಾಯವುಡ ಬಳಕೆಯಿಂದಾಗಿ ಕಟ್ಟಿಗೆಗೆ ಬೇಕಾದಂತೆ ತಿರುವು ಮುರುವು ನೀಡಿ ಸುಲಭ ಗ್ರಾಹ್ಯವಾಗಿ ಪೀಠೋಪಕರಣಗಳನ್ನು ಮನೆಗೊಪ್ಪುವ ರೀತಿಯಲ್ಲಿ ಚಿತ್ತಾಕರ್ಷಕವಾಗಿ ತಯಾರಿಸಬಹುದಾಗಿದೆ. ಹೀಗಾಗಿ ಸಾಂಪ್ರದಾಯಿಕ ಬಡಿಗತನ ವಿದಾಯ ಹೇಳಿಸಿಕೊಂಡಿದೆ.

ಜಿಲ್ಲೆಯ ಕಾಡಿನಲ್ಲಿ ಬೆಳೆಯುವ ಮರಗಳನ್ನೇ ಬಡಿಗ ಬಳಸುತ್ತಾನೆ. ಸಾಗವಾನಿ, ಬೀಟೆ, ಸಾಲಹೊನ್ನೆ, ಕಿಂದಾಳ, ನಂದಿ ಮತ್ತು ಬರಣಿಗಿ, ಕಲಸಾಗಡಿ, ಹೇಗ, ನೇರಳೆ, ಹೆಬ್ಬಲ್ಸು ಕೋಶಿಮರ, ಬಿದಿರು, ಬೆತ್ತ, ತೇಗ, ತೆಂಗಿನ ಪಟ್ಟಿ, ಅಡಿಕೆ ಪಟ್ಟಿ, ಮಾವು, ಗೋಡಂಬಿ ಮರ, ಜಂಬೆ, ಶ್ರೀಗಂಧ, ನೀಲಗಿರಿ, ದಾಂಡೇಲಿ ಸಾಗವಾನಿ, ದೇವದಾರ, ಗುಳಮಾವು, ತಾರಿ, ಜಿಕ, ಗಗಿ (ಪರಿಮಳ ಮರ) ಹೆದ್ದಿ, ನೇರಲೆ, ಗೊಜ್ಜುವ, ಭರಣಿಗೆ, ಭೋಗಿ, ಮತ್ತಿಹೆದ್ದಿ, ಕೇದಗೆ, ಗೊಚ್ಚಲು, ಉತ್ತರ ಕನ್ನಡದ ಘಟ್ಟದ ಮೇಲಿನ ಹಾಗೂ ಕೆಳಗಿನ ಅರಣ್ಯಗಳಲ್ಲಿ ಬೆಳೆದ ಮರಗಳು ಬಡಿಗರಿಗೆ ಸಂಪನ್ಮೂಲಗಳಾಗಿವೆ. ಬೆತ್ತಗಳನ್ನು ಬಳಸಿ ಪೀಠೋಪಕರಣ ಪಾಠೋಪಕರಣ ತಯಾರಿಸುವ ಬಡಿಗರು ಗೇರುಸೊಪ್ಪಾ, ಶಿರಾಲಿ, ದಾರವಾಡ, ಆರೋಳ್ಳಿ ದಾಂಡೇಲಿ, ಕುಮಟಾ, ಅಂಕೋಲೆಗಳಲ್ಲಿ ಇದ್ದಾರೆ. ಬೆತ್ತಗಳ ಮೇಲೆ ಅರಣ್ಯ ಇಲಾಖೆಯ ನಿರ್ಭಂದ ಕೆಂಗಣ್ಣು ಹೆಚ್ಚಿರುವುದರಿಂದ ಬೆತ್ತದ ಉದ್ಯಮಕ್ಕೆ ಬೆತ್ತದ ಪ್ರಹಾರ ಬಿದ್ದಂತಿದೆ. ಫೈಬರ್ ಪೀಠೋಪಕರಣ ಬೆತ್ತದ ಪೀಠೋಪಕರಣಗಳನ್ನು ಮೂಲೆ ಗುಂಪಾಗಿಸಿದೆ.

ಜಿಲ್ಲೆಯ ಬಡಿಗರು ತಮ್ಮ ಸ್ಥಾನಿಕ ಕೆಲಸವನ್ನು ನಂಬಿರುವುದು, ಕಷ್ಟ ಸಾಧ್ಯ, ಹೀಗಾಗಿ ಅವರು ವಲಸಿಗಳಾಗಿದ್ದಾರೆ. ಪಟ್ಟಣ ಮಹಾನಗರಗಳ ಘಟ್ಟದ ಮೇಲೆ ವಲಸೆ ಹೋಗುವರು. ತಮ್ಮ ಸಂಸಾರ ಸರಂಜಾಮು ಅವರು ಒಯ್ಯುವುದಿಲ್ಲ. ಹಬ್ಬ ಹರಿದಿನ ಸಂದರ್ಭ ಇಲ್ಲವೆ ತಿಂಗಳಿಗೊಮ್ಮೆ ಹಪ್ತೆಗೊಮ್ಮೆ

ಊರಿಗೆ ಬಂದು ಹೆಂಡತಿ ಮಕ್ಕಳನ್ನು ಸೇರುವರು. ಹನ್ನೆರಡು ವರ್ಷ ವಯಸ್ಸಿನಲ್ಲಿ ತಮ್ಮ ಮಕ್ಕಳಿಗೆ ದುಡಿಮೆಗೆ ಅಣಿಗೊಳಿಸುವ ಅವರ ಪದ್ಧತಿಯಿಂದ ಮಕ್ಕಳು ಅರೆ ವಿದ್ಯಾವಂತೆರಾಗುತ್ತಿದ್ದಾರೆ. ಕೆಲ ಬಡಿಗರು ನಾವೆ, ದೋಣಿ, ಮಚ್ವೆ, ಮೀನು ಬೋಟು, ನಿರ್ಮಿಸುವುದರಲ್ಲಿ ಹೆಚ್ಚಿನ ಸಂಬಳ ಪಡೆಯುವರು. ಹೀಗಾಗಿ ಪೂರ್ಣ ಪ್ರಮಾಣದ ಬಡಿಗತನದ ಬಗ್ಗೆ ಆಸ್ತೆ ಅವರಲ್ಲಿ ಕಡಿಮೆಯಾಗಿದೆ. ಗೋವೆ, ರತ್ನಗಿರಿ, ಮುಂಬಯಿ, ದಕ್ಷಿಣ ಕನ್ನಡದಲ್ಲಿ ಬೋಟ ನಿರ್ಮಾಣ ಕೆಲಸಕ್ಕಾಗಿ ಬಡಿಗರು ಹೋಗುತ್ತಿರುವರು. ಜಿಲ್ಲೆಯ ಪ್ರತಿ ಕೃಷಿಕನು ತನ್ನ ಮಟ್ಟಿಗೆ ತನಗೆ ಬೇಕಾಗಿರುವ ಕಾಷ್ಟ ಉಪಕರಣ ತಯಾರಿಸಲು ಸೀಮಿತವಾಗಿ ಬಡಿಗನಾಗಿರುವನು. ನೇಗಿಲು ತಯಾರಿಕೆ ಮನೆಯ ಮರಮುಟ್ಟು ತಯಾರಿಕೆಗೆ, ಆತ ತಯಾರಿಸಿರುವ ಪೀಠೋಪಕರಣ ಒರಟು ಕ್ರಮದ್ದೇ ಆದರೂ ಅದು ಕಾರ್ಯಕ್ಷಮತೆಯನ್ನು ಹೊಂದಿರುವುದು. ಹೀಗಾಗಿ ನುರಿತ ಬಡಿಗನಿಗೆ ಕೊಡಬೇಕಾಗಿರುವ ಕೂಲಿ ಕೃಷಿಕನಿಗೇ ದಕ್ಕಿದಂತಾಗುವುದು. ತನ್ನ ಮನೆ ನಿರ್ಮಿಸಲು ತಾನೇ ಆಚಾರಿ ಆತ ಯಾವುದೇ ಜಾತಿಗೆ ಸೇರಿದರೂ ಅರೆ ಕುಶಲ ಆಚಾರಿತನ ಸಿದ್ಧಿಸಿದ್ದಾಗಿದೆ.

ಕೆಲಸ ಗಿಟ್ಟಿಸಿಕೊಳ್ಳಲು ಬಡಿಗ ಸಂಚಾರಿಯಾಗಬೇಕು, ಕಟ್ಟಿಗೆ ಆಯ್ಕೆ ಮಾಡುವಾಗ ತೊಂದರೆ ಆಗುವುದಿದೆ. ಬೇಸಿಗೆಗಾಲ ಕೆಲಸಕ್ಕೆ ಅನುಕೂಲ. ಒಂದೆಡೆಗೆ ಕೆಲಸ ಮಾಡಲು ಬಡಿಗನಿಗೆ ತನ್ನದೇ ಶೆಡ್ಡು ಇರುವುದಿಲ್ಲ. ಹೋದಲ್ಲಿ ಬಂದಲ್ಲಿ ಕೆಲಸಸಿಕ್ಕಲ್ಲಿ ತಂಗು ದಾಣ ನಿರ್ಮಿಸಿಕೊಂಡು ಅಲ್ಲೇ ಬಿಡಾರ ಹೂಡಿ ತನ್ನ ಕಾಯಕ ನಡೆಸುತ್ತಾರೆ. ಕಟ್ಟಡ ನಿರ್ಮಾಣ ವಾಗುತ್ತಿರುವಾಗಲೇ ಅಲ್ಲಿಯೇ ಒಲೆ ಹೊತ್ತಿಸಿ ಸಂಚಾರಿ ಬಡಿಗರು ಅಡುಗೆ ಮಾಡಿಕೊಳ್ಳುವರು.

ವಿಶ್ವಕರ್ಮ ಸಮಾಜಕ್ಕೆ ಸೇರಿದ ಬಡಿಗರು ಬೇರೆಡೆ ಹೋದಾಗ ಅನ್ಯರಲ್ಲಿ ಊಟ ಸೇವಿಸುತ್ತಿರಲಿಲ್ಲ. ತಾವೇ ಅಡಿಗೆ ತಯಾರಿಸಿಕೊಳ್ಳುತ್ತಿದ್ದರು. ಹಿಂದೆ ಬಡಿಗರು ಬಳಸುತ್ತಿರುವ ಸಾಧನ ಉಪಕರಣ ತಾವೇ ತಯಾರಿಸುತ್ತಿದ್ದರು. ಹೀಗಾಗಿ ಅವರು ಕಮ್ಮಾರರು ಹಾಗೂ ಬಡಿಗರು. ಬಡಿಗರು ಇರುವ ಸ್ಥಳಕ್ಕೆ ಸಾಲೆಹಿತ್ತಲು ಅನ್ನುತ್ತಿದ್ದರು. ಬಹುತೇಕ ಊರು ಇದ್ದಲ್ಲಿ ಸಾಲೆಹಿತ್ತಲುಗಳು ಇವೆ. ಕಟ್ಟಿಗೆಯ ಕೆಲಸಕ್ಕೆ ಕಬ್ಬಿಣದ ಕೆಲಸ ಪೂರಕವಾಗಿರುತ್ತಿತ್ತು. ಕತ್ತಿ, ಚೂರಿ, ಚಾಕು,

ನೇಗಿಲು, ಉಳಿ, ಖಡ್ಗ, ಉಳುವ ಉಪಕರಣ, ಅಗೆಯುವ ಉಪಕರಣ, ಕತ್ತರಿಸುವ ಉಪಕರಣ, ಒಕ್ಕಲುತನ ಉಪಕರಣ, ಸಂಗ್ರಹಿಸುವ ಉಪಕರಣಗಳನ್ನು ಸಾಲೆಹಿತ್ತಲುಗಳಲ್ಲಿ ಕಮ್ಮಾರಿಕೆ ಮತ್ತು ಬಡಿಗತನದ ದ್ವಿಕೌಶಲ್ಯಗಳಿಂದ ತಯಾರಿಸುತ್ತಿದ್ದರು. ಕಾಲಾಂತರದಲ್ಲಿ ಕಮ್ಮಾರಿಕೆ ಸ್ವತಂತ್ರ್ಯ ವೃತ್ತಿಯಾಗಿ ಪರಿಣಮಿಸಿದೆ.

ಅಂಕೋಲೆಯ ಬಡಿಗೇರಿ ಹಿಂದೊಮ್ಮೆ ಬಡಿಗರ ಊರಾಗಿತ್ತಂತೆ, ಗೋಕರ್ಣದ ಬಳಿ ಆಚಾರಿ ಕಟ್ಟೆ ಇದೆ ಅಚ್ಚೆ ಎಂಬಲ್ಲಿ ಬಡಿಗರ ಕುಟುಂಬ ಸಮೂಹ ಇದೆ. ಹೊನ್ನಾವರದ ಮಾವಿನಕುರ್ವಾ ಬಡಿಗರು ಕಾಷ್ಟ ಉಪಕರಣ ತಯಾರಿಸುವುದರ ಜೊತೆ ಬೀಗ ತಯಾರಿಸುವಲ್ಲಿ ಖ್ಯಾತನಾಮರು. ಹಿಂದೊಮ್ಮೆ ಬಹುಸಂಖ್ಯಾತ ಬಡಿಗರಿದ್ದ ಮಾವಿನಕುರ್ವೆ ಕಮ್ಮಾರಿಕೆಯಿಂದಾಗಿ ಕರ್ನಾಟಕದ ಅಲಿಘರ್ ಎಂದೆನಿಸಿತ್ತು.

ಉತ್ತರ ಕನ್ನಡದ ಬಡಿಗರು ಮಹಿಳೆಯರನ್ನು ಸಹೋದ್ಯೋಗಿಯಾಗಿ ಬಳಸಿಕೊಳ್ಳುವುದು ಕಡಿಮೆ. ಕಿಸಳ್ ಬಳಸುವಾಗ ಉಸುಕಿನ ಪೇಪರ ತಿಕ್ಕಲು ಹಾಗೂ ಪಾಲಿಶ್ ಹಚ್ಚುವಾಗ ಬಡಿಗರು ಮನೆಯ ಹೆಂಗಸರನ್ನು ಸಹಾಯಕ್ಕೆಂದು ಹಿಂದೆಲ್ಲ ಪಡೆಯುತ್ತಿದ್ದರು. ಆದರೆ ಮಹಿಳೆಯರಿಗೆ ಅವರದೇ ಮನೆಗೆಲಸ ಹೆಚ್ಚು ಹೀಗಾಗಿ ಬಡಿಗತನಕ್ಕೆ ಸೇರುತ್ತಿಲ್ಲ.

ಜಿಲ್ಲೆಯಲ್ಲಿ ಬಡಿಗರಿಗೆ ತರಬೇತಿಯನ್ನು ನೀಡುವ ಕೇಂದ್ರಗಳು ಇನ್ನಿಲ್ಲವಾಗಿದೆ. ಕುಮಟಾ ಹೊನ್ನಾವರದಲ್ಲಿರುವ ಉದ್ಯೋಗಶಾಲೆ, ಅರವತ್ತರ ದಶಕದಲ್ಲೇ ಇನ್ನಿಲ್ಲವಾದವು. ಕಸಬಾಶಾಲೆ, ಸೇಂಟಥಾಮಸ್ ಪಾಠಶಾಲೆ ಬಡಿಗತನ ವಿಷಯವನ್ನು ಹಿಂದೆ ಕಲಿಸಲಾಗುತ್ತಿತ್ತು. ಮುಂಡಗೋಡದ ಲೋಯತಾ ಪ್ರೌಢಶಾಲೆಯಲ್ಲಷ್ಟೆ ಬಡಿಗತನ ವಿಷಯವಾಗಿದೆ. ಬಡಿಗತನ ಕಲಿಯಲು ವಿದ್ಯಾರ್ಥಿಗಳು ಬರುತ್ತಿಲ್ಲವಾದ್ದರಿಂದ ಕೇಂದ್ರಗಳು ಮುಚ್ಚಿವೆ. ಯುವಕರಿಗೆ ಡಿಸ್ಸೈಲ, ಮೆಕನಿಕ್ಸ್ ಕಲಿಯುವುದರಲ್ಲಿ ಹೆಚ್ಚಿನ ಆಸಕ್ತಿ. ಬಡಿಗತನ ಕೂಲಿಕಸಬು ಅನ್ನುವ ಕೀಳರಿಮೆ ಮೂಡಿದೆ. ಬೇರೊಂದು ಉದ್ಯೋಗ ದೊರೆಯದೆಂದು ಮನೆಮಂದಿಯಡಿಯಲ್ಲೆ ಕಲಿಯುವ ಕುಲ ಕಸಬಾಗಿದೆ.

ವರ್ಣ ಸಂಕರದಿಂದಾಗಿ ಬಡಿಗತನ ಕೇವಲ ಜಾತಿಗೆ ಸೀಮಿತವಾದ ಕುಲಕಸುಬಾಗಿ ಉಳಿದಿಲ್ಲ. ಜಿಲ್ಲೆಯಲ್ಲಿ ಖಾರ್ವಿ ಸಮಾಜಗಳೇ ಹೆಚ್ಚಿನ ಬಡಿಗರು.

ವಿಶ್ವಕರ್ಮ ಸಮಾಜದವರೇ ಎಲ್ಲೆಡೆಯಲ್ಲಿ ಬಡಿಗರಾಗಿದ್ದು ಕಡಿಮೆ ಅನ್ನಬಹುದು. ಖಾರ್ವಿಯರಲ್ಲಿ ಮೇಸ್ತ್ರಿ ಅನ್ನುವವರು ಬಡಿಗರು ಖಾಂಡೆ ಖಾರ್ವಿಯರು ಮಚ್ವೆ (ದೊಡ್ಡ ಕಟ್ಟಿಗೆಹಡಗು) ನಿರ್ಮಿಸುವುದರಲ್ಲಿ ಹಾಗೂ ಹಾಯದ ಮೂಲಕ ಹಡಗ ಸಾಗರದಲ್ಲಿ ನಡೆಸಲು ಸಿದ್ಧಹಸ್ತರು, ಹಳಿಯಾಳ, ದಾಂಡೇಲಿ ಹಾಗೂ ಭಟ್ಕಳದಲ್ಲಿ ಮಟ್ಲಿವರು ಬೆರಳಣಿಕೆಯಷ್ಟು ಬಡಿಗರಾಗಿರುವರು. ಬ್ರಾಹ್ಮಣರು ಬಡಿಗರಾಗಿದ್ದು ಕಡಿಮೆ. ಅವರು ಫರ್ನಿಚರ ಮಾರ್ಟನ್ನು ನಡೆಸುತ್ತಿದ್ದಾರೆ. ಕ್ರಿಶ್ಚಿಯನ್ನರು ಬಹುಸಂಖ್ಯಾತ ಬಡಿಗರು, ಗಾರೆಕಲಸದೊಂದಿಗೆ ಬಡಿಗತನ ಜೊತೆಗೂಡಿ ಮಾಡುವುದು ಅನಿವಾರ್ಯವಾಗಿದೆ. ಮಲಬಾರದಿಂದ ಜಿಲ್ಲೆಗೆ ಬಂದ ಕೇರಳಿಯರು ಪ್ರಾರಂಭದಲ್ಲಿ ದಿಮ್ಮಿಯ ಉದ್ಯೋಗ ಮಾಡುತ್ತಿದ್ದರು. ಅವರಲ್ಲಿ ಕೆಲವರು ಸಾಮಿಲ್ಲ ನಡೆಸುತ್ತಿದ್ದರು. ಅವರೇ ಬಡಿಗರಾದದ್ದಿದೆ, ಇಲ್ಲವೆ ತಮ್ಮ ಕೆಲಸಕ್ಕೆ ಪೂರಕವಾಗಿ ಕೇರಳದಿಂದ ಬಡಿಗರನ್ನು ಆಮದು ಮಾಡಿಕೊಂಡಿರುವರು. ಅವರೇ ಜಿಲ್ಲೆಯ ಮೂಲದ ಬಡಿಗರಂತೆ ಆಗಿರುವರು. ಕೆತ್ತನೆ ಕೆಲಸ ಮಾಡುವ ಗುಡಿಗಾರರಿಗೆ ಬಡಿಗರು ಸಹಾಯ ಹಸ್ತ ನೀಡುತ್ತಿರುವರು. ಮಂಟಪ, ರಥ, ಬಾಗಿಲ, ಚೌಕಟ್ಟು, ಮಂಚ, ಪೀಠೋಪಕರಣದ ದೊಡ್ಡ ಪ್ರಮಾಣದ ಕೆಲಸ ಬಡಿಗರು ನಿರ್ವಹಿಸುತ್ತಿದ್ದರೆ, ಪೂರಕವಾಗಿ ಸೂಕ್ಷ್ಮ ಅತೀಸೂಕ್ಷ್ಮ ಕೆತ್ತನೆಗಾಗಿ ಗುಡಿಗಾರರು ಸ್ನೇಹ ಹಸ್ತ ಚಾಚಬೇಕಾಗಿದೆ. ಗುಡಿಗಾರಿಕೆ ಕಮ್ಮಾರಿಕೆ ಹಾಗೂ ಬಡಿಗತನ ಒಂದು ಇನ್ನೊಂದರೊಂದಿಗೆ ಸಹವರ್ತಿಯಾಗಿ ಹೋಗುವುದನ್ನು ಸೀಮಿತ ಕ್ಷೇತ್ರಗಳಲ್ಲಿ ಕಾಣಬಹುದಾಗಿದೆ. ಬಡಿಗಾರರು ಕೆತ್ತನೆ ಮುಂದೆ ಗುಡಿಗಾರಿಕೆಯನ್ನು ನೋಡಿ ಗುಡಿಗಾರರಾದದ್ದು ಅನೇಕ ನಿದರ್ಶನಗಳಿವೆ. ಕುಮಟೆಯ ಬಡಿಗಾರರು ಗುಡಿಗಾರರಾಗಿದ್ದಾರೆ.

ಹಾಲಕ್ಕಿಯುರು, ನಾಡವರರು, ಅಗೇರರು, ನಾಮಧಾರಿಗಳು, ಗುಡಿಗಾರರು, ಕ್ರೈಸ್ತರು, ಕೊಮಾರ ಪಂಥರು, ಕೊಂಕಣ ಮರಾಠಿಗಳು, ಗಾಮೊಕ್ಕಲಿಗರು, ಕರಿಒಕ್ಕಲಿಗರು, ಗೌಳಿಗರು, ಸಿದ್ಧಿಗಳು, ಮಲಬಾರಿಗಳು, ಗಿರಿಜನರು, ಕುಣಬಿ, ಮರಾಠಿ, ಗೌಳಿಗರು, ಹರಕಂತರು ಪೂರ್ಣಪ್ರಮಾಣದ ಬಡಿಗತನ ಅನುಸರಿಸುತ್ತಿಲ್ಲ. ಆದರೆ ತಮ್ಮ ಕನಿಷ್ಠ ಅಗತ್ಯ ಪೂರೈಕೆಗೆ ಅರೆ ಬಡಿಗತನ ಅನುಸರಿಸುವ ಬಡಿಗರೇ ಆಗಿರುವರು. ಬ್ರಾಹ್ಮಣ ವರ್ಗ ಪರಿಪೂರ್ಣವಾಗಿ ವೃತ್ತಿಯಿಂದ ದೂರವುಳಿದಿರುವುದು.

ಉತ್ತರ ಕನ್ನಡದ ಹಿಂದೂ ಮತಾವಲಂಬಿ ಬಡಿಗರು ವೈದಿಕ

ಪರಂಪರೆಯ ರೀತಿಯ ರಿವಾಜುಗಳನ್ನು ಮೈಗೂಡಿಸಿಕೊಂಡಿರುವರು. ವಿಶ್ವಕರ್ಮ ಇವರ ಆರಾಧ್ಯ ದೈವವಾದರೂ ಸ್ಥಳೀಯ ದೇವತೆಯನ್ನೇ ನೆಚ್ಚಿ ಆರಾಧಕ ರಾಗಿರುವರು. ಗೋಕರ್ಣದ ಕಮಟೇಶ್ವರ ದೇವರನ್ನು ಜಿಲ್ಲೆಯ ಆಚಾರಿಗಳು ನಂಬಿ ನಡೆಯುತ್ತಿದ್ದಾರೆ. ಶಿವರಾತ್ರಿ, ಅಕ್ಷಯ ತದಿಗೆ, ಕಾರ್ತಿಕ ಅಮವಾಸ್ಯೆಯಂದು ಇಲ್ಲಿ ಬಡಿಗರು ವಿಶೇಷ ಪೂಜೆ ಸಲ್ಲಿಸುವರು. ಮದುವೆಯ ವಿಧಿ ವಿಧಾನದಲ್ಲೊಂದಾದ ನಿಶ್ಚಯ ತಾಂಬೂಲ ಬೀಗರೊಡನೆಯ ಮಾತುಕತೆಯ ಮೂಲಕ ನಡೆಯುವುದು. ಜನನ-ಮರಣ ಸೂತಕದ ಬಾದೆ ತಡೆಯುವ ನಾಂದಿ ಇಡುವರು. ಎದುರು ಕಾಣಿಕೆ, ವರನಿಗೆ ಉಂಗುರ ಹಾಕುವುದು, ಹೂ ಮುಡಿಸುವಿಕೆ, ವಧು-ವರರ ಸಮಾವರ್ತನೆ ಧಾರೆ ಎರೆಯುವುದು ವರೋಪಚಾರ, ಉಟೋಪಚಾರದೊಂದಿಗೆ ಮೊದಲಾದ ಪ್ರಕ್ರಿಯೆ ವಿವಾಹ ಒಳಗೊಂಡಿರುವುದು. ಸತ್ಯನಾರಾಯಣ ಪೂಜೆ ಬಡಿಗರು ಶ್ರದ್ಧಾಭಕ್ತಿಯಿಂದ ಆಚರಿಸುವರು. ಚೊಚ್ಚಲ ಗರ್ಭಿಣಿಯರ ಗೌರವಾರ್ಥ ಗರ್ಭಿಣಿ ಪೂಜೆ ನಡೆಸುವರು, ಮಗುವನ್ನು ತೊಟ್ಟಿಲು ಹಾಕುವ ಮೊದಲು ಹವನ ನಡೆಸಲಾಗುವುದು, ಕಿವಿಯಾಭರಣ ತೊಡಿಸುವ ಹೊನಗಾರನಿಗೆ ಅಕ್ಕಿ, ತೆಂಗಿನಕಾಯಿ, ವೀಳ್ಯದೆಲೆ, ಸಿಹಿ, ಅವಲಕ್ಕಿ, ನೀಡುವರು. ಮೂರು ಅಥವಾ ಐದು ವರ್ಷದ ಮಗುವಿಗೆ ಚೌಲು ಮಾಡುವರು. ೭ ರಿಂದ ೧೧ ವರ್ಷ ವಯಸ್ಸಿನ ಮಕ್ಕಳಿಗೆ ಉಪನಯನ ಮಾಡುವರು. ನೂತನ ಗೃಹಪ್ರವೇಶ ಶಾಸ್ತ್ರೋಕ್ತವಾಗಿ ಮಾಡುವರು. ಗುರು, ಕುಲದೇವರು, ಅನ್ನಪೂರ್ಣ, ವಿಠ್ಠಲ, ರುಖುಮಾಯಿ ಇಲ್ಲವೆ ಶ್ರೀ ಗಣಪತಿ ಯಾವದಾದರೊಂದು ಫೋಟೊ ಇರಿಸಿ ಪೂಜಾ ಪುನಸ್ಕಾರದ ಗಣಹೋಮ ಹವನಾದಿಯ ಮೂಲಕ ಗೃಹಪ್ರವೇಶ ಜರುಗಿಸುವರು.

ಯುಗಾದಿ, ಅಷಾಡ, ಏಕಾದಶಿ, ನಾಗರಪಂಚಮಿ, ಶ್ರಾವಣ ಮಾಸದ ಜೊತೆ ಪೂಜೆ ನೂಲಹುಣ್ಣಿಮೆ ಕೃಷ್ಣಾಷ್ಟಮಿ, ಗಣೇಶ ಪೂಜೆ, ಗಣಹೋಮ, ನವರಾತ್ರಿ, ದೀಪಾವಲಿ ಹಬ್ಬ ಹರಿದಿನಗಳನ್ನು ಶ್ರದ್ಧಾಭಕ್ತಿ ಸಡಗರ ಸಂಭ್ರಮದಿಂದ ಆಚರಿಸುವರು. ಅಗಲಿರುವ ಹಿರಿಯ ಕಿರಿಯರ ಆತ್ಮ ಸಂತೃಪ್ತಿಗೊಳಿಸಲು ಶ್ರಾದ್ಧ ಹಾಗೂ ಸರ್ವಪಿತ ಅಮವಾಸ್ಯೆ ಆಚರಿಸುತ್ತಾರೆ.

ಸಿದ್ಧಾಪುರ ತಾಲೂಕಿನಲ್ಲಿ ಮಾಸ್ತಿಕಾನಿನ ಅಣ್ಣಪ್ಪ ಆಚಾರಿ, ದೊಡ್ಮನೆ

ದೇವಪ್ಪ ನಾಯ್ಕ, ಕಾಂವಚೂರಿನ ಪುಟ್ಟಾ ಬೋವಿ, ಗಣಪತಿ ಆಚಾರಿ, ತಿಮ್ಮಾ ಕಬ್ಬಗಾರು, ಗೊಣವತಿಯ ಗಣೇಶ ಆಚಾರಿ, ಹಿತ್ತಲ ಕೊಪ್ಪದ ಶ್ರೀಧರ ಆಚಾರಿ, ನೆಚ್ಚೂರ ಕೃಷ್ಣಪ್ಪ ನಾಯ್ಕ, ವೀರಭದ್ರನಾಯ್ಕ, ಹಸವಂತೆಯ ಈಶ್ವರನಾಯ್ಕ, ಹೊಸಳ್ಳಿಯ ಗುತ್ತಪ್ಪ ಮಡಿವಾಳ ಹೊನ್ನಾವರ, ಮಾವಿನಕುರ್ವೆಯ ಕೃಷ್ಣ ಆಚಾರಿ ಹೊನ್ನಾವರ, ಮಾಸ್ತಿ ಕಟ್ಟೆಯ ಜಟ್ಟಪ್ಪ ಆಚಾರಿ, ಗೋಕರ್ಣದ ರತ್ನಾಕರ ಆಚಾರಿ ಸೀತಾರಾಮ ಆಚಾರಿ, ಮನೋಹರ ಆಚಾರಿ, ವೆಂಕಟ್ರಮಣ ಆಚಾರಿ, ಜಿಲ್ಲೆಯ ಪ್ರಮುಖ ಆಚಾರಿಗಳು. ಮೇಲಿನ ಕೇರಿ ಆಚಾರಿಗಳು ಕುಮಟೆಯ ಆಚಾರಿಗಳು, ಶಂಕರ ಆಚಾರಿಯವರ ಅಧ್ಯಕ್ಷತೆಯಲ್ಲಿ ಆಚಾರಿ ಸಂಘ ನಿರ್ಮಿಸಿಕೊಂಡಿರುವರು, ವಕ್ಕನಳ್ಳಿ ತಿಮ್ಮಪ್ಪ ಆಚಾರಿ, ಸಿದ್ಧನ ಭಾವಿಯ ವಿನಾಯಕ ಆಚಾರಿ, ಕಾರವಾರದ ಶ್ರೀಕಾಂತ ಆಚಾರಿ, ಪ್ರೇಮಾನಂದ ಆಚಾರಿ, ಸಾಯಿನಾಥ ಆಚಾರಿ, ಗೋಪಾಲ ಮೇಸ್ತ, ಸದಾನಂದ ವೇದವಾದ್ಯ, ದಿಗಂಬರ, ಸೇಜವಾಡಕರ, ಪ್ರಭಾಕರ ಆಚಾರಿ, ಹರಿಶ್ಚಂದ್ರ ಆಚಾರಿ, ಕಾರವಾರ ಮಾಳ್ಯೆಕರ ಮನೆತನ ಬಡಿಗತನಕ್ಕೆ ಖ್ಯಾತವಾದರು. ಮಹಾರಾಜರ ಆಸ್ಥಾನದಲ್ಲಿ ಮನೆತನಕ್ಕೆ ವಿಶೇಷ ಸಿಂಹಾಸನ ಮೀಸಲಾಗಿರಿಸಿತ್ತು. ಹೊನ್ನಾವರ ಬಳ್ಕೂರಿನ ಶಿಲ್ಪಿ ಗಣೇಶ ಸೀತಾರಾಮ ಆಚಾರಿ ಬ್ರಹ್ಮರಥ ನಿರ್ಮಿಸುವುದರಲ್ಲಿ ಬ್ರಹ್ಮ ಶಿಲ್ಪಿ, ಸುಬ್ರಹ್ಮಣ್ಯ, ದೊಡ್ಮನೆ, ಸೋಂದೆ, ಸಿದ್ದಾಪುರ, ಬೈಂದೂರಿನಲ್ಲಿ ಇವರು ನಿರ್ಮಿಸಿಕೊಟ್ಟಿರುವ ರಥ ಚಿತ್ತಾಕರ್ಷಕ. ದೇವ ದೇವತೆಯರ ವಿಗ್ರಹ ನಿರ್ಮಿಸುವದರಲ್ಲಿ ಬಡಿಗತನ ಹಾಗೂ ಗುಡಿಗಾರಿಕೆ ಎರಡು ಕಲೆಗಳು ಗಣೇಶ ಆಚಾರಿಗೆ ಕರತಲಾಮಲಕವಾಗಿದೆ. ಇವರು ರಚಿಸಿರುವ ಕೃತಿಗಳಲ್ಲಿ ಶ್ರೀಮದ್ಗಾಂಭೀರ್ಯ ತುಳುಕಾಡುವುದು. ಬ್ರಹ್ಮ ಶಿಲ್ಪ ಎಂಬ ಬಿರುದು ಇವರಿಗೆ ಸಾರ್ಥಕವಾಗಿರಲು ಧರ್ಮಸ್ಥಳದ ಧರ್ಮಾಧಿಕಾರಿ ಶ್ರೀ ವಿರೇಂದ್ರ ಹೆಗಡೆ ಅವರಿಂದ ಪುರಸ್ಕೃತವಾಗಿರುವುದು ಕಾರಣವಾಗ್ಗಿರುವುದು. ಶಿಲಾಕೃತಿ ಪಡಿಮೂಡಿಸಲು ಈ ಆಚಾರಿಯ ಕೈ ಪಳಗಿರುವುದು ಬಡಿಗತನದ ಅಪರೂಪದ ವೈಶಿಷ್ಟ್ಯವಾಗಿದೆ.

ಒನಕೆ, ಏಣಿ, ಚಾನಿ, ಕುಡಗೋಲು, ಕಡಗೋಲು, ಏತ, ಗಾರಿ, ಮೇಜು, ಖುರ್ಚಿ, ತೂಗುಯ್ಯಾಲೆ, ಮಂಚ, ಪೆಟ್ಟಿಗೆ, ತೇರು, ನಾವೆ, ಮಚ್ಚೆ (ದೊಡ್ಡದಾದ ಕಟ್ಟಿಗೆ ಹಡಗ) ಬೋಟ್ (ಕರಿಹಲಗೆ) ಮಣೆ ಕಾಲ್ಮಣೆ, ಪುಟ್ಟಾಣಿಯರ ತಳ್ಳುಗಾಡಿ, ಮರದ ಗೇಟು, ಕಿಟಕಿ ಬಾಗಿಲು, ಪಕಾಸೆ, ಜಂತೆ, ಗಿಳಿಗೂಟ, ರಥ, ಪೊಂಗಾಯ (ಮೀನು ಹಿಡಿಯುವ ದೋಣಿ)

ಮೋಟಾರ ಬೋಟ್, ಮೀನಲಾಂಚು, ಪಲಕ್ಕಿ, ಲಾಲಕಿ, ಪಲಕ್ಕಿ ನಿಲ್ದಾಣದ ಹಂಸಪಾದ, ವ್ಯಾಸಪೀಠ (ಪುರಾಣ ಪುಸ್ತಕ ಇರಿಸಿದ ಪೀಠ) ಗೋಡೆ ನಾಗೊಂದಿ (ಶಿಲ್ಪ) ನಾವೆ ನಡೆಸುವ ತಾಜ (ಹುಟ್ಟು) ಏರಿಳಿವ ಬೆಂಚು, ಡೆಸ್ಕ, ಕಪಾಟು, ಮಂಟಪ, ಸ್ಟೂಲು ತಳ್ಳುಗಾಡಿ, ಡಬ್ಬ ಅಂಗಡಿ, ಸ್ಟ್ಯಾಂಡ್, ಕೊಳಗ, ಅಣಸಿ, ನಾಡ ಸಿದ್ಧೆ, ಪೇಟೆ (ಅನೌಪಚಾರಿಕ ಮಾಪಕ)ಗಳನ್ನು ಉ.ಕ. ಬಡಿಗರು ತಯಾರಿಸುವರು.


ಬಡಿಗರು ಕೈಚಾಲಿತ ಹಾಗೂ ಯಂತ್ರಚಾಲಿತ ಉಪಕರಣ ಬಳಸುವರು. ದೊಡ್ಡ ಪ್ರಮಾಣದ ಬಡಿಗತನಕ್ಕೆ ಯಂತ್ರಚಾಲಿತ ಉಪಕರಣ ಬಳಸಿದ ಅವನು ಸಣ್ಣ ಪ್ರಮಾಣದ ಬಡಿಗ ಕೆಲಸಕ್ಕೆ ಕೈಚಾಲಿತ ಯಂತ್ರೋಪಕರಣ ಬಳಸುವನು, ಕರಗಸ, ಉಳಿ, ಚಾಣ ಸುತ್ತಿಗೆ, ಉಜ್ಜುಗೋಟ, ಪಕ್ಕಡ, ಸ್ಕ್ರೂಡ್ರೈವರ್, ರೊಡರ, ವಿದ್ಯುತ್ ಚಾಲಿತ ರೊಡರನ್ನು ಸಾಮಾನ್ಯ ಬಡಿಗತನಕ್ಕೆ ಬಳಸಲಾಗುತ್ತದೆ. ಹಿಂದೆಲ್ಲ ವಿದ್ಯುತ್ ಇಲ್ಲದಾಗ ಬಡಿಗ ಚಾಣದ ನೇರವಿನಿಂದ ಸ್ಕ್ರೂಡ್ರೈವರನ್ನು ನಡೆಸುತ್ತಿದ್ದರು. ಉಳಿಗೆ ಹದವನ್ನು ತರಲು ಹಲಗೆಯ ಮೇಲೆ ಕುಪ್ಪದ ಕಲ್ಲನ್ನು ಹರಡಿಸಿ ಉಳಿಯನ್ನು ಮಸೆಯಲಾಗುತ್ತಿತ್ತು.

ಉತ್ತರ ಕನ್ನಡದ ಬಡಿಗನಿಗೆ ಕೈಚಳಕಕ್ಕೆ ಅನುಭವ ವೃತ್ತಿಪರತೆ ಕರಕುಶಲತೆಯ ಮಾನದಂಡ ಕಲ್ಪನಾ ವಿಲಾಸದ ಲಹರಿಯಲ್ಲಿ ತನ್ನ ಪ್ರತಿಭೆಯನ್ನು ಮರದ ಕೊರಡಿನ ಮೇಲೆ ಹರಿಯಗೊಟ್ಟು ಕೃತಿಯನ್ನು ಕಲಾಕುಸುಮವಾಗಿ ಅರಳಿಸುವಲ್ಲಿ ಅವನದು ಪಳಗಿದ ಕೈ.

ಉತ್ತರ ಕನ್ನಡದ ಬಡಗಿತನದ ಕೌಶಲ್ಯದ ಕೃತಿಗಳ ಸಮಗ್ರ ನೋಟ ಕಾಣಬೇಕಿದ್ದರೆ ಮಣಿಪಾಲದಲ್ಲಿಯ ವಿಜಯನಾಥ ಶೆಣೈಯವರು ನಿರ್ಮಿಸಿರುವ "ಹಸ್ತ ಶಿಲ್ಪ"ಕ್ಕೆ ಭೇಟಿ ನೀಡಬೇಕು.

○


ಉತ್ತರ ಕನ್ನಡದಲ್ಲಿ ಬಡಿಗತನ



ಮುಪಕ ಅಣೆತೆ




ಮಾವಿನ ಈರ್ವೆಯ ಮುದಿ ಆಚಾರ್ಯ




ಬಾವಿಯ ಗಡಗಡೆ




ಮಗ್ಗದ ಹಾಸು ಹಾಕುವ ತಿರುಗಣೆ




ರಾಟೆ




ನೂಲು ಸುತ್ತುವ ರಾಟೆ



ಕಲಾತ್ಮಕ ಜಾನಪದ ತೊಟ್ಟಿಲು




ಸಾಂಪ್ರದಾಯಿಕ ಕೈಮಗ್ಗ




ಹಟೆ ತಲೆಮಾರಿನವರು ಬಳಸುತ್ತಿರುವ ಮಂಚ



ಒರಗಿ ವಿಶ್ರಮಿಸುವ ಖುರ್ಚಿ



ಕಲಾತ್ಮಕ ಕಿಟಕಿ



ಒರಗಿ ಕುಳಿತುಕೊಳ್ಳುವ ಬೆಂಚು

ದಕ್ಷಿಣ ಕರ್ನಾಟಕದ ನೇಕಾರಿಕೆ

ವೆಂಕಟೇಶ್ ಆನೇಕಲ್

ನೇಕಾರಿಕೆಯ ಪ್ರಾಚೀನತೆ

ನೇಕಾರಿಕೆ ಅತಿ ಪ್ರಾಚೀನ ಕಸಬುಗಳಲ್ಲಿ ಒಂದು. ಮನುಷ್ಯನ ನಾಗರೀಕತೆಯ ಜೊತೆ ಜೊತೆಗೆ ಇದು ಬೆಳೆದು ಬಂದಿದೆ. ಮನುಷ್ಯ ಎಲೆ, ತೊಗಟೆ, ಚರ್ಮಗಳಿಂದ ಮೈ ಮುಚ್ಚಿ ಕೊಳ್ಳುತ್ತಿದ್ದುದನ್ನು ತ್ಯಜಿಸಿ ಸಸ್ಯಗಳ ನಾರಿನಿಂದ ಬಟ್ಟೆಯಂತಹದನ್ನು ಸಿದ್ಧಪಡಿಸಲು ಪ್ರಾರಂಭಿಸಿದ್ದು ನೇಕಾರಿಕೆಗೆ ನಾಂದಿಯಾಯಿತೆಂದು ಹೇಳಬಹುದು. ಬಹುಶಃ ನಾರಿನಿಂದ ಬಟ್ಟೆ ತಯಾರಿಕೆಗೆ ಅನೇಕ ಮರಗಿಡಗಳ ಕಾಂಡಗಳ ಮೇಲೆ ಬೆಳೆಯುವ ಬಲೆಯಂತಹ ಹೊದಿಕೆ ಪ್ರೇರಣೆ ತಂದಿರಲೂ ಬಹುದು. ನಾರಿನ ವಸ್ತ್ರ ತಯಾರಿಕೆಯ ಮುಂದುವರಿಕೆಯಾಗಿ ಇತರ ಸಸ್ಯ ಜನ್ಯ ಅಂದರೆ ಬೂರಗ, ಹತ್ತಿ ಇತ್ಯಾದಿಗಳಿಂದ ಎಳೆ ತೆಗೆದು ಅದನ್ನು ಬಟ್ಟೆ ತಯಾರಿಸಲು ಉಪಯೋಗಿಸಿರಬಹುದೆಂದು ನಾವು ಊಹಿಸಲು ಅವಕಾಶವಿದೆ.

ನಮ್ಮ ಅತಿಪ್ರಾಚೀನ ನಾಗರೀಕತೆಯೆಂದು ನಾವು ಭಾವಿಸುವ ಸಿಂಧೂನದಿಯ ನಾಗರೀಕತೆ ಕಾಲದ ಜನರು ಹತ್ತಿ ಹಾಗೂ ಉಣ್ಣೆಯ ವಸ್ತ್ರಗಳನ್ನು ಧರಿಸುತ್ತಿದ್ದ ಬಗ್ಗೆ ಉತ್ಖನನದಿಂದ ತಿಳಿದು ಬರುತ್ತದೆ. ಇವುಗಳನ್ನು ಗಮನಿಸಿದರೆ ಸುಮಾರು ೫೦೦೦ ವರ್ಷಗಳ ಹಿಂದೆಯೇ ನೇಕಾರಿಕೆ ನಮ್ಮಲ್ಲಿ ಬೇರೂರಿದ್ದ ಅಂಶ ಗೋಚರಿಸುತ್ತದೆ. ಹಾಗೆಯೇ ನಮ್ಮ ಅತಿ ಪ್ರಾಚೀನ ಗ್ರಂಥಗಳಿಂದ ಋಗ್ವೇದದಲ್ಲಿ ಜನರು ಹತ್ತಿ, ಉಣ್ಣೆ ಉಡುಪು ಧರಿಸುತ್ತಿದ್ದ ಬಗ್ಗೆ ಉಲ್ಲೇಖಗಳಿವೆ. ಅಂದು ಬಳಸುತ್ತಿದ್ದ ವಸ್ತ್ರಗಳಲ್ಲಿ ಕೆಳ ಉಡುಪನ್ನು 'ನಿವಿ' ಎಂದು ಮೇಲು ಉಡುಪನ್ನು 'ಅಧಿವಾಸ' ಎಂದೂ ಕರೆಯಲಾಗುತ್ತಿತ್ತು. ಬಂಗಾರದ ಜರಿಯಿಂದ ಕೂಡಿದ ಬಣ್ಣ ಬಣ್ಣದ ಬಟ್ಟೆ ಸಹ ಅಂದು ತಯಾರಾಗುತ್ತಿತ್ತು. ಆ ಕಾಲದಲ್ಲೇ ನೇಯ್ಗೆ ಒಂದು ವೃತ್ತಿ ನಿರತ ಕಸುಬಾಗಿತ್ತು ಎಂಬುದು ಗಮನಿಸಬೇಕಾದ ಅಂಶವಾಗಿದೆ.

ಹೀಗೆ ಇತಿಹಾಸ ಪೂರ್ವದಿಂದ ಬೆಳೆದು ಬಂದ ನೇಕಾರಿಕೆ ಭಾರತದ ಇತರ ಭಾಗದಲ್ಲಿದ್ದಂತೆಯೇ ಕರ್ನಾಟಕದಲ್ಲಿಯೂ ಅತಿ ಹಿಂದಿನಿಂದಲೂ ವ್ಯವಸ್ಥಿತ ಉದ್ಯಮವಾಗಿ ಬೆಳೆದು ಬಂದಿರುವುದನ್ನು ಅನೇಕ ಚಾರಿತ್ರಿಕ ದಾಖಲೆಗಳು ಖಚಿತ ಪಡಿಸುತ್ತವೆ. ಕ್ರಿ.ಶ. ೧೨ನೆಯ ಶತಮಾನದಲ್ಲಿದ್ದ ಜೇಡರ ದಾಸಿಮಯ್ಯ ನೇಯ್ಗೆ ಕಸುಬನ್ನು ಅವಲಂಬಿಸಿದ್ದ ಬಗ್ಗೆ ಅವನ ವಚನಗಳಿಂದಲೇ ಸಾಕಷ್ಟು ಆಧಾರ ಸಿಗುತ್ತದೆ. ಮುಂದೆ ವಿಜಯನಗರದ ಅರಸರ ಕಾಲದಲ್ಲಿ ಹತ್ತಿ ಮತ್ತು ರೇಷ್ಮೆ ಬಟ್ಟೆಯನ್ನು ನೇಯುವ ಜನ ವೃತ್ತಿಪರ ಸಂಘಗಳನ್ನು ಸಹ ಕಟ್ಟಿಕೊಂಡಿದ್ದರು. ನೇಕಾರಿಕೆಯನ್ನು ಪ್ರಮುಖ ಪಾರಂಪರಿಕ ಉದ್ಯೋಗವಾಗಿ ಹೊಂದಿರುವ ದೇವಾಂಗ, ಪದ್ಮಸಾಲಿ ಜನಾಂಗ ಹಂಪೆಯಲ್ಲಿ ನೇಯ್ಗೆ ಕಸುಬಿನಲ್ಲಿ ನಿರತರಾಗಿದ್ದು ಸಾಮ್ರಾಜ್ಯದ ಪ್ರಮುಖ ತೆರಿಗೆ ಸಂದಾಯದಾರರಾಗಿದ್ದರೆಂದು ದಾಖಲೆಗಳಿಂದ ವೇದ್ಯವಾಗುತ್ತದೆ.

ವಿಜಯನಗರದ ಕಾಲದಲ್ಲಿ ಪ್ರಮುಖ ಉದ್ಯಮವಾಗಿದ್ದ ನೇಕಾರಿಕೆಯಿಂದ ಸಾಮ್ರಾಜ್ಯಕ್ಕೆ ರಫ್ತು ಆದಾಯವೂ ಲಭ್ಯವಾಗುತ್ತಿತ್ತು. ಅಂಕೋಲ, ಹೊನ್ನಾವರ ಬಂದರುಗಳಿಂದ ಹತ್ತಿ, ರೇಷ್ಮೆ ವಸ್ತ್ರಗಳನ್ನು ರವಾನಿಸಲಾಗುತ್ತಿತ್ತು. ಶ್ರೀ ಕೃಷ್ಣದೇವರಾಯನ 'ಅಮುಕ್ತಮಾಲ್ಯದ'ದಲ್ಲಿ ಹತ್ತಿ ಮತ್ತು ರೇಷ್ಮೆ ನೇಕಾರರ ಬಗ್ಗೆ ಉಲ್ಲೇಖವಿದ್ದು ಪ್ರತಿಯೊಂದು ನೇಕಾರ ಕುಟುಂಬ ತಾನು ನಡೆಸುತ್ತಿದ್ದ ಮಗ್ಗಗಳ ಸಂಖ್ಯೆಗೆ ಅನುಗುಣವಾಗಿ ತೆರಿಗೆ ಸಂದಾಯ ಮಾಡುತ್ತಿದ್ದು ಅದನ್ನು 'ಮಗ್ಗರಿ' ಎಂದು ಕರೆಯಲಾಗುತ್ತಿತ್ತು. ಅಥರ್ವಣ ತಂತ್ರದ ಪ್ರಕಾರ ಮಗ್ಗದ ತೆರಿಗೆ ನೇಕಾರನ ಜಾತಿಯನ್ನು ಅವಲಂಭಿಸಿತ್ತು. ಬಹಮನಿ ಮತ್ತು ಆದಿಲ್‌ಷಾಹಿ ಅರಸರು ನೇಕಾರರಿಗೆ ಕೆಲವು ತೆರಿಗೆ ವಿನಾಯಿತಿ ನೀಡುತ್ತಿದದುದನ್ನು ಗಮನಿಸಿದರೆ ಅಂದು ನೇಕಾರಿಕೆ ಪಡೆದಿದ್ದ ಮಹತ್ವದ ಅರಿವಾಗುತ್ತದೆ. ಹತ್ತಿಯನ್ನು ಕರ್ನಾಟಕದಲ್ಲಿ ಬೆಳೆಯುತ್ತಿದ್ದುದರಿಂದ ಅಂದು ಹತ್ತಿ ನೇಕಾರಿಕೆ ತುಂಬಾ ಪ್ರವರ್ಧಮಾನ ಸ್ಥಿತಿಯಲ್ಲಿತ್ತು. ಚೀನಾದಿಂದ ಆಮದಾದ ರೇಷ್ಮೆ ಬಂಗಾಳದ ಮೂಲಕ ಕರ್ನಾಟಕಕ್ಕೆ ಬರುತ್ತಿತ್ತು. ೧೭೮೬ರ ಸುಮಾರಿಗೆ ಟಿಪ್ಪುಸುಲ್ತಾನನ ಪರಿಶ್ರಮದಿಂದ ಕರ್ನಾಟಕದಲ್ಲಿ ರೇಷ್ಮೆ ವ್ಯವಸಾಯ ಪ್ರಾರಂಭವಾಯಿತು.

ದಕ್ಷಿಣ ಕರ್ನಾಟಕದಲ್ಲಿ ನೇಕಾರಿಕೆ ಅವಲಂಬಿಸಿರುವ ಜನಾಂಗ ಹಾಗೂ ಸ್ಥಳಗಳು

ಈ ಪ್ರದೇಶದಲ್ಲಿ ನೇಕಾರಿಕೆಯನ್ನು ಪಾರಂಪರಿಕೆ ಉದ್ಯೋಗವಾಗಿ ಅವಲಂಬಿಸಿದ ಅನೇಕ ಜನಾಂಗಗಳಿವೆ. ಬಹುಮಟ್ಟಿಗೆ ಇವರಿಗೆ ಇದೊಂದು ಕಸುಬು ಮಾತ್ರವಲ್ಲ ಜೀವನ ಸರ್ವಸ್ವವೂ ಆಗಿದೆ. ಇವರ ಬದುಕಿನ ಎಲ್ಲ ಕಾರ್ಯಗಳು ಈ ಉದ್ಯೋಗದ ವಿವಿಧ ಅಂಶಗಳೊಂದಿಗೆ ತಳಕು ಹಾಕಿಕೊಂಡಿದೆ. ಊಟ-ನಿದ್ರೆ, ಪೂಜೆ-ಪುನಸ್ಕಾರ, ಮದುವೆ-ಮುಂಜಿ, ಆಟ-ಪಾಠ, ಮನೋರಂಜನೆ, ವಿರಾಮ ಎಲ್ಲವೂ ನೇಕಾರಿಕೆಯ ನಾನಾ ಹಂತಗಳ ಮೇಲೆಯೇ ಅವಲಂಬಿತವಾಗಿರುತ್ತವೆ. ಗಂಡ ಅಥವಾ ಮಕ್ಕಳು ಮಗ್ಗದಿಂದ ಏಳುವವರೆಗೆ ಊಟ-ನಿದ್ರೆಗಾಗಿ ಅವರ ನಿರೀಕ್ಷೆಯಲ್ಲೇ ಕಾಯುವ ಕಾರ್ಯ ತಾಯಿ-ಹೆಂಡತಿಗೆ ಇನ್ನೂ ತಪ್ಪಿಲ್ಲ. ಮದುವೆ-ಮುಂಜಿ ಕಾರ್ಯಗಳೂ ವಸ್ತ್ರಗಳ ಬೇಡಿಕೆಯನ್ನು ಅವಲಂಬಿಸಿರುತ್ತವೆ. ಜೊತೆಗೆ ಅವರ ವಾಸಗೃಹಗಳ ರಚನೆಯೂ ಕೂಡ ನೇಯ್ಗೆಯ ವಿವಿಧ ಹಂತಗಳಿಗೆ ಪೂರಕವಾಗಿ - ನಿರ್ಮಾಣಗೊಂಡಿರುವುದು ಸಾಮಾನ್ಯ.

ಬೆಂಗಳೂರು ನಗರ ನೇಕಾರಿಕೆ ಕೇಂದ್ರೀಕೃತವಾದ ಮುಖ್ಯ ಸ್ಥಳವಾಗಿದೆ. ಇದರ ಜೊತೆಗೆ ನಗರ ಹಾಗೂ ಗ್ರಾಮೀಣ ಜಿಲ್ಲೆಗಳಲ್ಲೂ ಹೆಚ್ಚಾಗಿ ನೇಕಾರಿಕೆ ಅವಲಂಬಿತ ಕುಟುಂಬಗಳಿವೆ. ಇವುಗಳಲ್ಲಿ ಮುಖ್ಯವಾಗಿ ಆನೇಕಲ್, ದೊಮ್ಮಸಂದ್ರ, ದೊಡ್ಡಬಳ್ಳಾಪುರ, ದೇವನಹಳ್ಳಿ, ನೆಲಮಂಗಲ, ತಿರುಮಲೆ, ಮಾಗಡಿ, ಕುದೂರು, ತ್ಯಾಮಗೊಂಡ್ಲು ಮೈಸೂರು ಜಿಲ್ಲೆಯಲ್ಲಿ ಮೈಸೂರು ನಗರದ ಕೊಳ್ಳೆಗಾಲ, ಮಂಡ್ಯ ಜಿಲ್ಲೆಯ ಮೇಲುಕೋಟೆ, ತುಮಕೂರು ಜಿಲ್ಲೆಯ ಕಲ್ಲೂರು, ತಿಪಟೂರು, ಚಿಕ್ಕನಾಯಕನಹಳ್ಳಿ, ಹಲೇಪಾಳ್ಯ ಕೋಲಾರ ಜಿಲ್ಲೆಯ ಚಿಂತಾಮಣಿ, ಚಿಕ್ಕಬಳ್ಳಾಪುರ, ಕೋಲಾರ ನಗರ ಮುಖ್ಯವಾಗಿ ನೇಕಾರಿಕೆ ಕೇಂದ್ರೀಕೃತವಾದ ಪ್ರದೇಶಗಳು. ಇದರ ಜೊತೆಗೆ ಹಾಸನ, ಕೊಡಗು ಜಿಲ್ಲೆಗಳಲ್ಲಿ ಅಲ್ಪ ಪ್ರಮಾಣದಲ್ಲಿ ನೇಕಾರಿಕೆಯಿದೆ.

ದೇವಾಂಗ, ಪದ್ಮಸಾಲಿ, ತೊಗಟವೀರ, ಕುರುಹಿನಶೆಟ್ಟಿ (ಬಿಳಿಮಗ್ಗ), ಪಟ್ವೆಗಾರ, ಸಕುಳಸಾಲಿ, ಪಟ್ಟುನೂಲು ಸಾಬರು - ಇವು ಪಾರಂಪರ್ಯವಾಗಿ ನೇಕಾರಿಕೆಯನ್ನು ಅವಲಂಬಿಸಿದ ಜನಾಂಗಗಳಾಗಿವೆ. ಇವರ ಜೊತೆಗೆ ನೇಕಾರಿಕೆ

ಕೇಂದ್ರೀಕೃತವಾಗಿರುವ ಸ್ಥಳಗಳಲ್ಲಿ ಜೀವನೋಪಾಯ ಹಾಗೂ ಲಾಭಗಳಿಕೆಗಾಗಿ ಕೆಲವು ವರ್ಷಗಳಿಂದ ಈಚೆಗೆ ವಕ್ಕಲಿಗ, ಲಿಂಗಾಯಿತ, ನಗರ್ತ, ಮರಾಠ, ಮುಸಲ್ಮಾನ, ಕ್ರಿಶ್ಚಿಯನ್, ನಾಯಿಂದ ಇತ್ಯಾದಿ ಸ್ಥಳೀಯ ಜನಾಂಗಗಳು ಹಾಗೂ ಉತ್ತರ ಭಾರತದಿಂದ ವಲಸೆ ಬಂದು ಇಲ್ಲಿ ನೆಲಸಿರುವ ಹಲವಾರು ಜನಾಂಗಗಳು ನೇಕಾರಿಕೆಯ ವಿವಿಧ ಕಾರ್ಯಗಳಲ್ಲಿ ತೊಡಗಿವೆ. ಪರಿಶಿಷ್ಟ ಜಾತಿಯ ಜನರೂ ನೇಕಾರಿಕೆಯನ್ನು ಅವಲಂಬಿಸಿರುವುದನ್ನು ಇಲ್ಲಿ ಕಾಣಬಹುದು.

ನೇಕಾರಿಕೆ ಅವಲಂಬಿತ ಪ್ರಮುಖ ಜನಾಂಗಗಳು

ದೇವಾಂಗ

ಕೈಮಗ್ಗದ ನೇಯ್ಗೆ ಕಸುಬನ್ನು ತಲೆತಲಾಂತರಗಳಿಂದ ನಂಬಿಕೊಂಡು ಬಂದ ಜನಾಂಗವಿದು. ಮಗ್ಗವೇ ಇವರ ಸರ್ವಸ್ವ ಹಾಗೂ ಜೀವನಾಧಾರ. ನೇಯ್ಗೆ ಮತ್ತು ಅದರ ಪೂರಕ ಚಟುವಟಿಕೆಗಳಲ್ಲಿ ಮುಖ್ಯವಾಗಿ ನಿರತರಾಗಿರುವ ಇವರು ಬಹಳ ಅಪರೂಪವಾಗಿ ವ್ಯವಸಾಯ, ವ್ಯಾಪಾರ ಹಾಗೂ ಇನ್ನಿತರ ಕಸುಬನ್ನು ಹೊಂದಿರುವುದೂ ಉಂಟು. ಈ ಜನಾಂಗದಲ್ಲಿ ಕನ್ನಡ, ತೆಲುಗು, ತಮಿಳು, ಮರಾಠಿ ಇತ್ಯಾದಿ ಭಾಷೆಗಳನ್ನು ಮಾತನಾಡುವ ಪಂಗಡಗಳಿವೆ. ಆದರೆ ದಕ್ಷಿಣ ಕರ್ನಾಟಕದಲ್ಲಿ ಕನ್ನಡ, ತೆಲುಗು ಭಾಷೆಗಳನ್ನಾಡುವ ಪಂಗಡಗಳದ್ದೇ ಪ್ರಾಧಾನ್ಯ. ತುಂಬಾ ಹಿಂದೆ ತಮಿಳುನಾಡಿನ ಸೇಲಂ, ಕೊಯಮತ್ತೂರು, ಈರೋಡು ಮುಂತಾದ ಸ್ಥಳಗಳಿಗೆ ನೇಯ್ಗೆ ಉದ್ಯೋಗವನ್ನರಸಿ ಹೋಗಿದ್ದು ಅಲ್ಲಿಂದ ಇದೇ ಕಸುಬನ್ನು ಹುಡುಕಿಕೊಂಡು ಬಂದಿರುವ ತಮಿಳು ಮಾತನಾಡುವವರೂ ಅಲ್ಪ ಸಂಖ್ಯೆಯಲ್ಲಿದ್ದಾರೆ. ತಮಿಳು ತಮಿಳು ಮಿಶ್ರಿತ ಕನ್ನಡವನ್ನಾಡುವ ಇವರು ತಮ್ಮನ್ನು ಕನ್ನಡ ದೇವಾಂಗವೆಂದೇ ಗುರ್ತಿಸಿಕೊಳ್ಳುವುದು ವಿಶೇಷವಾಗಿದೆ.

ಕನ್ನಡ ಮಾತನಾಡುವ ಜನರಲ್ಲೇ ಹಲವಾರು ಗುಂಪುಗಳಿವೆ. ವಿವಾಹ ಸಂಬಂಧಗಳನ್ನು ಬಹುಮಟ್ಟಿಗೆ ತಮ್ಮ ತಮ್ಮಲ್ಲೇ ಏರ್ಪಡಿಸಿಕೊಂಡರೂ ಮುಖ್ಯಧಾರೆಯೊಂದಿಗೇ ತಮ್ಮನ್ನು ಗುರ್ತಿಸಿಕೊಳ್ಳಲು ಇಚ್ಛಿಸುತ್ತಾರೆ.

ಮುಖ್ಯವಾಗಿ ಬೆಂಗಳೂರು, ಆನೇಕಲ್, ದೊಡ್ಡಬಳ್ಳಾಪುರ, ನೆಲಮಂಗಲ, ದೊಮ್ಮಸಂದ್ರ, ಕುದೂರು, ತಿರುಮ (ಮಾಗಡಿ ತಾಲ್ಲೂಕು)

ಇತ್ಯಾದಿ ಸ್ಥಳಗಳು, ತುಮಕೂರು ಜಿಲ್ಲೆಯ ಕಲ್ಲೂರು, ತಿಪಟೂರು, ಚಿಕ್ಕನಾಯ್ಕನಹಳ್ಳಿ, ಹಳೇಪಾಳ್ಯ, ಮೈಸೂರು, ಕೊಳ್ಳೆಗಾಲ, ಇತ್ಯಾದಿ ಕೆಲವು ಸ್ಥಳಗಳಲ್ಲಿ ನೇಯ್ಗೆಯನ್ನು ಮುಖ್ಯ ಕಸುಬನ್ನಾಗಿ ಹೊಂದಿರುವ ಕನ್ನಡ ದೇವಾಂಗದ ಜನ ಹೇರಳವಾಗಿ ವಾಸವಾಗಿದ್ದಾರೆ.

ನೇಕಾರಿಕೆಯನ್ನೇ ಮುಖ್ಯ ಉದ್ಯೋಗವನ್ನಾಗಿ ಉಳ್ಳ ತೆಲುಗು ಮಾತನಾಡುವ ಆಂಧ್ರದೇವಾಂಗ ಎಂದು ಕರೆಯಲ್ಪಡುವ ಜನಾಂಗವೂ ಬೆಂಗಳೂರು ನಗರ, ನಗರದ ಗ್ರಾಮೀಣ ಜಿಲ್ಲೆ, ಕೋಲಾರ, ಮೈಸೂರು ಜಿಲ್ಲೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ವಾಸಿಸುವುದನ್ನು ಕಾಣಬಹುದು. ಭಾಷೆ ಬಿಟ್ಟರೆ ಕನ್ನಡ ಹಾಗೂ ತೆಲುಗು ದೇವಾಂಗದವರಲ್ಲಿ ಹೇಳಿಕೊಳ್ಳುವಂತಹ ಸಾಂಸ್ಕೃತಿಕ ವ್ಯತ್ಯಾಸಗಳಿಲ್ಲ.

ರಾಮಲಿಂಗ ಚೌಡೇಶ್ವರಿ ಇವರ ಕುಲದೇವತೆ. ಬನಶಂಕರಿ, ವೆಂಕಟೇಶ್ವರ, ಗವಿರಂಗನಾಥ, ಭೈರವೇಶ್ವರ ದೇವರುಗಳ ಒಕ್ಕಲುಗಳಿದ್ದಾರೆ. ಸ್ತ್ರೀ ದೇವತೆಗಳ ಪ್ರಾಧಾನ್ಯ ಹಾಗೂ ಶಿವ-ವೈಷ್ಣವ ಸಾಮರಸ್ಯ ಇವರಲ್ಲಿ ಬಹುಮುಖ್ಯವಾಗಿ ಗಮನಿಸಬಹುದಾದ ಅಂಶ. ಶೈವ-ವೈಷ್ಣವ ತಾರತಮ್ಯವಿಲ್ಲದೆ ಎಲ್ಲ ದೈವಗಳನ್ನು ಆರಾಧಿಸುತ್ತಾರೆ. ಎಲ್ಲ ಹಬ್ಬಗಳನ್ನು (ಶಿವರಾತ್ರಿ-ಏಕಾದಶಿ ಸೇರಿದಂತೆ) ಆಚರಿಸುತ್ತಾರೆ.

ವೈದಿಕ ಚಿಹ್ನೆಯಾದ ಜನಿವಾರ ಧರಿಸುವಿಕೆ ಇವರ ಬಹುಮುಖ್ಯ ಧಾರ್ಮಿಕ ವಿಧಿಯಾಗಿದೆ. ತಾವು ಹುಟ್ಟು ವೈದಿಕರು. ಜಗತ್ತಿಗೆ ಸೂತ್ರ ನೀಡಿದವರೆಂದು ಇವರ ಭಾವನೆ. ಮದುವೆ, ನಾಮಕರಣ, ಉಪಾಕರ್ಮ ಮುಂತಾದ ಧಾರ್ಮಿಕ ಕ್ರಿಯೆಗಳಲ್ಲಿ ವೇದಪಾರಂಗತರಾದ ತಮ್ಮ ಜನರನ್ನೇ ಪೌರೋಹಿತ್ಯಕ್ಕಾಗಿ ಆಶ್ರಯಿಸುತ್ತಾರೆ. ತಮ್ಮ ಜನಾಂಗದವರು ಸಿಕ್ಕದಿದ್ದಾಗ ಬ್ರಾಹ್ಮಣ ಪುರೋಹಿತರನ್ನು ಆಶ್ರಯಿಸುತ್ತಾರೆ.

ನೇಕಾರಿಕೆಯನ್ನು ಮುಖ್ಯ ಕಸುಬನ್ನಾಗಿ ಹೊಂದಿರುವ ಇನ್ನೊಂದು ಮುಖ್ಯ ಜನಾಂಗ ಪದ್ಮಸಾಲಿ ಜನಾಂಗ. ದೇವಾಂಗದವರಂತೆ ಇವರೂ ಸಹ ವಿಜಯನಗರ ಹಾಗೂ ಅದಕ್ಕೂ ಹಿಂದಿನ ಕಾಲದಿಂದಲೂ ನೇಕಾರಿಕೆಯನ್ನು ಅವಲಂಬಿಸಿದ್ದಾರೆಂಬುದಕ್ಕೆ ಉಲ್ಲೇಖಗಳಿವೆ. ದಕ್ಷಿಣ ಕರ್ನಾಟಕದಲ್ಲಿ ದೇವಾಂಗ ಜನರ ಪ್ರಾಭಲ್ಯವಿರುವ ಕಡೆಗಳಲ್ಲಿ ಅಂದರೆ ಬೆಂಗಳೂರು ನಗರ, ನಗರ ಹಾಗೂ ಗ್ರಾಮೀಣ ಜಿಲ್ಲೆ, ಕೋಲಾರ, ಮೈಸೂರು, ತುಮಕೂರು ಜಿಲ್ಲೆಗಳಲ್ಲಿ

ಕೈಮಗ್ಗ, ವಿದ್ಯುತ್ ಮಗ್ಗ, ರೇಷ್ಮೆ ಹುರಿ ಮಾಡುವಿಕೆ ಹಾಗೂ ನೇಯ್ಗೆಯ ವಿವಿಧ ಪೂರಕ ಕಾರ್ಯಗಳಲ್ಲಿ ಇವರು ತೊಡಗಿದ್ದಾರೆ. ಮುಖ್ಯವಾಗಿ ಇವರು ವೈಷ್ಣವ ಸಂಪ್ರದಾಯ ಹೊಂದಿದ್ದಾರೆ.

ಈ ಎರಡು ನೇಕಾರಿಕೆ ಪ್ರಧಾನ ಜನಾಂಗಗಳಂತೆ ನೇಯ್ಗೆ ಕಸುಬನ್ನು ಹೊಂದಿರುವ ಮತ್ತೊಂದು ಜನಾಂಗ ತೊಗಟವೀರ. ಇವರೂ ಸಹ ತುಂಬಾ ಹಿಂದಿನಿಂದ ನೇಕಾರಿಕೆಯನ್ನು ಅವಲಂಬಿಸಿದ್ದಾರೆ. ಎರಡು ಶತಮಾನಕ್ಕೂ ಹಿಂದಿನಿಂದಲೇ ಕೈಮಗ್ಗದಲ್ಲಿ ಹತ್ತಿ ಬಟ್ಟೆ ತಯಾರಿಸುತ್ತಿದ್ದುದಕ್ಕೆ ಚಾರಿತ್ರಿಕ ದಾಖಲೆಗಳಿವೆ. ಇವರು ನೇಕಾರಿಕೆ ಜೊತೆಗೆ ವ್ಯವಸಾಯುವನ್ನು ಅವಲಂಬಿಸಿರುವುದನ್ನು ಕಾಣಬಹುದು. ಬೆಂಗಳೂರು ನಗರ, ನಗರ ಹಾಗೂ ಗ್ರಾಮೀಣ ಜಿಲ್ಲೆ, ಕೋಲಾರ ಮತ್ತು ಮೈಸೂರು ಜಿಲ್ಲೆಗಳಲ್ಲಿ ನೆಲೆಗೊಂಡಿದ್ದಾರೆ. ಚೌಡೇಶ್ವರಿ ಇವರ ಕುಲದೇವತೆ. ದೇವತೆಯ ಪ್ರೀತ್ಯರ್ಥವಾಗಿ ಕುರಿಯ ಕೊರಳಿಗೆ ಬಾಯಿ ಹಾಕಿ ಬಲಿ ನೀಡುವ (ಗಾವು ಸಿಗಿಯುವ) ಸಂಪ್ರದಾಯ ಇನ್ನೂ ಇವರಲ್ಲಿ ಉಳಿದಿದೆ. ಹಿಂದೆ ದಪ್ಪ ಹತ್ತಿ ಬಟ್ಟೆ ನೇಯ್ದು ೮ ೧/೨ ಘನಂ (೩ ರೂ.) ಬಟ್ಟೆಗೆ ೨ ಘನಂ (೧೪ ಆಣೆ) ಕೂಲಿ ಪಡೆಯುತ್ತಿದ್ದವರು ಇಂದು ಅತ್ಯುತ್ತಮ ರೇಷ್ಮೆ ಬಟ್ಟೆ ತಯಾರಿಸುವಲ್ಲಿ ನಿಪುಣರೆನಿಸಿದ್ದಾರೆ. ಇವರ ಭಾಷೆ ಮುಖ್ಯವಾಗಿ ತೆಲುಗು. ಕನ್ನಡ ಮಾತನಾಡುವವರೂ ಇವರಲ್ಲಿದ್ದಾರೆ.

ದಕ್ಷಿಣ ಕರ್ನಾಟಕದಲ್ಲಿ ನೇಕಾರಿಕೆಯನ್ನು ಅವಲಂಬಿಸಿರುವ ಇನ್ನೊಂದು ಮುಖ್ಯ ಜನಾಂಗ ಕುರುಹಿನ ಶೆಟ್ಟಿ (ಬಿಳಿಮಗ್ಗ) ಮೇಲುಕೋಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿದ್ದವರು ಈಗ ಬೆಂಗಳೂರು ನಗರ, ನಗರ ಹಾಗೂ ಗ್ರಾಮೀಣ ಜಿಲ್ಲೆಗಳಲ್ಲೂ ಸಾಕಷ್ಟು ಸಂಖ್ಯೆಯಲ್ಲಿದ್ದಾರೆ.

ಇವುಗಳ ಜೊತೆಗೆ ಸಕುಳ ಸಾಲಿ, ಪಟ್ವೇಗಾರ, ಪಟ್ಟುನೂಲು ಸಾಬರು ಹಾಗೂ ಕೆಲವು ಹಿಂದುಳಿದ ಜನಾಂಗಗಳೂ ಹಳೆಯ ಬೆಂಗಳೂರು ಜಿಲ್ಲೆ, ಮೈಸೂರು, ಕೋಲಾರ, ತುಮಕೂರು ಜಿಲ್ಲೆಗಳು ನೇಕಾರಿಕೆಯನ್ನು ಮುಖ್ಯ ಕಸುಬಾಗಿ ಹೊಂದಿವೆ.

ನೇಕಾರಿಕೆ ಜನಾಂಗದ ಹಬ್ಬ ಆಚರಣೆಗಳು

ಕೈಮಗ್ಗದ ನೇಯ್ಗೆಗೆ ಸಂಬಂಧಿಸಿದಂತೆ ಗಣೇಶನ ಹಬ್ಬ (ಚತುರ್ಥಿ) ಇವರ ಮುಖ್ಯ ಹಬ್ಬ. ಹಬ್ಬಕ್ಕೆ ಒಂದೆರಡು ದಿನ ಮುನ್ನವೇ ಮಗ್ಗದ ಸಲಕರಣೆಗಳನ್ನು

ಕಳಚಿ ಶುಚಿಮಾಡಿ ಮಗ್ಗದ ಸ್ಥಳದಲ್ಲೇ ಪೂಜೆಗೆ ಜೋಡಿಸುತ್ತಾರೆ. ಹಬ್ಬದ ದಿನ ಮರದ ಮತ್ತು ಕಬ್ಬಿಣದ ಸಲಕರಣೆಗಳಿಗೆ ಗಂಧ, ಕುಂಕುಮ ಹೂವುಗಳಿಂದ ಅಲಂರಿಸುವುದರ ಜೊತೆಗೆ ಆ ಋತುವಿನಲ್ಲಿ ಸಿಗುವ ಬಾಳೆಹಣ್ಣು, ಮುಸುಕಿನ ಜೋಳ, ಸೀಬೆಹಣ್ಣು, ಚಕ್ಕೋತ, ಕೊಬ್ಬರಿ ಹಣ್ಣು, ತೆಂಗಿನಕಾಯಿ, ಸೌತೆಹೋಳು ಇತ್ಯಾದಿಗಳಿಗೆ ದಾರಕಟ್ಟಿ ಮಗ್ಗದ ಆದ್ಯಂತ ಕ್ರಮವಾಗಿ ತೂಗು ಬಿಡುತ್ತಾರೆ. ಇದಕ್ಕೆ 'ಪಳುವಳಿಕೆ ಕಟ್ಟುವುದು' ಎನ್ನುತ್ತಾರೆ.

ಬೆಂಗಳೂರು ನಗರ ಜಿಲ್ಲೆಯ ಆನೇಕಲ್ ಮುಂತಾದ ಊರುಗಳಲ್ಲಿ ಮನೆಯಲ್ಲಿ ಮುಖ್ಯ ಪೂಜೆಗೆ ಮೊದಲು ಹುತ್ತಕ್ಕೆ ತನಿ ಎರೆಯುವ ಸಂಪ್ರದಾಯವಿದೆ. ತಮ್ಮ ಕುಟುಂಬದ ಜೊತೆಗೆ ಬೇರೆ ಬೇರೆಯಾಗಿ ನೆಲೆಸಿರುವ ಹಲವಾರು ತಲೆಮಾರುಗಳ ಅಣ್ಣತಮ್ಮಂದಿರ ಕುಟುಂಬವೆಲ್ಲಾ ಒಟ್ಟಿಗೆ ಸೇರಿ ಊರ ಹೊರಗೆ ಹುತ್ತ ಅರಸಿ ಹೊರಡುವುದು ಇಂದಿಗೂ ರೂಢಿಯಲ್ಲಿದೆ. ಹಬ್ಬಕ್ಕೆ ತಂದ ಹೊಸ ಬಟ್ಟೆಗಳನ್ನು ವಿಶೇಷವಾಗಿ ಸೀರೆ ರವಿಕೆ ಕಣಗಳನ್ನು ಹುತ್ತದ ಮುಂದೆ ತಾವು ಪ್ರತಿಷ್ಠಾಪಿಸಿದ ಐದು ಸಣ್ಣ ಕಲ್ಲುಗಳ ಮುಂದೆ ಇಟ್ಟು ವಿವಿಧ ಹಣ್ಣುಗಳಿರುವ ವೀಳೆಯದೆಲೆಯಲ್ಲಿ ಚಿಗಳಿಯನ್ನಿಟ್ಟು ಪೂಜೆ ಮಾಡಿ ಚಿನ್ನದ ನಾಗರು, ಬೆಳ್ಳಿನಾಗರೆಂಬ ಹಳದಿ ಬಿಳಿ ಲೋಹಗಳ ಹಾವಿನ ಆಕಾರದ ತುಂಡನ್ನು ತುಪ್ಪದ ಸಮೇತ ಹಾಲಿಗೆ ಹಾಕಿ ಅದನ್ನು ಭಕ್ತಿಯಿಂದ ಹುತ್ತದ ಮೂರು ಬಿಲಗಳಿಗೆ ಎರೆಯುತ್ತಾರೆ.

ನಂತರ ಮನೆಯಲ್ಲಿ ಮಗ್ಗದ ಮುಂದೆ ಸಗಣಿಯಲ್ಲಿ ಪಿಳ್ಳರಾಯ (ಗಣಪ) ಮಾಡಿ ಹುತ್ತದ ಪೂಜೆಗೆ ಹೋದಾಗ ತಂದ ಗರುಕೆ ಸಿಕ್ಕಿಸಿ, ಅರಿಸಿನ ಕುಂಕುಮ ಇಟ್ಟು ಅಂದು ಮನೆಯಲ್ಲಿ ಮಾಡಿದ ಎಲ್ಲ ಅಡಿಗೆ ಭಕ್ಷ್ಯಗಳನ್ನು ಎಡೆಯಿಟ್ಟು (ಮುಖ್ಯವಾಗಿ ಕಡುಬು) ಪೂಜಿಸುತ್ತಾರೆ. ಮಕ್ಕಳು ಕಿವಿ ಹಿಡಿದು ಭಸ್ಕಿ ಹೊಡೆದು ತಮ್ಮ ಭಕ್ತಿ ಅರ್ಪಿಸುತ್ತಾರೆ. ಪೂಜೆಯ ನಂತರ ಎಡೆಯ ಜೊತೆಯಲ್ಲಿ ಇಟ್ಟಿರುವ ಬೇಯಿಸಿದ ಅವರೆ, ಕಡಲೆಕಾಳು ಅಕ್ಕಿಯ ಹಿಟ್ಟಿನ ಗುಗ್ಗುರಿಯನ್ನು ಮಗ್ಗದ ಮೇಲೆ, ಅಟ್ಟ ಹಾಗೂ ಚಾವಣಿಗಳ ಮೇಲೆ ಎಸೆಯುತ್ತಾರೆ. ಗಣೇಶನ ವಾಹನ ಇಲಿ ಇವುಗಳನ್ನು ತಿಂದು ಸಂತೃಪ್ತನಾಗಿ ಇಡೀ ವರ್ಷ ಮಗ್ಗದ ನೇಯ್ಗೆ ಎಳೆಗಳಿಗೆ ಯಾವುದೇ ರೀತಿ ತೊಂದರೆ ಕೊಡದಿರಲೆಂಬ ಉದ್ದೇಶ ಇದರ ಹಿಂದೆಯಿದೆ.

ಹಬ್ಬ ಕಳೆದ ಮೂರು-ನಾಲ್ಕು ದಿನಗಳ ನಂತರ ಶುಭ ಮುಹೂರ್ತದಲ್ಲಿ ಪುನಃ ಮಗ್ಗವನ್ನು ಕ್ರಮಗೊಳಿಸಿ ನೇಯಲು ಪ್ರಾರಂಭಿಸುತ್ತಾರೆ.

ಏಕಾದಶಿಯಲ್ಲಿ ಗಾಳಿಪಟ ಹಾರಿಸುವುದು ಹಾಗೂ ಕಾಮನ ಹಬ್ಬ ಮುಖ್ಯ ಮನೋರಂಜನಾ ಹಾಗೂ ಸಾಂಸ್ಕೃತಿಕ ಚಟುವಟಿಕೆಯಾಗಿದ್ದರೆ ಭಜನೆ ಮಂದಿರ, ಗರಡಿ ಮನೆಗಳನ್ನು ಇಂದಿಗೂ ಕಾಪಾಡಿಕೊಂಡು ಬಂದಿದ್ದು ಇವುಗಳ ಚಟುವಟಿಕೆಯಲ್ಲೂ ಸಕ್ರಿಯವಾಗಿ ಪಾಲ್ಗೊಳ್ಳುತ್ತಿರುವುದು ಗಮನಿಸಬೇಕಾದ ಅಂಶ. ಪ್ರತಿ ತಿಂಗಳ ಅಮಾವಾಸ್ಯೆ ಕೈಮಗ್ಗಕ್ಕೆ ಬಿಡುವಿನ ದಿನವಾಗಿ ನೂರಾರು ವರ್ಷಗಳಿಂದ ಮುಂದುವರೆದುಕೊಂಡು ಬಂದಿರುವುದು ವಿಶೇಷವಾಗಿದೆ.

ಕೈಮಗ್ಗದ ವಸ್ತ್ರಗಳು

(ಅ) ಹತ್ತಿಯ ವಸ್ತ್ರಗಳು

ಕರ್ನಾಟಕದಲ್ಲಿ ೧೨ನೆಯ ಶತಮಾನದಿಂದ ಹತ್ತಿ ವಸ್ತ್ರಗಳ ತಯಾರಿಕೆ ಬಗ್ಗೆ ಉಲ್ಲೇಖಗಳಿದ್ದರೂ ವಿಜಯನಗರದ ಸಾಮ್ರಾಜ್ಯದ ಕಾಲದಲ್ಲಿ ಹತ್ತಿವಸ್ತ್ರಗಳು ಪಡೆದಿದ್ದ ಮಹತ್ವದ ಬಗ್ಗೆ ಸ್ಪಷ್ಟ ಚಾರಿತ್ರಿಕ ದಾಖಲೆಯಿದೆ. ವೃತ್ತಿಪರ ಸಂಘಗಳನ್ನು ಕಟ್ಟಿಕೊಂಡು ಹೇರಳವಾಗಿ ವಸ್ತ್ರ ತಯಾರಿಸುತ್ತಿದ್ದ ದೇವಾಂಗ, ಪದ್ಮಸಾಲಿ ಹಾಗೂ ಇತರ ಜನಾಂಗಗಳು ಅದನ್ನು ಅಂಕೋಲ, ಹೊನ್ನಾವರಗಳಿಂದ ಪೋರ್ಚುಗಲ್‌ಗೆ ರಫ್ತು ಮಾಡುತ್ತಿದ್ದರೆಂದು ತಿಳಿದು ಬರುತ್ತದೆ. ದೈನಂದಿನ ಬಳಕೆಯ ಒರಟು ವಸ್ತ್ರಗಳ ಜೊತೆಗೆ ಮಸ್ಲಿನ್ ಎಂಬ ಉತ್ಕೃಷ್ಟ ದರ್ಜೆಯ ಹತ್ತಿವಸ್ತ್ರವೂ ತಯಾರಾಗುತ್ತಿತ್ತು. ಹಿಂದೆ ಕರ್ನಾಟಕದಲ್ಲಿ ಪರ್ಕಲ್ಲಾ ಎಂಬ ಗಟ್ಟಿ ಹತ್ತಿ ವಸ್ತ್ರವನ್ನು ಹೊಲೆಯ ಜನಾಂಗ ತಯಾರಿಸುತ್ತಿದ್ದು ಬಡಜನ ಇದನ್ನು ಬಳಸುತ್ತಿದ್ದರು. ಹತ್ತಿ ವಸ್ತ್ರಕ್ಕೆ ದಕ್ಷಿಣ ಕರ್ನಾಟಕಕ್ಕಿಂತ ಉತ್ತರ ಕರ್ನಾಟಕ ಹೆಚ್ಚು ಪ್ರಸಿದ್ಧಿ.

ದಕ್ಷಿಣ ಕರ್ನಾಟಕದಲ್ಲಿ ಈಗ ಹತ್ತಿ ವಸ್ತ್ರ ತಯಾರಿಕೆ ಜನಪ್ರಿಯ ಹಾಗೂ ಜೀವನ ನಿರ್ವಹಣೆಯ ಮಾರ್ಗವಾಗಿ ಉಳಿದಿಲ್ಲ. ಇದಕ್ಕೆ ಮುಖ್ಯ ಕಾರಣ ಇದರಲ್ಲಿ ಕೂಲಿ ಕಡಿಮೆ. ಜೊತೆಗೆ ದೊಡ್ಡ ಗಿರಣಿಗಳಲ್ಲಿ ವೈವಿಧ್ಯಮಯ ಹತ್ತಿ ವಸ್ತ್ರಗಳು ತಯಾರಾಗಿ ಕಡಿಮೆ ಬೆಲೆಯಲ್ಲಿ ವಿಲೇವಾರಿ ಮಾಡುವುದರಿಂದ ಗೃಹ ಕೈಗಾರಿಕೆ ಇದರೊಂದಿಗೆ ಸ್ಪರ್ಧಿಸಲಾರದು. ಆದರೂ ಈ ಭಾಗದಲ್ಲಿ ಸಹಕಾರ ಸಂಘಗಳಿಂದ ಧೋತಿ, ಬೆಡ್‌ಷೀಟ್, ಟವೆಲ್, ಸೀರೆ, ಜಮಖಾನ,

ನಿಕ್ಕರ್, ಅಂಗಿ, ಲಂಗ ಹಾಗೂ ತೆರೆ ವಸ್ತ್ರಗಳನ್ನು ತಯಾರಿಸಲಾಗುತ್ತಿದೆ. ಶುದ್ಧ ಹತ್ತಿ ವಸ್ತ್ರದ ಜೊತೆಗೆ ಹತ್ತಿ ಮತ್ತು ರೇಷ್ಮೆ, ಹತ್ತಿ ಮತ್ತು ಕೃತಕ ಎಳೆ, ಹತ್ತಿ ಮತ್ತು ಉಣ್ಣೆ ಮಿಶ್ರಣದ ವಸ್ತ್ರಗಳನ್ನು ಈ ಸಂಘಗಳಲ್ಲಿ ತಯಾರಿಸುತ್ತಿದ್ದು ಇವು ಜನಪ್ರಿಯವಾಗಿವೆ. ಖಾದಿ ಎಂದು ಕರೆಯುವ ಹತ್ತಿ ವಸ್ತ್ರಗಳೂ ಒಂದು ವರ್ಗದ ಜನರಲ್ಲಿ ಬೇಡಿಕೆಯಲ್ಲಿವೆ. ತುಂಬಾ ಮೇಲ್ಮಟ್ಟದ ಹತ್ತಿಯಿಂದ ತಯಾರಿಸಿದ ಉತ್ತಮ ದರ್ಜೆಯ ವಸ್ತ್ರಗಳು ರೇಷ್ಮೆಗೆ ಸಮನಾದ ಬೆಲೆಯಲ್ಲಿ ಮಾರಾಟವಾಗುವುದು ಇದರ ಶ್ರೇಷ್ಠತೆಗೆ ನಿದರ್ಶನವಾಗಿದೆ. ಕೈಮಗ್ಗದಲ್ಲಿ ತಯಾರಿಸಲಾಗದಿದ್ದರೂ ಹತ್ತಿಯ ಸೊಳ್ಳೆಪರದೆ ವಸ್ತ್ರ ಇಂದು ತುಂಬಾ ಜನಪ್ರಿಯತೆ ಪಡೆದಿದೆ.

(ಆ) ರೇಷ್ಮೆ ವಸ್ತ್ರಗಳು

ದಕ್ಷಿಣ ಕರ್ನಾಟಕದಲ್ಲಿ ಮುಖ್ಯವಾಗಿ ಬೆಂಗಳೂರು ನಗರ, ನಗರ ಹಾಗೂ ಗ್ರಾಮೀಣ ಜಿಲ್ಲೆ, ಮೈಸೂರು ಜಿಲ್ಲೆ, ಕೋಲಾರ, ತುಮಕೂರ ಜಿಲ್ಲೆಗಳಲ್ಲಿ ರೇಷ್ಮೆ ವಸ್ತ್ರ ತಯಾರಿಕೆ ಗೃಹ ಕಸುಬಾಗಿ ಇಂದಿಗೂ ಉಳಿದಿದೆ. ರೇಷ್ಮೆ ವಸ್ತ್ರ ತೊಡುವ ಹಂತ ತಲುಪುವ ಹೊತ್ತಿಗೆ ಅನೇಕ ಸಂಕೀರ್ಣ ಹಂತಗಳನ್ನು ಹಾಯ್ದು ಬರುತ್ತದೆ.

ಮೊದಲು ರೇಷ್ಮೆಗೂಡನ್ನು ಕುದಿಯುವ ನೀರಲ್ಲಿ ಹಾಕಿ ಎಳೆ ತೆಗೆಯಲಾಗುತ್ತದೆ. ಇದಕ್ಕಾಗಿಯೇ ಪ್ರತ್ಯೇಕ ನುರಿತ ಕೆಲಸಗಾರರಿರುತ್ತಾರೆ. ಸಾಮಾನ್ಯವಾಗಿ ಈ ಕೆಲಸವನ್ನು ನೇಕಾರರು ಮಾಡುವುದಿಲ್ಲ. ನೇಯ್ಗೆ ಕಸುಬಿಗೂ ಎಳೆ ತೆಗೆಯುವ ಕಾರ್ಯಕ್ಕೂ ಸಂಬಂಧವಿರುವುದಿಲ್ಲ.

ಮುಂದಿನ ಹಂತದಲ್ಲಿ ಈ ರೇಷ್ಮೆ ಎಳೆಯನ್ನು ಅಗತ್ಯಕ್ಕೆ ತಕ್ಕಂತೆ ೨-೩ ಇಲ್ಲವೆ ೪ ಎಳೆಗಳಂತೆ ಹುರಿ ಮಾಡಲಾಗುತ್ತದೆ. ಹುರಿ ಮಾಡಲು ಹುರಿ ಮಾಡುವ ಯಂತ್ರಗಳನ್ನು ಅವಲಂಭಿಸಿದರೂ ಇದರಲ್ಲಿ ಎಳೆಕಟ್ಟಲು ನುರಿತ ಕೆಲಸಗಾರರು ಅತ್ಯಗತ್ಯ. ಮಗ್ಗಗಳನ್ನು ಹೊಂದಿರುವ ನೇಕಾರರು ಹುರಿಯಂತ್ರಗಳನ್ನು ಇಟ್ಟು ಕೊಂಡಿರುವುದರಿಂದ ಹಾಗೂ ನೇಯಲು ತಕ್ಕಂತ ಎಳೆಗಳನ್ನು ನಿಯಂತ್ರಿಸುವುದರಿಂದ ಇಲ್ಲಿಂದ ನೇಯ್ಗೆಯ ಕಾರ್ಯ ಪ್ರಾರಂಭವಾಗುತ್ತದೆ ಎನ್ನಬಹುದು. ಹುರಿ ಮಾಡಿದ ಎಳೆಗಳನ್ನು ಹಾಸು ಮತ್ತು ಹೊಕ್ಕುಗಳಿಗೆ ಬಳಸಿಕೊಳ್ಳಲಾಗುತ್ತದೆ. ಆದರೆ ಹುರಿಯ ಮಟ್ಟ ಎರಡಕ್ಕೂ

ಬೇರೆ ಬೇರೆ. ಕೈಮಗ್ಗದಲ್ಲಿ ಹಾಸು ಗರಿಷ್ಟ ೧೦-೧೨ ಸೀರೆಗಳಿಗೆ ಸಾಕಾಗುವಷ್ಟಿರುತ್ತದೆ. ಹಾಸನ್ನು 'ಪಾಗಡಿ' ಎಂದು ಕರೆಯಲಾಗುತ್ತದೆ. ಹೊಕ್ಕು ಅಥವಾ ನೇಯುವ ರೇಷ್ಮೆಯನ್ನು 'ಸಪ್ಪೆ' ಎಂದು ಕರೆಯಲಾಗುತ್ತದೆ. ಏಕೆಂದರೆ ಇದರಲ್ಲಿ ಹುರಿಯ ಮಟ್ಟ ತುಂಬಾ ಕಡಿಮೆ ಇರುತ್ತದೆ. ಯಂತ್ರಮಗ್ಗದಲ್ಲಿ ಹಾಸು, ಸುಮಾರು ೩೦೦-೫೦೦ ಮೀಟರ್‌ವರೆಗೆ ಇರುತ್ತದೆ. ಇದನ್ನು 'ವಾರ್ಪ್' ಎಂದು ಕರೆಯಲಾಗುತ್ತದೆ. ಎರಡಕ್ಕೂ ಹಾಸು ಸಿದ್ಧಪಡಿಸುವ ಯಂತ್ರಗಳು ಬೇರೆ ಬೇರೆ.

ಹುರಿಯ ನಂತರದ ಹಂತ ಬಣ್ಣ ಮಾಡುವಿಕೆ. ಹುರಿ ಮಾಡುವಾಗ ಕಚ್ಚಾ ಎಳೆಯನ್ನು ಅಂದರೆ ಹುಳುವಿನಿಂದ ಬಂದ ಎಳೆಯನ್ನು ಯಾವುದೇ ಸಂಸ್ಕಾರಕ್ಕೂ ಒಳಪಡಿಸದೆ ನೇರವಾಗಿಯೇ ಬಳಸಲಾಗುತ್ತದೆ. ಹುರಿಯಾದ ನಂತರ ಬಣ್ಣ ಮಾಡುವ ಮೊದಲು ಎಳೆಯ ಮೇಲಿನ ಹುಳುವಿನ ಅಂಟನ್ನು ತೆಗೆಯಲಾಗುತ್ತದೆ. ಇದನ್ನು 'ಉಕ್ಕಾರ" ತೆಗೆಯುವುದು ಎನ್ನಲಾಗುತ್ತದೆ. ಅಂದರೆ ಕುದಿಯುವ ನೀರಿಗೆ ವಾಷಿಂಗ್ ಸೋಡಾ ಮತ್ತು ಸೋಪು ಹಾಕಿ ರೇಷ್ಮೆ ಎಳೆ ಅದ್ದಿದಾಗ ಎಳೆಯ ಮೇಲಿನ ಅಂಟು ಬಿಟ್ಟು ಹೋಗಿ ಎಳೆ ಮೃದುವಾಗುತ್ತದೆ. ಈ ಹಂತದ ನಂತರವೇ ಎಳೆಗೆ ಬೇಕಾದ ಬಣ್ಣ ಕೊಡಲಾಗುತ್ತದೆ. ಮೊದಲು ಸಸ್ಯ ಜನ್ಯ ಬಣ್ಣಗಳನ್ನು ಉಪಯೋಗಿಸಲಾಗುತ್ತಿತ್ತು. ಈಗ ರಸಾಯನಿಕ ಪುಡಿಗಳನ್ನು ಉಪಯೋಗಿಸಲಾಗುತ್ತದೆ. ಕೈಮಗ್ಗದಲ್ಲಿ ಮಗ್ಗಕ್ಕೆ ಹಾಸನ್ನು ಅಳವಡಿಸುವುದಕ್ಕೆ ಮೊದಲೇ ಬಣ್ಣ ಮಾಡಲಾಗುತ್ತದೆ. ಯಂತ್ರಮಗ್ಗದಲ್ಲಿ ಸಾದಾ ಸೀರೆಗಳಿಗೆ ಸೀರೆ ನೇಯ್ದ ನಂತರವೂ ಬಣ್ಣ ಹಾಕಿಸಬಹುದು. ಕೈಮೊಗ್ಗ ಹಾಗೂ ಯಂತ್ರ ಮಗ್ಗಗಳಲ್ಲಿ ಹಾಸನ್ನು ಸಿದ್ಧಪಡಿಸಿದ ನಂತರ ಅಂಚು ಒಡಲು ಹಾಗೂ ಸೆರಗಿಗೆ ಬೇಕಾದ ರೀತಿಯ ವಿನ್ಯಾಸಗಳನ್ನು ಅಳವಡಿಸಲಾಗುತ್ತದೆ.

ರೇಷ್ಮೆ ವಸ್ತ್ರಗಳಲ್ಲಿ ಸೀರೆ ಪ್ರಮುಖ ಸ್ಥಾನ ಪಡೆದಿದೆ. ದಕ್ಷಿಣ ಕರ್ನಾಟಕದಲ್ಲಿ ಕಾಂಜೀವರಂ, ಧರ್ಮಾವರಂ, ಬನಾರಸ್, ಮೊಳಕಾಲ್ಮೂರು, ಇಳಕಲ್, ಪೂಚಂಪಲ್ಲಿ ರೀತಿಯಲ್ಲಿ ಊರಿನ ಹೆಸರಿನಿಂದಲೇ ಗುರ್ತಿಸಬಹುದಾದ ವಿಶಿಷ್ಟ ಮಾದರಿ ಸೀರೆಗಳು ತೀರಾ ಕಡಿಮೆ. ಆದರೆ ಈ ಎಲ್ಲಾ ರೀತಿಯ ಸೀರೆಗಳನ್ನು ಇಲ್ಲಿಯೂ ತಯಾರಿಸುವ ಕುಶಲ ನೇಕಾರರಿದ್ದಾರೆ.

ಸೀರೆಗಳಂತೆಯೇ ರೇಷ್ಮೆ ಪಂಚೆ (ಧೋತಿ) ಹಾಗೂ ಶಲ್ಯಗಳು ತುಂಬಾ ಪ್ರಸಿದ್ಧಿ ಪಡೆದಿವೆ. ಸಾದಾ ಧೋತಿ ಹಾಗೂ ಶಲ್ಯಗಳು, ಕಲಾಪತ್ ಅಂಚಿನ ಪಂಚೆ (ಧೋತಿ) ಶಲ್ಯಗಳು, ಬಣ್ಣದ ಧೋತಿ ಶಲ್ಯಗಳನ್ನು ಇಲ್ಲಿ

ಉಲ್ಲೇಖಿಸಬಹುದು. ಗಂಗಾ-ಜಮುನ ಅಂಚಿನ ಧೋತಿ ಶಲ್ಯಗಳು ಇಂದು ತುಂಬಾ ಜನಪ್ರಿಯ. ಮೊಳಕಾಲ್ಮೂರಿನ ಧೋತಿ ಶಲ್ಯಗಳು ಹಿಂದೆ ಬಹು ಜನಪ್ರಿಯವಾಗಿದ್ದವು. ನೇಕಾರರ ವಲಸೆ ಹಾಗೂ ಕುಗ್ಗಿದ ಬೇಡಿಕೆಯಿಂದ ಅವನತಿಯ ಅಂಚಿನಲ್ಲಿದೆ. ಕೈಮಗ್ಗ ಹಾಗೂ ಯಂತ್ರಮಗ್ಗಗಳೆರಡರಲ್ಲೂ ಪಂಚೆ-ಶಲ್ಯಗಳನ್ನು ತಯಾರಿಸಬಹುದು.

ರೇಷ್ಮೆ ಲಂಗ, ರವಿಕೆ ಕಣಗಳೂ ರೇಷ್ಮೆ ವಸ್ತ್ರಗಳಲ್ಲಿ ತಮ್ಮದೇ ಆದ ಸ್ಥಾನ ಪಡೆದಿವೆ. ಸಾಂಪ್ರದಾಯಿಕ ಉಡುಪುಗಳ ಬಗ್ಗೆ ಹೇಳುವಾಗ ಲಂಗ-ಧಾವಣಿಗಳನ್ನು ಮರೆಯುವಂತಿಲ್ಲ.

ಇವುಗಳ ಜೊತೆಗೆ ಉತ್ತಮ ದರ್ಜೆಯ ರೇಷ್ಮೆ ಎಳೆಯಿಂದ ಪುರುಷರ ಅಂಗಿ ಹಾಗೂ ಜುಬ್ಬಾ ವಸ್ತ್ರ, ಮಹಿಳೆಯರ ಚೂಡಿದಾರ್ ಇತ್ಯಾದಿ ಉಡುಪಿನ ವಸ್ತ್ರಗಳನ್ನೂ ತಯಾರಿಸಲಾಗುತ್ತದೆ. ದಪ್ಪ ಎಳೆಯ ಅಂದರೆ ಡೂಪಿಯಾನ್ ರೇಷ್ಮೆಯ ಅಂಗಿ, ಜುಬ್ಬಾ, ಸೂಟು ವಸ್ತ್ರಗಳೂ ದೇಶ ವಿದೇಶಗಳಲ್ಲಿ ಪ್ರಸಿದ್ಧಿ ಪಡೆದಿವೆ. ಇತ್ತೀಚೆಗೆ ಶುದ್ಧ ರೇಷ್ಮೆ ಜೊತೆಗೆ ಕೃತಕ ರೇಷ್ಮೆ, ಹತ್ತಿ, ಉಣ್ಣೆಗಳನ್ನು ಮಿಶ್ರಮಾಡಿ ವಿವಿಧ ಸೀರೆ, ಪಂಚೆ, ಉಡುಪಿನ ವಸ್ತ್ರಗಳನ್ನು ತಯಾರಿಸಲಾಗುತ್ತಿದೆ.

(ಇ) ಉಣ್ಣೆ ವಸ್ತ್ರಗಳು

ಹತ್ತಿ, ರೇಷ್ಮೆಯ ನಂತರದ ಸ್ಥಾನ ಉಣ್ಣೆಯ ವಸ್ತ್ರಗಳದ್ದು, ಉತ್ತರ ಭಾರತದಲ್ಲಿ ಈ ವಸ್ತ್ರ ಪಡೆದಿರುವ ಸ್ಥಾನ ದಕ್ಷಿಣ ಭಾರತದಲ್ಲಿ ಹೊಂದಿಲ್ಲ. ಕರ್ನಾಟಕ ಅದರಲ್ಲೂ ದಕ್ಷಿಣ ಕರ್ನಾಟಕದಲ್ಲಿ ಉಣ್ಣೆಯ ವಸ್ತ್ರಗಳ ತಯಾರಿಕೆ ಇಲ್ಲವೇ ಇಲ್ಲ ಅನ್ನುವಷ್ಟು ಅಪರೂಪ. ಸುಪ್ರಸಿದ್ಧ ಉಣ್ಣೆ ವಸ್ತ್ರಗಳಾದ ಶಾಲು, ಸ್ವೆಟರ್, ಮಫ್ಲರ್, ಪ್ಯಾಂಟು, ಕೋಟು ಇತ್ಯಾದಿ ಬಟ್ಟೆಗಳ ತಯಾರಿಕೆ ಸುಪ್ರಸಿದ್ಧ ಮಿಲ್‌ಗಳಿಗೆ ಸೀಮಿತವಾಗಿದೆ. ಗೃಹ ಕೈಗಾರಿಕೆಯಲ್ಲಿ ಕಂಬಳಿ, ರಗ್ಗುಗಳನ್ನು ಸೀಮಿತವಾಗಿ ತಯಾರಿಸಲಾಗುತ್ತಿದೆ. ಇದನ್ನು ಸಾಮಾನ್ಯವಾಗಿ ಕುರುಬ ಜನಾಂಗ ತಯಾರಿಸುತ್ತಿದೆ.

(ಈ) ನಾರುವಸ್ತ್ರಗಳು

ಪುರಾಣ ಇತಿಹಾಸ ಕಾಲದಲ್ಲಿ ಋಷ್ಯಾಶ್ರಮಗಳಲ್ಲಿ, ವನಗಳಲ್ಲಿ ವಾಸಿಸುತ್ತಿದ್ದ ಜನ ನಾರು ವಸ್ತ್ರ ಉಪಯೋಗಿಸುತ್ತಿದ್ದದ್ದು ಅನೇಕ ಗ್ರಂಥಗಳಿಂದ

ತಿಳಿದು ಬರುತ್ತದೆ. ಇಂದು ಸೆಣಬು, ತೆಂಗಿನನಾರು ಹಾಗೂ ಇತರ ನಾರುಗಳಲ್ಲಿ ಕೆಲವೊಂದುಬಗೆಯ ವಸ್ತ್ರಗಳನ್ನು ತಯಾರಿಸಲಾಗುತ್ತಿದೆ. ಹಿಂದೆ ಸೆಣಬು ಗೋಣಿ ಚೀಲದ ವಸ್ತ್ರ ತಯಾರಿಕೆಗೆ ಮಾತ್ರ ಸೀಮಿತವಾಗಿತ್ತು. ಈಗ ಉಣ್ಣೆಯ ವಸ್ತ್ರಗಳಾದ ಶಾಲು, ಮಫ್ಲರ್, ಸ್ವೆಟರ್ ಮುಂತಾದವುಗಳಂತೆಯೇ ಕಾಣುವ ಕೃತಕ ಮಾದರಿಗಳನ್ನು ತಯಾರಿಸಲು ಬಳಸಲಾಗುತ್ತಿದೆ. ಇವುಗಳ ಜೊತೆಗೆ ಕೈಚೀಲ, ತೆರೆ ವಸ್ತ್ರ ವಿವಿಧ ಅಲಂಕಾರಿಕ ವಸ್ತ್ರ ತಯಾರಿಕೆಯಲ್ಲೂ ಸೆಣಬು ಬಳಕೆಯಾಗುತ್ತಿದೆ. ದಕ್ಷಿಣ ಕರ್ನಾಟಕದಲ್ಲಿ ಈ ವಸ್ತ್ರಗಳ ತಯಾರಿಕೆ ತೀರಾ ಅಪರೂಪ.

ತೆಂಗಿನನಾರಿನಲ್ಲಿ ಕಾಲುಹಾಸು, ಕ್ರಿಕೆಟ್ ರಗ್ಗು, ವಿವಿಧ ಅಲಂಕಾರಿಕ ಹಾಸುಗಳನ್ನು ತಯಾರಿಸಿದರೂ ಇವುಗಳನ್ನು ವಸ್ತ್ರಗಳ ವ್ಯಾಪ್ತಿಗೆ ಸೇರಿಸಲಾಗುವುದಿಲ್ಲ. ಮುಖ್ಯವಾಗಿ ತುಮಕೂರು ಜಿಲ್ಲೆಯಲ್ಲಿ ತೆಂಗಿನ ಉದ್ಯಮ ಕೇಂದ್ರೀಕೃತಗೊಂಡಿದೆ.

(ಉ) ಕೃತಕ ಎಳೆಯ ವಸ್ತ್ರಗಳು

ಬೆಂಗಳೂರು ಮತ್ತು ಸುತ್ತುಮುತ್ತ ಕೃತಕ ಎಳೆಯ (ಆರ್ಟ್‌ಸಿಲ್ಕ್) ವಸ್ತ್ರಗಳನ್ನು ಹೇರಳವಾಗಿ ತಯಾರಿಸಲಾಗುತ್ತಿದೆ. ಕೈಮಗ್ಗದಲ್ಲಿ ಇದರ ಬಳಕೆ ಕಡಿಮೆ. ಆದರೆ ಯಂತ್ರ ಮಗ್ಗದಲ್ಲಿ ಇದನ್ನು ಬಳಸಿ ವೈವಿಧ್ಯಮಯ ಸೀರೆಗಳನ್ನು ಉತ್ಪಾದಿಸಲಾಗುತ್ತಿದೆ. ರೇಷ್ಮೆಯಂತೆಯೇ ಕಾಣುವ ಈ ಸೀರೆಗಳಿಂದ ಗ್ರಾಹಕರು ಮೋಸ ಹೋಗುವ ಸಂಭವ ಹೆಚ್ಚು. ಕಡಿಮೆ ಬೆಲೆಯಲ್ಲಿ ಇದು ಸಿಗುವುದರಿಂದ ಕೆಳ ಮಧ್ಯಮ ವರ್ಗದ ಜನರಿಗೆ ಅಚ್ಚು ಮೆಚ್ಚು. ಇಂದು ಅಪಾರ ಪ್ರಮಾಣದಲ್ಲಿ ಗ್ರಾಹಕರನ್ನು ಹೊಂದಿರುವುದರಿಂದ ರೇಷ್ಮೆಯ ಮೇಲಿನ ಒತ್ತಡ ಸ್ವಲ್ಪ ಕಡಿಮೆಯಾಗಿ ರೇಷ್ಮೆ ಸೀರೆ ಹಾಗೂ ರೇಷ್ಮೆ ಎಳೆಗಳ ಬೆಲೆಯನ್ನು ನಿಯಂತ್ರಣದಲ್ಲಿ ಇಡಲು ಸಹಕಾರಿಯಾಗಿದೆ. ಇಲ್ಲದಿದ್ದಲ್ಲಿ ಅಲ್ಪ ಬಂಡವಾಳ ಹೊಂದಿರುವ ನೇಕಾರರು ಹಾಗೂ ಗ್ರಾಹಕರಿಬ್ಬರಿಗೂ ಅಪಾರ ತೊಂದರೆಯಾಗುತ್ತಿತ್ತು. ಸೀರೆಯ ಜೊತೆಗೆ ಪಂಚೆ, ಶಲ್ಯ, ಲಂಗದ ವಸ್ತ್ರಗಳು, ವೈವಿಧ್ಯಮಯ ತೆರೆ ವಸ್ತ್ರಗಳು, ಅಂಗಿಯ ವಸ್ತ್ರಗಳನ್ನು ಕೃತಕ ಎಳೆಯಿಂದ ತಯಾರಿಸಲಾಗುತ್ತಿದೆ.

ಕೃತಕ ಎಳೆಯಲ್ಲಿ ಇನ್ನೊಂದು ಬಗೆಯಾದ ಪಾಲಿಯೆಸ್ಟರ್‌ನಿಂದಲೂ

ಸೀರೆಗಳನ್ನು ತಯಾರಿಸಬಹುದು. ಜರಿಯ ಸೀರೆಗಳಲ್ಲಿ ಇದರ ಬಳಕೆಗಿಂತ ವಿವಿಧ ಮುದ್ರಣದ ಸೀರೆಗಳ ತಯಾರಿಕೆಯಲ್ಲಿ ಇದರ ಬಳಕೆ ಹೆಚ್ಚು. ಇದರಲ್ಲೇ ರೆಯಾನ್ ಎಂಬ ಎಳೆಯಲ್ಲಿ ಉತ್ಕೃಷ್ಟ ದರ್ಜೆಯ ಎಲ್ಲಾ ಬಗೆಯ ವಸ್ತ್ರಗಳನ್ನು ತಯಾರಿಸಲಾಗುತ್ತಿದೆ. ಜರಿ ಸೀರೆ ಬಿಟ್ಟರೆ ಉಳಿದ ವಸ್ತ್ರಗಳನ್ನು ನಮ್ಮ ನೇಕಾರರು ಸಾಮಾನ್ಯವಾಗಿ ತಯಾರಿಸುವುದಿಲ್ಲ. ಇದು ದೊಡ್ಡ ದೊಡ್ಡ ಮಿಲ್‌ಗಳಿಗೆ ಮೀಸಲಾಗಿದೆ.

ಗಟ್ಟಿ ಪಾಲಿಯೆಥಿಲಿನ್ ಎಳೆಯಿಂದ ಸೊಳ್ಳೆ ಪರದೆಗಳನ್ನು ಬೆಂಗಳೂರು ಸುತ್ತಮುತ್ತಲ ಪ್ರದೇಶದಲ್ಲಿ ಹೆಚ್ಚಾಗಿ ತಯಾರಿಸಲಾಗುತ್ತಿದೆ. ಇದು ಯಂತ್ರಮಗ್ಗಕ್ಕೆ ಮಾತ್ರ ಸೀಮಿತ. ಕೈ ಮಗ್ಗದಲ್ಲಿ ಇದನ್ನು ನೇಯುತ್ತಿಲ್ಲ.

ಕೃತಕ ಎಳೆಗಳನ್ನು ಮರದ ತಿರುಳಿನಲ್ಲಿ ತಯಾರಿಸಲಾಗುತ್ತಿದೆ. ಕೆಲವು ಬಗೆಯ ಎಳೆಗಳು ಪೆಟ್ರೋಲಿಯಂ ಉತ್ಪನ್ನಗಳಿಂದ ತಯಾರಾಗುತ್ತವೆ.

ಕೈಮಗ್ಗದ ಸಾಧನಗಳು ಹಾಗೂ ಇತರ ಅಂಶಗಳು

ದಕ್ಷಿಣ ಕರ್ನಾಟಕದಲ್ಲಿ ಸಾಂಪ್ರದಾಯಿಕ ಮಗ್ಗಗಳು ಬಹುಮಟ್ಟಿಗೆ ಕುಳಿ ಮಗ್ಗಗಳು ನೆಲದಲ್ಲಿ ಸುಮಾರು ಮೂರು ಅಡಿ ಆಳ ಐದು-ಆರು ಅಡಿ ಅಗಲ ಇಂಗ್ಲಿಷ್ 'ಟಿ' (T) ಆಕಾರದಲ್ಲಿ ಕುಳಿ ತೆಗೆದು ಅದರಲ್ಲಿ ಮಗ್ಗ ಅಳವಡಿಸಲಾಗುತ್ತದೆ. 'ಟಿ' ಆಕಾರದ ಕುಳಿಯನ್ನು ನೇರ ಹಾಗೂ ಅಡ್ಡ ಎಂದು ನಾವು ವಿಂಗಡಿಸಿಕೊಂಡರೆ ನೇರ ಕುಳಿಯ ಆರಂಭದ ತುದಿಯಲ್ಲಿ ಮಗ್ಗ ನೇಯುವವರು ತಮ್ಮ ಕಾಲುಗಳನ್ನು ಕುಳಿಯಲ್ಲಿ ಇಳಿಬಿಟ್ಟು ಅಡ್ಡ ಕುಳಿಯ ಕಡೆಗೆ ಮುಖಮಾಡಿ ಕುಳಿತು ಕೊಳ್ಳುತ್ತಾರೆ. ಮಗ್ಗ ನೇಯುವಾಗ ಸಾಮಾನ್ಯವಾಗಿ ಪುಷ್ಠಕ್ಕೆ ಸ್ವಲ್ಪ ಆಧಾರವಾಗಿ ಹಿಂಬದಿಯ ನೆಲಕ್ಕೆ ಆತುಕೊಂಡು ನಿಂತುಕೊಂಡೇ ನೇಯುವುದು ವಾಡಿಕೆ. ಕುಳಿಯಲ್ಲಿ ಕುಳಿತವರ ಮುಂದಕ್ಕೆ ಬರುವಂತೆ ಅಕ್ಕಪಕ್ಕ ನೆಟ್ಟ ಅಡ್ಡಪಟ್ಟಿಯ (ಪೋಸ್ಟ್ ಕಂಬ) ಮೇಲೆ ಮಗ್ಗದ ಚೌಕಟ್ಟನ್ನು ಅಳವಡಿಸಲಾಗುತ್ತದೆ.

ಮಗ್ಗದ ಚೌಕಟ್ಟು ಮಗ್ಗದ ಒಟ್ಟಾರೆ ಘಟಕದಲ್ಲಿ ಬಹಳ ಪ್ರಮುಖ ಅಂಗ. ಇದರಲ್ಲಿ ಹಾಸು ಹಾಗೂ ಹೊಕ್ಕಿನ ಎಳೆಯನ್ನು ಬಟ್ಟೆಯಾಗುವಂತೆ ಮಾಡುವ 'ತಟ್ಟು' ಎಂಬ ಸಾಧನವನ್ನು ಅಳವಡಿಸಿರುವುದರ ಜೊತೆಗೆ ಹೊಕ್ಕಿನ

ಎಳೆಯನ್ನು ಅತ್ತ ಇತ್ತ ಒಯ್ಯುವ 'ಲಾಳಿ'ಯಆವಾಸ ಸ್ಥಾನವೂ ಇದರಲ್ಲಿರುತ್ತದೆ. ಈ ಆವಾಸ ಸ್ಥಾನ ಮಗ್ಗದ ಅಕ್ಕಪಕ್ಕ. ಇದರಲ್ಲಿರುವ 'ಪಿಕ್ಕರ್' ಎಂಬ ಸಾಧನ ಲಾಳಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಳ್ಳಲು ನೆರವಾಗುತ್ತದೆ. ಈ ಪಿಕ್ಕರ್ (ತಳ್ಳು ಚಿಕ್ಕೆ) ಅನ್ನು ತಳ್ಳುವಂತೆ ಪ್ರಚೋದಿಸುವ ಸಾಧನವನ್ನು 'ಕುಚ್ಚು' ಎಂದು ಕರೆಯಲಾಗುವುದು. ಇದನ್ನು ಸಹ ಮಗ್ಗದ ಚೌಕಟ್ಟಿನಲ್ಲಿಯೇ ಅಳವಡಿಸಲಾಗುತ್ತದೆ. ಇಡೀ ನೇಯುವ ಕ್ರಿಯೆಯ ಮೂಲ ಬಿಂದು ಈ 'ಕುಚ್ಚು'.

ಮಗ್ಗದ ಚೌಕಟ್ಟಿಗೆ ಮುಂದೆ ಅಂದರೆ ವ್ಯಕ್ತಿಯ ಮುಂದಕ್ಕೆ ಬರುವಂತೆ ನೇಯ್ದ ಬಟ್ಟೆ ಸುತ್ತಿಕೊಳ್ಳಲು 'ಕುಂಟೆ' ಎಂದು ಕರೆಯಲಾಗುವ ಚಚ್ಚೌಕದ ನಯವಾದ ಮರದ ತೊಲೆಯನ್ನು ಅಕ್ಕ ಪಕ್ಕ ನೆಟ್ಟ 'ಕುಂಟೆ ಗೂಟ'ಗಳಿಗೆ ಅಳವಡಿಸಲಾಗುತ್ತದೆ. ನಾಲ್ಕು-ಐದು ಅಂಗುಲ ದಪ್ಪವಿರುವ ಈ ಕುಂಟೆಯ ಒಂದು ಚೌಕದಲ್ಲಿ ಪೂರ್ಣವಾಗಿ ಒಂದು ಕಡೆಯಿಂದ ಇನ್ನೊಂದು ತುದಿಯವರೆಗೆ 1½ ಅಂಗುಲದಷ್ಟು ಕೊರೆದು ಈ ದೋಣಿಯಲ್ಲಿ ಮರದ ಸಣ್ಣ ಸಣ್ಣ ತುಂಡುಗಳನ್ನು ಭದ್ರವಾಗಿ ಜಡಿಯಲಾಗುತ್ತದೆ. ವಸ್ತ್ರದ ಪ್ರಾರಂಭದ ತುದಿಯನ್ನು ಈ ತುಂಡುಗಳಿಗೆ ಸಿಕ್ಕಿಸಿ ನಂತರ ಬಟ್ಟೆ ನೇಯಲು ತೊಡಗಲಾಗುತ್ತದೆ. ಕುಂಟೆಯ ಬಲಬದಿಯಲ್ಲಿ ಚೌಕಟ್ಟಿನ ನಾಲ್ಕು ಬದಿಗಳೂ ಸೇರುವಂತೆ ಕೊರೆಯಲಾದ ರಂಧ್ರದಲ್ಲಿ ಒಂದು ಕಡೆ ಹಿಡಿಕೆಯುಳ್ಳ ಮರದ ಕೋಲನ್ನು ಸಿಕ್ಕಿಸಲಾಗುತ್ತದೆ. ಇದನ್ನು 'ಕುಂಟೆ ಬೆಣೆ' ಎನ್ನುತ್ತಾರೆ. ಇದು ಬಟ್ಟೆಯನ್ನು ಬಿಗಿಯಾಗಿಡುವಂತೆಯೇ ಕುಂಟೆಗೆ ಸುತ್ತಿಕೊಳ್ಳುವಷ್ಟು ಬಲವಾಗಿರುವುದಲ್ಲದೆ ಹಾಸು ಸಾಕಷ್ಟು ಬಿಗಿಯಾಗಿಡಲು ನೆರವಾಗುತ್ತದೆ. ಮಗ್ಗದ ಚೌಕಟ್ಟಿನ ಹಿಂಬದಿಯಲ್ಲಿ ಅಂದರೆ ಹಾಸಿನ ಕಡೆಗಿರುವಂತೆ ದಾರದ ಅಚ್ಚನ್ನು ಕಟ್ಟಲಾಗುತ್ತದೆ. ಈ ಅಚ್ಚನ್ನು ಕೆಳಗೆ ಪಾದಚಕ್ಕೆಗಳಿಗೆ ಕಟ್ಟಿದ್ದು ಇದನ್ನು ತುಳಿದಾಗ ಅಚ್ಚು ಮೇಲೇರಿ ಇಳಿಯುವಂತೆ ಅಳವಡಿಸಲಾಗಿರುತ್ತದೆ. ಈ ಅಚ್ಚು ಸಂಪೂರ್ಣದಾರದ್ದಾಗಿದ್ದು ನಾಲ್ಕು ಜೊತೆ ಕೋಲುಗಳಿಗೆ ಒಂದರ ಪಕ್ಕ ಒಂದು ಬರುವಂತೆ ಕಟ್ಟಲಾಗಿರುತ್ತದೆ. ಹಾಸಿನ ಸುಮಾರು ನಾಲ್ಕೂವರೆ ಸಾವಿರ ಎಳೆಗಳು ಅಚ್ಚಿನ ದಾರದಲ್ಲಿ ಕ್ರಮವಾಗಿ ಬರುವಂತೆ ಹಾಯಿಸಲಾಗುತ್ತದೆ. ಮೊದಲ ಎರಡು ಅಚ್ಚು ಒಂದು ಜೋಡಿ. ಹಿಂದಿನ ಎರಡು ಅಚ್ಚಿನ ಕೋಲು ಇನ್ನೊಂದು ಜೋಡಿ. ಹಾಸಿನ ಮೊದಲ ಎಳೆಯನ್ನು ಮೊದಲ ಕೋಲಿನ

ದಾರದ ರಂಧ್ರದಲ್ಲಿ ಎರಡನೆ ಎಳೆ ಮೂರನೆ ಕೋಲಿನ ದಾರದ ರಂಧ್ರದಲ್ಲಿ ನಂತರ ಮೂರನೆ ಎಳೆ ಎರಡನೆ ಕೋಲಿನ ದಾರದ ರಂಧ್ರದಲ್ಲಿ ತರುವಾಯ ನಾಲ್ಕನೆ ಎಳೆ ನಾಲ್ಕನೆ ಕೋಲಿನ ದಾರದ ರಂಧ್ರದಲ್ಲಿ ಕ್ರಮವಾಗಿ ಒಂದರ ನಂತರ ಇನ್ನೊಂದರಂತೆ ತೆಗೆದುಕೊಳ್ಳಲಾಗುತ್ತದೆ. ಕೋಲುಗಳಿಗೆ ದಾರದ ಅಚ್ಚು ಕಟ್ಟುವ ಕಾರ್ಯ ಅದರಲ್ಲೇ ತುಂಬ ನುರಿತ ವ್ಯಕ್ತಿಗಳಿಂದ ನಡೆಯುತ್ತದೆ. ಇದಕ್ಕೆ 'ಅಚ್ಚು ಕಟ್ಟುವುದು' ಎಂದು ಕರೆಯಲಾಗುತ್ತದೆ.

ಅಚ್ಚಿನಿಂದ ತೆಗೆದುಕೊಂಡ ಎಳೆಯನ್ನು ಮಗ್ಗದ ಚೌಕಟ್ಟಿನಲ್ಲಿ ಅಳವಡಿಸಿದ ತಟ್ಟಿನ ಸೂಕ್ಷ್ಮ ರಂಧ್ರದ ಮೂಲಕ ಪ್ರತಿ ರಂಧ್ರದಲ್ಲಿ ಅಗತ್ಯಕ್ಕೆ ತಕ್ಕಂತೆ ಎರಡು/ನಾಲ್ಕು ಎಳೆಗಳಂತೆ ಕ್ರಮವಾಗಿ ತುಂಬಲಾಗುತ್ತದೆ. ರಂಧ್ರ ಸೂಕ್ಷ್ಮವಾಗಿದ್ದಷ್ಟು ಉತ್ತಮ ದರ್ಜೆಯ ಬಟ್ಟೆ ತಯಾರಿಸಬಹುದು. ಒಂದು ಎಳೆಯನ್ನು ಒಂಟೆಳೆ ಎಂದು ಎರಡು ಎಳೆಯನ್ನು 'ಗಿಂಟ' ಎಂದು ಕರೆಯಲಾಗುವುದು.

ಹಾಸಿನ ಎಳೆಗಳು ಅಚ್ಚಿಗೆ ಬರುವ ಮುನ್ನ ಎರಡು ಅಡ್ಡ ಕೋಲುಗಳನ್ನು ಹಾದು ಬರುತ್ತವೆ. ಇದಕ್ಕೆ ಅಣೆಕೋಲು ಎಂದು ಕರೆಯಲಾಗುತ್ತದೆ. ಇದರಲ್ಲಿ ಎಳೆಗಳು ಒಂದರ ನಂತರ ಒಂದರಂತೆ ಕ್ರಮವಾಗಿ ಮೇಲೆ ಕೆಳಗೆ ಹಾಯಿಸಿ ತೆಗೆದುಕೊಳ್ಳಲಾಗುತ್ತದೆ. ಇದರಿಂದ ಎಳೆಗಳು ಆಯಾ ಸ್ಥಳದಲ್ಲೇ ಬರುವುದರಿಂದ ಯಾವುದೇ ಎಳೆ ಕಿತ್ತು ಹೋದರೂ ಅದೇ ಸ್ಥಳದಲ್ಲಿ ಮರುಜೋಡಿಸಲು ಅನುಕೂಲ. ಇಲ್ಲದಿದ್ದಲ್ಲಿ ಎಳೆಗಳು 'ನುಲಿ'ಯಾಗಿ ನೇಯಲು ತುಂಬಾ ತೊಂದರೆಯಾಗುತ್ತದೆ.

ಹಾಸಿನ ಎಳೆಗಳು ಅಣೆಕೋಲನ್ನು ಮುಟ್ಟುವ ಮೊದಲು ಒಂದು ಅಡ್ಡಪಟ್ಟಿ ಮೇಲೆ ಹಾದು ಬರುತ್ತದೆ. ಇದನ್ನು 'ಅರ್ಧಣೆಗೆ' ಎಂದು ಕರೆಯಲಾಗುತ್ತದೆ. ಇದು ಹಾಸು ಒಂದೇ ಮಟ್ಟದಲ್ಲಿ ಬರಲು ನೆರವಾಗುತ್ತದೆ. ಈ ಅಡ್ಡಪಟ್ಟಿಗೂ ಹಿಂದೆ ಇನ್ನೊಂದು ಜೋಡಿ ಅಣೆಕೋಲು ಇರುತ್ತದೆ. ಇದರ ಕೆಲಸವೂ ಎಳೆಗಳ ಕ್ರಮಬದ್ಧತೆಯನ್ನು ಕಾಯ್ದುಕೊಳ್ಳುವುದೇ ಆಗಿದೆ.

ಹಾಸಿನ ಸುಮಾರು ನಾಲ್ಕೂವರೆ ಸಾವಿರ ಎಳೆಗಳನ್ನು ಎಂಟು ಹತ್ತು ಭಾಗಗಳಾಗಿ ವಿಂಗಡಿಸಿ ದಪ್ಪದಾರದಿಂದ ಕುಣಿಕೆ ಹಾಕಲಾಗುತ್ತದೆ. ಇದಕ್ಕೆ 'ಗೊಲೆ' ಕಟ್ಟುವುದು ಎನ್ನುತ್ತಾರೆ. ಗೊಲೆಗಳಿಗೂ ಅರ್ದಣೆಗೆಗೂ ಸುಮಾರು ೫ ಗಜ ಉದ್ದವಿರುತ್ತದೆ. ಮನೆಯ ಅಳತೆಗೆ ತಕ್ಕಂತೆ ಇದು ಬದಲಾಗುತ್ತದೆ.

ಹೀಗೆ ಕಟ್ಟಿದ ಗೊಲೆಗಳನ್ನು ಬಟ್ಟೆಯ ಅಗಲಕ್ಕೆ ಸಮವಾಗಿರುವಂತೆ ಒಂದು ದೊಣ್ಣೆಗೆ ಕಟ್ಟಲಾಗುತ್ತದೆ. ಈ ದೊಣ್ಣೆಯನ್ನು 'ಹೊರಕೋಲು' ಎನ್ನಲಾಗುತ್ತದೆ. ಈ ರೀತಿ ಹಾಸನ್ನು ಮನೆಯ ಅಳತೆಗೆ ಬಿಚ್ಚಿ ಗೊಲೆಕಟ್ಟಿ ಹೊರಕೋಲಿಗೆ ಬಿಗಿದು ನೇಯುವುದಕ್ಕೆ ಹಾಸನ್ನು ಸಿದ್ಧಪಡಿಸುವ ಒಟ್ಟಾರೆ ಪ್ರಕ್ರಿಯೆಗೆ 'ಮಡುಕೋಲು' ಅಥವಾ 'ಹೊರಕೋಲು' ಕಟ್ಟುವುದು ಎನ್ನಲಾಗುವುದು. ನೇಕಾರರ ಪ್ರವೀಣತೆಗೆ ತಕ್ಕಂತೆ ಶೀಘ್ರವಾಗಿ ಹಾಗೂ ಚೊಕ್ಕವಾಗಿ ಮಡುಕೋಲು ಕಟ್ಟಬಹುದು. ಬಟ್ಟೆನೇಯಲು ಇಡೀ ಮಡುಕೋಲು ಹಾಸು ಸೂಕ್ತವಾದ ಬಿಗಿ ಹೊಂದಿರಬೇಕು. ಇದಕ್ಕಾಗಿ ಹೊರಕೋಲನ್ನು ಒಂದು ನೂಲಿನ ಹಗ್ಗದಿಂದ ನಿಯಂತ್ರಿಸಲಾಗುವುದು. ಈ ಹಗ್ಗಕ್ಕೆ ಮಡುಕೋಲು ಹಗ್ಗ ಎಂದು ಕರೆಯಲಾಗುವುದು. ಇದೇ ರೀತಿ ವಿನ್ಯಾಸಕ್ಕಾಗಿ ಬಳಸುವ ಜರಿ (ಕಲಾಪತ್ತು)ಯನ್ನು ನಿಯಂತ್ರಿಸುವ ಹಗ್ಗ ಕಲಾಪತ್ ಹಗ್ಗ ಎನ್ನಲಾಗುವುದು. ಹಲ್ಲ ಬಳಸುವ ಮೊದಲು ಮಡುಕೋಲು ಕಟ್ಟುವಾಗ ದೊಣ್ಣೆಯನ್ನು ಒಂದು ಗೂಟಕ್ಕೆ ಸಿಕ್ಕಿಸಲಾಗುವುದು. ಇದನ್ನು 'ಮಿಳ್ಳೆ ಗೂಟ' ಎನ್ನಲಾಗುವುದು. ಕಬ್ಬಿಣದ ಕೊಳವೆಯನ್ನು ನೆಲಕ್ಕೆ ಹುದುಗಿಸಿ ಕೊಳವೆಗೆ ಹಿಡಿಸುವಷ್ಟು ದಪ್ಪದ ಕಬ್ಬಿಣದ ಗೂಟವನ್ನು ಇದರಲ್ಲಿ ನಿಲ್ಲಿಸಲಾಗುವುದು. ನೆಲದಲ್ಲಿ ಹುದುಗಿರುವ ಕೊಳವೆ ಮಿಳ್ಳೆಯಂತೆ ಇರುವುದರಿಂದ ಇದನ್ನು 'ಮಿಳ್ಳೆ' ಎಂದು ಕರೆಯಲಾಗುವುದು. ಮಡುಕೋಲು ಕಟ್ಟಿದ ನಂತರ ಹಾಸನ್ನು ಹದಗೊಳಿಸಿ ನೇಯಲು ಪ್ರಾರಂಭಿಸಲಾಗುವುದು. ಆರು-ಏಳು ಅಂಗುಲಬಟ್ಟೆ ನೇಯ್ದ ನಂತರ ಕುಂಟೆ ಬೆಣೆಯ ನೆರವಿನಿಂದ ಬಟ್ಟೆಯನ್ನು ಕುಂಟೆಗೆ ಸುತ್ತಿ ಕೊಳ್ಳಲಾಗುವುದು. ಬಟ್ಟೆ ಸುತ್ತು ಕೊಳ್ಳುವಾಗ ಮಡುಕೋಲು ದೊಣ್ಣೆ ಮುಂದಕ್ಕೆ ಬರುವುದರಿಂದ ದೊಣ್ಣೆಗೆ ಹಗ್ಗ ಸಿಕ್ಕಿಸಿ ಮುಂದಕ್ಕೆ ಬರುವಂತೆ ಮಾಡಲಾಗುವುದು.

ಬಟ್ಟೆ ನೇಯುತ್ತಾ ಹೋದಂತೆ ಹಗ್ಗ ಸಡಿಲಿಸಿ ಕುಂಟೆಗೆ ಸುತ್ತಿಕೊಳ್ಳುತ್ತಾ ಹೋಗಲಾಗುವುದು. ಹೀಗೆ ಅಚ್ಚಿನ ಸಮೀಪದವರೆಗೆ ದೊಣ್ಣೆ ಬರುವವರೆಗೂ ಇದೇ ಪ್ರಕ್ರಿಯೆ ಮುಂದುವರೆಯುವುದು. ನಂತರ ಗೊಲೆಬಿಚ್ಚಿ ಪುನಃ ಮಡುಕೋಲು ಕಟ್ಟಲಾಗುವುದು. ಹೀಗೆ ಹಾಸು ಕೊನೆಗೊಳ್ಳುವವರೆಗೆ ಇದೇ ಕ್ರಮ ಅನುಸರಿಸಲಾಗುವುದು. ಹಾಸು ಕೊನೆಗೊಂಡಾಗ ಮಡುಕೋಲು ಹತ್ತಿರಕ್ಕೆ ಬಿತ್ತು ಎಂದು ಕರೆಯಲಾಗುವುದು. ನಂತರ ಇನ್ನೊಂದು ಹಾಸನ್ನು ಇದಕ್ಕೆ ಜೋಡಿಸಬೇಕು. ಮೊದಲಿನ ಪ್ರತಿ ಎಳೆಗೆ ಹೊಸ ಹಾಸಿನ ಪ್ರತಿ ಎಳೆಯನ್ನು

ಬೆರಳಿನಿಂದ ಬೆಸೆಯಲಾಗುವುದು. ಇದಕ್ಕೆ 'ಕೆಚ್ಚು'ವುದು ಎಂದು ಕರೆಯುತ್ತಾರೆ. ಕೆಚ್ಚುವುದಕ್ಕೆಂದೇ ಪ್ರತ್ಯೇಕ ನಿಪುಣ ಕೆಲಸಗಾರರಿರುತ್ತಾರೆ. ಕೆಚ್ಚಿದ ನಂತರ ಕೆಚ್ಚಿನ ನಿಪುಣತೆಗೆ ತಕ್ಕಂತೆ ಕೆಚ್ಚು ಅಚ್ಚಿನ ಬಳಿಗೆ ಬರುವವರೆಗೆ ನೇಯಲಾಗುವುದು. ಕೆಚ್ಚು ಸರಿಯಿಲ್ಲದಿದ್ದರೆ ಬಿಚ್ಚಿಕೊಂಡು ತೊಂದರೆ ಉಂಟಾಗುವುದು. ಕೆಚ್ಚು ಒಳಕ್ಕೆ ಬರುವವರೆಗಿನ ನೇಯುವಿಕೆಯನ್ನು 'ಕೆಚ್ಚು ಮುಟ್ಟಿಸುವುದು' ಎನ್ನಲಾಗುವುದು.

ನೇಯುವಿಕೆಗೆ 'ಲಾಳಿ' ಎಂಬ ಸಾಧನವನ್ನು ಬಳಸಲಾಗುವುದು. ಇದರಲ್ಲಿ ಎಳೆಸುತ್ತಿದ ಮರದ (ಇತ್ತೀಚೆಗೆ ಪ್ಲಾಸ್ಟಿಕ್ ಬಳಸಲಾಗುತ್ತಿದೆ) ಸಣ್ಣ ತುಂಡು ಇರುತ್ತದೆ. ಇದಕ್ಕೆ 'ಕಣೆಕೆ' ಎಂದು ಕರೆಯಲಾಗುವುದು. ಮಗ್ಗದ ಚೌಕಟ್ಟಿನ ಬಲಬದಿಯಲ್ಲಿರುವ ಲಾಳಿಯ ನಿಲುಗಡೆ ಮನೆ (ದೋಣಿ ಎಂದೂ ಕರೆಯುತ್ತಾರೆ)ಯಲ್ಲಿ ಎಳೆ ತುಂಬಿದ ಕಣೆಕೆಯುಳ್ಳ ಲಾಳಿ ಹಾಕಿ ಮಗ್ಗದ ಕುಳಿಯಲ್ಲಿರುವ ಪಾದಚಕ್ಕೆಗಳಲ್ಲಿ ಒಂದನ್ನು ತುಣಿದಾಗ ಪಾದಚಕ್ಕೆಗೆ ಕಟ್ಟಿದ ಒಂದು ಅಚ್ಚು ಕೆಳಕ್ಕೆ ಬರುತ್ತದೆ. ಇದರಿಂದ ಹಾಸಿನ ಅರ್ಧಭಾಗ ವಿಂಗಡಿಸಿಕೊಂಡು ಲಾಳಿ ಅದರೊಳಗೆ ಹರಿಯುವಷ್ಟು ಮಾರ್ಗ ಏರ್ಪಡುತ್ತದೆ. ಆಗ ಕುಚ್ಚು ಎಳೆದರೆ ಲಾಳಿ ಒಂದು ಕಡೆಯಿಂದ ಇನ್ನೊಂದು ಕಡೆಗೆ ಹೋಗುತ್ತದೆ. ಹೋಗುವಾಗ ಕಂಡಿಕೆಯಿಂದ ಹಾಸಿನ (ಪನ್ನದ) ಅಗಲಕ್ಕೂ ಸಾಲುವಷ್ಟು ಉದ್ದದ ಎಳೆ ಕಂಡಿಕೆಯಿಂದ ಕಳಚಿಕೊಂಡು ನಿಲ್ಲುತ್ತದೆ. ಆಗ ಎಡಗೈಯಲ್ಲಿ ಹಿಡಿದಿರುವ ಮಗ್ಗದ ಚೌಕಟ್ಟನ್ನು ಬಡಿದು ಇನ್ನೊಂದು ಪಾದಚಕ್ಕೆ ತುಳಿದರೆ ಉಳಿದ ಅರ್ಧ ಕೆಳಕ್ಕೆ ಬಂದು ಮೊದಲ ಅಚ್ಚು ಮೇಲಕ್ಕೆ ಹೋಗಿ ಲಾಳಿ ಪುನಃ ಹಾಯಲು ಮಾರ್ಗ ಏರ್ಪಡುತ್ತದೆ. ನಂತರ ಮಗ್ಗದ ಹಿಡಿಕೆ ಮತ್ತೆ ಎಳೆದು ಎಳೆಯನ್ನು ಬಡಿದರೆ ಎಳೆ ಬಟ್ಟೆ ರೂಪ ಹೊಂದುತ್ತದೆ. ಬಟ್ಟೆ ಅಗಲವನ್ನು ಕಾಯ್ದುಕೊಳ್ಳಲು ಬಟ್ಟೆಯ ಅಂಚುಗಳನ್ನು ಬಿಗಿಯಾಗಿ ಹಿಡಿಯುವ ಕಾರ್ಯವನ್ನು ಎರಡೂ ತುದಿಯಲ್ಲಿ ಲೋಹದ ಮುಳ್ಳುಗಳಿಂದ 'ಸೇಡು' (ಸ್ಪೈಡ್ ಅಪಭ್ರಂಶ) ಎಂಬ ಸಾಧನ ಮಾಡುವುದು. ಲಾಳಿಯನ್ನು ಒಂದು ಕಡೆಯಿಂದ ಇನ್ನೊಂದು ಕಡೆಗೆ ತಳ್ಳುವ ಕಾರ್ಯವನ್ನು ತಳ್ಳುಚಕ್ಕೆ (ಪಿಕ್ಕರ್) ಎಂಬ ಸಾಧನ ಮಾಡುವುದು.

ಇದುವರೆಗೆ ಹೇಳಿದ್ದು ಸಾದಾ ಬಟ್ಟೆ ನೇಯುವ ವಿಧಾನವನ್ನು. ಇದಕ್ಕೆ

ಅಗತ್ಯವಿರುವ ವಿನ್ಯಾಸವನ್ನು ಅಳವಡಿಸಿಕೊಳ್ಳಬಹುದು. ವಿನ್ಯಾಸಕ್ಕೆ ನೆರವಾಗುವ ಮರದ ಸಾಧನವನ್ನು 'ತಾಪಿಟ್ಟು' ಎಂದು ಕರೆಯಲಾಗುವುದು. ಯಂತ್ರ ಮಗ್ಗದಲ್ಲಿ ಕಬ್ಬಿಣದ ಈ ಸಾಧನಕ್ಕೆ 'ಡಾಬಿ' ಎಂದು ಕರೆಯುತ್ತಾರೆ. ಎರಡರಲ್ಲೂ ಸಹ ಮಗ್ಗಕ್ಕೆ ನೇರವಾಗಿ ಬರುವಂತೆ ಮಗ್ಗದ ಮೇಲ್ಭಾಗದಲ್ಲಿ ಅಳವಡಿಸಲಾಗುವುದು. ಇದರಿಂದ ಇಳಿಬಿಟ್ಟ ದಾರಗಳು ವಿನ್ಯಾಸಕ್ಕೆ ತಕ್ಕಂತೆ ಹಾಸಿನ ಅಂಚಿನಲ್ಲಿ ಎಳೆಗಳ ನಡುವೆ ಇಳಿಬಿಟ್ಟ 'ಬೆದ' ಎಂಬ ವಿಶಿಷ್ಟ ದಾರದೊಂದಿಗೆ ಸಂಪರ್ಕ ಹೊಂದಿರುತ್ತವೆ. ಪ್ರತಿ ಬೆದ ಮೇಲೆ ಕೆಳಗೆ ಏರಿ ಇಳಿಯಲು ಸಾಧ್ಯವಾಗುವಂತೆ ತೂಕ ಬರಲು ಲೋಹದ ಕಂಬಿಗಳನ್ನು ಕಟ್ಟಲಾಗುವುದು. ಇದನ್ನು 'ಡಬ್ಬಳ' ಎಂದು ಕರೆಯಲಾಗುವುದು. ಬೆದದಲ್ಲಿರುವ ಸಣ್ಣ ಕಂಡಿಯಲ್ಲಿ ವಿನ್ಯಾಸಕ್ಕೆ ಬಳಸುವ ಕಲಾಪತ್ತು (ಜರಿ) ಎಳೆಯನ್ನು ಹಾಯಿಸಿ ತಟ್ಟಿನ ಮೂಲಕ ಕ್ರಮವಾಗಿ ಒಳಕ್ಕೆ ತೆಗೆದುಕೊಳ್ಳಲಾಗುವುದು. ವಿನ್ಯಾಸಕ್ಕೆ ತಕ್ಕಂತೆ ಇಳಿಬಿಟ್ಟ ದಾರವನ್ನು ಮೇಲೆತ್ತುವ ಕಾರ್ಯವನ್ನು ತಾಪಿಟ್ಟಿಗೆ ಅಳವಡಿಸಿದ ಒಡಲಿನ ತುಂಬ ಸಣ್ಣ ರಂಧ್ರಗಳಿರುವ 'ಲಾಕ್ಸ್' ಎಂಬ ಮರದ ಕೋಲು ನಿರ್ವಹಿಸುವುದು. ಒಂದೊಂದು ಕೋಲು ಮೇಲೇರುವ ಕಾರ್ಯವನ್ನು ರಂಧ್ರಕ್ಕೆ ಕೂರಿಸಿದ 'ಪೆಕ್ಸ್' ಎಂಬ ಮರದ ಸಣ್ಣ ತುಂಡು ಮಾಡುವುದು.

ಈಗ ಜಕಾರ್ಡ್ ಎಂಬ ವಿಧಾನ ಬಂದು ವಿನ್ಯಾಸ ಕ್ರಿಯೆಯನ್ನು ಸರಳಗೊಳಿಸಿದೆ. ರಟ್ಟಿನ ಕಾರ್ಡ್‌ಗಳಲ್ಲಿ ರಂಧ್ರ ಕೊರೆಯುವ ಮೂಲಕ ಅಗತ್ಯ ವಿನ್ಯಾಸ ಅಳವಡಿಸಲಾಗುವುದು. ಇದರಲ್ಲಿ ಹಾಸಿನ ಪ್ರತಿಎಳೆ ನಡುವೆ ಬೆದ ಇರುತ್ತದೆ. ಸೆರಗಿಗೆ (ಪಲ್ಲು) ವಿನ್ಯಾಸ ಹಾಕುವ (ಬೇಲು ಹಾಕುವ) ಶ್ರಮ ತುಂಬಾ ಕಡಿಮೆ. ಬೇಲು ಎತ್ತುವ ಕಾರ್ಯಕ್ಕೆ ಇನ್ನೊಬ್ಬ ವ್ಯಕ್ತಿಯ ನೆರವು ಅಗತ್ಯವಿಲ್ಲ.

ನೇಯ್ಗೆಯ ವಿವಿಧ ಹಂತಗಳು : ರೇಷ್ಮೆ ಬಟ್ಟೆ

ಹುಳುವಿನಿಂದ ಎಳೆ ತೆಗೆದು ರೀಲಿಂಗ್ ಮಾಡಿದ ನಂತರದ ಕಾರ್ಯ ನೇಕಾರರಿಗೆ ಒಂದಲ್ಲಾ ಒಂದು ರೀತಿ ಸಂಬಂಧಿಸುತ್ತದೆ. ಕೈಮಗ್ಗ ಹಾಗೂ ಯಂತ್ರ ಮಗ್ಗಗಳೆರಡಕ್ಕೂ ಹಾಸಿನ ಎಳೆ (ಜೋಡಿ ಹುರಿ) ಹೊಕ್ಕಿನ ಎಳೆ (ಸಪ್ಪೆ ಹುರಿ)ಗಳನ್ನು ಹುರಿ ಮಾಡುವ ಯಂತ್ರದಿಂದ ಹುರಿ ಮಾಡಲಾಗುತ್ತದೆ. ಇಲ್ಲಿಗೆ ಒಂದು ಹಂತ ಮುಗಿದಂತಾಗುತ್ತದೆ. ಮುಂದಿನ ಹಂತ ಕೈಮಗ್ಗಗಳಿಗಾದರೆ

ಪಾಗಡಿ ಹಾಕುವ ಕಾರ್ಯ, ಯಂತ್ರ ಮಗ್ಗಗಳಿಗೆ ವಾರ್ಪ್ ಹಾಕುವ ಕಾರ್ಯ ನುರಿತ ಕೆಲಸಗಾರರಿಂದ ನಡೆಯುತ್ತದೆ. ನಂತರದ ಹಂತ ಬಣ್ಣ ಹಾಕುವ ಕಾರ್ಯ. ಕೈಮಗ್ಗಗಳಲ್ಲಿ ವಸ್ತ್ರ ನೇಯುವುದಕ್ಕೆ ಮೊದಲೇ ಸಾಮಾನ್ಯವಾಗಿ ಬಣ್ಣ ಮಾಡಲಾಗುತ್ತದೆ. ಯಂತ್ರ ಮಗ್ಗದಲ್ಲಿ ಬಿಳಿವಸ್ತ್ರ ನೇಯ್ದು ನಂತರ ಅದಕ್ಕೆ ಪ್ರಿಂಟ್ ಇಲ್ಲವೆ ಬಣ್ಣ ಹಾಕಿಡುವುದು ಉಂಟು.

ಕೈಮಗ್ಗದಲ್ಲಿ ಬಣ್ಣದ ಮನೆಯಿಂದ ಬಣ್ಣ ಮಾಡಿದ ಪಾಗಡಿ ಹಾಗೂ ಸಪ್ಪೆಗಳನ್ನು ತಂದು ತೇವವಿದ್ದರೆ ಮೊದಲು ಅದನ್ನು ಒಣಗಿಸಲಾಗುವುದು. ಹಿಂದೆ ಪಾಗಡಿಯನ್ನು ರಸ್ತೆ ಬದಿ ಅಥವಾ ಬಯಲಿನಲ್ಲಿ ಒಣಗಿಸಲಾಗುತ್ತಿತ್ತು. ಇದಕ್ಕಾಗಿ ವಿಶಿಷ್ಟವಾದ 'ತಟ್ಟೆಗಾಲು' (ತಟ್ಟೆಗೋಲು) ಎಂಬ ಮರದ ಸಾಧನವನ್ನು ಬಳಸಲಾಗುತ್ತಿತ್ತು. ತಲಾ 5 - 6 ಅಡಿ ಉದ್ದದ ಬೊಂಬು ಇಲ್ಲವೆ ಇದೇ ಗಾತ್ರದ ಮರದ ಕೋಲಿನಿಂದ ಇಂಗ್ಲಿಷ್ 'ಎಕ್ಸ್' (X) ಆಕಾರದ ಆಕೃತಿ ಮಾಡಿಕೊಂಡು ಮೇಲ್ತುದಿಯಲ್ಲಿ ಅಡ್ಡಲಾಗಿ ಇನ್ನೊಂದು ಕೋಲನ್ನು ಭದ್ರಪಡಿಸಲಾಗುತ್ತದೆ. ಇದರ ಕಾಲುಗಳು ಅಡ್ಡಡ್ಡ ಇರುವುದರಿಂದ ತಟ್ಟೆಗಾಲು ಅಥವಾ ತಟ್ಟೆಗೋಲು ಎಂದು ಕರೆಯಲಾಗುವುದು. ಇಂತಹ ಎರಡು ತಟ್ಟೆಗಾಲು ಪಾಗಡಿ ಒಣಗಿಸಲು ಅಗತ್ಯವಿರುತ್ತದೆ. ಒಂದು ತುದಿಯಲ್ಲಿ ಒಂದು ತಟ್ಟೆಗಾಲನ್ನು ನೆಲದಲ್ಲಿ ಹುಗಿದ ಗೂಟಕ್ಕೆ ಹಗ್ಗದ ಸಹಾಯದಿಂದ ನಿಲ್ಲಿಸಲಾಗುವುದು. ಇದರ ಮೇಲ್ತುದಿಯ ಅಡ್ಡಪಟ್ಟಿಗೆ ಇನ್ನೊಂದು ದೊಣ್ಣೆ ಕಟ್ಟಿ ದೊಣ್ಣೆಯ ಮಧ್ಯಭಾಗಕ್ಕೆ ಬರುವಂತೆ ಪಾಗಡಿಯ ಒಂದು ತುದಿ ಸೇರಿಸಲಾಗುವುದು. ಪಾಗಡಿಯನ್ನು ಉದ್ದಕ್ಕೆ ಚಾಚುತ್ತಾ ಅದು ಕೊನೆಗೊಂಡ ಸ್ಥಳದಲ್ಲಿ ಇನ್ನೊಂದು ತಟ್ಟೆಗಾಲನ್ನು ಹಿಂದಿನಂತೆಯೇ ನಿಲ್ಲಿಸಿ ಬಿಗಿಯಾಗಿ ಬರುವಂತೆ ಸೆಳೆದು ಬಿಗಿಯಲಾಗುವುದು. ಹದವಾದ ಬಿಸಿಲಿನಲ್ಲಿ ಪಾಗಡಿ ಒಣಗಿಸಿ ಬಿಚ್ಚಿಕೊಳ್ಳಲಾಗುವುದು.

ಈ ಹಂತದ ನಂತರ ಒಣಗಿದ ಪಾಗಡಿಯನ್ನು ಮಗ್ಗದಲ್ಲಿ ಕೊನೆಗೊಂಡ ಹಿಂದಿನ ಹಾಸಿನ ಎಳೆಗಳಿಗೆ ಕ್ರಮವಾಗಿ ಕೈಬೆರಳಿನಿಂದ ಬೆಸೆಯಲಾಗುವುದು. ಇದನ್ನು ಈ ಹಿಂದೆಯೇ ತಿಳಿಸಿದಂತೆ 'ಕೆಚ್ಚುವುದು' ಎಂದು ಕರೆಯಲಾಗುವುದು.

ಇದರ ನಂತರದ ಹಂತ ಮಡುಕೋಲು ಕಟ್ಟುವುದು. ಈ ಹಂತದಲ್ಲಿ ಹಾಸನ್ನು ಎಲ್ಲಾ ಎಳೆಗಳು ಒಂದೇ ಬಿಗಿತ ಇರುವಂತೆ ಹದಗೊಳಿಸಿ ನೇಯಲು ಸಿದ್ಧಪಡಿಸಿಲಾಗುವುದು. ಈ ರೀತಿ ಹಾಸು ಸಿದ್ಧವಾದರೆ ಹೊಕ್ಕಿನ ರೇಷ್ಮೆ

ಲಾಳಿಯಲ್ಲಿ ಸೇರುವವರೆಗೆ ವಿವಿಧ ಹಂತಗಳನ್ನು ಹಾಯ್ದು ಬರುತ್ತದೆ. ಲಡಿಯ ಆಕಾರದಲ್ಲಿರುವ ರೇಷ್ಮೆಯನ್ನು ಬಣ್ಣದ ಮನೆಯಿಂದ ತಂದು ಮನೆಯಲ್ಲಿ ಒಣಗಿಸಿದ (ಆರಾಕುವುದು ಎಂದು ಕರೆಯಲಾಗುವುದು) ನಂತರ ಮೂರು 'ಗುಪ್ಪು'ಗಳಿಗೆ ಅಂದರೆ ಮಣ್ಣಿನ ಮುದ್ದೆಗೆ ಸುಮಾರು ೩ ಅಡಿ ಉದ್ದದ ನಯ ಮಾಡಿದ ಕೋಲನ್ನು ನೆಟ್ಟಗೆ ಭದ್ರವಾಗಿ ಸಿಕ್ಕಿಸಿ ಒಣಗಿಸಲಾಗುವುದು. ಇದನ್ನು ಗುಪ್ಪು ಎಂದು ಕರೆಯಲಾಗುವುದು. ಈ ರೀತಿ ಮೂರು ಗುಪ್ಪುಗಳನ್ನು ಸಿದ್ಧಪಡಿಸಿ ತ್ರಿಕೋನಾಕಾರದಲ್ಲಿ ಇವುಗಳನ್ನು ಇಟ್ಟು ರೇಷ್ಮೆ ಲಡಿಯನ್ನು ಇದರಲ್ಲಿ ಮೇಲಿನಿಂದ ಹಾಕಲಾಗುವುದು. ಲಡಿಯಲ್ಲಿ ಅಣಿ ಮಾಡಿದ ಮೇಲಿನ ತುದಿಯ ಎಳೆಯನ್ನು ತೆಗೆದು ಗುಪ್ಪಿನ ಮೇಲ್ತುದಿಯಿಂದ ಬರುವಂತೆ ಎಳೆದು ಮೇಲೆ ಚಾವಣಿಯಿಂದ ಇಳಿಬಿಟ್ಟ ಇನ್ನೊಂದು ಕೋಲಿನ ಮೇಲಿನಿಂದ ಹಾಯಿಸಿ ಪುನಃ ಕೆಳಕ್ಕೆ ತೆಗೆದುಕೊಂಡು ಬಿದಿರಿನ ದೆಬ್ಬೆಯಿಂದ ಮಾಡಿದ 'ಅಳ್ಟೆ' ಎಂಬ ಸಾಧನಕ್ಕೆ ಸುತ್ತಿ ಕೊಳ್ಳಲಾಗುವುದು. ಈ ಅಳ್ಟೆಯ ಒಂದು ತುದಿ ಮೂತಿ ಮಣೆ ಎಂಬ ಸಾಧನದಲ್ಲಿ ಇನ್ನೊಂದು ತುದಿ 'ಉಜ್ಜು ಮಣೆ' ಎಂಬ ಮರದ ಸಧನಗಳ ಮೇಲೆ ಇರುವುದು. ಗುಪ್ಪಿನಲ್ಲಿರುವ ಲಡಿಯಿಂದ ಅಳ್ಟೆಗೆ ರೇಷ್ಮೆ ಸುತ್ತಿ ಕೊಳ್ಳುವ ಒಟ್ಟಾರೆ ಕಾರ್ಯವನ್ನು ರೇಷ್ಮೆ ತೋಡುವುದು ಎಂದು ಕರೆಯಲಾಗುತ್ತದೆ. ಇತ್ತೀಚೆಗೆ ರೇಷ್ಮೆ ತೋಡುವ ಪದ್ಧತಿ ಕಡಿಮೆಯಾಗಿ ಯಂತ್ರಮಗ್ಗಗಳಲ್ಲಿ ಅನುಸರಿಸುವಂತೆ ಲಡಿಯನ್ನು ವೈಂಡಿಂಗ್ ಯಂತ್ರದಲ್ಲಿ ಹಾಕಿ ಬಾಬಿನ್‌ಗೆ ಸುತ್ತಿಕೊಳ್ಳಲಾಗುವುದು. ನಂತರ ಅಳ್ಟೆ ಇಲ್ಲವೆ ಬಾಬಿನ್ ನಲ್ಲಿರುವ ರೇಷ್ಮೆಯನ್ನು ಕೈರಾಟೆಯ ನೆರವಿನಿಂದ ಕಂಡಿಕೆಗೆ (ಕಣ್ಕೆಗೆ) (ಅಂದರೆ 3 - 4 ಅಂಗುಲ ಉದ್ದದ ಮರದ ಇಲ್ಲವೆ ಪ್ಲಾಸ್ಟಿಕ್ ತುಂಡಿಗೆ) ಸುತ್ತಿಕೊಳ್ಳಲಾಗುವುದು. ಇದನ್ನು ಕಣಿಕೆ (ಕಂಡಿಕೆ) ಸುತ್ತುವುದು ಎಂದು ಕರೆಯಲಾಗುವುದು. ಈ ರೀತಿ ಸುತ್ತಿದ ಕಂಡಿಕೆಯನ್ನು ಲಾಳಿಗೆ ಹಾಕಿ ಕೊಳ್ಳಲಾಗುವುದು ನಂತರದ ಕೆಲಸ ಬಟ್ಟೆ ನೇಯುವಿಕೆ.

ಈ ಹಿಂದೆ ತಿಳಿಸಿದಂತೆ ಬಟ್ಟೆ ನೇಯುವ ಕಾರ್ಯ ನಡೆಯುವುದು. ರೇಷ್ಮೆ ಸೀರೆಯಲ್ಲಿ ಬುಟ್ಟಗಳಿದ್ದರೆ ಬುಟ್ಟ ಹಾಕುವ ಕಾರ್ಯ ಶೀಘ್ರವಾಗಿ ಮುಗಿಯಲು ಇನ್ನೊಬ್ಬರ ನೆರವನ್ನು ಪಡೆಯಲಾಗುವುದು. ಸೆರಗಿನಲ್ಲಿನ (ಪಲ್ಲು) ವಿನ್ಯಾಸಗಳನ್ನು 'ಬೇಲು' ಎಂದು ಕರೆಯಲಾಗುತ್ತದೆ. ಇದನ್ನು ದಾರಗಳಲ್ಲಿ ಅಳವಡಿಸಿದ್ದು ಬೇಲಿನ ಹಲಗೆ ಮತ್ತು ಮರದಲ್ಲಿ ಮಾಡಿದ ಬೇಲು ಪಿಕಾಸಿಗಳ

ನೆರವಿನಿಂದ ಹಾಕಲಾಗುವುದು. ಜಕಾರ್ಡ್ ಅಳವಡಿಸದಿದ್ದಲ್ಲಿ ಬೇಲು ಎತ್ತುವ ಅಂದರೆ ದಾರಗಳನ್ನು ಕ್ರಮವಾಗಿ ಎತ್ತಿ ವಿನ್ಯಾಸ ಮೂಡುವಂತೆ ಮಾಡುವ ಕಾರ್ಯಕ್ಕೆ ಇನ್ನೊಬ್ಬರ ನೆರವು ಅತ್ಯಗತ್ಯ. ಬೇಲು ಹಾಕಿದ ನಂತರ ಸೀರೆಯ ಕೊನೆಗೆ ಕುಚ್ಚು ಕಟ್ಟಲು ಸುಮಾರು ಮೂರು ಅಂಗುಲ ಉದ್ದದಷ್ಟು ಹಾಸನ್ನು ನೇಯದೆ ಖಾಲಿ ಬಿಡಲಾಗುವುದು. ಇದನ್ನು 'ಬದ್ದಿಗೆ' ಎಂದು ಕರೆಯಲಾಗುತ್ತದೆ. ಮುಂದಿನ ಸೀರೆಯ ಆರಂಭಕ್ಕೂ ಇದೇ ರೀತಿ ಅಂದರೆ ಮೊದಲು ಒಂದೆರಡು ಅಂಗುಲ ಖಾಲಿ ಬಿಡಲಾಗುವುದು. ಇದನ್ನು ಕುಂಟೆಯಲ್ಲಿನ ಮರದ ತುಣುಕುಗಳಿಗೆ ಸಿಕ್ಕಿಸಿ ಮುಂದಿನ ಬಟ್ಟೆ ನೇಯಲಾಗುವುದು ಹಿಂದಿನ ಸೀರೆ ಕೊಯ್ದು ಕುಂಟೆಯಿಂದ ಅದನ್ನು ತೆಗೆದ ನಂತರ ಈ ಕಾರ್ಯ ನಡೆಯುವದು

ಕೊಯ್ದ ಸೀರೆಯನ್ನು ಇನ್ನೊಬ್ಬರ ನೆರವಿನಿಂದ ಕುಂಟೆಯಿಂದ ಹೊರಕ್ಕೆ ಎಳೆಯಲಾಗುವುದು. ನಂತರ ಇಡೀ ಸೀರೆಯನ್ನು ಪರೀಕ್ಷಿಸಿ ತುಂಡು ಎಳೆಗಳಿದ್ದರೆ ಅದನ್ನು ಕತ್ತರಿಸಿ ಸೀರೆಯನ್ನು ಮಡಿಸಲಾಗುವುದು.

ನೇಕಾರಿಕೆಯಲ್ಲಿ ಮಹಿಳೆ ಮತ್ತು ಮಕ್ಕಳ ಪಾತ್ರ

ಆಧುನಿಕ ನೇಕಾರಿಕೆಯಲ್ಲಿ ಎಷ್ಟೇ ಬದಲಾವಣೆಗಳಾಗಿದ್ದರೂ ಕೈಮಗ್ಗದಲ್ಲಿ ಬಟ್ಟೆ ನೇಯುವಿಕೆ ಇಂದಿಗೂ ಒಂದು ಕೌಟಂಬಿಕ ಉದ್ಯೋಗವಾಗಿಯೇ ಮುಂದುವರಿದಿದೆ. ಗೂಡಿನಿಂದ ಎಳೆ ತೆಗೆಯುವ ಕಾರ್ಯಕ್ಕೆ ಪುರುಷರಿಗಿಂತ ಹೆಂಗಸರು ಮತ್ತು ಮಕ್ಕಳು ತೊಡಗಿರುವುದು ಸಾಮಾನ್ಯ ವಿಷಯವಾಗಿದೆ. ನಂತರ ರೇಷ್ಮೆ ಹುರಿ ಮಾಡುವ ಕಾರ್ಯದಲ್ಲೂ ಮಹಿಳೆ ಮತ್ತು ಮಕ್ಕಳದೇ ಪ್ರಧಾನ ಪಾತ್ರ . ಏಕೆಂದರೆ ಈ ಕೆಲಸದಲ್ಲಿ ಹೆಚ್ಚಿನ ಕೂಲಿ ಸಿಗುವುದಿಲ್ಲ. ಹೀಗಾಗಿ ಪುರುಷರು ಇದರಲ್ಲಿ ತೊಡಗುವುದು ಅಪರೂಪ. ಹುರಿ ಮಾಡಿದ ನಂತರ ಬಣ್ಣ ಮಾಡುವ ಕಾರ್ಯದಲ್ಲೂ ಹೆಂಗಸರು ಮತ್ತು ಮಕ್ಕಳು ಸಹಾಯಕರಾಗಿ ದುಡಿಯುವುದನ್ನು ಕಾಣಬಹುದು. ನಂತರ ಪಾಗಡಿ ಹಾಕುವ (ಅಂದರೆ ಯಂತ್ರಮಗ್ಗದಲ್ಲಿ ಇದನ್ನು ವಾರ್ಪ್ ಹಾಕುವುದು ಎಂದು ಕರೆಯುತ್ತಾರೆ) ಕಾರ್ಯಕ್ಕೂ ಹೆಂಗಸರು ಮತ್ತು ಮಕ್ಕಳನ್ನು ಈಗ ಅವಲಂಭಿಸಲಾಗಿದೆ. ರೇಷ್ಮೆ ತೋಡುವ, ವೈಂಡಿಂಗ್ ಕಟ್ಟುವ, ಕಂಡಿಕೆ ಸುತ್ತುವ ಕಾರ್ಯವಂತೂ ಪೂರ್ಣವಾಗಿ ಮಹಿಳೆ ಹಾಗು ಮಕ್ಕಳ ಕೆಲಸವಾಗಿಯೆ ಇದೆ. ನಂತರ ನೇಯುವ ಕಾರ್ಯ. ಮಡುಕೋಲು ಕಟ್ಟಲು ಮನೆಯ ಮಹಿಳೆ ಮತ್ತು ಮಕ್ಕಳು ನೆರವಾಗುವುದು.

ಸಾಮಾನ್ಯ. ಹಾಗೆಯೇ ಬುಟ್ಟಿ ತಿರುವಲು, ಬೇಲು ಹಾಕಲು ಇವರು ಇರಲೇಬೇಕು. ಸೀರೆ ಕೊಯ್ದ ಮೇಲೆ ಸಾಮಾನ್ಯವಾಗಿ ಹೆಂಡತಿ ಸೀರೆ ಮಡಿಸಲು ನೆರವಾಗುತ್ತಾಳೆ. ಇಲ್ಲವೆ ಮಕ್ಕಳು ಈ ಕಾರ್ಯದಲ್ಲಿ ಭಾಗವಹಿಸುತ್ತಾರೆ. ಹಿಂದಿನಿಂದ ಕೈಮಗ್ಗದಲ್ಲಿ ಮತ್ತು ಇತ್ತೀಚೆಗಂತೂ ಯಂತ್ರಮಗ್ಗದಲ್ಲೂ ಮನೆಯ ಮಹಿಳೆಯರಲ್ಲದೆ, ಮಜೂರಿ ಆಧಾರದ ಮೇಲೆ ಇತರ ಮಹಿಳೆಯರೂ ದುಡಿಯಲು ಪ್ರಾರಂಭಿಸಿದ್ದಾರೆ. ಇದೇ ರೀತಿ ಮನೆಯ ಮಕ್ಕಳು ಹಾಗೂ ಕೂಲಿ ಆಧಾರದ ಮೇಲೆ ಇತರ ಮಕ್ಕಳೂ ನೇಯುವಿಕೆಯಲ್ಲಿ ತೊಡಗಿದ್ದಾರೆ.

ನೇಕಾರಿಕೆಯ ವಿವಿಧ ಹಂತಗಳಲ್ಲಿ ಮಹಿಳೆ ಮತ್ತು ಮಕ್ಕಳು ಪ್ರಾವೀಣ್ಯತೆ ಗಳಿಸಿದ್ದಾರೆ ಎಂಬ ಅಂಶವನ್ನು ಹೆಮ್ಮೆಯಿಂದ ಹೇಳಿಕೊಳ್ಳುವಂತಿಲ್ಲ. ಏಕೆಂದರೆ ಇಲ್ಲೆಲ್ಲಾ ಕುಟುಂಬ ನಿರ್ವಹಣೆಗಾಗಿ ಅನಿವಾರ್ಯವಾಗಿ ಇವರು ತೊಡಗಿದ್ದಾರೆ ಎನ್ನುವುದು **ಗಮನಿಸಬೇಕಾದ ಅಂಶವಾಗಿದೆ.** ಶ್ರೀಮಂತ ಕುಟುಂಬದ ಮಹಿಳೆಯರು **ಈ ಕಾರ್ಯದಲ್ಲಿ** ತೊಡಗಿರುವುದು ತೀರಾ ಅಪರೂಪ.

ಪ್ರಾಚೀನ ಮಗ್ಗಗಳು-

ಉಪಯೋಗಿಸುವ ಕಚ್ಚಾ ಮಾಲುಗಳನ್ನು ಆಧರಿಸಿ ಕೈ ಮಗ್ಗಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಹತ್ತಿಬಟ್ಟೆ ನೇಯುವ ಮಗ್ಗ, ರೇಷ್ಮೆ ಮತ್ತು ಕೃತಕ ರೇಷ್ಮೆ ನೇಯುವ ಮಗ್ಗ, ಉಣ್ಣೆ ಬಟ್ಟೆ ನೇಯುವ ಮಗ್ಗ, ಇತರ ವಸ್ತುಗಳನ್ನು ಉಪಯೋಗಿಸಿ ನೇಯುವ ಅಗ್ಗ.

ಇದೇ ರೀತಿ ರಚನೆ ಮತ್ತು ಕಾರ್ಯ ಕುಶಲತೆ ಆಧರಿಸಿ ಕೈಮಗ್ಗಗಳನ್ನು ನಾಲ್ಕು ವಿಧವಾಗಿ ವಿಂಗಡಿಸಬಹುದು. ಪ್ರಾಚೀನ ಮಗ್ಗ, ಕುಳಿ ಮಗ್ಗ, ಚೌಕಟ್ಟು (ಸ್ಟ್ಯಾಂಡ್) ಮಗ್ಗ, ಅರ್ಧ ಸ್ವಯಂಚಾಲಿತ ಮಗ್ಗ.

ಪ್ರಾಚೀನ ಮಗ್ಗಗಳಲ್ಲಿ ಕಟಿ ಮಗ್ಗ, ಗಿರಿಜನರ ಮಗ್ಗ, ಹಾಸುಗಂಬಳಿ ಮಗ್ಗ, ಉಣ್ಣೆ ಕಂಬಳಿ ಮಗ್ಗ, ಜಮಖಾನೆ ಮಗ್ಗ, ನೇವಳ ಮಗ್ಗ, ಟೇಪ್ ಮಗ್ಗ ಎಂಬ ವಿಧಗಳಿವೆ.

ಕೈಲಾಳಿಯ ಕುಳಿಗಳ ಮಗ್ಗಗಳು

ಈ ವಿಭಾಗದಲ್ಲಿ ಗಡ್ವಾಲಮಗ್ಗ, ಜಮದಾನ ಮಗ್ಗ, ಬಲರಾಮಪುರಂ

ಮಗ್ಗ, ವಾರಣಾಸಿ ಮಗ್ಗ, ದೇರಿ ಮಗ್ಗ, ಔರಂಗಾಬಾದ್ ಮಗ್ಗ, ಕಾಂಜೀವರಂ ಮಗ್ಗ ಇತ್ಯಾದಿಗಳು ಬರುತ್ತವೆ.

ಹಾರುವ ಲಾಳಿಯ ಕುಳಿಮಗ್ಗಗಳು

ಇದರಲ್ಲಿ ಉಪ್ಪಡ ಮಗ್ಗ, ವೆಂಕಟಗಿರಿ ಮಗ್ಗ, ಸೇಲಂ ಮಗ್ಗ, ಮದ್ರಾಸು ಕರಸವಸ್ತ್ರ ಮಗ್ಗ, ಮೌಮಗ್ಗ, ಸಾದಿಲ ಮಗ್ಗ, ನಾಗಪುರ ಮಗ್ಗಗಳು ಸೇರುತ್ತವೆ.

ಚೌಕಟ್ಟು ಅಥವಾ ಸ್ಟ್ಯಾಂಡ್ ಮಗ್ಗಗಳು

ಈ ವಿಭಾಗದಲ್ಲಿ ಮಲಬಾರು ಮಗ್ಗ, ಟೆರ್ರಿ ಚಲನೆಯಿರುವ ಮಲಬಾರು ಮಗ್ಗ, ಮಧುರೆ ಮಗ್ಗ, ರಾಜಸ್ತಾನಿ ಮಗ್ಗ, ಶಾಂತಿಪುರ ಮಗ್ಗ, ಸೋಲ್ಲಾಪುರ ಮಗ್ಗಗಳು ಸೇರುತ್ತವೆ.

ಅರ್ಧ ಸ್ವಯಂಚಾಲಿತ ಮಗ್ಗಗಳು

ಚಿತ್ತರಂಜನ್ ಮಗ್ಗ, ವಾರಣಾಸಿ ಮಗ್ಗ, ಮದನಪುರ ಮಗ್ಗ ಹ್ಯಾಟರ್ ಸ್ಲೇ ಪೆಡಲ್ ಮಗ್ಗಗಳು ಈ ವಿಭಾಗಕ್ಕೆ ಸೇರುತ್ತವೆ.

ಹಾರುವ ಲಾಳಿಯ ಮಗ್ಗವನ್ನು ಇಂಗ್ಲೆಂಡಿನಲ್ಲಿ ಕಂಡು ಹಿಡಿಯುವವರೆಗೆ (೧೮ನೇ ಶತಮಾನ) ಭಾರತದಲ್ಲಿ ಕೈಯಿಂದಲೇ ಲಾಳಿಯನ್ನು ಅತ್ತಿಂದಿತ್ತ ಹಾಕಲಾಗುತ್ತಿತ್ತು. ಇಂದಿಗೂ ಕೈಲಾಳಿಯ ಮಗ್ಗದಲ್ಲಿ ಅತ್ಯುತ್ಕೃಷ್ಟ ದರ್ಜೆಯ (ವಿನ್ಯಾಸದ). ಸೀರೆಗಳು ತಯಾರಾಗುತ್ತವೆ.

ಪ್ರಾಚೀನ ಮಗ್ಗಗಳ ರಚನೆ ಸರಳ ಮತ್ತು ಕಾರ್ಯವಿಧಾನ ಹಳೆಯದು. ಹೀಗಿದ್ದರೂ ಇವುಗಳ ವೈಶಿಷ್ಟ್ಯ ಇದುವರೆಗೆ ಬದಲಾಗದಿರುವುದು ಇದರ ಮೇಲ್ಮೆ ಹಾಗೂ ಉಪಯುಕ್ತತೆಗೆ ನಿದರ್ಶನವಾಗಿದೆ. ಇವುಗಳಲ್ಲಿ ಹೊಕ್ಕನ್ನು ಕೈಯಲ್ಲಿ ಹಾಸಿನೊಳಗೆ ಕೂಡಿಸಲಾಗುತ್ತದೆ. ಚೌಕಟ್ಟು ಚಿಕ್ಕದು ಹಾಗೂ ಭಾರ ಕಡಿಮೆ. ಆಧುನಿಕ ಮಗ್ಗಗಳಲ್ಲೂ ಸಾಧ್ಯವಾಗದ ವಿನ್ಯಾಸ ಇದರಲ್ಲಿ ಸಾಧ್ಯ.

ಪುರಾತನ ಕಟಿಮಗ್ಗ ಸಾಮಾನ್ಯವಾಗಿ ಮಣಿಪುರ, ತ್ರಿಪುರ ಅಸ್ಸಾಮಿನ ಕೆಲವು ಭಾಗಗಳಲ್ಲಿ ಪ್ರಚಲಿತವಿದೆ. ಗಾಲೋ ಗಿರಿಜನ ಉಪಯೋಗಿಸುವ ಧಾಕ ಬಂಧಗಳು, ತ್ರಿಪುರಾದ ಸ್ತ್ರೀಯರು ತೊಡುವ ಕಂಚುಕ, ಮಣಿಪುರದ

ನಾಗಾ ಮತ್ತು ವೈಷ್ಣವ ಮಹಿಳೆಯರು ತೊಡುವ ಫೆನೆಕ್ ಸೊಂಟ ಪಟ್ಟಿ, ನಾಗಾ ತರುಣಿಯರ ನೃತ್ಯದುಡುಗೆ ಕಟಿ ಮಗ್ಗದ ವೈಶಿಷ್ಟ್ಯ. ಇವುಗಳನ್ನು ಇತರ ಮಗ್ಗಗಳಲ್ಲಿ ತಯಾರಿಸಲು ಸಾಧ್ಯವಿಲ್ಲ.

ಗಿರಿಜನರ ಮಗ್ಗ

ಬಿಹಾರ, ಒರಿಸ್ಸ, ಮಧ್ಯಪ್ರದೇಶಗಳ ಗುಡ್ಡಗಾಡು ಜನ ತಮ್ಮ ವಸ್ತ್ರಗಳಿಗಾಗಿ ಉಪಯೋಗಿಸುವ ಮಗ್ಗ ಇದು.

ಬಲರಾಂಪುರದ ಮಗ್ಗ

ಇದರ ಲಾಳಿ ಬಿದುರಿನದು. ಉಂಡೆ ಹಾಸನ್ನು ಸ್ವದೇಶಿ ಅಚ್ಚುಗಳೊಂದಿಗೆ ಉಪಯೋಗಿಸಲಾಗುತ್ತದೆ. ಉತ್ತಮ ಹತ್ತಿನೂಲಿನ ಸೀರೆ ನೇಯಬಹುದು.

ವಾರಣಾಸಿ ಮಗ್ಗ

ಅತ್ಯುತ್ತಮ ವಿನ್ಯಾಸಗಳಿಗೆ ಪ್ರಸಿದ್ಧವಾದ ಬ್ರೊಕೇಟ್ ಬಟ್ಟೆ ನೇಯಬಹುದಾದ ಮಗ್ಗ. ಸೂಕ್ಷ್ಮ ವಿನ್ಯಾಸ ನೇಯಲು ಅಡ್ಡಬಲೆ ಉಪಯೋಗಿಸುವುದು ಇದರ ವೈಶಿಷ್ಟ್ಯ.

ಜಮದಾನಿ ಮಗ್ಗ

ಪಾರದರ್ಶಕ ವಿನ್ಯಾಸ ಇದರ ವೈಶಿಷ್ಟ್ಯ. ಬಟ್ಟೆ ಸಾಮಾನ್ಯವಾಗಿ ಬೂದುಬಣ್ಣ. ವಿನ್ಯಾಸಕ್ಕೆ ಬಿಳಿ ಹತ್ತಿ ಎಳೆ ಇಲ್ಲವೆ ಜರಿ ಬಳಸಲಾಗುತ್ತದೆ.

ಚಂದೇರಿ ಮಗ್ಗ

ಇದರಲ್ಲಿ ನೇಯಲಾದ ಬಟ್ಟೆಗೆ ಸಾಮಾನ್ಯವಾಗಿ ಶುದ್ಧ ರೇಷ್ಮೆಯ 13 - 15 ಎರಡು ಪೋಗು ಸುತ್ತಿದ ೬ ರಿಂದ ೮ ಎಳೆಗಳಿರುವ ಅಂಚುಗಳಿರುತ್ತವೆ. ಇದರಲ್ಲಿ ಬಳಸುವ ರೇಷ್ಮೆಗೆ ಪೂನಾ ರೇಷ್ಮೆಯೆಂದು ಹೆಸರುಂಟು. ೧೩-೧೫ರ ವರೆಗಿನ ಒಂಟಿ ಕಚ್ಚಾ ರೇಷ್ಮೆ ಎಳೆಯ ಹಾಸು ಮತ್ತು ೮೦ ರಿಂದ ೨೦೦ ನಂಬರ್‌ವರೆಗಿನ ಉತ್ತಮ ತರದ ಹತ್ತಿ ನೂಲಿನ ಹೊಕ್ಕು ಇವನ್ನು ಈ ಮಗ್ಗದಲ್ಲಿ ಬಳಸಬಹುದು.

ಕಾಂಜೀವರಂ ಮಗ್ಗ

ಸಾಮಾನ್ಯ ರೇಷ್ಮೆ ಸೀರೆ ನೇಯುವ ಮಗ್ಗದಂತೆಯೇ ಇರುತ್ತದೆ. ವಿನ್ಯಾಸ ನೇಯಲು ಅಡಯಿ ಅಥವಾ ನಕ್ಷೆ ಉಪಯೋಗಿಸುವುದು ಇದರ ವಿಶೇಷ.

ವೆಂಕಟಗಿರಿ ಮಗ್ಗ

ಪೆಟ್ಟು ಪಟ್ಟ ಎಂದು ಕರೆಯಲ್ಪಡುವ ಅಚ್ಚಿನ ವ್ಯವಸ್ಥೆಯಿರುವುದು ಈ ಮಗ್ಗದ ವೈಶಿಷ್ಟ್ಯ.

ಸೇಲಂ ಮಗ್ಗ

ಮಧುರೆ, ಕೊಯಮತ್ತೂರು ಮತ್ತು ಸೇಲಂನಲ್ಲಿ ಪ್ರಚಲಿತವಿರುವ ಹಾರುವ ಲಾಳಿ ಹಾಗೂ ಕುಳಿ ಇರುವ ಮಗ್ಗಗಳು ಇವು. ಇವುಗಳೆಲ್ಲ ಸಾಮಾನ್ಯವಾಗಿ ಒಂದೇ ಮಾದರಿಯವು. ಆದರೆ ಮಧುರೆಯಲ್ಲಿ ವಿನ್ಯಾಸಕ್ಕೆ ಜೆಕಾರ್ಡ್‌ಗಳನ್ನು ಸೇಲಂ ಮತ್ತು ಕೊಯಮತ್ತೂರುಗಳಲ್ಲಿ ನಮೂನೆ ಪೆಟ್ಟಿಗೆಗಳನ್ನು ಉಪಯೋಗಿಸಲಾಗುವುದು.

ಮದ್ರಾಸು ಕರವಸ್ತ್ರದ ಮಗ್ಗ

ಇದರಲ್ಲಿ ಉಂಡೆ ಹಾಸಿಗೆ ಬದಲಾಗಿ ಅಂದರೆ ಹಾಸನ್ನು ಉಂಡೆ ಸುತ್ತಿ ಮನೆಯ ಅಳತೆಗೆ ತಕ್ಕಂತೆ ಮಡುಕೋಲು ಕಟ್ಟಿ ನೇಯುವ ವಿಧಾನ ಅನುಸರಿಸಿದರೆ ಯಂತ್ರ ಮಗ್ಗದಲ್ಲಿ ಉಪಯೋಗಿಸುವಂತೆ ಉರುಳೆ ಆಕಾರದ ದೂಲ (ಬೀಮ್ಸ್) ಉಪಯೋಗಿಸಲಾಗುತ್ತದೆ. ಈ ಮಗ್ಗದಲ್ಲಿ ಟ್ರೆಡಲ್ ಮೇಲೆ ಕೂತು ನೇಯಬೇಕು.

ಮೌ ಮಗ್ಗ

ಈ ಮಗ್ಗದಲ್ಲಿ ಅತಿ ಸೂಕ್ಷ್ಮ ವಿನ್ಯಾಸಗಳನ್ನು ನೇಯಬಹುದು. ಎರಡು ಪ್ರತ್ಯೇಕ ಜೆಕಾರ್ಡ್ ವ್ಯವಸ್ಥೆ ಇದರ ವೈಶಿಷ್ಟ್ಯ. ಮಗ್ಗದ ಹಿಂಬದಿಯಲ್ಲಿ ಭಾರಗಳಿಂದ ಕೂಡಿದ ರಾಟೆಗಳ ಮೂಲಕ ಉಂಡೆಯ ರೂಪದ ಹಾಸನ್ನು ವ್ಯವಸ್ಥೆಗೊಳಿಸಲಾಗುತ್ತದೆ. ಸುಧಾರಿತ ಸೌಲಭ್ಯ ಹೊಂದಿರುವುದರಿಂದ ಉತ್ಪಾದನೆ ಅಧಿಕ.

ಚೌಕಟ್ಟು ಮಗ್ಗ ಅಥವಾ ಸ್ಟ್ಯಾಂಡ್ ಮಗ್ಗ

ಇದರಲ್ಲಿ ಮಗ್ಗದ ಕುಳಿ ಇರುವುದಿಲ್ಲ. ಸಾದಾ ನೆಲದ ಮೇಲೆ ಮರದ ಸಲಕರಣೆಗಳ ಈ ಮಗ್ಗವನ್ನು ಜೋಡಿಸಬಹುದು. ಹತ್ತಿ ನೂಲಿನ ಬಟ್ಟೆ ನೇಯುವುದಕ್ಕೆ ಇದು ಪ್ರಸಿದ್ಧ. ವೈವಿಧ್ಯಮಯ ವಿನ್ಯಾಸದ ನೂಲಿನ ಬಟ್ಟೆಗಳನ್ನು ಇದರಲ್ಲಿ ನೇಯಬಹುದು. ಉರುಳಿ ಹಾಸು ಇರುವುದರಿಂದ ಮಡುಕೋಲು ಕಟ್ಟಬೇಕಾಗಿಲ್ಲ. ಹೀಗಾಗಿ ಉತ್ಪಾದನೆಯೂ ಅಧಿಕ.

ಅರ್ಧ ಸ್ವಯಂಚಾಲಿತ ಮಗ್ಗ

ಇದರಲ್ಲಿ ಕೆಲವೊಂದು ಬಗೆಯ ಬಟ್ಟೆಗಳನ್ನು ಮಾತ್ರ ನೇಯಲು ಸಾಧ್ಯ. ಇದರಲ್ಲಿ ಯಂತ್ರ ಮಗ್ಗದ ಅರ್ಧದಷ್ಟು ಕೈಮಗ್ಗದ ೨-೩ ಪಟ್ಟು ಉತ್ಪಾದನೆಯಾಗುತ್ತದೆ. ಆಳಿನ ಸಹಾಯದಿಂದ ಟ್ರೆಡಲ್ ಒತ್ತಿ ಸ್ಲೇ ಚಾಲಿಸಿ ನಡೆಸುವುದು ಇದರ ಒಂದು ಅನುಕೂಲತೆ.

ಸೀರೆಗಳ ವಿವಿಧ ಮಾದರಿ ಹಾಗೂ ವಿನ್ಯಾಸಗಳು

ರೇಷ್ಮೆ ಹಾಗೂ ಹತ್ತಿಯ ಸೀರೆಗಳಲ್ಲಿ ಪ್ರಾದೇಶಿಕವಾಗಿ ವಿವಿಧ ವಿನ್ಯಾಸ ಹಾಗೂ ಮಾದರಿಗಳನ್ನು ಕಾಣಬಹುದಾಗಿದೆ. ಇತರ ಕಡೆಗಳಲ್ಲಿ ಅಂದರೆ ಬನಾರಸ್, ಕಾಂಜೀವರಂ, ಧರ್ಮಾವರಂ, ಆರಣಿ, ಇಳಕಲ್, ಮೊಲಕಾಲ್ಮೂರು ಮುಂತಾದ ಊರುಗಳಲ್ಲಿಯಂತೆ ಸ್ಥಳದ ಹೆಸರಿನಿಂದಲೇ ವಿಶಿಷ್ಟವಾಗಿ ಗುರ್ತಿಸಲ್ಪಡುವ ಮಾದರಿ ಸೀರೆಗಳು ನಮ್ಮಲ್ಲಿ ತೀರಾ ಅಪರೂಪ. ಇದಕ್ಕೆ ಕಾರಣ ಬೆಂಗಳೂರು ಹೊಂದಿರುವ ವೈವಿಧ್ಯತೆ. ಜೊತೆಗೆ ನೇಕಾರಿಕೆ ಪೂರ್ಣವಾಗಿ ಹೊರಗಿನವರ ಕೈಯ್ಯಲ್ಲಿರುವುದು. ವ್ಯಾಪಾರ ಕೇಂದ್ರವಾದ ಇಲ್ಲಿ ದಿನದಿನವೂ ಹೊಸ ಮಾದರಿಗಳ ಬೇಡಿಕೆಯಿರುವುದರಿಂದ ನೇಕಾರರೂ ಒಂದೇ ಮಾದರಿಗೆ ಗಂಟು ಬಿದ್ದಿಲ್ಲ.

ಆದರೂ ತುಂಬಾ ಹಿಂದಿನಿಂದಲೂ ಪ್ರಾದೇಶಿಕವಾಗಿ ಕೆಲವು ಮಾದರಿ ಸೀರೆಗಳು ಇಲ್ಲಿ ಮರೆಯಾಗಿಲ್ಲ. ಉದಾಹರಣೆಗೆ ದೊಡ್ಡ ಅಂಚಿನ ಸೀರೆ. ಇದರಲ್ಲಿ ಹೆಸರೇ ಸೂಚಿಸುವಂತೆ ಅಂಚು ದೊಡ್ಡದು. ಅಂದರೆ ಜರಿ ಹೆಚ್ಚಾಗಿ ಬಳಸುತ್ತಾರೆಂದು ಅರ್ಥವಲ್ಲ. ಅಂಚಿನ ಬಣ್ಣ ಒಡಲಿನ ಬಣ್ಣಕ್ಕಿಂತ ಬೇರೆಯಾಗಿದ್ದು ಅಂಚಿನ ಬೇರೆ ಬಣ್ಣದಿಂದ ಸೀರೆ ಆಕರ್ಷಕವಾಗಿ ಕಾಣುತ್ತದೆ. ಇದೇ ರೀತಿ

ಸಣ್ಣ ಅಂಚಿನ ಸೀರೆ ಎಂಬ ಮಾದರಿಯೂ ಪ್ರಸಿದ್ಧವಾಗಿದೆ. ವಿನ್ಯಾಸದಿಂದ ಗುರುತಿಸಲ್ಪಡುವ ರುದ್ರಾಕ್ಷಿ ಅಂಚಿನ ಸೀರೆ, ಗೋಪುರ ಅಂಚಿನ ಸೀರೆ, ನವಿಲು ಅಂಚಿನ, ಮಾವಿನಕಾಯಿ ಅಂಚಿನ, ಹಂಸದ ಅಂಚಿನ, ಎಲೆ ಅಂಚಿನ, ಗಂಡಭೇರುಂಡ ಅಂಚಿನ, ನಕ್ಷತ್ರದ ಅಂಚಿನ, ಬಳ್ಳಿ ಅಂಚಿನ, ಚಕ್ರದ ಅಂಚಿನ ಹೀಗೆ ವಿವಿಧ ಪ್ರಾಣಿ, ಪಕ್ಷಿ ವಸ್ತುಗಳ ವಿನ್ಯಾಸದ ಜರಿ ಅಥವಾ ಇತರ ಎಳೆಗಳ ಸೀರೆಗಳು ಇಲ್ಲಿನ ಸಾಂಪ್ರದಾಯಿಕ ಸೀರೆಗಳಾಗಿವೆ. ಜರಿಯ ಗುಣಮಟ್ಟ, ಅಂಚು, ಒಡಲು ಹಾಗೂ ಸೆರಗಿನಲ್ಲಿ ಬಳಕೆಯಾಗಿರುವ ಜರಿಯ ಪ್ರಮಾಣ ಮತ್ತು ಸೆರಗಿನಲ್ಲಿ ಬಳಕೆಯಾಗಿರುವ ಜರಿಯ ಪ್ರಮಾಣ ಮತ್ತು ವಿನ್ಯಾಸಗಳಿಗೆ ತಕ್ಕಂತೆ ಸೀರೆಯ ಮೌಲ್ಯ ನಿರ್ಧಾರವಾಗುತ್ತದೆ.

ಹೊಕ್ಕಿನ ಎಳೆಯಲ್ಲಿಯೇ ಅಂಚಿಗೆ ಬೇರೆ ಒಡಲಿಗೆ ಬೇರೆ ಬಣ್ಣ ಬರುವಂತೆ ನೇಯುವ ವಿವಿಧ ಅಂಚಿನ ಸೀರೆಗಳನ್ನು ಕಾಂಟ್ರಾಸ್ಟ್ ಸೀರೆ ಎಂದು ಕರೆಯಲಾಗುತ್ತದೆ.

ಸಾಂಪ್ರದಾಯಿಕವಾಗಿ ಇಲ್ಲಿ ಚೌಕಳಿ ಸೀರೆಗಳನ್ನೂ ತಯಾರಿಸಲಾಗುತ್ತದೆ. ಒಡಲಿನಲ್ಲಿ ಚೌಕದ ಆಕಾರ ಬರುವಂತೆ ಜರಿ ಇಲ್ಲವೆ ಇತರೆ ಎಳೆಗಳನ್ನು ಇದರಲ್ಲಿ ಬಳಸಲಾಗುವುದು.

ಸೀರೆಯ ಉದ್ದದಾದ್ಯಂತ ಒಂದು ಅಂಚಿನಿಂದ ಇನ್ನೊಂದು ಅಂಚಿನವರೆಗೆ ೨-೩ ಅಂಗುಲಕ್ಕೊಂದು ಸಾಲಿನಂತೆ ಜರಿ ಅಥವಾ ಇತರ ಎಳೆಗಳನ್ನು ಅಳವಡಿಸಿದ ವಿನ್ಯಾಸಕ್ಕೆ 'ಸಾಲಾರಿ' ಎಂದು ಕರೆಯಲಾಗುತ್ತದೆ.

ಕ್ರೇಪ್ ಸಿಲ್ಕ್

ವಿರುದ್ಧವಾಗಿ ಹುರಿಮಾಡಿದ ಎರಡು ಬೇರೆ ಬೇರೆ ಎಳೆಗಳು ಬರುವಂತೆ ನೇಯುವ ಸೀರೆ ಇದು. ಯಂತ್ರಮಗ್ಗದಲ್ಲಿ ಇದು ಪ್ರಸಿದ್ಧ. ಅಂಚಿಗೆ ಖೋಟಾಜರಿ ಬಳಸುವಂತಿಲ್ಲ. ಉತ್ತಮ ಜರಿಯನ್ನು ಇದರಲ್ಲಿ ಬಳಸಬೇಕು. ಏಕೆಂದರೆ ವಸ್ತ್ರ ತಯಾರಿಸಿದ ನಂತರ ಇಡೀ ವಸ್ತ್ರವನ್ನು ಕುದಿಯುವ ಬಣ್ಣದ ನೀರಲ್ಲಿ ಮುಳುಗಿಸಿ ಬಣ್ಣ ಹಾಕಲಾಗುವುದು. ಇದರಿಂದ ಉತ್ತಮ ಜರಿ ಇಲ್ಲದಿದ್ದರೆ ಅಂಚು ಕಪ್ಪಾಗುವುದು.

ಮೈಸೂರು ಸಿಲ್ಕ್ ಸೀರೆ

ಅತ್ಯುತ್ತಮ ದರ್ಜೆಯ ರೇಷ್ಮೆ ಎಳೆ ಹಾಗೂ ಜರಿ ಎಳೆಗಳನ್ನು ಬಳಸಿ ತಯಾರಿಸಲಾಗುವುದು. ಆಧುನಿಕ ಯಂತ್ರಮಗ್ಗದಲ್ಲಿ ತಯಾರಾಗುವ ಇದರ ನಕಲಿ ರೂಪವೇ ಕ್ರೇಪ್ ಸೀರೆಗಳು. ಉತ್ತಮ ಗುಣಮಟ್ಟದ ನೇಯ್ಗೆ (ಬಟ್ಟೆ) ಹಾಗೂ ಅತ್ಯಾಧುನಿಕ ವಿಧಾನ ಮತ್ತು ಮಿಶ್ರಣಗಳನ್ನು ಬಳಸಿ ಬಣ್ಣ ನೀಡುವುದರಿಂದ ತುಂಬಾ ಆಕರ್ಷಕವಾಗಿ ಕಾಣುವುದು.

ಟಿಶ್ಯೂ ಸೀರೆಗಳು

ಹಾಸಿನಲ್ಲಿ ರೇಷ್ಮೆ ಎಳೆಯನ್ನು ಬಳಸಿ ಹೊಕ್ಕಿಗೆ ಜರಿ ಬಳಸಿ ವಿವಿಧ ವಿನ್ಯಾಸದ ಸೀರೆ ತಯಾರಿಸಲಾಗುವುದು. ಒಡಲಿನ ತುಂಬ ಜರಿ ಇರುವುದರಿಂದ ಈ ಸೀರೆ ಮಿಂಚುವಂತೆ ಕಾಣಿಸುತ್ತದೆ. ಉತ್ತಮ ಜರಿ ಬಳಸಿದ ಟಿಶ್ಯೂ ಸೀರೆಗಳ ಬೆಲೆ ತುಂಬಾ ಹೆಚ್ಚು. ಒಡಲಿನ ತುಂಬಾ ಇರುವ ಜರಿ ಅಲ್ಪ ಪ್ರಮಾಣದಲ್ಲಿರುವ ರೇಷ್ಮೆ ಎಳೆಯನ್ನು ಕತ್ತರಿಸುವುದರಿಂದ ಕ್ರಮೇಣ ಈ ಸೀರೆ ಇಟ್ಟಲ್ಲಿಯೇ ಹರಿದು ಹೋಗುವುದುಂಟು. ಇದು ಇದರ ನ್ಯೂನತೆ.

ಸಿಫಾನ್ ಸೀರೆ

ತುಂಬಾ ತೆಳುವಾಗಿ ರೂಪಗೊಳ್ಳುವ ಸೀರೆ ಇದು. ಸಾಮಾನ್ಯ ಶುದ್ಧ ರೇಷ್ಮೆ ಅಥವಾ ಕೃತಕ ರೇಷ್ಮೆಯ ಎಳೆಗಳಿಂದ ತೀರಾ ತೆಳುವಾದ ಎಳೆ ಬಳಸಿ ಈ ವಸ್ತ್ರಗಳನ್ನು ತಯಾರಿಸಲಾಗುವುದು. ಇದರಿಂದ ಈ ವಸ್ತ್ರ ಪಾರದರ್ಶಕವಾಗಿ ಕಾಣುತ್ತದೆ. ಈ ವಸ್ತ್ರದ ಮೇಲೆ ವಿವಿಧ ಬಣ್ಣ, ಮುದ್ರಣಗಳನ್ನು ಮಾಡಬಹುದು. ಇದು ಸಾಮಾನ್ಯವಾಗಿ ಯಂತ್ರಮಗ್ಗದಲ್ಲಿ ತಯಾರಾಗುತ್ತದೆ.

ಅಪೂರ್ವ ಸೀರೆಗಳು

ಇತ್ತೀಚೆಗೆ ತುಂಬಾ ಜನಪ್ರಿಯವಾಗಿರುವ ಸೀರೆ ಇದು. ಎರಡು ಅಂಚುಗಳಲ್ಲಿ ಆಕರ್ಷಕ ವಿನ್ಯಾಸ ಹೊಂದಿದ್ದು ಅಂಚಿನ ಪಕ್ಕದಲ್ಲೇ ದೊಡ್ಡ ಬುಟ್ಟಾ, ಒಡಲಿನ ತುಂಬಾ ಸಣ್ಣ ಬುಟ್ಟ ಹಾಗೂ ಸೆರಗಿನಲ್ಲಿ ಚಿತ್ತಾಕರ್ಷಕ ಶ್ರೀಮಂತ ಸೆರಗು ಇದರ ವೈಶಿಷ್ಟ್ಯ. ಶ್ರೀಮಂತ ವಿನ್ಯಾಸ ಹೊಂದಿದ್ದರೂ ಅತಿ ಸಾಮಾನ್ಯ ಜರಿ ಬಳಸುವುದರಿಂದ ಕಡಿಮೆ ಬೆಲೆಗೆ ಇದು ಲಭ್ಯವಾಗುತ್ತದೆ.

ಇದರಿಂದ ಮಧ್ಯಮ ಹಾಗೂ ಕೆಳಮಧ್ಯಮ ವರ್ಗಗಳ ಸೀರೆ ಎಂದೇ ಪ್ರಸಿದ್ಧವಾಗಿದೆ. ಕೃತಕ ರೇಷ್ಮೆ ಬಳಸಿ ತಯಾರಿಸಿದ ಸೀರೆಗಳು ದೇಶದಾದ್ಯಂತ ಬೇಡಿಕೆಯಲ್ಲಿವೆ. ಇವು ಯಂತ್ರಮಗ್ಗಗಳಿಗೆ ಮೀಸಲು.

ಕ್ಲಿಯೋಪಾತ್ರ

ಪಾಶ್ಚಿಮಾತ್ಯ ಪ್ರಭಾವದಿಂದ ಬಂದ ಹೆಸರಿದು. ಒಡಲಿನ ತುಂಬಾ ಚಿತ್ರ ವಿಚಿತ್ರ ಜರಿ ವಿನ್ಯಾಸ ಇದರ ವೈಶಿಷ್ಟ್ಯ. ಯಂತ್ರ ಮಗ್ಗದ ಕೊಡುಗೆ ಇದು.

ಪ್ರಾದೇಶಿಕವಾಗಿ ಇಲ್ಲಿಯೂ ಕಾಂಜೀವರಂ, ಧರ್ಮಾವರಂ, ಬನಾರಸ್ ಮುಂತಾದ ಹೆಸರಾಂತ ಸೀರೆಗಳನ್ನು ಯಥಾವತ್ತಾಗಿರುವಂತೆಯೇ ತಯಾರಿಸಲಾಗುತ್ತದೆ. ಬನಾರಸ್ ಸೀರೆ ತಯಾರಿಕೆ ತುಂಬಾ ಕಷ್ಟದ್ದಾದ್ದರಿಂದ ಕುಶಲ ಕೆಲಸಗಾರರು ಸಿಗುವುದಿಲ್ಲ. ಆದರೆ ಕಾಂಜೀವರಂನಂತಹ ಸೀರೆಗಳು ತಜ್ಞರಿಗೂ ಕಂಡು ಹಿಡಿಯಲಾರದಷ್ಟು ಯಥಾವತ್ತಾಗಿರುತ್ತವೆ.

ಕರ್ನಾಟಕದ ಇತರ ಕಡೆಗಳಲ್ಲಿ ಅಂದರೆ ಬಸವ ಕಲ್ಯಾಣ, ಶಹಾಪುರ, ಕಂಗಂಪೇಟೆ, ಭಾಗ್ಯನಗರ, ಕಿನ್ನಾಳ, ರಬಕವಿ, ಬನಹಟ್ಟಿ, ಇಳಕಲ್ಲ್, ಹುಬ್ಬಳ್ಳಿ, ಗದಗ, ಬೆಟಗೇರಿ ಇತ್ಯಾದಿಗಳು ಗಾಡಿ, ಧಡಿ ಸೀರೆ ಬಟ್ಟೆಗಳಿಗೆ ಪ್ರಸಿದ್ಧ. ಬರಾಸಪೇಟೆ, ನಾರಾಯಣ ಪೇಟೆ 'ತೋಪು ತೆನೆ' ಸೀರೆಗಳಿಗೆ, ತೆಕ್ಲ ಕೋಟೆ, ನವಲಗುಂದ ಗುಡಾರ ಜವಳಿಗೆ ಪ್ರಸಿದ್ಧ.

ಇವುಗಳ ಜೊತೆಗೆ ದಕ್ಷಿಣ ಭಾರತದಲ್ಲಿ ಕಾಂಜೀವರಂ, ಆರಣಿ, ಧರ್ಮಾವರಂ, ಪೂಚಂಪಲ್ಲಿ ವಿವಿಧ ಮಾವರಿ ಸೀರೆಗಳಿಗೆ ಪ್ರಸಿದ್ಧ.

ಉತ್ತರ ಭಾರತದಲ್ಲಿ ಪಟೋಲ, ಟರಾಸ್, ಘರ್ರ್ಬೋಲಾಸ್, ಚಾಂದನಿ, ಪೈಥನಿ ಪಾರ್ಸಿ, ಝುಡ್ಡೋಶಿ, ಕೋರಾಸಿಲ್ಕ್, ಹಾಗೂ ವಿವಿಧ ಮಾದರಿಯ ಬನಾರಸ್ ಸೀರೆಗಳು ತುಂಬಾ ಪ್ರಸಿದ್ಧ.

ಬನಾರಸ್ ಸೀರೆಗಳು

ಈ ವಿಷಯದ ವ್ಯಾಪ್ತಿಗೆ ಬರದಿದ್ದರೂ ಸೀರೆಯ ವಿವಿಧ ಮಾದರಿಗಳನ್ನು ಚರ್ಚಿಸುವಾಗ ಬನಾರಸ್ ಸೀರೆಗಳನ್ನು ನೆನಪಿಸಿಕೊಳ್ಳದಿದ್ದರೆ ಸೀರೆಗಳ ಬಗೆಗಿನ ಚರ್ಚೆ ಅಪೂರ್ಣ ಎನಿಸಿಕೊಳ್ಳುತ್ತದೆ.

ಬನಾರಸ್ ಅಥವಾ ಕಾಶಿಯಲ್ಲಿ ತಯಾರಾಗುವ ವಿಶಿಷ್ಟ ಮಾದರಿಯ ಸೀರೆ ಇದು. ಇದನ್ನು ತಯಾರಿಸುವ ವಿಧಾನ ವಂಶಪಾರಂಪರ್ಯವಾಗಿ ಮುಂದುವರಿಯುತ್ತದೆ ಎಂಬ ನಂಬಿಕೆ. ಕ್ರಿ.ಶ.೧೩ನೆಯ ಶತಮಾನದಿಂದಲೇ ಪ್ರಾರಂಭವಾಯಿತೆಂದು ತಿಳಿದು ಬರುತ್ತದೆ.

ಉತ್ತಮ ದರ್ಜೆಯ ರೇಷ್ಮೆ, ಚಿನ್ನದ ಎಳೆ, ಬೆಳ್ಳಿ ರೇಕುಗಳಿಂದ ತಯಾರಾಗುವ ಶ್ರೇಷ್ಠ ದರ್ಜೆ ಸೀರೆ ಲಕ್ಷಾಂತರ ರೂ.ಗಳ ಬೆಲೆ ಬಾಳುತ್ತದೆ. ಹಾಸುಗಾಗಿ ರೇಷ್ಮೆ ಎಳೆ ಹೊಕ್ಕಿಗೆ ಇತರ ಎಳೆಗಳನ್ನು ಬಳಸಿ ಬನಾರಸ್ ಸೀರೆ ತಯಾರಿಸುವುದೂ ಉಂಟು. ಹತ್ತಿ ಎಳೆಯ ಬನಾರಸ್ ಸೀರೆಗಳೂ ತಯಾರಾಗುತ್ತವೆ. ಸೀರೆಯ ಆದ್ಯಂತ ಕೈಯಲ್ಲಿ ವಿನ್ಯಾಸ ತಿರುವುದು ಬನಾರಸ್ ಸೀರೆ ವಿಶೇಷ. ಇದರಿಂದ ಇದರ ತಯಾರಿಕೆಗೆ ತುಂಬಾ ಸಮಯ ತೆಗೆದುಕೊಳ್ಳುತ್ತದೆ.

ಬನಾರಸ್ ಸೀರೆಗಳಲ್ಲಿ ಬನಾರಸ್ ಸಾದಾ ಸೀರೆ, ಒಡಲಲ್ಲಿ ಹೂವಿನ ವಿನ್ಯಾಸವುಳ್ಳ ಬೂಟಿದಾರ್ ಸೀರೆ, ತ್ರಿಕೋನ ವಿನ್ಯಾಸದ ಕೋನಿಯಾ, ಚಿನ್ನ ಬೆಳ್ಳಿ ರೇಕುಗಳನ್ನು ಬಳಸಿ ತಯಾರಿಸುವ ಗಂಗಾ ಜಮುನಾ, ಹತ್ತಿ ಮಿಶ್ರಿತ ಬನಾರಸಿ ಸೂಟಿ, ಜರಿಯಿಲ್ಲದ ಬಣ್ಣದ ಎಳೆಗಳಿಂದ ನೇಯ್ದ ಅವರ್ ಜಮ್ದಾನಿ ಸೆರಗು ಅಂಚಿಲ್ಲದ ಬರಿಯ ಬೂಟ ಸೀರೆ ಮುಖ್ಯವಾದವು.

ಹತ್ತಿ ಬನಾರಸ್ ಸೀರೆಗಳಲ್ಲಿ ಮುಸ್ಲಿನ್ ನಂತಹ ಬನಾರಸಿವಾಲಾ 'ಜಮಾನಿ' ಎಂಬ ಅತಿ ತೆಳ್ಳಗಿನ ಹತ್ತಿ ಬಟ್ಟೆಯನ್ನು ಹಿಂದೆ ಇಲ್ಲಿ ತಯಾರಿಸ ಲಾಗುತ್ತಿತ್ತು.

ನೇಕಾರಿಕೆಗೆ ಸಂಬಂಧಿಸಿದ ಪ್ರಾಚೀನ ನುಡಿಗಳು

ಪ್ರತಿಯೊಂದು ವೃತ್ತಿಯಲ್ಲೂ ವೃತ್ತಿಗೆ ಸಂಬಂಧಿಸಿದಂತೆ ಅನುಭವದ ನುಡಿಗಳು, ಗಾದೆಗಳು ಇರುವಂತೆ ನೇಕಾರಿಕೆಯಲ್ಲೂ ಇದೆ.

ಹಗಲೂ-ರಾತ್ರಿ ನೇಯ್ಗೆ ಕೆಲಸದಲ್ಲಿ ತೊಡಗುವುದು ಹಿಂದಿನಿಂದ ನಡೆದು ಬಂದ ಅಂಶವೇ ಆಗಿದೆ. ಬಿಡುವಿಲ್ಲದೆ ಕೆಲಸದಲ್ಲಿ ತೊಡಗುವುದರಿಂದ ಕೆಲಸದ ಗುಣಮಟ್ಟ ಕೆಡುವುದು ಸಾಮಾನ್ಯ. ವಿದೇಶಿಯರಿಂದ ಭಾನುವಾರವನ್ನು ಬಿಡುವಿನ ದಿನವಾಗಿ ಅಳವಡಿಸಿ ಕೊಳ್ಳುವುದಕ್ಕಿಂತ ಹಿಂದಿನಿಂದಲೇ ನಮ್ಮ

ಹಿರಿಯರು ಒಂದೊಂದು ವೃತ್ತಿಯಲ್ಲೂ ಒಂದೊಂದು ದಿನವನ್ನು ಬಿಡುವು ಬಿಟ್ಟಿದ್ದಾರೆ. ಇದರಂತೆ 'ಅಮಾವಾಸ್ಯೆ ದಿನ ನೇಯ್ದರೆ ನೂರಾರು ವಿಘ್ನ' ಎಂಬ ಮಾತನ್ನು ಕೈಮಗ್ಗದ ನೇಕಾರಿಕೆಯಲ್ಲಿ ಅನುಸರಿಸುತ್ತಿದ್ದಾರೆ. ಇದೇ ರೀತಿ ವಾಸ್ತವ ಸ್ಥಿತಿ ಬದಲಾಗುವುದಿಲ್ಲ ಎಂಬ ಅಂಶವನ್ನು ಹೇಳುವುದಕ್ಕೆ "ಪೀತಾಂಬರ ಉಟ್ಟರೂ ಕೊತ್ತಮ್ಬರಿ ಮಾರೋದು ಬಿಡಲಿಲ್ಲ", "ಪಟ್ಟೆ ಸೀರೆಯುಟ್ಟರೂ ಮೊಟ್ಟೆ ಹೊರೋದು ತಪ್ಪಲಿಲ್ಲ" ಎಂಬುದು ರೂಢಿಗೆ ಬಂದಿದೆ. ಕೆಟ್ಟ ಜನರನ್ನು ಕುರಿತು ಹೇಳುವಾಗ "ಪಟಿಂಗ ಪಟ್ಟೆಯುಟ್ಟು ಕೊಂಡರೆ ಪಟ್ಟಕ್ಕೆ ಸನ್ನಾದನೆ" ಎಂಬ ವಾಸ್ತವ ನುಡಿ ಇಂದಿಗೂ ಪ್ರಸ್ತುತವಾಗಿದೆ. ಆಡಿದ ಮಾತು ತೂಕದಿಂದ ಕೂಡಿರಬೇಕು ಎಂಬುದನ್ನು ಹೇಳಲು "ಪ್ರಸ್ತಾವ ನುಡಿಯಲ್ ಪ್ರಶಸ್ತವಾಗಿರಬೇಕು. ಪ್ರಸ್ತಾವ ತಪ್ಪಿ ನುಡಿದರೆ ದೇವಾಂಗದುಸ್ತು (ಲಂಗೋಟಿ) ಬಿದ್ದನ್ತೆ" ಎಂಬ ಮಾತು ಸೃಷ್ಟಿಯಾಗಿದೆ. ನಡತೆ ಕುರಿತು ಹೇಳುವಾಗ "ಪಟ್ಟೆಗೆ ಮಯ್ಲಿಗೆ ಸಲ್ಲ ಮುತ್ತಯ್ದೆಗೆ ಹಾದರ ಸಲ್ಲ" ಎಂಬ ಮಾತು ಪ್ರಚಾರಕ್ಕೆ ಬಂದಿದೆ. ಪ್ರಯೋಜನಕ್ಕೆ ಬಾರದ ಕಾರ್ಯಗಳ ಬಗ್ಗೆ ಹೇಳುವಾಗ "ತೆಂಗಿನ ಮರಕ್ಕೆ ಪಟ್ಟೆ ಸೀರೆ ಕಟ್ಟಿದಂತೆ" ಎಂಬ ಮಾತು ನೇಕಾರರ ಸ್ಥಿತಿ ಕುರಿತು ಹೇಳಲು "ನೇಯುವವನ ಹೆಂಡತಿ ಬೆತ್ತಲೆ" ಎಂಬ ನುಡಿ ರೂಪುಗೊಂಡಿದೆ. ಸಲ್ಲದ ವಸ್ತು ಕುರಿತು ಹೇಳುವಾಗ "ನೇಸೆವಾನಿಕಿ ಯಾಲಾ ಕೋತಿ ಪಿಲ್ಲ" ಎಂಬುದು; ಪಟಭೇದ ಕುರಿತು ಹೇಳುವಾಗ "ದಸರಿ ಗಬ್ಬಂ ಗನ್ಧನೀಲಿ, ಸನ್ನಾರಾಗ ಕುಸುರಿ ಆವಂಚೆ ದೋರಿಯ ನಾಗವಲ್ಲಿ ವಟ್ಟೆ ಸುವರ್ಣಪಳಿ ಮಡವಿ ಮಂಜಿಷ್ಟೆ ದೇವಾಂಗಮ್ ಎನ್ನು ಪಟಭೇದ ಮಕ್ಕುಂ" ಎಂದು ಹೇಳಲಾಗಿದೆ. "ಎದುರು ಕುಂಟೆಯಲ್ಲಿ ಕೆಲಸ ನಿಲ್ಲಿಸಬಾರದು" ಎಂಬ ಮಾತನ್ನು ಬಟ್ಟೆ ಹಾಳಾಗದಂತೆ ತಡೆಯಲು ಮುಂಜಾಗರೂಕತೆಯಿಂದ ಹೇಳಿದ್ದಾದರೂ ಇದು ಒಂದು ಕತೆಗೆ ಆಕರವಾಗಿದೆ.

ತುಂಬಾ ಹಿಂದೆ ದೇವಲ ದಾಸಿಮಯ್ಯ ನೇಯ್ಗೆ ಕಾಯಕದಲ್ಲಿ ನಿರತನಾಗಿ ಜೀವನ ನಿರ್ವಹಣೆ ಮಾಡುತ್ತಿರುತ್ತಾನೆ. ನೇಕಾರಿಕೆಯನ್ನು ದೇವರ ಪೂಜೆಯೆಂದೇ ತಿಳಿದು ಸದಾ ಅದರಲ್ಲೇ ತೊಡಗಿದ್ದರೂ ಬಡತನ ಅವನನ್ನು ಬಿಟ್ಟಿರಲಿಲ್ಲ. ಇವನ ಕಾಯಕ ನಿಷ್ಠೆ, ಶುದ್ಧ ಜೀವನಗಳನ್ನು ಮೆಚ್ಚಿದ ಸಿರಿದೇವತೆ ಲಕ್ಷ್ಮೀ ಒಂದು ಸಂಜೆ ಇವನ ಮನೆ ಬಾಗಿಲಿಗೆ ಬಂದು ಬಾಗಿಲು ತಟ್ಟುತ್ತಾಳೆ. ಅತಿಥಿಗಳನ್ನು ವಿಶ್ವಾಸದಿಂದ ಸತ್ಕರಿಸುವುದನ್ನು ತನ್ನ ಕರ್ತವ್ಯ ಎಂದೇ ಭಾವಿಸಿದ್ದರೂ, ಎದುರು

ಕುಂಟೆ ಬಂದಿದ್ದರಿಂದ ಅದನ್ನು ಬಿಟ್ಟು ಏಳಲಾರದೆ ಸ್ವಲ್ಪ ಹೊತ್ತು ಕಾಯುವಂತೆ ಹೇಳಿ ನೇಯುವುದರಲ್ಲಿ ತಲ್ಲೀನನಾಗುತ್ತಾನೆ. ಬಾಗಿಲಿನ ಹೊರಗೆ ಕಾಯುತ್ತಾ ನಿಂತ ಲಕ್ಷ್ಮಿ ಎಷ್ಟು ಹೊತ್ತಾದರೂ ಬಾಗಿಲು ತೆರೆಯದ್ದರಿಂದ ಬೇಸರಗೊಂಡು ಪಕ್ಕದ ಮನೆ ಬಾಗಿಲು ತಟ್ಟುತ್ತಾಳೆ. ತಕ್ಷಣ ಬಾಗಿಲು ತೆರೆದು ನೋಡಿದ ಮನೆಯ ಒಡೆಯ ಶೆಟ್ಟಿ ಆದರದಿಂದ ಆಕೆಯನ್ನು ಒಳಗೆ ಆಮಂತ್ರಿಸಿ ಕಂಬಳಿ ಹಾಸಿ ಕುಳ್ಳಿರಿಸುತ್ತಾನೆ. ಮನೆಗೆ ಬಂದ ಲಕ್ಷ್ಮಿಯ ಉದ್ದೇಶ ವಿಚಾರಿಸಿ ತಿಳಿದುಕೊಂಡ ಅವನು ತನ್ನ ಮನೆಯಿಂದ ಆಕೆ ಹೊರಗೆ ಹೋಗುವುದನ್ನು ಹೇಗಾದರೂ ತಡೆಯಬೇಕೆಂದು ಆಲೋಚಿಸಿದವನು ತಾನು ಬರುವವರೆಗೂ ಕುಳಿತಿರಬೇಕೆಂದು ಆಕೆಯಿಂದ ವಚನ ಪಡೆದು ಹೊರಹೋಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಾನೆ. ವಚನ ನೀಡಿದ ಲಕ್ಷ್ಮಿ ಅವನು ಹಿಂತಿರುಗುವುದನ್ನೇ ಈಗಲೂ ಕಾಯುತ್ತಾ ಶೆಟ್ಟರ ಮನೆಯಲ್ಲಿ ನೆಲೆಸಿದ್ದಾಳೆಂಬ ಪ್ರತೀತಿ ಇಂದಿಗೂ ಇದೆ. ಲಕ್ಷ್ಮಿ ಬಂದು ಬಾಗಿಲು ತಟ್ಟಿದರೂ ವೃತ್ತಿ ಧರ್ಮ ಮೀರದ ದಾಸಿಮಯ್ಯನ ಜನಾಂಗ ಇಂದಿಗೂ ಬಡತನದಿಂದಲೇ ಜೀವನ ಸಾಗಿಸುತ್ತಿದ್ದಾರೆಂದು ನೇಕಾರರ ಸ್ಥಿತಿ ಕುರಿತು ಹೇಳುವಾಗ ಹಿರಿಯರು ಹೇಳುತ್ತಾರೆ.

ಪುರಾಣ

ನೇಕಾರಿಕೆಯನ್ನು ಅವಲಂಬಿಸಿರುವ ಪ್ರಮುಖ ಜನಾಂಗಗಳು ತಮ್ಮದೇ ಪುರಾಣ ಹೊಂದಿವೆ. ವಿಜಯನಗರ ಕಾಲದಿಂದಲೂ ಗುರುಪೀಠ ಹೊಂದಿರುವ ದೇವಾಂಗ ಜನಾಂಗ ಪ್ರಾಚೀನ 'ದೇವಾಂಗ ಪುರಾಣ' ಹೊಂದಿದೆ. ಅದರ ಪ್ರಕಾರ ಜಗತ್ತು ಸೃಷ್ಟಿಯಾದ ಮೇಲೆ ವಸ್ತ್ರಗಳಿಲ್ಲದೆ ಲಜ್ಜಿತರಾಗಿದ್ದ ದೇವತೆಗಳು ಸೃಷ್ಟಿಕರ್ತ ಬ್ರಹ್ಮನೊಡಗೂಡಿ ಪರಮೇಶ್ವರನ ಬಳಿಗೆ ಹೋಗಿ ಹೇಗಾದರೂ ಮಾನಮುಚ್ಚಿಕೊಳ್ಳುವ ಸಾಧನವೊಂದನ್ನು ಅನುಗ್ರಹಿಸುವಂತೆ ಪ್ರಾರ್ಥಿಸುತ್ತಾರೆ. ಇವರ ಪ್ರಾರ್ಥನೆಗೆ ಮನಕರಗಿದ ಮಹೇಶ್ವರ ತನ್ನ ಇಚ್ಛಾಮಾತ್ರದಿಂದ ದಿವ್ಯರೂಪನಾದ ದೇವಲ (ದೇವಾಂಗ)ನನ್ನು ಸೃಷ್ಟಿಸುತ್ತಾನೆ. ಪರಮೇಶ್ವರನ ಅಪ್ಪಣೆಯಂತೆ ದೇವಾಂಗ ಮಾನಸಂರಕ್ಷಣಾ ಸಾಧನವಾದ ವಸ್ತ್ರವನ್ನೂ ಬ್ರಾಹ್ಮಣ್ಯ ಸಂಪಾದನೆಗಾಗಿ ಸೂತ್ರ (ಯಜ್ಞೋಪವೀತ)ವನ್ನು ನಿರ್ಮಿಸಿ ಸಮಸ್ತರಿಗೂ ನೀಡುತ್ತಾನೆ.

ಈ ಪುರಾಣದ ಪ್ರಕಾರ ದೇವಲನು ವಿದ್ಯಾಧರ, ಪುಷ್ಪದಂತ, ಬೇತಾಳ,

ವರರುಚಿ, ಚಿತ್ರಯೋಗಿ, ದೇವಶಾಲಿ, ದೇವದಾಸರೆಂದು ಇನ್ನೂ ಏಳು ಅವತಾರಗಳನ್ನು ತಾಳಿದ್ದಾನೆ. ದೇವಲ ದುಷ್ಟ ಶಿಕ್ಷಕ ಶಿಷ್ಟರಕ್ಷಕ ನಾಗಿದ್ದುದಲ್ಲದೆ ವೇದಮಾತೆಯಾದ ಗಾಯತ್ರಿಯನ್ನು ತ್ರಿಪಾದ ರೂಪವಾಗಿ ನಿರ್ಮಿಸಿ (ಯಜ್ಞೋಪವೀತದ ಮೂರು ಎಳೆಗಳು) ಅದನ್ನು ಮಂತ್ರ ಸಹಿತವಾಗಿ ತ್ರಿಮೂರ್ತಿಗಳಿಗೂ ಪ್ರದಾನ ಮಾಡಿದನು.

ಇದೇ ರೀತಿ ಪದ್ಮಸಾಲಿ ಜನಾಂಗವೂ, ತನ್ನದೇ ಆದ ಪುರಾಣ ಹೊಂದಿದ್ದು 'ಭಾವನಾ ಮಹರ್ಷಿ' ಇದರಲ್ಲಿ ದೇವಲ ನಂತೆಯೇ ಜಗತ್ತಿಗೆ ವಸ್ತ್ರಪ್ರದಾನ ಮಾಡುತ್ತಾರೆ.

ಸಾಂಸ್ಕೃತಿಕ ಮಹತ್ವ

ವಸ್ತ್ರಗಳು ಸಂಸ್ಕೃತಿಯನ್ನು ಪ್ರತಿಬಿಂಬಿಸುವಲ್ಲಿ ಮಹತ್ವದ ಪಾತ್ರ ವಹಿಸುತ್ತ ಬಂದಿವೆ. ವಿವಿಧ ಧರ್ಮ, ಜಾತಿಗಳಿರುವ ನಮ್ಮಲ್ಲಿ ಉಡುಪಿನಿಂದಲೇ ಬಹುಮಟ್ಟಿಗೆ ಜಾತಿ ಧರ್ಮಗಳನ್ನು ಗುರ್ತಿಸಬಹುದಾಗಿದೆ. ಅಲ್ಲದೆ ಧರಿಸುವ ವಸ್ತ್ರಗಳಿಂದಲೇ ಸಾಂಸ್ಕೃತಿಕ ಸಂದರ್ಭಗಳನ್ನು ಗುರ್ತಿಸಬಹುದಾಗಿದೆ. ಹಲವಾರು ಜನಾಂಗಗಳಲ್ಲಿ ಮದುವೆಯ ಸಂದರ್ಭದಲ್ಲಿ ವಧು ಬಿಳಿ ವಸ್ತ್ರ (ಸೀರೆ) ಧರಿಸಿದರೆ ಕೊಡವರಲ್ಲಿ ಬಿಳಿ ಸೀರೆ ಶೋಕ ಸೂಚಕವಾಗಿದೆ. ಕಪ್ಪು ಸೀರೆಯನ್ನು ಶೋಕ ಸೂಚಕವಾಗಿ ಕೆಲವರು ಬಳಸಿದರೆ ಮತ್ತೆ ಕೆಲವರಲ್ಲಿ ಕೆಂಪು ಸೀರೆ ವೈಧವ್ಯ (ಶೋಕ) ಸೂಚಕವಾಗಿದೆ. ಹಸಿರು, ಹಳದಿ ವಸ್ತ್ರಗಳಂತೂ ಶುಭ ಸುಚಕವಾಗಿ ಬಹಳ ಜನಾಂಗಗಳಲ್ಲಿ ಬಳಕೆಯಲ್ಲಿದೆ ಇದೇ ರೀತಿ ಕಾಶಾಯ ವಸ್ತ್ರ ಸನ್ಯಾಸವನ್ನು ಸೂಚಿಸಲು ಬಳಕೆಯಾಗುತ್ತಿರುವುದು ಎಲ್ಲರಿಗೂ ವೇದ್ಯ. ಹಿಂದೆ ನಾರು ಮಾಡಿ (ನಾರು ವಸ್ತ್ರ) ಆಶ್ರಮವಾಸಿಗಳ ವಸ್ತ್ರ ಆಗಿದ್ದಂತೆ ಕೆಲವು ಜನಾಂಗಗಳಲ್ಲಿ ಬಿಳಿ ವಸ್ತ್ರ ಸರ್ವಸಂಗ ಪರಿತ್ಯಾಗದ ದ್ಯೋತಕವಾಗಿದೆ. ವಿವಾಹ ಮತ್ತಿತರ ಶುಭ ಸಂದರ್ಭಗಳಲ್ಲಿ ವಿವಿಧ ವರ್ಣ, ವಿನ್ಯಾಸದ ರೇಷ್ಮೆ ಸೀರೆಗಳನ್ನು ಧರಿಸಲೇ ಬೇಕೆನ್ನುವುದು ಬಹಳ ಜನಾಂಗಗಳಲ್ಲಿ ಅಲಿಖಿತ ಕಟ್ಟಲೆಯಾಗಿ ರೂಢಿಯಲ್ಲಿರುವುದು ಹಾಗೂ ರೇಷ್ಮೆಗೆ ಮೈಲಿಗೆ ತಾಕುವುದಿಲ್ಲ ಎಂಬ ಮಾತು ರೇಷ್ಮೆಯ ಮಹತ್ವವನ್ನು ಹೇಳುವುದರ ಜೊತೆಗೆ ಸಾಂಸ್ಕೃತಿಕ ಸಂದರ್ಭಗಳನ್ನು ಪ್ರತಿಬಿಂಬಿಸುವಲ್ಲಿಯೂ ಮುಖ್ಯ ಪಾತ್ರವಹಿಸಿದೆ.

ನೇಕಾರಿಕೆಯ ಸಮಸ್ಯೆಗಳು

ವಸ್ತ್ರಗಳು ಅತಿ ಅವಶ್ಯಕ ವಸ್ತುವಿನ ಸ್ಥಾನ ಪಡೆದಿದ್ದರೂ ಹಿಂದಿನಿಂದಲೂ ನೇಕಾರಿಕೆ ಒಂದಲ್ಲಾ ಒಂದು ಸಮಸ್ಯೆಯನ್ನು ಎದುರಿಸುತ್ತಲೇ ಬಂದಿದೆ. ಸಮಾಜದಲ್ಲಿ ನೇಕಾರನನ್ನು 'ಬಡ ನೇಕಾರ' ಎಂದು ಗುರ್ತಿಸಿರುವುದನ್ನು ಗಮನಿಸಿದರೆ ಇದರಲ್ಲಿ ನ್ಯೂನತೆ ಇರುವುದಂತೂ ಸ್ಪಷ್ಟವಾಗುತ್ತದೆ. ಒಟ್ಟಾರೆ ನೇಕಾರಿಕೆಯ ಪ್ರಕ್ರಿಯೆಯನ್ನು ಗಮನಿಸಿದರೆ ಪ್ರತಿಯೊಂದು ಹಂತವೂ ತನ್ನದೇ ಆದ ಸಮಸ್ಯೆಗಳನ್ನು ಹೊಂದಿರುವುದು ಗೋಚರಿಸುತ್ತದೆ. ಎಳೆ ತೆಗೆಯುವ ಹಂತದಲ್ಲಿ ದುಡಿಯುವ ಕಾರ್ಮಿಕರು ಕುದಿಯುವ ನೀರಲ್ಲಿ ಹಾಕಿದ ಗೂಡಿನಿಂದ ಎಳೆ ತೆಗೆಯಬೇಕು. ಇತ್ತೀಚೆಗೆ ನೀರಿಗೆ ಕೈ ಹಾಕದೆ ಎಳೆ ತೆಗೆಯಲು ಇತರ ಸಾಧನಗಳನ್ನು ಬಳಸಿದರೂ ಕೈ ಹಾಕುವುದನ್ನು ಪೂರ್ಣವಾಗಿ ತಪ್ಪಿಸಲಾಗಿಲ್ಲ. ಜೊತೆಗೆ ಹುಳು ಬೇಯುವಾಗ ವಾತಾವರಣ ಕಲುಶಿತವಾಗಿ ಕಾರ್ಮಿಕರ ಆರೋಗ್ಯದ ಮೇಲೆ ಪರಿಣಾಮ ಬೀರುವುದನ್ನು ತಪ್ಪಿಸಲಾಗಿಲ್ಲ. ಜೊತೆಗೆ ಆಕರ್ಷಕ ಕೂಲಿಯನ್ನು ನಿರೀಕ್ಷಿಸುವಂತೆಯೇ ಇಲ್ಲ.

ನಂತರದ ಹುರಿ ಮಾಡುವ ಹಂತದಲ್ಲಿ ಬಾಲ ಕಾರ್ಮಿಕರನ್ನು ತೊಡಗಿಸುವುದು ನಿಂತಿಲ್ಲ. ಕಾರ್ಮಿಕರ ಕೌಟುಂಬಿಕ ಸ್ಥಿತಿಗತಿ ಗಮನಿಸಿದಾಗ ಮಕ್ಕಳು ದುಡಿಯಲೇ ಬೇಕಾದ ಅನಿವಾರ್ಯತೆಯೂ ಅಲ್ಲಿ ವ್ಯಾಪಕವಾಗಿ ಕಂಡು ಬರುತ್ತದೆ. ಹುರಿ ಯಂತ್ರದಿಂದ ಸಂಭವಿಸುವ ಅಪಾಯದ ಜೊತೆಗೆ ಮಿತಿಮೀರಿ ಕೆಲಸ ಮಾಡಿಸುವುದು ಇಲ್ಲಿ ತಪ್ಪಿಸಲಾರದ ಸಮಸ್ಯೆಯಾಗಿದೆ. ಮಾಲೀಕರೂ ಸಹ ಮಾರುಕಟ್ಟೆಯ ಏರುಪೇರಿನಿಂದ, ವಿದ್ಯುತ್ ಕಡಿತದ ಸಮಸ್ಯೆಗಳಿಂದ ತೊಂದರೆ ಅನುಭವಿಸುವುದೂ ಸಾಮಾನ್ಯ ವಿಷಯವಾಗಿದೆ.

ಬಣ್ಣ ಮಾಡುವ ಹಂತದಲ್ಲಿ, ರಾಸಾಯನಿಕ ಬಣ್ಣಗಳನ್ನು ಕುದಿಸುವುದರಿಂದ ಶ್ವಾಸಕೋಶದ ಮೇಲೆ ಆಗುವ ಕೆಟ್ಟ ಪರಿಣಾಮ ಅಪಾರ. ಇಲ್ಲಿ ದುಡಿಯುವ ಕಾರ್ಮಿಕರು ಇದನ್ನು ಭರಿಸದೆ ವಿಧಿಯಿಲ್ಲ. ಸಣ್ಣ ಪ್ರಮಾಣದಲ್ಲಿ ಬಣ್ಣ ಮಾಡುವುದರಿಂದ ಇದನ್ನು ತಪ್ಪಿಸಲು ಆಧುನಿಕ ಯಂತ್ರಗಳನ್ನು ಉಪಯೋಗಿಸುವ ಸ್ಥಿತಿಯಲ್ಲಿ ಮಾಲೀಕರೂ ಇರುವುದಿಲ್ಲ. ನೇಯುವ ಹಂತದಲ್ಲಿ ಮಾರುಕಟ್ಟೆಯ ಸ್ಥಿತಿಗತಿಯೇ ಪ್ರಧಾನ ಪಾತ್ರ ವಹಿಸುತ್ತದೆ

ವಸ್ತ್ರಗಳ ಮಾರಾಟ ನೇಕಾರಿಕೆಗೆ ಸಂಬಂಧ ಪಡದ ವ್ಯಕ್ತಿಗಳ

ಕೈಯಲ್ಲಿರುವುದು ಕರ್ನಾಟಕದ ನೇಕಾರರ ಈಗಿನ ದುಃಸ್ಥಿತಿಗೆ ಪ್ರಮುಖ ಕಾರಣ. ಸರ್ಕಾರವಾಗಲಿ, ನೇಕಾರ ಸಹಕಾರ ಸಂಘಗಾಗಲೀ ಅಥವಾ ಇನ್ನಾವುದೇ ಸಂಸ್ಥೆಗಳಾಗಲೀ ಮಾರಾಟ ಸ್ಥಿರತೆಯನ್ನು ಕಾಯ್ದುಕೊಳ್ಳುವ ಮಾರ್ಗ ಕಂಡುಕೊಳ್ಳುವ ಅಗತ್ಯ ಇಂದು ತುಂಬಾ ಇದೆ.

ಅಸ್ಥಿರ ವ್ಯಾಪಾರ ಸ್ಥಿತಿ ಮಾಲೀಕ, ಕಾರ್ಮಿಕ ಹಾಗೂ ಒಟ್ಟಾರೆಯಾಗಿ ನೇಕಾರಿಕೆಯನ್ನು ಹಿಂದಿನಿಂದಲೂ ಕಾಡುತ್ತಾ ಬಂದಿದ್ದು, ಸಣ್ಣ ಬಂಡವಾಳದ ಮಾಲೀಕರು ಹಾಗೂ ನೇಕಾರರು ಹೊಟ್ಟೆ ಬಟ್ಟೆಗೆ ಪರದಾಡುವ ಸ್ಥಿತಿ ಈಗಲೂ ಇದೆ.

ಉತ್ತಮ ವಸ್ತ್ರದ ಲಕ್ಷಣಗಳು

ವಸ್ತ್ರ ಅಥವಾ ಸೀರೆ ಉತ್ತಮವಾಗಿ ರೂಪುಗೊಳ್ಳಲು ಕಚ್ಚಾ ಪದಾರ್ಥದ ಗುಣಮಟ್ಟ ಎಷ್ಟು ಅಗತ್ಯವೋ ನೇಕಾರರ ಕುಶಲತೆಯೂ ಅಷ್ಟೇ ಪ್ರಮುಖವಾಗಿದೆ. ಉತ್ತಮ ಎಳೆಯನ್ನು ಒದಗಿಸಿದರೂ ಒಳ್ಳೆಯ ಕೆಲಸಗಾರರಲ್ಲದಿದ್ದರೆ ಸೀರೆ ಅಥವಾ ವಸ್ತ್ರ ಹಾಳಾಗುವ ಸಂಭವ ಹೆಚ್ಚು. ಈ ದೋಷಗಳು ಕಣ್ಣಿಗೆ ಕಾಣುವಂಥದ್ದಾಗಿರಬಹುದು. ಇಲ್ಲವೆ ಕುಶಲ ನೇಕಾರರಿಗೆ ಮಾತ್ರ ಅದನ್ನು ಗುರ್ತಿಸಲು ಸಾಧ್ಯವಾಗುವಂತಹ ಸಣ್ಣ ಪ್ರಮಾಣದಲ್ಲಿ ಇರಬಹುದು. ಎಳೆ ಕಿತ್ತು ಹೋದರೂ ಅದನ್ನು ಪುನಃ ಕಟ್ಟಿಕೊಳ್ಳದೆ ನೇಯುತ್ತಾ ಹೋಗುವುದು ಅತಿ ಸಾಮಾನ್ಯ ದೋಷ. ಎಳೆ ಹೋದ ಸ್ಥಳದಲ್ಲಿ ನೇರವಾಗಿ ಸಣ್ಣಗೆರೆ ಬೀಳುತ್ತಾ ಹೋಗುತ್ತದೆ. ಕೆಲವೊಮ್ಮೆ ಕಿತ್ತುಹೋದ ಎಳೆ ಅಥವಾ ಎಳೆಯ ದೊಡ್ಡ ಗಂಟು ಪಕ್ಕದ ಎಳೆಗಳನ್ನು ಭದ್ರವಾಗಿ ಹಿಡಿದು ಕೊಳ್ಳುವುದೂ ಉಂಟು. ಆಗ ಹೊಕ್ಕಿನ ಎಳೆ ಆ ಸ್ಥಳದಲ್ಲಿ ಹಾರುತ್ತಾ ಹೋಗುತ್ತದೆ. ಆ ಸ್ಥಳದಲ್ಲಿ ಬಟ್ಟೆ ರೂಪುಗೊಳ್ಳದೆ ರಂಧ್ರ ಬೀಳುತ್ತದೆ. ಇದನ್ನು 'ಪೇಟ' ಹಾರುವುದು ಎಂದು ಕರೆಯಲಾಗುತ್ತದೆ. ನಿಪುಣರಿಗೆ ಒಂದೇ ಎಳೆಗೆ ಗೊತ್ತಾಗುವ ಇದು ಎರಡು ಮೂರು ವಾಟದಷ್ಟು ಗಮನಿಸದಿದ್ದರೆ ದೊಡ್ಡದಾಗಿಯೇ ಕಾಣುತ್ತದೆ. ಇದನ್ನು ಗಮನಿಸದೆ ಮುಂದಕ್ಕೆ ನೇಯುತ್ತಾ ಹೋದಾಗ ಕೆಲವೊಮ್ಮೆ ಇದು ಸರಿ ಹೋದರೂ ಸಣ್ಣ ರಂಧ್ರ ಬಿದ್ದೇ ಬೀಳುತ್ತದೆ. ಹಾರಿದ ಎಳೆಯನ್ನು ಕೊಯ್ದು ಅಕ್ಕಪಕ್ಕದ ಎಳೆಗಳನ್ನು ಕೆರೆದು ರಂಧ್ರ ತುಂಬುವ ಕೆಲಸ ಮಾಡಲಾಗುತ್ತದೆ. ವಸ್ತ್ರ ಕೊಂಡವರೂ ಇದನ್ನು ಗಮನಿಸದೆ ಹೋಗುವ

ಸಂದರ್ಭ ತುಂಬಾ ಹೆಚ್ಚು. ವೇಗವಾಗಿ ನೇಯುವಾಗ ಕೆಲವೊಮ್ಮೆ ಹೊಕ್ಕಿನ ಎಳೆ ಕಿತ್ತು ಮತ್ತೆ ಅದೇ ಕೂಡಿಕೊಂಡು ವಸ್ತ್ರ ರೂಪುಗೊಳ್ಳುತ್ತಾ ಹೋಗುತ್ತದೆ. ಅಡ್ಡ ಕಸುಬಿನವ ಅದನ್ನು ಗಮನಿಸಿದರೂ ಆ ಸ್ಥಳದ ಎಳೆ ತೆಗೆದು ಪುನಃ ನೇಯುವ ಶ್ರಮ ತಪ್ಪಿಸಲು ಮೇಲೆ, ಕೆಳಗಿನ ಎಳೆ ಕೆರೆದು ಸರಿಪಡಿಸಿ ನೇಯುತ್ತಾ ಹೋಗುತ್ತಾನೆ. ಕೊಳ್ಳುವವರಿಗೆ ಬಹಳಷ್ಟು ಸಲ ಇದು ಕಾಣಲಾರದು. ಉತಮ ಕೆಲಸಗಾರ ತನಗೆ ಶ್ರಮವಾದರೂ ದೋಷಪೂರಿತ ಭಾಗಗಳನ್ನು ಸರಿಪಡಿಸಿಯೇ ಮುಂದಕ್ಕೆ ನೇಯುತ್ತಾನೆ. ಇದರಿಂದ ಉತ್ತಮ ಗುಣಮಟ್ಟದ ವಸ್ತ್ರ ರೂಪುಗೊಳ್ಳುತ್ತದೆ.

ಸೂಕ್ಷ್ಮ ತಟ್ಟು ಸಹ ಉತ್ತಮ ವಸ್ತ್ರ ರೂಪುಗೊಳ್ಳುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೊಡ್ಡ ಸಂದಿನ ತಟ್ಟಿನಿಂದ ನೇಯುವ ವಸ್ತ್ರ ಅಷ್ಟೊಂದು ಉತ್ತಮ ವಸ್ತ್ರವಾಗಿರುವುದಿಲ್ಲ. ಸೂಕ್ಷ್ಮ ಸಂದು ಇರುವ ಕಟ್ಟಿನಲ್ಲಿ ಹಾಸಿನ ಎಳೆಗಳು ಒಂದರ ಪಕ್ಕ ಒಂದರಂತೆ ಅತಿ ನಿಕಟವಾಗಿರುವುದರಿಂದ ವಸ್ತ್ರ ಕುಗ್ಗುವ ಸಂಭವ ಕಡಿಮೆ. ಸೂಕ್ಷ್ಮ ತಟ್ಟು ಹಾಗೂ ಮಧ್ಯಮ ಗಾತ್ರದ ಎಳೆ ಉಪಯೋಗಿಸಿ ಗಟ್ಟಿ ನೇಯ್ಗೆ ನೇಯ್ದ ವಸ್ತ್ರ ಉತ್ತಮ ಗುಣಮಟ್ಟ ಹೊಂದಿರುತ್ತದೆ. ಅತಿ ಸಣ್ಣ ಎಳೆಯಾದರೆ ವಸ್ತ್ರ ತೆಳ್ಳಗೆ ಮೂಡಿ ಬರುತ್ತದೆ. ಹಾಗೆಯೇ ತುಂಬಾ ದಪ್ಪ ಎಳೆಯೂ ಎಳೆಗಳ ನಡುವಿನ ಜಾಗವನ್ನು ಖಾಲಿ ಬಿಡುವುದರಿಂದ ವಸ್ತ್ರ ದಪ್ಪಗೆ ಇದ್ದರೂ ಒಳ್ಳೆಯ ಗುಣಮಟ್ಟದ್ದಾಗಿರುವುದಿಲ್ಲ. ಹೊಕ್ಕಿನ ಎಳೆ ಹೆಚ್ಚು ದಪ್ಪಗಿದ್ದಾಗ ವಸ್ತ್ರಕ್ಕೆ ಅಥವಾ ಸೀರೆಗೆ ಹೆಚ್ಚಿನ ತೂಕದ ರೇಷ್ಮೆ ಹಿಡಿಸುವುದರಿಂದ ಅಗತ್ಯಕ್ಕಿಂತ ಹೆಚ್ಚು ತೂಕದ ರೇಷ್ಮೆಯಿಂದ ನಷ್ಟ ಹೊಂದಲು ಯಾವ ಮಾಲೀಕರೂ ಸಿದ್ಧರಿರುವುದಿಲ್ಲ. ಇಂತಹ ಸಂದರ್ಭದಲ್ಲಿ ಹೊಕ್ಕಿನ ಎಳೆಯನ್ನು ಹೆಚ್ಚು ಒತ್ತಾಗಿ ನೇಯದೆ ಸ್ವಲ್ಪ 'ಜಾಳಾಗಿ' ನೇಯುವಂತೆ ನೇಕಾರರಿಗೆ ಸೂಚನೆ ಕೊಡಲಾಗುತ್ತದೆ. ಪ್ರತಿ ಎಳೆಯ ನಡುವೆ ಖಾಲಿ ಜಾಗ ಹೆಚ್ಚುವುದರಿಂದ ವಸ್ತ್ರ ದಪ್ಪಗೆ ಕಂಡರೂ ಗುಣಮಟ್ಟ ತಗ್ಗುತ್ತದೆ. ಸಾಮಾನ್ಯವಾಗಿ ಕೊಳ್ಳುವವರು ಇಂತಹ ಸೂಕ್ಷ್ಮ ಗಮನಿಸುವುದಿಲ್ಲ. ಸಾಮಾನ್ಯವಾಗಿ ಹಾಸಿನ ಎಳೆ ಹೆಚ್ಚು ದಪ್ಪವಾಗಿ, ಗಟ್ಟಿಗೆ (ಎಳೆತ ತಡೆಯುತ್ತದೆ) ಇರುತ್ತದೆ. ಕೆಲವೊಮ್ಮೆ ದಪ್ಪ ಎಳೆಯನ್ನು ನೇಯಲಾಗುತ್ತದೆ. ಇಂತಹ ಸಂದರ್ಭದಲ್ಲಿ ಕೆಲವೇ ದಿನದಲ್ಲಿ ಅಂತಹ ವಸ್ತ್ರ ಅಡ್ಡವಾಗಿ ಸೀಳಿ ಹೋಗುತ್ತದೆ. ಅತಿ ಸಣ್ಣ ಎಳೆ ಬಳಸಿ ಜಾಳಾಗಿ ನೇಯ್ದರೂ ಉದ್ದಕ್ಕೆ ಸೀಳಿ ಹೋಗುತ್ತದೆ.

ಕೆಲವೊಮ್ಮೆ ನೇಯುವಾಗ ಕಂಡಿಕೆಯಲ್ಲಿ ಬಿಗಿ ಬಂದು ಆ ಪರಿಣಾಮ, ವಸ್ತ್ರದ ಮೇಲೆಯೂ ಆಗುತ್ತದೆ. ಇದನ್ನು 'ಮಿಂಚು ಎಳೆ' ಬೀಳುವುದು ಎನ್ನುತ್ತಾರೆ. ಹೀಗೆ ಬಿಗಿ ಎಳೆ ಬಿದ್ದಾಗ ವಸ್ತ್ರದಲ್ಲಿ ಆ ಸ್ಥಳ ಹೆಚ್ಚು ಹೊಳಪಾಗಿ ಕಾಣುತ್ತದೆ. ಇದೂ ಸಹ ಒಂದು ದೋಷ. ಸಾಮಾನ್ಯ ಕೊಳ್ಳುಗರಿಗೆ ಇದು ಅರಿವಿಗೆ ಬರುವುದಿಲ್ಲ.

ವಸ್ತ್ರ ಅಥವಾ ಸೀರೆಗೆ ಹೆಚ್ಚು ಬಂಡವಾಳ ಬೀಳುವುದನ್ನು ತಪ್ಪಿಸಲು ಹಾಸಿನ ಎಳೆಯನ್ನು ರೇಷ್ಮೆಯಲ್ಲಿ ಹಾಕಿ ಹೊಕ್ಕಿನ ಎಳೆಗೆ ಕೃತಕ ರೇಷ್ಮೆ ಬಳಸಲಾಗುತ್ತದೆ. ಇಲ್ಲವೆ ಯಂತ್ರಮಗ್ಗದಲ್ಲಿ ಹಾಸಿನ ಎಳೆ ಕೃತಕ ಹಾಗೂ ಹೊಕ್ಕಿಗೆ ಶುದ್ಧ ರೇಷ್ಮೆ ಬಳಸಿ ವಸ್ತ್ರ ತಯಾರಿಸಲಾಗುತ್ತದೆ. ಎಷ್ಟೋ ಸಲ ಪರಿಣತರಿಗೆ ಮಾತ್ರ ಇದನ್ನು ಗುರ್ತಿಸಲು ಸಾಧ್ಯವಾಗುತ್ತದೆ. ಹೀಗೆಯೇ ಜರಿಯಲ್ಲೂ ಮಿಶ್ರಣ ಮಾಡಲಾಗುತ್ತದೆ. ಅಂಚಿನ ಜರಿ ಬೇರೆ, ಒಡಲಿನ ಬುಟ್ಟಾ ಜರಿ ಹಾಗೂ ಸೆರಗಿನ ಬೇಲಿನ ಜರಿ ಬೇರೆ ಬೇರೆಯಾಗಿರುವುದೂ ಉಂಟು. ಉತ್ತಮ ಜರಿಯೊಂದಿಗೆ ಇತರ ಜರಿಗಳನ್ನು ಮಿಶ್ರಮಾಡಿ ನೇಯಲಾದ ಸೀರೆಗಳು ಕೊಳ್ಳುಗರಿಗೆ ಹೆಚ್ಚು ನಷ್ಟ ಉಂಟು ಮಾಡುತ್ತವೆ. ಏಕೆಂದರೆ ಸಾಧಾರಣ ಜರಿ ಹಾಗೂ ಉತ್ತಮ ಜರಿಯ ಬೆಲೆಗಳಲ್ಲಿ ಐದು - ಆರು ಪಟ್ಟು ವ್ಯತ್ಯಾಸವಿರುತ್ತದೆ.

ಅತಿ ಉತ್ತಮ ಜರಿ ಅಲ್ಪ ಪ್ರಮಾಣದ ಚಿನ್ನವನ್ನು, ನಂತರದ ಜರಿ ಬೆಳ್ಳಿಯನ್ನು ಹೊಂದಿರುತ್ತದೆ. ಇವು ಶ್ರೇಷ್ಠ ದರ್ಜೆಯ ಜರಿಗಳು. ಮೈಸೂರ್ ಸಿಲ್ಕ್ ಹಾಗೂ ಕಾಂಜೀವರಂ ಸೀರೆಗಳಲ್ಲಿ ಮತ್ತು ಉತ್ತಮ ದರ್ಜೆ ಬನಾರಸ್ ಸೀರೆಗಳಲ್ಲೂ ಇದನ್ನು ಬಳಸಲಾಗುತ್ತದೆ. ಮಧ್ಯಮ ದರ್ಜೆ ಜರಿಯನ್ನು ಕ್ರೇಪ್ ಸೀರೆಗಳಲ್ಲಿ ಹಾಗೂ ಇತರ ಸಾಂಪ್ರದಾಯಕ ಸೀರೆಗಳಲ್ಲಿ ಬಳಸಲಾಗುತ್ತದೆ. ಇತ್ತೀಚೆಗೆ ತೀರಾ ಜನಪ್ರಿಯವಾಗಿರುವ ಅಪೂರ್ವ ಮಾದರಿ ಸೀರೆಗಳಲ್ಲಿ ಸಾಮಾನ್ಯವಾಗಿ ಕಡಿಮೆ ದರ್ಜೆಯ ಜರಿ ಬಳಸಲಾಗುತ್ತದೆ.ಜರಿಯ ಗುಣಮಟ್ಟ ಪರೀಕ್ಷಣೆ ಚಿನ್ನದ ಒರೆ ಹಚ್ಚುವ ಕ್ರಿಯೆಯಂತೆಯೇ ಕಠಿಣವಾದದ್ದು. ಇದಕ್ಕಾಗಿ ಸಾಮಾನ್ಯವಾಗಿ ಸ್ಲೇಟಿನ ಚೂರುಗಳ ಮೇಲೆ ಜರಿಯ ಗೆರೆ ಮೂಡಿಸಿ ಜರಿಯಲ್ಲಿರುವ ಲೋಹವನ್ನು ಪತ್ತೆ ಹಚ್ಚಲಾಗುತ್ತದೆ.

ಈ ರೀತಿ ಅನೇಕ ಸ್ಥಿತ್ಯಂತರಗಳನ್ನು ಹಾದು ಬಂದಿರುವ ನೇಕಾರಿಕೆ

ಕಾಲಕಾಲಕ್ಕೆ ಜನರ ಅಭಿರುಚಿ ಹಾಗೂ ಸ್ಥಿತಿಗತಿಗೆ ತಕ್ಕಂತೆ ಸೂಕ್ತ ಮಾರ್ಪಾಡುಗಳನ್ನು ತನ್ನಲ್ಲಿ ಅಳವಡಿಸಿಕೊಂಡು ಬಂದಿದೆ. ಸಾಮಾನ್ಯ ನೇಕಾರರು ರೂಪಿಸಿದ ಬಗೆ ಬಗೆಯ ವೈವಿಧ್ಯಮಯ ವಿನ್ಯಾಸದ ಸೀರೆಗಳು ಯಾವ ಕಲಾಕೃತಿಗೂ ಕಡಿಮೆಯಿಲ್ಲ. ಸಾವಿರಾರು ವರ್ಷಗಳ ಹಿಂದಿನಿಂದಲೂ ಕೌಟುಂಬಿಕ ಉದ್ಯೋಗವಾಗಿ ಬಂದಿರುವ ಇದು ಆಯಾ ಪ್ರಭುತ್ವಗಳ ಪ್ರಮುಖ ಆರ್ಥಿಕ ಆಕರವಾಗಿದ್ದರೂ, ಇಂದಿಗೂ ಸಾಮಾನ್ಯ ನೇಕಾರರ ಸ್ಥಿತಿ ಶೋಚನೀಯವಾಗಿಯೇ ಇದೆ. ವ್ಯಾಪಾರದ ಏರಿಳಿತಗಳಿಂದ ನೇಕಾರ ದಿನನಿತ್ಯ ಕಂಗಾಲಾಗುವುದನ್ನು ಯಾರೂ ತಪ್ಪಿಸಲಾಗಿಲ್ಲ. ಸ್ವತಃ ತಾನೇ ಉದ್ಯೋಗಗಳನ್ನು ಸೃಷ್ಟಿಸಿ ಲಕ್ಷಾಂತರ ಮಂದಿಯ ಜೀವನ ನಿರ್ವಹಣೆಗೆ ದಾರಿಯಾದ ಈ ಕೈಗಾರಿಕೆಗೆ ಸರ್ಕಾರ ಆದ್ಯತೆ ಕೊಡುವ ಅಗತ್ಯವಿದೆ. ಸೂಕ್ತ ಆರ್ಥಿಕ ನೆರವು ಒದಗಿಸಿ ಮಧ್ಯವರ್ತಿಗಳ ಹಿಡಿತದಿಂದ ಈ ಕೈಗಾರಿಕೆಯನ್ನು ಮುಕ್ತಗೊಳಿಸಿ ಸುಭದ್ರ ಮಾರುಕಟ್ಟೆ ಸೃಷ್ಟಿಸಿದರೆ ನೇಕಾರರ ಬಾಳಿನಲ್ಲಿ ಹರ್ಷ ಮೂಡುವುದರಲ್ಲಿ ಸಂದೇಹವಿಲ್ಲ.

ಆಕರ ಗ್ರಂಥಗಳು

1. ಕನ್ನಡ ವಿಶ್ವಕೋಶ. ಸಂಪುಟ ೪ ಹಾಗೂ ೧೧
2. ಕರ್ನಾಟಕ ಚರಿತ್ರೆ ಸಂಪುಟ ೩ ಸಂ. ಪ್ರೊ. ಷೇಕ್ ಅಲಿ ಹಾಗೂ ಪ್ರೊ. ಕೆ.ಎಸ್. ಶಿವಣ್ಣ
3. ಕಿಟ್ಟಲ್ ಶಬ್ದಕೋಶ
4. ದೇವಾಂಗ ಪುರಾಣ
5. The Glory of Indian Handicrafts - Kamaladevi Chattopadhyaya
6. Encyclopedia Britannica

ಮಾಹಿತಿದಾರರು :

1. ಎಂ. ರಾಮಲಿಂಗಪ್ಪ
2. ಎಲ್. ವೆಂಕಟರಾಮ್
3. ಆರ್. ಬಾಲಸುಂದರ್

ದಕ್ಷಿಣ ಕರ್ನಾಟಕದಲ್ಲಿ ಮೇದಾರಿಕೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಜನಾಂಗದ ಸಂಕ್ಷಿಪ್ತ ಪರಿಚಯ

ಬಿದಿರಿನಿಂದ ಮೊರ, ಜರಡಿ, ತೊಟ್ಟಿಲು ಮೊದಲಾದ ಅಗತ್ಯ ವಸ್ತುಗಳನ್ನು ತಯಾರು ಮಾಡುವ ಕಸುಬಿನವರೆ ಮೇದಾರರು. ಕಾಲಕ್ರಮೇಣ ಕಸುಬು ಜಾತಿಯಾಗಿ ರೂಪಗೊಂಡಿದೆ. ಇವರ ಕಸುಬನ್ನು 'ಮೇದಾರಿಕೆ' ಎನ್ನುತ್ತಾರೆ. ದಕ್ಷಿಣ ಕರ್ನಾಟಕದಲ್ಲಿ ಮೂಲ ಮೇದಾರರಿಗಿಂತಲೂ ಇತರೆ ಜಾತಿಯವರು ಈಗ ಮೇದಾರಿಕೆಯನ್ನು ತಮ್ಮ ಕಸುಬನ್ನಾಗಿಸಿ ಕೊಂಡಿರುವು ಕಂಡು ಬರುತ್ತದೆ.

ಮೇದಾರರು ಕುಕ್ಕು ವಾಡೇಶ್ವರಿ (ರೇಣುಕಾದೇವಿಯ ಇನ್ನೊಂದು ಹೆಸರು)ಯನ್ನು 'ಮನೆದೇವರು' ಎಂದು ಆರಾಧಿಸುತ್ತಾರೆ. ವರ್ಷಕ್ಕೊಮ್ಮೆ ಶಿವಮೊಗ್ಗ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ಜೋಳದ ಹಾಳಿನ ಹತ್ತಿರವಿರುವ 'ಅಮ್ಮನಗುಡ್ಡ' ದಲ್ಲಿರುವ ಕುಕ್ಕುವಾಡೇಶ್ವರಿಗೆ ಹೋಗಿ ಬರುತ್ತಾರೆ. ಅಲ್ಲಿರುವ ಶಿಲೆಯಲ್ಲಿ ಮೈದಳೆದಿರುವ ಬಾಳೆ ಕಲ್ಲ(ಮ್ಮ)ವ್ವನನ್ನು (ಈಕೆ ಕುಕ್ಕುವಾಡೇಶ್ವರಿಯ ಸೋದರಿ ಎಂದು ಹೇಳುತ್ತಾರೆ) ಪೂಜಿಸುತ್ತಾರೆ. ಅಲ್ಲದೆ ಅಲ್ಲಿರುವ ಪರಶುರಾಮನ ವಿಗ್ರಹಕ್ಕೂ ಪೂಜೆ ಸಲ್ಲಿಸುತ್ತಾರೆ.

ಮೇದಾರರು ತಯಾರಿಸುವ ಬಿದಿರಿನ ಕುಕ್ಕೆ, ವಾಡೆಯಂಥ ವಸ್ತುಗಳ ಹೆಸರಿನ ಜೋಡಣೆಯಿಂದ 'ಕುಕ್ಕುವ್ವಾಡೇಶ್ವರಿ' ದೇವತೆಯ ಹೆಸರು ರೂಪುಗೊಂಡಿರಬಹುದು ಎಂದು ಊಹಿಸಬಹುದಾಗಿದೆ. ಇದು ವಿದ್ವಾಂಸರ ವಿಚಾರಕ್ಕೆ ಬಿಟ್ಟದ್ದಾಗಿದೆ.

"ಶಿವನ ವಾಹನ ನಂದಿಯ ಬಾಯಿಂದ ನಮ್ಮ ಜನಾಂಗ ಹುಟ್ಟಿ ಬಂದಿತು. ಈಶ್ವರನ ಹೆಂಡತಿಯಾದ ಪಾರ್ವತಿ (ಗೌರಿ)ಗೆ ಬಂಗಾರದ ಮೊರ, ಬೆಳ್ಳಿಯ ಮೊರ, ವಜ್ರದ ಮೊರದಲ್ಲಿ ಬಾಗಿನ ಕೊಡಲು ಹೋದಾಗ, ಆಕೆ ಅದಕ್ಕೆ ಒಪ್ಪಲಿಲ್ಲ. ಆಗ ಶಿವ ಪಾರ್ವತಿಗೆ, "ನಿನಗೆ ಇನ್ನಾವ ಮೊರ ಬೇಕು?"

ಎಂದು ಕೇಳಿದಾಗ, ಆಕೆಯು "ಮೇದಾರರ ಮೊರದಲ್ಲಿ ಬಾಗಿನ ಕೊಟ್ಟರೆ ಒಪ್ಪಿಕೊಳ್ಳುತ್ತೇನೆ" ಎಂದಳು.

ಆಗ ಈಶ್ವರನು ಬಸವಣ್ಣನಿಗೆ (ನಂದಿ) ಉಕ್ಕಿನ ಕಡಲೆಯನ್ನು ಆಹಾರವನ್ನಾಗಿ ಕೊಟ್ಟನು. ಅದನ್ನು ತಿನ್ನುತ್ತಿರುವಾಗ ನಂದಿಯ ಬಾಯ ಎರಡು ಕಟವಾಯಿಗಳಲ್ಲಿ ಲೊದಲೆ (ಜೊಲ್ಲು) ಸುರಿಯಲಾರಂಭವಾಯಿತು. ಆ ಜೊಲ್ಲಿನಲ್ಲಿ ಎರಡು ಕಟವಾಯಲ್ಲಿ ಒಂದು ಹೆಣ್ಣು, ಕತ್ತಿಯನ್ನು (ಇವರು ವೃತ್ತಿಗೆ ಬಳಸುವ ತೆಳುವಾದ ಸಾಧನವನ್ನು) ಸೊಂಟಕ್ಕೆ ಕಟ್ಟಿಕೊಂಡಿರುವ ಒಂದು ಗಂಡು ಹುಟ್ಟಿದವು. ಅವರು ಶಿವನನ್ನು ಕಂಡು "ನಮ್ಮನ್ನು ಈಗ ಕರೆಸಿದ್ದು ಯಾಕೆ?" ಎಂದು ಕೇಳಿದರು. ಆಗ ಶಿವನು "ನಮಗೆ ಬಿದಿರಿನ ಮೊರ ಬೇಕು" ಎಂದು ಹೇಳಿದ. ಸ್ವಾಮಿಯ ಮಾತಿನಂತೆ ಅವರು ಹಸಿ ಬೊಂಬು ಕತ್ತರಿಸಿ ತಂದು, ಶ್ರದ್ಧೆಯಿಂದ ಮೊರ ಹೆಣೆದು ಕೊಟ್ಟರು. ಆ ಮೊರದಲ್ಲಿ ಪಾರ್ವತಿಗೆ ಬಾಗಿನ ಕೊಟ್ಟಾಗ ಆಕೆಗೆ ತೃಪ್ತಿಯಾಯಿತು. ಹೀಗೆ ಮೇದಾರ ಜನಾಂಗ ಹಾಗೂ ಮೇದಾರಿಕೆ ಹುಟ್ಟಿತು.

ಮೊರದಿಂದ ತೃಪ್ತಿಗೊಂಡ ಪಾರ್ವತಿಯು, ಮೇದಾರ ಗಿತ್ತಿಗೆ ಮೊರದಲ್ಲಿ ಹಣ ತುಂಬಿಕೊಟ್ಟಳು. ಇವಳನ್ನು ಪರೀಕ್ಷಿಸಬೇಕೆಂದು ಶಿವ ಹಣ್ಣು ಹಣ್ಣು ಮುದುಕನ ರೂಪ ತಳೆದು ಮೇದಾರರ ಮನೆಯ ಬಾಗಿಲಲ್ಲಿ ಕುಳಿತುಕೊಂಡಿದ್ದ. ಮೇದಾರಗಿತ್ತಿ ಹಣ ತುಂಬಿದ ಮೊರವನ್ನು ಸೆರಗಿನಲ್ಲಿ ಮುಚ್ಚಿಕೊಂಡು ಮನೆಯೊಳಕ್ಕೆ ಹೋದಳು. ಎಲ್ಲ ಬಲ್ಲ ಸ್ವಾಮಿ "ಮೊರದ ತುಂಬಾ ಏನೊ ತುಂಬಿಕೊಂಡು ಬಂದಂತಿದೆ. ಪಾರ್ವತಿ ತಾಯಿ ಏನು ಕೊಟ್ಟಳು?" ಎಂದು ಆಕೆಯನ್ನು ಕೇಳಿದಾಗ, "ಇನ್ನೇನು ಕೊಡ್ತಾಳೆ, ನುಚ್ಚು, ತೌಡು ಕೊಟ್ಟವಳೆ" ಎಂದಳು. ಮೇದಾರಗಿತ್ತಿಯ ಸುಳ್ಳನ್ನು ಕೇಳಿ ಶಿವ ಮನದಲ್ಲೆ ನಕ್ಕ. ಆಕೆ ಸೆರಗು ಸರಿಸಿ ನೋಡ್ತಾಳೆ ಮೊರದ ತುಂಬಾ 'ನುಚ್ಚು ತೌಡು' ಇದ್ದಿತು. ನಿಯತ್ತಿನಂತೆ ಬರಕತ್ತು. ಬಡತನ ಬೆನ್ನಿಗಂಟೇ ಬಂದಿತ್ತು. ತಾಯಿ ಕೊಟ್ಲು ಅದನ್ನು ನಿಯತ್ತಿನಿಂದ ಉಳಿಸಿಕೊಳ್ಳುವ ಭಾಗ್ಯ ಇರಬೇಕಲ್ಲ.

ಏನಾದ್ರು ಮಾಡಿ ಮೇದರಾರಿಗೆ ಸಹಾಯ ಮಾಡಬೇಕು ಅಂತ ತಾಯಿಗೆ ಅನ್ನಿಸಿತು. ಆಕೆ ಬೊಂಬಿನ ತುಂಬ ಇಕ್ಕೇರಿ ಹಣ ತುಂಬಿದಳು. ಅದನ್ನು ಕಡಿಯುವಾಗಲಾದರೂ ಮೇದಾರರಿಗೆ ಸಿಗಲಿ ಅಂತ. (ಮೇದಾರರು

ಬೊಂಬು ಟೊಳ್ಳಾಗಿದ್ದರೆ ಕತ್ತರಿಸುವುದಿಲ್ಲ) ಮೇದಾರರು ಬಂದ್ರು, ಬೊಂಬು ನೋಡಿದ್ರು. ಅದನ್ನ ಅಲ್ಲಾಡಿಸಿದ್ರು, ಗಳಗಳ ಅಂತ ಶಬ್ದ ಆಯ್ತು. ಇದು ಕೆಲಸಕ್ಕೆ ಬರೋಲ್ಲ ಅಂತ ಅಂದು ಕೊಂಡು ಗಟ್ಟಿ ಬಿದಿರಿನ ಕಡೆಗೆ ಹೋದ್ರು. ಈ ಬಾರಿನೂ ಭಾಗ್ಯ ಕೂಡಿ ಬರಲಿಲ್ಲ.

ಮೂರು ಸಲ ಕೊಟ್ಟು ನೋಡೋದು ಅಂತ ತೀರ್ಮಾನ ಮಾಡ್ಕಂಡು ತಾಯಿ ದಾರೀಲಿ ಕುಂಬಳಕಾಯಿರಿಸಿದಳು. ಅದು ಬಿದಿರು ಹೊತ್ತು ತರುತ್ತಿದ್ದ ಮೇದಾರರ ಕಾಲ್ ಕಾಲ್‌ಗೆ ಸಿಕ್ತಾ ಇತ್ತು. ಒಬ್ಬ ಮೇದಾರ ಅದನ್ನು ಕಿತ್ಕಂಡು ಮನೆಗೆ ತಂದ. ಅದರೊಳಗೇ ನೈತೆ ಅನ್ನೋದು ಅವನಿಗೆ ಹೆಂಗೆ ಗೊತ್ತಾಗಬೇಕು. ಅದನ್ನ ಶೆಟ್ಟರ ಅಂಗಡಿಗೆ ಕೊಟ್ಟು ಮನೆಗೆ ಬೇಕಾಗಿದ್ದನ್ನು ತಂದುಕೊಂಡ. ಅದೃಷ್ಟ ಚೆನ್ನಾಗಿಲ್ಲದಿದ್ರೆ 'ಕೈಗೆ ಬಂದದ್ದು ಬಾಯಿಗೆ ದಕ್ಕಲ್ಲ".

ಆ ಶೆಟ್ರು ಮನೆಬಾಗಿಲನ್ನೆಲ್ಲ ಬಂದ್ ಮಾಡಿಕೊಂಡು, ಕುಂಬಳಕಾಯಿ ಹೊಡೆದ್ರು. ಅದರೊಳಗೆ ಲಕ್ಷ್ಮಿ ವಿಗ್ರಹ ಇತ್ತು. ಶುಕ್ರವಾರ ಲಕ್ಷ್ಮಿ ಮನೆಗೆ ಬಂದಂಗಾಯ್ತು. ಆದರೆ, ಲಕ್ಷ್ಮಿ ವಿಗ್ರಹ ಮಾತಾಡಿದಂತಾಗಿ "ನಾನು ನಿಮ್ಮನೆಗೆ ಬಂದೋಳಲ್ಲ. ಮೇದರ ಮನೆಗೆ ಬಂದೋಳು. ಅಲ್ಲಿಗೆ ಹೋಗಬೇಕು" ಅಂದಳು.

ಶೆಟ್ಟರು ಬುದ್ಧಿವಂತ್ರು. ಕಳಿಸಿಕೊಡ್ತೀನಿ. ನಾ ಬರೋಗಂಟ ಇಲ್ಲೆ ಇರು ಅಂತ ಲಕ್ಷ್ಮಿಯಿಂದ ಮಾತು ತಗಂಡು. ಮನೆಯ ಹಿಂಭಾಗಕ್ಕೆ ಹೋಗಿ ಅಲ್ಲಿದ್ದ ಹಳೇ ಬಾವೀಲಿ ಬಿದ್ದು ಬಿಟ್ರು. ಆತ ಬರ್ತಾನೆ... ಬರ್ತಾನೆ ಅಂತ ಲಕ್ಷ್ಮಿ ಅಲ್ಲೇ ಅವರ ಮನೇಲಿ ನೆಲೆ ನಿಂತ್ಕಂಡಳು. ಆಕೆ ಕೊಟ್ಟ ಮಾತಿಗೆ ತಪ್ಪಾಕೆ ಆಗ್ತದ.

ಅಂದಿನಿಂದ ಮೇದಾರರು ಬಡತನ ಅನುಭವಿಸುತ್ತಾ ಬಿದಿರಿನ ಕೆಲಸ ಮಾಡ್ ಬೇಕು. ಅವತ್ತಿನ ಗಂಜಿ ಅವತ್ತು ಸಂಪಾದಿಸಿಕೊಂಡು ಉಣ್ಣಬೇಕು. (ಈ ಕಥೆಯ ವಕ್ತೃ : ಕುಂಬಿ ನರಸಮ್ಮ - (ಮೇದಾರ ಜನಾಂಗದವರು) ವಯಸ್ಸು - ೬೦ ಮಧುಗಿರಿ)

ಈ ಜನಾಂಗದಲ್ಲಿ ಗೌಡರು, ಯಜಮಾನ್ರು ಎಂಬ ಇಬ್ಬರು ಮುಂದಾಳುಗಳಿರುತ್ತಾರೆ. ಇದು ವಂಶಪಾರಂಪರ್ಯವಾಗಿ ಬರುವ ಪಟ್ಟ. ಅವರಿಗೆ ಗಂಡು ಸಂತಾನ ಇಲ್ಲದಂತಾದರೆ, ಕುಲಸ್ತರು ಸೇರಿ ಗೌಡರು, ಯಜಮಾನರನ್ನು ಒಮ್ಮತದಿಂದ ಆರಿಸುತ್ತಾರೆ. ಪಂಚಾಯ್ತಿ ಕಟ್ಟೆ ನ್ಯಾಯ, ದಂಡ ಹಾಕಾದು ಎಲ್ಲಾ ತೀರ್ಮಾನಕ್ಕೆ ಬಿಟ್ಟದ್ದಾಗಿರುತ್ತದೆ.

ಮೇದಾರರಲ್ಲಿ ಒಳ ಪಂಗಡಗಳಿಲ್ಲವಾದರೂ, ವಿವಾಹದ ಸಂದರ್ಭದಲ್ಲಿ ಆಚರಿಸುವ ಸಂಪ್ರದಾಯದಲ್ಲಿ ಕಂಡು ಬರುವ ಭಿನ್ನತೆಯಿಂದಾಗಿ ಬೆಳ್ಳಿ ಹರಿಣೆಯೋರು (ಹರಿಣೆಗೆ ಸುಣ್ಣ ಬಳಿಯುವವರು) (ಹರಿಣೆ-ಅರಣೆ ಮಣ್ಣಿನ ಮಡಕೆ) ಚಿನ್ನದ ಹರಿಣೆಯೋರು (ಹರಿಣೆಗೆ ಕೆಮ್ಮಣ್ಣು ಬಳಿಯೋರು) ಎಂಬ ಬಗೆಯನ್ನು ಸೂಚಿಸುತ್ತಾರೆ. ತುಮಕೂರು ಜಿಲ್ಲೆಯ ಶಿರಾ ತಾಲ್ಲೂಕಿನಿಂದಾಚೆಗೆ ಅಂದರೆ ಚಿತ್ರದುರ್ಗದ ಕಡೆಯವರೆಲ್ಲರೂ ಚಿನ್ನದ ಹರಿಣೆಯೋರು.

ಹುಟ್ಟು, ಸಾವು, ವಿವಾಹ ಮೊದಲಾದ ಆಚರಣೆಗಳಲ್ಲಿ ಯಾವುದೇ ವಿಶೇಷತೆಗಳು ಕಂಡು ಬರುವುದಿಲ್ಲ. ಎಲ್ಲರಂತೆ ಇವರೂ ವಿಧಿ ವಿಧಾನಗಳನ್ನು ಅನುಸರಿಸುವುದು ಕಂಡು ಬರುತ್ತದೆ.

ಹಬ್ಬ ಹರಿದಿನ

ಬಿದಿರಿನ ಹೊಸ ಫಸಲು ಬಂದಾಗ, ವರ್ಷಕ್ಕೊಮ್ಮೆ ಹೊಸದಾಗಿ ಬಿದಿರು ಕಡಿದು ತಂದಾಗ, ಬಿದಿರು ಕೊಂಬೆಯನ್ನು ದೇವರ ಪಕ್ಕದಲ್ಲಿರಿಸಿ ಪೂಜಿಸುತ್ತಾರೆ. ಇದು ಮನೆಯಲ್ಲೆ ನಡೆಸುವ ಕಾರ್ಯ. ಇದನ್ನು 'ಬಿದಿರು ಮೆಳೆ ಹಬ್ಬ' ಎಂದು ಕರೆಯುತ್ತಾರೆ. ಅಂದು ಕುರಿ, ಕೋಳಿಬಲಿಗೊಟ್ಟು, ಮಾಂಸಾಹಾರದ ಭೋಜನ ಏರ್ಪಡಿಸುತ್ತಾರೆ.

ಸಾಮಾನ್ಯವಾಗಿ ಆದಿನ ರಾತ್ರಿ ಕುಕ್ಕುವಾಡೇಶ್ವರಿಯ ಉತ್ಸವ ಮಾಡುತ್ತಾರೆ. ಕುಲದ ಗೌಡರು, ಯಜಮಾನ್ರು ಅವರ ಮುಂದಾಳುತ್ವನದಲ್ಲಿ ಕುಲದ ಸಮಸ್ಥರೂ ಸೇರಿ ಊರಿನ ಪ್ರಮುಖ ಬೀದಿಗಳಲ್ಲಿ ದೇವತೆಯ ಮೆರವಣಿಗೆ ಮಾಡುತ್ತಾರೆ.

ಸಿದ್ಧಪಡಿಸಿದ ವಸ್ತುಗಳು

ಗೃಹ ಬಳಕೆ	ಕೃಷಿ ಬಳಕೆ ವಸ್ತುಗಳು	ಇತರೆ
ಮೊರ	ಕಣಜ	ಗಾರುಡಿ ಬೊಂಬೆಗಳಿಗೆ
ಬುಟ್ಟಿ	ಕುಕ್ಕೆ	ಬೇಕಾದ ಉದ್ದವಾದ ಬುಟ್ಟಿಗಳು
ಹೂಬುಟ್ಟಿ, ಬೀಸಣಿಗೆ	(ದನಕರುಗಳ ಬಾಯಿ	ಚಂದ್ರಿಕೆ (ರೇಷ್ಮೆಹುಳು
ಕಣ್ಣಿನ ಜರಡಿ	ಮುಚ್ಚುವುದಕ್ಕೆ)	ಸಾಕಲು)
ಮೂಗ ಜರಡಿ	ಕುಕ್ಕೆ (ಕಾಳು ಕಡಿ	ರೇಷ್ಮೆ ತಟ್ಟಿ
ತಟ್ಟಿ	ತುಂಬಿಡಲು ಬಳಸುವ ಸಾಧನ)	ಬಿದಿರಿನ ಮಂಚ
ಸಿಬ್ಬಲು	ತಡಿಕೆ	ಕೊಳಲು, ಪಿಳ್ಳಂಗೋವಿ
ಬಿದಿರಿನ ಕುರ್ಚಿ	ಏಣಿ	ಗೊಲ್ಲರ ಗಣೆ
ತೂಗು ಕುರ್ಚಿಗಳು	ಜಲ್ಲೆ	ಪಾಟೇಕೋಲು
ಟೀಪಾಯಿ	ಗೂಡೆ	(ಸಣ್ಣ ಬಿದಿರಿನ ರಂಧ್ರಕ್ಕೆ
ವಾಜ್	ಗೆರಸೆ	ಗಂಧದ ಸಣ್ಣ ಕಾಯಿರಿಸಿ ಹಿಂದೆ ಇನ್ನೊಂದುಕಾಯಿ ರಿಸಿ, ಗಜಗಡ್ಡಿಯಿಂದ ನೂಕಿದರೆ ಟಪ್ ಎಂಬ ಸದ್ದು ಬರುತ್ತದೆ.

ಸಣ್ಣ ಬಿದಿರಿನ ಕಡ್ಡಿಗಳಿಂದ ತಯಾರಿಸುವ ತೂಗು ಚಾಪೆಗಳು. (ಇವುಗಳ ಮೇಲೆ ಗಿಣಿ ಹಿಂಡು, ಜಿಂಕೆ, ಹಕ್ಕಿಗಳ ಗುಂಪು, ದೇವತೆಗಳ ಚಿತ್ರ ಮೊದಲಾದುವನ್ನು ಬಣ್ಣದಲ್ಲಿ ಬಿಡಿಸಿರುತ್ತಾರೆ)

ಬಳಸುವ ಕಚ್ಚಾ ವಸ್ತುಗಳು : ಬಿದಿರು, ಬೊಂಬು.

ಬಳಸುವ ಸಾಧನ ಮತ್ತು ಉಪಕರಣಗಳು

'ಕತ್ತಿ' (ತೆಳುವದ ಬಾಯುಳ್ಳದ್ದು. ಬಿದಿರು ಸೀಳಲು ಬಳಸುವುದು) ಇದರ ಮೇಲೆ ಮೂರುಗೆರೆ ಕೊರೆದಿರುತ್ತಾರೆ. ತಯಾರು ಮಾಡಿಸುವಾಗಲೆ ಹಾಗೆ ಗುರುತು ಹಾಕಿಸುತ್ತಾರೆ. ಇದನ್ನು 'ತ್ರಿಶೂಲ'ದ ಗುರುತು ಎಂದು ಮೇದಾರರು ಕರೆಯುತ್ತಾರೆ.

'ಚಂದ್ರಿಕೆ' ಮಾಡುವವರು ಸಣ್ಣಸಣ್ಣ ಮೊಳೆ, ತೆಂಗಿನದಾರ (ಇತ್ತೀಚೆಗೆ ಪ್ಲಾಸ್ಟಿಕ್‌ನಿಂದ ಮಾಡಿದ ದಾರ) ದಬ್ಬಳ ಮೊದಲಾದವು ಬಳಸುತ್ತಾರೆ.

ತಯಾರಿಕೆಯ ವಿವಿಧ ಹಂತಗಳು

ಹಸಿಬಿದಿರು ಕೆಲಸಕ್ಕೆ ಸೂಕ್ತವಾದುದು. ಅದನ್ನು ಸುಲಭವಾಗಿ ಸೀಳಬಹುದು. ಅದೇ ಬಿದಿರು ಒಣಗಿದರೆ ಸೀಳುವಾಗ ಮಧ್ಯ ಮಧ್ಯೆ ತುಂಡಾಗುತ್ತದೆ. ಆದ್ದರಿಂದ ಒಣಗಿದ ಬಿದಿರು ದೊರೆತಾಗ ಅದನ್ನು ನೀರಿನಲ್ಲಿ ನೆನಸಿ ಸೀಳಿಕೊಳ್ಳುತ್ತಾರೆ. ತಯಾರಿಸುವ ವಸ್ತುವಿನ ಅಳತೆಗೆ ತಕ್ಕಂತೆ ಪದರನ್ನು ತೆಗೆಯಬೇಕು. ಹೆಚ್ಚು ಗೆಣ್ಣುಗಳಿದ್ದಾಗ ಬಿದಿರು ತುಂಡಾಗುವ ಸಾಧ್ಯತೆಗಳಿರುವುದರಿಂದ ಎಚ್ಚರಿಕೆ ವಹಿಸಬೇಕಾಗುತ್ತದೆ. ಆದ್ದರಿಂದಲೆ ಗೆಣ್ಣುಗಳ ಅಂತರ ಹೆಚ್ಚಾಗಿರುವ ಬಿದಿರನ್ನು ಮೇದಾರರು ಆಯ್ಕೆ ಮಾಡಿಕೊಳ್ಳುತ್ತಾರೆ.

ಏಣಿ ತಯಾರಿಸುವಾಗ ಮಾತ್ರ ಟೊಳ್ಳಾಗಿರುವ ಎರಡು ಬೊಂಬುಗಳನ್ನು ಬಳಸಿಕೊಳ್ಳುತ್ತಾರೆ. ಒಂದು ಕಾಲಿನಿಂದ ಇನ್ನೊಂದು ಕಾಲಿಗೆ ಸಾಮಾನ್ಯವಾಗಿ ೧೪ ಇಂಚು ಅಂತರವಿರುತ್ತದೆ. ಕಾಲುಗಳಿಗೆ ಗಟ್ಟಿಯಾದ ಬಿದಿರನ್ನು ಬಳಸುತ್ತಾರೆ.

ಬಿದಿರನ್ನು ಸೀಳುವಾಗ ಅತ್ಯಂತ ಕುಶಲತೆ ಬೇಕಾಗುತ್ತದೆ. ಅದನ್ನು ೧೨ ರಿಂದ ೧೩ ಸಲ ತೆಳುವಾಗಿ ಪದರ ಪದರವಾಗಿ ದೆಬ್ಬೆಗಳನ್ನು ಸೀಳಬಹುದು. ಹಾಗೆ ಸೀಳಿದ ದೆಬ್ಬೆಗಳನ್ನು ನಯಸ್ಸು ಮಾಡಿಕೊಳ್ಳಬೇಕಾಗುತ್ತದೆ. ಇಲ್ಲವಾದರೆ, ತಯಾರು ಮಾಡಿದ ವಸ್ತುಗಳು ಹೊರಮೈಯಲ್ಲಿ ತರಕಲು ತರಕಲಾಗಿ ಕಾಣುತ್ತವೆ. ಬಳಸುವಾಗ 'ಸೀಬು' ಕೈಗೆ ಏರಿಕೊಳ್ಳುವ ಸಾಧ್ಯತೆಗಳಿರುತ್ತವೆ.

ಜರಡಿಯಲ್ಲಿ ಸಣ್ಣ ರಂಧ್ರಗಳಿದ್ದರೆ ಅದನ್ನು ಕಣ್ಣಿನ ಜರಡಿ ಎನ್ನುತ್ತಾರೆ.

ಕಣ್ಣು (ರಂಧ್ರ)ಗಳಿಲ್ಲದೆ ಹೆಣೆದಿರುವ ಜರಡಿಗೆ 'ಮೂಗುಜರಡಿ' ಎನ್ನುತ್ತಾರೆ.

ಮೊರದಲ್ಲಿ ಗಂಡು, ಹೆಣ್ಣು ಎಂಬ ಎರಡು ಬಗೆಗಳಿರುತ್ತವೆ. ಬಿದಿರಿನ ಮೇಲುಪದರ (ಹಸಿರುದೆಬ್ಬೆ) ಬಳಸಿಕೊಂಡು ಹೆಣೆದಿರುವ ಮೊರವೆ ಹೆಣ್ಣು ಮೊರ. ಬಿದಿರಿನ ಒಳಭಾಗ ಅಂದರೆ ತಿರುಳಿನ ಭಾಗದಿಂದ ಹೆಣೆದಿರುವ ಮೊರವೆ ಗಂಡು ಮೊರ.

ಗೊಲ್ಲಜನಾಂಗದವರಿಗೆ 'ದೇವರ ಗೂಡೆ' ಹೆಣೆದು ಕೊಡುವಾಗ ಮಾತ್ರ ಅಂಟು-ಮುಂಟಾಗದಂತೆ ಎಚ್ಚರ ವಹಿಸಬೇಕಾಗುತ್ತದೆ. ಬಹಿಷ್ಠೆಯಾದಾಗ, ಮನೆಯಲ್ಲಿ ಸೂತಕವಿದ್ದಾಗ ದೇವರ ಗೂಡೆಯನ್ನು ಹೆಣೆಯುವುದಿಲ್ಲ. ಆದ್ದರಿಂದ ಸಾಮಾನ್ಯವಾಗಿ 'ದೇವರ ಗೂಡೆ'ಗಳನ್ನು ದೇವಸ್ಥಾನಗಳಲ್ಲಿಯೆ ಕುಳಿತು ಹೆಣೆದು ಕೊಡುವುದುಂಟು. ಇದರಿಂದ ಪರಿಶುದ್ಧತೆಯನ್ನು ಕಾಪಾಡಿಕೊಂಡಂತಾಗುತ್ತದೆಂದು ಮೇದಾರರು ಹೇಳುತ್ತಾರೆ.

ಇಂಥ ದೇವರಿಗೆ ಸಂಬಂಧಿತವಾದ 'ದೇವರ ಪೆಟ್ಟಿಗೆ' ಮೊದಲಾದುವನ್ನು ತೆಗೆದುಕೊಂಡು ಹೋಗುವಾಗ, ಅವನ್ನು ಪೂಜಿಸಿ, ಮೇದಾರರಿಗೆ ಅಕ್ಕಿ ಬೇಳೆಯ ಪಡಿಕೊಡುವುದುಂಟು.

ಸಾಮಾನ್ಯವಾಗಿ ಅವರ ಎಲ್ಲ ಅಂಗಗಳು ವಸ್ತುವಿನ ಹೆಣೆಗೆ ಮಾಡುವಾಗ ಅವಕ್ಕೆ ತಗುಲಿರುವುದರಿಂದ, ಯಾವುದೇ ವಸ್ತುವನ್ನು ಮೇದಾರರು ಮಾರುವ ಮುನ್ನ ನೀರು ಚಿಮುಕಿಸಿ ಕೊಡುತ್ತಾರೆ. ಇದರಿಂದ ದೋಷ ನಿವಾರಣೆಯಾಗುತ್ತದೆಂಬ ಭಾವನೆ ಅವರಲ್ಲಿದೆ.

ಕೆಲಸಕ್ಕೆ ಎದುರಾಗುವ ಅಡ್ಡಿ ಆತಂಕಗಳ ಸ್ವರೂಪ

ಒಮ್ಮೊಮ್ಮ ಬಿದಿರು, ಬೊಂಬು ಬೆಳೆದಿರುವ ಪ್ರದೇಶದಲ್ಲಿ, ಒಣಗಿದ ಬೊಂಬುಗಳು ಒಂದಕ್ಕೊಂದು ರಭಸವಾಗಿ ತೀಡಿ ಅಗ್ನಿಗೆ ಆಹುತಿಯಾಗುವುದುಂಟು. ಅಂಥ ಸಂದರ್ಭದಲ್ಲಿ ಬಿದಿರು ದೊರಕುವುದು ಕಷ್ಟವಾಗಿ ಕೆಲಸಕ್ಕೆ ತೊಂದರೆಯುಂಟಾಗುತ್ತದೆ. ಹಾಗೆಯೆ ಬಿದಿರನ್ನು ಬಹಳ ದಿವಸ ಹಾಗೆಯೆ ಇಟ್ಟರೆ ಕುಟ್ಟು ಬಂದು ಶಕ್ತಿಗುಂದುತ್ತದೆ. ಹೆಚ್ಚಾಗಿ ಒಣಗಲೂ ಬಾರದು, ಆಗ ಬಿದಿರು ಕಗ್ಗಲಾಗುತ್ತದೆ (ಸತ್ವಹೀನವಾಗುತ್ತದೆ).

ನಮ್ಮ ಸಂಸ್ಕೃತಿಯಲ್ಲಿರುವ ಆಚರಣೆಗಳು ಮೇದಾರಿಕೆಯನ್ನು ಇನ್ನೂ

ಜೀವಂತವಾಗಿರಿಸಿವೆ. ಗೌರಿ ಬಾಗಿನಕ್ಕೆ ಹೊಸ ಬಿದಿರಿನ ಮೊರಗಳೇ ಬೇಕು. ವೈಶ್ಯರು, ಬ್ರಾಹ್ಮಣರು ಕೆಲವು ಆಚರಣೆಗಳ ಸಂದರ್ಭದಲ್ಲಿ ಬಿದಿರಿನ ಬೀಸಣಿಗೆಗಳನ್ನು ದಾನ ಕೊಡಲೇ ಬೇಕು. ಹೀಗಾಗಿ ಮೇದಾರಿಕೆಗೆ ತುಸುಮಟ್ಟಿಗೆ ಬೆಂಬಲ ಆಶ್ರಯ, ಚಾಲನೆ ದೊರಕುತ್ತದೆ.

ಕೆಲಸದ ನಿಪುಣತೆ

ಈ ಮೊದಲು ತಯಾರಿಸುತ್ತಿದ್ದ ವಸ್ತುಗಳಿಗೆ ಮೇದಾರರು ಬಣ್ಣ ಬಳಿಯುತ್ತಿರಲಿಲ್ಲ. ನಾಗರಿಕತೆ ಬೆಳೆದಂತೆ, ಸೌಂದರ್ಯ ಪ್ರಜ್ಞೆ ಬೆಳೆದು ಅಂಗಡಿಗಳಿಂದ ಬಗೆ ಬಗೆಯ ಬಣ್ಣಗಳನ್ನು ತಂದು (ಅಲಂಕಾರಕ್ಕಾಗಿ) ಬಳಿಯುತ್ತಾರೆ. ಇದರಿಂದ ವ್ಯಾಪಾರ ಕುದುರಬಹುದು, ನಾಲ್ಕು ಕಾಸು ಹೆಚ್ಚು ಸಂಪಾದಿಸಬಹುದೆಂದು ಮೇದಾರರು ಅಭಿಪ್ರಾಯ ಪಡುತ್ತಾರೆ.

ಯಾರು ಯಾವ ಕೆಲಸ

ಮೇದಾರಿಕೆ ಮೇದಾರರ ಕುಲಕಸುಬು. ಸಾಮಾನ್ಯವಾಗಿ ಗಂಡಸರು ಬಿದಿರನ್ನು ಸೀಳಿ ಪದರ ಪದರವಾಗಿ ಪಟ್ಟಿ ತಯಾರಿಸುವ ಕೆಲಸ ಮಾಡುತ್ತಾರೆ. ಇದು ಪರಿಶ್ರಮದ ಕೆಲಸವೂ ಹೌದು. ಬಿದಿರು ಸೀಳುವಾಗ ಹರಿತವಾದ ಕತ್ತಿಯು ಮೈಕೈಗೆ ತಾಕುವುದರಿಂದ, ಇಲ್ಲವೆ ಮೈ ಮರೆತು ಸೀಳುತ್ತಿರುವಾಗ ಬೆರಳುಗಳಿಗೆ ಹರಿತವಾದ ಭಾಗ ತಾಕುವುದರಿಂದ ಸಣ್ಣಪುಟ್ಟ ಗಾಯಗಳಲ್ಲದೆ, ರಕ್ತಸ್ರಾವವಾಗುವಂಥ ಗಂಭೀರ ಸ್ವರೂಪದ ಗಾಯಗಳೂ ಆಗುವುದುಂಟು.

ಹಾಗೆ ಪುರುಷರು ಸೀಳಿಕೊಟ್ಟ ಪಟ್ಟಿಗಳನ್ನು ಬಳಸಿಕೊಂಡು ಹೆಂಗಸರು ಮೊರ, ಜರಡಿ ಮೊದಲಾದ ವಸ್ತುಗಳನ್ನು ಹೆಣೆಯುತ್ತಾರೆ. ಮೊರವನ್ನು ಹಿಡಿದುಕೊಂಡು ಕಾರ್ಯ ನಿರ್ವಹಿಸುವ ಜಾಗಕ್ಕೆ ಬಳುಕದಂತೆ ಗಟ್ಟಿಯಾದ ಬಿದಿರನ ಹೆಚ್ಚಿಯನ್ನು ಬಳಸುತ್ತಾರೆ. ಹಾಗೆಯೆ ಜರಡಿಯ ಕಂಠ ಭಾಗಕ್ಕೂ ಗಟ್ಟಿಯಾದ ಬಿದಿರಿನ ದೆಬ್ಬೆಯನ್ನು ಬಳಸುವರು. 'ಸುತ್ತು ಕಟ್ಟಲು' ಮಾತ್ರ ತೆಳುವಾದ ಬಿದಿರಿನ ಪಟ್ಟಿಗಳನ್ನೆ ಬಳಸಿಕೊಳ್ಳುತ್ತಾರೆ. ಕಂಠ ಕಟ್ಟುವುದು, ಪಟ್ಟಿ ಕಟ್ಟುವುದು ಅತ್ಯಂತ ಕುಶಲಿಗಳಾದ, ಅನುಭವಸ್ಥರಿಂದ ಮಾತ್ರ ಸಾಧ್ಯ.

ಸ್ತ್ರೀಯರಲ್ಲದೆ ಪುರುಷರೂ ಹೆಣೆಯುವ ಕೆಲಸ ಮಾಡುತ್ತಾರೆ. ಮಕ್ಕಳು ತಂದೆ-ತಾಯಿಗಳ ಸಣ್ಣಪುಟ್ಟ ಕೆಲಸದಲ್ಲಿ ನೆರವಾಗುತ್ತಾರೆ. ಹೀಗೆ ನೆರವಾಗುತ್ತಲೇ

ಕುತೂಹಲದ ಕಣ್ಣುಗಳಿಂದ ಹೆಣಿಗೆಯನ್ನು ಗಮನಿಸುತ್ತಾ, ಕೈಚಳಕವನ್ನು ಸೂಕ್ಷ್ಮವಾಗಿ ಗ್ರಹಿಸುತ್ತಾರೆ. ಅನಂತರ ಸಣ್ಣ ಪುಟ್ಟ ಮೊರ, ಜರಡಿ, ಬೀಸಣಿಗೆಗಳನ್ನು ಹೆಣೆಯಲು ಪ್ರಾರಂಭಿಸುತ್ತಾರೆ. ಈ ವೃತ್ತಿಗೆ ನೇರವಾದ ತರಬೇತಿ ಕೊಡಲು ಸಾಧ್ಯವಾಗದು. ಕಣ್ಣಿನಿಂದ ನೋಡುತ್ತ, ಮಾನಸಿಕವಾಗಿ ಅದಕ್ಕೆ ಪೂರ್ವ ತಯಾರಿ ನಡೆಸಿ ಕೈಯಿಂದ ಮಾಡುತ್ತ ಕುಲಕಸುಬನ್ನು ಕಲಿಯುವರು.

ಈಗ ಮೇದಾರರಲ್ಲದೆ ಕೊರಮರು, ಕೊರಚರು ಕೂಡ ಮೇದಾರಿಕೆಯನ್ನು ಮಾಡುತ್ತಿದ್ದಾರೆ. ಇವರು ಬಿದುರಿನ ಕೆಲಸದ ಜೊತೆಗೆ ಈಚಲುಗರಿ, ಈಚಲುಕಡ್ಡಿಗಳನ್ನು ಬಳಸಿ ಚಾಪೆ, ತಟ್ಟಿ ಮೊದಲಾದುವನ್ನು ಹೆಣೆಯುತ್ತಾರೆ.

ಇವರು ಈಚಲು ಗರಿಯ ಕಡ್ಡಿಗಳನ್ನು ಸೀಳಿ 'ಮಂಕರಿ'ಗಳನ್ನು ಹೆಣೆಯುತ್ತಾರೆ. ಇವು ವಿನ್ಯಾಸ, ಆಕೃತಿಯಲ್ಲಿ ಹೆಡಿಗೆಗಳನ್ನು ಹೋಲುತ್ತವಾದರೂ ಅಗಲವಾಗಿರುತ್ತವೆ. ಇವು ಆಕಾರದಲ್ಲಿ ಚಿಕ್ಕದಾಗಿರುವುದರಿಂದ ಸಗಣಿ ತುಂಬಲು, ಕಸ ಹೊತ್ತು ಹಾಕಲು, ಗೊಬ್ಬರ ಚೆಲ್ಲಲು, ಗಾಡಿಗಳಿಗೆ ಮಣ್ಣು ಗೊಬ್ಬರ ತುಂಬಲು ಬಳಸುವರು.

ಪಂಜರವನ್ನು ಈಚಲು ಗರಿಗಳಿಂದ ಹೆಣೆದಿರುತ್ತಾರೆ. ಇವು ಮಂಕರಿಗಿಂತ ದೊಡ್ಡದಾಗಿದ್ದು ಕೋಳಿಗಳ ಮೇಲೆ ದಬ್ಬಾಕಲು ಬಳಸುತ್ತಾರೆ.

ನಾಗರಿಕತೆ ಬೆಳೆದಂತೆ ಕಾಡು ಕಡಿದು ನಾಡು ಮಾಡುತ್ತಿದ್ದಾರೆ. ಇದರಿಂದ ಬಿದಿರಿನ ಕೊರತೆ ಸಹಜವಾಗಿಯೆ ಉಂಟಾಗುತ್ತಿದೆ. ಇದಕ್ಕೆ ಪೂರಕವೆನ್ನುವಂತೆ ಮೇದಾರರು ಬಿದಿರಿನಲ್ಲಿ ಹೆಣೆದು ತಯಾರು ಮಾಡುವಂಥ ವಸ್ತುಗಳನ್ನು ಲೋಹ, ಗಟ್ಟಿಯಾದ ಪ್ಲಾಸ್ಟಿಕ್‌ನಿಂದ ತಯಾರು ಮಾಡಿ ಮಾರುಕಟ್ಟೆಗೆ ತರಲಾಗಿದೆ. ಇಂಥ ಹತ್ತಾರು ಕಾರಣಗಳಿಂದ ಮೇದಾರಿಕೆ ನಿಧಾನವಾಗಿ ಕಣ್ಮರೆಯಾಗುತ್ತಿದೆ ಎಂದು ಕೊರಚರ ಸೀನಪ್ಪ (೪೫ ವರ್ಷ) ವಿಷಾದಿಸಿದರು.

ಮೇದಾರರಲ್ಲಿ ಬಹಳ ಮಂದಿ ತಮ್ಮ ಕುಲಕಸುಬನ್ನು ತೊರೆದು, ಸಂಸಾರ ನಿರ್ವಹಣೆಗಾಗಿ ಸಂಪಾದಿಸಲು ಇತರೆ ವೃತ್ತಿಗಳನ್ನು ಕೈಗೊಂಡಿದ್ದಾರೆ. ಹೀಗಾಗಿ ವೃತ್ತಿಯಿಂದ ಮೊದಲಾಗಿ ಜಾತಿಯಾಗಿ ಪರಿವರ್ತನೆಗೊಂಡ ಮೇದಾರಿಕೆಯು ಈಗ ಮತ್ತೆ ವೃತ್ತಿಯನ್ನು ಕಳಚಿಕೊಂಡು ಕೇವಲ ಜಾತಿಮಾತ್ರವಾಗಿ ಉಳಿಯುವ ಸಾಧ್ಯತೆಗಳಿವೆ.

ದಕ್ಷಿಣ ಕರ್ನಾಟಕದಲ್ಲಿ ಚಮ್ಮಾರಿಕೆ

ಪ್ರೊ. ಎಂ.ಎಲ್. ನರಸಿಂಹಮೂರ್ತಿ

ಜನಾಂಗದ ಸಂಕ್ಷಿಪ್ತ ಪರಿಚಯ

ಜಾತಿ ಪದ್ಧತಿಯ ವ್ಯವಸ್ಥೆಯಲ್ಲಿ ಚಮ್ಮಾರರು ಚತುರ್‌ವರ್ಣದಿಂದ ಹೊರಗುಳಿಯುತ್ತಾರಾದರೂ ಅವರನ್ನು 'ಪಂಚಮರು' ಎಂದು ಪರಿಗಣಿಸಿ, ಅಂತ್ಯಜರೆಂದು ಕರೆದು 'ಪಂಚಮ ವರ್ಣ'ವನ್ನೂ ವರ್ಣವ್ಯವಸ್ಥೆಯಲ್ಲಿಯೆ ಸೇರಿಸಲಾಗಿದೆ. ಸಾಮಾನ್ಯವಾಗಿ ಅವರು ಕಪ್ಪುವರ್ಣದವರಾಗಿರುತ್ತಾರೆ. ಅವರು ಸಾಮಾಜಿಕವಾಗಿ, ಧಾರ್ಮಿಕವಾಗಿ, ಹಿಂದೂ ಧರ್ಮದ ವಿಧಿವಿಧಾನಗಳನ್ನು ಅನುಸರಿಸುತ್ತಾರೆ. 'ಚಮ್ಮಾರಿಕೆ'ಯು ಅವರ ವಂಶ ಪಾರಂಪರ್ಯ ವೃತ್ತಿಯಾಗಿದೆ.

ಬೆಡಗು

ಅವರಲ್ಲಿಯೂ ಸಾಕೇನೋರು, ಎಮ್ಮೆನೋರು, ಶೆಟ್ಟೀನೋರು, ಸೀಮ್ಲೋರು, ಗುಜ್ಜನೋರು, ಮಲ್ಲೇನೋರು, ಅಂಕೆನೋರು, ಮಂದ್ಲೋರು ಎಂಬ ಒಳಪಂಗಡಗಳು (ಬೆಡಗು) ಇವೆ. ಸ್ಥಳೀಯವಾಗಿ ಅವುಗಳನ್ನು ಪರಿಗಣಿಸಿ, ವಿವಾಹ ಸಂದರ್ಭದಲ್ಲಿ ವಿಶೇಷ ಮಹತ್ವ ನೀಡಲಾಗುತ್ತದೆ. ಇತರೆ ವರ್ಣದವರಂತೆ 'ಚಮ್ಮಾರರು' ಕೂಡ ಮಡಿ, ಮೈಲಿಗೆ, ಒಳವಿವಾಹ, ತಂತಮ್ಮಲ್ಲಿಯೆ ಸಹಭೋಜನ ಮೊದಲಾದವುಗಳ ಬಗ್ಗೆ ಕೆಲವು ಕಟ್ಟುಪಾಡುಗಳನ್ನು ನಿರ್ಮಿಸಿಕೊಂಡಿದ್ದಾರೆ. ಅವರು ಇತರರಿಂದ ನಿರ್ಲಕ್ಷ್ಯಕ್ಕೊಳಗಾಗಿದ್ದರೂ ವಿವಿಧ ಹಂತಗಳಲ್ಲಿ ಅವರ ಸೇವೆಯನ್ನು ಇತರೆ ವರ್ಗದವರು ಅಗತ್ಯವಾಗಿ ಪಡೆದುಕೊಳ್ಳುತ್ತಾರೆ.

ಕುಲದ ಯಜಮಾನ್ರು

ಕುಲಸ್ತರೆಲ್ಲ ಸೇರಿ 'ಕುಲದ ಯಜಮಾನ್ರು' ಯಾರೆಂಬುದನ್ನು ತೀರ್ಮಾನ ಮಾಡುತ್ತಾರೆ. ವಯಸ್ಸಿನಲ್ಲಿ ಹಿರಿಯರು, ಅನುಭವಿಗಳು ಆದವರೊಬ್ಬರನ್ನು ಆಯ್ಕೆ ಮಾಡಿಕೊಳ್ಳುವುದುಂಟು. ವಿವಾಹಿತರಾಗಿರಬೇಕು, ಹುಡುಗರಿಗೆ

ಯಜಮಾನ್ರು ಪಟ್ಟ ಬರುವುದಿಲ್ಲ. ಕುಲಾಚಾರಕ್ಕೆ ಕುಂದುಂಟು ಮಾಡುವವರಿಗೆ, ತಪ್ಪು ನಡವಳಿಕೆ ನಡೆಯುವವರಿಗೆ ದಂಡ ಹಾಕುವ ಅಧಿಕಾರ 'ಕುಲದ ಯಜಮಾನ್ರು'ಗಿರುತ್ತೆ. ವಿವಾಹವೇ ಮೊದಲಾದ ಮಂಗಳ ಕಾರ್ಯದಲ್ಲಿ ಅವರು ಮುಂದಾಳುತನ ವಹಿಸಿ ಕಾರ್ಯನಿರ್ವಹಿಸುತ್ತಾರೆ.

ವಿವಾಹ ಸಂದರ್ಭದಲ್ಲಿ

ಚಮ್ಮಾರರು ವಿವಾಹದ ಸಂದರ್ಭದಲ್ಲಿ 'ಗಲ್ಲೆ' (ಚಮ್ಮಾರಿಕೆಯಲ್ಲಿ ನೀರಿಟ್ಟುಕೊಳ್ಳುವ ಚರ್ಮದ ಪಾತ್ರೆಯಾಕಾರ)ಯನ್ನು ಪೂಜಿಸುವ ಪದ್ಧತಿಯಿದೆ. 'ಗಲ್ಲೆ' ಯಲ್ಲಿರುವ ನೀರು ಪವಿತ್ರವಾದುದೆಂದು ಅವರು ಹೇಳುತ್ತಾರೆ.

ದೇವರು

ಹನುಮಂತರಾಯ (ಆಂಜನೇಯ), ಮಾರಮ್ಮ ಮೊದಲಾದ ದೇವರುಗಳನ್ನು ಪೂಜಿಸುತ್ತಾರೆ. ಮಾರಮ್ಮನಿಗೆ ಬಲಿಕೊಡುವುದು, ಮಾಂಸಾಹಾರ ಸೇವಿಸುವುದು ಕಂಡು ಬರುತ್ತದೆ. ಅವರು ಬೇವಿನ ಮರವನ್ನು ಪೂಜಿಸುವ ಪದ್ಧತಿ ಅಲ್ಲಲ್ಲಿ ಕಂಡುಬರುತ್ತದೆ.

ವಸತಿಯಲ್ಲಿ

ಸಾಮಾನ್ಯವಾಗಿ ಊರ ಹೊರಗಿನ ಭಾಗದಲ್ಲಿ ವಾಸಿಸುವ ಚಮ್ಮಾರರು ತಮ್ಮ ಹಟ್ಟಿಯಲ್ಲಿ ಗುಡಿಸಿಲುಗಳನ್ನು ಕಟ್ಟುವಾಗ ಹಿಪ್ಪೇಮರ, ಅರಳಿಮರ, ಮುತ್ತುಗದ ಕಟ್ಟಿಗೆಯನ್ನು ಬಳಸುವುದಿಲ್ಲ.

ಚರ್ಮ ಸುಲಿವ ಕ್ರಮ

ಸತ್ತ ಪ್ರಾಣಿಯ ಚರ್ಮವನ್ನು ಎದೆಭಾಗದಿಂದ ಪ್ರಾರಂಭಿಸಿ ಮೇಲೆ ತಲೆಭಾಗ, ಕೆಳಗೆ ಗುದಭಾಗದವರಿಗೆ ಮತ್ತು ಬಾಲದ ತುದಿಯಿಂದ ಕೊನೆಯವರೆಗೆ ನೇರವಾಗಿ ಸೀಳಬೇಕು. ಹಾಗೆಯೆ ಮುಂಗಾಲು ಮತ್ತು ಹಿಂಗಾಲುಗಳನ್ನು ಉದ್ದುದ್ದವಾಗಿ ಸೀಳಬೇಕು. ಹೀಗೆ ಸೀಳುವುದರಿಂದ ಚರ್ಮವು ಎಲ್ಲಿಯೂ ತುಂಡಾಗುವುದಿಲ್ಲ, ಹಾಳಾಗುವುದಿಲ್ಲ. ಪ್ರಾಣಿಯ ಒಡಲಿನಲ್ಲಿರುವ ಕರುಳು, ಮಾಂಸ, ಮೂಳೆಯನ್ನು ಸೂಕ್ಷ್ಮವಾಗಿ ತೆಗೆದು, ಅಚ್ಚುಕಟ್ಟು ಮಾಡಿಕೊಳ್ಳಬೇಕು. ಬಿಸಿಲು ಕಾಲವಾಗಿದ್ದರೆ ಆ ಚರ್ಮವನ್ನು ಹರಡಿ ಚೆನ್ನಾಗಿ

ಒಣಗಿಸಬೇಕು. ಇಲ್ಲವಾದರೆ ಹಸಿ ಚರ್ಮವನ್ನು ಹದಗೊಳಿಸಿಕೊಳ್ಳಬೇಕು.

ಚರ್ಮ ಹದಗೊಳಿಸುವ ರೀತಿ

ಒಂದು ನೀರಿನ ತೊಟಿಗೆ ಸುಣ್ಣಕಲ್ಲನ್ನು ಸ್ವಲ್ಪ ಅಡಿಗೆ ಉಪ್ಪನ್ನು ಹಾಕಿ ಒಂದೆರಡು ತಾಸು ಬಿಡಬೇಕು. ಅದು ಚೆನ್ನಾಗಿ ಬೆಂದ (ಅರಳಿದ) ನಂತರ, ಸುಣ್ಣದ ಸರಿಯನ್ನು ಕಡ್ಡಿಯಲ್ಲಿ ತೆಗೆದುಕೊಂಡು ಚರ್ಮದ ಒಳಭಾಗಕ್ಕೆ, ಎಲ್ಲ ಭಾಗಗಳಿಗೂ ಮೆತ್ತಿಕೊಳ್ಳುವಂತೆ ಚೆನ್ನಾಗಿ ಉಜ್ಜಬೇಕು. ಹಾಗೆ ಮಾಡುವಾಗ ಚರ್ಮಕ್ಕೆ ಹಾನಿಯಾಗದಂತೆ ಎಚ್ಚರವಹಿಸಬೇಕು. ನಂತರ ಸುಣ್ಣ ಬಳಿದ ಭಾಗವನ್ನು ಒಳಭಾಗಕ್ಕೆ ಸೇರಿಸಿ ಮಡಿಚಬೇಕು. ತರುವಾಯ ಚೆನ್ನಾಗಿ ಸುತ್ತಿ ಚಿಕ್ಕದಾಗಿ ಕಟ್ಟಬೇಕು. ಅದನ್ನು ಸುಣ್ಣವಿರುವ ನೀರಿನ ತೊಟ್ಟಿಯಲ್ಲಿ ಹಾಕಬೇಕು. ಒಂದು ಅಥವಾ ಎರಡು ದಿನ ಹಾಗೆ ಬಿಟ್ಟಿದ್ದರೆ ಚರ್ಮವು ಚೆನ್ನಾಗಿ ಉಬ್ಬುತ್ತದೆ.

ಆ ಚರ್ಮವನ್ನು ದಿನ ಬಿಟ್ಟು ದಿನ ಸುಣ್ಣದ ತೊಟ್ಟಿಯಿಂದ ಹೊರ ತೆಗೆದು ಚೆನ್ನಾಗಿ ಹರಡಿ ಒಳಭಾಗಕ್ಕೆ ಸುಣ್ಣದ ಸರಿಯನ್ನು ಚೆನ್ನಾಗಿ ಉಜ್ಜಿ ಮೊದಲಿನಂತೆಯೇ ಮಡಿಚಿ, ಸಣ್ಣದಾಗಿ ಕಟ್ಟಿ ಸುಣ್ಣದ ತಿಳಿಯಿರುವ ತೊಟ್ಟಿಗೆ ಹಾಕಬೇಕು. ಹೀಗೆ ಐದು ಅಥವಾ ಆರು ಬಾರಿ ಮಾಡುವಾಗ್ಗೆ ಹನ್ನೆರಡು ದಿನ ಕಳೆಯುತ್ತದೆ. ಈ ಅವಧಿಯಲ್ಲಿ ಚರ್ಮದ ಮೇಲು ಭಾಗದಲ್ಲಿನ ತುಪ್ಪಳ, ಒದಳು ಉದುರಿ ಹೋಗುತ್ತದೆ, ನಯವಾಗುತ್ತದೆ.

ಹನ್ನೆರಡು ದಿನದ ನಂತರ ಚರ್ಮವನ್ನು ಸುಣ್ಣದ ತೊಟ್ಟಿಯಿಂದ ಹೊರ ತೆಗೆದು, ಕಟ್ಟು ಕಳಚಿ, ಚೆನ್ನಾಗಿ ಹರಡಿ ಚರ್ಮದ ಒಳಭಾಗವನ್ನು ಚರ್ಮ ಹೆರೆಯುವ ಕತ್ತಿಯಿಂದ ಹೆರೆಯಬೇಕು, ಹಾಗೆ ಹೆರೆಯುವಾಗ ಪದೇ ಪದೇ ತಿಳಿಯಾದ ನೀರನ್ನು ಸುರಿದು ಕೊಳ್ಳುತ್ತಿರಬೇಕು. ಹೀಗೆ ಹೆರೆಯುತ್ತಿರುವಾಗ ಸುಣ್ಣದ ಅಂಶವೆಲ್ಲ ಈಚೆಗೆ ಬರುತ್ತದೆ.

ತದನಂತರ ಆ ಚರ್ಮವನ್ನು ಶುದ್ಧವಾದ ನೀರಿನಲ್ಲಿ ಹಾಕಬೇಕು. ಸುಣ್ಣದ ನೀರು ಚರ್ಮದಲ್ಲಿ ಇನ್ನು ಉಳಿದಿಲ್ಲ ಎಂಬುದನ್ನು ಖಾತ್ರಿಮಾಡಿಕ್ಕೊಂಡು, ಮತ್ತೆ ತಿಳಿ ನೀರಿಗೆ ಹಾಕಿ ಚೆನ್ನಾಗಿ ಜಾಲಿಸಬೇಕು. ಹೀಗೆ ಜಾಲಿಸುವುದರಿಂದ ಚರ್ಮದಲ್ಲಿ ಉಳಿದಿರಬಹುದಾದ ಅಲ್ಪ ಸ್ವಲ್ಪ ಸುಣ್ಣದ ನೀರಿನ ಅಂಶವು ಇಲ್ಲದಂತಾಗುತ್ತದೆ.

. ೦

ಚರ್ಮಕ್ಕೆ ಬಣ್ಣ ಕಟ್ಟುವುದು

ತಂಗಡಿ ಗಿಡದ ಕಡ್ಡಿಯನ್ನು ಕಡಿದು ತಂದು ಚೆನ್ನಾಗಿ ಬಡಿದಲ್ಲಿ ಅದರ ತೊಗಟೆ ಬಿಟ್ಟು ಕೊಳ್ಳುತ್ತದೆ. ಅದನ್ನು ಚೆನ್ನಾಗಿ ಒಣಗಿಸಬೇಕು. ಅದು ಒಣಗಿದ ನಂತರ ಚೆನ್ನಾಗಿ ಕುಟ್ಟಿ ಪುಡಿ ಮಾಡಿಕೊಳ್ಳಬೇಕು. ಆ ಪುಡಿಯನ್ನು ಈ ಮೊದಲು ಶುದ್ಧೀಕರಿಸಿಕೊಂಡಿರುವ ಚರ್ಮದ ಒಳಭಾಗಕ್ಕೆಲ್ಲ ಚೆನ್ನಾಗಿ ಚಿಮುಕಿಸಬೇಕು. ಅದನ್ನು ಮಡಿಚಿ ಚೆನ್ನಾಗಿ ಸುತ್ತಿ ಸಣ್ಣದಾದ ಕಟ್ಟು ಹಾಕಬೇಕು.

ತಂಗಡಿ ತೊಗಟೆಯ ಪುಡಿಯನ್ನು ಒಳ್ಳೆಯ ನೀರಿಗೆ ಹಾಕಿ, ಅದರಲ್ಲಿ ಚರ್ಮದ ಕಟ್ಟನ್ನು ಮುಳುಗಿಸಬೇಕು. ಅದು ಮೇಲೆ ತೇಲದಂತೆ ಭಾರ ಇಡಬೇಕು. ಒಂದು ವಾರದ ನಂತರ ಚರ್ಮದ ಕಟ್ಟನ್ನು ನೀರಿನಿಂದ ಹೊರ ತೆಗೆದು ಬಿಚ್ಚಿ, ಚೆನ್ನಾಗಿ ಹರಡಿಕೊಂಡು ಮತ್ತೆ ಪುಡಿಯನ್ನು ಒಳಭಾಗಕ್ಕೆ ಚಿಮುಕಿಸಿ ಮೊದಲಿನಂತೆಯೆ ಮಡಿಚಿ, ಕಟ್ಟು ಹಾಕಬೇಕು. ಮತ್ತೆ ತಂಗಡಿ ಪುಡಿಯನ್ನು ನೀರಿಗೆ ಹಾಕಿ, ಚರ್ಮದ ಕಟ್ಟನ್ನು ಅದರಲ್ಲಿ ಮುಳುಗಿಸಿಡಬೇಕು. ಅದನ್ನು ಮತ್ತೊಂದು ವಾರದ ನಂತರ ಹೊರತೆಗೆದು ನೆರಳಲ್ಲಿ ಚೆನ್ನಾಗಿ ಒಣಗಿಸಬೇಕು. (ವಕ್ತೃ : ಚಮ್ಮಾರರ ವರಪ್ಪ, ವಯಸ್ಸು - ೬೫).

ಸಿದ್ಧಪಡಿಸುವ ವಸ್ತುಗಳು

ವ್ಯಕ್ತಿಗಳು ಬಳಸುವುವು	ಕೃಷಿ ಬಳಕೆ ವಸ್ತುಗಳು	ವಾದ್ಯಗಳು	ಇತರೆ
ಚಪ್ಪಲಿ	ಬಾನಿ	ತಮಟೆ	ಹೆಂಡ ಸಾಗಿಸುವ 'ತಿತ್ತಿ'
ಬೂಟುಗಳು	ಬಾರುಕೋಲು	ಸೈಡ್‌ಡ್ರಂ	ಮದ್ದುಗುಂಡು ಸಾಗಿಸುವ
ಸೊಂಟಪಟ್ಟಿ (ಬೆಲ್ಟ್)		ಹಾರ್ಮೋನಿಯಂ	ಚರ್ಮದ ಚೀಲ
ಪಾಕೀಟು		ತಬಲ	ತೆಪ್ಪ (ಮೀನು
ಚರ್ಮದ ಚೀಲಗಳು		ಮದ್ದಲೆ	ಹಿಡಿಯಲು ನೀರಿನ
ಗಿರಕಿ ಚಪ್ಪಲಿ		ಡೊಳ್ಳು	ಮೇಲೆ ಸಂಚರಿಸಲು
ಕೋರೆ ಚಪ್ಪಲಿ			ಬಳಸುವುದು)

ಬಳಸುವ ಕಚ್ಚಾ ಸಾಮಗ್ರಿಗಳು

ಚರ್ಮ, ರಟ್ಟು ಸಲ್ಯೂಷನ್ (ಚರ್ಮವನ್ನು ಕೂಡಿಸಲು ಬಳಸುವ ಅಂಟು) ಟೈರ್, ಮೇಣ, ದಾರ, ವೈರು (ದಾರ ಪ್ಲಾಸ್ಟಿಕ್‌ನದು)

ಬಳಸುವ ಸಾಧನ ಮತ್ತು ಉಪಕರಣಗಳ ವಿವರ

ಗಲ್ಲೆ (ನೀರಿಟ್ಟುಕೊಳ್ಳುವ ಚರ್ಮದ ಸಾಧನ), ರೆಂಪ, ಮೆಟ್ಟುವ ಹಾರೆ ಕುಟ್ಟುವ ಗೂಟ, ಉಳಿ (ಹೊಲಿಯುವ ಸೂಜಿ), ಸಣ್ಣ ಮೊಳೆ, ಮಸೆಕಲ್ಲು ಮುಂತಾದುವು.

ತಯಾರಿಕೆಯ ವಿವಿಧ ಹಂತಗಳು

ತಯಾರಿಸುವ ವಸ್ತುವಿಗೆ ಅನುಗುಣವಾಗಿ ವಿವಿಧ ಹಂತಗಳಿರುತ್ತವೆ. ಚಪ್ಪಲಿ ಹೊಲಿದು ಕೊಡುವಾಗ ವ್ಯಕ್ತಿಯ ಕಾಲಿನ ಅಳತೆ ಮುಖ್ಯವಾಗುತ್ತದೆ. ಮೊದಲು ಚಪ್ಪಲಿಗಳನ್ನು ಮೊಳೆಗಳನ್ನು ಬಳಸಿಕೊಂಡು ತಯಾರಿಸುತ್ತಿದ್ದರು. ನಂತರ ಗಟ್ಟಿಯಾದ ದಾರವನ್ನು ಮೇಣದ ಮೂಲಕ ಎಳೆದೆಳೆದು ಗಟ್ಟಿಗೊಳಿಸಿ ಹೊಲಿಯುತ್ತಿದ್ದರು. ಇದರಂತೆಯೇ ಚರ್ಮವನ್ನು ಸಣ್ಣಗೆ ಸೀಳಿ ಅದರಿಂದಲೂ ಹೊಲಿಯುತ್ತಿದ್ದರು. ಈಗ ಚರ್ಮವನ್ನು ಅಂಟಿ ಹಾಕುವ ಸಲ್ಯೂಷನ್ ಬಳಸುತ್ತಾರೆ. ಸಣ್ಣಪುಟ್ಟ ರಿಪೇರಿ ಕೆಲಸವಿದ್ದಾಗ ಪ್ಲಾಸ್ಟಿಕ್ ದಾರವನ್ನು ಬಳಸಿ ಹೊಲಿಯುತ್ತಾರೆ.

ನಡೆದಾಡುವಾಗ ಗಿರಕ್... ಗಿರಕ್ ಎಂದು ಸದ್ದು ಮಾಡುವ ಗಿರಕಿ ಚಪ್ಪಲಿಗಳನ್ನು ಹೊಲಿಯುವಾಗ ಮಧ್ಯಭಾಗದಲ್ಲಿ (ಅಟ್ಟೆ ಮತ್ತು ಮೆಟ್ಟುವ ಭಾಗದ ನಡುವೆ) ಕೆಲವು ಚರ್ಮದ ಚೂರುಗಳನ್ನು ಹಾಕಿ ಹೊಲಿಯುವುದರಿಂದ ಹಾಗೆ ಸದ್ದುಂಟಾಗುತ್ತಿರುತ್ತದೆ.

ಕಪ್ಪು ಬಣ್ಣ ಮತ್ತು ಹೀರೆಗಸಿಗಳನ್ನು ಅಂಗಡಿಯಿಂದ ತಂದು ಚೆನ್ನಾಗಿ ಕಲಸಿ ಹೊಸ ಚರ್ಮದ ಮೇಲುಭಾಗಕ್ಕೆ ಚೆನ್ನಾಗಿ ಬಳಿದು, ಆರಿದ ನಂರ ಪಾಲೀಶ್ ಹಚ್ಚಿ ಮೆರಗು ನೀಡಲಾಗುತ್ತದೆ.

ಬೂಟುಗಳನ್ನು ಹೊಲಿಯುವಾಗ ಮರದ ವಿನ್ಯಾಸಗಳನ್ನು ಬಳಸಿಕೊಂಡು ಸಿದ್ಧಗೊಳಿಸಲಾಗುತ್ತದೆ. ಈಗ ಕಂಪನಿಯ ಬೂಟುಗಳಿಗೆ ಹೆಚ್ಚು ಬೇಡಿಕೆಯಿರುವುದ

ತಂಗಡಿ ದ್ಯಾವ್ರು

ಕೋಲಾರ ಜಿಲ್ಲೆಯ ಗಡಿ ಪ್ರದೇಶಗಳಲ್ಲಿ ನೆಲೆಸಿರುವ, ತೆಲುಗು ಮಾತನಾಡುವ ಚಮ್ಮಾರರಲ್ಲಿ ಬಾಲ್ಯವಿವಾಹ ಪದ್ಧತಿಯಿದ್ದಾಗ ತಂಗಡಿ ಗಿಡವನ್ನು ಪೂಜಿಸುವ ಪದ್ಧತಿ ಇದ್ದಿತು. ಅದರ ಪೂಜೆ ಮಾಡದೆ ವಿವಾಹ ವಿಧಿ ಪೂರ್ಣಗೊಳ್ಳುತ್ತಿರಲಿಲ್ಲ. ಬಾಲ್ಯವಿವಾಹ ನಿಷೇಧಗೊಂಡ ನಂತರ ಈ ಪದ್ಧತಿ ನಿಂತು ಹೋಯಿತು. ಆದರೆ ಚಮ್ಮಾರರು ತಮ್ಮ ಜೀವನದಲ್ಲಿ ಒಂದಲ್ಲ ಒಂದು ಸಲ ವಿಶಿಷ್ಟವಾದ ಸಂದರ್ಭದಲ್ಲಿ 'ತಂಗಡಿ ದ್ಯಾವ್ರು' ಆಚರಿಸಲೇಬೇಕೆಂಬ ನಂಬಿಕೆ ಬೆಳೆದು ಬಂದಿದೆ.

ಈ ಮೊದಲೆ ಆರಿಸಿಟ್ಟುಕೊಂಡಿರುವ ತಂಗಡಿ ಗಿಡದ ಸುತ್ತಮುತ್ತಲ ಕಸಕಡ್ಡಿ ತೆಗೆದು ಒಪ್ಪ ಮಾಡಿಕೊಂಡು, ಸಗಣಿಯಿಂದ ಸಾರಿಸಿ, ರಂಗೋಲಿ ಹಾಕಿ, ಪಿಳ್ಳಾರಿ ಮಾಡಿ ಆ ಗಿಡದ ಕೆಳಗೆ ಇಡುತ್ತಾರೆ. ಆ ಗಿಡದ ರೆಂಬೆಗಳಿಗೆ ವೃತ್ತಾಕಾರದಲ್ಲಿ ಮೂರು ಸುತ್ತು ದಾರ ಸುತ್ತುತ್ತಾರೆ. ಐದು ಚಿಕ್ಕ ಚಿಕ್ಕ ಕಲ್ಲುಗಳನ್ನಿರಿಸಿ ಅವಕ್ಕೆ ಅರಿಷಿಣ ಕುಂಕುಮ ಹಚ್ಚುತ್ತಾರೆ. ನಂತರ ಹಸಿಕೋಳಿ ಮೊಟ್ಟೆಗಳನ್ನು ಗಿಡದಡಿಯಲ್ಲಿಡುತ್ತಾರೆ. ನಂತರದ ಕಾರ್ಯ 'ಅಮುದ' ಹಾಕುವುದು ('ಅಮುದ' ಎಂದರೆ ಹರಿಷಿಣ, ಕುಂಕುಮ ಬೆರೆಸಿ, ಮೊಸರಿನೊಂದಿಗೆ ಗಟ್ಟಿಯಾಗಿ ಕಟ್ಟಿದ ಉಂಡೆ ಅನ್ನ) ಹರಿಷಿಣದ ಅಮುದ, ಕುಂಕುಮದ ಅಮುದ ಬೇರೆ ಬೇರೆಯಾಗಿಯೇ ಇರುತ್ತದೆ. ಅದರ ಜೊತೆಗೆ ಕಜ್ಜಾಯವನ್ನಿಡುವುದು ಕಡ್ಡಾಯ. ತರುವಾಯ ತಂಗಡಿ ಗಿಡಕ್ಕೆ ಪೂಜೆ ಸಲ್ಲಿಸಿ, ಚಮ್ಮಾರರ ಆರ್ಥಿಕ ಸಾಮರ್ಥ್ಯಕ್ಕನುಗುಣವಾಗಿ ಕೋಣವನ್ನೊ, ಕುರಿಯನ್ನೊ ಕೋಳಿಯನ್ನೊ ಬಲಿಗೊಡುತ್ತಾರೆ.

ಹಾಗೆ ಬಲಿಗೊಟ್ಟ ಪ್ರಾಣಿಯ ತಲೆಯನ್ನು 'ಕತ್ತಿ'ಗೆ ಸಿಕ್ಕಿಸಿಕೊಂಡು, ತಂಗಡಿ ಗಿಡದ ಸುತ್ತ ಕೇಕೆ ಹಾಕಿಕೊಂಡು, ಹಾಡು ಹೇಳುತ್ತಾ ಕುಣಿಯುತ್ತಾರೆ. ನಂತರ ಮಾಂಸದ ಅಡುಗೆಯನ್ನು ತಯಾರಿಸಿ ತಮ್ಮ ಬಂಧು ಬಳಗದವರೊಂದಿಗೆ ಊಟ ಮಾಡುತ್ತಾರೆ.

ತಂಗಡಿ ಗಿಡ - ಚಮ್ಮಾರರ ಕುಲದ ಮೂಲಪುರುಷ - ಅಕ್ಕಸಾಲಿಗ (ವಿಶ್ವಕರ್ಮ)

ಒಮ್ಮೆ ಅಕ್ಕಸಾಲಿಗನು ಋಷಿಯ ಶಾಪದಿಂದ ತಾನು ಮಾಡುತ್ತಿದ್ದ

ಆಭರಣಗಳನ್ನು ಹೇಗೆ ಮಾಡಬೇಕೆಂಬುದನ್ನು ಮರೆತು ಹೋಗುತ್ತಾನೆ. ಆ ಸಂದರ್ಭದಲ್ಲಿ ಚಮ್ಮಾರರ ಕುಲದ ಮೂಲ ಪುರುಷನಾದ 'ತಾತ' ಅಕ್ಕಸಾಲಿಯನ್ನು ತಂಗಡಿ ಗಿಡದ ಬಳಿ ಕರೆದುಕೊಂಡು ಹೋಗಿ ಎಲೆಯ ಆಕಾರದಲ್ಲಿ ತಾಳಿ ಬೊಟ್ಟನ್ನು ಹೂ ಆಕಾರಕ್ಕೆ ಮೂಗುತಿ, ಸುರುಳಿ ಸುತ್ತಿಕೊಂಡಿರುವ ಕಾಯಿ ಆಕಾರಕ್ಕೆ ಕಾಲುಂಗುರ ಮಾಡುವಂತೆ ಮಾರ್ಗದರ್ಶನ ಮಾಡಿದನೆಂದು ಕಥೆಯೊಂದನ್ನು ಚಮ್ಮಾರರು ಹೇಳುತ್ತಾರೆ.

ಚಮ್ಮಾರರು ಕೊರಳಲ್ಲಿ ಚರ್ಮದ ಚೂರು ಕಟ್ಟುವುದು ಯಾಕೆ?

ಸಾಮಾನ್ಯವಾಗಿ ಚಮ್ಮಾರರು ತಮ್ಮ ಮಕ್ಕಳ ಕೊರಳಲ್ಲಿ ಚರ್ಮದ ತುಂಡನ್ನು ಕಟ್ಟುತ್ತಾರೆ. ಅದರ ಬಗ್ಗೆ ಅವರು ಒಂದು ಕಥೆಯನ್ನು ಹೇಳುತ್ತಾರೆ.

ಒಂದ್ಸಲ ದೊಡ್ಡಮ್ಮನಿಗೆ ಕೋಪ ಬಂದು, ಊರೊಳಕ್ಕೆ ಬಂದು ಕಣ್ಣಿಗೆ ಬಿದ್ದೋರ್ನೆಲ್ಲ ಬಳ್ಕೊಂಡೋದ್ಲು. ಚಮ್ಮಾರರೆಲ್ಲ ಒಟ್ಟಿಗೆ ಸೇರ್ಕಂಡು ಗಂಗಮ್ಮನಿಗೆ ಮೊರೆ ಹೊಕ್ಕರು. "ದೊಡ್ಡಮ್ಮ ನಮ್ಮೇಲೂ ಕೋಪ ಮಾಡ್ಕಂಡವಳೆ, ನಮಗೂ ಅನ್ಯಾಯ ಮಾಡವಳೆ" ಅಂತ ಗಂಗಮ್ಮನಿಗೆ ಹೇಳ್ಕೊಂಡು ಕಣ್ಣೀರು ಹಾಕಿದ್ರು. ಚಮ್ಮಾರರು ಕಣ್ಣೀರು ಹಾಕಿದ್ಕಂಡು ಗಂಗಮ್ಮನ ಕರುಳು ಚುರುಕ್ ಅಂತು. ಆಕೆ ಸೀದಾ ದೊಡ್ಡಮ್ಮನ ಹತ್ರ ಹೋಗಿ ಜಗಳಾನೆ ಆಡಿದ್ಲು. "ನನ್ನ ತವರು ಮನೆಯೋರು ನಿನಗೇನು ಕೇಡು ಮಾಡಿದ್ರು. ಅವರ ಕೇರಿಗೆ ಹೋಗಿ ಸಿಕ್ಕಿದೋರ್ನೆಲ್ಲ ಯಾಕೆ ಬಳ್ಕೊಂಡೋದೆ" ಅಂತ ರೇಗಾಡಿದಳು, ಕೂಗಾಡಿದಳು. ಅದಕ್ಕೆ ದೊಡ್ಡಮ್ಮ "ಈಗ ಆಗಿದ್ದಾಗೋಯ್ತು, ಇನ್ಮುಂದೆ ನಿಮ್ ತವರಿನ ಕಡೆ ಗುರುತು ಹಚ್ಚೋದು ಹೇಗೆ?" ಅಂತ ಗಂಗಮ್ಮನನ್ನು ಕೇಳಿದಳು.

ಆಗ ಗಂಗಮ್ಮ ಯೋಚ್ನೆ ಮಾಡಿ "ಇನ್ಮುಂದೆ ನನ್ನ ತವರಿನೋರ್ಗೆ ಕೊರಳಾಗೊ, ಸೊಂಟದಾಗೊ ಚರ್ಮದ ತುಂಡು ಕಟ್ಟಾಕಿಳಾಕೇಳ್ತೀನಿ" ಅಂತ ಹೇಳಿದಳು. ಹಂಗೆ ಚರ್ಮದ ತುಂಡು ಕಟ್ಕಂಡಿರೊ ಯಾರ್ನೂ ಮುಟ್ಟಬಾರದು" ಅಂತ ಬಲಗೈಭಾಷೆ ತಗಂಡ್ಲು.

ಅವತ್ನಿಂದ ಚಮ್ಮಾರರೆಲ್ಲ ಚರ್ಮದ ತುಂಡನ್ನು ಕೊರಳಲ್ಲೊ, ಸೊಂಟದಲ್ಲೊ ಕಟ್ಟಿಕೊಳ್ಳುತ್ತಾ ಬಂದವ್ರೆ.

ಅವರಲ್ಲಿ ಜನಪದ ಸಾಹಿತ್ಯ ಹೆಚ್ಚಾಗಿದೆ ಯಾಕೆ?

ಚಮ್ಮಾರರಲ್ಲಿ ಜನಪದ ಕಥೆ, ಜನಪದ ಗೀತೆ, ಪದ, ಗಾದೆ, ಒಗಟು ಮೊದಲಾದುವನ್ನು ಹೇಳುವವರು ಇತರೆ ಜನಾಂಗದವರಿಗಿಂತ ಹೆಚ್ಚು ಮಂದಿ ಇದ್ದಾರೆ. ಅವರಲ್ಲೇ ಜನಪದ ಸಾಹಿತ್ಯ ಹೇರಳವಾಗಿ ಕಂಠಸ್ಥವಾಗಿದೆ ಯಾಕೆ? ಎನ್ನುವುದರ ಬಗ್ಗೆಯೇ ಅವರೊಂದು ಕಥೆ ಹೇಳುತ್ತಾರೆ.

"ಬಹಳಾ ಹಿಂದೆ ಕಥೇನೂ ಇರ್ಲಿಲ್ಲ, ಪದಾನೂ ಇರ್ಲಿಲ್ಲ. ಅಂಥ ಕಾಲ್ದಾಗೆ ಜನ ಹರಟೆ ಹೊಡ್ಕೊಂಡು ಕಾಲ ಕಳೀತಾ ಇದ್ರು. ದಿನ ಬೆಳಗಾದ್ರೆ ಜಗಳ, ಗಲಾಟೆ ಆಗ್ತಾನೇ ಇದ್ವು... ಅದನ್ನ ತಪ್ಪಿಸಬೇಕು ಅಂತ ಜನ ಎಲ್ಲಾ ಸೇರಿ ಯೋಚ್ನೆ ಮಾಡಿ, ದೇವ್ರತ್ರ ಬಂದು ತಮ್ಮ ತಾಪತ್ರಯಾನೆಲ್ಲ ಹೇಳ್ಕೊಂಡ್ರು. ಅದನ್ನೆಲ್ಲ ಕೇಳಿದ ಗಂಗಮ್ಮ 'ಅದಕ್ಕೆಲ್ಲಾ ಅಷ್ಟ್ಯಾಕೆ ಚಿಂತೆ ಮಾಡ್ತೀರಾ? ಇಲ್ಲಿ ಬೇಕಾದಷ್ಟು ಕಥೆ, ಪದ ಅವೆ ತುಂಬಿಕೊಂಡು ಹೋಗಿ' ಅಂತೇಳಿ, ಎರಡು ಗಾಡಿ ತುಂಬ ಕಥೆ, ಪದ ತುಂಬ್ಸಿ ಕಳಿಸಿಕೊಟ್ಲು.

ಜನ ಅವನ್ನೆಲ್ಲ ತುಂಬಿಕೊಂಡು ಗಾಡಿ ಹೊಡ್ಕೊಂಡು ಊರಿನ ಕಡೆ ಬರ್ತಾ ಇದ್ರು ಊರತ್ರಕ್ಕೂ ಬಂದ್ ಬಿಟ್ರು. ಆಂದ್ರೆ ಊರಾಚೆ ಇರೊ ಚಮ್ಮಾರ ಜನಾಂಗದೋರ ಹಟ್ಟಿಗೆ ಬಂದ್ರು. ಆ ಜಾಗದಾಗೆ ಏನಾಯ್ತಂದ್ರೆ, ಗಾಡಿ ಅಚ್ಚು ಮುರ್ದೋಯ್ತು. ಊರಾಗಳ ಜನ ಅದನ್ನೆಲ್ಲಾ ಯಾರಪ್ಪ ಊರೊಳಕ್ಕೆ ಹೊತ್ಕೊಂಡೋಗೋದು ಅಂತ ಅಂದ್ಕೊಂಡು, ಬೇಕೋ ಬ್ಯಾಡವೋ ಅನ್ನೋಥರ ಒಂದಿಷ್ಟುಟ್ಟು ಹೊತ್ಕೊಂಡು ಹೋದ್ರು. ಮಿಕ್ಕಿದ್ದನ್ನೆಲ್ಲ ಹಟ್ಯಾಗೆ ಬಿಟ್ಬೋದ್ರು. ಹಟ್ಟೀರೆಲ್ಲ ಬಾಚ್ಕೊಂದು.... ಬಾಚ್ಕೊಂಡೋಗಿ ಮನೆಗಿರೊ ಗುಡಾಣ, ಸ್ವಾರೆ, ಮಡಕೆಗೆಲ್ಲಾ ತುಂಬಿ ಕೊಂಡ್ರು.

ಇನ್ನೊಂದು ಗಾಡಿ ಹಟ್ಟಿ ದಾಟಿ ಬರೋದ್ರೊಳಗೇನೆ ಅಚ್ಚು ಮುರ್ಕೊಂಡು ಬಿತ್ತು. ಆಗ್ಲೂ ಇನ್ನೊಂದು ಹಟ್ಟೀರೆಲ್ಲಾ ಬಂದು ತುಂಬಿಕೊಂಡು ಹೋದ್ರು ಅದ್ರೊಳಗೆ ಅಲ್ಪ ಸ್ವಲ್ಪ ಊರೊಳಗೆ ಸೇರಿತು. ಹಂಗಾದ ದಿನದಿಂದ ಚಮ್ಮಾರ ಜನಾಂಗದೋರ ಹತ್ರ ಕಥೆ, ಪದಗಳೆಲ್ಲ ಮಸ್ತಾಗಿ ಅದಾವೆ.

ಈಗಲೂ ಅವರು ಹೇಳುವ ಜನಪದ ಸಾಹಿತ್ಯ ಅತ್ಯಂತ ಕುತೂಹಲದಿಂದ ಕೂಡಿರುತ್ತದೆ. ಅದನ್ನೆಲ್ಲ ಸಾಂಸ್ಕೃತಿಕ ವಿಶ್ಲೇಷಣೆಗೊಡ್ಡಿದರೆ

ಕುತೂಹಲಕಾರಿಯಾದ ಆಚಾರ, ವಿಚಾರಗಳು ಕಂಡು ಬರುತ್ತವೆ.

ಯಾವ ಪ್ರಾಣಿಗಳ ಚರ್ಮ ಹದ ಮಾಡುತ್ತಾರೆ?

ಎಮ್ಮೆ, ಕುರಿ, ಕೋಣ, ಮೇಕೆ, ಎತ್ತು, ಹಸುವಿನ ಚರ್ಮಗಳನ್ನು ಹದಮಾಡುತ್ತಾರೆ.

ಅಡವಿ ಪ್ರಾಣಿಗಳ ಚರ್ಮವನ್ನು ಸುಲಿಯುವುದಿಲ್ಲ ಮತ್ತು ಹದ ಮಾಡುವುದಿಲ್ಲ. ಅವುಗಳ ಬಗ್ಗೆ ಚಮ್ಮಾರರಿಗೆ ಪೂಜ್ಯ ಭಾವನೆಯಿದೆ.

ವಿವಿಧ ಪಾರಿಭಾಷಿಕ ಪದಗಳು

ಚಪ್ಪಲಿ - ಅಟ್ಟೆ, ಉಂಗುಷ್ಟ, ಬಾರು

ಬಾನಿ - ಸುಂಡು, ಬಟುವು, ಕಪ್ಪಕಟ್ಟು (೨-೩ ಬೆರಳು ದಪ್ಪ ಇರುವ ಚರ್ಮದ ಹಗ್ಗ)

ತಿದಿ - ಮೂತಿ, ಬಾಯಿ, ಒಡಲು

ಮೂತಿ - ಕಬ್ಬಿಣದ ಕೊಳವೆ ಸೇರಿಸುವ ಭಾಗ

ಬಾಯಿ - ಗಾಳಿ ಒಳ ಸೇರಿಕೊಳ್ಳಲು ಬಿಟ್ಟಿರುವ ಭಾಗ

ಒಡಲು - ಗಾಳಿ ತುಂಬಿ ಕೊಳ್ಳಲು ಏರ್ಪಡಿಸಿರುವ ಭಾಗ

ಪರ್ಯಾಯ ನಾಮಗಳು

ಮಾತಂಗ, ಮಣೆಗಾರ, ಸಮಗಾರ, ಮಾದಾರ, ಮೋಚಿ, ಮೊಚಗಾರ, ಡೋಹಾರ, ಕಕ್ಕರು - ಈ ಮೊದಲಾದ ಹೆಸರುಗಳು ಚಮ್ಮಾರರಿಗೆ ಪರ್ಯಾಯವಾಗಿ ಬಳಕೆಯಲ್ಲಿವೆ. ಈ ಹೆಸರುಗಳು ಅವರು ಮಾಡುವ ಚರ್ಮದ ವೃತ್ತಿಯ ಮೇಲೆ ಮುಖ್ಯವಾಗಿ ಅವಲಂಬಿತವಾಗಿವೆ.

ಇತರೆ ವಿಷಯಗಳು

ತಮಟೆ - ಇದನ್ನು ತಯಾರಿಸಲು ಮೇಕೆ ಚರ್ಮವನ್ನು ಮಾತ್ರ ಬಳಸುತ್ತಾರೆ. ಇದು ಒಂದೇ ಸಮ ತೆಳುವು ಇರುವುದರಿಂದ ಹೆಚ್ಚಿನ ಶಬ್ದ

ಮುಗಿಯುವರು. ಹೋಳಿಗೆ ಇವರ ವಿಶೇಷ ಭಕ್ಷ್ಯ. ದೀಪಾವಳಿ ಮತ್ತು ಉಗಾದಿಯನ್ನು ಆಚರಿಸುತ್ತಾರೆ. ಇವರ ವಿಶಿಷ್ಟತೆಯ ಹಬ್ಬವೆಂದರೆ ಮುಸ್ಲಿಂರ ಹಾಲು ಹಬ್ಬವನ್ನು ಆಚರಿಸುತ್ತಾರೆ. ಮೊಹರಂ ದಿನದಂದು ಹುಲಿವೇಷ ಕಟ್ಟುವುದಾಗಿ ಹರಕೆ ಹೊರುತ್ತಾರೆ. ಹುಲಿ ವೇಷ ಕಟ್ಟಿ ಕುಣಿಯುತ್ತಾರೆ. ಆ ಹಬ್ಬದಲ್ಲಿ "ಮಾದ್ಲಿ" ಎಂಬ ಒಂದು ಸಿಹಿ ತಿಂಡಿಯನ್ನು ಮಾಡುತ್ತಾರೆ.

ಇವರು ಹನುಮಂತ ದೇವರನ್ನು ಪೂಜಿಸುತ್ತಾರೆ. ಕೆಲವರು ಎಲ್ಲಮ್ಮ ತಾಯಿ, ಅವಳ ಅಕ್ಕ ತಂಗಿಯರನ್ನು ಪೂಜಿಸುತ್ತಾರೆ. ಏಳು ಮಕ್ಕಳ ತಾಯಿಯನ್ನು ಪೂಜಿಸುವವರೂ ಇದ್ದಾರೆ. ಇವಳೂ ಎಲ್ಲಮ್ಮ ತಾಯಿಯ ಸಹೋದರಿಯಲ್ಲೆ ಒಬ್ಬಳು. ಈ ದೇವರು ಅತ್ಯಂತ ಸೂಕ್ಷ್ಮ ದೇವರ ಹೆಸರನ್ನು ಬೇರೆಯವರಿಗೆ ಹೇಳಬಾರದಂತೆ. ಅದೇ ದಿನ ತಂದಿರುವ ಕಾಯಿಪಲ್ಲೆಯನ್ನೇ ಬಳಸಬೇಕು. ಬೇಕಾಗುವ ಎಲ್ಲ ಪಾತ್ರೆಗಳನ್ನು ತೊಳೆದಿರಬೇಕು. ದೇವರಿಗೆ ಹಾಕುವ ನೀರನ್ನು ಕೂಡ ಯಾರೂ ಮುಟ್ಟಬಾರದು. ಹಬ್ಬದ ದಿನಗಳಲ್ಲಿ ದೇವರು ಮೈಮೇಲೆ ಬರುತ್ತಾನೆ. ಈ ದೇವರ ಅಡಿಗೆ ತಿಂದರೆ ಬಾಯಿ ಹಿಡಿದದನ್ನು ಉದಾಹರಣೆ ಸಮೇತ ವಿವರಿಸುತ್ತಾರೆ.

ಇವರದು ಒಬ್ಬೊಬ್ಬರು ಒಂದೊಂದು ಮನೆ ದೇವರಂತೆ ಎನಿಸುತ್ತದೆ. ಈ ಏಳು ಮಕ್ಕಳ ತಾಯಿ ದೊರೆತಿರುವುದು ಹುಲ್ಲಿನಲ್ಲಿ. ಕುಡಿದ ಒಬ್ಬ ಇದನ್ನು ಮನೆಗೆ ತಂದ. ಆಗ ಮನೆಯಲೆಲ್ಲ ಬತ್ತ ಉಕ್ಕುಕ್ಕಿ ಬಂತು. ಕೆಲವರು ಕೊಂಡೊಯ್ದರು. ಅಲ್ಲೂ ಅದು ಉಪಟಳಕಾರಿಯಾಯಿತು. ತರುವಾಯ ತಮ್ಮ ಮನೆಗೆ ತಂದರೆಂಬುದು ಒಬ್ಬರ ಅಂಬೋಣ. ಐದು ಜೋಗರನ್ನು ತಂದು ಶುದ್ಧಗೊಳಿಸಲಾಯಿತು. ಐದು ಮನೆಯಿಂದ ಭಿಕ್ಷೆ ತಂದು ಪೂಜೆ ಮಾಡುವುದು ವರ್ಷಕ್ಕೊಮ್ಮೆಯ ರೂಢಿ.

ಕೆಲವರಿಗೆ ಹನುಮಂತ ದೇವರು ಕುಲದೇವರು. ಲಕ್ಷ್ಮೇಶ್ವರದ ಯಮನವರಪ್ಪನು ಆರಾಧ್ಯ ದೈವವೇ. ಇವರಲ್ಲಿ ಯಾವುದೇ ಪುರೋಹಿತರು (ಬ್ರಾಹ್ಮಣರು) ಇರುವುದಿಲ್ಲ. ಯಾವುದೇ ಮಾಟ ತೆಗೆಸುವುದು, ತಾಯಿತ ಕಟ್ಟಿಸುವ ಪದ್ಧತಿ ನಮಗಿಲ್ಲ. ದೆವ್ವ-ಪವ್ವ ಬಿಡಿಸುವುದು ನಮಗೆ ಗೊತ್ತಿಲ್ಲ. ಹಾಗೇನಾದರೂ ಆಯಿತು ಎಂದರೆ ಯಮನವರಪ್ಪನಿಗೆ ಅಡ್ಡ ಬಿದ್ದರಾಯಿತು. ಆ ದೇವರಿಗೆ ೫ ಅಮವಾಸ್ಯೆ ನಡೆದುಕೊಂಡರಾಯಿತು.

ಇಲ್ಲಿ ಹುಟ್ಟಿನಿಂದ-ಮರಣದವರೆಗೆ ವಿಧಿ ಆಚರಣೆಗಳಿವೆ. ಜನನವಾದ ಐದನೇ ದಿನಕ್ಕೆ ಹೆಸರಿಡಲು ಗಂಡ ಬರಲಾರ. ಆ ಮಗುವಿನ ಅತ್ತೆ ಹೆಸರಿಡುತ್ತಾಳೆ. ಮಗು ಹುಟ್ಟಿದ ಮೇಲೆ ಅದರ "ಮಾಸ"ನ್ನು ಒಂದು ಗುಂಡಿಯಲ್ಲಿಟ್ಟು ಅದರ ಮೇಲೆ ಕಲ್ಲನಿಟ್ಟು ಸ್ನಾನ ಮಾಡಿಸುತ್ತಾರೆ. ಅದರಲ್ಲಿ ಪಾಂಡವರು ಎನ್ನುವಂತೆ ಐದು ಕಲ್ಲನಿಟ್ಟು, ಪೂಜೆ ಮಾಡಿ ಐದು ರೀತಿಯ ತಿನಿಸನಿಡುವರು. ತರುವಾಯ ಮಗುವಿಗೆ ನಾಮಕರಣ ಮಾಡಲಾಗುವುದು. ತರುವಾಯ ತೊಟ್ಟಿಲಲಿಟ್ಟು ಹಾಡುವುದು ರೂಢಿ. ಮಗು ಹುಟ್ಟಿದ ಒಂದು ತಿಂಗಳ ತರುವಾಯ ಮಗುವಿನ ತಂದೆ ನೋಡಲು ಬರುವನು.

ಮದುವೆಯ ಸಂಪ್ರದಾಯವೂ ವಿಶಿಷ್ಟವಾಗಿದೆ. ಇಲ್ಲಿ ಗಂಡು ಮತ್ತು ಹೆಣ್ಣಿಗೆ ಆಯ್ಕೆಯ ಸಮಾನ ಅವಕಾಶವಿದೆ. ಮದುಮಗ ಮುಂಚಿತವಾಗಿ ಹೋಗಿ ಹೆಣ್ಣನ್ನು ನೋಡಿ ಬರುತ್ತಾನೆ. ಒಪ್ಪಿಗೆಯಾದರೆ ತಮ್ಮ ಹಿರಿಯರು ಬರುತ್ತಾರೆ ಎಂದು ತಿಳಿಸಿ ಹೋಗುತ್ತಾನೆ. ಇವರಲ್ಲಿ ಹೆಣ್ಣು ಶ್ರೇಷ್ಠ; ಗಂಡು ಶ್ರೇಷ್ಠ ಎನ್ನುವ ವಿಚಾರವಿಲ್ಲ. ಹೆಣ್ಣು ಬೇಕಾದವರು ಹೆಣ್ಣಿನ ಮನೆಗೂ, ಗಂಡು ಬೇಕಾದ ಹೆಣ್ಣಿನ ಕಡೆಯವರು ಗಂಡಿನ ಮನೆಗೂ ಹೋಗಬೇಕಾಗಿರುತ್ತದೆ. ಸಾಮಾನ್ಯ ನಿಯಮ, ನೋಡಿ ಬಂದವರು ಹಿರಿಯರನ್ನು ಕಳುಹಿಸುತ್ತಾರೆ. ತರುವಾಯ ಹೆಣ್ಣಿನ ಕಡೆಯವರು ಬಂದು ಎಲ್ಲ ವ್ಯವಹಾರದ ಬಗ್ಗೆ ಮಾತನಾಡುತ್ತಾರೆ. ನಿಶ್ಚಿತಾರ್ಥದ ಸಮಯದಲ್ಲಿ ಹೆಣ್ಣಿಗೆ ಗುಂಡಿನ ಸರ ನೀಡುವುದು ವಾಡಿಕೆ, ಈಗ ಅದರ ಸ್ಥಳದಲ್ಲಿ ಉಂಗುರ ಬಂದಿದೆ. ವಾದ್ಯದ ಬಳಕೆಯಿದೆ. ದೇವಸ್ಥಾನದಲ್ಲಿ ಮದುವೆ ನೆರವೇರುತ್ತದೆ. ಇಲ್ಲಿ ಮುಹೂರ್ತ ಮುಖ್ಯವಿಲ್ಲ. ದೂರದ ಊರಾದರೆ ಮದುವೆಯ ಮುಂಚಿನ ದಿನ ರಾತ್ರಿಯೇ ಗಂಡಿನವರು ಹೋಗಿರುತ್ತಾರೆ.

ಊರಿನ ಯಾವುದಾದರೂ ಒಂದು ಕಡೆ ಉಳಿದುಕೊಳ್ಳಲು ಅವಕಾಶ ಮಾಡಿಡುತ್ತಾರೆ. ರಾತ್ರಿ ಮದುಮಗನ ಕಡೆಯವರಿಗೆ ಕೊಡಪಾನ, ಆರತಿ, ನೀರು-ಬೆಲ್ಲ ಕಳುಹಿಸುತ್ತಾರೆ. ರಾತ್ರಿ ಗಂಡಿನ ಕಡೆಯವರು ಇರುವಲ್ಲಿ ಹೆಣ್ಣಿನ ವೇಷ ಧರಿಸಿದ ಇಬ್ಬರು ಹೋಗಿ ಗಂಡಿನ ಕಡೆ ಈ ಹೆಣ್ಣು ಬೇಕೋ, ಆ ಹೆಣ್ಣು ಬೇಕೋ ಎಂದು ಪ್ರಶ್ನಿಸುತ್ತಾರೆ. ಈ ಹೆಣ್ಣು ಎಂದರೆ ರೂ. ೨೫ ಕೊಡಿ ಎಂದು ಕೇಳುತ್ತಾರೆ. ಗಂಡಿನ ಕಡೆಯವರನ್ನು ಹೆಣ್ಣಿನ ಕಡೆಯವರು ಬಹಳವಾಗಿ

(೬) ಕೆಲಸಕ್ಕೆ ಎದುರಾಗುವ ಅಡ್ಡಿ ಆತಂಕಗಳ ಸ್ವರೂಪ

ಅವಶ್ಯವಿರುವ ಸಮಯದಲ್ಲಿ ಕಪ್ಪು ಕಲ್ಲು ದೊರೆಯುವುದಿಲ್ಲ. ಉಳಿದ ಸಮಯದಲ್ಲಿ ಸಂಗ್ರಹಿಸಿಡಲು ಹಣದ ಅಭಾವ. ಕಲ್ಲಿನ ಬೇಡಿಕೆಯಿರುವ ಸಮಯದಲ್ಲಿ ತಯಾರಿ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ಕೆಲವು ಸಮಯ ತಯಾರಿಸಿದ್ದರೆ ಗಿರಾಕಿಗಳೇ ಇರುವುದಿಲ್ಲ. ಮಳೆಗಾಲದಲ್ಲಿ ಹೊರಗಡೆಯೇ ಇದನ್ನು ತಯಾರಿಸಬೇಕಾಗಿರುವುದರಿಂದ ಮಳೆಯಿಂದ ರಕ್ಷಣೆ ಪಡೆಯಲು ಆಗುವುದಿಲ್ಲ. ತಯಾರಿಕೆಯ ಸಮಯದಲ್ಲಿ ಉಸಿರಿನಲ್ಲಿ ಧೂಳು ಹೋಗುತ್ತಿರುತ್ತದೆ. ಒಮ್ಮೊಮ್ಮೆ ಕಲ್ಲು ಚೂರು ಹಾರಿ ಕಣ್ಣು ಹೋಗುವ ಸಾಧ್ಯತೆಯಿರುತ್ತದೆ. ಕಲ್ಲು ಒಡೆಯುವಾಗ ಕಲ್ಲು ಉರುಳುವಾಗ ಕಾಲು ಮುರಿಯುವ ಸಾಧ್ಯತೆಯೂ ಇಲ್ಲದಿಲ್ಲ.

(೭) ಕೆಲಸದ ನಿಪುಣತೆ (ಕೈ ಚಳಕದ ಮಾನದಂಡಗಳು)

ಇಲ್ಲಿ ನಿಪುಣತೆಯ ಪ್ರಶ್ನೆಯೇ ಇಲ್ಲ. ಎಲ್ಲ ಕಲ್ಲುಗಳು ಒಂದೇ ರೂಪದವಾಗಿರುತ್ತದೆ. ಅದರ ರೂಪಕ್ಕಿಂತಲೂ ಕಾರ್ಯವೇ ಪ್ರಮುಖವಾದುದು.

(೮) ಪುರುಷರು ಸ್ತ್ರೀಯರು ಮಕ್ಕಳು ಯಾರು ಯಾರು ಯಾವ ಕೆಲಸ ಮಾಡುತ್ತಾರೆ ಮೂಲ ವಿವರ

ಪುರುಷರೇ ಹೆಚ್ಚಿನ ಕಾರ್ಯ ಮಾಡುತ್ತಾರೆ. ಬೈಲಹೊಂಗಲದ ಇಚ್ಚಲಕೊಪ್ಪಕ್ಕೆ ಹೋಗಿ ಕಲ್ಲು ತರುತ್ತಾರೆ. ಕೂಲಿ ಕಾರ್ಮಿಕರನ್ನು ಹಿಡಿದು ಭೂಮಿಯೊಳಗಿರುವ ಕಲ್ಲನ್ನು ಮೇಲೆ ತೆಗೆದು ಇಲ್ಲಿಗೆ ತರುವುದು. ತರುವಾಯ ಸ್ವತಃ ಕಲ್ಲಿಗೆ ಚಾಣದಿಂದ ಆಕಾರ ನೀಡುವುದು ಇವರ ಕರ್ತವ್ಯ. ರುಬ್ಬುವ ಕಲ್ಲಿನ ಅಡಿಯ ಕಲ್ಲನ್ನು ಇವರು ಮಾಡುತ್ತಾರೆ. ಸ್ತ್ರೀಯರು ರುಬ್ಬುವ ಗುಂಡು ಕಲ್ಲನ್ನು ಮಾಡುತ್ತಾರೆ. ಕೆಲಸವಿರದ ಸಮಯದಲ್ಲಿ ಸವೆದ ಕಲ್ಲುಗಳಿಗೆ ಚಾಣ ಹಾಕಲು ಹೆಂಗಸರು ಊರೂರು ಅಲೆದು ಗಂಡಸರ ದುಡಿಮೆಗೆ ಸಹಕರಿಸುವುದು.

(೯) ಕೆಲಸವನ್ನು ಕಲಿಸುವ, ತರಬೇತಿಯ ಕ್ರಮ

ಇಲ್ಲಿ ಔಪಚಾರಿಕವಾಗಿ ಯಾವುದೇ ತರಬೇತಿಯ ಕ್ರಮ ಇರುವುದಿಲ್ಲ. ತಂದೆ-ತಾಯಿಗಳ ಕಾರ್ಯವನ್ನು ನೋಡಿಯೇ ಮಕ್ಕಳು ಕಲಿಯುವರು.


ಕಲ್ಲುಕುಟಿಗ ವೃತ್ತಿ ಈ ಆಧುನಿಕ ಯುಗದಲ್ಲಿ ಉಳಿದಿರುವುದೇ ಒಂದು ವಿಶೇಷ. ಈ ರುಬ್ಬು ಗುಂಡುಗಳು ಮಿಕ್ಸಿ, ಗ್ರ್ಯಾಂಡರ್‌ಗಳಂತಹ ಆಧುನಿಕ ಯಂತ್ರಗಳ ಹಾವಳಿಯಿಂದ ಮಾಯವಾಗತೊಡಗಿದೆ. ಈ ಯಂತ್ರಗಳು ಕಲ್ಲು ಕುಟ್ಟಿಗರ ಮನೆಯಲ್ಲೂ ಬಂದು ಸೇರಿವೆ. ಮೊದಲು ಕಲ್ಲಿರುವಲ್ಲಿಗೆ ಜನರು ಹೋಗಿ ರುಬ್ಬುಗುಂಡು ತರುತ್ತಿದ್ದರು. ಆದರೆ ಇಂದು ಆಯಾಯ ಊರಿಗೆ ರುಬ್ಬುಗುಂಡನ್ನು ತಂದು ಹಾಕುತ್ತಿದ್ದಾರೆ.

ಎಲ್ಲವೂ ಆಧುನಿಕ ಯಂತ್ರಗಳ ಹಿಡಿತದಿಂದ ನಾಶವಾಗುತ್ತಿತ್ತು. ಆದರೆ ಕೈಕೊಡುವ ವಿದ್ಯುತ್‌ನಿಂದ ಇದು ಇನ್ನೂ ಅನಿವಾರ್ಯವಾಗಿದೆ. ಹಲವಾರು ವರುಷ ಬಾಳಿಕೆ ಬರುವ, ರಿಪೇರಿಯ ಅವಶ್ಯಕತೆಯಿರದ ಈ ರುಬ್ಬು ಗುಂಡುಗಳು ಇನ್ನೂ ಬಡವರ ಮನೆಯಲ್ಲಿ ಶೋಭಿಸುತ್ತಿವೆ. ಮತ್ತು ರುಬ್ಬು ಗುಂಡುಗಳಲ್ಲಿ ಅರೆದ ಮಸಾಲೆಗೆ ಬರುವ ರುಚಿ ಈ ಮಿಕ್ಸಿ, ಗ್ರ್ಯಾಂಡರ್‌ಗಳಲ್ಲಿ ಅರೆದ ಮಸಾಲೆಗೆ ಬರಲಾರದು. ಈ ಸಕರಾತ್ಮಕ ವಿಷಯವೇ ರುಬ್ಬುಗುಂಡುಗಳು ಅದರೊಂದಿಗೆ ಕಲ್ಲುಕುಟಿಗ ವೃತ್ತಿ ಇನ್ನೂ ಜೀವಂತವಾಗಿರಲು ಕಾರಣ.

○



ಕಲ್ಲು ಕುಟಿಗ ವೃತ್ತಿ - ಉತ್ತರ ಕರ್ನಾಟಕ ಜಿಲ್ಲೆ



ಕಲ್ಲು ಕುಟಿಗ ವೃತ್ತಿ - ಉತ್ತರ ಕರ್ನಾಟಕ ಜಿಲ್ಲೆ

ಲೇಖಕರ ವಿಳಾಸ

೧. **ಪ್ರೊ. ಎಂ.ಎಲ್. ನರಸಿಂಹಮೂರ್ತಿ**
ಕನ್ನಡ ವಿಭಾಗ, ಶ್ರೀ ವಿ.ವಿ. ಕಾಲೇಜು, ಮಧುಗಿರಿ-೫೭೨೧೩೨

೨. **ದುಗ್ಗಪ್ಪ ಕಜೆಕಾರ್**
ಸಮಾಜಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಪದವಿಪೂರ್ವ ಕಾಲೇಜು
ಕುರ್ನಾಡು. ಬಂಟ್ವಾಳ ತಾ. ದ.ಕ.-೫೭೪೧೫೩.

೩. **ಡಾ. ಸೈಯದ್ ಜಮೀರುಲ್ಲಾ ಷರೀಫ್**
ಕನ್ನಡ ಪ್ರಾಧ್ಯಾಪಕರು. ಅಂಜುಮನ್ ಕಲಾವಿಭಾಗ ಹಾಗೂ
ವಾಣಿಜ್ಯ ಮಹಾವಿದ್ಯಾಲಯ. ಭಟ್ಕಳ-೫೮೧೩೨೦.

೪. **ನರಸಿಂಹೇಗೌಡ ನಾರಣಾಪುರ**
ಕನ್ನಡ ಉಪನ್ಯಾಸಕರು, ಕೆ.ಜಿ.ಎಫ್. ಪ್ರಥಮ ದರ್ಜೆ ಕಾಲೇಜು
ಉರಿಗಾಂ. ಕೆ.ಜಿ.ಎಫ್.

೫. **ಪಾಲ್ತಾಡಿ ರಾಮಕೃಷ್ಣ ಆಚಾರ್**
ಪ್ರಶಾಂತ ನಿವಾಸ, ಕೆಮ್ಮಿಂಜೆ ದೇವಾಲಯ ರಸ್ತೆ,
ದರ್ಬೆ, ಪುತ್ತೂರು-೫೭೪೨೦೨. (ದ.ಕ.)

೬. **ಡಾ. ದಸ್ತಗೀರ ಅಲ್ಲೀಭಾಯಿ**
ಪ್ರಾಧ್ಯಾಪಕರು ಮತ್ತು ಸಂಶೋಧನ ಮಾರ್ಗದರ್ಶಿ
ಕನ್ನಡ ವಿಭಾಗ. ನೆಹರೂ ಕಾಲೇಜು, ಹುಬ್ಬಳ್ಳಿ.

೭. **ಆರ್.ಜಿ. ಶಾನಭಾಗ**
ಶರಾವತಿ ಪ್ರೌಢಶಾಲೆ, ಹೊಸಾರ್ಡ, ಹೊನ್ನಾವರ-೫೮೧ ೩೩೫.

೮. **ವೆಂಕಟೇಶ್ ಆನೇಕಲ್**
ಭಾಷಾಂತರಕಾರರು ಕನ್ನಡ ಭಾಗ ಎನ್‌ಜಿಇಎಫ್ ಲಿ., ಬೈಯಪ್ಪನಹಳ್ಳಿ,
ಬೆಂಗಳೂರು-೩೮.

೯. **ರಾಮಮೂರ್ತಿ ನಾಯಕ**
ಮುಖ್ಯ ಅಧ್ಯಾಪಕರು, ಮಾದರಿ ಕನ್ನಡ ಶಾಲೆ (ಕಸಬಾ ಶಾಲೆ)
ಹೊನ್ನಾವರ.

ಗ್ರಾಮ ಸಂಸ್ಕೃತಿಯಲ್ಲಿ ಪರಂಪರಾಗತವಾಗಿ ಬಂದು ಕ್ರಮೇಣ ಕ್ಷೀಣಿಸುತ್ತಿರುವ ಹಲವು ವೃತ್ತಿಗಳನ್ನು ಕುರಿತ ಕ್ಷೇತ್ರಧಾರಿತ ಅಧ್ಯಯನದ ಫಲ ಈ 'ಗ್ರಾಮೀಣ ವೃತ್ತಿಗಳು' ಎಂಬ ಪುಸ್ತಕದಲ್ಲಿ ದೊರೆಯುತ್ತದೆ. ಕರ್ನಾಟಕದ ಜಾನಪದ ಕ್ಷೇತ್ರದಲ್ಲಿ ಹೆಸರಾದ ಹಲವಾರು ತಜ್ಞರು ಬಹು ಪರಿಶ್ರಮಪೂರ್ವಕವಾಗಿ ನಮ್ಮ ಗ್ರಾಮೀಣ ವೃತ್ತಿಗಳ ಬಗೆಗಿನ ಮಾಹಿತಿಯನ್ನು ಇಲ್ಲಿ ಕಲೆಹಾಕಿ ವಿಶ್ಲೇಷಿಸಿರುವುದು ನಮ್ಮ ಸಮಗ್ರ ಜಾನಪದ ಕ್ಷೇತ್ರದ ಮತ್ತು ಸಂಸ್ಕೃತಿಯ ಅಧ್ಯಯನಕ್ಕೆ ಫಲವತ್ತಾದ ಮಾಹಿತಿಯನ್ನು ಒದಗಿಸಿಕೊಡುತ್ತದೆ. ದಕ್ಷಿಣ ಕನ್ನಡ, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಪ್ರಚಲಿತವಿರುವ ಕುಂಬಾರಿಕೆ ಕುಸುಬಿನ ವಿವಿಧ ಮಗ್ಗಲುಗಳನ್ನು ಮೂಲಸ್ವರೂಪ ಮತ್ತು ವ್ಯಾಪ್ತಿಗಳನ್ನು ಆ ಜನಾಂಗದ ಒಳ ಪಂಗಡಗಳ-ಸಂಪ್ರದಾಯಗಳು ಹಾಗೂ ಈ ವೃತ್ತಿಗಾಗಿ ಮಣ್ಣನ್ನು ಆಯ್ಕೆ ಮಾಡಿಕೊಳ್ಳುವ ವಿಧಾನದಿಂದ ಹಿಡಿದ ಈ ವಸ್ತುಗಳು ತಯಾರಾಗುವ ಅಂತಿಮ ಹಂತದವರೆಗೆ ನಡೆಯುವ ಪ್ರಕ್ರಿಯೆಗಳನ್ನು ಮತ್ತು ಬಳಸಲಾಗುವ ಉಪಕರಣಗಳನ್ನು ಅವುಗಳಿಂದ ತಯಾರಾಗುವ ವಸ್ತುಗಳ ಕಲಾಕೌಶಲ್ಯಗಳನ್ನು ಹಾಗೂ ಈ ಜನ ತಮ್ಮ ವೃತ್ತಿಯಲ್ಲಿ ಎದುರಿಸುತ್ತಿರುವ ಸಮಸ್ಯೆಗಳನ್ನು ಇಲ್ಲಿ ತುಂಬಾ ಸೂಕ್ಷ್ಮವಾಗಿ ವಿವರಿಸಲಾಗಿದೆ. ಹೀಗೆಯೇ ಕಂಮಾರಿಕೆ, ಚಿನಿವಾರಿಕೆ, ಬಡಗಿತನ, ನೇಕಾರಿಕೆ, ಚಂಮಾರಿಕೆ - ಈ ವೃತ್ತಿಗಳನ್ನು ಕುರಿತಾದ ಮೂಲ ಮತ್ತು ಸೂಕ್ಷ್ಮ ಮಾಹಿತಿಗಳನ್ನು ಹಾಗೂ ವಿಶ್ಲೇಷಣೆಯನ್ನು ಇಲ್ಲಿ ಲೇಖನಗಳು ಒದಗಿಸುತ್ತವೆ.

ಡಾ. ಎಚ್.ಜೆ. ಲಕ್ಕಪ್ಪಗೌಡ
ಅಧ್ಯಕ್ಷರು



ISBN 81-7713-052-8